
ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

ಶರಣ ಪರಿವಾರ

ಸಂಪಾದಕರು

ಡಾ. ವೀರಣ್ಣ ದಂಡೆ ಡಾ. ಜಯಶ್ರೀ ದಂಡೆ



ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೫೮೫೧೦೬

ಶರಣ ಪರಿವಾರ

(ಹನ್ನೆರಡನೇ ಶತಮಾನದ ಶರಣರಿಗೆ ಸಂಬಂಧಿಸಿದ
ಜನಪದ ಹಾಡುಗಳ ಸಂಗ್ರಹ)

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ

(ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ ಯೋಜನೆ)

ಶರಣ ಪರಿವಾರ

(ಹನ್ನೆರಡನೇ ಶತಮಾನದ ಶರಣರಿಗೆ ಸಂಬಂಧಿಸಿದ
ಜನಪದ ಹಾಡುಗಳ ಸಂಗ್ರಹ)

ಪ್ರಧಾನ ಸಂಶೋಧಕರು ಹಾಗೂ ಸಂಪಾದಕರು
ಡಾ। ವೀರಣ್ಣ ದಂಡೆ, ಡಾ। ಜಯಶ್ರೀ ದಂಡೆ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ-೫೮೫ ೧೦೬

Sharana Pariwar : (Folk songs about Sharanas),

Chief Investigarors & Ed.: Dr. Veeranna Dande, Dr. Jayashree Dande,
Institute of Kannada Studies, Gulbarga University, Gulbarga-585 106.

Funded by : Goverment of Karnataka.

First Impression : 2012

Pages : XXVIII + 632

Paper used : 80 GSM Maplitho

Price : Rs. 500=00

Cover Design by : Dr. Satish Vallepure, Artist, Gulbarga.

Cover Painting : Dr. J. S. Khanderao, Artist, Gulbarga.

ಶರಣ ಪರಿವಾರ : ಪ್ರಧಾನ ಸಂಶೋಧಕರು ಹಾಗೂ ಸಂಪಾದಕರು :
ಡಾ। ವೀರಣ್ಣ ದಂಡೆ, ಡಾ। ಜಯಶ್ರೀ ದಂಡೆ, ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರ್ಗಿ-೫೮೫ ೧೦೬

ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ-೫೮೫ ೧೦೬

ಕೃತಿಸ್ವಾಮ್ಯ : ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ-೫೮೫ ೧೦೬

ಪುಟಗಳು : ೨೮ + ೬೩೨

ಪ್ರಥಮ ಮುದ್ರಣ : ೨೦೧೨

ಬಳಸಿದ ಕಾಗದ : ೮೦ ಜಿಎಸ್ಎಂ ಮ್ಯಾಪ್ಲಿಥೊ ಕಾಗದ

ಬೆಲೆ : ರೂ. ೫೦೦=೦೦

ಮುಖಪುಟ ವಿನ್ಯಾಸ : ಡಾ। ಸತೀಶ ವಲ್ಯಾಪುರೆ, ಕಲಾವಿದರು, ಕಲಬುರ್ಗಿ

ಮುಖಪುಟ ಕಲಾಕೃತಿ : ಡಾ। ಜೆ. ಎಸ್. ಖಂಡೇರಾವ, ಕಲಾವಿದರು, ಕಲಬುರ್ಗಿ

ಕೃತಿ ದೊರೆಯು ಸ್ಥಳ : ಕನ್ನಡ ಅಧ್ಯಯನ ಸಂಸ್ಥೆ, ಗುಲಬಗಾ ವಿಶ್ವವಿದ್ಯಾಲಯ

ಮುದ್ರಕರು :
ಪ್ರಿಂಟ್ ಪಾರ್ಕ್
೧೪೯೬/೪, ೩ ಕ್ರಾಸ್, ಮರಿಯಪ್ಪನ ಪಾಳ್ಯ
ಶ್ರೀರಾಮಪುರಂ ಪೋಸ್ಟ, ಬೆಂಗಳೂರು-೨೧
ದೂ.ವಾ.೦೮೦-೨೩೪೨೨೮೩೮

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿ

ಅಧ್ಯಕ್ಷರು
ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಉಪಾಧ್ಯಕ್ಷರು
ಪ್ರೊ. ಎಸ್.ಎಲ್. ಹಿರೇಮಠ
ಕುಲಸಚಿವರು

ಸಂಚಾಲಕರು
ಪ್ರೊ. ನಾಗಾಬಾಯಿ ಬಿ. ಬುಳ್ಳಾ
ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ. ಕೆ. ಖಂಡೋಬಾ
ಡಾ. ವ್ಹಿ. ಜಿ. ಪೂಜಾರ
ಡಾ. ವೀರಣ್ಣ ದಂಡೆ
ಡಾ. ಎಚ್. ಟಿ. ಪೋತೆ
ಡಾ. ಡಿ. ಬಿ. ನಾಯಕ
ಡಾ. ಬಸವರಾಜ ಸಬರದ
ಡಾ. ಬಿ.ಎಸ್.ಪೋಲಿಸ ಪಾಟೀಲ
ಡಾ. ಎಸ್. ಎಂ. ಹಿರೇಮಠ
ಡಾ. ಜಯಶ್ರೀ ದಂಡೆ

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ

ವಿಧಾನಸೌದ
ಬೆಂಗಳೂರು-೫೬೦ ೦೦೧
೦೨-೧೧-೨೦೧೧

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನಗಳು ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ ಪ್ರಭುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ ಲೇಖಕರೂ ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ ಬೆಳವಣಿಗೆಯನ್ನು

ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)** ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಾಡುಗಳೊಂದಿಗೆ, ಕನ್ನಡದಲ್ಲಿ ಇಂದಿನವರೆಗೆ ಬಿಡಿಬಿಡಿಯಾಗಿ ಅಲ್ಲಲ್ಲಿ ಪ್ರಕಟವಾದ ಶರಣರ ಹಾಡುಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗಿನ ಲಿಖಿತ ಮತ್ತು ಮೌಖಿಕ ಸಾಹಿತ್ಯ ಪರಂಪರೆಗಳೆರಡನ್ನೂ ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಲು ಅನುಕೂಲವಾಗುತ್ತದೆ. ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿಗಳು

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ನಂ. ೩೩೦, ೩ನೇ ಮಹಡಿ
ವಿಧಾನಸೌಧ
ಬೆಂಗಳೂರು– ೫೬೦ ೦೦೧
ದಿ: ೧೬. ೧೧. ೨೦೧೧

ಶುಭಹಾರೈಕೆ

ಕನ್ನಡ ನಾಡು–ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು–ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡುಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ ೪೫೦ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕದ ರಾಜ್ಯಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ ಹಲವು ಯೋಜನೆಯ ಅಡಿಯಲ್ಲಿ ಗುಲಬರ್ಗಾ

ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ "ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ) ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯ ಕೈಗೊಂಡು, ಶರಣರಿಗೆ ಸಂಬಂಧಿಸಿದ ಹಾಡುಗಳನ್ನು ಒಂದೆಡೆ ಪ್ರಕಟಿಸುತ್ತಿರುವ ಸಂಶೋಧಕರೂ ಸಂಪಾದಕರೂ ಅಭಿನಂದನಾರ್ಹರಾಗಿದ್ದಾರೆ.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವುದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಬಿ. ಬಸವರಾಜು ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

#೨, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು- ೫೬೦ ೦೦೧
ದಿ. ೨೪. ೧೦. ೨೦೧೧

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.೪೫೦ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡವು ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ ೫ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ

ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)** ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಾಡುಗಳೊಂದಿಗೆ, ಕನ್ನಡದಲ್ಲಿ ಬಿಡಿಬಿಡಿಯಾಗಿ ಅಲ್ಲಲ್ಲಿ ಪ್ರಕಟವಾದ ಶರಣರ ಹಾಡುಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಲಿಖಿತ ಮತ್ತು ಮೌಖಿಕ ಸಾಹಿತ್ಯ ಪರಂಪರೆಗಳೆರಡನ್ನೂ ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಲು ಅನುಕೂಲವಾಗುತ್ತದೆ. ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸುವೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ಈ ಸಂಪುಟಗಳು ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಈ.ಟಿ. ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ. ಎಸ್.ಎಲ್.ಹಿರೇಮಠ ಅವರನ್ನು ಯೋಜನೆಯ ಪ್ರಧಾನ ಸಂಶೋಧಕರೂ ಈ ಸಂಪುಟದ ಸಂಪಾದಕರೂ ಆದ ಡಾ। ವೀರಣ್ಣ ದಂಡೆ ಹಾಗೂ ಡಾ। ಜಯಶ್ರೀ ದಂಡೆ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು
ಕಾರ್ಯದರ್ಶಿ

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು– ೫೬೦ ೦೦೨
ದಿ: ೧೫. ೧೦. ೨೦೧೧

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಈ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ವಚನಕಾರರು ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ. ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಆಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ

ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುಮಾರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾರೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ ೨೦೦೮ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)**. ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಾಡುಗಳೊಂದಿಗೆ, ಕನ್ನಡದಲ್ಲಿ ಇಂದಿನವರೆಗೆ ಪ್ರಕಟವಾದ ಶರಣರ ಹಾಡುಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಲಿಖಿತ ಮತ್ತು ಮೌಖಿಕ ಎರಡೂ ಪರಂಪರೆಗಳನ್ನು ಎದುರಿಗೆ ಇಟ್ಟುಕೊಂಡು ಅಧ್ಯಯನಕಾರರಿಗೆ ಅನುಕೂಲವಾಗುತ್ತದೆ. ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸಿ, ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ, ಯೋಜನೆಯ ಪ್ರಧಾನ ಸಂಶೋಧಕರೂ ಈ ಸಂಪುಟದ ಸಂಪಾದಕರೂ ಆಗಿರುವ ಡಾ। ವೀರಣ್ಣ ದಂಡೆ ಹಾಗೂ ಡಾ। ಜಯಶ್ರೀ ದಂಡೆ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್
ಆಯುಕ್ತರು

ಪ್ರೊ. ಈ.ಟಿ.ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: ೨೫.೧೦.೨೦೧೧

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. ೧೯೭೦-೭೧ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ ೧೯೮೦ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಕೃತಿಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು,

ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)** ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಾಡುಗಳೊಂದಿಗೆ, ಕನ್ನಡದಲ್ಲಿ ಇಂದಿನವರೆಗೆ ಬಿಡಿಬಿಡಿಯಾಗಿ ಅಲ್ಲಲ್ಲಿ ಪ್ರಕಟವಾದ ಶರಣರ ಹಾಡುಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಲಿಖಿತ ಮತ್ತು ಮೌಖಿಕ ಸಾಹಿತ್ಯ ಪರಂಪರೆಗಳೆರಡನ್ನು ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಲು ಅನುಕೂಲವಾಗುತ್ತದೆ.

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರೂ ಸಂಪಾದಕರೂ ಆದ ಡಾ। ವೀರಣ್ಣ ದಂಡೆ ಹಾಗೂ ಡಾ। ಜಯಶ್ರೀ ದಂಡೆ ಅವರನ್ನು ಅಭಿನಂದಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ.ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಶೋಧಕರ ನುಡಿ

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ನಾಡಿನ ತುಂಬ ಕನ್ನಡದ ಕೆಲಸಗಳು ಮೈತುಂಬಿ ನಡೆಯಬೇಕೆಂಬ ಕರ್ನಾಟಕ ಸರ್ಕಾರದ ಅತ್ಯಂತ ಉತ್ಸಾಹದಾಯಕ ಮತ್ತು ಸಮಯೋಚಿತ ಅಪರೂಪದ ನಿರ್ಧಾರ ಒಂದು ಐತಿಹಾಸಿಕ ದಾಖಲೆಯಾಗಿ ಉಳಿಯುವಂತಹದು. ಕನ್ನಡಕ್ಕೆ ಇದೊಂದು ಅಪರೂಪದ ಅವಕಾಶವೆಂದೇ ಹೇಳಬೇಕು. ಇದರಿಂದ ಕನ್ನಡದ ಸುವರ್ಣ ಯುಗವೊಂದು ಪ್ರಾರಂಭವಾದಂತಾಗಿದೆ. ಇಂತಹ ಒಂದು ಶುಭಾರಂಭವನ್ನು ಪ್ರಾರಂಭಿಸಲು ಕಾರಣರಾದವರು ಕರ್ನಾಟಕದ ಹಿಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು.

ಕೇಂದ್ರ ಸರ್ಕಾರವು ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಘೋಷಿಸಿದ ಸಂದರ್ಭವನ್ನು ಬಳಸಿಕೊಂಡು ಕೇಂದ್ರ ಸರ್ಕಾರದಿಂದ ಧನಸಹಾಯ ದೊರೆಯುವ ಮುಂಚೆಯೇ ಕರ್ನಾಟಕ ಸರ್ಕಾರದ ಪ್ರಥಮ ಆದ್ಯಕರ್ತವ್ಯವೆಂದು ಭಾವಿಸಿ, ಮಾನ್ಯ ಶ್ರೀ ಯಡಿಯೂರಪ್ಪ ಅವರು ಕರ್ನಾಟಕದ ೧೧ ವಿಶ್ವವಿದ್ಯಾಲಯಗಳಿಗೆ, ಕನ್ನಡದ ಚಟುವಟಿಕೆಗಳ ಅಭಿವೃದ್ಧಿಗಾಗಿ ತಲಾ ೨ ಕೋಟಿ ರೂಪಾಯಿಗಳನ್ನು ಧನಸಹಾಯವಾಗಿ ಕೊಡುವುದಾಗಿ ಘೋಷಿಸಿದರು. ಮತ್ತು ಕೂಡಲೇ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆಮಾಡಿದರು. ಆ ಫಲವಾಗಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಸ್ಥಳೀಯವಾಗಿ ಮಹತ್ವಪಡೆದ ಅನೇಕ ಸಂಗತಿಗಳ ಬಗ್ಗೆ ಸಂಶೋಧನೆಗಳು ನಡೆಯಬೇಕೆಂಬ ಉದ್ದೇಶದಿಂದ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡಿತು.

ಅಂತಹದರಲ್ಲಿ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಮೌಖಿಕ ಮಾಹಿತಿ ಮತ್ತು ಸಾಹಿತ್ಯ ಇವುಗಳ ಸಂಗ್ರಹ ಮತ್ತು ದಾಖಲೀಕರಣ ಅತ್ಯಂತ ಮಹತ್ವದ ಯೋಜನೆಯಾಗಿದೆ. ಹೈದ್ರಾಬಾದ ಕರ್ನಾಟಕದಲ್ಲಿ ಅಷ್ಟೇ ಅಲ್ಲ ಇಡೀ ಕರ್ನಾಟಕದ ತುಂಬ, ಮತ್ತು ನೆರೆಯ ಆಂದ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲೂ ಶರಣರ ಸ್ಮಾರಕಗಳಿವೆ. ಶರಣರ ಸ್ಮಾರಕಗಳು ಎಲ್ಲೆಲ್ಲಿ ಇವೆಯೋ ಅಲ್ಲಲ್ಲಿ ಮೌಖಿಕ ಮಾಹಿತಿ ಮತ್ತು ಸಾಹಿತ್ಯಗಳು

ಸಾಕಷ್ಟು ಪ್ರಮಾಣದಲ್ಲಿ ಪ್ರಚಾರದಲ್ಲಿವೆ. ಅವುಗಳನ್ನು ಸಂಗ್ರಹಿಸಿ ಸಂಪಾದಿಸಿ ಕೊಡುವ ಮಹತ್ವದ ಯೋಜನೆ ನಮ್ಮದು.

'ಬಸವ ಪರಿವಾರ', 'ಶರಣ ಪರಿವಾರ' ಎಂಬ ಈ ಎರಡು ಸಂಪುಟಗಳು ಶರಣರ ಬಗೆಗೆ ಪ್ರಚಲಿತದಲ್ಲಿರುವ ಹಾಡುಗಳ ಸಂಗ್ರಹಗಳಾಗಿವೆ. ಸಧ್ಯಕ್ಕೆ ಬೀದರ, ಕಲಬುರ್ಗಿ ಜಿಲ್ಲೆಗಳಲ್ಲಿ ವ್ಯಾಪಕವಾಗಿ, ರಾಯಚೂರ ಹಾಗೂ ಬಿಜಾಪುರ ಈ ಜಿಲ್ಲೆಗಳಲ್ಲಿ ತಕ್ಕಮಟ್ಟಿಗೆ ಕ್ಷೇತ್ರಕಾರ್ಯಕೈಕೊಂಡು ಹಾಡುಗಳನ್ನು ಸಂಗ್ರಹಿಸಲಾಗಿದೆ. ಜೊತೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ, ಡಾ। ಬಿ.ಬಿ. ಹೆಂಡಿ ಅವರ ನೇತೃತ್ವದಲ್ಲಿ ೧೯೭೫–೭೮ರ ಅವಧಿಯಲ್ಲಿ ಕೈಗೊಂಡ ಜನಪದ ಹಾಡು ಮತ್ತು ಕಥೆಗಳ ಸಂಗ್ರಹ ಯೋಜನೆಯಡಿ ಸಂಗ್ರಹಿತ ಕೆಲ ಹಾಡುಗಳನ್ನೂ ಬಳಸಿಕೊಳ್ಳಲಾಗಿದೆ. ಅಲ್ಲದೆ ಕರ್ನಾಟಕದಾದ್ಯಂತ ಬಿಡಿಬಿಡಿಯಾಗಿ ಸಂಗ್ರಹಗೊಂಡು, ಅಲ್ಲಲ್ಲಿ ಪ್ರಕಟವಾಗುತ್ತ ಬಂದಿರುವ ಶರಣರ ಹಾಡುಗಳನ್ನೂ ಇಲ್ಲಿ ಬಳಸಿಕೊಳ್ಳಲಾಗಿದೆ. ಇದರಿಂದ ಮೌಖಿಕ ಸಾಹಿತ್ಯದಲ್ಲಿ ಶರಣರು ಹೇಗೆ ಉಳಿದುಕೊಂಡು ಬಂದಿದ್ದಾರೆ ಎಂಬುದರ ಒಂದು ಚಿತ್ರ ನಮಗೆ ಎದ್ದುಕಾಣುತ್ತದೆ. ಪುರಾಣಕಾರರು ಸೃಷ್ಟಿಸಿದ ಶರಣ ಜಗತ್ತು ಒಂದಾದರೆ, ಹೀಗೆ ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡು ಬೆಳೆದುಕೊಂಡು ಬಂದಿರುವ ಶರಣರ ಚಿತ್ರ ಇನ್ನೊಂದು ಕಡೆ ಕಾಣುತ್ತದೆ. ಈ ಎರಡೂ ಪರಂಪರೆಗಳನ್ನು ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಿದರೆ ಶರಣರ ಬಗೆಗೆ ಒಂದು ಸಂಪೂರ್ಣ ಚಿತ್ರ ಕಂಡುಕೊಳ್ಳಲು ಸಹಾಯವಾಗುತ್ತದೆಂದು ಭಾವಿಸಲಾಗಿದೆ. ಇನ್ನು ಮುಂದಿನ ಸಂಪುಟಗಳ ವೈವಿಧ್ಯತೆಗಳು ಇವುಗಳಿಗೆ ಮತ್ತೆ ಪೂರಕವಾಗಿ ಬರಲಿವೆ. ಅಲ್ಲಿ ಮೌಖಿಕ ಮಾಹಿತಿಗಳೇ ಪ್ರಮುಖವಾಗಿ ದಾಖಲಾಗಲಿವೆ.

ಕನ್ನಡದ ಬಗ್ಗೆ ವಿಶಾಲವಾದ ಹೃದವಂತಿಕೆಯನ್ನು ಮೆರೆದ ಕರ್ನಾಟಕ ಸರ್ಕಾರಕ್ಕೆ ನಮ್ಮ ನಮನಗಳು ಸಲ್ಲುತ್ತವೆ. ಕರ್ನಾಟಕದ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಯಡಿಯೂರಪ್ಪ ಅವರು, ಈಗಿನ ಮುಖ್ಯಮಂತ್ರಿಗಳಾದ ಮಾನ್ಯಶ್ರೀ ಡಿ. ವ್ಹಿ. ಸದಾನಂದಗೌಡರೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರು, ಕಾರ್ಯದರ್ಶಿಗಳು, ಆಯುಕ್ತರಾದ ಡಾ। ಮನು ಬಳಿಗಾರ ಅವರೂ ಅಭಿನಂದನೆಗೆ ಅರ್ಹರಾಗಿದ್ದಾರೆ.

ನಮ್ಮ ಕುಲಪತಿಗಳಾದ ಮಾನ್ಯ ಪ್ರೊ. ಈ. ಟಿ. ಪುಟ್ಟಯ್ಯನವರು ತುಂಬಾ ಆಸಕ್ತಿ ವಹಿಸಿ ಕನ್ನಡ ಅಧ್ಯಯನ ಸಂಸ್ಥೆಯ ಯೋಜನೆಯ ಕೆಲಸಗಳು ಚುರುಕಿನಿಂದ ನಡೆಯಲು ಕಾರಣರಾಗಿದ್ದಾರೆ. ಮಾನ್ಯ ಕುಲಸಚಿವರಾದ ಡಾ। ಎಸ್.ಎಲ್. ಹಿರೇಮಠ ಅವರೂ ಇದರಲ್ಲಿ ಭಾಗಿಯಾಗಿದ್ದಾರೆ. ಅದಕ್ಕಾಗಿ ನಾವು ಈ ಮಹನೀಯರುಗಳಿಗೆ ಆಭಾರಿಯಾಗಿದ್ದೇವೆ. ಕನ್ನಡ ಅಧ್ಯಯನ ಸಂಸ್ಥೆಯ ಎಲ್ಲ ಸಹೋದ್ಯೋಗಿಗಳನ್ನೂ

ಅಧ್ಯಕ್ಷರಾದ ಡಾ। ನಾಗಾಬಾಯಿ ಬುಳ್ಳಾ ಅವರನ್ನೂ ಈ ಸಂದರ್ಭದಲ್ಲಿ ನೆನೆಸುತ್ತೇವೆ.

ಸಂಪುಟದ ಕೆಲಸ ಇಷ್ಟೊಂದು ಸಮೃದ್ಧವಾಗಿ ಆಗಲು ಕಾರಣರಾದವರು ಶ್ರೀ ಆನಂದ ಸಿದ್ದಾಮಣಿ, ಅನಿಲ ತೆಗ್ಗಿನಮನಿ, ಸಾಹೇಬಗೌಡ ಸಿಂದಗಿ, ಡಾ। ವೀರಯ್ಯಸ್ವಾಮಿ, ಕು. ಸವಿತಾ ಶಿವಲಿಂಗಪ್ಪ. ಇಲ್ಲಿಯ ಹಾಡುಗಳನ್ನು ಹಾಡಿದವರು ಶ್ರೀಮತಿಯರಾದ ಶಶಿಕಲಾ ಗಿರಿ, ಸರ್ವಮಂಗಳಾ ಜೋಗೂರ, ಪಾರ್ವತಿ ಜೆಮಶೆಟ್ಟಿ, ಅನ್ನಪೂರ್ಣ ದೇವಣಿ, ಗೌರಮ್ಮ ಕಾಡಾದಿ, ರೇಖಾ ಕಾಡಾದಿ, ಸುಮಿತ್ರಾದೇವಿ ಅಂಗಡಿ, ಶೀಲಾ ಕೋಣಶೀನ, ಮಹಾದೇವಿ ಕುಂಬಾರ ಹಾಗೂ ನಮಗೆ ಹಾಡು ಹೇಳಿ ಸಹಕರಿಸಿದ ಉಳಿದೆಲ್ಲ ವಕ್ತಾರರಿಗೆ ನಾವು ಕೃತಜ್ಞರಾಗಿದ್ದೇವೆ. ಅವರ ಸಹಕಾರದಿಂದ ಈ ಸಂಪುಟಗಳು ಹೊರಬರಲು ಸಾಧ್ಯವಾಗಿದೆ. ಜೊತೆಗೆ ಶರಣರ ಹಾಡುಗಳನ್ನು ಸಂಗ್ರಹಿಸಿ, ಆಗಾಗ ಪ್ರಕಟಿಸುತ್ತ ಬಂದ ಮಹನೀಯರಿಗೆ ಇಲ್ಲಿ ನಾವು ಸ್ಮರಿಸುತ್ತೇವೆ. ಶರಣರ ಕುರಿತು ಅಧ್ಯಯ್ನನ ಮಾಡುವವರಿಗೆ ಈ ಸಂಪುಟಗಳು ಸಹಾಯವಾದರೆ ನಮಗೆ ಅದೇ ಅತ್ಯಂತ ಸಂತೋಷದ ಸಂಗತಿಯಾಗುತ್ತದೆ.

ಬಡಾ। ವೀರಣ್ಣ ದಂಡೆ
ಡಾ। ಜಯಶ್ರೀ ದಂಡೆ

ಪ್ರಸ್ತಾವನೆ

೧೨ನೇ ಶತಮಾನದ ಶರಣರು ಗೈದ ಸಾಮಾಜಿಕ ಕ್ರಾಂತಿ, ಅವರು ರಚಿಸಿದ ವಚನ ಸಾಹಿತ್ಯ ಇವತ್ತು ಕರ್ನಾಟಕದಲ್ಲಿ ಎಲ್ಲರ ಗಮನ ಸೆಳೆಯುತ್ತಲಿವೆ. ಜೊತೆಗೆ ಶರಣರ ಚಿಂತನೆಗಳತ್ತ ಇಡೀ ಭಾರತದ ಗಮನಸೆಳೆಯುವ ಪ್ರಯತ್ನಗಳೂ ನಡೆಯುತ್ತಿವೆ. ಇಂತಹ ಸಮಯದಲ್ಲಿ ಸಮಾಜದ ಎಲ್ಲ ವರ್ಗದ ಜನರು ಶರಣರ ಬಗೆಗೆ ವಿವಿಧಬಗೆಯ ಅಧ್ಯಯನಗಳಲ್ಲಿ ತೊಡಗುತ್ತಿದ್ದಾರೆ. ಶರಣರು ಆಗಿ ಹೋದದ್ದು ಈ ಭಾಗದ ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿ. ಅವರು ಆಗಿಹೋಗಿ ಈಗ ಎಂಟುನೂರು ವರ್ಷಗಳು ಕಳೆದರೂ ಶರಣರ ಬಗೆಗೆ ಇಲ್ಲಿಯವರೆಗೆ ಸಣ್ಣ ಸಣ್ಣ ಸ್ಮಾರಕಗಳು ಉಳಿದುಕೊಂಡು ಬಂದಿರುವುದು, ಅವರ ಬಗೆಗೆ ಸ್ಥಳೀಯರು ಅನೇಕ ಮಾಹಿತಿಗಳನ್ನು ಮೌಖಿಕ ಪರಂಪರೆಯಲ್ಲಿ ಹೇಳಿಕೊಂಡು ಬಂದಿರುವುದು, ಜೊತೆಗೆ ಮೌಖಿಕ ಪರಂಪರೆಯಲ್ಲಿ ಶರಣರ ಬಗೆಗೆ ಹಾಡುಗಳು ರಚನೆಯಾಗುತ್ತ ಬಂದಿರುವುದು ಒಂದು ಮಹತ್ವದ ಸಂಗತಿಯಾಗಿದೆ. ಇದು ಶರಣರ ಬಗೆಗೆ ಜನಸಾಮಾನ್ಯರು ಉಳಿಸಿಕೊಂಡು ಬಂದಿರುವ ಭಾವನೆಯನ್ನು ವ್ಯಕ್ತಪಡಿಸುತ್ತದೆ.

ಶರಣರ ಬಗೆಗೆ ಇಂತಹ ಭಾವನೆ ಉಳಿದುಕೊಂಡು ಬಂದಿರುವುದರಿಂದಲೇ ಶರಣರ ಬದುಕನ್ನು ಅನುಕರಣೆ ಮಾಡುವ, ಅವರ ತತ್ತ್ವಗಳನ್ನು ಪಾಲಿಸುತ್ತ ಬಂದಿರುವ ಜನಸಮುದಾಯ ಇವತ್ತಿಗೂ ಕಾಣುತ್ತದೆ. ಒಂದು ಕಡೆ ಮಠಮಾನ್ಯಗಳು ಶರಣರ ತತ್ತ್ವಗಳನ್ನು ಉಳಿಸುವ ಕೆಲಸ ಮಾಡುತ್ತ ಬಂದಿವೆ. ಇನ್ನೊಂದು ಕಡೆ ಪ್ರತಿಭಾವಂತ ಕವಿಗಳು ಶರಣರ ಬಗೆಗೆ ಸಾಹಿತ್ಯವನ್ನು ರಚಿಸುತ್ತ ಬಂದಿದ್ದಾರೆ. ಮತ್ತೊಂದು ಕಡೆ ೧೨ನೇ ಶತಮಾನ ಒಳಗೊಂಡು ಆಗಾಗ ನಿರ್ಮಾಣವಾಗುತ್ತ ಬಂದಿರುವ ಶರಣರ ಸ್ಮಾರಕಗಳು, ಅವುಗಳ ಸುತ್ತಮುತ್ತ ನಾನಾ ಬಗೆಯ ನಂಬುಗೆಗಳು, ಸಂಪ್ರದಾಯಗಳು, ಉತ್ಸವಗಳು ಬೆಳೆದುಕೊಂಡು ಬಂದಿವೆ. ಇವೆಲ್ಲ ಶರಣರ ಬಗೆಗೆ ಜನಸಾಮಾನ್ಯರು ಇಟ್ಟುಕೊಂಡು ಬಂದಿರುವ ಭಾವನೆಗಳನ್ನು ಹೇಳುತ್ತವೆ. ಇವೆಲ್ಲಕ್ಕಿಂತ ಮಿಗಿಲಾಗಿ

ಜನಸಾಮಾನ್ಯರು ಶರಣರ ಸ್ಮರಣೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬಂದಿದ್ದಾರೆ. ಕುಂತರೆ ನಿಂತರೆ 'ಬಸವ ಬಸವ' ಎನ್ನುತ್ತಾರೆ. ಈ ಬಸವನ ಹೆಸರಿನ ಹಿಂದೆ ಎಲ್ಲ ಶರಣ ಸಮುದಾಯವೇ ಕೂಡಿರುತ್ತದೆ ಎಂಬ ಭಾವ ಅವರಲ್ಲಿ ಗಟ್ಟಿಯಾಗಿ ಅಡಗಿದೆ.

ಮೌಖಿಕ ಪರಂಪರೆಯಲ್ಲಿ ಎಷ್ಟು ಸಂದರ್ಭಗಳ ಹಾಡುಗಳು ದೊರೆಯುತ್ತವೆಯೋ ಅಷ್ಟು ನಮೂನೆಯ ಹಾಡುಗಳಲ್ಲಿ ಶರಣರ ಸ್ಮರಣೆಗಳು ಸೇರಿಕೊಂಡಿವೆ. ಮದುವೆ, ಸೋಬಾನ, ಜೋಗುಳ, ಕುಪ್ಪಸ, ಮೈನರೆದ ಇಂತಹ ಶುಭಸಂದರ್ಭಗಳಲ್ಲಿ ಬಳಕೆಯಾಗುವ ಹಾಡುಗಳಲ್ಲಿ, ಕುಟ್ಟುವ, ಬೀಸುವ, ಹಂತಿ ಹೊಡೆಯುವ ಇಂತಹ ಶ್ರಮಪ್ರಧಾನ ಸಂದರ್ಭಗಳಲ್ಲಿ; ಕೋಲಾಟ, ಗೀಗೀ, ಭಜನೆ , ಬುಲಾಯಿ, ಡೊಳ್ಳಿನ ಹಾಡುಗಳು; ಪ್ರಮುಖವಾದ ಉತ್ಸವಗಳಲ್ಲಿ ಜನ ಕುಳಿತು ಹಾಡು ಕೇಳುವ ಸಂದರ್ಭಗಳಲ್ಲಿ ಶರಣರ ಚರಿತ್ರೆಗಳನ್ನು ಹಾಡಿಕೊಳ್ಳಲಾಗುತ್ತದೆ ಮತ್ತು ಅವರ ಮಹಿಮೆಗಳನ್ನು ಬಿತ್ತರಿಸುವ ಹಾಡುಗಳು ಸಾಕಷ್ಟು ಹುಟ್ಟಿಕೊಂಡಿವೆ.

ಪ್ರತಿಭಾವಂತ ಕವಿಗಳು ಪುರಾಣ ಕಾವ್ಯಗಳಲ್ಲಿ ಉಳಿಸಿಕೊಂಡು ಬಂದಿರುವ ಸಂಗತಿಗಳು, ಬೆಳೆಸಿಕೊಂಡು ಬಂದಿರುವ ಭಾವನೆಗಳು ಒಂದು ಕಡೆಯಾದರೆ, ಅಲಿಖಿತ ಮೂಲದಲ್ಲಿ ಮೌಖಿಕ ಪರಂಪರೆಯಲ್ಲಿ ಶರಣರಿಗೆ ಸಂಬಂಧಿಸಿದ ಮಾಹಿತಿಗಳು ಹಾಡುಗಳು ನಡಾವಳಿಕೆಗಳು ನಂಬುಗೆಗಳು ಸಾಂಪ್ರದಾಯಗಳು ಇನ್ನೊಂದು ಬಗೆಯಲ್ಲಿ ಜನಸಾಮಾನ್ಯರ ನಡುವೆ ಉಳಿದುಕೊಂಡು ಬಂದಿವೆ. ಈ ಜನಸಾಮಾನ್ಯರು ಉಳಿಸಿಕೊಂಡು ಬಂದಿರುವ ಸಂಗತಿಗಳನ್ನು ಒಂದೆಡೆ ಸಂಗ್ರಹಿಸುವ ದಾಖಲಿಸುವ ಸಂಪಾದಿಸುವ ಪ್ರಕಟಿಸುವ ಕೆಲಸ ವ್ಯಾಪಕವಾಗಿ ನಡೆಯಬೇಕಾದುದು ಅವಶ್ಯವಾಗಿದೆ. ಹೀಗೆ ಮಾಡಿದರೆ ನಾವು ಶರಣರ ಬಗೆಗೆ ಬಹುಮಹತ್ವದ ಮಾಹಿತಿಗಳನ್ನು ಉಳಿಸಿಕೊಟ್ಟಂತಾಗುತ್ತದೆ. ಮುಂದಿನ ಅಧ್ಯನಕಾರರಿಗೆ ಇದರಿಂದ ಬಹಳಷ್ಟು ಪ್ರಯೋಜನವಾಗುತ್ತದೆ.

ಕನ್ನಡದಲ್ಲಿ ಇಲ್ಲಿಯವರೆಗೆ ಶರಣರ ಬಗೆಗೆ ನಡೆದಿರುವ ಅಭ್ಯಾಸಗಳನ್ನು ಗಮನಿಸಿದರೆ, ಅವೆಲ್ಲ ಹೆಚ್ಚಾಗಿ ಲಿಖಿತಮೂಲದಲ್ಲಿ ಉಳಿದುಕೊಂಡು ಬಂದಿರುವ ಸಾಹಿತ್ಯವನ್ನೇ ಅವಲಂಬಿಸಿವೆ. ಇದು ಒಂದು ದಾರಿ. ನಾವು ಈಗ ಜನಸಾಮಾನ್ಯರು ಉಳಿಸಿಕೊಂಡು ಬಂದಿರುವ ಮೌಖಿಕ ಮಾಹಿತಿ ಹಾಗೂ ಹಾಡುಗಳನ್ನು ಒಂದೆಡೆ ಸಂಗ್ರಹಿಸಿ ಕೊಟ್ಟರೆ, ಶರಣರ ಬಗೆಗಿನ ಈ ಮಾಹಿತಿಗಳು ಶರಣರ ಚಿತ್ರಗಳನ್ನು ಸೃಷ್ಟಿಸಿಕೊಳ್ಳಲು ಸಹಾಯವಾಗುತ್ತವೆ. ಮೌಖಿಕ ಮಾಹಿತಿ ಇಲ್ಲದ ಶರಣರ ಅಧ್ಯಯನಗಳು ನಮಗೀಗ ಅಪೂರ್ಣ ಎಂಬಂತೆ ಕಂಡುಬರುತ್ತಿವೆ. ಅವರ ಪೂರ್ಣ ಚಿತ್ರವೊಂದು ಮೂಡಿ ಬರಲು ಈ ಮೌಖಿಕ ಮಾಹಿತಿ ಮತ್ತು ಸಾಹಿತ್ಯಗಳ ಸಹಾಯ ನಮಗೆ ಅವಶ್ಯವಾಗಿ ಬೇಕು ಎಂಬುದನ್ನು ನಾವು ಮನಗಾಣಬೇಕಾಗಿದೆ.

'ಬಸವ ಪರಿವಾರ' ಎಂಬ ಸಂಪುಟದಲ್ಲಿ ಮುಖ್ಯವಾಗಿ ಬಸವಣ್ಣನವರ ಬಗ್ಗೆ ಇರುವ ಹಾಡುಗಳಿವೆ. ಅವುಗಳ ಜೊತೆಗೆ ಚನ್ನಬಸವಣ್ಣ, ಅಕ್ಕನಾಗಮ್ಮ, ನೀಲಾಂಬಿಕೆ ಹಾಗೂ ಒಂದಿಷ್ಟು ತಾತ್ವಿಕ ಹಾಡುಗಳನ್ನು ಕೊಡಲಾಗಿದೆ. 'ಬಸವ ಪರಿವಾರ' ಎಂದರೆ ಇಡೀ ಶರಣ ಸಮುದಾಯವೇ ಎಂದು ಅರ್ಥವಾಗುತ್ತದೆ. ಆದರೆ ಇಲ್ಲಿ ಸಂಪುಟಗಳ ಹೆಸರುಗಳು ಭಿನ್ನವಾಗಿ ತೋರಲಿ ಎಂದು ಮಾತ್ರ ಹೀಗೆ ಒಂದು ಸಂಪುಟಕ್ಕೆ **'ಬಸವ ಪರಿವಾರ'** ಎಂದು, ಇನ್ನೊಂದು ಸಂಪುಟಕ್ಕೆ **'ಶರಣ ಪರಿವಾರ'** ಎಂದು ಹೆಸರಿಸಲಾಗಿದೆ. ಹೀಗೆ ಒಂದು ಅನುಕೂಲಕ್ಕಾಗಿ ಮಾತ್ರ ಹೆಸರುಗಳನ್ನು ಇಡಲಾಗಿದೆ, ಹಾಡುಗಳನ್ನು ಜೋಡಿಸಲಾಗಿದೆ. **'ಬಸವ ಪರಿವಾರ'** ಎಂದರೆ ಕೇವಲ ಬಸವಣ್ಣನವರ ನೇರ ಸಂಬಂಧಿಕರಿಗೆ ಮಾತ್ರ ಸೀಮಿತಗೊಳಿಸಲಾಗಿದೆ ಎಂಬ ಅಪಾರ್ಥ ಕಲ್ಪಿಸಬಾರದೆಂಬ ಉದ್ದೇಶದಿಂದ ಈ ಮಾತುಗಳನ್ನು ಹೇಳಬೇಕಾಯಿತು. **'ಶರಣ ಪರಿವಾರ'** ಎಂಬ ಸಂಪುಟದಲ್ಲಿ ೨೩ ಶರಣರ, ೫ ಜನ ಶಿವಶರಣೆಯರ ಹಾಡುಗಳನ್ನು ಸಂಪಾದಿಸಿ ಕೊಡಲಾಗಿದೆ.

ಶರಣರ ಬಗೆಗಿನ ಈ ಎಲ್ಲ ಹಾಡುಗಳು ವ್ಯಕ್ತಪಡಿಸುವ ಭಾವನೆಗಳನ್ನು ನಾವು ಮುಖ್ಯವಾಗಿ ಗಮನಿಸಬೇಕು. ಕಲಬುರ್ಗಿ ಮತ್ತು ಬೀದರ ಜಿಲ್ಲೆಗಳಲ್ಲಿಯಂತೂ ಶರಣರನ್ನು ನೆನೆಯದ ಸಂದರ್ಭಗಳೇ ಇಲ್ಲವೆಂದು ಹೇಳಬೇಕು. ಮದುವೆಯ ಪ್ರತಿಕಾರ್ಯಕ್ರಮದ ಹಾಡುಗಳಲ್ಲಿ, ಸೆಂಡಿಗೆ ಕಡಿಯುವ ಕಾರ್ಯಕ್ರಮದಿಂದ ಮೊದಲ್ಗೊಂಡು ಎಣ್ಣೆ ಪಚ್ಚುವ, ಐರಾಣಿ ತರುವ, ಬೀಗರನ್ನು ಕರೆಯು ಹೀಗೆ ಪ್ರತಿ ಸಂದರ್ಭದಲ್ಲೂ ಶರಣರನ್ನು ನೆನೆಯಲಾಗುತ್ತದೆ. ಯಾವುದೇ ಹಬ್ಬ ಹುಣ್ಣಿವೆ, ಉತ್ಸವ, ಜಾತ್ರೆ ಅಥವಾ ಶ್ರಮದ ಸಂದರ್ಭಗಳಿದ್ದಾಗಲೂ ಬಳಕೆಯಾಗುವ ಹಾಡುಗಳಲ್ಲಿ ಶರಣರ ಸ್ಮರಣೆ ಮೂಡಿ ಬರುತ್ತದೆ. ಈ ಭಾಗದ ಜನರ ಬದುಕಿನಲ್ಲಿ ಇಷ್ಟೊಂದು ಹಾಸುಹೊಕ್ಕಾಗಿ ಸೇರಿಕೊಂಡಿದೆ ಶರಣಸಂಸ್ಕೃತಿ. ಹೀಗಾಗಿ ಶರಣರನ್ನು ಈ ಭಾಗದ ಜನತೆಯ ಬದುಕಿನಿಂದ ಕಿತ್ತಿ ತೆಗೆಯಲು ಸಾಧ್ಯವಿಲ್ಲ. ಅದಕ್ಕಾಗಿ ಇಲ್ಲಿಯವರೆಗೆ ನಾವು ಓದಿದ್ದು ಕೃತಿಗಳಲ್ಲಿ ಮೂಡಿಬಂದ ಶರಣರ ಸ್ಮರಣೆಯನ್ನು. ಇನ್ನು ಮುಂದೆ ಬದುಕಿನಲ್ಲಿ ಬೆರೆತುಕೊಂಡ ಶರಣರ ಸಂಗತಿಗಳನ್ನು ಗಮನಿಸುವುದು ಅವಶ್ಯವಾಗಿದೆ. ಅದನ್ನು ಈ ಸಂಪುಟಗಳು ಒದಗಿಸಿ ಕೊಡುತ್ತವೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕು; ೧೨ನೇ ಶತಮಾನದಿಂದಲೂ ಚನ್ನಬಸವಣ್ಣನವರ ಹುಟ್ಟಿನ ಬಗೆಗೆ ಜನಮಾನಸದಲ್ಲಿ ಒಂದು ಬಗೆಯ ಕಳವಳದ ಭಾವನೆ ಉಳಿದುಕೊಂಡು ಬಂದಿರುವುದು ಸಹಜವಾಗಿ ಎದ್ದುಕಾಣುತ್ತದೆ. ಇದು ಚೆನ್ನಬಸವಣ್ಣನವರಿಗಿಂತ ಅವರ ತಾಯಿ ಅಕ್ಕನಾಗಮ್ಮನವರು ಅನುಭವಿಸಿದ ಯಾತನೆಯ ಬಗ್ಗೆ ಜನ ತೋರುವ ಅನುಕಂಪ ಮತ್ತು ಆದರದ ದ್ಯೋತಕವೇನೋ ಎನಿಸುವಂತಿದೆ.

ಅಕ್ಕನಾಗಮ್ಮನ ಬಸುರಿನ ಸಂಗತಿ ಇಷ್ಟುವರ್ಷಗಳವರೆಗೆ ಉಳಿದುಕೊಂಡು ಬಂದಿರಲು ಅವಳ ಪ್ರಾಥಸ್ಮರಣೀಯ ಪವಿತ್ರವ್ಯಕ್ತಿತ್ವವೇ ಕಾರಣವೆಂದು ಹೇಳಬೇಕು. ಅವಳ ಈ ಬಗೆಗಿನ ವೃತ್ತಾಂತದಲ್ಲಿ ಎರಡು ಧಾರೆಗಳಿವೆ. ಒಂದು ಕಲ್ಯಾಣದಲ್ಲಿ ಅಕ್ಕನಾಗಮ್ಮನ ಬಸುರಿನ ಪ್ರಸಂಗ ನಡೆಯಿತು ಎಂಬುದು, ಇನ್ನೊಂದು ಬಸವಣ್ಣ ಮತ್ತು ಅಕ್ಕನಾಗಮ್ಮ ಕಲ್ಯಾಣಕ್ಕೆ ಬರುವ ಪೂರ್ವದಲ್ಲಿಯೇ ಈ ಘಟನೆ ನಡೆದಿದೆ ಎಂಬಂತೆ ಒರೆಯುವ ಸಂಗತಿ. ಬಸವಣ್ಣನವರು ಕಲ್ಯಾಣಕ್ಕೆ ಬಂದ ನಂತರ ಚನ್ನಬಸಣ್ಣನವರ ಜನನವಾಯಿತೆಂಬುದು ನಂಬಲು ಅಸಾಧ್ಯವಾಗಿದೆ. ಏಕೆಂದರೆ ಅನುಭವ ಮಂಟಪದಲ್ಲಿ ಚನ್ನಬಸವಣ್ಣನವರು ವಹಿಸಿದ ಕಾರ್ಯ, ಅವರು ಬರೆದ ಧಾರ್ಮಿಕ-ತಾತ್ವಿಕ ವಚನಗಳನ್ನು ಗಮನಿಸಿದರೆ, ಚನ್ನಬಸವಣ್ಣನವರ ಜನನ ಬಸವಣ್ಣನವರು ಕಲ್ಯಾಣಕ್ಕೆ ಬರುವ ಪೂರ್ವದಲ್ಲಿಯೇ ಆಗಿದೆ ಎಂಬುದು ಖಂಡಿತವೆನಿಸುತ್ತದೆ.

ಕಲ್ಯಾಣದಲ್ಲಿ ಬಸವಣ್ಣನವರಿಗೆ ಒಂದು ಶಕ್ತಿಯಾಗಿ ಕೆಲಸ ಮಾಡಿದವರು ಚನ್ನಬಸವಣ್ಣನವರು. ಹೀಗಾಗಿ ಕಲ್ಯಾಣಕ್ಕೆ ಬರುವಾಗಲೇ ಚನ್ನಬಸವಣ್ಣನವರಿಗೆ ಕನಿಷ್ಠ ಬಾಲ್ಯಾವಸ್ಥೆ ಇರಬೇಕು. ಬಸವಣ್ಣನವರು ಇನ್ನೂ ಕೂಡಲಸಂಗಮದಲ್ಲಿ ಇರುವಾಗಲೇ ಚನ್ನಬಸವಣ್ಣನವರ ಜನನವಾಗಿರಬೇಕೆಂದು ತೋರುತ್ತದೆ. ಅಕ್ಕನಾಗಮ್ಮನ ಬಾಲ್ಯವಿವಾಹ, ಆಕೆ ತನ್ನ ಪತಿಯೊಂದಿಗೆ ಬಾಳಿದ ಸಂಗತಿಯನ್ನು ಒರೆಯುವ ಒಂದು ಅಪರೂಪದ ಹಾಡು ಕಲಬುರ್ಗಿ ಜಿಲ್ಲೆಯಲ್ಲಿ ಪ್ರಚಾರದಲ್ಲಿದೆ. ಕಲ್ಯಾಣದಲ್ಲಿ ಚನ್ನಬಸವಣ್ಣನವರ ಜನನವಾಯಿತೆಂದು ಹೇಳುವ ಪ್ರಸಂಗ ಬಹುಶಃ ಪುರಾಣಕಾರರ ಸೃಷ್ಟಿಯಾಗಿದೆ. ನಂತರದಲ್ಲಿ ಈ ಘಟನೆಯೊಂದಿಗೆ ಕಲ್ಯಾಣದ ತಳುಕು ಹಾಕಿ, ಶರಣರಿಗೆ ಕೊಂಡೆ ಮಂಚಣ್ಣನಂಥವರು ಕಾಡುವ ಪರಿ, ಬಿಜ್ಜಳ ಇಂತಹ ಜನರ ಮಾತಿಗೆ ಕಿವಿಗೊಡುವ ವ್ಯಕ್ತಿತ್ವದ ಅರಸನಾಗಿದ್ದನೆಂಬ ಭಾವನೆ ಹುಟ್ಟಿಸಿ, ಆ ಮೂಲಕ ಜನರಲ್ಲಿ ಶರಣರ ಬಗೆಗೆ ಒಂದು ಬಗೆಯ ಗೌರವದ ಭಾವನೆ ಮೂಡಿಸುವ ಮನಸ್ಸು ಇಲ್ಲಿ ಕಾಣುತ್ತದೆ. ಹೀಗಾಗಿ ಪುರಾಣಕಾರರ ಕಲ್ಯಾಣದ ಸೇರ್ಪಡೆಯ ಸಂಗತಿಯ ಹಿಂದೆ ಇರುವ ಭಾವನೆಯನ್ನು ಗ್ರಹಿಸಿದರೆ, ಅದೊಂದು ಶರಣರ ಬಗೆಗೆ ಇಟ್ಟುಕೊಂಡು ಬಂದಿರುವ ಗೌರವದ ಭಾವನೆಯ ಕಾವ್ಯವಾಗಿ ಗ್ರಹಿಸಬೇಕೆ ಹೊರತು ಸತ್ಯಸಂಗತಿಯನ್ನಾಗಿ ಅಲ್ಲ.

ಬಸವಣ್ಣನವರನ್ನು ಪರೀಕ್ಷಿಸುವ ಅಲ್ಲಮನ ಪ್ರಸಂಗವೊಂದು ಮಂಟೇಸ್ವಾಮಿ ಕಾವ್ಯದಲ್ಲಿ ಸೇರಿಕೊಂಡಿದೆ. 'ಕಲ್ಯಾಣದ ಪ್ರಸಂಗ' ವೆಂದೇ ಪ್ರಸಿದ್ಧಿಯಾಗಿರುವ ಅದು, ಬಹುಶಃ ಕಲ್ಯಾಣದ ಬಸವಣ್ಣನವರನ್ನು ಸ್ಮರಿಸಿ, ಕಾವ್ಯ ಒರೆಯುವ ರೀತಿಯಲ್ಲಿರಬೇಕೆಂದು ತೋರುತ್ತದೆ. ಅದು ಖಂಡಿತ ಕೊಡೆಕಲ್ಲ ಬಸವಣ್ಣನವರಿಗೆ ಸಂಬಂಧಿಸಿದ ಸಂಗತಿಯಲ್ಲ. ಇದನ್ನು ಹೇಳುವ ಉದ್ದೇಶದಿಂದಲೇ 'ಬಸವ ಪರಿವಾರ' ಸಂಪುಟದಲ್ಲಿ ಮಂಟೇಸ್ವಾಮಿ ಕಾವ್ಯದಿಂದ ಈ ಅಧ್ಯಾಯವನ್ನು ಆರಿಸಿಕೊಂಡು ಹಾಕಲಾಗಿದೆ. ಈ ಪ್ರಸಂಗವನ್ನು

ಬಿತ್ತರಿಸುವ ಹಾಡುಗಳು ಜನಪದದಲ್ಲಿ ಬೇಕಾದಷ್ಟು ದೊರೆಯುತ್ತವೆ. ಇದನ್ನು ಗಮನಿಸಬೇಕು.

ಉಳಿದಂತೆ ಇಲ್ಲಿಯ ಹಾಡುಗಳನ್ನೇ ಪ್ರಮುಖವಾಗಿ ಗಮನಿಸಿದರೆ ಬಸವಣ್ಣನವರಾದಿಯಾಗಿ ಶರಣರ ಬಗೆಗೆ ಜನರ ಭಾವನೆ ಏನು ಎಂಬುದು ನಮಗೆ ಗೊತ್ತಾಗುತ್ತದೆ. ಮತ್ತು ಅನೇಕ ಹೊಸ ಹೊಸ ಸಂಗತಿಗಳು ಇಲ್ಲಿ ದೊರೆಯುತ್ತವೆ.

ಎಲ್ಲ ಸಮುದಾಯಗಳ ನಡುವೆ ನಮಗೆ ಹೆಚ್ಚು ಹಾಡುಗಳು ಇರುವುದು ಕಂಡುಬಂದುದೆಂದರೆ ಬಸವಣ್ಣ ಹಾಗೂ ಅಕ್ಕಮಹಾದೇವಿ ಅವರವು. ಇವರನ್ನು ನೆನೆಯುವಾಗ, ಇವರ ಚರಿತ್ರೆಯನ್ನು ಒರೆಯುವಾಗ ಈ ಹೆಸರುಗಳ ಹಿಂದೆ ಇಡೀ ಶರಣ ಸಮುದಾಯವೇ ಕಾಣುವ ಭಾವನೆ ಸಾಮಾನ್ಯವಾಗಿ ಎಲ್ಲ ಕಡೆ ಕಂಡುಬರುತ್ತದೆ. ಉಳಿದ ಶರಣರ ಹಾಡುಗಳು ವಿರಳವಾಗಿ ದೊರೆಯುತ್ತವೆ. ವಿಶೇಷವಾಗಿ ಆಯಾ ಶರಣರ ಸ್ಮಾರಕಗಳಿರುವ ಕಡೆ ಅವರವರನ್ನು ನೆನೆಸಿಕೊಂಡು ಹಾಡುವ ಹಾಡುಗಳು ಪ್ರಚಾರದಲ್ಲಿವೆ. ಕೆಲವೊಬ್ಬ ಉತ್ತಮ ಹಾಡುಗಾರರು ಆಸ್ಥೆವಹಿಸಿ ಹೆಚ್ಚು ಜನ ಶರಣರ ಬಗೆಗೆ ಹಾಡುಗಳನ್ನು ಕಲಿತುಕೊಂಡಿರುತ್ತಾರೆ. ಆದರೆ ನಾವು ಆಯಾ ಶರಣರ ಸ್ಮಾರಕಗಳಿರುವ ಕಡೆ ಕ್ಷೇತ್ರಕಾರ್ಯ ಮಾಡಿದಾಗಲೇ ಅವರವರ ಹಾಡುಗಳು ದೊರಕಿರುವುದು ನಮ್ಮ ಅನುಭವದಿಂದ ಬಲ್ಲ ಸಂಗತಿಯಾಗಿದೆ.

ಆಯಾ ಹಾಡು ಮುಗಿದ ಕೂಡಲೇ ಕೆಳಗೆ ಬಲತುದಿಯಲ್ಲಿ ಹಾಡಿನ ಮೂಲವನ್ನು ನಮೂದಿಸಲಾಗಿದೆ. ಅಂದರೆ ಹಾಡು ಹೇಳಿದ ವಕ್ತಾರರ ಹೆಸರುಳನ್ನು, ಇಲ್ಲವೆ ಕೃತಿಯ ಹೆಸರನ್ನು ಕೊಡಲಾಗಿದೆ. ಒಂದು ಹಾಡು ಬೇರೆ ಬೇರೆ ಕಡೆ ಸಂಗ್ರಹವಾಗಿದ್ದರೆ ಆ ಹಾಡಿನ ಉತ್ತಮ ಪಾಠವನ್ನು ಆಯ್ದು ಕೊಡಲಾಗಿದೆ. ಭಿನ್ನಭಿನ್ನ ಪಾಠಗಳನ್ನು ಒಂದರೊಡನೊಂದು ಎಲ್ಲಿಯೂ ಬೆರಸಲು ಹೋಗಿಲ್ಲ. ಆದರೆ ಒಂದೇ ಹಾಡನ್ನು ಒಬ್ಬರಿಗಿಂತ ಹೆಚ್ಚು ಜನ ಹಾಡಿದ್ದರೆ, ಪ್ರತಿಯೊಬ್ಬರ ಹೆಸರಿನ ಹಿಂದೆ ವಿವರಣಾತ್ಮಕ ಚಿನ್ಹೆ (ಅಡ್ಡಗೆರೆ '–') ಕೊಡಲಾಗಿದೆ. ಉದಾಹರಣೆಗೆ:

– ಶ್ರೀಮತಿ ಶಶಿಕಲಾ ಗಿರಿ,
–ಶ್ರೀಮತಿ ಸುಮಿತ್ರಾದೇವಿ ಅಂಗಡಿ,
– ಶ್ರೀಮತಿ ಸರ್ವಮಂಗಳಾ ಜೋಗೂರ

ಆದರೆ ಜೊತೆಹಾಡುಗಾರರ ಹೆಸರನ್ನು ಕೊಡುವಾಗ ಮುಖ್ಯ ಹಾಡುಗಾರರ ನಂತರ 'ಹಾಗೂ' ಸೇರಿಸಿ ಜೊತೆಹಾಡುಗಾರರ ಹೆಸರನ್ನು ಕೊಡಲಾಗಿದೆ. ಉದಾಹರಣೆಗೆ:

–ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣಿನ, ಮಹಾದೇವಿ ಕುಂಬಾರ.

–ಶ್ರೀಮತಿ ಸರ್ವಮಂಗಳಾ ಜೋಗೂರ ಹಾಗೂ
ಪಾರ್ವತಿ ಜೆಮಶೆಟ್ಟಿ.

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ ಹಾಗೂ ಅನ್ನಪೂರ್ಣ ದೇವಣಿ,
ಸರ್ವಮಂಗಳಾ ಜೋಗೂರ.

ಕೃತಿಯ ಹೆಸರು ಕೊಡುವಾಗ ಹಿಂದೆ 'ಕೃತಿ' ಎಂದು ಬರೆದು ನಂತರ ಕೃತಿಯ ಹೆಸರನ್ನು ಕೊಡಲಾಗಿದೆ. ವಕ್ತಾರರ ವಿವರಗಳು ದೊರೆಯದಿದ್ದಲ್ಲಿ, ಅಥವಾ ನೇರವಾಗಿ ಕವಿಯಿಂದ ಸಂಗ್ರಹಗೊಂಡದ್ದು ಇದ್ದರೆ ಅಂಥಲ್ಲಿ ಕವಿಯ ಹೆಸರಿನ ಹಿಂದೆ 'ಕವಿ' ಎಂದು ಬಳಸಿ ಅವರ ಹೆಸರನ್ನು ಕೊಡಲಾಗಿದೆ. ಉದಾಹರಣೆಗೆ :

'ಕವಿ : ಸಾವಳಗಿ ಮಹಮ್ಮದಸಾಬ'.

ವಕ್ತಾರರ ಮತ್ತು ಕೃತಿಗಳ ವಿವರಣಾತ್ಮಕ ಪಟ್ಟಿ ಅನುಬಂಧ ರೂಪದಲ್ಲಿವೆ. ಅಲ್ಲಿ ೧೬೭ ವಕ್ತಾರರ ಮಾಹಿತಿ, ೪೨ ಕೃತಿಗಳ ವಿವರಗಳಿವೆ.

ಕೆಲ ಕೃತಿಗಳಲ್ಲಿ ಪ್ರಕಟಗೊಂಡ ಹಾಡುಗಳು ನೇರವಾಗಿ ವಕ್ತಾರರಿಂದ ಸಂಗ್ರಹಗೊಂಡಿವೆ. ಆದರೆ ಕೆಲವು ಗ್ರಾಮಾಂತರ ಪ್ರದೇಶದ ಕವಿಗಳಿಂದ ರಚಿತವಾಗಿದ್ದರೂ ಭಾಷೆ ಸ್ವಲ್ಪ ಗ್ರಾಂಥಿಕವೆನಿಸುವಂತಿವೆ. ಉದಾಹರಣೆಗೆ ದುಂದುಮೆ ಹಾಡುಗಳು. ಆದರೆ ಇವನ್ನು ಹಿಂದಿನ ವಿದ್ವಾಂಸರು ಜನಪದ ಸಾಹಿತ್ಯದ ಭಾಗವಾಗಿಯೇ ಗ್ರಹಿಸಿ ಮುದ್ರಿಸಿದ್ದಾರೆ. ನಾವು ಸಧ್ಯಕ್ಕೆ ಅವನ್ನು ಪ್ರಶ್ನೆ ಮಾಡಲು ಹೋಗಿಲ್ಲ. ಎಲ್ಲವನ್ನೂ ಒಂದೆಡೆ ನೋಡಿದಾಗ ಇಂದಿನ ವಿದ್ವಾಂಸರು ಇವನ್ನು ಹೇಗೆ ಗ್ರಹಿಸುತ್ತಾರೆಂದು ನೋಡುವ ವಿಚಾರ ನಮ್ಮದು. ಆ ಹಾಡುಗಳು ಏನಿದ್ದರೂ ಜನಪದ ಹಾಡುಗಳಿಗೆ ಸಮೀಪವಾಗಿವೆ ಎಂಬುದು ಮಾತ್ರ ಸತ್ಯ ಸಂಗತಿ. ಸಂಪಾದನೆಗೆ ಸಂಬಂಧಪಟ್ಟಂತೆ ಇಷ್ಟು ಮಾತುಗಳು ಸಾಕೆನಿಸುತ್ತವೆ. ಶರಣರನ್ನು ನೋಡುವ ದೃಷ್ಟಿಗೆ ಒಂದು ಹೊಸ ದಾರಿಯನ್ನು ಈ ಸಂಪುಟಗಳು ತೋರಿಸುತ್ತವೆ ಎಂಬ ಭರವಸೆಯ ಭಾವನೆ ಈ ಎಲ್ಲ ಪ್ರಯತ್ನದ ಹಿಂದೆ ಇದೆ.

–ಸಂಪಾದಕರು

ಪರಿವಿಡಿ

ಭಾಗ–೧ : ಶಿವಶರಣರು

೧. ಅಲ್ಲಮ ಪ್ರಭುದೇವರು

ಅಲ್ಲಮ ಪ್ರಭು

ಪ್ರಥಮ ಜ್ಯೋತಿ ಅಲ್ಲಮಪ್ರಭು
ಸ್ವಯಂಭು ಮನಿ ಅಂವಾ ಕಟ್ಟಿದ ।
ನೀವು ಕಟ್ಟಿದ ಮನಿ ಬಿಟ್ಟು ಹೋಗತಿರಿ
ಸುಳ್ಳ ಹಾಕತೀರಿ ಮನಿ ಒಂದ ।   ॥ ೧ ॥

ನಿರಾಕಾರ ಆಕಾರ ನಿರಂಜನ
ಜ್ಞಾನ ಉಳ್ಳಾಂವ ಆಚಿಕಡೆ ಇದ್ದ ।
ಅಂಧಕಾರ ದುಂಧಕಾರ ಜೇಂಕಾರ
ಹೊಡಿಯತಾರ ಅವರು ಅಲ್ಲಿಂದ ।   ॥ ೨ ॥

ಕೈಕಾಲ ಇಲ್ಲಿ ಮುಗಸುತ ಇಲ್ಲಿ
ಅಖಂಡ ಒಂದ ಮಾಡಿದ ।
ಏಕ ನಿಷ್ಠಿ ಭಯ–ಭಕ್ತಿಯಿಂದ ।
ಅಲ್ಲಮ ಪ್ರಭು ಅಂತ ಹೆಸರಿಟ್ಟಿದ್ದ ।   ॥ ೩ ॥

ಕೇಳರಿ ಪ್ರಥಮ ಜ್ಯೋತಿ ಒಳಗ
ಚಿದಾನಂದಮೂರ್ತಿವರನಾ ।
ಅವನ ಇಚ್ಛಾದಿಂದ ಬ್ರಹ್ಮ ಆದ ಪ್ರಸನ್ನ ।
ಆದ್ರ ಋಸಿ ಬ್ರಹ್ಮಗ ಗಗನದಲ್ಲಿ
ಪರಾತಪರಿ ಅಂಬಾವ ಅದಾನ ಜಾಣ ।   ॥ ೪ ॥

– ಶ್ರೀ ಮಹಾದೇವಪ್ಪ ಉಪ್ಪಾರ

***

ಅಲ್ಲಮ

ಜಪ ಇಲ್ಲ ತಪ ಇಲ್ಲ ನೇಮ ನಿತ್ಯದೊಳಿಲ್ಲ
ಉಪವಾಸ ವರತಾ ಮೊದಲಿಗೆ ಇಲ್ಲ ಗುರುವೇ
ಕಾಣುಬಾರದಂಥ ವಸ್ತು ಕಂಡೇನು ಗುರುರಾಯ
ಕಂಡು ಸುಖವನ್ನು ಹೇಳುಲಾಕ ಬಾರದು ಗುರುವೆ ॥ ೧ ॥

ಯಂತ್ರ ತಂತ್ರದೊಳಿಲ್ಲ ವೇದಶಾಸ್ತ್ರದೊಳಿಲ್ಲ
ಕ್ಷೇತ್ರ ಉಳವಿ ಹಂಪಿ ಯಾತ್ರದೊಳಿಲ್ಲ ಗುರುವೇ
ಕಾಣುಬಾರದಂಥ ವಸ್ತು ಕಂಡೇನು ಗುರುರಾಯ ॥ ೨ ॥

ದೃಷ್ಟಿಗಿ ಕಾಣುವುದಿಲ್ಲ ಮುಟ್ಟಿ ಹೇಳುವುದಿಲ್ಲ
ಶ್ರೇಷ್ಠ ಗುಹೇಶ್ವರನ ಬಟ್ಟಬಯಲಾದಿ ಗುರುವೇ
ಕಾಣುಬಾರದಂಥ ವಸ್ತು ಕಂಡೇನು ಗುರುರಾಯ ॥ ೩ ॥

ಮನಕ ನೆಲುಕುವದಿಲ್ಲ ಸಾಧನ ಮಾಡುವುದಿಲ್ಲ
ಸಾಧುಸಿ ನೋಡಿದರೆ ತನ್ನೊಳಗ ಹಾರ ಗುರುವೇ
ಕಾಣಬಾರದಂಥ ವಸ್ತು ಕಂಡೇನು ಗುರುರಾಯ ॥ ೪ ॥

ಯಾಗ ಸಾಧನದೊಳಿಲ್ಲ ರಂಗರೂಪದೋಳಿಲ್ಲ
ಭೋಗಿ ತ್ಯಾಗಿ ಆಗಿ ಗುರುವೆ ಗುಹೆ ಸೇರಿರಲ್ಲ ಗುರುವೇ
ಕಾಣುಬಾರದಂಥ ವಸ್ತು ಕಂಡೇನು ಗುರುರಾಯ ॥ ೫ ॥

– ಶ್ರೀಮತಿ ರೇಖಾ ರಾಮಶೆಟ್ಟಿ ಕಾಡಾದಿ

***

ಅಲ್ಲಮ ಪ್ರಭು

ತುಂಬೀ ಬರುವ ಗಂಗಮ್ಮನ ಮ್ಯಾಲೆ
ಲಿಂಗಾದ ವಸ್ತುರ ಒಗೆಯವನ್ಯಾರೇ
ಈಶ್ವರುನ ಮನಿಯಾಗ ತಟುದಾಗ ಆಡಂಥ
ಬಂಗಾರದವನನ್ನು ನಾಗೇಂದರ ಹೆಡೆಯೆ ಜೋ ಜೋ ॥ ೧ ॥

ಒಕ್ಕಲಗೇರ್‍ಯಾಗ ಒಕ್ಕು ಬನ್ನೀರಿ
ಅಕ್ಕ ಮುತ್ತೈದೇರನ್ನ ಕರದಾ ಬನ್ನೀರಿ
ಅಕ್ಕ ಮುತ್ತೈದೇರು ಕಂಕಣ ಕೈದವರು
ಹರಿದಾರು ತಕ್ಕೊಂಡು ಹೊಸಗಂಧ ಧರಿಸಿ ಜೋ ಜೋ ॥ ೨ ॥

ಹಾರೂರಗೇರ್‍ಯಾಗ ಹರದ ಬನ್ನೀರಿ
ಪ್ಯಾಲ ಮುತ್ತೈದೇರನ್ನ ಕರದ ಬನ್ನೀರಿ
ಸಾಲ ಮುತ್ತೈದೇರು ಕಂಕಣ ಕೈದವರು
ಹರಿದಾರು ತಕ್ಕೊಂಡು ಹೊಸಗಂಧ ಧರಿಸಿ ಜೋ ಜೋ ॥ ೩ ॥

ಬೊಂಬಾದವರು ಬಾಗಾಣೆದವರು
ನಿಂತಾರವರು ಅಂಗಳದಾಗೆ
ಕಂದಾನ ಕಾಲಿಗೆ ಜೂಮು ತಟ್ಟ್ಯಾವಂತ
ಗಿಂಡಿಲಿ ಉದಕ ತಂದಾಳ ಗೋಪಿ ಜೋ ಜೋ ॥ ೪ ॥

ಅಗನೀ ಹರಿದ ಅಗಸಣ್ಣಾಕಿ
ಸುಜನಿ ಹರಿದ ಮರಕ ತೊಟ್ಲಿಟ್ಟೀ
ಸೂಜಿಯ ಮಲಿಹಂಗ ಮಲಿಹಾಲ ತರಳ್ಯಾವ
ಹಾರ್‍ಯಾಡಿ ಕುಡಿತಾನ ಅಲ್ಲಮಪ್ರಭು ಜೋ ಜೋ ॥ ೫ ॥

– ಶ್ರೀಮತಿ ಪಾರ್ವತಿ ಸಿದ್ದಪ್ಪ ಗುರ್ಜಲ್

***

ಜೋಗುಳ

ಸೆಂಪಿಗಿ ಹೂವಾ ಹಂಚುತ ಬಂದಿರಿ
ಕಂಕಣ ದೇಶದ ಕಡಿಯವರೇ
ಕಂಕಣ ದೇಶದ ಕಡಿಯವರ ಬಂದಿರಿ
ಹಂಪಿವಿರುಪಾಕ್ಷನ ತೂಗಿರೇ । ನೀವು ತೂಗೀರೇ ॥ ೧ ॥

ಮಲ್ಲೀಗಿ ಹೂವ ಚೆಲ್ಲುತ ಬಂದಿರಿ
ಕಲ್ಯಾಣ ದೇಶದ ಕಡಿಯವರೇ
ಕಲ್ಯಾಣ ದೇಶದ ಕಡಿಯಾರ ಬಂದಿರಿ
ಹಂಪಿವಿರುಪಾಕ್ಷನ ತೂಗೀರಿ । ನೀವು ತೂಗೀರೇ ॥ ೨ ॥

ಕೆಬ್ಬುಣದ ತೊಟ್ಲಾಕ ಜಗ್ಗಿ ಕವದಿಯನ್ಹಾಸಿ
ಉಗ್ಗರದ ಕಂದನ ತೋಗೀರೇ
ಉಗ್ಗುರದ ಕಂದನ ಸಿದ್ಧಲಿಂಗಯ್ಯನ
ಹಂಪಿವಿರುಪಾಕ್ಷನ ತೂಗೀರಿ । ನೀವು ತೂಗೀರೇ ॥ ೩ ॥

ತೂಗೀರಿ ರನ್ನನ ತೂಗೀರಿ ಚಿನ್ನನ
ತೂಗೀರಿ ಕರಿಯ ಕಾಳಿಂಗನೇ
ಕರಿಯ ಕಾಳಿಂಗನ ಅಲ್ಲಂಪ್ರಭೇಶನ
ಅರಳ ಬೈತಲೇರು ತೂಗೀರೆ । ನೀವು ತೂಗೀರೇ ॥ ೪ ॥

– ಶ್ರೀಮತಿ ಸಣ್ಣಮಲ್ಲಮ್ಮ ಲಂಕಣಿ

***

ಗುರುರಾಯ ಅಲ್ಲಮ ಪ್ರಭುದೇವ

ಗುರುರಾಯಾ ಅಲ್ಲಮಪ್ರಭುದೇವ
ಶಿವಶರಣರ ಸಂಜೀವ ॥ ೧ ॥

ಶ್ರೀಗಿರಿ ಹೋಲುವ ಯೋಗಮಂಟಪವ
ಹರತರ ಮೂರುತಿ ಪ್ರಭುದೇವಾ ॥ ೨ ॥

ದರುಶನದಿಂದವ ದುರಿತವ ಕಳೆಯುವ
ಹರತರ ಮೂರುತಿ ಪ್ರಭುದೇವಾ ॥ ೩ ॥

ಮರಶಿಲಪುರದೋಳಿರುವ ಮದನಕೆ ಮಹಾದೇವ
ಗೂಗಲ್ಲು ಗವಿಯೊಳು ಮರೆಯುತಾ ॥ ೪ ॥

– ಶ್ರೀಮತಿ ಮಹಾನಂದಿ ಪೂಜಾರಿ

***

ಗೂಗಲ್ಲ ಪ್ರಭುಲಿಂಗ

ಗೂಗಲ್ಲ ಪ್ರಭುಲಿಂಗ ಬಲ್ಲಂತ ಪರಮಾತ್ಮ
ಎದಿಯಲ್ಲಿ ಸೇರಪಾವು ರುದ್ರಗದ್ದೀಗೆ ॥ ೧ ॥

ಉದರುದರ ಊದಬತ್ತಿ ಹಚ್ಚಂತ ಈಭೂತಿ
ಹಗಲು ಹನ್ನೆರಡು ತಾಸು ಕರ್ಪೂರದಾರುತಿ ॥ ೨ ॥

ಗೊಬ್ಬೂರು ಬೂದಿಬಸವ ಬಲ್ಲಂತ ಪರಮಾತ್ಮ
ಎದಿಮ್ಯಾಗೆ ಸೇರಪಾವು ರುದ್ರಗದ್ದೀಗೆ ॥ ೩ ॥

ಗೂಗಲ್ಲ ಮರಿಗೆಮ್ಮ ಬಲ್ಲಂತ ಪರಮಾತ್ಮ
ಎದಿಯಲ್ಲಿ ಸೇರ ಪಾವು ರುದ್ರಗದ್ದೀಗೆ ॥ ೪ ॥

ಗೂಗಲ್ಲ ಫಕೀರಬಾಬಾ ಬಲ್ಲಂತ ಪರಮಾತ್ಮ
ಎದಿಯಲ್ಲಿ ಸೇರಪಾವು ರುದ್ರಗದ್ದೀಗೆ ॥ ೫ ॥

ಗೂಗಲ್ಲ ಪಾಲಾಮವ್ವ ಬಲ್ಲಂತ ಪರಮಾತ್ಮ
ಎದಿಯಲ್ಲಿ ಸೇರಪಾವು ರುದ್ರಗದ್ದೀಗೆ ॥ ೬ ॥

ಗೂಗಲ್ಲ ಪರಾಪಯ್ಯ ಬಲ್ಲಂತ ಪರಮಾತ್ಮ
ಎದಿಯಲ್ಲಿ ಸೇರಪಾವು ರುದ್ರಗದ್ದೀಗೆ ॥ ೭ ॥

– ಶ್ರೀಮತಿ ಹುಲಗೆಮ್ಮ ಪ್ರಭುರಾಯ ಹರಿಜನ

***

ಮಾತಾಡ ದೇವರಿಗೆ

ಮಾತಾಡ ದೇವರಿಗೇ ಮನವ್ಯೆದು ಮುಂದಿಟ್ಟೆ
ಏ ಮಾತಾ ನಿಮ್ಮಲ್ಲಿಲ್ಲ ಪ್ರೀತಿನ ಉಳಿಯಲಿಲ್ಲ ॥ ೧ ॥

ಅಡ್ಡಡ್ಡ ಬಿದ್ದಾರೇ ಗಡ್ಡೆಲ್ಲ ಮಣ್ಣಾಯ್ತು
ಏಳೆಂಬ ಶಬ್ದವು ನಿಂಬಲ್ಲಿ ಬರಲಿಲ್ಲ ॥ ೨ ॥

ಏ ಕಲ್ಲ ನೀನಲ್ಲೇಳೆ ಅಲ್ಲಮ ಪ್ರಭುಲಿಂಗ
ಏ ಕಲ್ಲ ನೀನಲ್ಲೇಳೆ ಅಲ್ಲಮ ಪ್ರಭುಲಿಂಗ ॥ ೩ ॥

– ಶ್ರೀಮತಿ ಪರಮ್ಮ ಸಿದ್ದಪ್ಪ ಕುಣಕಿ

***

ಕಾಯ್ಬೇಕ ಕಾಯ್ಬೇಕ

ಕಾಯ್ಬೇಕ ಕಾಯ್ಬೇಕ ಬಾಳೀಯ ಕಾಯ್ಬೇಕ
ಬಾಳೀಯ ಕಾಯ್ ಒಯ್ದು ಗೊನಿಬೇಕಲ್ಲಮಪ್ರಭು
ಓಂ ನಮ ಶಿವ ಎನ್ನಿರೇ । ಶಿವಾಯ ಓಂ ನಮ ಶಿವ ಎನ್ನಿರೇ ॥ ೧ ॥

ಓಂ ನಮ ಶಿವ ಎನ್ನ ಶಿವನಾಮ ನುಡಿರೆಮ್ಮ
ಭಕ್ತಿಟ್ಟು ನಡದರಿಗೆ ಬಾರೋ ಅಲ್ಲಮಪ್ರಭು
ಓಂ ನಮಃ ಶಿವ ಎನ್ನೀರೆ । ಶಿವಾಯ ಓಂ ನಮಃ ಶಿವ ಎನ್ನಿರೆ ॥ ೨ ॥

ಕಾಯ್ಬೇಕು ಕಾಯ್ಬೇಕು ನಿಂಬೀಯ ಕಾಯ್ಬೇಕು
ನೀಂಬಿಯ ಕಾಯ ಒಯ್ದು ಗೊನಿಬೇಕಲ್ಲಮಪ್ರಭು
ಓಂ ನಮಃ ಶಿವಾ ಎನ್ನಿರೇ । ಶಿವಾಯ ಓಂ ನಮಃ ಶಿವ ಎನ್ನಿರೇ ॥ ೩ ॥

ಕಾಯ್ಬೇಕು ಕಾಯ್ಬೇಕು ಉತ್ತತ್ತಿ ಕಾಯ್‌ಬೇಕು
ಉತ್ತತ್ತಿ ಕಾಯ್ ಒಯ್ದು ಗೊನಿಬೇಕಲ್ಲಮಪ್ರಭು
ಓಂ ನಮಃ ಶಿವಾ ಎನ್ನಿರೇ । ಶಿವಾಯ ಓಂ ನಮಃ ಶಿವ ಎನ್ನಿರೇ ॥ ೪ ॥

ಕಾಯ್ಬೇಕು ಕಾಯ್ಬೇಕು ಟೆಂಗಿನ ಕಾಯ್ಬೇಕು
ಟೆಂಗಿನ ಕಾಯ್ ಒಯ್ದು ಗೊನಿಬೇಕಲ್ಲಮಪ್ರಭು
ಓಂ ನಮಃ ಶಿವಾ ಎನ್ನಿರೇ । ಶಿವಾಯ ಓಮ ನಮಃ ಶಿವ ಎನ್ನಿರೇ ॥ ೫ ॥

ಕಾಯ್ಬೇಕು ಕಾಯ್ಬೇಕು ದ್ರಾಕ್ಷಿಯ ಹಣ್ಣುಬೇಕು
ದ್ರಾಕ್ಷಿಯ ಹಣ್ಣು ಒಯ್ದು ಗೊನಿಬೇಕಲ್ಲಮಪ್ರಭು
ಓಂ ನಮಃ ಶಿವಾ ಎನ್ನಿರೇ । ಶಿವಾಯ ಓಂ ನಮಃ ಶಿವ ಎನ್ನಿರೇ ॥ ೬ ॥

ಕಾಯ್ಬೇಕು ಕಾಯ್ಬೇಕು ಮಲ್ಲೀಗಿ ಹೂವಾ ಬೇಕು
ಮಲ್ಲಿಗಿ ಹೂವಾ ಒಯ್ದು ಗೊನಿಬೇಕಲ್ಲಮಪ್ರಭು
ಓಮ ನಮಃ ಶಿವಾ ಎನ್ನಿರೇ । ಶಿವಾಯ ಓಂ ನಮಃ ಶಿವ ಎನ್ನಿರೇ ॥ ೭ ॥

– ಶ್ರೀಮತಿ ಪರಮ್ಮ ಸಿದ್ದಪ್ಪ ಕುಣಕಿ

***

ಬಾಳಿಯ ಬನಕ ಹೋಗ್ಯಾನ ಬಡಿಗ್ಯಾ

ಬಾಳಿಯ ಬನಕ ಹೋಗ್ಯಾನ ಬಡಿಗ್ಯಾ
ಏಳೆಂಟ ಕೊಲ್ಲ್ಯಾ ಸವರ್‍ಯಾನ ಬಡಿಗ್ಯಾ ಜೋ ಜೋ
ಏಳೆಂಟ ಕೊಲ್ಲ್ಯಾ ಸವರ್‍ಯಾನ ಬಡಿಗ್ಯಾ
ಕೆತ್ತಸ್ಲೆ ಮುತ್ತ ಜಡುದಾನ ಬಡಿಗ್ಯಾ ॥ ೧ ॥

ಉತ್ತುತ್ತಿ ಬನುಕಾ ಹೋಗ್ಯಾನ ಬಡಿಗ್ಯಾ
ಹತ್ತೆಂಟು ಕೊಲ್ಲ್ಯಾ ಸವರ್‍ಯಾನ ಬಡಿಗ್ಯಾ ಜೋ ಜೋ
ಹತ್ತೆಂಟು ಕೊಲ್ಲ್ಯಾ ಸವರ್‍ಯಾನ ಬಡಿಗ್ಯಾ
ಕೆತ್ತುಸ್ತೆ ಮುತ್ತಾ ಜಡುದಾನ್ ಬಡಿಗ್ಯಾ ॥ ೨ ॥

ಹನ್ನೊಂದ ಗೇಣಿನ ಎಣ್ಣಿಡ್ಕ ಗಾಣಾಕ
ಜಾವ ಜಾವಕು ಗೇಣ ಜರದಾವ ಜೋ ಜೋ
ಇಪ್ಪತ್ತ ಗೇಣಿನ ತುಪ್ಪಡ್ಕ ಗಾಣಾಕ
ಜಾವ ಜಾವಕ ಗೇಣ ಜರದಾವ ಜೋ ಜೋ ॥ ૩ ॥

– ಶ್ರೀಮತಿ ಭೀಮಮ್ಮ ಸಿದ್ದಲಿಂಗಪ್ಪ

***

ಗುಡಿಯ ನೋಡ

ಗುಡಿಯ ನೋಡ ಗುಡಿಯ ಗುಡಿಯ ಬಾಗಾಲಿ ನೋಡ
ಗುಡಿಯಾಗ ಇರುವ ತಪಜಲೆ ಸುಯ್
ಗುಡಿಯಾಗ ಏ ಇರುವ ತಪಜಲೆ ಅಲ್ಲಮಪ್ರಭು
ಗುಡಿಹೊಯ್ತೆವ್ವ ಬಾಳಿಬನದಾಗ ಸುಯ್ ॥ ೧ ॥

ಮಠವಾ ನೋಡ ಮಠವ ಮಠದ ಬಾಗಲಿ ನೋಡಾ
ಮಠದಾಗ ಇರುವ ತಪಜಲೆ ಸುಯ್
ಮಠದಾಗೆ ಏ ಇರುವ ತಪಜಲೆ ಅಲ್ಲಮಪ್ರಭು
ಮಠಹೊಯ್ತೆವ್ವ ಬಾಳಿ ಬನದಾಗ ಸುಯ್ ॥ ೨ ॥

ನಿಂಬಿಯ ಬನದಾಗ ತುಂಬಿ ಬಂದಾಳ ಗಂಗಾ
ಕಂಬಾವ ಸೋಸಿ ಹರದಾಳ ಸುಯ್
ಬಾಳೀಯ ಬನದಾಗ ಬಾಗಿ ಬಂದಾಳ ಗಂಗಾ
ಜಾಗಿಲ್ಲ ಅಂದು ಜರದಾಲೊ ಸುಯ್ ॥ ૩ ॥

ಅಪ್ಪ ನಿನ್ನ ತೆಪ್ಪ ಮತ್ತ್ಯಾರ ಬಿಡಶ್ಯಾರ
ಹೊನ್ನ ಗೂಗಲ್ಲ ಗವಡರು ಸುಯ್
ಹೊನ್ನ ಗೂಗುಅಲ್ಲ ಗೌಡರು ಸಂಗನಗೌಡ
ಕಾಯ್ ಒಡದ ತೆಪ್ಪ ಬಿಡಶ್ಯಾನ ಸುಯ್ ॥ ೪ ॥

ಅಣ್ಣಾ ನಿನ್ನ ಕಾಲ ಬೆಣ್ಣೆದಕ್ಕಿನ್ನ ಮಿದುವ
ಇನ್ನೆಲ್ಲಿ ಮುಳ್ಳ ತುಳದಿದ್ದೇ ಸುಯ್
ಇನ್ನ ಎಲ್ಲೇ ಮುಳ್ಳ ತುಳದಿದ್ದೆ ಗೂಗಲ್ಲ
ಸಣ್ಣುಸುಗಿನ್ಯಾಗ ಗೂನಿಯ ಜಾಲೆ ಸುಯ್ ॥ ೫ ॥

ಅಪ್ಪ ನಿನ್ನ ತೇರ ಮತ್ತ್ಯಾರ ಎಳಸ್ಯಾರ
ಹೊನ್ನ ಗೂಗಲ್ಲ ಗವಡೆರು ಸುಯ್
ಹೊನ್ನ ಗೂಗು ಅಲ್ಲ ಗೌಡರ್ ಪ್ರಭಣ್ಣ ಗೌಡ
ಚಪ್ಪಳ್ಗಿಟ್ಟು ತೇರ ಎಳಶ್ಯಾನ ಸುಯ್ ॥ ೬ ॥

ಇಲ್ಲಿಗಿ ಹರಹರ ಇಲ್ಲಿಗಿ ಶಿವಶಿವ
ಇಲ್ಲಿಗಿ ಪ್ರಭುಲಿಂಗ್ನ ಪದಮುಂದ ಸುಯ್
ಇಲ್ಲಿಗಿ ಪ್ರಭುಲಿಂಗ್ನ ಪದಮುಂದ್ಹಾಡಿರೆಮ್ಮ
ಇಲ್ಲಿಂದ ಕೈಯ ಮುಗದೇವೊ ಸುಯ್ ॥ ೭ ॥

ಇಲ್ಲಿಂದ ಕೈಯ ಮುಗದೇವಲ್ಲಮಪ್ರಭು
ಅಲ್ಲಿಂದ ವರವ ಕೊಡ ನಮುಗ ಸುಯ್ ॥ ೮ ॥

– ಶ್ರೀಮತಿ ಹುಲಗೆಮ್ಮ ಪ್ರಭುರಾಯ ಹರಿಜನ

***

ಅಲ್ಲಮ ಪ್ರಭುವಿನ ಹಾಡು

ಮಾತನ್ನಾಡೊ ಏ ಮಹಾದೇವಾ
ಮಾಯಿಕೋರಲ್ಲಮ ಸಿದ್ಧ
ಮಾಯಿಕೋರಲ್ಲಮಪ್ರಭು
ಜಾತವಿರಹಿತ ನೀನೇಳೋ ಜಗದ ಜೀವಿಯೋಳು ॥ ೧ ॥

ಮನಸೋತೆನಯ್ಯೋ ನಿನಗ
ಮಾಂಗಲ್ಯವಾಗಿರೊ ಎನಗ ॥ ೨ ॥

ಘನ ಶಿಖಾಮಣಿ ಗಂಭೀರಾ
ಗೌರಿ ಮನೋಹರಾ
ಮರೆಹೊಕ್ಕರೆ ಕಾಯುವಂಥ
ಮನಸೂಜಾರಿ ನಿನ್ನ ಪಂಥ
ಬಿರುದುಳ್ಳ ಬಿಸಿಗಣ್ಣಿನ ಭೀಮ
ಬಿಂಕದ ನಿಸ್ಸೀಮ ॥ ೩ ॥

ಅಗಣಿತ ಗುಣಮಣಿ
ಅಣುರೇಣು ತೃಣಕ ದಣಿ
ಬಾಗಿ ಬಾಗಿ ಇಲ್ಲಿ ನೀ ಬಂದೂ
ಭಕ್ತರೊಳು ನಿಂದು ॥ ೪ ॥

ದೈನಾದಿ ಸೇವೆಯು ಮಾಡಿ
ದಯಾಳ ನಾನೊಂದು ಬೇಡಿ
ನಯನ ತೆರಿದು ನೋಡಯ್ಯಾ
ನಗುತಲ್ಹಿಡಿ ಕೈಯ್ಯ ॥ ೫ ॥

ಗೂಗಲ್ಲ ಗವಿಯೊಳಗಿರುವ
ಗುರುರಾಯ ಅಲ್ಲಮಸಿದ್ಧ
ಗುರುರಾಯ ಅಲ್ಲಮಪ್ರಭು
ನಗರ ಪರ್ವಗೆ ಮೈ ಮರೆತು
ನಂದೀಶನ ಕರ್ತ ॥ ೬ ॥

– ಶ್ರೀ ಈಶ್ವರಯ್ಯಾಸ್ವಾಮಿ ಹಿರೇಮಠ

***

ಗುರುರಾಯ ಅಲ್ಲಮಪ್ರಭು

ಗುರು ರಾಯ ಅಲ್ಲಮ ಪ್ರಭುದೇವಾ
ಶಿವಶರಣರ ಸಂಜೀವ ॥ ಪ ॥

ಶ್ರೀಗಿರಿ ಪೋಲುವ
ಯೋಗ ಮಂಟಪವ
ಗೂಗಲ್ಲ ಗವಿಯೋಳು ಮೆರೆಯುವ
ಶಿವ ಶರಣರ ಸಂಜೀವ ॥ ೧ ॥

ದರುಶನದಿಂದವ ದುರಿತವ ಕಳೆಯುವ
ಪರತರ ಪಾವನ ಪ್ರಭುದೇವ
ಶಿವಶರಣರ ಸಂಜೀವ ॥ ೨ ॥

– ಶ್ರೀ ಚೆನ್ನಯ್ಯ ಸ್ವಾಮಿ ಹಿರೇಮಠ

***

ಶರಣರು

ಗಬ್ಬೂರು ಬೂದಿಬಸವ ಆತ ನಮ್ಮ ಮನೆದೇವ
ಬಂದಿಳಿದಾ ನಮ್ಮ ಜಗಲೆಲ್ಲಿ
ನಮ್ ಕಂದಗ ನೀರು ಮಿಗಿಯಲ್ಲಿ ॥ ೧ ॥

ಗಬ್ಬೂರು ಸಾಂತಮುತ್ತ್ಯಾ ಆತ ನಮ್ಮ ಮನೆಯ ದೇವ
ಬಂದಿಳಿದಾ ನಮ್ಮ ಜಗಲೆಲ್ಲಿ
ನಮ್ಮ ಕಂದಗ ಸೀರಿ ಉಡಸಲ್ಲಿ ॥ ೨ ॥

ಅರ್ಪಣ ಕಟ್ಟೆಯ ತಾತ ಆತ ನಮ್ಮ ಮನೆಯ ದೇವ
ಬಂದಿಳಿದಾ ನಮ್ಮ ಜಗಲೆಲ್ಲಿ
ನಮ್ ಕಂದಗ ಕುಬಸ ಉಡಸಲ್ಲಿ ॥ ೩ ॥

ಗೂಗಲ್ಲ ಪ್ರಭುಸ್ವಾಮಿ ಆತನಮ್ಮ ಮನೆಯ ದೇವ
ಬಂದಿಳಿದಾ ನಮ್ಮ ಜಗಲೆಲ್ಲಿ
ನಮ್ ಕಂದಗ ಕುಂಕಾಮ ಹಚ್ಚಲ್ಲಿ ॥ ೪ ॥

ಕಲಬುರ್ಗಿ ಶರಣಬಸವ ಆತ ನಮ್ಮ ಮನೆಯ ದೇವ
ಬಂದಿಳಿದ ನಮ್ಮ ಜಗಲೆಲ್ಲಿ
ನಮ್ ಕಂದಗ ಹೂವಾ ಮುಡಸಲ್ಲಿ ॥ ೫ ॥

ಹಂಪೀಯ ಈರಪಾಕ್ಷಿ ಆತ ನಮ್ಮ ಮನೆಯ ದೇವ
ಬಂದಿಳಿದ ನಮ್ಮ ಜಗಲೆಲ್ಲಿ
ನಮ ಕಂದಗ ಮಡಿಯ ಥುಂಬಲ್ಲಿ ॥ ೬ ॥

ಶ್ರೀಶೈಲ ಮಲ್ಲಿಕಾರ್ಜುನ ಆತ ನಮ್ಮ ಮನೆಯ ದೇವರ
ಬಂದಿಳಿದ ನಮ್ಮ ಜಗಲೆಲ್ಲಿ
ನಮ ಕಂದಗ ಮಾಂಗಲ್ಯ ಕಟ್ಟಲ್ಲಿ ॥ ೭ ॥

– ಶ್ರೀಮತಿ ಲಿಂಗಮ್ಮ ಗಾಂಜಿಗುಡಿ

***

ಪ್ರಭುದೇವರ ವ್ಯಾಪಕ ನೀನೇ

ಪ್ರಭುದೇವರ ವ್ಯಾಪಕ ನೀನೇ ನೀನೇ ಜಗದಲ್ಲಿ
ನೀನಿಲ್ಲದು ಜಾಗ ನಾ ಎಲ್ಲಿ ಕಂಡೇನು ಎಳ್ಳಿನೋಷ್ಟು ಖಾಲಿ ॥ ೧ ॥

ಬ್ರಹ್ಮಾಂಡ ವಚನ ಮಾಡಿದಿ ಏನೋ ಸ್ವತಃ ನಿನ್ನ ಕೈಲಿ
ಕಾಮನ ಹತ್ತಿ ಅರಳಿಲ್ಲದ ಪಾಯ ಹೊಡಿಸಿದಿ ಅಂತರಲಿ ॥ ೨ ॥

ಗುನ್ಯಾರ ಒಗಲಧಾರನಿಲ್ಲದೆ ತಿರುವಿ ಬಿಟ್ಟಿದಿ ಮೂಲಿ
ನನ್ನಂತರೇಶನ ಬಗಿಸ ಮಾಡಿದಿ ಎಷ್ಟಂತ ವರಣಿಸಲಿ ॥ ೩ ॥

ಹಕ್ಕಿ ಕುಕ್ಕಿದು ಚಂದ್ರ ಮುಗಲದಲ್ಲಿ ಇಟ್ಟಿದಿ ಅಂತರಲಿ
ಗಗನದೊಳು ಗಮನ ಮಾಡುಕೋತ ನಿಂತಿದಿ ಅಂತರಲಿ
ನಿನಗೆ ಗೊತ್ತು ಮ್ಯಾಲ ಕೇಳಿದವರಿಗೆ ನಾ ಏನು ಹೇಳಲಿ ॥ ೪ ॥

ಬೀಜ ಎಲ್ಲಿಂದು ತಂದೀದಿ ಹೇಳೋ ಸ್ವತಃ ನಿನ್ನ ಕೈಲಿ
ಇಗ ನಿಲ್ಲಬೇಕಂತವಾಯಿತ್ತೆಂದು ಕಂಡೇನೋ ಕಣ್ಣಿಲಿ
ಮೋಕ್ಷ ತ್ರಿವೇಷ ಜೈತ್ರ ಮಾಡಿಕೋ ಸೂಕ್ತರ ನೀನಲ್ಲಿ ॥ ೫ ॥

ಮಣ್ಣಿನಲ್ಲಿ ಜೀವರಸನಿಟ್ಟಿದಿ ಕಟ್ಟಿ ಕಲ್ಲಿನಲ್ಲಿ
ಚೌಕನಲ್ಲ ಚಪುಟನಲ್ಲ ಅಲ್ಲಿ ಗುಂಡಗೋಲ
ಹೆಣ್ಣನಲ್ಲ ಗಂಡನಲ್ಲ ಬಣ್ಣ ರೂಪದ್ಹಾಂಗ ॥ ೬ ॥

ಹಾಲ ಸಕ್ಕರಿ ಪಾತ್ರಿ ಪುಷ್ಪ ನಿತ್ಯ ನಿಮಗ್ಹ್ಯಾಂಗೇರಸಲಿ
ಒಂದು ಮನಿಯೊಳು ಕದ್ದ ಕುಳಿತೀರಿ ಕಾಣವಲಿ ಕಣ್ಣೀಲಿ ॥ ೭ ॥

ನಿಮಗಾಗಿ ನಾ ಹುಡುಕತ್ತಿದ್ದೀನಿ ಕಲ್ಲ ಮುಳ್ಳಿನಲ್ಲಿ
ಗುರು ಮೌನೇಶನ ದೃಷ್ಟಿಲಿ ನೋಡಿದರೆ ಕಾಣಸ್ತೀರಿ ಬಲ್ಲಿ
ಗುರು ಮೌನೇಶನ ಭಜನ ಮಾಡುತಿರಿ ಚಿಂತ್ರುಣಿ ತಳದಲ್ಲಿ ॥ ೮ ॥

– ಶ್ರೀಮತಿ ಗಂಗಮ್ಮಾ ಬಾಬುರಾವ, ಗೋರಂಪಳ್ಳಿ

***

ಅಲ್ಲಮರು ಹೆಚ್ಚಾಗಲಿ

ಕಲ್ಯಾಣ ಜಯವಾಗಲಿ ಪ್ರಭುವೇ ಮಂಗಲಮಯವಾಗಲಿ ॥ ಪ ॥

ಸುಜಲಿತ ಸುಫಲಿತ ಸುಜ್ಞಾನ ಸುವೃಷ್ಟಿ
ಚಾತುರ್ಯ ಹೆಚ್ಚಾಗಲಿ ಪ್ರಭುವೇ ಮಂಗಲಮಯವಾಗಲಿ ॥ ೧ ॥

ನಿರ್ಗುಣ ನಿಜಗುಣ ರಜಗುಣ ತಮೋಗುಣ
ಸತ್ತ್ವಗುಣ ಜಯವಾಗಲಿ ಪ್ರಭುವೆ ಮಂಗಲಮಯವಾಗಲಿ ॥ ೨ ॥

ಅಕಾರ ಉಕಾರ ಈಕಾರ ಮಕಾರ
ಓಂಕಾರ ಜಯವಾಗಲಿ ಪ್ರಭುವೆ ಮಂಗಲಮಯವಾಗಲಿ ॥ ೩ ॥

ಚನ್ನಣ್ಣ ಬಸವಣ್ಣ ಅಪ್ಪಣ್ಣ ಅಜಗಣ್ಣ
ಅಲ್ಲಮರು ಹೆಚ್ಚಾಗಲಿ ಪ್ರಭುವೆ ಮಂಗಲಮಯವಾಗಲಿ ॥ ೪ ॥

ನೀಲಮ್ಮ ನಿಂಬೆಮ್ಮ ಅಕ್ಕಮ್ಮ ಲಕ್ಕಮ್ಮ
ಶರಣೇಯರು ನಾವಾಗಲಿ ಪ್ರಭುವೇ ಮಂಗಲಮಯವಾಗಲಿ ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ಪ್ರಭುದೇವ

ಜಯಾ ಜಯ ಶುಭ । ಮಹಾ । ಭವವಿನಾಶನ
ಶ್ರೀಮದ ಸಂಗಗೆ । ನಾನು । ನಯದಿ ನಮಿಸುವೆ ॥ ೧ ॥

ಕೋಲುಪದಗಳ । ಸಿಂಗರ । ಕೀಲ ಕೇಳಲು
ಹಾಲುಸಕ್ಕರೆ । ರುಚಿಯ । ಹಾಗೆ ಕೋಲೆನ್ನಿ ॥ ೨ ॥

ಕೋಲುಕೋಲೆನ್ನಿ । ಹುವ್ವಿನ ಕೋಲುಕೋಲೆನ್ನಿ
ಬಾಲೆರೆಲ್ಲರು ಚಲುವ ಲೀಲೆಯಿಂದಲಿ ॥ ೩ ॥

ಚಲು ಕೋಣನೂರ । ಪುರದ ನಿಲಯ ಸಂಗನ
ನಲಿವ ಪಾದಕೆ ನಮಿಸಿ ಗೆಲುವ ಪಡೆವೆನು ॥ ೪ ॥

ಮದವಿನಾಶನ । ಸಂಗನ । ಪದಪಯೋಜಕೆ
ಹದುಳದಿಂದಲಿ । ನಾನು । ಮುದದಿ ನಮಿಸುವೆ ॥ ೫ ॥

ಇಂದುಶೇಖರ । ಬಹಳ । ಸುಂದ್ರ ಸಂಗನ
ದ್ವಂದ್ವಪಾದಕೆ । ನಾನು । ಹೊಂದಿನಮಿಸುವೆ ॥ ೬ ॥

ಸುರನಿಕಾಯವ । ಸರಿಸಿ । ಉರಿವ ವಿಷವನು
ಧರಿಸಿದಯ್ಯನ । ಚರಣ । ಕೆರಗಿ ನಮಿಸುವೆ ॥ ೭ ॥

ಮೂರು ಪುರವನು । ಸುಟ್ಟ । ಸೂರ ಸಂಗನ
ಪೂರ ಮನದೊಳು । ಭಜಿಸಿ । ಸಾರ ಪಡೆವೆನು ॥ ೮ ॥

ಮಾಯೆಗನುಪಮ ಪ್ರಭೂ ರಾಯ ಮದನನ
ಘಾಯನೋವಿಗೆ ಹಾಕಿ ಮಾಯವಾದನು ॥ ೯ ॥

ಸರ್ವಜನಗಳು । ತಮ್ಮ । ಗರ್ವವಳಿವುತ
ಪೂರ್ವಕಥೆಯನು । ಪ್ರೀತಿ । ಪರ್ವಿ ಕೇಳ್ವುದು ॥ ೧೦ ॥

ಒಂದೆ ಭಾವದಿ । ನಮ್ಮ । ಸುಂದರಲ್ಲಮ
ಬಂದ ಕಾರಣ । ಬಹಳ । ಚಂದ ಕೇಳ್ವುದು ॥ ೧೧ ॥

ಒಂದು ದಿನದೊಳು । ಶಿವನ । ಮುಂದೆ ಪ್ರಮಥರು
ಹೊಂದಿ ಕುಳಿತಿರೆ । ಗಿರಿಜೆ । ಎಂದಳೊಂದನು ॥ ೧೨ ॥

ಶಿವನೆ ನಿಮ್ಮಯ । ಗಣರು । ಭವಕೆ ಬಾರರೊ
ಕವಿದ ನಿತ್ಯವೊ । ಇವರ । ವಿವರ ಪೇಳಿರಿ ॥ ೧೩ ॥

ನೀನು ಕೇಳಿದ । ಪ್ರಶ್ನೆ । ಮಾನವಾದುದು
ಏನ ಹೇಳುವೆ । ಇವರ್ಗೆ । ನೂನವಿಲ್ಲವು ॥ ೧೪ ॥

ಇಳೆಗೆ ಬರುತಲಿ । ತಾವು । ಗಳಿಗೆ ಸಿಲ್ಕದೆ
ಮುಳಿದು ಬಪ್ಪರೆ । ಇವರ । ತಿಳಿದು ಪೇಳಿರಿ ॥ ೧೫ ॥

ಗಿರಿಜೆಯಾಡಿದ । ಮಾತ । ಹರನು ಕೇಳುತ
ಶರಣ ಮಾಯೆಗೆ । ಸಿಲುಕಿ । ಕೊರಗಿ ಪೋಪನೆ ॥ ೧೬ ॥

ಈಗ ಮರ್ತ್ಯದಿ । ಹುಟ್ಟಿ । ರಾಗಿಯಾಗದೆ
ಪೋಗುತಿರ್ಪರ । ಎನಗೆ । ಬೇಗ ತೋರಿರಿ ॥ ೧೭ ॥

ಚಾರು ಸುಜ್ಞಾನಿ । ನಿರಹಂ । ಕಾರರಿರ್ವರು
ಧಾರುಣಿಯೊಳಗೆ । ಸುಖಿಕು । ಮಾರಕಾಮ್ಯದಿ ॥ ೧೮ ॥

ತಪವ ಮಾಡಲು । ನನ್ನ । ಸಫಲರೂಪವೆ
ಚಪಲ ಚಲ್ವಿನ । ಕುವರ । ತಪವ ಮೆಚ್ಚುತ ॥ ೧೯ ॥

ಬಂದು ಇರ್ವರ । ಮುಂದೆ । ಸುಂದರಲ್ಲಮ
ಕಂದನಾಗುತ ಇರ್ಪ । ನೆಂದು । ಪೇಳಲು ॥ ೨೦ ॥

ಅವನ ಬಲ್ಲೆನು । ನಾನು । ಭುವನ ರಚನೆಯ
ಸವರಿ ಬರ್ಪನು । ಅವನ । ಸವಸಿ ನೋಡುವೆ ॥ ೨೧ ॥

ಎಂದು ಪಾರ್ವತಿ । ಗರ್ವ। ದಿಂದ ಆಡಲು
ಇಂದುಶೇಖರ । ಗಿರಿಜೆ । ಯಂದವಾಲಿಸಿ ॥ ೨೨ ॥

ನೀನು ಆಡಿದ । ಭಾಷೆ । ಹೀನಗಳೆಯದೆ
ಕೂನ ಮಾಳ್ಪುದು । ಎಂದು । ಮಾನವೇರಿಸಿ ॥ ೨೩ ॥

ನಾನು ಆಡಿದ । ಮಾತು । ಕೂನದಂದದಿ
ಹೀನಗಳೆವುತ ಅವನ । ಮಾನ । ಕೊಳ್ವೆನು ॥ ೨೪ ॥

ಮಾತನಾಡಿದ ತೆರನ ರೀತಿ ಮಾಡಲು
ಮಾತು ಬರ್ಪುದು ಎನುತ ಈತನಾಡಿದ ॥ ೨೫ ॥

ಪಂತ ಬಲಿವುತ ಶಿವನ ಕಾಂತೆ ತಾಮಸ
ವಾಂತರೂಪನು ಮುಂದೆ ನಿಂತು ತೋರಲು ॥ ೨೬ ॥

ಕೇಳು ಮರ್ತ್ಯದಿ ನೀನು ಮೇಳವಾಗುತ
ಜಾಳು ಮಾಡುವ ಪ್ರಭುವ ಸೋಲಿಸೆಂದೆನೆ ॥ ೨೭ ॥

ನೀವು ಪೇಳಿದ ತೆರದಿ ದೇವನಲ್ಲಮನ
ಕಾವ ಬಲಿಯೊಳು ಹಾಕಿ ದೇವಬರ್ಪೆನು ॥ ೨೮ ॥

ಅಲ್ಲಮಯ್ಯನ ನಾನು ತಲ್ಲಗೊಳಿಸುತ
ಬಲ್ಲೆ ತನುವನು ಎನಗೆ ಇಲ್ಲವೆನಿಸುವೆ ॥ ೨೯ ॥

ಇದುವೆ ನಿಶ್ಚಯ ಎಂದು ಮದನ ಹರನಿಗೆ
ಒದವಿ ನಮಿಸುತ ತಾನು ಮುದದಿ ಕೇಳಲು ॥ ೩೦ ॥

ಕೇಳು ಅಲ್ಲಮನ ನೀನು ಜಾಲಮಾಡುತ
ಬೀಳುಗೈವುತ ಭಾಷೆ ಮೇಲು ಮಾಡೆನೆ ॥ ೩೧ ॥

ಇತ್ತ ಬನವಸಿ ಪುರಕೆ ಕರ್ತ ಮಮಕರ
ಸತ್ಯ ಕ್ರಿಯೆಗಳ ಪೇಳೆ ಚಿತ್ತಕರಿದೆನೆ ॥ ೩೨ ॥

ಕುಸುಮ ಬಾಣನ ರತಿಯೊಳೆಸೆವ ಶಶಿಮುಖಿ
ಕುಸಲ ಮೋಹಿನಿ ರಾಣಿ ಒಸೆದು ಇರ್ಪಳು ॥ ೩೩ ॥

ಇವರು ಇರ್ವರು ತಮಗೆ ಕುವರಿಯೆನಿಸೆಯು
ಶಿವನ ರಾಣಿಯ ಕೂರ್ತು ಜವದಿ ಭಜಿಸಲು ॥ ೩೪ ॥

ಇರ್ವರಿಚ್ಛೆಗೆ ತಮದ ಪೂರ್ವರೂಪವು
ಸರ್ವಲಕ್ಷಣ ಗಳಿಗೆ ಪರ್ವಜನಿಸಲು ॥ ೩೫ ॥

ದೇವ ದಾನವ ಮನುಜ ಭಾವಪಶುಗಳ
ದಾವಣಿಗಳಲಿ ಕಟ್ಟಿ ಕಾಮರೂಪವು ॥ ೩೬ ॥

ರತಿಯ ರೂಪವ ಜರೆವ ಅತುಳ ಮಾಯಾ
ಸತಿಯು ಜನಿಸಲು ಯೋಗಿ ವ್ರತವ ತಪ್ಪಲು ॥ ೩೭ ॥

ಹುಟ್ಟಲಾಕ್ಷಣ ಅರಸು ಪಟ್ಟದಂಗನೆ
ನಿಟ್ಟಿಸುತ ಸುಖ ಹರುಷ ಹುಟ್ಟಿಯೆತ್ತುತ ॥ ೩೮ ॥

ಗುರುಗಳಾಕ್ಷಣ ಕರೆದು ತರಿಸಿ ತೋರಲು
ಕುರುಹನೀಕ್ಷಿಸಿ ಈಕೆ ಪರಿಯು ಬೇರೆನೆ ॥ ೩೯ ॥

ಇವಳ ಗಂಡರು ಅರಸು ಕುವರರಲ್ಲವು
ಇವನೆ ಗಂಡನು ಎಂದು ವಿವರ ಪೇಳಲು ॥ ೪೦ ॥

ತಪವ ಮಾಳ್ಪರ ಬುದ್ಧಿ ಚಪಲವಾಗಲು
ತಪಸಿ ದೂರ್ವಸ ಮುನಿಯು ಜಪದ ಹಸ್ತದಿ ॥ ೪೧ ॥

ಬಂದು ಮುನಿಗಳು ಭ್ರಾಂತ ದಿಂದಲಿರ್ದರ
ಛಂದದೀಕ್ಷಿಸಿ ಭ್ರಮೆಯ ಹೊಂದಲಾಗದು ॥ ೪೨ ॥

ಶಿವೆಯು ಶಿವನಿಗೆ ಆದ ಹವಣವೆಲ್ಲವ
ವಿವರಿಸ್ಯಾಗಳೆ ಭ್ರಮೆಯ ಸವರಿ ಪೋದನು. ॥ ೪೩ ॥

ಕನಕ ವರ್ಣವ ಪಳಿವ ತನುವಿನ ಬಲೆಯು
ದಿನಕೆ ಹೆಚ್ಚುತ ಮಾಯೆ ಕೊನರಿ ಬೆಳೆಯಲು ॥ ೪೪ ॥

ಮಾಯಿದೇವಿಗೆ ಬಹಳ ಪ್ರಾಯವೇರಲು
ಕಾಯವೃದ್ಧಿಯು ಮೀರಿ ದಾಯ ತೋರಲು ॥ ೪೫ ॥

ಅರಸು ಮಮಕರ ಮಗಳ ಪರಿಯನೀಕ್ಷಿಸಿ
ಪೊರೆವ ವಧುಗಳ ಬಹಳ ನೆರವಿಕೊಟ್ಟನು ॥ ೪೬ ॥

ರತ್ನ ಖಚಿತದ । ಭಿತ್ತಿ ನೂತ್ನ ಮನೆಯೊಳು
ಜತ್ನವೆನುತಲಿ ಇಟ್ಟು ಪತ್ನಿಗೊರೆದನು ॥ ೪೭ ॥

ಬಳಿಯಲಿರ್ದಾ ನಾರಿ ಕುಲಕೆ ಮಮಕರ
ತಿಳಿಯ ಪೇಳಿದ ಮಗಳ ಕೆಲದೊಳಿರುತಲಿ ॥ ೪೮ ॥

ಮಗಳು ಪೇಳಿದ ಆಜ್ಞೆ ತಗುಳದಿರ್ಪುದು
ಸುಗುಣ ಸ್ತ್ರೀಯರೆ ನೀವು ಬಗೆಯ ಕೇಳಿರಿ ॥ ೪೯ ॥

ಎನಲು ಸ್ತ್ರೀಯರು ಬಹಳ ಘನವಿಲಾಸದಿ
ಮನದಿ ಮಾಯೆಗೆ ತಮ್ಮ ತನುವ ಕೊಟ್ಟರೆ ॥ ೫೦ ॥

ನಾರಿ ಮಾಯೆಯ ಚೆಲ್ವ ವಾರಿದುರುಬಿಗೆ
ಹಾರ ಕುಸುಮವ ಮುಡಿಸಿ ಪೂರ ಮಾಳ್ಪರು ॥ ೫೧ ॥

ಮುಡಿದು ಗಂಟನು ಬಿಚ್ಚಿ ಬಡಿದು ಜಾಡಿಸಿ
ಬಿಡದೆ ಆರಿಸಿ ಹೆಳಲ ತೊಡರುತಿರ್ಪರು ॥ ೫೨ ॥

ಲಲಿತ ಕುಚದೊಳು ಮೇಲೆ ನಲಿವ ಮುತ್ತಿನ
ಚೆಲುವ ಹಾರವ ಧರಿಸಿ ಗೆಲವ ತೋರ್ಪರು ॥ ೫೩ ॥

ಕಾಲಸರಪಳಿ ಗೆಜ್ಜೆ ಮೇಲು ವಸ್ತ್ರವ
ಬಾಲೆಗಿಟ್ಟರು ಬಹಳ ಲೀಲೆಯಿಂದಲಿ ॥ ೫೪ ॥

ಹತ್ತು ಬೆರಳಿಗೆ ರತ್ನ ತೆತ್ತಿದುಂಗುರ
ಮುತ್ತಿನ್ಯೆದೆಳೆ ಕಟಣಿ ಹತ್ತೆಧರಿಸಲು ॥ ೫೫ ॥

ರತುನಗೆಲಸದ ಡಾಬ ಸತಿಯ ನಡುವಿಗೆ
ಜತನ ಮಾಡುತ ಸರ್ವ ಸತಿಯರಿದ್ದರು ॥ ೫೬ ॥

ದೋರ ಹರಡಿಯು ಚೆಲುವ ತೋರ ಮುತ್ತಿನ
ಹಾರವೆಲ್ಲವ ಧರಿಸಿ ಪೂರವಾಂತರು ॥ ೫೭ ॥

ಪಟ್ಟ ಮುತ್ತನು ಕೊರಳ್ಗೆ ಕಟ್ಟಿ ಮುತ್ತಿನ
ಬಟ್ಟ ಫಣಿಯೊಳು ಹರಿದು ದಿಟ್ಟವೆಂದವು ॥ ೫೮ ॥

ಮೀನ ಬಾವಲಿ ಮೆರೆವ ತಾನ ಪುಲ್ಲಿಸ
ದಾನ ವಸ್ತ್ರವ ತೊಡಿಸಿ ಮಾನಗೆಯ್ದರು ॥ ೫೯ ॥

ನೂತನೊಡವೆಯ ಬಹಳ ಪ್ರೀತಿಯಿಂದಲಿ
ಜಾತ ಮುತ್ತಿನ ನತ್ತ ಓತು ಧರಿಸಲು ॥ ೬೦ ॥

ಪಾದದಂಗುಲಿ ಚೆಲುವು ಆದ ಮುದ್ರೆಯ
ಸಾದಿಸಿಡುತಲಿ ಬಹಳ ಮೋದವಡಿಸಲು ॥ ೬೧ ॥

ಎಲ್ಲವೊಡವೆಯ ತೊಡಿಸಿ ಭುಲ್ಲವಣಿಯೊಳು
ಉಳ್ಳ ಸ್ತ್ರೀಯರು ನಿನಗೆ ಇಲ್ಲ ಸಮವೆನೆ ॥ ೬೨ ॥

ಮದನನೊರಿಸುವ ನೀನು ಚದುರ ದೇವಿಯು
ಪದಕೆ ಬೀಳುತ ನುಡಿಯೆ ಸುದತಿ ಜನಗಳು ॥ ೬೩ ॥

ರನ್ನ ಗನ್ನಡಿ ಪಿಡಿದು ನಿನ್ನ ಚೆಲುವಿಕಿ
ಮುನ್ನ ನೋಡ್ಯೆ ಎನುತ ಕನ್ನೆ ತೋರ್ದಳು ॥ ೬೪ ॥

ತಂದೆತಾಯ್ಗಳು ಬೇಗ ಬಂದು ನೋಡಲು
ಸುಂದರತ್ವಕೆ ಬೆರಗಿ ಹೊಂದಿ ನಿಂತಿರೆ ॥ ೬೫ ॥

ಮಗಳಿಗೀಗಲು ಯಾವ ಜಗದ ನಾಯಕ
ಸೊಗಸುತಿರ್ಪನು ಎಂದು ಮಿಗಿಲು ನುಡಿಯಲು ॥ ೬೬ ॥

ಗುರು ಅಹಂಕರ ಪೇಳ್ದ ತೆರನ ಸಖಿಯರು
ಸ್ಮರಣೆ ಮಾಡುತ ಅರಸ ಗುರುಹುತಿದ್ದರು ॥ ೬೭ ॥

ಮಧುಕನಾಥನು ಚೆಲ್ವ ಚದುರ ಗಂಡನು
ಸುದತಿಗೆನುತಲಿ ಗುರುವು ಮುದದಿ ಪೇಳ್ದನು ॥ ೬೮ ॥

ಎಂದು ಸ್ತ್ರೀಯರು ಆಗ ನಿಂದು ಉಸುರಲು
ಅಂದು ಮಮಕರ ಭೂಪ ಎಂದ ಮಗಳಿಗೆ ॥ ೬೯ ॥

ನಿನಗೆ ಮರ್ತ್ಯದ ರಾಜ ತನುಜ ಗಂಡನು
ಮನಕೆ ಬರದು ನಿನ್ನ ಸನುಮತದ ನುಡಿ ॥ ೭೦ ॥

ಎನಲು ಕೇಳುತ ಮಾಯೆ ಜನಪಗೆಂದಳು
ಜನರು ಗಂಡರು ಎನಗೆ ಸನುಮತಿಲ್ಲವು ॥ ೭೧ ॥

ಮಧುಕನಾಥನು ಎನ್ನ ಮುದದ ಪ್ರೀಯನು
ಸದರವಲ್ಲವು ಎನಗೆ ಚದುರ ಜನಗಳು ॥ ೭೨ ॥

ತನ್ನ ಮನಸಿನ ವ್ರತವ ಭಿನ್ನವಿಲ್ಲದೆ
ಚನ್ನರಾಯಗೆ ಪೇಳೆ ತನ್ನ ಹಿತವನು ॥ ೭೩ ॥

ಅರಸುಮಮಕರ ಮಗಳ ಪರಿಯ ಕೇಳುತ
ಹರುಷವಾಗುತೆ ವ್ರತವ ಧರಿಸಿ ಪೋಹನು ॥ ೭೪ ॥

ಪೂಜೆದ್ರವ್ಯವ ತರಿಸಿ ಚಾಜದಿಂದಲಿ
ಮಾಜದೆ ಭಜಿಸುವ ದೇವಿ ಓಜೆಯಿಂದಲಿ ॥ ೭೫ ॥

ಸಕಲ ಸ್ತ್ರೀಯರು ಬಹಳ ಪ್ರಕಟದಿಂದಲಿ
ಮುಕುತಿಯೂಳಿಗ ಗೈವು ತಖಿಳದಿರುತಿರೆ ॥ ೭೬ ॥

ಮಧುನಾಥನ ಪೂಜೆ ವಿಧಿಗೆಯೆನುತಲಿ
ಮುದದೊಳಂದಳ ತರಿಸಿ ಚದುರೆ ಕುಳಿತಳು ॥ ೭೭ ॥

ಎಲ್ಲ ಸ್ತ್ರೀಯರು ಛತ್ರ ಝಲ್ಲಿ ಚಾಮರ
ಘಲ್ಲ ಘಲೆಂಬ ಗೆಜ್ಜೆ ಸೊಲ್ಲು ಏಳಲು ॥ ೭೮ ॥

ಹಲವು ಊಳಿಗ ಕೊಳುತ ಲಲನೆ ಮಾಯೆಯು
ಕಳೆದು ಪಾಲಿಕೆ ಹತ್ತಿ ಒಲಿದು ಬಂದಳು ॥ ೭೯ ॥

ಬಂದು ಗುಡಿಯನು ಹೊಕ್ಕು ನಿಂದು ಕಂಡಳು
ಇಂದುಧಾರಿಯ ಚೆಲ್ವ ಸುಂದರಾಂಗನ ॥ ೮೦ ॥

ಕಂಡು ಮನದೊಳು ಈತ ಗಂಡನೆನುತಲಿ
ತಂಡತಂಡದಿ ನಮಿಸಿ ಖಂಡತೇಜಗೆ ॥ ೮೧ ॥

ಅಷ್ಟವಿಧದೊಳು ಪೂಜೆ ಸ್ಪಷ್ಟಗೈವುತೆ
ದೃಷ್ಟಿಯಗಲದೆ ನೋಡಿ ನಿಷ್ಠಳಾದಳು ॥ ೮೨ ॥

ಮನಸು ಶಿವನೊಳು ಕೂಡಿ ತನಗೆ ರಚನೆಯು
ನೆನಹು ತೋರದೆ ಮಹಾ ಘನದೊಳಿರ್ದಳು ॥ ೮೩ ॥

ಶರಿರವೆಲ್ಲವ ತಾನು ಮರೆದು ನಿಂತಿರೆ
ಅರಿವು ಬೆರೆಯಲು ಕಣ್ಣು ತೆರೆದು ಕುಳಿತಳು ॥ ೮೪ ॥

ದೇವನಿದಿರಲಿ ನಾನು ಸೇವೆ ಮಾಳ್ಪೆನು
ಭಾವೆಯೆನುತಲಿ ಸೇವೆ ಆಗ ಮಾಡಲು ॥ ೮೫ ॥

ತಾಳ ಮದ್ದಳೆ ಲೆಕ್ಕ ಹೇಳಲಿಕರಿದು
ಮೇಳವಾದುದು ತಾನು ಲೀಲೆಯಿಂದಲಿ ॥ ೮೬ ॥

ಭರತಕಟ್ಟಳೆ ಶಾಸ್ತ್ರ ವರಿತು ನಟಿಸುವ
ಪರಿಯರಿಯಲಿಕೆ ಕವಿಗೆ ಅರಿದು ಭಾವಿಸೆ ॥ ೮೭ ॥

ನೋಡಿ ಸುಜನರು ಭ್ರಾಂತಿ ಗೂಡಿ ಮೂರ್ಛೆಯ
ಬಾಡಿ ಬಿದ್ದಿರೆ ನರರ ಪಾಡ ಏನೆಂಬೆ ॥ ೮೮ ॥

ಭ್ರಾಂತಿಗೊಳ್ಳುತೆ ಶಿವಗೆ ಸಂತಸಂಬರೆ
ಕಾಂತೆ ನಟಿಸಲು ಮಧುಕ ಶಾಂತನಾಥನು ॥ ೮೯ ॥

ಮೆಚ್ಚಿ ಶೇಷವ ತಾನು ನಿಚ್ಚ ಭಜಿಸುವ
ಅಚ್ಚ ಭಕ್ತರ ಕೂಡಿ ಮುಚ್ಚಿ ಸೇವಿಸೆ ॥ ೯೦ ॥

ಶಿವನ ಶೇಷವ ತಾನು ಜವದೊಳಾಗಲೆ
ಶಿವನ ಪಾದಕೆ ನಮಿಸಿ ಧವಳಮತಿಯಲಿ ॥ ೯೧ ॥

ತೆಗೆದುಕೊಳ್ಳುತ ತಾನು ಸೊಗಸಿಲಿರುತಿರೆ
ಮಿಗಿಲು ರೂಪವ ಧರಿಸಿ ಸುಗುಣನಲ್ಲಮ ॥ ೯೨ ॥

ಬೇಗ ಮದ್ದಳೆ ಹೊತ್ತು ಸಾಗಿ ಬರುತಲಿ
ಭೋಗಿ ಕಟಕನ ಚಲುವ ಬಾಗಿ ಈಕ್ಷಿಸಿ ॥ ೯೩ ॥

ಹೊರಗೆ ನಿಲ್ಲುತೆ ಒಳಗೆ ಹರನ ಮುಂದಕೆ
ಭರತ ಕಟ್ಟಳ್ಗೆ ಕುಣಿವ ಪರಿಯನೀಕ್ಷಿಸಿ ॥ ೯೪ ॥

ಚೆಲುವ ಮದ್ದಳೆ ಕಟ್ಟಿ ಗೆಲುವನೆಲ್ಲವ
ಬಲಿದ ಹಸ್ತಕೆ ಬಹಳ ಚದುರಿನಿಂದಲಿ ॥ ೯೫ ॥

ಝಣಣ ಝಣಝಣ । ಝಣರು । ಚಣಿರು ಚಣಿಚಣಿ
ಗಣಕು ಫಂಕಿಲಿ ಫಮಕು ತಣಿತ ತಣಿತಣ ॥ ೯೬ ॥

ತರಿಕು ತಕದಿಕು ಧಿಮಿಕು ಜರಕು ದಿಂಧಿಮ
ತರಿತಳಂತಕ ಜಕಕು ತರಕು ಧೋಂ ಧೋ ॥ ೯೭ ॥

ಝುಕ್ಕು ಝುಕ್ಕರು ತೋಂದಿ ಮಿಕ್ಕು ಝುಂತೃಗೆ
ಢಕ್ಕು ಡಂಢಣ ಝುಣಕು ದಕ್ಕು ಝುಂತೃಣ ॥ ೯೮ ॥

ಝುಂತೃಗೆ ಕುತಕು ಝುಣಂ ಫಂಕು ಫಂಕುಣ
ಯಂತ್ರ ಯಂತ್ರಣ ತೃಡಂ ದೃಡಂ ತೃಡತೃಡ ॥ ೯೯ ॥

ಘುಡುಂ ಘುಡುಘುಡು ಧುಡುಂ ಧುಡುಂ ಧುಡುಧುಡು
ಡಕ್ಕು ಡಂಢಣ ಝುಣಂ ಝುಣತು ಝುಂಝುಣ ॥ ೧೦೦ ॥

ಎನುತಲಲ್ಲಮ ತನ್ನ ಕೊನೆಯ ಬೆರಳಿನ
ಘನಚಮತ್ಕೃತಿ ಚಳಕ ಕನುವನಾಲಿಸಿ ॥ ೧೦೧ ॥

ಭರತ ಕಟ್ಟಳೆ ತಾಳ ಕೊರತೆದೋರದೆ
ನೆರೆ ಚಢಾಳಿಸಿ ಹೊಡಿಯೆ ಸುರನರೋರಗ ॥ ೧೦೨ ॥

ಥರಥರೆಲ್ಲರು ಭೋರ್ಗ ರೆಯುವ ನಾದಕೆ
ಮರೆತು ನಿಂತರು ತಮ್ಮ ಶರಿರ ಹಂಗನು ॥ ೧೦೩ ॥

ನಾರಿ ಮಾಯೆಯು ತಾನು ಮೀರಿ ನಟಿಸಲು
ಭಾರಿ ಮದ್ದಳೆ ನಾಡ ತೋರದಡಗಲು ॥ ೧೦೪ ॥

ಎಲ್ಲರಾಕ್ಷಣ ಮದ್ದಳೆ ಸೊಲ್ಲ ಕೇಳುತ
ನಿಲ್ಲಲಾರದೆ ತಾವು ತಲ್ಲಣಿಸುತಿರೆ ॥ ೧೦೫ ॥

ನಲ್ಲೆ ಮಾಯೆಯ ಎದೆಯು ಝಲ್ಲ ಝಲ್ಲೆನೆ
ಬಲ್ಲ ಸ್ತ್ರೀಯರು ಕರೆಸಿ ಅಲ್ಲಿಗಾಗಳೆ ॥ ೧೦೬ ॥

ಕರೆಸಿ ಈತನ ಕರದ ಸ್ಫುರದ ಚೆಲುವಿಕಿ
ಪರಿಯ ಕಾಣುತ ತಾವು ಮರೆತು ನಿಂತರು ॥ ೧೦೭ ॥

ಸಕಲರೆಲ್ಲರು ಇವನ ಮುಖವ ಕಾಣುತ
ಸಕುತಿಗಳೆವುತ ಚಕಿತ ಪ್ರಕೃತಿಯಾದರು ॥ ೧೦೮ ॥

ಮಾನಿನೀಮಣಿ ಇವನು ಬಾನುವಂದದಿ
ಗಾನಕಾರನ ಉದಯ ಏನು ಕೇಳಿರಿ ॥ ೧೦೯ ॥

ಎನಲು ಸ್ತ್ರೀಯರು ಇವನ ಘನವ ನೋಡುತ
ಜನನದಾವುದು ನಿಮ್ಮ ಮನೆಯದಾವುದು ॥ ೧೧೦ ॥

ಎಂದು ಕೇಳಲು ಎಮಗೆ ತಂದೆಯಿಲ್ಲವು
ಮಂದಿರಿಲ್ಲವು ಜಾಗ ನಿಂದುದೆಮ್ಮದು ॥ ೧೧೧ ॥

ಕೇಳಿರೆನ್ನಯ ಹೆಸರು ಮೇಲೆ ಅಲ್ಲಮ
ತಾಳಿಕೊಂಡಿರೆ ಇರ್ಪೆ ವೇಳು ಎಂದನು ॥ ೧೧೨ ॥

ಆಡಲಾಕ್ಷಣ ದೇವಿ ಬೇಡಿಕೊಂಡಳು
ನೋಡಿ ಎನ್ನಯ ಬಳಿಯೆ ಕೂಡಿಯಿರ್ಪುದು ॥ ೧೧೩ ॥

ಕುಶಲದಿಂದಲಿ ನೀನು ಬೆಸನವಾಗುತ
ಒಸೆದುಯಿರುತಿರೆ ಎನಗೆ ಹಸನವಪ್ಪುದು ॥ ೧೧೪ ॥

ಪರಿಪರಿಂದಲಿ ಬಹಳ ಹರುಷಬಡಿಸುತ
ಇರಿಸಿಕೊಂಡಳು ತನ್ನ ನೆರೆಯೊಳಾತನ ॥ ೧೧೫ ॥

ಒಂದು ಪದವನು ಹರನ ಮುಂದೆ ಹಾಡುವೆ
ಚಂದ ಮದ್ದಳೆ ನುಡಿಸು ಎಂದು ಹೇಳಲು ॥ ೧೧೬ ॥

ನೀನು ಹಾಡಲು ಮದ್ದಳೆ ನಾನು ನುಡಿಸುವೆ
ಗಾನಯೆತ್ತೆನೆ ಬಹು ನವೀನ ಸ್ವರದಲಿ ॥ ೧೧೭ ॥

ಇಂಪು ತಂಪಿನ ಬಹಳ ಸೊಂಪು ಬೀರುವ
ಝಂಪೆ ತಾಳದಿ ಮಧುರ ತಂಪು ಸ್ವರದಲಿ ॥ ೧೧೮ ॥

ಸ್ವರವನೆತ್ತಲು ಜೇನು ಸುರಿವ ತೆರದೊಳು
ಹರನು ಮುಂದಿರೆ ಬಹಳ ಪರಿಯ ಪಾಡಲು ॥ ೧೧೯ ॥

ಕಾಲ ಸಪ್ಪಳ ಚೆಲುವ ತಾಳಮದ್ದಳೆ
ಮೇಲುವಾದ್ಯವು ಲಯವು ಬೀಲದಂದದಿ ॥ ೧೨೦ ॥

ಇಂತು ಪರಿಯಲಿ ಬಹಳ ಸಂತವಿಡುತಲಿ
ಶಾಂತನಾಥನ ಮುಂದೆ ಕಾಂತೆಯಾಡಲು ॥ ೧೨೧ ॥

ಮದ್ದಳೆ ಭರದಿ ಹೊಡೆವ ಸುದ್ದಿಗಾಗಳೆ
ಬುದ್ಧಿ ಮಸಳಿಸಿ ಮಾಯೆ ಇರ್ದಳಲ್ಲಿಯೆ ॥ ೧೨೨ ॥

ಆಡಲಾರದೆ ಪದವ ಹಾಡಲಾರದೆ
ನೋಡಲಾರದೆ ಮುಖವು ಬಾಡಿ ಕಂಪಿಸೆ ॥ ೧೨೩ ॥

ಮದನ ಬಾಣಕೆ ಮಾಯೆ ಚೆದುರೆ ಬೀಳುಲು
ಸುದತಿ ಸಮುಹವು ಮನೆಗೆ ಬೆದರಿ ಕರೆತೆರೆ ॥ ೧೨೪ ॥

ಬಹಳ ಪರಿಯಲಿ ಮಾಯ ದೇಹ ಕಳೆವುತ
ಸಹಿಸುತಿದ್ದರು ತಾವು ಮಹಮಹತ್ವದಿ ॥ ೧೨೫ ॥

ಅಲ್ಲಮಯ್ಯನ ಮನಸು ನಿಲ್ಲುವಂದದಿ
ಬಲ್ಲ ಸ್ತ್ರೀಯರು ನಯದ ಸೊಲ್ಲಿನಿಂದಲಿ ॥ ೧೨೬ ॥

ಉಪಚರಿಸುತಲಿ ಬೇರೆ ಚಪಲ ಮನೆಯೊಳು
ಸಫಲದಿಂದಲಿ ಇಟ್ಟು ತಪದೊಳಿದ್ದರು ॥ ೧೨೭ ॥

ಮಾಯಿದೇವಿಯು ಮದನ ಘಾಯ ನೋವಿಗೆ
ಬಾಯಿ ಬಿಡುವಳ ಕಂಡು ಪಾಯವೇನೆಲೆ ॥ ೧೨೮ ॥

ಅಲ್ಲಮಯ್ಯನು ಎನಗೆ ನಲ್ಲನಾದೊಡೆ
ನಿಲ್ಲುತಿರ್ಪುದು ಪ್ರಾಣ ಇಲ್ಲ ಸಾವೆನು ॥ ೧೨೯ ॥

ಎಂದುದಾಲಿಸಿ ಅರಸು ತಂದೆ ತಾಯ್ಗಳು
ಚಂದವೆಲ್ಲವ ಕೇಳಿ ಮುಂದೆ ಮುನಿವರು ॥ ೧೩೦ ॥

ಎನಲು ಮಾಯೆಯು ಎನ್ನ ತನುವು ನಿಲ್ಲದು
ಎನಗೆ ಗೆಲುವಿನ ಬಹಳ ಅನುವ ಪೇಳಿರಿ ॥ ೧೩೧ ॥

ಈಕೆಯಾಡಿದ ನುಡಿಯ ದೂಕಿ ಕೇಳುತ
ಸಾಕುವಾಕೆಗೆ ನೋವು ತಾಕಲಾಗದು ॥ ೧೩೨ ॥

ಎಂದು ನುಡಿಯುತ ಓರ್ವ ಸುಂದರಾಂಗನೆ
ಬಂದಳಲ್ಲಮನ ಬಳಿಗೆ ಒಂದು ನೆವದಲಿ ॥ ೧೩೩ ॥

ನಮ್ಮ ಒಡತಿಗೆ ಗಂಡ ಸುಮ್ಮನಾಗ್ವದು
ತಮ್ಮ ಕೇಳ್ವುದು ಎಂದು ಗಮ್ಮನೆ ಪೇಳುತ ॥ ೧೩೪ ॥

ಗಲ್ಲ ಪಿಡಿಯುತ ಸೆರಗ ನಿಲ್ಲದೊಡ್ಡುತ
ಬುಲ್ಲವಣಿಯೊಳು ಎನ್ನ ಸೊಲ್ಲ ಕೇಳ್ವುದು ॥ ೧೩೫ ॥

ಎನಲು ಮಾತನು ಬಹಳ ಬಿನಗು ಮಾಡುತ
ಮನಕೆ ಬಾರದ ಹಾಂಗೆ ವನಿತೆಗಾಗಿಸೆ ॥ ೧೩೬ ॥

ಪರಿಪರಿಯಿಂದ ಅವನ ವರದ ಮನಸನು
ಮುರಿದು ಮನ್ನಿಸಿ ಮನೆಗೆ ಕರೆದು ತರುತಲಿ ॥ ೧೩೭ ॥

ಮೇಲು ಮನೆಯೊಳು ಇಟ್ಟು ಬಾಲೆ ಮಾಯೆಯ
ಕಾಲವರಿವುತ ಕಳುಹಿ ಸೇನು ಮಾಡುತ ॥ ೧೩೮ ॥

ಪುಣುಗು ಕಸ್ತೂರಿ ಗಂಧ ಸೆಣಸಿ ಮೈಯೊಳು
ನುಣುಪು ಮಾಳ್ಪೆನು ಎನುತ ಕೆಣಕಲಾಗಲೆ ॥ ೧೩೯ ॥

ಬಳಿಯೊಳಿರ್ಪನು ಎಂದು ಸಲಿಗೆಯಿಂದಲಿ
ತುಳಿಕಿ ಮುಟ್ಟಲು ತಾನು ನೆಳಲಿನಂದದಿ ॥ ೧೪೦ ॥

ಸಿಕ್ಕದಿರುವನು ಕೈಗೆ ದಕ್ಕಿದಕ್ಕನು
ಕಕ್ಕುಲತೆಯೊಳು ಮತ್ತೆ ತೆಕ್ಕಿ ಹಾಯಲು ॥ ೧೪೧ ॥

ರೂಪು ತೋರ್ಪನು ಕೈಗೆ ಲೇಪವಾಗನು
ತಾಪ ಹೆಚ್ಚುತ ಬಯಲು ಕೋಪಮಾಡುತ ॥ ೧೪೨ ॥

ಕಾಯ ತೋರ್ಪನು ಕೈಗೆ ಮಾಯವಪ್ಪನು
ಆಯವೇನಿದು ಎಂದು ಬಾಯಿಬಿಡುತಲಿ ॥ ೧೪೩ ॥

ಬಯಲು ತೆಕ್ಕೆಯು ಮೇಲೆ ಬಯಲ ಚುಂಬನ
ಬಯಲ ನೋಟವು ಕೂಟ ಬಯಲು ಆಗಿರೆ ॥ ೧೪೪ ॥

ಭ್ರಮೆಯೊಳಾಕೆಯು ಬಯಲ ಶ್ರಮವ ಮಾಳ್ಪಳು
ತಮವ ನೋಡುತ ತಾನು ವಿಮಲ ಮತಿಯೊಳು ॥ ೧೪೫ ॥

ಹಿಡಿಯೆ ಸಿಕ್ಕದೆ ಕುಳಿತು ಕಡಕಡಾಸುತ
ಜಡಿದು ನಗುತಿಹ ಧ್ವನಿಯು ಘಡುಘಡಿಸುತಿರೆ ॥ ೧೪೬ ॥

ಬಯಲ ಭ್ರಾಂತಿಗೆ ಮಾಯೆ ಪಯದಿ ಬೀಳಲು
ನಯವುದೋರದೆ ಮೂರ್ಛೆ ಲಯದಿ ಮಲಗಲು ॥ ೧೪೭ ॥

ಬೆಳಗನೀ ಪರಿ ಕಳೆಯೆ ಗೆಳತಿ ಸಖಿಯರು
ಬಳಿಗೆ ಬರುತಲಿ ಈಕೆ ಕಳೆಯ ನೋಡುತ ॥ ೧೪೮ ॥

ಹಣಿಗೆ ಕಣ್ಣಿಗೆ ನೀರು ತಣಿಯದೊತ್ತುತ
ದಣಿದಿ ಅಕ್ಕಟ ಪರುಷ ಖಣಿಯೆ ಎನ್ನುತ ॥ ೧೪೯ ॥

ಸೀತದಿಂದಲಿ ಮದನ ಕಾತುರದ ಪರಿ
ಜಾತ ಸ್ತ್ರೀಯರು ಒಳ್ಳೆ ರೀತಿಗ್ಯೆದರು ॥ ೧೫೦ ॥

ಆಗ ಮಾಯೆಗೆ ಹೆಚ್ಚೆ ಬಗೆಯ ಕಾತರ
ತೂಗಿ ತನ್ನಯ ವಿವರ ಬೇಗ ಪೇಳ್ದಳು ॥ ೧೫೧ ॥

ಎಲ್ಲ ಸ್ತ್ರೀಯರು ಮಾಯ ಸೊಲ್ಲನಾಲಿಸಿ
ಅಲ್ಲಮನ ಮನ ತಿಳಿವು ದಿಲ್ಲವೆನುತಲಿ ॥ ೧೫೨ ॥

ಎನುತರೆಲ್ಲರು ಇವನ ಘನಕೆ ಮೆಚ್ಚುತ
ಕನಲಿ ಕಂಪಿಸಿ ತಮ್ಮ ತನುವ ಮರೆದಿರೆ ॥ ೧೫೩ ॥

ಭ್ರಮಣೆಯಿಂದಲಿ ಪೃಥ್ವಿ ರಮಣನಣುಗಿಯು
ಕಮಲಬಾಣನ ಕೋಲ್ಗೆ ಸುಮತಿ ಬಿದ್ದಳು ॥ ೧೫೪ ॥

ಎಂಬ ವಾರ್ತೆಯ ಕೇಳಿ ತಂಬಿಸದಲೇ
ತುಂಬಿ ಬರುತಿರೆ ಇವಳ ಇಂಬು ತಳಿವುತೆ ॥ ೧೫೫ ॥

ಎನ್ನ ಮಗಳೇ ನಿನಗೆ ಮನ್ನಣೆ ಸರಿಯೆ
ನಿನ್ನ ವ್ರತವನು ನೋಳ್ಪೆ ಭಿನ್ನ ಮಾಳ್ಪನೆ ॥ ೧೫೬ ॥

ನಿನಗೆ ಕುಂದೆನೆ ನಿನ್ನ ಮನಕೆ ಬಾರದು
ವನಿತೆರೆಲ್ಲರು ಕೂಡೆ ಅನುವ ಮಾಳ್ಪರು ॥ ೧೫೭ ॥

ಎನುತ ಮೋಹಿನಿ ಸರ್ವ ವನಿತೆರೆಲ್ಲರಿಗೆ
ಮುನಿದು ಬೈಯಲು ನಮಗೆ ಕಿನಿಸುಯಾಕೆನೆ ॥ ೧೫೮ ॥

ಜೀವದಿಂದಲಿ ಈಕೆ ಸಾವುತಿರ್ದಳು
ನಾವು ಈಗಳು ಊಳಿವಿ ಭಾವೆ ತೋರ್ದೆವು ॥ ೧೫೯ ॥

ಎನಲು ಮಗಳಿಗೆ ತಕ್ಕ ಇನಿಯನಲ್ಲಮ
ಮನಸುಮಾಯೆಯ ಇದ್ದು ಅನುವಿನಿಂದಲಿ ॥ ೧೬೦ ॥

ಮಾಡಿಕೊಡುವದು ನಮ್ಮ ನಾಡವೊಡೆಯಗೆ
ಗೂಢ ಮಾತನು ತಿಳಿಸ ಬೇಡವೆಂದಳು ॥ ೧೬೧ ॥

ಎಂದು ಪೇಳುತೆ ಮನೆಗೆ ಬಂದಳಾಕ್ಷಣ
ಸುಂದರಲ್ಲಮನ ಭ್ರಾಂತಿಯಿಂದಲಿರುತಿರೆ ॥ ೧೬೨ ॥

ವಿಮಳೆ ಬರುತಲಿ ಇವಳ ಶ್ರಮವ ಕಾಣುತ
ಸುಮತಿ ಕೇಳಲೆ ನಿನಗೆ ಭ್ರಮೆಯು ಯಾತಕೆ ॥ ೧೬೩ ॥

ನೀನು ಶಿವನೊಳು ಬಹಳ ಕೂನವಾಡುತ
ಸಾನುರಾಗದಿ ಬಂದು ಹೀನವಾಗುದೆ ॥ ೧೬೪ ॥

ಅಲ್ಲಮನ ಘನ ಮುರಿದು ಫಲ್ಲಬಾಣನ
ಕುಲ್ಲ ಕೊಲೆಯೊಳು ಹಾಕಿ ಸೊಲ್ಲನಡಗಿಸಿ ॥ ೧೬೫ ॥

ಎಂದು ಪೇಳುತ ನೀನು ಬಂದೆ ಮರ್ತ್ಯದಿ
ಸುಂದರಲ್ಲಮನ ಕಂಡು ಮುಂದೆ ಭ್ರಮಿಪರೆ ॥ ೧೬೬ ॥

ಎನುತ ಮಳೆಯು ನುಡಿಯೆ ವನಿತೆ ಮಾಯೆಗೆ
ಮನಸಿಗಾಗಳೆ ಸ್ವಲ್ಪ ನೆನಹು ತೋರಲು ॥ ೧೬೭ ॥

ನೀನು ಇಲ್ಲಿಗೆ ಬಂದ ಕೂನವೇನೆನ
ಮಾನಿನೀಮಣಿ ಗಿರಿಜೆ ತಾನು ಕಳುಹಲು ॥ ೧೬೮ ॥

ಮರ್ತ್ಯಲೋಕದಿ ಹೋಗಿ ಮರ್ತು ಇರ್ಪಳೊ
ಅರ್ತು ಇರ್ಪಳೊ ಎಲ್ಲ ವ್ಯರ್ಥಗೈದಳೊ ॥ ೧೬೯ ॥

ನೀನು ಪಾರ್ವತಿ ತಮದ ಕೂನರೂಪವು
ನಾನು ಪಾರ್ವತಿ ಚೆಲುವ ಜ್ಞಾನರೂಪವು ॥ ೧೭೦ ॥

ನೀನು ಮರೆತೊಡೆ ನಿನಗೆ ಜ್ಞಾನವರುಹಲು
ನಾನು ಬಂದೆನು ದೇವಿ ತಾನು ಕಳುಹಿಸೆ ॥ ೧೭೧ ॥

ಎಂದು ಪೇಳಲು ಮಾಯೆ ಸುಂದರಲ್ಲಮನ
ಚೆಂದ ರೂಪವು ಎನ್ನ ಮುಂದೆ ನಿಲುತಿದೆ ॥ ೧೭೨ ॥

ಎನ್ನ ಮನವನು ಹಿಡಿದು ಬನ್ನ ಬಡಿಪುದು
ಚೆನ್ನೆ ಕೇಳೆಲೆ ವಿಮಳೆ ನನ್ನ ವಿವರವ ॥ ೧೭೩ ॥

ಮನವು ಹಿಡಿಯಲು ಎನಗೆ ಘನವು ತೋರ್ಪುದು
ತನುವು ಅವನೊಳು ಸಿಲ್ಕಿ ನೆನಹುಯಿಲ್ಲವು ॥ ೧೭೪ ॥

ಅವನ ಸೋಲಿಪ ಯುಕ್ತಿ ವಿವರ ತಿಳಿಯದು
ನೆನವು ಇಲ್ಲವು ಎನಗೆ ಕವಿದ ಭ್ರಾಂತಿಯು ॥ ೧೭೫ ॥

ಎಂದ ಮಾತನು ವಿಮಳೆ ಛಂದ ಕೇಳುತ
ಹಿಂದೆಯಾದುದ ಬಿಟ್ಟು ಮುಂದೆ ನಡೆವುದು ॥ ೧೭೬ ॥

ಅಗಣಿತೋಕ್ತಿಯ ತೆಗೆದು ತೆಗೆದು ಅಳಲುತ
ಸುಗುಣಿ ವಿಮಳೆಯು ಮಾಯ್ಗೆ ಬಗೆಯ ತಿಳಿಪುತೆ ॥ ೧೭೭ ॥

ಇರಲು ಮಮಕರ ಕೇಳಿ ಬರುತೆ ಮಗಳಿಗೆ
ಕೊರೆದು ಕೋಪಿಸಿ ಬೈವು ತಿರಲು ವಿಮಳೆಯು ॥ ೧೭೮ ॥

ಮಾಯೆ ಹುಟ್ಟಲು ಅಲ್ಲಮ ರಾಯ ಹುಟ್ಟಿದ
ಆಯ ಕಟ್ಟಿನ ನುಡಿಯು ಪಾಯ ಪೇಳಲು ॥ ೧೭೯ ॥

ಮಾಯಿದೇವಿಗೆ ನೀನು ಬಯ್ಯಬೇಡೆಲೊ
ಮಾಯೆ ತಿಳಿಯದು ನಿನಗೆ ಆಯ ಕೇಳೆಲೆ ॥ ೧೮೦ ॥

ಒಪ್ಪುಗೊಳುತಲಿ ಮಗಳ ತಪ್ಪನೆಣಿಸದೆ
ಇಪ್ಪುದೆ ಸುಖವು ಎನುತ ಸಪ್ಪಳಿಲ್ಲದೆ ॥ ೧೮೧ ॥

ಪೋಗಲರಸನು ಇತ್ತ ಬೇಗ ಮಧುಕನ
ಬೇಗ ಸೇವೆಯ ಮಾಳ್ಪೆ ಈಗ ಎನುತಲಿ ॥ ೧೮೨ ॥

ಸಕಲ ಸಾಧನ ತರಿಸಿ ಭಕುತಿಯಿಂದಲಿ
ಸುಕರ ನಲ್ಲನ ಕರಿಸಿ ಸುಖದೊಳೆಲ್ಲರು ॥ ೧೮೩ ॥

ಪೋಗಿ ಮಧುಕನ ಗುಡಿಗೆ ಸಾಗಿ ಬರುತಲಿ
ನಾಗಕಟಕನ ಸೇವೆ ಆಗ ಮಾಡುತ ॥ ೧೮೪ ॥

ಅಷ್ಟವಿಧದೊಳು ಶಿವನ ನಿಷ್ಠೆಯಿಂದಲಿ
ಶ್ರೇಷ್ಠ ಪೂಜೆಯ ಮಾಡಿ ತುಷ್ಟಿ ಭಾವದಿ ॥ ೧೮೫ ॥

ಮುಂದೆ ನಟಿಸಲು ಸಕಲ ಸಂದ ಸಾಧನ
ಒಂದು ಉಳಿಯದೆ ಕೂಡಿ ಸೆಂದು ಮಾಯೆಯು ॥ ೧೮೬ ॥

ಅಲ್ಲಮಯ್ಯನು ಬಹಳ ಬಲ್ಲ ಬೆಡಗಿಲಿ
ಚೆಲ್ವ ಮದ್ದಳೆ ಕಟ್ಟಿ ನಿಲ್ಲಲಾಗಳೆ ॥ ೧೮೭ ॥

ಸಕಲವೆಸಗುತ ಮಾಯೆ ಭಕುತಿಯಿಂದಲಿ
ಪಿಕಮನೋಹರ ಸ್ವರದಿ ಶಕುನಿ ರಾಗದಿ ॥ ೧೮೮ ॥

ಅಡಕು ತಾಳವ ಪಿಡಿದು ಜಡಪುಮಾಡುತ
ಬೆಡಗು ಹೆಚ್ಚುತ ಕಾಲ ದಿಡಗು ಹೆಚ್ಚುತ ॥ ೧೮೯ ॥

ತುಡುಕಿ ಮಾಯೆಯು ನಟಿಪ ಅಡಿ ಚಮತ್ಕೃತಿ
ಅಡಕುತತ್ತವು ವಿತ್ರ ದಿಡಗು ಬಹಳವು ॥ ೧೯೦ ॥

ಭರತಕಟ್ಟಳೆ ತಪ್ಪ ದಿರದೆ ನಟಿಸಲು
ಶರಣನಲ್ಲಮ ಬಹಳ ಪರಿಯ ಬೇಟದಿ ॥ ೧೯೧ ॥

ನೋಟಬೇಟದಿ ಬಹಳ ನೀಟನಿಂದಲಿ
ಕೋಟಿ ಬೆಡಗಿಲಿ ಮರುಳ ಮಾಟಪೆಸಗುತ ॥ ೧೯೨ ॥

ಮದ್ದಳೆಯವನು ಕಟ್ಟಿ ಸದ್ದು ಮಾಡುತ
ಸುದ್ದ ಹೊಡೆವುದ ಪೇಳ್ವೆ ಬುದ್ಧಿ ಸೂಸದು ॥ ೧೯೩ ॥

ಧಡಧಡಿಸುತಲೆ ಬಹಳ ಫಡಫಡಾಣಿಯು
ಕಡುಚಡಾಳಿಸಿ ಹೊಡೆವ ದಿಡುಗು ಪಿಂದೆನೆ ॥ ೧೯೪ ॥

ಜಮಕು ಜಂತ್ರುಕು ಜಣಕು ಧಿಮಿತದ ಧಿಮಿಕು
ಘಮುಕು ಝುಣಝುಣ ಝುಕ್ಕು ತಮಕು ತೋಂ ಥೈಂ ॥ ೧೯೫ ॥

ಎನುತ ಮದ್ದಳೆ ಹೊಡೆವ ಘನಮಹಾಧ್ವನಿ
ಮನದಿ ಮಾಯೆಯು ತನುವ ಕೊನರಿ ಬಾಡಿಸಿ ॥ ೧೯೬ ॥

ಸೆರೆಯ ಪಿಡಿಯಲು ಮಾಯೆ ತ್ವರಿತನರ್ತನ
ಮರೆದು ನಿಲ್ಲುತೆ ಇವನ ಕರದ ಚಳಕಕೆ ॥ ೧೯೭ ॥

ಸುಂದರತ್ವಕೆ ಹೊಡೆವ ಬಂಧುರತ್ವಕೆ
ಹೊಂದಿನೋಟದ ಬೇಟ ಛಂದಗಮಕಕೆ ॥ ೧೯೮ ॥

ಮಾಯಿದೇವಿಯು ಇವನ ಪ್ರಾಯಸುಂದರ
ಕಾಯವೀಕ್ಷಿಸಿ ತಾನು ಪಾಯವರಿತಳು ॥ ೧೯೯ ॥

ಭ್ರಮೆಯಗೊಳ್ಳುತ ಕಾಲ ಶ್ರಮವ ಮರೆವುತ
ಧುಮಕಿಯಾತನ ಮೇಲೆ ತಮದಿ ಬಿದ್ದಳು ॥ ೨೦೦ ॥

ಬೀಳಲಾಕ್ಷಣ ಪ್ರಭು ತಾಳಲಾರದೆ
ಬಾಲೆ ಮಾಯೆಯ ನೋಡಿ ಗೋಳಿಡುತಲಾಗ ॥ ೨೦೧ ॥

ತನ್ನ ಮದ್ದಳೆ ಬಿಟ್ಟು ಚನ್ನೆ ಮಾಯೆಯ
ಮುನ್ನ ನೋಡದೆ ಜಡಿದು ಭಿನ್ನವಿಲ್ಲದೆ ॥ ೨೦೨ ॥

ಹೊರಟು ಹೋಗಲು ಮಾಯೆ ಬೆರೆತು ಪ್ರಭುವಿನ
ಕುರುಹುಗಾಣದೆ ತಾನು ತೆರಳಿ ನಡೆದಳು ॥ ೨೦೩ ॥

ಅಲ್ಲಮಯ್ಯನ ಹುಡುಕು ತಲ್ಲಿಗಲ್ಲಿಗೆ
ಕಲ್ಲುಮುಳ್ಳಳ ತುಳಿದು ತಲ್ಲಣಿಸುತಲಿ ॥ ೨೦೪ ॥

ಬೆನ್ನ ಹತ್ತುತ ಚೆಲ್ವ ಕನ್ನೆ ಬರುತಿರೆ
ಚೆನ್ನ ರಿಸಿಗಳ ತಪವು ಭಿನ್ನವಾಗುತೆ ॥ ೨೦೫ ॥

ವ್ರತವು ಕೆಡುತಲಿ ಇಂದ್ರಿ ಜತನು ಭಾವಕಿ
ಮತಿಯು ಮಸುಳಿಸಿ ಬಂದು ಕೃತಕವೆನುತಲಿ ॥ ೨೦೬ ॥

ಭೀತಿಯಿಂದಲಿ ಯತಿಯ ವ್ರತವನೆಲ್ಲವ
ನೀತಿಗೆಡುತಲಿ ತಾವು ಸೋತುಹೋದರು ॥ ೨೦೭ ॥

ಮಾಯಿದೇವಿಯು ಬಹಳ ಬಾಯಿ ಬಿಡುತಲಿ
ಕಾಯ ಹಂಗನು ಮರೆದು ಛಾಯೆಗೆಡುತಲಿ ॥ ೨೦೮ ॥

ಅಡವಿಗಿಡದೊಳು ಕರಡಿ ಬಡಿವ ಹುಲಿಗಳು
ಮಿಡುಕುದೋರದೆ ತಾನು ನಡೆದು ಬರುತಿರೆ ॥ ೨೦೯ ॥

ಅಲ್ಲಮಯ್ಯನು ತನ್ನ ಚೆಲ್ವ ರೂಪವ
ನಲ್ಲೆ ಮಾಯೆಗೆ । ತೋರಿ ಇಲ್ಲವೆನಿಸುವ ॥ ೨೧೦ ॥

ರೂಪುಕಾಣುತ ಬಹಳ ತಾಪಹೆಚ್ಚುತ
ಜೋಪಿ ತಕ್ಕಿಸಿ ಬಯಲ ಕೋಪಗೈದಳು ॥ ೨೧೧ ॥

ಇಂತು ಪರಿಯಲಿ ಮಾಯೆ ಕಾಂತೆ ಬರುತಿದೆ
ಶಾಂತನುಲ್ಲಮ ರೂಪು ವಾಂತು ನಿಂತನು ॥ ೨೧೨ ॥

ಎಲ್ಲ ಸ್ತ್ರೀಯರು ಬರುತ ಅಲ್ಲಮಯ್ಯನನ
ಬಲ್ಲತನದೊಳು ಸುತ್ತ ನಿಲ್ಲುತಾಗಳೆ ॥ ೨೧೩ ॥

ಇಷ್ಟು ಪರಿಯಲಿ ಬಹಳ ಕಷ್ಟಬಡಿಸಿದಿ
ಶ್ರೇಷ್ಠಮಾಯೆಯು ನಿನಗೆ ತುಷ್ಟಿ ಮಾಳ್ಪಳು ॥ ೨೧೪ ॥

ಈಗ ಸಿಲ್ಕಿದೆ ಇನ್ನು ಹೇಗೆ ಮಾಡುವಿ
ಬೇಗ ಮಾಯೆಗೆ ಸಿಲ್ಕಿ ಪೋಗಲಾಗದು ॥ ೨೧೫ ॥

ಇನ್ನು ಮಾಯೆಯು ನಿನ್ನ ಚೆನ್ನ ರೂಪವ
ತನ್ನ ಬಲೆಯೊಳು ಹಾಕಿ ಬನ್ನ ಬಡಿಸಿದೆ ॥ ೨೧೬ ॥

ಬಿಡುವಳಲ್ಲವು ಎಂದು ನುಡಿಯೆ ಸ್ತ್ರೀಯರು
ಒಡೆಯನಲ್ಲಮ ಬಹಳ ಬೆಡಗಿನಿಂದಲಿ ॥ ೨೧೭ ॥

ನಿಮಗೆ ಸಿಲ್ಕಿದೆ ನಮಗೆ ಶ್ರಮವು ಬಂತೆನೆ
ಗಮನವಿಲ್ಲವು ನಮಗೆ ವಿಮಲವಿಲ್ಲವು ॥ ೨೧೮ ॥

ಈಗ ಹೋಗಲು ನಮಗೆ ಜಾಗವಿಲ್ಲವು
ಹೇಗೆ ಮಾಡುವೆ ನೆಂದು ಕೂಗುತಿರ್ದನು ॥ ೨೧೯ ॥

ಎಲ್ಲ ಸ್ತ್ರೀಯರು ಮುತ್ತಿ ಅಲ್ಲಮಯ್ಯನ
ಜಲ್ಲಿಚಾಮರ ಹಾಕಿ ಗಲ್ಲ ಪಿಡಿಯುತ ॥ ೨೨೦ ॥

ನೀನು ಮಾಯೆಗೆ ಚೆಲುವ ಮಾನದೊಲ್ಲಭ
ಸಾನುಕೂಲವು ಈಗ ತಾನೆಯಪ್ಪುದು ॥ ೨೨೧ ॥

ಎಂದು ಬಹುಪರಿ ಬಹಳ ನೊಂದ ನೋವನು
ಸುಂದರಯ್ಯಗೆ ಚೆಲ್ವ ಮಂದಗತಿಯರು ॥ ೨೨೨ ॥

ಗೋಳು ಇಡುತಲಿ ಬಹಳ ಹೇಳಿಕೊಳುತಲಿ
ನಾಳೆಗೆನ್ನದೆ ಇನ್ನು ಕೋಳುವಿಡಿದೆವು ॥ ೨೨೩ ॥

ಎನುತ ಸ್ತ್ರೀಯರು ಬಂದು ತನುವ ತೆಕ್ಕೆಯೊಳು
ಕೊನರಿ ಹಾಯಲು ಕೈಗೆ ಅನುವ ತೋರದೆ ॥ ೨೨೪ ॥

ಅಲ್ಲಮಯ್ಯನು ನಗುತ ನಿಲ್ಲ ಕಡೆಯೊಳು
ಎಲ್ಲ ಸ್ತ್ರೀಯರು ನೋಡಿ ಸೊಲ್ಲ ಮೇಳದೆ ॥ ೨೨೫ ॥

ಗಲ್ಲಗಲ್ಲವ ಬಡಿದು ಕೊಳ್ಳುತೆಲ್ಲರು
ಅಲ್ಲಮಯ್ಯನು ಮನುಜನಲ್ಲವೆನುತಲಿ ॥ ೨೨೬ ॥

ಭ್ರಾಂತಿಯಿಂದಲಿ ಮಾಯಿ ಕಾಂತಿ ದೇಹದ
ಚಿಂತೆಯಲ್ಲಮ ಮರೆತು ನಿಂತು ಈಕ್ಷಿಸಿ ॥ ೨೨೭ ॥

ಎಲವೊ ಮಾಯೆಯೆ ನಿನಗೆ ಸುಳುಹು ತೋರ್ದಡೆ
ಗಳಿಗೆಯಾದರು ನಿನಗೆ ಸಿಲುಕಿ ನಿಂದೆನೆ ॥ ೨೨೮ ॥

ಹೀಗೆ ಮಾಡಲು ನಿನಗೆ ಸಾಗಿ ಬರ್ಪಳು
ಬೇಗ ಹಿಡಿಯಲು ಸೂಕ್ಷ್ಮವಾಗಿ ತೋರ್ಪನು ॥ ೨೨೯ ॥

ದೊರೆವುದಿಲ್ಲವು ನಿನಗೆ ಪರಿಯೆ ತಿಳಿಯದು
ಶರಣರಾಟವು ಬಹಳ ತೆರನವಿರ್ಪುದು ॥ ೨೩೦ ॥

ಭಕ್ತಿಯಿಂದಲಿ ನೀನು ಯುಕ್ತಿಮಾಡುತ
ಶಕ್ತಳಾದರೆ ಶರಣ ಯುಕ್ತನಾಗುವ ॥ ೨೩೧ ॥

ಭಜನೆಭಾವದಿ ನೀನು ನಿಜವ ಹುಡುಕಲು
ರುಜುಮತಿಗತಗೆ ಶರಣ ವಜನಿದೋರ್ಪನು ॥ ೨೩೨ ॥

ಹೀಗೆ ಸಿಲ್ಕನು ನೀನು ಸಾಗಿ ಹೋಗೆನೆ
ರಾಗದಿಂದಲಿ ಈಗ ಸಾಗು ಮುಂದಕೆ ॥ ೨೩೩ ॥

ಶರಣರಿರುತಿಹ ಚೆಲ್ವ ಪರಮಕ್ಷೇತ್ರದ
ಕುರುಹನುಳ್ಳದು ಒಂದು ಪುರವು ಕಾಣಿರೆ ॥ ೨೩೪ ॥

ವರಕಲ್ಯಾಣಕೆ ನೀನು ತಿರುಗಿ ಬರ್ಪುದು
ಶರಣರಿರ್ಪರು ಅವರ ಪರಿಯ ತಿಳಿವುದು ॥ ೨೩೫ ॥

ಅವರ ಬಳಿಯಲಿ ನಿನಗೆ ಶಿವನಸಾಯುಜ್ಯ
ಭವಿಪುದೆನುತಲಿ ತಾನು ಜವದಿ ಪೇಳ್ದನು ॥ ೨೩೬ ॥

ಎನಲು ವಿಮಳೆಯು ಮಾಯ್ಗೆ ವಿನಯ ಬೋಧಿಸಿ
ಸನುಮತಿಯೊಳಗೆ ಬಹಳ ಘನವ ತಿಳುಹಿಸಿ ॥ ೨೩೭ ॥

ರಜತಪರ್ವತ ದೆಡೆಗೆ ಸುಜನೆ ವಿಮಳೆಯು
ನಿಜದ ಮಾಯೆಯ ಕೊಂಡು ರುಜದಿ ಬಂದಳು ॥ ೨೩೮ ॥

ಬರಲು ಪಾರ್ವತಿ ನಯದಿ ಹರನ ಪಾದಕೆ
ಶರಣು ಮಾಡುತ ನಿಮ್ಮ ಶರಣರಾಟವು ॥ ೨೩೯ ॥

ತಿಳಿಯದೀಗಲು ಎಂದು ಚಳಕದಿಂದಲಿ
ಮುಳಿದು ಮಾಯೆಗೆ ನೀನು ಇಳೆಗೆ ಜನಿಸೆನೆ ॥ ೨೪೦ ॥

ಭಕ್ತಿಯಿಂದಲಿ ನೀನು ಶಕ್ತಳಾಗಿವಿ
ರಕ್ತವಿರಹಿತ ಅಲ್ಲಮ ಯುಕ್ತಳಾಗುವಿ ॥ ೨೪೧ ॥

ವರಕಲ್ಯಾಣದಿ ನೀನು ಶರಣನಿಚಯದಿ
ಗುರುವು ಪ್ರಭುವಿನ ನಿಜವ ಅರಿದುಬಾರೆನೆ ॥ ೨೪೨ ॥

ಎಂದು ಪೇಳುತ ಜ್ಞಾನದಿಂದ ಬೋಧಿಸಿ
ಬಂದಳಿಳೆಯೊಳು ಮಾಯೆ ಚಂದದಿಂದಲಿ ॥ ೨೪೩ ॥

ಉಡುತಡಿಯೊಳಗೆ ಚೆಲ್ವ ನುಡಿಯ ಹೆಸರಿಲಿ
ನಡೆದು ಬಂದಳು । ಭಕ್ತಿ । ವಿಡಿದು ಮರ್ತ್ಯಕೆ ॥ ೨೪೪ ॥

ಅಕ್ಕಮಾದೇವಿ ಎಂಬ ಚೊಕ್ಕ ಹೆಸರಿಲಿ
ಅಕ್ಕರಿಂದಲಿ ಭಕ್ತಿ ಉಕ್ಕಿಬಂದಳು ॥ ೧೪೫ ॥

ಬರುತಲಾಕ್ಷಣ ಕಲ್ಯಾಣ ಪುರಕೆ ಬರುತಲಿ
ಶರಣನಿಚಯದಿ ಪ್ರಭುವ ಕುರುಹು ಪೇಳುತ ॥ ೧೪೬ ॥

ಜ್ಞಾನಬೋಧೆಯ ತಾನು ಮಾನದಿಂದಲಿ
ಕೂನ ತಿಳಿವುತ ತಾನು ಲೀನವಾದಳು ॥ ೧೪೭ ॥

ಸಕಲ ರಚನೆಯ ಮರೆದು ಯುಕುತಿಯಿಂದಲಿ
ಸಕಳೆ ನಡೆದಳು ಮೇಲೆ ಪ್ರಕರಭವನಕೆ ॥ ೧೪೮ ॥

ಆರು ಸ್ಥಲವನು ಹತ್ತಿ ಮಿರಿ ರಂಧ್ರವ
ಸೇರಿ ನಿಂತಳು ಪಚಿಮ ದ್ವಾರನಿಲಯದಿ ॥ ೧೪೯ ॥

ಶರಣ ಸಮುಹವು ಈಕೆ ಪರಿಯ ನೋಡುತ
ಬೆರಗುವಡುತಲಿ ಈಕೆ ಸ್ಥಿರವ ಹೊಕ್ಕಳು ॥ ೧೫೦ ॥

– ಕೃತಿ: ಜೀವನ ಜೋಕಾಲಿ: ಕೋಲುಪದ

***

೨. ಆದಯ್ಯ

ದುಂದುಮೆಯೆಂದೆಂದು ಪಾಡಿರಿ ಜಾಣ
ದುಂದುಮೆ ಬಸವಂತನಹಬ್ಬ ॥ ಪ ॥

ಶಿವಶಿವ ಗಣನಾಥನಂದನಂದನ ತನು
ಭವಹರ ನಿರ್ಜರೊಂದಿತ ಚರಣ । ಗೌರೀ
ಧವಧವಲಾಂವರ್ಜಿತ ಮರಣ । ಚಂದ್ರ
ರವಿವಹ್ನಿನೇತ್ರ ಪೂರಿತ ಕರುಣ । ಸರ್ವ
ಭುವನ ಜನರ ರತಿ ಮರಿಯಾದೆ ಪಾಲಿಪ
ಭವನೆ ನಂಬಿದೆನಿನ್ನ ಒಲಿದೆನ್ನ ಸಲಹು ॥ ೧ ॥

ಈಶ ಮಹೇಶ ಗೌರೀಶ ಗಜಾಂತಕ
ನಾಶ ಮುಕ್ತೀಶ ಮಲ್ಲೇಶ್ವರನೆ । ಪುರ
ನಾಶ ಭೂತೇಶ ಸರ್ವೇಶ್ವರನೆ । ಯಮ
ನಾಶ ಗಿರೀಶ ಮದೀಶ್ವರನೆ । ಜಗ
ದೀಶ ಗಂಗಾಂಬೆಯ ತೋಷ ಭೂಷ ಅಘ
ನಾಶ ರಹಿತ ಆಶ ಸಲಹು ಸೋಮೇಶ ॥ ೨ ॥

ಆದಿಗಣೇಶನು ಹರನ ನಿರೂಪದಿ
ಮೇದಿನೀಸ್ಥಲದೊಳಗುದ್ಭವಿಸಿ । ಪರ
ವಾದಿ ಜಿನ್ನರನೆಲ್ಲ ಸಂಹರಿಸಿ । ಸೌ
ರಾಷ್ಟ್ರ ಸೋಮೇಶನ ಸ್ಥಿರಗೊಳಿಸಿ । ಮತ್ತೆ
ಈ ಧರೆಯೊಳು ತೋರಿ ಮೆರೆಸಿದಾದಯ್ಯನ
ಮೋದದಿಂದಾತನ ಕಥೆಯ ನಿರ್ವಿಪೆನು ॥ ೩ ॥

ಕರ್ತುಶಂಕರ ಸಿಂಹಪೀಠವಡರಿ ಮತ್ತೆ
ಮೋರ್ತಮಾಡಿರೆ ಸುತ್ತ ಎಡಬಲದಿ । ಲಕ್ಷ್ಮಿ
ಕರ್ತರು ಅಜರಿರ್ಪ ತರತರದಿ । ಭೃಂಗಿ
ನರ್ತನ ಗಾನವೆತ್ತುತ ಸ್ವರದಿ । ಗಣ
ದರ್ತಿಲೆ ಸಂತೋಷದಿಂದಿರ್ಪ ಸಮಯದಿ
ತುರ್ತದಿಂ ನಾರದ ಮರ್ತ್ಯದಿಂದಿಳಿದ ॥ ೪ ॥

ಆ ಕ್ಷಣ ಬಂದು ನಿರೀಕ್ಷಿಸಿ ಇಂದು ಭಾ
ಳಾಕ್ಷ ಸುಮುಕ್ಷವಾಹನ ಜಯತು । ನಿರ
ಪೇಕ್ಷ ನಿರ್ಲಕ್ಷ ನಿರ್ಮಳ ಜಯತು । ಭಕ್ತಾ
ಪೇಕ್ಷ ಮುಮುಕ್ಷದಾಯಕ ಜಯತು । ಲೋಕ
ರಕ್ಷಕ ಪಾಲಕ ಪಕ್ಷಿವಾಹನ ನುತ
ದಕ್ಷ ಸಮ್ಮಖಶಿಕ್ಷ ಜಯಯೆಂದ ಮುನಿಪ ॥ ೫ ॥

ತಪ್ತನಾಗುತ ಶಿವ ಮುನಿಸ್ತುತಿಗೆ ವಾಣೀ
ವಪ್ತರುಳನೆ ಬಂದ ಕಾರ್ಯವೇನು । ಪೇಳ್ವೆ
ಸಪ್ತಸಾಗರವನು ದಾಂಟಿದೆನು । ದ್ವಿತಿ
ಸಪ್ತಲೋಕವನೆಲ್ಲ ಚರಿಸಿದೆನು । ದೇವ
ಸಪ್ತದ್ವೀಪಾಂತರ ಸುತ್ತಿ ಬರಲು ಎಂಟು
ಸಪ್ತದೇಶದೊಳೊಂದು ಕಂಡೆ ಕೌತುಕವ ॥ ೬ ॥

ಬಲ್ಲಿದ ಪುಲಿಗೆರಿಯಲ್ಲಿ ನಿಮ್ಮಯ ಸುದ್ದಿ
ಎಲ್ಲೆಲ್ಲಿ ನೋಡೆ ಎಳ್ಳಿ ನಿತಿಲ್ಲವು । ಕುನ್ನಿ
ಖುಲ್ಲ ಜಿನ್ನವು ಹೆಚ್ಚಿಕೊಂಡಿಹವು । ಪೇಳೆ
ನಲ್ಲಿ ಶ್ರೀ ಗುರುಲಿಂಗಜಂಗಮವು । ಪೇಳ್ವೆ
ನಲ್ಲಮಭಕ್ತರು ಎಲೆಮರೆ ಕಾಯಂತೆ
ಅಲ್ಲಡಗಿಹರಿಭಪುರ ದೊಳಗೇ ॥ ೭ ॥

ಚಿನುಮಯ ಕೇಳ್ನಿಮ್ಮ ಮತವನುದ್ಧರಿಸುವ
ದೆನಲಾದಿಗಣಪನ ನಿಟ್ಟಿಡುತ । ನಮ್ಮ
ಘನ ಶಿವಮತವನು ಹೆಚ್ಚಿಸುತ । ಪೇಳಿ
ದನು ಪೋಗಿ ಜಿನ್ನನ ಶಿಕ್ಷಿಸುತ । ಬಾಯೆಂ
ದೆನಲಾಗ ಹರಹರ ಧರೆಯೊಳು ನರನಾಗಿ
ಜನಿಸಲು ನಾ ನಿಮ್ಮ ಚರಣಗಾಂಬುವೆನೆ ॥ ೮ ॥

ಒಳಹೊರಗಿರುವೆನು ಇದಕೇಕೆ ಸಂಶಯ
ಇಳೆಗಿಳಿಯೆಂದು ಅಪ್ಪಣೆಯಿವುತ । ಪೋಗಿ
ಗಳಿಲನೆ ಸೌರಾಷ್ಟ್ರದಲಿ ಪುಟ್ಟುತ । ನಮ್ಮ
ಚಲದಂಕನಾದಯ್ಯನೆಂದೆಂಬುತ । ಘನ
ಮಲಹರ ಭಕ್ತನು ಜಿತಪಾಪ ಮುಕ್ತನು
ನಲವಿಂದೆ ಧರೆಯೊಳಗಿರ್ಪ ಸಂತೋಷದಿ ॥ ೯ ॥

ಅವನಿಯೊಳ್ ಶಿವಭಕ್ತರುದರದಿ ಜನಿಸುತ
ತ್ರಿವಿಧ ಲಿಂಗದ ಕಲೆನೆಲೆ ತಿಳಿದು । ಪಂಚ
ತ್ರಿವಿಧ ಮದದ ಮೂಲಗಳನಳಿದು । ಆಗ
ತ್ರಿವಿಧ ಗುಣಂಗಳ ನೆರೆ ಕಳೆದು । ಮತ್ತೆ
ತ್ರಿವಿಧ ಮಲಂಗಳ ಸುಟ್ಟು ಬ್ರಹ್ಮವ ಕಂಡು
ತವೆ ಗುರುಕರುಣದಿಂದಿರ್ಪನಾದಯ್ಯ ॥ ೧೦ ॥

ಪೃಥ್ವಿಯೊಳೀತನು ಎಸಗು ವ್ಯವಹಾರವ
ಬಿತ್ತರಿಸುವೆನೀಗ ಭೂಮಿಯೊಳು । ಘನ
ರತ್ನನೀಲವು ಪಚ್ಚಪವಳಗಳು । ಸೆಲೆ
ಮುತ್ತುಗಳೊಜ್ರವೈಡೂರ್ಯಗಳು । ಕಾಯಿ
ಪತ್ರಿ ಲಾವಂಗವ ಲೆಕ್ಕವಿಲ್ಲದೆ ತಾನು
ಎತ್ತುಗಳ್ಬೊಡಿಸಿದನಾಗ ದಕ್ಷಿಣದೇಶಕೆ ॥ ೧೧ ॥

ಬಂದು ಶ್ರೀ ಪುಲಿಗೇರಿ ಪುರವಳಯದಾಗ
ನಿಂದು ಬೀಡಿಕೆಯನು ಇಳುಹಿಸಿದ । ಸ್ನಾನ
ಇಂದುಧರನ ಪೂಜೆ ತೀರಿಸಿದ । ಪುರ
ವಿಂದು ನೋಡುವೆನೆಂದು ನೇಮಿಸಿದ । ಭರ
ದಿಂದ ಸಿಂಗರವಾಗಿ ತ ಹೊರಟನು
ನಂದದಿ ಸೂರ್ಯಚಂದ್ರರ ಬೀದಿಯೊಳಗೆ ॥ ೧೨ ॥

ಅನಿತರೊಳೀ ಶಿವಪ್ರೇಮಿ ಬರುತಿರ್ಪ
ನನು ನೋಡಲೆನುತಲಿ ಪೇಳೆ । ಅಂದು
ಇನನಸ್ತನಾದ ಪಶ್ಚಿಮ ಚಲಕೆ । ಪದ್ಮ
ನನೆಯಾಗೆ ತಮ ಮುಸುಕಿತು ಜಗಕೆ । ತಾರೆ
ಮಿನುಗುತ ಗಗನದೋಳಲ್ಲಲ್ಲೆ ಮೂಡಲು
ವಿನಯದಿಂ ನೈದಿಲೆ ನಲಿದವಾಕ್ಷಣದಿ ॥ ೧೩ ॥

ಹರಭಕ್ತನಿವನ ಸಂದರುಶನಕೆಂದಾಗ
ತ್ವರಿತದಿ ಬಂದು ಪೂರ್ವದಿಸೆದಿ । ಹಿಮ
ಕಿರಣ ಪ್ರಜ್ವಲಿಸುತ ಸಮ್ಮುದದಿ । ಆಗ
ಸರಸಚಕೋರಗಳ್ ಸಂತೋಷದಿ । ಮುಂದೆ
ಬರುತಿರಲಾದಯ್ಯ ಕಳಸ ಕನ್ನಡಿ ತೋರ್ಪ
ಕರುಮಾಡಗಳ ನೋಡುತ್ತೈತರಲಾಗ ॥ ೧೪ ॥

ಎಲ್ಲೆಲ್ಲಿ ನೋಡಲು ಅಲ್ಲಿ ಜಿನ್ನಾಲಯ
ವೆಲ್ಲ ಜಿನ್ನರು ತುಂಬಿ ಪುರವೆಲ್ಲವು । ಮತ್ತಿ
ನ್ನೆಲ್ಲೆಲ್ಲಿ ಶಿವನಿಳಯಗಳಿಲ್ಲವು । ಇದ
ರಲ್ಲೆ ಹರನ ಭಕ್ತರಿರ ಸಲ್ಲವು । ಮನ
ದಲ್ಲಿ ಬಾಳತಿ ನೊಂದು ಮಲ್ಲಿಕಾರ್ಜುನ ಉಮೆ
ವಲ್ಲಭ ಹರಹರಯೆಂದು ಮರುಗಿದನು ॥ ೧೫ ॥

ಮುಂದಡಿಯಿಡುತ ನಿಟ್ಟಿಸಿ ಎಡಬಲದೊಳು
ಮಂದಿರ ಮೇಲುಮಂಟಪಗಳನು । ನಯ
ದಿಂದ ತೋರ್ಪ ಶೃಂಗಾರವನು । ಗಜ
ಮಂದಗಮನೆಯರ ವೃಂದವನು । ಭರ
ದಿಂದ ಕಂದರ್ಪನ ಮಾರ್ಬಲವೊಂದಾಗಿ
ಬಂದತ್ತ ನಯನಕೆ ರಂಜಿಸುತಿಹದು ॥ ೧೬ ॥

ತಂಗಾಳಿ ತೀಡಿ ತಿಂಗಳ ಮೂಡಿ ಮನಸಿಜ
ಸಿಂಗಾಡಿವಿಡದನು ಕೋಪದಲಿ । ತಾಳ
ದಂಗಾನೆ ಉಡುಪನನು ಬೈವುತಲಿ । ರಾಹು
ನುಂಗಿಬಿಟ್ಟನು ಪಾಪಿಯೆಂಬುತಲಿ । ಅವ
ನಂಗುಳವ ಸುಟ್ಟಳುಪಿದ ಶಿವನೋರ್ವಳು
ಭೃಂಗವೇಣಿಯಳು ತಾಪದಿ ಬಳಲುವಳು ॥ ೧೭ ॥

ಇಂದುಮುಖಿದಿ ಬೆಮರ್ದುಂಬಿ ನಾಸಿಕದೊಳು
ಮಂದಮಾರುತ ತೀಡೆ ಬಹುಭರದಿ । ಗಂಧ
ಚಂದನ ತಲೆಗೂಡಿ ತನ್ನುರದಿ । ಕಂಚು
ಕಿಂದು ಬಿಚ್ಚಿರೆ ಜಾರಿದಂಬರದಿ । ಅರ
ವಿಂದ ಬಾಣನ ಸಮರಂಗ ತೀರಿಸಿ ಶ್ರಮ
ದಿಂದಲಿ ಮಂದಾನಿಲನ ಬಯಸುವಳು ॥ ೧೮ ॥

ಕುಟಿಲಕುಂತಳೆ ತೀಡಿ ಕಟಿಗೆ ನಿರಿಗೆ ಬಿಗಿ
ದುಟಗೊಂಬುತವಳತಿ ಶೀಘ್ರದಲಿ। ದ್ವಯ
ಪಟುತರ ಕುಚಗಂಧ ಕೊಡಹುತಲಿ । ತನ್ನ
ತುಟಿಯ ಪಿಡಿದು ಜಗ್ಗಿ ನೋಡುತಲಿ । ನಾರಿ
ವಿಟನುರೆ ಬೈದು ಚಿಟಕ ಮುರಿವುತಲಿ ಸಂ
ಗಟದಿಂದ ತನ್ನ ಸದನಕ್ಕೈದುತಿರಲು ॥ ೧೯ ॥

ಅರವಿಂದಮುಖಿಯೆ ಬಾ ಅರುಣ ಚಂದುಟಿಯೆ ಬಾ
ಗುರುಕುಚ ತಳಿರಡಿ ಸುಗುಣೆ ಬಾರೆ । ಚಲ್ವ
ಕರಿನಡೆ ಹರಿಮಧ್ಯೆ ಜಾಣೆ ಬಾರೆ । ಚಲ್ವ
ಮರಿದುಂಬಿಗುರುಳೆ ಪ್ರವೀಣೆ ಬಾರೆ । ನಿನ್ನ
ಸರಿಯ ನಾರಿಯರುಂಟೆ ಭುವನದೊಳೆಂದೋರ್ವ
ತರುಣಿಯ ಮುನಿಸು ಸಂಬಿಸುತಿರ್ದನವನು ॥ ೨೦ ॥

ಬಲ್ಲೆನು ನಾ ನಿನ್ನ ಬಣ್ಣದ ಮಾತುಗ
ಳೆಲ್ಲ ಸಕ್ಕರೆದುಟಿ ಸವಿಯುವದು । ಕುಚ
ದಲ್ಲಿ ನಖದ ರೇಖೆಯೂರುವದು । ದ್ವಯ
ಗಲ್ಲವ ಪಿಡಿದು ಮುದ್ದಾಡುವದು । ಅವ
ಳಲ್ಲೆ ಮನಸನಿಟ್ಟು ಇಲ್ಲೆ ಬಹಿರಂಗದ
ಸೊಲ್ಲಿಲೆ ಸಾಕುಸಾಕೆಂದಳು ಮುನಿದು ॥ ೨೧ ॥

ಚಿಕ್ಕಂದು ಮೊದಲಾಗಿ ಇವಗೆ ಮೆಚ್ಚಿಕೊಂಡು
ಸಿಕ್ಕರೆ ಬಿಡು ನೀ ತಿರಸ್ಕರಿಸಿ । ಬಹು
ರೊಕ್ಕವನೀವನ ನೀನೊಲಿಸಿ । ಈಗ
ದಕ್ಕಿಸಿಕೋ ದ್ರವ್ಯ ಸತ್ಕರಿಸಿ । ಪ್ರಾಯ
ಮಿಕ್ಕಿದ ಬಳಿಕಿನ್ನು ಗಳಿಸಿಯೆ ಮುಂದಿನ್ನು
ಮಕ್ಕಳಿಗೆ ಬುದ್ಧಿ ಹೇಳುವಳ್ಮುದಿಕಿ ॥ ೨೨ ॥

ನಾರಿ ನಿನ್ನಯನದಿ ಕೆಂಪೇನೆ ಮೂಗಿನೋಳ್
ಮೇರೆ ಮೀರುತ ಗಾಳಿ ತೀಡ್ವುದೇನೆ । ನಿನ್ನ
ತೋರ ಕುಚವು ಬಿದಿಗಿ ಚಂದ್ರನೇನೆ । ಫಣಿ
ಸಾರಕುಂತಳೆ ತುಟಿಯಸಿತವೇನೆ । ಯತಿ
ಸಾರೆನ್ನೇಕಾಂತದಿ ನೆರೆದು ಬಂದುದು ದಿಟ
ಭೂರಿಕೋಪದಿ ನೀರೆ ಒಂದೆದಳಾಳಿಯನು ॥ ೨೩ ॥

ಇಂತಪ್ಪ ವೈಭವವಂತಕಾಂತಕ ಭಕ್ತ
ಸಂತಸದಿ ನೋಡುತ್ತೈತರುತಾ । ತೋರ್ಪ
ಮುಂತೊಂದು ಮಂಟಪ ರಂಜಿಸಿತು ತಾ । ಭೂಮಿ
ಕಾಂತನ ಸುತೆ ಪದ್ಮವತಿ ಕಾಣುತಾ । ಮದ
ದಂತಿಗಮನೆಯಳ ಕಾಂತಿ ವರ್ಣಿಸುವಡೆ
ಅಂತಪ್ಪ ಬ್ರಹ್ಮಗಸಾಧ್ಯವಾಗಿಹುದು ॥ ೨೪ ॥

ಅಳಿಗಿಳಿ ಕಳಹಂಸ ತಳಿರುನಳಿನ ಸುಳಿ
ಕಳಸಕನ್ನಡಿ ಸಲೆ ಕುಂತಳವು । ನುಡಿ
ಗಳು ಕಾಮಿನಿಯ ಚಲ್ವಪದಯುಗವು । ವರ
ಕಳೆಮುಖ ನಾಭಿ ಕುಚದ್ವಯವು । ನೆರೆ
ಹೊಳೆವ ಕದಪಿನಿಂದ ಕೆಳದಿಯರೊಪ್ಪಿರ್ದ
ಎಳೆ ಚಂದ್ರಧರಭಕ್ತ ಕಂಡನಾ ಕ್ಷಣದಿ ॥ ೨೫ ॥

ದ್ವಿತಿಸುತನುದರದಿ ಖತಿಯಿಂದೆ ಬಿಗಿದು ಶ್ರೀ
ಪತಿ ತನ್ನ ಅವತಾರ ಇಡಲಿಕೆಂದು । ವಸು
ಮತಿಯೊಳಗೆ ತಾವಿಲ್ಲವೆಂದು । ಸ್ವರ್ಣ
ಲತೆದೇಹಿ ಇವಳಲ್ಲಿ ಇಟ್ಟನೆಂದು । ಮಂದ
ಗತಿ ಅತಿಜ್ಞಾನ ಸೂಮತಿ ಭೂಪಸುತೆ ಪದ್ಮ
ವತಿ ಸಣ್ಣ ನಡುವು ಈ ತೆರದಿ ಶೋಭಿಸಿತು ॥ ೨೬ ॥

ವರ ಪದ್ಮವತಿಯಳ ಪರಮ ಸುಲಕ್ಷಣ
ಪರಕಿಸಲಾರೆ ಈ ಧರೆಯೊಳಗೆ । ಮತ್ತೆ
ಹರಭಕ್ತ ಭ್ರಾಂತದ ಮನದೊಳಗೆ । ಸ್ಮರ
ಸರಳು ನಡಲು ಗಾಯ ಉರದೊಳಗೆ । ಮನ
ಕರಗಿ ಅವಳ ಮುಖವೀಕ್ಷಿಸುತಿರಲಾಗ
ತರುಣಿಯಾಳಿವನ ಸಮ್ಮುಖವ ನೋಡಿದಳು ॥ ೨೭ ॥

ಚದುರೆ ಕಾಂತನ ಕಂಡು ನದರಿಕ್ಕಿ ಆ ಸಖಿ
ಬೆದರಿದೆರಳೆಯಂತೆ ಕಂಪಿಸುತ । ಆಗ
ಮದನಮೋಹದ ಕಲೆನೆಲೆಗುಬ್ಬುತ । ಬಹು
ಹದ ಮೀರಿ ತಾಪ ರೋಮಗಳೇಳುತ । ತನ
ಗೊದಗಿದ ವಿರಹಭ್ರಾಂತಿಗಳಿಂದ ತನ್ನಯ
ಸದನದೊಳಗೆ ನಿಂತು ಪೊಗಳುತಲಿಹಳು ॥ ೨೮ ॥

ಹರನುರಿಗಣ್ಣಿಂದ ಮಡಿದ ಮನ್ಮಥನೆಂಬ
ಬರಿಯ ವಚನ ತನ್ನ ರತಿಯಳನು । ಬಿಟ್ಟು
ಧರೆಯೊಳಗಿರ್ಪಂಥ ಸತಿಯರನು । ಸುಖ
ಸುರತಗೊಂಬುವೆನೆಂದು ಮನ್ಮಥನು । ಬಂದ
ಪರಿಯಿಂದಲ್ಲದೆ ಬೇರೆ ಹೊರತಿಲ್ಲವೆಂಬುತ
ಸರಸಿಜನೇತ್ರೆ ಈ ಪರಿಯೊಳಾಡಿದಳು ॥ ೨೯ ॥

ಉರ್ವಿಯೊಳೀತನು ಒಲಿಯಬೇಕಾದರೆ
ಪೂರ್ವದ ಪುಣ್ಯವಿಲ್ಲದೆ ಸಿಗನು । ಇವ
ನೋರ್ವನೆ ಸಾಕು ಸೌಭಾಗ್ಯವೇನು । ಅಳೆ
ಉರ್ವಿಸನ್ನಿಭ ಕಾಂತ ಪೇಳಲೇನು । ಈಗ
ಸರ್ವಪಾಲಿಗೆ ಬಿಟ್ಟು ಬಾರದೆ ಕರತಾರೆಂ
ದೊರ್ವಳ ಕಳುಹಿದಳವನ ಸನ್ನಿಧಿಗೆ ॥ ೩೦ ॥

ಬಂದು ಆದಯ್ಯನಿಗೊಂದಿಸಿ ಕರತಂದು
ಚಂದದಿಂದೀರ್ವರ ಹೊಂದಿರಿಸಿ । ಅಷ್ಟ
ಗಂಧದ್ರವ್ಯಗಳನೆಲ್ಲ ತಂದಿರಿಸಿ । ನಾರಿ
ಸುಂದರ ದೇಹದೊಳನುಲೇಪಿಸಿ । ಮಕ
ರಂದ ಸೂಸುವ ಪೂಮಾಲೆಗಳ್ಮುಡಿವುತ
ಕಂದರ್ಪ ಆಹವಕನುವಾದರಾಕ್ಷಣದಿ ॥ ೩೧ ॥

ಒಬ್ಬರೊಬ್ಬರ ಮುಖವ ಒಬ್ಬರೊಬ್ಬರು ನೋಡಿ
ಒಬ್ಬರೊಬ್ಬರು ತೆಕ್ಕಿಯೊಳಗವಚಿ । ಬೇಗ
ಒಬ್ಬರೊಬ್ಬರಿಗೆ ಆತುರವು ಹೆಚ್ಚಿ । ಆಗ
ಒಬ್ಬರೊಬ್ಬರು ತಾಂ ಚಂದುಟಿಯ ಕಚ್ಚಿ । ಹೀಂಗ
ಕಬ್ಬುವಿಲ್ಲನ ಕೇಳಿಯಬ್ಬರ ತೀರಿಸಿ
ಅಬ್ಜಲೋಚನೆ ಶ್ರಮದಿಂದೊರಗಿದಳು ॥ ೩೨ ॥

ಇವಳಿಗೆ ಇಷ್ಟಲಿಂಗವು ಉಂಟೊಯಿಲ್ಲವೊ
ವಿವರಿಸಿ ನೋಳ್ಪೆನೆಂದ್ಯೋಚಿಸಿದ । ಆಗ
ಯುವತಿಯ ಎದೆಮುಟ್ಟಿ ಈಕ್ಷಿಸಿದ । ಇಷ್ಟ
ತವೆ ಲಿಂಗವಿಲ್ಲೆಂದು ಮನ ಹೇಸಿದ । ಎದ್ದು
ಭವಿಯಿವಳ ಸಂಗ ಭವಕಾದೆಯ್ಯಯ್ಯೊ
ಶಿವಶಿವಯೆಂಬುತ ನಡೆದ ಬೀಡಿಕೆಗೆ ॥ ೩೩ ॥

ಮಚ್ಚ ಗಂಗಳೆಗಾಗ ಎಚ್ಚರವಾಗುತ
ಸ್ವಚ್ಛ ಪರ್ಯಂಕದೊಳಿಲ್ಲವಾತ । ಕೂನ
ಹಚ್ಚದೆ ಪೋದನು ಎನ್ನೊಳೀತ । ಇಂಥ
ನೆಚ್ಚಿದ ಕಾಂತೆಯೊಳತ್ತ ಘಾತ । ಮಾಡಿ
ಮೆಚ್ಚಿಸಿ ಅಗಲಿ ತಾ ಪೋಗುವರೆ ವಿರಹದ
ಕಿಚ್ಚಿಗೆ ಗುರಿಮಾಡಿ ಇಟ್ಟನೆಲ್ಲಕ್ಕೆ ॥ ೩೪ ॥

ಹಯೆನ್ನ ವಲ್ಲಭ ಹಾಯೆನ್ನ ಕಾಂತನೆ
ಹಾಯೆನ್ನ ಮನದ ಭಾಗ್ಯದ ಸಿರಿಯೆ । ಹಾ
ಹಾಯೆನ್ನ ಜೀವದ ಸಕ್ಕರೆಯೆ । ಹಾ
ಹಾಯೆನ್ನ ಒಲಿಸಬಲ್ಲಂಥ ದೊರೆಯೆ । ಹಾ
ಹಾಯೆಂದು ಹಂಬಲಿಸುತ ಹಳಹಳಿಸುತ
ತೋಯಜಗಂಧಿ ತಾ ಬಿದ್ದುರುಳಿದಳು ॥ ೨೫ ॥

ಆ ಕಾಂತನಿಲ್ಲದೆ ಈ ಕಾಯ ಉಳಿಯದು
ಏಕಾಂತ ತಾಪಕೆ ಮಾಡಲೇನು । ಅಯ್ಯಾ
ಈ ಕಷ್ಟ ಪೂರ್ವದ ಬರಹವೇನು । ಊರ
ಲೀ ಕೊರಳಿಗೆ ಮಾಲೆ ಹಾಕಲೇನು । ಈಕೆ
ಶೋಕವ ಸಂಬಿಸಬೇಕೆಂದು ಬಂದು ದಿ
ವಾಕರ ಮೂಡಿದ ಪೂರ್ವಪರ್ವತಕೆ ॥ ೩೬ ॥

ತಾವರೆ ನಗಲು ತಾರೆಗಳೆಲ್ಲಪೋಗಲು
ಕಾವಳ ಬಿಟ್ಟೋಡೆ ಕುಮುದಗಳು । ದುಗು
ಡಾವಿಲಾಸದಿ ಚಕ್ರವಾಕಗಳು । ನಲಿ
ದಾವಾಗ ಖಗ ಮೃಗ ಭೃಂಗಗಳು । ಭಾವೆ
ಭಾವಜರೂಪನ ಬಯಸಿ ಕಾಂಬುವೆನೆಂದು
ಕೋವಿದ ಕಾಂತನ ಬಳಿಗೆ ಸಾಗಿದಳು ॥ ೩೭ ॥

ಆ ತರುಣಿಯೇಳು ಸಂತಾಪದಿ ಬಳಲುತ
ಆತನ ಪಾದದಿ ಹಣೆಯನಿಟ್ಟು । ಇದು
ನೀತಿಯೆ ನಿನಗೆ ನಾ ಮನಸುಗೊಟ್ಟು । ಅತಿ
ಸೋತು ಬಂದವಳ ಕೂಡ್ಯಾತಕಿಷ್ಟು । ಎನ್ನ
ದಾತ ಮನ್ಮಥ ಪ್ರಖ್ಯಾತ ಭೂಮಿಯೊಳಿರ್ಪ
ದ್ಯಾತರದಯ್ಯಯ್ಯೊ ಘಾತಕವಿಧಿಯೆ ॥ ೩೮ ॥

ನಿನ್ನ ನಂಬಿದ್ದೆನು ಗನ್ನ ಘಾತಕ ಮಾಡಿ
ಇನ್ನಗಲುವರೆ ಎನ್ನೊಳನ್ಯೆ ಹೇಳು । ಕಾಂತ
ಭಿನ್ನ ಭೇದಗಳೆನಗಿಲ್ಲ ಕೇಳು । ಉಂಡ
ಅನ್ನವು ವಿಷವಾಯಿತಿನ್ನು ಏಳು । ಗುಣ
ರನ್ನ ಮೋಹನ್ನ ಸಂಪನ್ನನೆನುತಲಾಗ
ಕನ್ನೆ ಶಿರೋಮಣಿ ಕಳವಳಿಸಿದಳು ॥ ೩೯ ॥

ಕುವಲಯ ನೇತ್ರೆ ಕೇಳ್ ಭವಿ ಸಂಗಡ ನುಡಿ
ಭವಿಯ ಸಂಗಡ ಕೂಟ ಪವಡಿಸವು । ಮತ್ತೆ
ಭವಿಯ ಸಂಗಡ ಬಟ್ಟೆ ಗಮನಿಸವು । ಮೇಣ್
ಭವಿಯ ಸಂಗಡದಿ ಸಂಭೋಗಿಸವು । ಮುಂದೆ
ರವರವ ನರ್ಕವು ತಪ್ಪದು ಭವಿ ನೀನು
ಶಿವಭಕ್ತಜನ ನಮಗುಚಿತವಲ್ಲೆಂದ ॥ ೪೦ ॥

ಕಮಲಜ ಗಂಧಿ ಕೇಳ್ ಕಾರಣವೇನಿದು
ಗಮನಿಸಿ ಬಿಟ್ಟು ಹಲವು ಭ್ರಾಂತಿಯ । ಈಗ
ಮಮಕಾಂತನೆಂಬುದು ಬಿಡು ಚಿಂತಿಯ । ನಾವು
ಗಮಕಾದಿ ಪೋಪೆವೆಂಬುವ ಗ್ರಂಥಿಯ । ಉಂಟು
ನಮಗೀಗ ದಿವಸ ಸಂದಿದವೆಂಬ ವಾಕ್ಯವ
ರಮಣಿ ಶಿರೋಮಣಿ ಕೇಳಿದಳಾಗ ॥ ೪೧ ॥

ಏಕಾಂತ ಎನಗೆ ಬೇಕಿತ್ತು ನಿನ್ನೊಳು ಪ್ರಾಣ
ನಾ ಕೊಡುವೆನು ಸಟೆಯಲ್ಲ ಕೇಳು । ಎನ
ಗೆ ಕಟ್ಟು ಲಿಂಗವ ಹೃದಯದೊಳು । ಇಬ್ಬ
ರೇಕಾಗಿ ಇರುವದು ಭೂಮಿಯೊಳು । ಎಲೆ
ಭೂಕಾಂತಸುತೆ ನಿಮ್ಮ ಕುಲಜರು ಕೂಡ್ವರೆ
ಏಕಾಂತೆ ಶಿವಭಕ್ತಿ ಸುಲಬಲ್ಲ ಕೇಳು ॥ ೪೨ ॥

ವದನದ ಕುರಡಿಕುಠಾರ ಕೀಡಿಯೆಂದು ಬಿ
ಡದೆ ತನ್ನಂತೊಡಗೂಡಿದರೆ ತನ್ನ । ಪ
ಡೆದ ಭೂಮಿಯನದ ಬಯಸುವರೇನ । ನ್ನ ಪ
ಡೆದವರ್ಥಂಗಿಲ್ಲ ಕೂಡಿದರೆ ನೀ । ನು ಹಿ
ಡಿದುದ ಹಿಡಿವೆನು ಹೊರತಿಲ್ಲ ನಿನ್ನೊಳು
ಮೃಡ ಮೂರ್ತಿ ಯಾದಿಷ್ಟಲಿಂಗವ ಧರಿಸು ॥ ೪೩ ॥

ಮಂದಗಮನೆಗಾಗ ಪರಮ ಶ್ರೀಗುರು ಹಸ್ತ
ದಿಂದಲಿ ಇಷ್ಟಲಿಂಗವ ಧರಿಸಿ । ನಯ
ದಿಂದಲಿ ಬೇರೆ ಮಂದಿರ ರಚಿಸಿ । ನಿತ್ಯಾ
ನಂದದಿ ಚರತೀರ್ಥವನು ಸಲಿಸಿ । ಸುಖ
ದಿಂದ ಈರ್ವರ ಮನವೊಂದು ಬೆಚ್ಚಂತೆ
ಚಂದದಿ ಪುರದೊಳಗಿರಲು ಕೇಳಿತ್ತ ॥ ೪೪ ॥

ವರ ಪುಲಿಗೇರಿಯೊಳ್ಮೆರೆವ ಜಿನ್ನರ ಗುರು
ಬರಲಾಗ ಬಹು ಬಾಳ ಸಂಭ್ರಮದಿ । ಭೇರಿ
ಬುರುಗು ನಗಾರಿ ವಾದ್ಯದ ರವದಿ । ರಾಜ
ನರಮನೆಯೊಳು ಬಂದು ವೈಭವದಿ । ಬೇಗ
ಪರಮಾನ್ನ ಪಾಯಸ ಪಂಚಾಮೃತ ಸಹ
ಹರುಷದಿಂ ಭೋಜನಕನುವಾದರಾಗ ॥ ೪೫ ॥

ಚಂದದಿ ಭೋಜನ ಗೈವುತಿರಲು ಜಿನ್ನ
ವೃಂದಕೆ ಸಾಲದೆ ಬರಲನ್ನವು । ಮಗ
ಳಿಂದ ಮಾಡಿದ ಮಿಸಲಡಿಗೆಯನು । ಇನ್ನು
ತಂದು ನೀಡುವೆನೆಂದು ಬಲು । ದುಡುಕಿ
ಲಿಂದಲಿ ಮಗಳ ಮನೆಯ ಪೊಕ್ಕು ಭುವರ ಭರ
ದಿಂದಲಿ ಒಯ್ಯಲು ಕಡುಕೋಪಿಸಿದಳು ॥ ೪೬ ॥

ಅನಿತರೋಳಾದಯ್ಯ ಚರಮೂರ್ತಿಗಳ ಕೂಡಿ
ಮನೆಗಾಗ ಬರೆ ತನ್ನ ವನಿತೆಯಳು । ಕರ
ವನು ಮುಗಿದಾಗ ತಾ ಹೇಳಿದಳು । ಮನೆ
ಸುನಿ ಬಂದು ಹೊಕ್ಕಿತು ಈಗ ಕೇಳು ಕೆಟ್ಟ
ಬಿನಗುಮಾನವರಿವರಿರಸಲ್ಲದೈ ಸ್ವಾಮಿ
ಎನುತಲಿ ವನಜಾಕ್ಷಿ ಇನಿಯಗೆ ಪೇಳೆ ॥ ೪೭ ॥

ಆ ಮಾತು ಕೇಳುತ ರೋಮಾಂಚವುಬ್ಬುತ
ನಾ ಮತ್ತೆ ಜಿನ್ನನಿರವನು । ಕಿತ್ತು
ಗ್ರಾಮದೊಳಿವನೆಲ್ಲ ಒಡೆಸುವೆನು । ಈಗ
ಸೋಮನಾಥನ ತಂದು ನಿಲಿಸುವೆನು । ಅಯ್ಯೊ
ಈ ಮಾತು ಬಿಟ್ಟೆನಾದರೆ ಯಮಲೋಕದ
ಆ ಮಹಾಪಾತಕ ಬರಲಿ ನನಗೆಂದ ॥ ೪೮ ॥

ಇಂದೆಂಟು ದಿನದೊಳು ಇಂದುಧರನ ಕರೆ
ತಂದು ಉಂಬುವೆನೆಂದು ಶಪಥವನು । ಮಾಡಿ
ಮಿಂದು ಮಡಿಯನುಟ್ಟು ಮೂರ್ತಿಯನು । ಪೂಜೆ
ಚಂದದಿಂದರ್ಚಿಸಿ ಬೇಗವನು । ಕಂದು
ಕಂಧರ ಕಾಮಾರಿ ಹರಹರಯೆನುತ
ಮಂದಿರ ಪೊರಮಡಲಾ ವನಿತೆಯಳು ॥ ೪೯ ॥

ಬಣಗು ಜಿನ್ನನ ಕಿತ್ತು ತ್ರಿಣಯನ ನಿಲಿಸುವ
ದಣಿಯಾಗಲೆಂದು ಸೇಸೆಯನಿಟ್ಟಳು । ರತ್ನ
ಮಣಿಮಯದಾರತಿಯೆತ್ತಿದಳು । ಗುಹ
ಗಣಪರ ಜನಕನ ಸ್ತುತಿಸಿದಳು । ಒಂದು
ಕ್ಷಣಮಾತ್ರ ಆಲಸ್ಯ ಬೇಡೆಂದು ಸತಿಶಿರೋ
ಮಣಿ ತನ್ನ ಇನಿಯನ್ನ ಕಳುಹಿದಳಾಗ ॥ ೫೦ ॥

ಶ್ರೀ ಪುತ್ರಗರ್ವವಿಲೋಪರಹಿತ ಪಾಪ
ತಾಪತ್ರಹರ ಜಯ ಜಯಯೆನುತ । ಅಹ
ಗೋಫಸುತನೆ ಕಮಲಾಕ್ಷೆನುತ । ಗಿರಿ
ಜಾಪತಿ ಷಣ್ಮುಖ ಗಣಪ ಪಿತ । ಇಂದು
ಕೋಪಾಗ್ನಿನೇತ್ರ ನೀ ಗತಿಯೆಂದು ಪೊರಮಟ್ಟು
ತಾ ಪಥದೊಳಗಿಂತು ಸ್ತುತಿಸುತ ನಡೆದ ॥ ೫೧ ॥

ತೊಡೆಗಳದುರಿ ಬೆರಳೊಡೆದಾಗ ರಕ್ತ ಜೋ
ರಿಡುತಲಿ ಬಹು ಶ್ರಮದಿಂ ಸಾಗುತ । ದೇವ
ಕಡುಕಷ್ಟದಿಂ ನೀನೆ ಗತಿಯೆನುತ । ಬಾಳ
ನಡೆಗೆಟ್ಟೆರಡು ಮೊಣಕಾಲೂರುತ । ಅಡಿ
ಗಡಿಗೊಮ್ಮೆ ಮೃಡನೆ ಮೃತ್ಯುಂಜಯ ಹರನೆಂದು
ದೃಢದಿಂದೆ ಪೊಡವಿಯೊಳ್ನಡೆದನಾದಯ್ಯ ॥ ೫೨ ॥

ಹೇಳಲಿನ್ನೇನು ನಾ ಬಾಳ ಶ್ರಮದಿ ಮೊಣ
ಕಾಲೊಡೆದು ರಕ್ತ ಸುರಿಯುತಲಿ । ನೋವು
ತಾಳಲಾರದೆ ದೇಹ ಕೆಡೆವುತಲಿ । ಶಂಭು
ಭಾಳಾಕ್ಷನೆಂದು ತಾನುರುಳುತಲಿ । ಹೀಂಗ
ಏಳು ದಿವಸ ಹಗಲಿರುಳು ಪೋಗಲು ಚಂದ್ರ
ಮೌಳಿಯ ಕುರುಹನು ಕಾಣದೆಯಿರಲು ॥ ೫೩ ॥

ಘೋರ ಬಿಡುತಲಿ ಕಾಂತಾರದೊಳಗೆ ಮನೋ
ಹಾರ ನೀ ಒಲಿಯೆಂಬೊ ಸಮಯದಲಿ । ಮದ
ನಾರಿ ಬಂದನು ವೃದ್ಧಚರ ರೂಪಿಲಿ । ಎಲೊ
ದಾರು ಎಲ್ಲಿಗೆ ಪೋಪೆ ಶ್ರಮದಿಂದಲಿ । ಗಿರಿ
ಚಾರಮಣನ ಕರೆತಹುದು ನಮಗೊಂದು
ಕಾರಣವುಂಟೆಂದ ಗಮಕಾದಿ ಪೋಪೆ ॥ ೫೪ ॥

ಅಂಬುವ ನುಡಿಗೇಳಿ ಕುಂಭಿನಿಯೊಳು ಮಹಾ
ಶಂಭು ತ ನಿನಗೆಲ್ಲಿ ಸಿಲ್ಕುವನೊ । ನಿನ್ನ
ಡಿಂಬವ ಕೆಡಹಿ ನೀ ಬರುವದೇನೊ । ನನ್ನ
ಅಂಬಕದಿಂ ನೋಡಿ ಮರುಗಿದೇನೊ । ತಣ್ಣ
ನಂಬಲಿಯೆನ್ನಲ್ಲೆ ಉಂಟೀಗ ಮನುಜನೆ
ಉಂಬುಣ ಹೋಗೆಂದ ವೃಷಭವಾಹನನು ॥ ೫೫ ॥

ಏತರ ಮಾತಿದು ಮಾಡಿದ ಶಪಥಕ್ಕೆ
ನೀ ತವೆ ಆತನ ಚರಣದಲಿ । ಪ್ರಾಣ
ಘಾತವಾದರೆ ಮುಕ್ತಿ ಸ್ವರ್ಗದಲಿ । ಸೋಮ
ನಾಥನ ಬಿಡೆ ನಾನು ತಾರದಲಿ । ಉಂಬು
ವಾತುರ ಎನಗಿಲ್ಲ ಬಿಡು ಪಥಯೆಂಬುತ
ಭೂತೇಶ ಭವನಾಶನೆಂದುರುಳಿದನು ॥ ೫೬ ॥

ಮರಳಿ ನೋಡಲು ಚರ ಮಾಯವಾಗಿರಲಾಗ
ಹರನೆಂದರಿದು ಅಕಟೇನಾಯಿತು । ದ್ರವ್ಯ
ಕುರುಡ ಎಡಹಿದಂತೆನಗಾಯಿತು । ಭಾಗ್ಯ
ಕರ ಬಡವಗೆ ಸಿಕ್ಕು ಬಯಲಾಯಿತು । ಎಂಬ
ತೆರನ ತೋರಿದೆಯಯ್ಯ ಮುನಿದ್ಯಾ ಎನ್ನೊಡನೆಂದು
ಪರಿಪರಿ ಶೋಕದಿ ಮರುಗಿದ ಶರಣ ॥ ೫೭ ॥

ಕಡು ಪರದೇಸಿಯ ಹಿಡಿದು ಕಾಂತಾರದಿ
ಬಿಡುವರೆ ಶಿವ ನಿಮ್ಮ ಪದಗಳಿಗೆ । ಮನ
ಸಿಡದೆ ನಾ ಪೊರೆದೆನೆಂದು ಈಗ । ತೋರಿ
ಅಡಗಿ ಪೋದೆಯಾ ಎನ್ನ ದೃಗಗಳಿಗೆ । ದುಃಖ
ನುಡಿಗೇಳಿ ಮೃಡ ತನ್ನ ನಿಜರೂಪದಲಿ ಬಂದು
ಬಿಡುಬಿಡು ಶೋಕವೆಂದ್ಹಿಡಿದು ರಂಬಿಸಿದ ॥ ೫೮ ॥

ಬಳಲಿದೆ ಬಾರೆಂದು ಸೆಳೆದಪ್ಪಲಾದಯ್ಯ
ಒಳಿತು ಮಾಡಿದೆ ಮುನ್ನ ಕೈಲಾಸದಿ । ವಾಕ್ಯ
ಒಳಹೊರಗಿರುವೆನೆಂಬುತ ತೋರಿದಿ । ಮುಂದೆ
ಸುಳಿದಾಡಕಾಗುದೆ ನಿರ್ದಯದಿ । ಎಲೊ
ತಿಳಿದೆನು ನಾ ನಿನ್ನ ಮನದ ಸಂಕಲ್ಪವ
ಚಲದಂತೆ ಮಾಳ್ಪೆ ನೀ ನಡೆಯೆಂದ ಹರನು ॥ ೫೯ ॥

ಏಳುದಿವಸ ಹೀಂಗ ಬಾಳ ಶ್ರಮದಿ ಬಂದೆ
ನಾಳೆಗೆ ನಿಲಿಸುವೆ ಶಪಥವನು । ಪಂಥ
ಬೀಳಾಗಿ ಬರುವದು ಕೊರತೆಯೇನು । ಮುಂದೆ
ಹೇಳಯ್ಯ ಬರುವಂಥ ಗುರುತವನು । ಪುರ
ದೋಳಿರು ಅಂಧಕ ಹೆಳವನಿಗೆ ಕಣ್ಣು
ಕಾಲುಗಳ್ಬಂದುದೆ ಕುರುಹು ನೋಡೆಂದ ॥ ೬೦ ॥

ಹೀಗೆಂಬು ವಚನವ ಕೇಳಿದಾಕ್ಷಣ ಶಿರ
ಬಾಬಿ ಶಂಕರ ನಮೊ ನಮೊಯೆನುತ । ಅನು
ರಾಗದಿ ತೊಡೆಯ ಮೇಲ್ಬವಡಿಸುತ । ಇಂಥ
ನಾಗಭೂಷಣ ಬಂದ ಸೋಮನಾಥ । ನೀವು
ಬೇಗೇಳಿರೆಂದು ಜನರನು ಎಚ್ಚರಿಸುವ್ರೋಲ್
ಕೂಗಿತು ಕುಕ್ಕುಟ ಪುರದ ಮಧ್ಯದಲಿ ॥ ೬೧ ॥

ಹರನ ಮಹತ್ವವನರಿವುದಿನ್ನಾರಿಗೇ
ತೆರೆಯಲು ಮುಸುಕ ಕಂಡನು ಪುರವ । ತನ್ನ
ಅರಮನೆಯೊಳು ಬರಲಾ ಬರವ । ಕಂಡು
ತರುಣಿಯಳು ನಮಿಸೆಯೆತ್ತುತ ಶಿರವ । ಪುರ
ಹರನ ತಂದಂಥ ವೃತ್ತಾಂತವನುಸುರಿದ
ಅರಸಿಯೊಳೊಡನೆ ತಾನತಿ ಹರುಷದಲಿ ॥ ೬೨ ॥

ಮಲತ್ರಯ ಗೆಲಿದನ ಒಲಿಸಿದುದು ದಿಟ
ನೆಲದೊಳಗೀ ಸುದ್ದಿ ಬಾರಲೆಂದು । ಶಚಿ
ಲಲನೆಯೀವಂಥ ಡಂಗುರವುಯೆಂದು । ಪೂರ್ವ
ಚಲದಿ ದಿವಾಕರ ಮೂಡಿನಿಂದು । ಕಣ್ಗೆ
ಚಲುವಾಗಿ ತೋರಲು ಕೇಳಿತ್ತ ಪುಲಿಗೇರಿ
ಯಲಿ ಜಿನ್ನ ಪೂಜಕರತಿ ತವಕದಲಿ ॥ ೬೩ ॥

ವಾರಣದ ಮೇಲೆ ವಾರಿ ಪುಪ್ಪಾದಿಗ
ಳ್ಹೇರಿ ಬಂದರು ತೋರಬಸ್ತಿಯೊಳು । ಘನ
ದ್ವಾರ ಮುಚ್ಚಿರೆ ಅರೆಕದದೊಳು । ಬಲು
ಘೋರಬಡಲು ಎಲ್ಲಿ ಬರದಾಗಳು । ಪುಲಿ
ಗೇರಿಯನಾಳ್ವ ಪರೇಶನ ಬಳಿಗ್ಹೋಗಿ
ಸಾರಿದರಾಗ ಕೌತುಕದ ಸುದ್ದಿಯನು ॥ ೫೪ ॥

ಆಡಿದ ಮಾತನು ಕೇಳಿ ಪರೇಶನು
ಕೂಡಿಸಿ ಚತುರಂಗ ಮಾರ್ಬಲಲಿ । ಬಂದು
ನೋಡಿದ ಜಿನ್ನನ ಬಾಗಿಲಲಿ । ಮುಂದೆ
ತೋಡು ಮಾಡುವದೇನುಯೆಂಬುತಲಿ । ಆಗ
ಜೋಡು ಆನೆಗಳ್ಹಚ್ಚಿ ನೂಕಲೆಲ್ಲೆಲ್ಲಿ
ಕೇಡಾಗದಿರೆ ಭೂಪನಚ್ಚರಿಯ ತಾಳ್ದ ॥ ೬೫ ॥

ಬೆರಳ ಮೂಗಿನಲಿಟ್ಟು ಸಿರವನಲ್ಲಾಡಿಸುತ
ಬೆರಗಾಗಿ ಭೂವರನಾಡಿದನು । ಎಲೋ
ಹರಭಕ್ತನಾದಯ್ಯ ಪೋಗಿರ್ದನು । ಹೋಗಿ
ಅರಿದು ಬನ್ನಿರಿಯೆಂದು ಮನುಷ್ಯರನು । ಆಗ
ತ್ವರಿತಾದಿ ಕಳುಹಲು ಚರರಾಗ ಬಂದು ಆ
ತರುಣಿ ಶಿರೋಮಣಿಯಳ ಕೇಳುತಿಹರು ॥ ೬೬ ॥

ಏ ದೇವಿ ನಿನ್ನಯ ಮೋಹದ ವಲ್ಲಭನು
ಆದಯ್ಯ ಬಂದ ಹದನವ ಪೇಳು । ನಕ್ಕು
ಮೋದದಿ ಮಾತುಗಳಾಡಿದಳು । ಕಾಂತ
ಹೋದಾತ ಬಾರದೆ ನಿಂತ ಕೇಳು । ಅಂದ
ಅ ದೂತರ ಮಾತ ಕೇಳಿದಾಕ್ಷಣ ಬಂದು
ಮೇದಿನಿಪತಿಗಾಗ ಪೇಳಿದರೊಲಿದು ॥ ೬೭ ॥

ಬಾರದೆ ಈ ಪರಿ ತೊರೆದು ವಿಪರೀತ
ಸಾರೆಂದನಾದಯ್ಯ ಅರಮನೆಗೆ । ಪರಿ
ವಾರ ಸಹಿತ ಬಂದು ನೋಡುತಾಗೆ । ಮೃದು
ವಾರಣ ವಚನದಿ ನುತಿಸಲಾಗೆ । ಎದ್ದು
ಆ ರಾಜನೊಡನೆ ಬರಲು ಮುಂದೆ ಹರ ಪೇಳ್ದ
ಕೇರಿಯೊಳ್ಕಂಡನು ಹೆಳವರಂಧಕರ ॥ ೬೮ ॥

ಒಡೆಯ ಬಂದುದು ಸತ್ಯವೆಂದರಿಯುತಲವ
ರೊಡಗೂಡಿ ಅಲ್ಲೆ ದೃಢದಿ ಬರಲು । ಬಹು
ಜಡಿದು ಕಾವಟ ಬಂಧನದಿರಲು । ಹಸ್ತ
ಇಡಲಾಗ ದ್ವಾರ ತೆರದು ನೋಡಲು । ಜಿನ್ನ
ಒಡೆದು ಬಿದ್ದಿರೆ ಬೆನ್ನೊಳಡಿಯಿಟ್ಟು ಮೃಡನಿರೆ
ಮೊಡವಿಪ ಸಹ ನುಡುನಡುಗಿದರೆಲ್ಲ ॥ ೬೯ ॥

ಆ ಮಲಿಗೇರಿಯೊಳ್ಸಾಸಿರದೇಳ್ನೂರು
ಆ ಪರಜಿನ್ನವನೆಲ್ಲ ವೀಕ್ಷಿಸುತೆ ಸಹ । ಜಿನ್ನ
ಲೋಪಾಗಿ ಶಿರಬಾಗಿ ಬಿದ್ದಿರಲು । ಲಿಂಗ
ಸ್ಥಾಪನೆ ಸುಸ್ಥಿರವಾಗಿರಲು । ತ್ರಾಹಿ
ಶ್ರೀಪರಮಾತ್ಮ ನಿನ್ನಯ ಸರಿಯೆಂಬುವರ್
ಪಾಪಿಗಳ್ಳೆ ಹಹಯೆಂದನಾ ರಾಯ ॥ ೭೦ ॥

ಮನದೊಳು ಮರ್ದನವಾಗುತ ರಾಜನು
ಚಿನುಮಯಾತ್ಮಕ ಲಿಂಗ ದೇಹದಲಿ । ಧರಿ
ಸೆನುತಲಿಟ್ಟನು ಭಕ್ತಿಭಾವದಲಿ । ಪಾದ
ವನಜವ ಪಿಡಿಯಲು ಕರಣದಲಿ । ಪುರ
ಜನ ಸಹ ರಾಯನೆಲ್ಲರ ಗುರುಕರದಿಂದ
ಮನೋಹರವಾದಿಷ್ಟಲಿಂಗವ ಧರಿಸಿ ॥ ೭೧ ॥

ಧರೆಯೊಳು ಮರೆಯದೆ ಶಿವಮತ ಘನವೆಂದು
ಮೆರೆಸಿದ ಮತ್ತೆ ವೆಗ್ಗಳಿಸಿದನು । ಭೂಮಿ
ಗರಿದೆಂಬ ಮಹಿಮೆಯ ತೋರಿದನು । ಅಲ್ಲಿಂ
ದಿರದೆ ಕೈಲಾಸವ ಸಾರಿದನು । ಮಾರ
ಹರಗೆ ವಂದಿಸಲಾಗ ಕರುಣದಿಂ ತಕ್ಕೈಸಿ
ಹರುಷದಿಂ ತನ್ನಲ್ಲಿ ಇರಿಸಿದ ಶಿವನು ॥ ೭೨ ॥

ಆದಯ್ಯನ ಪುಣ್ಯಚರಿತೆಯ ಭಕ್ತಿ
ಯಿಂದೋದಿ ಬರೆದು ನೆರೆ ಪಠಿಸಿದರೆ । ಜನ
ರಾದವರೊಲಿದಿದ ಕೇಳಿದರೆ । ಮುಕ್ತಿ
ಸಾಧಿಸುವದು ದಿಟ ಭಜಿಸಿದರೆ । ಮತ್ತೆ
ಈ ಧರೆಯೊಳು ಕಾಮನಾಟದ ಪದಗಳ
ಸಾಧುಸಜ್ಜನರು ಸಾರಸದಿಂದೆ ಕೇಳಿ ॥ ೭೩ ॥

ಮಿತ್ರನ ಪುತ್ರ ಸಪಾತ್ರ ಹರತ್ರಯ
ನೇತ್ರ ಪರಮಗೋತ್ರ ಮಂದಿರವ । ಶತ
ಪತ್ರಜಸ್ತೋತ್ರ ಅಮೃತಕರವ । ಪುಣ್ಯ
ಕ್ಷೇತ್ರ ಶ್ರೀಕುಂದಗೋಳದಲಿರುವ । ಗುರು
ಪುತ್ರನಡಿಭೃಂಗ ಸುಪುತ್ರ ಬಸವಲಿಂಗ
ಧಾತ್ರಿಯೊಳೊರೆದ ಚರಿತ್ರೆಯ ಕೇಳಿ ॥ ೭೪ ॥

– ಜೀ.ಜೋ.ದುಂದುಮೆ ಪದ

***

೩. ಇಳಿಹಾಳ ಬೊಮ್ಮಯ್ಯ

ಸೂಚಕ ಪದ್ಯ : ಇಳಿಹಾಳ ಬೊಮ್ಮಯ ಹೊಲಗೆಲಸ ಕಾಯಕವ
ನಲುಮೆಯಲಿ ಮಾಡಿ ದಾಸೋಹ । ಹರಸೇವೆ
ಸಲಿಸಿ ಲಿಂಗದೊಳು ಬಯಲಾದ ॥ ೧ ॥

ಜನಕೆ ನಿನ್ನೀ ಹಾಡು ಕೆನೆಹಾಲು ಇದ್ದಂತೆ
ತೆನೆಹಾಲು ನಿನಗೆ ಒಕ್ಕಲಿಗೆ । ಇಂಪಾಗಿ
ಮನಸೋತು ಮಲಗೆ ಶಿವಲೋಕ ॥ ೨ ॥

ಮೂತಾಳಕೂರಿಗಿಗೆ ಯಾತರದು ಹಂಗಿಲ್ಲ
ಭೂತಾಯಿ ಬೆಳೆಯೆ ಒಕ್ಕಲಿಗ । ಜಗದೊಳಗೆ
ಕೋತುಳ್ಳ ಮೇಳಿ ಬಲಗೊಂಡ ॥ ೩ ॥

ಕಡೆಯ ಬಲಕಿನ ತಾಳ ಎಡೆಯಾತು ಅರಸನಿಗೆ
ಎಡಗಡೆಯ ತಾಳ ಪಶುಪಕ್ಷಿ । ಜೀವನಕೆ
ನಡುವಿನ ತಾಳ ರೈತನಿಗೆ ॥ ೪ ॥

ಒಂದು ತಾಳದ ಬೆಳೆಯ ಬಂದವರಿಗಿಲ್ಲೆನ್ನ
ಮುಂದು ಕೊಡುಗೈಯು ಒಕ್ಕಲಿಗ । ನಾಡೊಳಗೆ
ಹೊಂದಿ ದಾಸೋಹ ಶಿವಮತಕೆ ॥ ೫ ॥

ಮಿಕ್ಕುಳಿದ ಅನ್ನವನೆ ನಕ್ಕುಣ್ಣುತೊಕ್ಕಲಿಗ
ಜಕ್ಕೇನೊ ಬನಕೆ ನಾಡೊಳಗೆ । ಸಂಪತ್ತು
ಒಕ್ಕುದಕೆ ಬಂಟ ಹೌದೇನೊ ॥ ೬ ॥

ಮಿಕ್ಕ ಮಿಗಜಾತಿಗಳು ನಕ್ಕುಂಡು ಹಾಡುವವು
ಸಕ್ಕರಿಯ ಕಣಿಯು ಒಕ್ಕಲಿಗ । ಜನಕಾಡಿ
ಮುಕ್ಕಿದರು ಮರೆಯ ಕಾಯಕವ ॥ ೭ ॥

ಜಗದೊಳಗೆ ಕಾಯಕವ ನಗುನಗುತ ಮಾಡುವನು
ಮಗುವಾಗಿ ಸತತ ಒಕ್ಕಲಿಗ । ಹೊಲಗೆಲಸ
ಹಗಲಿರುಳು ಕೇಳೊ ದಾಸೋಹ ॥ ೮ ॥

ದೊಡ್ಡ ಒಕ್ಕಲಿಗಾಗಿ ಕಡ್ಡಾಯ ಹೊಲಗೆಲಸ
ಸಡ್ಡೊಡೆದ ರೈತ ಬೆಳೆಯುದಕೆ । ಶಿವಮತಕೆ
ಬೊಡ್ಡಿ ಬೊಮ್ಮಯ್ಯ ನಾಡೊಳಗೆ ॥ ೯ ॥

ಕಳ್ಳರಿಗೆ ಹೊಳುವಿಲ್ಲ ಸುಳ್ಳರಿಗೆ ತಳವಿಲ್ಲ
ಗೊಳ್ಳು ಮಾತಿಗದು ಸದರಲ್ಲ । ಇಳಿಹಾಳ
ಹಳ್ಳಿಯೊಳು ಹುಟ್ಟಿ ಬೊಮ್ಮಯ್ಯ ॥ ೧೦ ॥

ಮಳೆಯೆರಡು ಸೆಳಕಾಗಿ ಬಿಳಿಜೋಳ ಕಡಲಿಗಳು
ಬೆಳಸಾಗಿ ಭೂಮಿ ನಗುತಿರಲು । ಬೊಮ್ಮಯ್ಯ
ಗಳಿಕೆ ಬಳಸಿದನು ಕಾಯಕಕೆ ॥ ೧೧ ॥

ಇಳಿಹಾಳ ಹೊಳೆದಂಡೆ ಬೆಳೆವ ಕಣಜದ ಭೂಮಿ
ಕಳಿಸುವರು ಶಿವಗೆ ಎಡೆಮಾಡಿ : ದಾಸೋಹ
ಗಳಿಸಿ ಹೆಸರಾತು ಶಿವ ಪದವ ॥ ೧೨ ॥

ಮೆರೆದ ಪೆಮ್ಮಡಿರಾಯ ತರದೆವಾಡಿಯ ಗೆದ್ದು
ಹಿರಿದಾತು ಹಿಗ್ಗಿ ನಾಡಂದು । ತೆಂಕಣಕೆ
ಹರಿಯುವಗೆ ರೈತ ಬೊಮ್ಮಯ್ಯ ॥ ೧೩ ॥

ಮೆಚ್ಚಿ ಪೆಮ್ಮಡಿರಾಯ ಕೆಚ್ಚೆದೆಯ ಬೊಮ್ಮನಿಗೆ
ಇಚ್ಛಿಸಿದ ಭೂಮಿ ವತನಾಗಿ ಒಪ್ಪಿಸಲು
ನೆಚ್ಚಿ ರೈತಾಗಿ ನಡಕೊಂಡ ॥ ೧೪ ॥

ತೆರಿಗೆ ಅರಸಗೆ ತೆತ್ತು ಹರುಷದಲಿ ಬೊಮ್ಮಯ್ಯ
ಕರೆಕರೆದು ಊರ ರೈತರನು । ಹುದುವಿನಲಿ
ಹುರುದುಂಬಿ ನಡೆಸಿ ಹೊಲಗೆಲಸ ॥ ೧೫ ॥

ಒಂದಕ್ಕೆ ಎರಡಾಗಿ ಚೆಂದಾಗಿ ಮಳೆಬೆಳೆಯು
ಬಂದಿಳಿತು ಸಿರಿಯು ಹೊಲದೊಳಗೆ । ಬೊಮ್ಮಯ್ಯ
ಕಂದಾಯ ಕೊಟ್ಟು ಪಾಲ್ಗೊಟ್ಟು ॥ ೧೬ ॥

ಬಂದ ಸಿರಿ ಸಂಪತ್ತ ತಂದೆಂದು ಬಗೆಯದಲೆ
ನೊಂದಿಸದೆ ಕೊಡುವ ರೈತರಿಗೆ । ಬೊಮ್ಮಯ್ಯ
ಹೊಂದಿ ದಾಸೋಹ ನಡೆಸಿದ್ದ ॥ ೧೭ ॥

ಪ್ರಸಾದವೆ ಶಿವಲಿಂಗ ಪ್ರಸಾದವೆ ಶಿವಪೂಜೆ
ಪ್ರಸಾದವೆ ನಿತ್ಯ ಕಾಯಕವು । ಶರಣರಿಗೆ
ಪ್ರಸಾದವೆ ನೋಡು ಶಿವಲೋಕ ॥ ೧೮ ॥

ಮಾತಿನೊಳು ದಾಸೋಹ ನೀತಿಯೊಳು ದಾಸೋಹ
ಭೂತದಯೆ ನಿತ್ಯ ದಾಸೋಹ । ಬೊಮ್ಮಯ್ಯ
ಮೂತೆರದಿ ಮಾಡಿ ಜಂಗಮಕೆ ॥ ೧೯ ॥

ಪ್ರಸಾದಿ ಬೊಮ್ಮಯ್ಯನಿಗೆ ಕಸವರವೆ ಕಸವಾತು
ಹೊಸ ರಾಸಿ ತುಂಬಿ ಕಣಸೂಸಿ । ದಾಸೋಹ
ಹಸಗೂಸು ಹಾಲ ಕುಡಿದಂತೆ ॥ ೨೦ ॥

ಆಚಾರ ಐದರೊಳು ನೀಚೆಂಬ ಮಾತಿಲ್ಲ
ತೋಚುವದು ಜನಕೆ ಲಿಂಗಮತ । ಮಂದಿರವು
ಊಚೆಂಬ ಸದರು ಪರಮತಕೆ ॥ ೨೧ ॥

ನಿತ್ಯಕೆಲಸಕ ಬೊಮ್ಮ ಸತ್ಯ ಸೇವಕನೆಂದು
ಚಿತ್ತದಲಿ ಸದಾ ಶಿವಲಿಂಗ । ಗಣವೆಂಬ
ಉತ್ತಮಾಚಾರ ಪಾಲಿಸುತ ॥ ೨೨ ॥

ಕಾಯಕಡೆಗಾಣುವದು ಮಾಯೆ ಮನಗಾಣುವದು
ಜೀಯ ತಾನೆಂದು ಮರೆಯುವದು । ಜಗದೊಳಗೆ
ಧ್ಯೇಯವೆಂದರಿತು ಬೊಮ್ಮಯ್ಯ ॥ ೨೩ ॥

ತಾನೆಂಬ ಗುರುತರಿಯ ನಾಣಿ ತಾನೆಂದರಿಯ
ತಾಣ ತನಗಿಲ್ಲ ಜಗದೊಳಗೆ । ನಂಬುವದೆ
ಹಾನಿ ಈ ಕಾಯವೆಂದಾಡಿ ॥ ೨೪ ॥

ಮಣ್ಣ ಕಾಯವು ಕೇಳೊ ಮಣ್ಣಾಗಿ ಹೋಗುವದು
ಸಣ್ಣಾಗಿ ಸವಿಸಿ ಜಂಗಮಗೆ । ದಾಸೋಹ
ಕಣ್ಣೊಂದೆ ಸಾಕು ಕಾಯಕಕೆ ॥ ೨೫ ॥

ಬೊಮ್ಮಯ್ಯ ಬಲುಮೆಯಲಿ ಗುಮ್ಮ ಶಿವಶರಣಾಗಿ
ಹುಮ್ಮಸದಿ ದುಡಿದು ಶಿವಮತಕೆ । ದಾಸೋಹ
ಒಮ್ಮನದಿ ಮಾಡಿ ಹೆಸರಾದ ॥ ೨೬ ॥

ದಿನಹೋಗಿ ಬೆಳಸಾಗಿ ದಿನ ಬಂತು ಬರಗಾಲ
ಕೊನೆಗಾಲ ಲೋಕ ಮುಳುಗುದಕೆ । ಶಿವಮತಕೆ
ಅನುಗಾಲ ಬೆಳಕು ಹಬ್ಬುದಕೆ ॥ ೨೭ ॥

ಕುನ್ನಿ ಮನುಜರು ಹುಟ್ಟಿ ಮುನ್ನ ತಂದೆಯ ಮರೆತು
ಗುನ್ನೆಮಾಡಿದರು ಶಿವಮತಕೆ । ಶಿವನೋಡಿ
ಸುಣ್ಣ ಕುದ್ದಂತೆ ಕಿಡಿಕಾರಿ ॥ ೨೮ ॥

ಪರಮತವು ಮಾಡಿರುವ ಮರಗನ್ನು ಕಮರಿಸಲು
ಹರನ ಸಿಟ್ಟಾತೊ ಬರಗಾಲ । ನರಲೋಕ
ಹುರಪಳಿಸಿ ಬಿದ್ದು ಸುಳ್ಳಡಗಿ ॥ ೨೯ ॥

ಕೂಳಿಲ್ಲದೆ ಜನಬಿದ್ದು ಹಾಳಾತು ಇಳಿಹಾಳ
ಗೂಳೇವ ಕಟ್ಟಿ ಹೊರಗಡಿಯ । ಸೇರಿದರು
ಗೋಳುಂಡು ಸೊರಗಿ ನರಲೋಕ ॥ ೩೦ ॥

ತುಂಬಿ ಹರಿಯುವ ಹೊಳೆಯು ಸಿಂಬಿಯಾಯಿತು ಬತ್ತಿ
ಕಂಬನಿಯ ಸುರಿಸಿ ನೀರಡಿಸಿ । ಪಶುಪಕ್ಕಿ
ಇಂಬು ಬೇಡಿದುವು ಮುಖವೆತ್ತಿ ॥ ೩೧ ॥

ಕೊರಲು ಕೂಗನು ಕೇಳಿ ಹರಗಾತು ಎಚ್ಚರಿಕೆ
ಮರುಕ ಎದೆತುಂಬಿ ಶಿವಲಿಂಗ । ಸುರಿಸಿದನು
ಮರಮಳೆಯು ಬಿದ್ದು ಜನಹಿಗ್ಗಿ ॥ ೩೨ ॥

ಕಾದ ಕಬ್ಬಿಣ ಮೇಲೆ ಹೋದಂತೆ ಮಳೆಯಾತು
ಸೇದಿ ನೀರುಂಡು ಬಿರುಕಡಗಿ । ಭೂದೇವಿ
ಕಾದು ಅರಜಳಕೆ ಹಸಿ ಆರಿ ॥ ೩೩ ॥

ಮರುದಿನವೆ ಬೊಮ್ಮಯ್ಯ ಹೊರಗಡಿಗೆ ಬೀಜಗಳ
ತರಹೋಗಿ ಬರುವ ಸಮಯದೊಳು । ಹಸಿಯಾರಿ
ಅರಜಳಕೆ ಭೂಮಿ ಕುದಿತಿರಲು ॥ ೩೪ ॥

ಮಳೆಯಾಗಿ ಸಿಗಲಿಲ್ಲ ಒಳಹಸಿಯು ಬಿತ್ತುದಕೆ
ಜಳಕಾರಿ ಹಸಿಯು ತಳಕಾತು । ಯೋಚಿಸಿದ
ಒಳೆ ನೆನಿಸಿ ಬೀಜ ಬಿತ್ತೋಣ ॥ ೩೫ ॥

ಬಿಳಿಜೋಳ ಕಡಲೆಗಳ ಬೆಳತನಕ ನೆನೆಬಿಟ್ಟು
ಬೆಳಕಾಗಿ ಬೀಜ ಬುಟ್ಟಿಯೊಳು । ಅವಸರದಿ
ಹೊಲಕೊಯ್ದು ಬೊಮ್ಮ ಬಿತ್ತುದಕೆ ॥ ೩೬ ॥

ಬರಗಾಲ ಭೂಮಿಯೊಳು ಎರವಾತು ನೀರೂಟ
ಪರವುತದ ಕಂಬಿ ಅಯ್ಯಗಳು । ಹಸುವಾಗಿ
ಬರುತಿರುವ ಬುಟ್ಟಿ ಬೊಮ್ಮನಿಗೆ ॥ ೩೭ ॥

ಕರುಣಿಸೆಲೆ ದಯವಂತ ಕೊರಗುವೆವು ಕಂಗೆಟ್ಟು
ಹರಭಕ್ತರೆಮಗೆ ಊಟಿಲ್ಲ । ನೆರವಾಗು
ಪರವುತದ ಕಂಬಿ ಕಾಯಕಕೆ ॥ ೩೮ ॥

ಬುಟ್ಟಿಯೊಳಗಿನ ಬುತ್ತಿ ತಟ್ಟನೆಡೆ ಮಾಡೆಮಗ
ಕಟ್ಟಿಹುದು ಕಲ್ಯಾಣ । ಒಕ್ಕಲಿಗ
ಸಿಟ್ಟಾಗಬೇಡ ಬೇಡಿಕಿಗೆ ॥ ೩೯ ॥

ಶರಣ ಬೊಮ್ಮನ ಕರುಣೆಕ ಹರಿಯಿತು ಕೇಳಿ
ಎರಡೊಂದು ಮನಕೆ ಬಗೆಯದೆಲೆ । ಬೊಮ್ಮಯ್ಯ
ಹರುಷದಲಿ ಬೀಜ ಹಂಚಿದನು ॥ ೪೦ ॥

ಹಸಿದ ಪರಸಿಗೆ ಬೊಮ್ಮ ತುಸು ತುಸುನೆ ಹಂಚಿದನು
ಹಸನಾಗಿ ಬೀಜ ಬುಟ್ಟಿಯೊಳು । ಐದುಳಿದು
ಒಸಗೆ ಹುಲುಸೆಂದು ಹೇಳಿದವು ॥ ೪೧ ॥

ಪಂಚಮುಖ ಮಾದೇವ ಪಂಚಬೀಜಗಳಾಗಿ
ಸಂಚಾಗಿ ಬಂದು ಬೊಮ್ಮನಾ । ಕಾಯಕವ
ಮಿಂಚಿ ತೋರಿಸಲು ಜಗದೊಳಗೆ ॥ ೪೨ ॥

ನೆನೆಗಾಳ ತಿಂದರೂ ಮನದೂಟದಂತಾತು
ನೆನೆನೆನೆದು ಪರಸಿ ಉಘೆಯಾಡಿ । ಬೊಮ್ಮಯ್ಯ
ಅನುಗಾಲ ನೀಡೊ ದಾಸೋಹ ॥ ೪೩ ॥

ಕಂಬಿಕಾವಡಿಯೊಡೆಯ ಇಂಬುಗೊಡು ಮಲ್ಲಯ್ಯ
ನಂಬಿ ಕೂಡಿದರೆ ಓಗೊಡುವಿ । ಗಿರಿಯೊಳಗೆ
ಜಂಬೆಲ್ಲಿ ನಿನ್ನ ಶರಣರಿಗೆ ॥ ೪೪ ॥

ಒಂದೆ ಬೀಜದ ಬಿಂದು ತುಂಬೊಡೆದು । ಬೆಳೆಬರಲಿ
ಎಂದಿಗೂ ರಾಸಿ ಸವೆದಿರಲಿ । ಬೊಮ್ಮನಿಗೆ
ಎಂದ್ಹರಸಿ ಸಾಗಿ ಪರವುತಕೆ ॥ ೪೫ ॥

ನಿನ್ನ ಬೀಜಗಳೈದು ಮುನ್ನ ತಂದೆಯೆ ಕಾಣೊ
ನನ್ನಿಯಲಿ ನಿನಗೆ ಎಡೆಯೆಂದು । ಕೈಮುಗಿದು
ಬಣ್ಣ ಬೇಡೆನಗೆ ಎದೆಯೊಳಗೆ ॥ ೪೬ ॥

ಉಳಿದೈದು ಬೀಜಗಳ ಇಳಿಹಾಳ ಬೊಮ್ಮಯ್ನ
ಹೊಲದೊಳಗೆ ಹೂಳಿ ಅಲ್ಲೊಂದು । ಇಲ್ಲೊಂದು
ಎಳೆಮಗುವಿನಂತೆ ಮನೆಸೇರಿ ॥ ೪೭ ॥

ಕೋರು ರೈತರು ಸೇರಿ ಕಾರಿದರು ಬಿರುನುಡಿಯ
ಮೀರಿ ನಮ್ಮಾತ ಬೊಮ್ಮಯ್ಯ । ಬೀಜಗಳ
ತೀರಿಸಿದ ಹಸಿದ ಜಂಗಮಕೆ ॥ ೪೮ ॥

ಭೂಮಿ ಬಿತ್ತದೆ ಬಂದ ಸಾಮಿ ಕಾಯೆನ್ನೆಂದ
ಪಾಮರನು ಬೊಮ್ಮ ಏನರಿಯ । ನೆಂದೆನುತ
ಕಾಮಿಗಳು ಕಾಡಿ ಪಾಲ್ಬೇಡಿ ॥ ೪೯ ॥

ಬೀಜಗಳ ಕೊಡು ನಮಗೆ ಮೋಜಲ್ಲ ಬೊಮ್ಮಯ್ಯ
ಮಾಜಿ ಕಾಲಲ್ಲಿ ಬರಗಾಲ । ಬರೆಕೊಡಲು
ಮಾಜುವದೆ ಹುಣ್ಣು ಹಸಿವೆಯದು ॥ ೫೦ ॥

ಹೋನಾರ ನಿನಗಿಲ್ಲ ಹಾನಿಯಾಯಿತು ನಮಗೆ
ಸಾನ ತಿರಿದುಂಡ ಗತಿ ಬಂತು । ಬೊಮ್ಮಯ್ಯ
ತಾಣೆಲ್ಲಿ ಬೇರೆ ಹೋಗುದಕೆ ॥ ೫೧ ॥

ನಾಣಿ ಬೊಮ್ಮನು ಕೇಳಿ ಹೀನರೈತರಿಗಂದ
ಗಾಣ ಬಾಳಿನೊಳು ತಲೆಯಿಟ್ಟು । ಮರುಗಿದರೆ
ಗೋಣು ಮುರಿಯದಲೆ ಉಳಿಯುವದೆ ॥ ೫೨ ॥

ದಾನ ಮಾಡಲು ಜನಕೆ ಹಾನಿಯಾಗುವದುಂಟೆ
ಮೀನವೆದುರೀಸಿ ಸೋತಂತೆ । ಮಾನವನು
ಹೀನಾಗಿ ಅರಿತು ಸತ್ತಂತೆ ॥ ೫೩ ॥

ಹಟಬೇಡ ದಾನಕ್ಕೆ ಕಠಿಣ ಕಾಲದೊಳೆಂದ
ಸಟೆಯುಂಟೆ ಜನಕೆ ಜಗದೊಳಗೆ । ರೈತರಿಗೆ
ಕಟುಕೆದೆಯ ದಾನ ನೀಡುದಕೆ ॥ ೫೪ ॥

ಮಾಟ ಜಗದೊಳು ಶಿವನು ಆಟ ಹೂಡಿಹನಯ್ಯ
ಪಾಟ ತಪ್ಪದೆಲೆ ಜಗದೊಳಗೆ । ಶಿವಕೊಟ್ಟ
ಊಟ ಎಡೆಮಾಡಿ ಉಣದಿರಕೆ ॥ ೫೫ ॥

ನಮ್ಮದೆನ್ನುವ ಬದುಕು ಸೊಮ್ಮು ಶಿವನದು ಕಾಣೊ
ಹುಮ್ಮಸವು ಬೇಡ ರೈತರಿಗೆ । ಕೈಲಾಸ
ಒಮ್ಮನದಿ ನೀಡೆ ಕೈಮುಂದೆ ॥ ೫೬ ॥

ಶಿವಕೊಟ್ಟ ಕಾಲಕ್ಕೆ ಭವದೊಳಗೆ ನೀಡುಣ್ಣೊ
ಕವಣಿಗಲ್ಲಂತೆ ಜಾರಿದರೆ । ಜೀವನಕೆ
ನೆವಣಿ ಬತ್ತುಣಿಕಿ ಸತ್ತಿಂದ ॥ ೫೭ ॥

ಅಂತ್ಯಕಾಲಕೆ ನೆನಸಿ ಅಂತಕನ ಎಡೆಯಾಗಿ
ಎಂತು ಮರುಗಿದರೆ ಏನುಂಟು । ಎಲೆಮನುಜ
ಜಂತರದ ಇರಸು ಮುರಿದಂತೆ ॥ ೫೮ ॥

ಅರಿತರಿತು ಜಗದೊಳಗೆ ಹೊರತಾಗಿ ಇರಬೇಕು
ಎರವಾಗು ದಾನಮಾಡುದಕೆ । ಎಲೆ ರೈತ
ಹಿರೆಬುತ್ತಿ ನಿನಗೆ ಕೈಲಾಸ ॥ ೫೯ ॥

ಬೋರಗಲ್ಲಿನ ಮೇಲೆ ನೀರ ಎರೆದಂತಾತು
ಹಾರಿಬಿದ್ದಂತೆ ಕೋಗಿಲೆಯು । ಕಾಗಿಯೊಳು
ಮೀರಿ ಬೊಮ್ಮನಿಗೆ ಬಿರಿನುಡಿದು ॥ ೬೦ ॥

ಕೇಳಲಾರದೆ ನುಡಿಯ ಕೀಳೆಂದು ಕರೆಯದಲೆ
ಬೋಳೆ ತಲೆಗೊಟ್ಟು ಇದ್ದಂತೆ । ಬೊಮ್ಮಯ್ಯ
ತಾಳಿ ಬಿರುನುಡಿಯ ಇರುತಿರಲು ॥ ೬೧ ॥

ಪಂಚಬೀಜಗಳೆಲ್ಲ ಸಂಚರಿಸಿ ಹೊಲದೊಳಗೆ
ಮೆಂಚಿಗೆಯ ನಿಲವು ಬೆಳೆಬಂದು ನಗುತಿರಲು
ಸಂಚಿತವು ಪುಣ್ಯ ಬೊಮ್ಮನದು ॥ ೧೨ ॥

ಹಿಂದೆ ಬೆಳೆಯದ ಬೆಳೆಯು ಮುಂದು ಬಾರದ ಬೆಳೆಯು
ಎಂದು ಘನರಾಶಿ ಕಣತುಂಬಿ । ಬೊಮ್ಮಯ್ಯ
ಅಂದದಲಿ ಕರೆದು ಪಾಲ್ಕೊಟ್ಟು ॥ ೧೩ ॥

ಬೆಚ್ಚಿ ಬಿದ್ದಿತು ಜನವು ಅಚ್ಚರಿಯ ಮಡಲೊಳಗೆ
ಮೆಚ್ಚಿದರೆ ಶಿವನು ಕಡಿಮೇನು । ಜಗದೊಳಗೆ
ಹೆಚ್ಚುವದು ದೀಪ ಶರಣರದು ॥ ೧೪ ॥

ಬೆಳೆಬಂದ ದವಸದೊಳು ಅಳೆದು ಅರಸಗೆ ಕೊಟ್ಟ
ಉಳಿದುದನು ಹಂಚಿ ರೈತರಿಗೆ । ಬೊಮ್ಮಯ್ಯ
ಕಳಸಾದ ಭಕ್ತಿ ಶಿವಪದಕೆ ॥ ೧೫ ॥

ತನ್ನ ಪಾಲಿನ ಬೆಳಸ ನನ್ನಿಯಲಿ ದಸೋಹ
ಇನ್ನು ಜನದೊಳಗೆ ಯಾರುಂಟು । ಬೊಮ್ಮಯ್ಯ
ನಿನ್ನ ಶಿವಭಕ್ತಿ ಶಿವಗಂಗೆ ॥ ೧೬ ॥

ನಡೆಸಿದನು ದಾಸೋಹ ಹೊಡೆಯಾಗಿ ಶಿವಭಕ್ತಿ
ಅಡುವಾತು ಬೀಜ ಹೊಸಮತವು । ಜಗದೊಳಗೆ
ಬುಡವಾತು ಶಿವನ ಮಂಟಪಕೆ ॥ ೧೭ ॥

ಬೊಮ್ಮಯ್ಯ ನಿನ ಭಜನೆ ಹೆಮ್ಮೆಯಲಿ ಜನಮಾಡಿ
ನೆಮ್ಮದಿಯ ಶರಣ ಶಿವಗೆಂದು । ಶಿವಲೋಕ
ಹುಮ್ಮಸದಿ ಹರಸಿ ಕೊಂಡಾಡಿ ॥ ೧೮ ॥

ಈಶ ಮೆಚ್ಚೊಲಿಯುದಕೆ ದಾಸೋಹ ಶಿವಮಂತ್ರ
ಮಾಸಿದವು ವೇದಮಂತ್ರಗಳು । ಜಗದೊಳಗೆ
ಲೇಸಾತು ಶಿವನ ಶರಣರಿಗೆ ॥ ೧೯ ॥

ಇರುತಿರುತ ಬೊಮ್ಮಯ್ಯ ಹರಸೇವೆ ಸಲ್ಲಿಸುತ
ಅರಿತು ಲಿಂಗದೊಳು ಬಯಲಾದ । ಭೂಲೋಕ
ಗುರುಭಜನೆ ಮಾಡಿ ಗುಡಿಕಟ್ಟಿ ॥ ೨೦ ॥

ತೇರು ವರುಷದೊಳೊಮ್ಮೆ ಮೀರಿ ದಾಸೋಹೊಮ್ಮೆ
ಹಾರುವರು ಸಹಿತ ಮಾಡುವರು । ಇಳಿಹಾಳ
ಮಾರಹರ ಭಕ್ತ ಬೊಮ್ಮನಿಗೆ ॥ ೭೧ ॥

ಇಳಿಹಾಳ ಬೊಮ್ಮಯ್ಯ ಹೊಲಗೆಲಸ ಕಾಯಕವ
ನಲುಮೆಯಲಿ ಮಾಡಿ ದಾಸೋಹ । ಹರಸೇವೆ
ಸಲಿಸಿ ಲಿಂಗದೊಳು ಬಯಲಾದ ॥ ೭೨ ॥

ನಿನ್ನ ಹೆಸರಿಲೆ ಹಂತಿ ಹೊನ್ನಮುತ್ತಿನ ರಾಸಿ
ಹಣ್ಣಾದ ಮನಸಿನೊಕ್ಕಲಿಗ । ಒಕ್ಕುವನು
ಕನ್ನೆ ಶಿವಭಕ್ತಿ ದಾಸೋಹ ॥ ೭೩ ॥

ಹಂತಿಯದು ಹಾಡೆಂದು ಪಂತಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲೆ ಬೊಮ್ಮಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೭೪ ॥

ಶರಣು ಶರಣೆಂಬುವೆವು ಪರಣ ಹಾರುವ ತನಕ
ಕರುಣಿಸಿರಿ ಶರಣ ಬೊಮ್ಮಯ್ಯ । ನಮಗಿನ್ನು
ಹರಸರಿ ಹುಲುಸು ಹುಲ್ಲುಲ್ಲಿಗೂ ॥ ೭೫ ॥

ಕೃತಿ : ಕನ್ನಡ ಜಾನಪದ ಗೀತಗಳು

***

೪. ಕಂಬಳಿ ನಾಗಿದೇವ

ಕಲ್ಯಾಣ ಊರಾಗ ಕಂಬಳಿ ಮಠದಾಗ
ಕಂಬಳಿ ನಾಗಿದೇವ ಶರಣರು ಶಿವಲಿಂಗಬನ್ನಿರೆ ॥ ೧ ॥

ಕಂಬಳಿ ನಾಗಿದೇವ ಅವರೆಂತ ಶರಣರು
ಧರುಮದ ಮೂರುತಿ ಎನಿಸ್ಯಾರೆ ಶಿವಲಿಂಗ ಬನ್ನಿರೆ ॥ ೨ ॥

ಹೊತ್ತ ಹೊಂಡಾಕ ಎದ್ದಾರ ಜಳಕ ಮಾಡ್ಯಾರ
ಲಿಂಗದ ಪೂಜೆ ನಡಸ್ಯಾರ ಶಿವಲಿಂಗ ಬನ್ನಿರೆ ॥ ೩ ॥

ಲಿಂಗದ ಪೂಜೆಯು ನಡಸ್ಯಾರ ನಾಗಿದೇವ
ಪೂಜೆ ನೋಡಲಾಕ ಶಿವ ಬಂದ ಶಿವಲಿಂಗ ಬನ್ನಿರೆ ॥ ೪ ॥

ಪೂಜೆಯ ಮುಗಸ್ಯಾರ ಕಾಯಕ ನಡಸ್ಯಾರ
ಕುರಿ ಉಣ್ಣಿಲಿ ಕಂಬಳಿ ನೇಯ್ದಾರ ಶಿವಲಿಂಗ ಬನ್ನಿರೆ ॥ ೫ ॥

ಎರಡದಿನಕ್ಕೊಂದು ಕಂಬಳಿ ನೇಯ್ದಾರ
ಭಕ್ತರ ಓಣ್ಯಾಗ ಮಾರ್‍ಯಾರ ಶಿವಲಿಂಗ ಬನ್ನಿರೆ ॥ ೬ ॥

ಕೊಂಡಿಯ ಮಂಚಣ್ಣ ಕಂಬಳಿ ಕೇಳುತ್ತಾರೆ
ಉಂಬಳಿ ಕೊಡುತ್ತಿವಿ ಕಂಬಳಿಗೆ ಶಿವಲಿಂಗಬನ್ನಿರೆ ॥ ೭ ॥

ಉಂಬಳಿ ನನಗ್ಯಾಕ ಸಿಂಬಳ ಸುರದ್ಹಾಂಗ
ಕಾಯಕನನಗ ಎದುರಲಿ ಶಿವಲಿಂಗ ಬನ್ನಿರೆ ॥ ೮ ॥

ಕಸಕೊಂಡು ಹೊಂಟಾರ ಕೈಯಾನ ಕಂಬಳಿ
ಪರಿಯಿಂದ ಹೇಳ್ಯಾರ ಕೇಳಿಲ್ಲ ಶಿವಲಿಂಗ ಬನ್ನಿರೆ ॥ ೯ ॥

ಮನಿಗರ ಒಯ್ದಾರ ಕಂಬಳಿ ಹಾಸ್ಯಾರ
ಮಡದಿಗಿ ಕರೆದು ತೋರ್‍ಯಾರ ಶಿವಲಿಂಗ ಬನ್ನಿರೆ ॥ ೧೦ ॥

ಇಟು ಚಂದ ಕಂಬಳಿ ನಿಮಗೆಲ್ಲಿ ಸಿಕ್ಕಾದ
ಏಟು ದುಡ್ಡ ಕೊಟ್ಟಿರಿ ನೀವಿದಕ ಶಿವಲಿಂಗ ಬನ್ನಿರೆ ॥ ೧೧ ॥

ದುಡ್ಡಿನ ಮಾತೆಲ್ಲಾ ಆಮ್ಯಾಲ ಇರಲೇಳ
ಕೂಡೋಣ ಬಾರಾ ಇದರಮ್ಯಾಲ ಶಿವಲಿಂಗ ಬನ್ನಿರೆ ॥ ೧೨ ॥

ಗಂಡಹೆಂಡತಿ ಇಬ್ಬರು ಅದರ ಮ್ಯಾಲ ಕೂಡಟ್ಟಗೆ
ಮೈಯೆಲ್ಲಾ ಬೆಂಕಿ ಹತ್ತಿದ್ಹಾಂಗ ಶಿವಲಿಂಗ ಬನ್ನಿರೆ ॥ ೧೩ ॥

ಮಡದಿಯು ಅನತಾಳ ಖರೆ ಖರೇ ಹೇಳಬೇಕರಿ
ಯಾರದು ಕಂಬಳಿ ಕದ್ದಿರಿ ಶಿವಲಿಂಗ ಬನ್ನಿರೆ ॥ ೧೪ ॥

ತೊದಲುತ್ತಾ ತೊದಲುತಾ ಮಂಚಣ್ಣ ನುಡಿತಾನ
ಕಂಬಳಿ ನಾಗಿದೇವನ ಹೆಸರದು ಶಿವಲಿಂಗ ಬನ್ನಿರೆ ॥ ೧೫ ॥

ತಡಮಾಡಿಲ್ಲ ಮಡದಿಯು ಕೈಯಾಗ ಹಿಡದಾಳ
ಓಡುತ್ತಾ ಮಠಕ್ಕ ನಡದಾಳ ಶಿವಲಿಂಗ ಬನ್ನಿರೆ ॥ ೧೬ ॥

ಶರಣರ ಕಾಲಮುಂದ ಕಂಬಳಿಇಟ್ಟಾಳ
ಕೈಜೋಡಿಸಿ ತಪ್ಪಾಯ್ತು ಅನತಾಳ ಶಿವಲಿಂಗಬನ್ನಿರೆ ॥ ೧೭ ॥

ತಪ್ಪಾಯ್ತು ಅನ್ನಟಗೆ ಮೈಯಾನ ಉರಿನಿಂತು
ಗಂಡಗ ತಂದು ನಿಲಸ್ಯಾಳ ಶಿವಲಿಂಗ ಬನ್ನಿರೆ ॥ ೧೮ ॥

ಮುಂದಿನ ದಿನಮಾನಕ ಪತಿ ಪತ್ನಿ ಇಬ್ಬರು
ಅವರಿಗೆ ತಿಳದಾರ ಗುರುಯೆಂದು ಶಿವಲಿಂಗ ಬನ್ನಿರೆ ॥ ೧೯ ॥

ಶಿವಲಿಂಗ ಬನ್ನಿರಿ ಶಿವಶಿವ ಎನ್ನಿರಿ
ಶಿವಶರಣರ ಕೊಂಡಾಡಿರೆ ಶಿವಲಿಂಗ ಬನ್ನಿರೆ ॥ ೨೦ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

೫. ಕಿನ್ನರಿ ಬೊಮ್ಮಯ್ಯ

ನಂದಾನ ಬನವೇ ಮುಂದ ಹೂವಿನ ಬನವೇ ॥ ಪ ॥

ಗುಡ್ಡದ ಬೊಮ್ಮೈನ ಗುಡಿಯಾರು ಕಟುಶ್ಯಾರೋ
ಭಾರಂಬಿತನಕ ಏ ಬಿಗಸ್ಯಾರೋ
ನಂದಾನ ಬನವೇ ಮುಂದ ಹೂವೀನ ಬನವೇ ॥ ೧ ॥

ಏರಲಾರದ ಗುಡ್ಡ ಏರ್‍ಯಾರೊ ಬೊಮ್ಮಯ್ಯ
ಏರಿ ನೋಡ್ಯಾರೋ ತನ್ನ ಪರಸೀನ
ನಂದಾನ ಬನವೇ ಮುಂದ ಹೂವೀನ ಬನವೇ ॥ ೨ ॥

ಅಪ್ಪನ ಪೋಳ್ಯಾಗ ಇಪ್ಪತ್ತು ಒಲಿಹೂಡಿ
ಎಣ್ಣೋಳಿಗ್ಯಾಗ್ಯಾಗ ಏ ಬೆಳತನಕ
ನಂದಾನ ಬನವೇ ಮುಂದ ಹೂವೀನ ಬನವೇ ॥ ೩ ॥

ಅಪ್ಪಗ ಹೋಗಲಾಕ ಇಪ್ಪಿಯ ಹೂವ ಬೇಕೋ
ಬಟ್ಟಲ ಘುಂಬಾ ಏ ಹಣ್ಣಬೇಕೋ
ನಂದಾನ ಬನವೇ ಮುಂದ ಹೂವೀನ ಬನವೇ ॥ ೪ ॥

ಅಪ್ಪ ಬೊಮ್ಮೈನ ಶಿಖರದ ಗುಡಿಮ್ಯಾಲ
ಚುಕ್ಕಿ ಕಂಡೇನು ಏ ಪರಶಿವನೇ
ನಂದಾನ ಬನವೇ ಮುಂದ ಹೂವೀನ ಬನವೇ ॥ ೫ ॥

ಗುಡ್ಡದ ಬೊಮ್ಮೈನ ಗುಡಿಯೆಲ್ಲಾ ಭಂಗಾರ
ಹಾಸಗಲ್ಲೆಲ್ಲಾ ಏ ಹವಳಾಗೋ
ನಂದಾನ ಬನವೇ ಮುಂದ ಹೂವೀನ ಬನವೇ ॥ ೬ ॥

ಹುಮ್ನಾಬಾದಿಯ ಮುಂದ ಮಾತಿನ ಹಡಿಕೇಳ
ಆಪಿನಗ್ಹರಿವಾ ಏ ತಿಳಿ ನೀರೊ
ನಂದಾನ ಬನವೇ ಮುಂದ ಹೂವಿನ ಬನವೇ ॥ ೭ ॥

ಆಪಿನಾಗ ಹರಿವಾ ತಿಳಿನೀರ ತಕ್ಕೊಂಡು
ಅಪ್ಪ ಬೊಮ್ಮೈನ ಏ ಝಳಕಾಕ
ನಂದಾನ ಬನವೇ ಮುಂದ ಹೂವೀನ ಬನವೇ ॥ ೮ ॥

ಏಳೇಳ ಬೊಮ್ಮಯ್ಯ ಎಷ್ಟೊತ್ತ ಮಲಗೀದಿ
ಹಾಲತಂದೀನಿ ಏ ಅಭಿಷೇಕ
ನಂದಾನ ಬನವೇ ಮುಂದ ಹೂವೀನ ಬನವೇ ॥ ೯ ॥

ಹಾಲನೇ ತಂದೀನಿ ಅಭಿಷೇಕ ನನ ಮನಿಯ
ಬಾಲನ ಖಳವಿದ ಏ ಭಜನೀಗಿ
ನಂದಾನ ಬನವೇ ಮುಂದ ಹೂವೀನ ಬನವೇ ॥ ೧೦ ॥

ಕಲ್ಯಾಣ ಕಡಿಮಠ ಖಾಂಡ ಮಾಡ್ಯಾರ ನೇಟ
ಸಾವಿರಕ್ಕಿ ಚೀಲ ಏ ಸರಿಲಿಲ್ಲೋ
ನಂದಾನ ಬನವೇ ಮುಂದ ಹೂವೀನ ಬನವೇ ॥ ೧೧ ॥

ಸಾವಿರಕ್ಕಿ ಚೀಲಾ ಸರಿಲಿಲ್ಲೋ ಬೊಮ್ಮಯ್ಯ
ಧರಿಮ್ಯಾಗಿನ ಬೆಲ್ಲಾ ಏ ಉಳಿಲಿಲ್ಲೋ
ನಂದಾನ ಬನವೇ ಮುಂದ ಹೂವೀನ ಬನವೇ ॥ ೧೨ ॥

ಬಸವ ಭಂಡಿಯನೇರಿ ಶಿವನು ನಂದಿಯನೇರಿ
ಪಾರ್ವತಿದೇವಿ ಏ ರಥವೇರೋ
ನಂದಾನ ಬನವೇ ಮುಂದ ಹೂವೀನ ಬನವೇ ॥ ೧೩ ॥

ಪಾರ್ವತಿದೇವಿ ರಥವೇರಿ ಬರುವಾಗ
ರೇವಣಸಿದ್ಧ ಏ ನವಲೇರೋ
ನಂದಾನ ಬನವೇ ಮುಂದ ಹೂವೀನ ಬನವೇ ॥ ೧೪ ॥

–ಶ್ರೀ ರಾಚಯ್ಯ ಮಠಪತಿ

***

ಬ್ರಹ್ಮೇಶ್ವರ (ಬೊಮ್ಮಯ್ಯ)

ಏಳು ಮಹಾಜ್ಞಾನಿ ಶಿವಾ
ಯೋಗಿ ಬ್ರಹ್ಮೇಶ್ವರಾ ॥ ಪ ॥

ತಾಳಮೃದಂಗ ನಾದ
ಎಚ್ಚರಾಗೋ ಬ್ರಹ್ಮೇಶ್ವರ
ಏಳು ಮಹಾಜ್ಞಾನಿ ಶಿವಾ
ಯೋಗಿ ಬ್ರಹ್ಮೇಶ್ವರಾ ॥ ೧ ॥

ಮಂತ್ರಶಕ್ತಿಗಳು ಮಹಾ
ಸ್ವಾಮಿ ಶ್ರೀ ಪ್ರಭು ಮಯಾ
ಏಳು ಮಹಾಜ್ಞಾನಿ ಶಿವಾ
ಯೋಗಿ ಬ್ರಹ್ಮೇಶ್ವರ ॥ ೨ ॥

ಲಿಂಗಾಂಗ ಸಮರಸವ
ಸಂಗೀತ ಪಾಡುತ
ಸಂಗನ ಶಿವಶರಣರ ಮ್ಯಾಳ
ಲಿಂಗದಾಟಿದು ಕೇಳಿ
ಏಳು ಮಹಾಜ್ಞಾನಿ ಶೀವಾ
ಯೋಗಿ ಬ್ರಹ್ಮೇಶ್ವರ ॥ ೩ ॥

–ಶ್ರೀ ರಾಚಯ್ಯ ಮಠಪತಿ

***

ಬೊಮ್ಮಯ್ಯನ ಹಾಡು

ಹರಗುರು ಸ್ಮರಿಸುವೆ
ಮುಕ್ತಿ ಮಾಡು ಬೊಮ್ಮಯ್ಯ
ಗುರು ಬೊಮ್ಮಯ್ಯನ
ಎಷ್ಟು ವರ್ಣಿಸಲಿ ॥ ೧ ॥

ಎಷ್ಟು ವರ್ಣಿಸಲಿ
ಭಾಳಂತಃಕರಣ ನಿಮ್ಮಲ್ಲಿ
ಭಾಳಂತಃಕರಣ ನಿಮ್ಮಲ್ಲಿ
ಪಾಪಕರ್ಮ ನಮ್ಮಲ್ಲಿ
ಪಾಪಕರ್ಮ ನಮ್ಮಲ್ಲಿ
ಪರಿಹಾರ ಮಾಡದು ನಿಮ್ಮಲ್ಲಿ ॥ ೨ ॥

ದುಡ್ಡಿಲ್ಲ ದುಗ್ಗಣಿಲ್ಲ
ಊದ ಉದಖಡ್ಡಿಯನಿಲ್ಲ
ಹರಗುರು ಸ್ಮರಸುವೆ
ಮುಕ್ತಿ ಮಾಡೊ ಬೊಮ್ಮಯ್ಯ ॥ ೩ ॥

ಬೇರನಿಲ್ಲದ ಗಿಡಕ
ತಾರತಂತಿಯ ಕಟ್ಟಿ
ತಾರತಂತಿಯ ಬಿಗಸಿ
ಹರಗುರು ಸ್ಮರಿಸುವೆ
ಮುಕ್ತಿ ಮಾಡೊ ಬೊಮ್ಮಯ್ಯ ॥ ೪ ॥

ಹೆಂತಾ ಮಹಾತ್ಮಿಕರು ನೀವು
ಹಿಂತಾ ಹಳ್ಳಿಗೆ ಬಂದು
ಹೆಂತಾ ಹೆಂತಾ ನಿಂದ್ಯಾಕರ
ನಂಬಿಗುಳ್ಳೊ ಬೊಮ್ಮಯ್ಯ
ಗುರುಬೊಮ್ಮಯ್ಯನ
ಎಷ್ಟು ವರ್ಣಿಸಲಿ ॥ ೫ ॥

–ಶ್ರೀ ರಾಚಯ್ಯ ಮಠಪತಿ

***

ಶಿವಶರಣ ಕಿನ್ನರಿ ಬೊಮ್ಮಯ್ಯ

ಸರ್ವದೈವಕ ಶಿರವ ಬಾಗಿ ಕರವ ಮುಗಿದು ಹೇಳುವ ನಿಂತು
ಶಾರದೆ ಸ್ಮರಿಸಿ ಸಾರುವೆ ಕಿನ್ನರಿ ಬೊಮ್ಮಯ್ಯನ ಕಥಾ
ಶಿವಾಚಾರ ಶೀಲಸಂಪನ್ನ ಶಿವನ ಪೂಜಿಸುವ ಭಕ್ತ
ಶಿವನಿಗೆ ತನು ಮನವೊಪ್ಪಿಸಿ ಶಿವನಕೂಡಿ ಆದನು ಸನ್ಮುಕ್ತ ॥

ಸಂಗೀತ ವಿದ್ಯೆಯ ಇಂಗಿತ ತಿಳಿದು ಇಂಪಾದ ಕಿನ್ನರಿ ಬಾರಿಸುತ
ಲಿಂಗ–ಜಂಗಮ–ಗುರುವಿನ ಪೂಜಿಸಿ ಭಕ್ತಿಲೆ ನಡೆಯುತ
ಗಾನಲೋಲನಾಗಿ ಧ್ಯಾನಿಸಿ ಜಂಗಮರಿಚ್ಚೆಯ ತೀರಿಸುತ
ಅನ್ನ ವಸ್ತ್ರ ದಾನ ಮಾಡಲು ಅವನ ಆಸ್ತಿಯು ತೀರಿತ ॥

ಚಾಲ:
ಇದ್ದ ಆಸ್ತಿಯೆಲ್ಲ ಹೋಯ್ತಂತ ಆಗಲಿಲ್ಲ ಭ್ರಾಂತ
ಮನಸು ಮಾಡಿ ಶಾಂತ ಆನಂದದಿಂದ ಶಿವನ ಒಲಿಸಿ ಗಾಯನದಿಂದ

ಶಿವನೊಲಿದು ಕೊಡುತಲಿರೆ ಹಣ ತಂದು ಅಡಿಗೆ ಮಾಡಿ
ಜಂಗಮಭಕ್ತಿ ಪ್ರೀತಿಯಲಿ ಮಾಡಿ ಮೋದದಿ ಬೊಮ್ಮಯ್ಯ
ದಿನಗಳೆಯುವನಾ ॥
ಕಲ್ಯಾಣದಲ್ಲಿಯ ಹೆಸರನೊಂದು ಬಲ್ಲಿದ ಬಸವ ಎಂಬುದನಂದು
ನಾಲ್ಕು ಕಡೆಯಿಂದ ಕೇಳಿ ಹೊರಟ ತನ್ನ ಊರಿಂದ

ಏರ:
ಇಷ್ಟಲಿಂಗದಲ್ಲಿ ಕಂಡ ಬೊಮ್ಮಯ್ಯನು
ಶ್ರೇಷ್ಠ ಬಸವನನು ಹುಡುಕುತ ॥ ॥೧ನೇ ಚೌಕ ॥

ಕಲ್ಯಾಣ ಪಟ್ಟಣದ ಎಲ್ಲ ಜಂಗಮರ ಮಧ್ಯ ಬೊಮ್ಮಯ್ಯ ತಾನಿರುತ
ಬಲ್ಲಿದ ಶರಣರ ಬಳಗದ ನಡುವೆ ಕಾಲವ ಕಳೆಯುತ
ಕೆಳಗಿನ ಓಣಿಯ ಸೂಳಿಯೊಬ್ಬಳು ವಿಟನಕೂಡ ಸರಸವಾಡುತ
ಸೂಳಿ ಅಂತಾಳ ವಿಟ ಪುರುಷನಿಗೆ ಮಾರಿ ಹಬ್ಬ ಮಾಡೋಣ ಅಂತ ॥
ಸೂಳಿಯ ಮಾತ ಕೇಳಿ ಹೊಂಟಾನೋ ಕುರಿಯನೊಂದ ತರಬೇಕಂತ
ಹೇಳಿದಷ್ಟು ಬೆಲೆಯನಿತ್ತು ತಂದನು ಕುರಿಯ ಜಗ್ಗಾಡುತ್ತ ॥

ಚಾಲ:
ಊರ ಹೊರಗ ಇತ್ತ ಒಂದು ಗುಡಿ ಬೊಮ್ಮಯ್ಯ ಧ್ಯಾನ ಮಾಡಿ
ಸಹಜ ಕುತಿದ್ದಾ ಬಾಗಿಲ ತೆರೆದು ತ್ರಿಪುರಾಂತಕಾ ಎಂಬ ದೇವರದ
ಆ ಕುರಿಯು ಸಾವಿಗೆ ಹೆದರಿ ಒದರತಾದ ಚೀರಿ ।
ಅತ್ತಿತ್ತ ಓಡಿ ಹೌಹಾರಿ ಗುಡಿಯೊಳಗ ಹೋಗಿ ಸೇರ್‍ಯಾದ ।
ವಿಟಪುರುಷ ಬೆನ್ನ ಹತ್ತ್ಯಾನ ಗುಡಿಯ ಹೊಕ್ಕಾನ
ಕುರಿಯ ಹಿಡಿದು ಮನಸಿನಾಗ ಅಂದಾ ಆಯುಷ್ಯ ಮುಗಿತು ನಿನ್ನದ

ಏರ:
ಬೆನ್ನಿಗೆ ಬಿದ್ದಾದಂತ ಕಿನ್ನರಿ ಬೊಮ್ಮಯ್ಯ ಹೋಗಿ
ಹಿಡಿದಾನ ಕುರಿ ಬಿಡುವದಿಲ್ಲ ಅಂತ ॥ ॥೨ನೇ ಚೌಕ ॥

ವಿಟ ಪುರುಷನು ಬಲು ದಿಟದಿಂದ ನುಡಿದನು
ಹಿಡಿದ ಕುರಿಯ ನೀ ಬಿಡು ಅಂದ ॥
ಶ್ರೇಷ್ಠ ಶರಣನಾದ ಕಿನ್ನರಿ ಬೊಮ್ಮಯ್ಯ ಸ್ಪಷ್ಟ ಬಿಡುವದಿಲ್ಲ ನಾ ಅಂದ ॥
ಸತ್ಯ ಅಹಿಂಸೆಯ ತತ್ವವ ತಿಳಿದ ಸತ್ಯ ಶರಣನ ಮಾತೊಂದ ॥
ಸ್ತುತ್ಯ ಬಸವ ಸ್ತೋತ್ರವ ಮಾಡುತ ಬೊಮ್ಮಯ್ಯ ಹೇಳ್ಯಾನ ವಚನ ಒಂದ
ದಯವಿಲ್ಲದ ದರ್ಮವಾವುದಯ್ಯ ಎಂದ ॥
ಮರಣದ ಭಯದಿಂದ ಮೊರೆಹೊಕ್ಕ ಕುರಿಯ ಬಿಡುವದಿಲ್ಲ ನಾ ಎಂದೆಂದ
ದುರಾಸೆಯಿಂದ ದುಡ್ಡು ಬೇಡಿದರ ಬೇಡಿದಷ್ಟು ಕೊಡುವೆನು ಅಂದ ॥

ಚಾಲ:
ಬೊಮ್ಮಯ್ಯ ಅಂದ ಮಾತ ಕೇಳಿ ವಿಟನು ಕೋಪ ತಾಳಿ
ಕುರಿಗೆ ಹೇಳಿದ ಸಾವಿರ ಹೊನ್ನ ಬೊಮ್ಮಯ್ಯ ಕೊಟ್ಟಾನ ॥
ಆ ವಿಟನು ಹಿಗ್ಗಿ ಮನಸಿನಲಿ ಹೋಗ್ತ ದಾರಿಯಲಿ ಕುರಿಯ ಕೊಂಡಾನ
ಸಾವಿರ ಹೊನ್ನ ಸೂಳಿಗಿ ಒಯ್ದು ತೋರಸ್ಯಾನ ॥
ರೂಪಾಯಿ ಗಂಟ ನೋಡಿ ಸೂಳಿ ಎಲ್ಲಾ ಕತಿ ಕೇಳಿ ದೇವರ
ಹೆಸರುಗೊಂಡು ಕುರಿಯ ನೀನು ಮಾರಿದಿ ಹ್ಯಾಂಗ ಅದನ ॥

ಏರ:
ಇತ್ತ ಬೊಮ್ಮಯ್ಯನು ಲಿಂಗಮುದ್ರೆಯನೊತ್ತಿ
ಇದ್ದನು ಕುರಿಯನು ಪ್ರೀತಿಸುತ ॥೩ನೇ ಚೌಕ॥

ಕೂಡಲೆ ಸೂಳಿಯ ಬಿಡದೆ ಬಯ್ಯತಾಳ ಬೇಗನೆ ಈಗ ಹೋಗಂತ
ಸಿಡಿಲಿ ನಿನ್ನನು ಸುಡಲಿ ನೆತ್ತಿಯ ಬಡಿಲಿ ಅದೇ ಕುರಿ ಬೇಕಂತ
ಬಲ್ಲಂಗ ಬಸವಿಯರೆಲ್ಲರು ಕೂಡಿ ಕಳದಾರೊ ನನ್ನಯ ಕಿಮ್ಮತ್ತ
ಕೊಲ್ಲಲು ತಂದ ಕುರಿಯ ಮಾರಿದರ ದೇವಿಗೆ ಯೋಗ್ಯ ಹ್ಯಾಂಗ ಆದೀತ॥
ಸಿಟ್ಟಿಗೇರಿ ತಾ ಸೂಳಿ ಒಗಿತಾಳ ರೂಪಾಯಿದೇನ ನನಗ ಕಿಮ್ಮತ್ತ
ಗಟ್ಟಿ ಹೇಳುತಾಳ ತಂದರ ಒಳಿತು ಇಲ್ಲದಿದ್ದರ ಬರಬ್ಯಾಡಂತ ॥

ಚಾಲ:
ತ್ರಿಪುರಾಂತಕ ದೇವರ ಗುಡಿ । ಬಂದ ಲಗು ಮಾಡಿ ।
ಹಿಡಿದ ಲಿಂಗ ಮುದ್ರೆ
ಬತ್ತಿದ ಕುರಿಯನು । ಬೊಮ್ಮಯ್ಯ ದಿಟ್ಟಸಿ ನೋಡ್ಯಾನ ॥
ಹಿಡಿದಿದ್ದ ಕುರಿಯ ಬಿಡು ಅಂದಾ । ಮುಂದೆ ನೋಡಂದಾ ।
ದೇವರ ಮುದ್ರೆಯ ತೋರಿಸಿದಾ । ಬೊಮ್ಮಯ್ಯ ಸಿಟ್ಟಿಗೇರಿದಾ ॥
ಇಷ್ಟಮಾತ ಕೇಳಿ ಆ ವಿಟ । ಬಿಡಲಿಲ್ಲ ತನ್ನಯ ಹಟ
ಸಿಟ್ಟು ತಡೆಯದೆ ಥಟ್ಟನೆದ್ದು ಕತ್ತಿ ಹಿಡಿದಾನ ।
ಬೊಮ್ಮಯ್ಯ ಅವತಾರ ತಾಳ್ಯಾನ ।

ಏರ:
ವೀರಭದ್ರನಂತೆ ಅವತಾರ ತಾಳಲು
ವಿಟನ ರುಂಡ ಸಿಡಿದು ಹೊರಬಿತ್ತು ॥ ॥೪ನೇ ಚೌಕ ॥

ವಿಟಪುರುಷನ ಘಟ ಪುಟದು ಬಿದ್ದಿತೋ
ಗುಡಿಯ ಹೊರಗ ಗೋಡೆಗೆ ಸಿಡಿದ ।
ಅಷ್ಟರಲ್ಲಿ ವಿಟಪುರುಷನು ಮಡಿದ ಸುದ್ದಿಕೇಳಿ ಸರ್ವರೂ ನೆರೆದ ॥

ಊರೊಳಗಿನ ಜನರೆಲ್ಲರೂ ಕೂಡಿ ರಾಜನಲ್ಲಿ ಹೋಗಿ ಫಿರ್ಯಾದೆ
ಕಿನ್ನರಿ ಬೊಮ್ಮಯ್ಯ ಕಟ್ಟಿದ ಕುರಿಯನು ವಿಟನು ಕೇಳಲು ಸಾಯಿಸಿದ ॥
ಬಿಜ್ಜಳ ಸಹಿತ ಎಲ್ಲರೂ ಬಂದರು ಹಳಿಯಲು ಬಸವನ ಮನೆಯಿಂದ
ನಿಜ ಸಂಗತಿಯನು ಅರಿಯದೆ ಬಸವನು ಗುಡಿಯೆಡೆ ಓಡುತ ತಾ ಬಂದ॥
ತಿಳಿಯದೆ ಎಲ್ಲರು ಬಲ್ಲಂತೆ ಬೈದರು ಇದೇನು ಬಸವನ ಶರಣರು
ಕಳೆದ ಕುರಿಯನು ಹುಡುಕಲು ಬಂದ ವಿಟನನು ಕೊಂದನು ಈ ಶರಣ ॥

ಚಾಲ:
ಬೊಮ್ಮಯ್ಯ ಶರಣ ಕೇಳಿ । ಶಾಂತಿಯನು ತಾಳಿ ।
ಆದ ಕತೆಯನು ಹೇಳಿ ನಿಂತ ಕೈಮುಗಿದು ।
ತ್ರಿಪುರಾಂತಕನೇ ಸಾಕ್ಷಿ ಅಂದ ॥
ಲಿಂಗಕ್ಕ ಕೇಳ್ತಾನ ಸ್ವತಃ ಭಕ್ತ ಮಹೇಶ ಸಾಕ್ಷಿಯ ನೀ ಹೇಳೋ ।
ಸ್ವತಃ ಬಂದು ಇದ್ದದ್ದು ಸತ್ಯ ವೀರಭದ್ರಾ
ಏಳು ಸಮುದ್ರ ತುಳಿಯುವಂತೆ ಎದ್ದ ।
ಸಾಕ್ಷಿ ಹೇಳಿದ ಖರೇ ಇದ್ದದ್ದ ॥
ಅವಾಗ ಎಲ್ಲರು ಗಾಬರಿಯಾಗಿ ನಿಂತರು ಶಿರಬಾಗಿ
ಬಸವ ಶರಣರ ಮಹಿಮೆ ಹೆಚ್ಚೆಂದು ।
ಕಾಲು ಹಿಡಿದಾರೊ ಬೊಮ್ಮಯ್ಯನದು ।

ಏರ :
ಕೂಸ ಶರಣನು ದಾಸನಾಗಿ ಸದಾ
ಶರಣರ ಸ್ಮರಣೀಯ ಮಾಡುತ್ತ ॥೫ನೇ ಚೌಕ॥

– ಕವಿ : ಶ್ರೀ ಶರಣಪ್ಪ ವಾಲಿ
ಕೃತಿ : ಶರಣ ಸ್ಮೃತಿ

***

ಕಿನ್ನರಿ ಬೊಮ್ಮಯ್ಯ

ಸೂಚಕ ಪದ್ಯ :– ಕಿನ್ನರಿಯ ಬೊಮ್ಮಯ್ಯ ಸನ್ನುತದ ತಂದ್ಯಾದ
ಚೆನ್ನಬಸವಾದಿ ಗಣಗಳಿಗೆ । ಕಲ್ಯಾಣ
ಹೊನ್ನಗಳಸಾದ ಶಿವ ಗುಡಿಗೆ ॥ ೧ ॥

ಹೂಸೂರ ಹಳ್ಯಾಗೆ ಹೊಡಿದನು ಕಾಯಕದ
ಮಾಡಿ ಜಂಗಮಕೆ ದಾಸೋಹ । ಸಿರಿವಂತ
ನೀಡಿ ಶಿವಭಕ್ತಿ ಶಿವ ಮತಕೆ ॥ ೨ ॥

ಹಣವಂತ ಬೊಮ್ಮಯ್ಯ ಗುಣವಂತ ಶರಣಯ್ಯ
ರಣವಂತ ವೀರ ಶಿವ ಮತಕೆ । ನಾಡೊಳಗೆ
ತನುವಂತದಾತ ಪಶುಗಳಿಗೆ ॥ ೩ ॥

ಎಲ್ಲ ವಿದ್ದೆಯ ಕಲಿತ ಬಲ್ಲವನು ಬೊಮ್ಮಯ್ಯ
ಹೊಲ್ಲಾದ ಹಣವ ಕಳಕೊಂಡು । ಶಿವನಕ್ಕು
ಚೆಲ್ವ ಕಿನ್ನರಿಯ ಕೈಗಿಟ್ಟ ॥ ೪ ॥

ಸಂಗೀತ ವಿದ್ಯೆಯದು ಸಂಗಡದೆ ಬಂದದ್ದು
ಲಿಂಗಿಗಳ ಹಿರಿಮೆ ಹಾಡುತಲಿ । ಕಲ್ಯಾಣ
ಲಿಂಗ ಮಂಟಪವ ಕೂಡಿದನು ॥ ೫ ॥

ಕಿನ್ನರಿಯ ಬಾರಿಸುತ ಕಿನ್ನರಿಯ ರಾಗದಲಿ
ನನ್ನಿಯಲಿ ಹಾಡಿ ಶಿವಲೀಲೆ । ಶರಣರಿಗೆ
ಕಿನ್ನರಿಯ ಬೊಮ್ಮ ಮಂಟಪಕೆ ॥ ೬ ॥

ಅನುಭಾವ ಮಂಟಪಕೆ ಅನುಭಾವಿ ಬಸವಣ್ಣ
ಅನುನಯದಿ ಮೂಲ ಚಾಲಕನು । ಶಿವಮತಕೆ
ತನುಮನವ ಧನವನೆರದಿದ್ದ ॥ ೭ ॥

ಬೊಮ್ಮನಿಗೆ ಬಸವಯ್ಯ ಒಮ್ಮನದಿ ನಮಿಸಿದನು
ಸಮ್ಮತಿಸಿ ಇತ್ತು ಶಿವಗಣವು । ಶಿವ ತತ್ವ
ಬೊಮ್ಮ ಕುಡಿಸಿದನು ಶರಣರಿಗೆ ॥ ೮ ॥

ತಂದೆ ಬೊಮ್ಮಯ್ಯೆಂದು ಮಂಟಪವು ಕರೆಯುತಿರೆ
ಚೆಂದ ವಚನಗಳ ಕಿನ್ನರಿಯು । ಹಾಡುವದ
ಜಂಗಮರು ಕೇಳಿ ತಲೆದೂಗಿ ॥ ೯ ॥

ನೂರೊಂದು ತಲಗಳಲಿ ನೂರೊಂದು ಶರಣರಿಗೆ
ಸಾರುವನು ತತ್ವ ಪ್ರಭುದೇವ । ಚೆನ್ನಬಸವ
ಮೀರಿದರು ನಾಣ ದೀವಟಿಗೆ ॥ ೧೦ ॥

ಅತ್ತ ಮಡಿವಾಳಯ್ಯ ಇತ್ತ ಕಿನ್ನರಿ ಬೊಮ್ಮ
ಸುತ್ತ ಶರಣರಲಿ ಹರಳಯ್ಯ । ನಡುನಟ್ಟ
ಮುತ್ತಿನಾ ಜ್ಯೋತಿ ಗುರುದೇವ ॥ ೧೧ ॥

ಶಿವ ಕೊಟ್ಟ ಕಿನ್ನರಿಯ ಭವದೊಳಗೆ ನುಡಿಸುತಲಿ
ಶಿವ ಬೋಧೆ ಜನಕೆ ಮಾಡುತಲಿ । ಬೊಮ್ಮಯ್ಯ
ಭವಿಗಳಿಗೆ ಊದಿ ಶಿವ ಮಂತ್ರ ॥ ೧೨ ॥

ಕಿನ್ನರಿಯ ಬೊಮ್ಮಯ್ಯ ಧನ್ಯ ಶಿವ ಶರಣಯ್ಯ
ಮನ್ನಣೆಯ ಪಡೆದು ಇರುತಿರಲು । ಒಂದಿವಸ
ಚೆನ್ನ ಶಿವಲಿಂಗ ಗುಡಿಯೊಳಗೆ ॥ ೧೩ ॥

ಕಲ್ಯಾಣ ಪುರದೊಳಗೆ ಹೊಲ್ಲ ಸೂಳೆಯ ಗೇರಿ
ಅಲ್ಲಗೇಡಿಗಳ ನಿಜವಾಸ । ಸೊಳೇರು
ಗುಲ್ಲೇರು ಅರಸನೂಳಿಗಕೆ ॥ ೧೪ ॥

ಸೂಳಿಗೇರಿಯ ನೋಟ ಹೇಳಲಾರದ ಮಾಟ
ಗಾಳದೊಳು ಮೀನಸಿಕ್ಕಂತೆ । ವಿಟಪುರಷ
ಸೂಳೆಯರ ಬಲೆಗೆ ಸಿಗಿಬಿದ್ದು ॥ ೧೫ ॥

ಬಿಜ್ಜಳನ ಊಳಿಗದ ಬೊಜ್ಜನಾಯಕನೊಬ್ಬ
ಲಜ್ಜಗೇಡ್ಯಾದ ವಿಟನಾಗಿ । ಸೂಳೆಯರ
ಹೆಜ್ಜೆಯೊಳು ಬಿದ್ದ ಹಗಲಿರುಳು ॥ ೧೬ ॥

ಹರಕೆ ಹಬ್ಬದ ದಿನಕೆ ಹರಕೆ ಮಾರಿಗೆ ಹೊತ್ತೆ
ಕರೆದು ಹೇಳಿದಳು ಬೊಜ್ಜನಿಗೆ । ಆ ಸೂಳೆ
ಕುರಿಕೊಟ್ಟು ಗುಡಿಗೆ ಕಳಿಸಿದಳು ॥ ೧೭ ॥

ಕುರಿಯ ಮಾರಿಗೆ ಇತ್ತು ಹರಕೆಯನೆ ನೀಗಿಸಲು
ವರಿಸುವಳು ಮಾರಿ ಮುಂದೆನೆಗೆ । ಸಿರಿಕೊಟ್ಟು
ಹರಿಸುವಳು ಸುಖವ ಕಡೆತನಕೆ ॥ ೧೮ ॥

ಟಗರಿನಾ ಕೊರಳೊಳಗೆ ಬಿಗಿದ ಹಗ್ಗವನಾಗ
ಮಿಗೆ ಉರಲು ಬೀಳೆ ಕಿರುಬುತಲಿ । ಆ ಕುರಿಯು
ಹಗೆಯ ಕೈ ಕೊಸರಿ ಬೀದಿಯೊಳು ॥ ೧೯ ॥

ಓಡುತೋಡುತ ಕುರಿಯು ಕಾಡಿಗಳು ಕೊಲ್ಲುವರು
ನಾಡ ಶಿವಲಿಂಗ ಮೊರೆಹೊಕ್ಕೆ । ಕರುಣಾಳು
ನೋಡುವರೆ ನನ್ನ ಈ ಪಾಪ ॥ ೨೦ ॥

ತ್ರಿಪುರಾಂತ ಶಿವಲಿಂಗ ಶಿವಭಕ್ತ ಬೊಮ್ಮನಿಗೆ
ಅವಸರದಿ ಕುರಿಯ ಸಲುಹೆಂದು । ನುಡಿಯುದಕೆ
ಹವಣಿಸುತ ಹಿಡಿವ ವಿಟಗೆಂದ ॥ ೨೧ ॥

ದಯವಿಲ್ಲ ಕುಲಗೇಡಿ ದಯವಿರಲಿ ಪಶುಗಳಲಿ
ದಯವೆ ಧರ್ಮಯ್ಯ ಜಗದೊಳಗೆ । ಪಾಲಿಸಲು
ಭಯವೆ ಜೀವನಿಗೆ ಭವದೊಳಗೆ ॥ ೨೨ ॥

ಹಿಡಿಯದಿರು ಎಲೆ ಬೊಜಗ ಕಡುಪಾಪಿ ಕುರಿಯನ್ನು
ಹೊಡೆ ಬಡಿಯ ಬೇಡ ಗುಡಿಯೊಳಗೆ । ತಡೆ ಕುರಿಗೆ
ಕೊಡುವೆ ಬೇಡಿದ್ದ ಬೆಲೆ ನಿನಗೆ ॥ ೨೩ ॥

ಗೇಲಿಯಲಿ ಆಡಿದನು ಜೋಲಿ ತಿಳಿಯದೆ ಮಾತ
ಸಾಲ ನಿನಗಾರು ಕೊಡಬೇಕು । ಬೊಮ್ಮಯ್ಯ
ಕೇಳು ಜಂಗಮನೆ ಸಿರಿಯುಂಟೆ ॥ ೨೪ ॥

ತಿರಕ ಜಂಗಮ ನೀನು ಮುರಕ ಕಿನ್ನರಿ ನಿನಗೆ
ಕುರಿಬಿಟ್ಟು ನಿಲ್ಲು ಬೊಮ್ಮಯ್ಯ । ಎನ್ನುದಕ
ಕರವೆತ್ತಿ ಹಿಡಿದ ಕಿನ್ನರಿಯ ॥ ೨೫ ॥

ಕಿನ್ನರಿಯ ಬಾರಿಸಲು ಚೆನ್ನಿಗರು ಕೇಳಿದರು
ಚಿನ್ನ ಸುರುವಿದರು ಗುಡಿಮುಂದೆ । ಬೊಜಗನಿಗೆ
ಹೊನ್ನ ಸಾಸಿರವ ಎಣಿಸಿದನು ॥ ೨೬ ॥

ತಿರುಕ ನಿಧಿ ಕಂಡಂತೆ ಮುರುಕ । ಗುಡಿಸಲದೊಳಗೆ
ಹರುಷದಲಿ ಓಗ್ಗಿ ವಿಟಪುರುಷ । ಕುರಿಮರೆತ
ಬರೆ ಹೊನ್ನರಾಶಿ ಕಣ್ಣೊಳಗೆ ॥ ೨೭ ॥

ಉಡಿತುಂಬ ಹೊನ್ನನ್ನು ಜಡಮತಿಯು ಕಟಿಗೊಂಡು
ಸಡಗರದಿ ಸೂಳೆ ಮನೆಹೊಕ್ಕ । ನಸುನಕ್ಕು
ನಡೆದ ಸಂಗತಿಯ ತಿಳಿಸಿದನು ॥ ೨೮ ॥

ಹೊನ್ನಗಳಿಸುವದೇನು ಮಣ್ಣಗಳಿಸುವದೇನು
ಹೊನ್ನ ಮಣ್ಣೊಳಗೆ ಬಿತ್ತಿಸುವೆ । ಗುಡಿಮುಂದೆ
ಎನ್ನ ಹರಕೆ ಕುರಿ ತರಹೋಗು ॥ ೨೯ ॥

ನಲಗ್ಗೆಜ್ಜೆ ಸೂಳೆಯರು ಬಲುಕೋಪ ನಡಿಯುತಲಿ
ಎಲವೊ ಕೊಡಬಹುದೆ ಆ ಕುರಿಯ । ಈ ಹಣಕೆ
ಛಲವಿಲ್ಲೆ ಹರಕೆ ಕುರಿಯೆಂಬ ॥ ೩೦ ॥

ಕೇಳಲಾರದ ನುಡಿಯ ಬೀಳುತಲಿ ಏಳುತಲಿ
ಸೀಳಿದೆದೆಯಾಗಿ ವಿಟಪುರಷ । ಗುಡಿಹೊಕ್ಕು
ಹೇಳದೆಲೆ ಕುರಿಯ ಹಿಡಿಹೋದ ॥ ೩೧ ॥

ಲಿಂಗ ಉಂಡಿಗೆ ಕುರಿಗೆ ತುಂಬ ಒತ್ತಿರೆ ಬೊಮ್ಮ
ಜಂಗಮನು ದೀಕ್ಷೆ ಕೊಟ್ಟೆಂದು । ಆ ಕುರಿಯು
ಸಂಗ ಬೊಮ್ಮನದು ಬಿಡಲಿಲ್ಲ ॥ ೩೨ ॥

ಹಿಡಿಯ ಹೋಗಲು ಬೊಜಗ ಬಿಡದೆ ಬೆನ್ನಿಗೆ ಬಿತ್ತು
ನಡೆಹೋಗು ಖಳನೆ ತರವಲ್ಲ । ಹಣತೆತ್ತು
ಹಿಡಿದಿರುವ ಕುರಿಯ ನಿನ್ನಿಂದ ॥ ೩೩ ॥

ಹಟತೊಟ್ಟು ವಿಟನಾಗ ಕಟುಕಾಗಿ ಕುರಿಹಿಡಿದ
ಭಟನು ಬೊಮ್ಮಯ್ಯ ಕೆರಳಿದನು । ಕದನಾಗಿ
ಪಟನೆ ಹಾರಿಸಿದ ಕುತ್ತಿಗೆಯ ॥ ೩೪ ॥

ರುಂಡವಾಗುಡಿ ಮುಂದೆ ಚೆಂಡು ಪುಟಿದಂಗಾತು
ಮುಂಡ ಬಿತ್ತಂದು ಅಂಗಳಕೆ । ವಾದಿಗಳು
ಭಂಗಾಗಿ ಚೆದರಿ ಹೌಹಾರಿ ॥ ೩೫ ॥

ಇತ್ತ ಬಿಜ್ಜಳರಾಯ ಮತ್ತೆ ಕರೆದೋಲಗವ
ಚಿತ್ತಿಟ್ಟು ನಡೆಸಿ ಚಾವಡಿಯ । ಚಾಡಿಗಳು
ಅತ್ತು ಮೊರೆಯಿಟ್ಟರರಸನಿಗೆ ॥ ೩೬ ॥

ಕೇಳು ಬಿಜ್ಜಳರಾಯ ಊಳಿಗದ ನಾಯಕನ
ಬಾಳು ಹಾಳಾತು ಸಿರಿಹೋಗಿ । ಬೊಮ್ಮಯ್ಯ
ಸೀಳಿ ಚೆಲ್ಲಿದನು ಗುಡಿಮುಂದೆ ॥ ೩೭ ॥

ಯಾರು ದುಡಿಕಿಗಳೆಂಬ ಕಾರಣವ ತಿಳಿಸಿದರೆ
ಹಾರಿಸುವೆನವರ ಸಿರವನ್ನು । ಹಿಡಿತರಸಿ
ಏರಿಸುವೆ ಗಲ್ಲ ಎಳಿಸೊಯ್ದು ॥ ೩೮ ॥

ಕುರಿಯ ಕೈಯಲಿ ಹಿಡಿದು ಬರುವಾಗ ನಾಯಕನ
ಕುರಿಕೊಸರಿ ಕೈ ಗುಡಿಹೊಕ್ಕು । ಬೊಮ್ಮಯ್ಯ
ಕುರಿಗೊತ್ತಿಲಿಂಗ ಮರೆಸುತಲಿ ॥ ೩೯ ॥

ಊಳಿಗದ ನಾಯಕನು ಹೇಳಿ ಕುರಿ ಹಿಡಿಹೋದ
ತಾಳದಲೆ ಬೊಮ್ಮ ಕೆರಳಿದನು । ನಾಯಕನ
ಕಾಲಕತ್ತರಿಸಿ ಸಿರಕೊಯ್ದು ॥ ೪೦ ॥

ಕೇಳು ಬಸವನೆ ಕೇಳು ಹೇಳುವೀ ಮಾತುಗಳ
ಕೂಳ ಜಂಗಮರು ನಿನ್ನವರು । ನಂಬುವದೆ
ಹಾಳು ನೋಡೆಂದ ಒಡೆತನಕೆ ॥ ೪೧ ॥

ಅನುಭಾವಿ ಬೊಮ್ಮಯ್ಯ ಘನ ತಂದೆ ಶರಣರಿಗೆ
ಸೊಣಗನೀ ಕೆಲಸ ಮಾಡುವನೆ । ಬಿಜ್ಜಳನೆ
ಅನುಮಾನವೆನಗೆ ಕಾಣೆಂದ ॥ ೪೨ ॥

ನನ್ನ ದೊರೆತನವೇಕೆ ನನ್ನ ಅಪ್ಪಣೆಯೇಕೆ
ನನ್ನ ರಾಜ್ಯ ನನಗೆ ಬೇಕಿಲ್ಲ । ಬಸವೇಶ
ನಿನ್ನವರ ಕೂಡಿ ನಾಡಾಳು ॥ ೪೩ ॥

ಹೆಗ್ಗಳೆಯ ನೀನೆಂದು ಹಿಗ್ಗಿಹರು ದಂಡೇಶ
ಕುಗ್ಗುವರೆ ಅಂಜಿ ಅರಸನಿಗೆ । ಗರ್ವಿಗಳ
ತಗ್ಗಿಸಲೆ ಬೇಕು ಒಡೆತನಕೆ ॥ ೪೪ ॥

ಅರಸ ಕೇಳಿದನವರ ನೆರೆದಿರುವ ಸಭೆಯೊಳಗೆ
ವರ ಮಂತ್ರಿ ಬಸವ ತಾನಿದ್ದು । ಬಿಜ್ಜಳನು
ಬಿರುಸು ನುಡಿ ಬಸವಗಾಡಿದನು ॥ ೪೫ ॥

ಸೆರೆ ಹಿಡಿದು ಬೊಮ್ಮನಿಗೆ ತರ ಹೋಗಿ ನೋಯಿಸದೆ
ಚರರನಟ್ಟಿದನು ಆ ಗುಡಿಗೆ । ಮುತ್ತಿದರು
ಎರಗಿ ದೀಪಹುಳ ಬೀಳುದಕೆ ॥ ೪೬ ॥

ಸೆದೆಬಡೆದ ಬಂದವರ ಕುದಿ ಕುದಿದು ಸಿಟ್ಟಿನಲಿ
ಕದನ ದಂಡೊಡನೆ ಸಮರಿ । ತುರಗಾನೆ
ಚದರಿ ಓಡಿದವು ದಿಕ್ಕೆಟ್ಟು ॥ ೪೭ ॥

ಅಸಮಗಲಿಗಳು ಹೆದರಿ ಗಸನೆ ಶರಣಾಗುತಲಿ
ಒಸಗೆ ಕಳಿಸಿದರು ಬಿಜ್ಜಳಗೆ । ಹೆದರಿದನು
ಬಸವನಿಗೆ ಕರೆಸಿ ಕ್ಷಮಿಸೆಂದು ॥ ೪೮ ॥

ಅಸಮಾನ್ಯ ಬೊಮ್ಮಯ್ಯ ನೊಸಲಗಣ್ಣನ ಭಕ್ತ
ವಿಷಯ ತಿಳಿಲಿಲ್ಲ ನನಗೆಂದು । ತಿಳಿಹೇಳು
ಬಸವ ದಂಡೇಶ ದಯೆನೀಡು ॥ ೪೯ ॥

ಊರ ಊಳಿಗದರಸ ಬಾರಿಸುತ ಊದಿಸುತ
ತೇರೆಳೆವ ಸೊಬಗೊ ಎಂಬಂತೆ । ಸಂದಣಿಯು
ಊರಿ ಶಿವಲಿಂಗ ಗುಡಿ ಮುಂದೆ ॥ ೫೦ ॥

ಎರಗಿ ಕೈಗಳ ಮುಗಿದು ಅರಸ ಬಿಜ್ಜಳರಾಯ
ಕೊರಗಿ ಮನದೊಳಗೆ ತಪ್ಪೆಂದು । ಕ್ಷಮಿಸೆಂದು
ಕರುಣನಿಧಿ ಬಸವ ತಿಳಿಸೆಂದ ॥ ೫೧ ॥

ತಂದೆ ನೀ ಬೊಮ್ಮಯ್ಯ ಬಂದವರ ಕ್ಷಮಿಸೆಂದು
ಮುಂದೆ ಪಾತಕವು ಇನ್ನಿಲ್ಲ । ಬಿಜ್ಜಳಗೆ
ಇಂದು ತಿಳಿತೆಂದ ಬಸವೇಶ ॥ ೫೨ ॥

ಕಡು ಕೋಪ ತಾಳುವರೆ ಒಡನಾಡಿ ನೀ ಅರಸ
ದುಡುಕು ಮಾಡುವರೆ ಬಸವೇಶ । ನಾಣಿಗಳು
ಹುಡುಕುವರೆ ಕದನ ಜಗದೊಳಗೆ ॥ ೫೩ ॥

ದುಡುಕು ಮಾಡಿದನರಸ ಕುಡುಕ ನಾಯಕನವನು
ಕಡಿಯುವರೆ ತಲೆಯ ಒಡೆಯನದು । ಬಿಜ್ಜಳನೆ
ಒಡೆವೆ ಬೇಡಿದರೆ ಜಗದೊಳಗೆ ॥ ೫೪ ॥

ನಂಬದಿರೆ ಈ ನುಡಿಯ ಹುಂಬ ಬೊಮ್ಮನದೆಮದು
ಶಂಬು ಶಿವಲಿಂಗ ಸಾಕ್ಷಿಯನು । ನುಡಿಯುವನು
ಇಂಬು ಕಿವಿಗೊಟ್ಟು ಕೇಳೆಂದ ॥ ೫೫ ॥

ಮುಂಗಡವೆ ನುಡಿಯಿತ್ತೈ ಲಿಂಗವದು ಗುಡಿಯೊಳಗೆ
ಭಂಗವಾಗುವದು ಬಿಜ್ಜಳನೆ । ಈ ದುಮಕಿ
ಮಂಗ ಬೊಜಗದೆ ಹೌದೆಂದು ॥ ೫೬ ॥

ಏಳು ದಿನ ಹಗಲೆಲ್ಲ ಏಳು ದಿನ ಇರುಳೆಲ್ಲ
ಹೇಳಿತಾ ಲಿಂಗ ಸಾಕ್ಷಿಯನು । ಹೌಹಾರಿ
ಕೇಳುತಲಿ ಬಂದ ಜನರೆಲ್ಲ ॥ ೫೭ ॥

ನಡು ನಡುಗಿತಾ ಭೂಮಿ ತಡೆ ತಡೆದವಾ ಗಾಳಿ
ಕಡಲುಗಳು ಉಕ್ಕಿ ಒದರಿದವು । ಆಕಾಶ
ಕಡಲೆಂದು ಸಿಡಿದು ಮಾಯಾಗಿ ॥ ೫೮ ॥

ಶಿವಲಿಂಗ ಶಿವ ಸಾಕ್ಷಿ ಕಿವಿಯೆಲ್ಲ ಗಡಚಿಕ್ಕಿ
ಶವದಂತೆ ಬಿದ್ದ ಗುಡಿಯೊಳಗೆ । ಬಿಜ್ಜಳನು
ಕವಿದು ಕತ್ತಲೆಯು ಜಗದೊಳಗೆ ॥ ೫೯ ॥

ಬಿದ್ದ ಕತ್ತಲೆ ಕರಗಿ ತಿದ್ದಿ ತೀಡಿತು ಬೆಳಕು
ಸದ್ದಡಗಿ ಜಗವು ಹೊಸದಾಗಿ । ಬೊಮ್ಮಯ್ಯ
ಸಿದ್ದಿ ಪುರಷಾದ ಗುಡಿಯಲ್ಲಿ ॥ ೬೦ ॥

ಬಸವಾದಿ ಪ್ರಮಥರಾ ಜಸವ ತೋರಿಸಲೆಂದೊ
ಹೊಸಬೆಳಕು ಬಿತ್ತು ಜಗಕೆಲ್ಲ । ಬೊಮ್ಮಯನ
ಹೆಸರು ಬೆಳಗಿಸಲು ಸದ್ದಡಗಿ ॥ ೬೧ ॥

ಬಿದ್ದ ಬಿಜ್ಜಳರಾಯ ಎದ್ದು ಹರಹರನೆಂದು
ಉದ್ಧಾರವಾದೆ ನಿಮ್ಮಿಂದ । ಬೊಮ್ಮಯ್ಯ
ಸಿದ್ದಿ ಶಿವಮಂತ್ರ ಊದಿದನು ॥ ೬೨ ॥

ಜೋಡುಕ್ಕೈಗಳ ಮುಗಿದು ಹಾಡಿದರು ಜನರೆಲ್ಲ
ನಾಡೊಳಗೆ ಹಿರಿಮೆ ಶರಣರದು । ಪಶುಪಕ್ಕಿ
ಕಾಡೊಳಗೆ ಹಾಡಿ ನಲಿದಾಡಿ ॥ ೬೩ ॥

ವಚನಮಂಟಪದೊಳಗೆ ವಚನಗಳ ಮಳೆ ಸುರಿದು
ಸುಚಿಹೊಂದಿ ಜಗವು ಅನುಭಾವ । ಬಿತ್ತಿದರು
ಉಚಿತ ಹೊಸಮತವು ಬೆಳೆಬಂತು ॥ ೬೪ ॥

ಶಿವಗಣವು ಉನ್ನತದಿ ಭವಲೋಕ ಬೊಮ್ಮನಿಗೆ
ಶಿವಲೋಕದೊಳಗೆ ಹೂ ಮಳೆಯ । ಸುರಿಸುತಲಿ
ಶಿವಭಕ್ತ ಬೊಮ್ಮ ಮಿಗಿಲೆಂದು ॥ ೬೫ ॥

ಕಿನ್ನರಿಯ ಬೊಮ್ಮಯ್ಯ ಸನ್ನುತದ ತಂದ್ಯಾದ
ಚೆನ್ನಬಸವಾದಿ ಗಣಗಳಿಗೆ । ಕಲ್ಯಾಣ
ಹೊನ್ನಗಳಸಾದ ಶಿವಗುಡಿಗೆ ॥ ೬೬ ॥

ದಂಡಿಗೆಯ ಕಿನ್ನರಿಯ ಮಿಂಡ ಜಂಗಮ ನುಡಿಸಿ
ತುಂಡ ಹೊಲಬೆಳೆದು ಹುಲುಸಾಗಿ । ಶಿವಭಿಕ್ಷೆ
ಕಂಡು ಒಕ್ಕಲಿಗ ಕೈಮುಗಿದು ॥ ೬೭ ॥

ಹಂತಿಯದು ಹಾಡೆಂದು ಪಂತ ಕಟ್ಟಲುಬೇಡ
ಕಂತಿ ಕರಗುವದು ನಿಂತಲ್ಲೆ । ಬೊಮ್ಮಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೬೮ ॥

ಶರಣುಶರಣೆಂಬುವೆವು ಹರಣ ಹಾರುವ ತನಕ
ಕರುಣಿಸರಿ ಶರಣ ಬೊಮ್ಮಯ್ಯ । ನಮಗಿನ್ನು
ಹರಸರಿ ಹುಲಿಸು ಹುಲ್ಲುಲ್ಲಿಗೊ ॥ ೬೯ ॥

ಕೃತಿ : ಕನ್ನಡ ಜಾನಪದ ಗೀತಗಳು

***

೬. ಕುಂಬಾರ ಗುಂಡಯ್ಯ

ಸೂಚಕ ಪದ್ಯ : ಕುಂಬಾರ ಗುಂಡಯ್ಯ ತುಂಬಿ ತಿಗರಿಗೆ ಕೆಸರ
ಶಂಬು ಹರನೆಂದು ತಿರುಗಿಸಲು । ಶಿವಕುಣಿದ
ಹಂಬಲಿಸಿ ಜಂಗ ಕಟಿಗೊಂಡು ॥ ೧ ॥

ಮದುವೆ ಮಾಡುವ ಮುಂದೆ ಮುದದಿ ಐರಣಿಹೊತ್ತು
ಚದುರೆಯರು ತಂದು ಹಾಡುವರು । ಗುಂಡಯ್ಯ
ಸದರು ಶಿವಪದವ ಹೊಂದುವಿಕೆ ॥ ೨ ॥

ಗುಗ್ಗಳದ ಕೊಡಹೊತ್ತಿ ಸಗ್ಗದೊಳು ಹೊಗೆಯೆದ್ದು
ಉಗ್ಗಡಿಸಿ ಕುಣಿದ ಗುಂಡಯ್ಯ । ಪುರವಂತ
ಸಗ್ಗ ನಡಗಿಸಿದ ಕಡೆ ಹೇಳಿ ॥ ೩ ॥

ಬೆಚ್ಚು ಗಡಿಗೆಯು ಗುಂಡ ನುಚ್ಚು ಜೋಕನು ಚೆರಗ
ಬೆಚ್ಚಾಕಿ ಹೊಲಕೆ ಒಕ್ಕಲಿಗ । ಚೆರಗೊಗೆದ
ಬಚ್ಚಿಡಲು ಹುಲುಸ ಹೊಲದೊಳಗೆ ॥ ೪ ॥

ಬೆಚ್ಚು ಹಾಕಿದ ಗಡಗಿ ಮುಚ್ಚಿಟ್ಟಿ ಬನ ಹುಲುಸು
ಬಚ್ಚಾದ ಬೆಳೆಯ ಕಣವುಕ್ಕಿ । ಗುಂಡಯ್ಯ
ಹೆಚ್ಚಾಯ್ತು ನಿನ್ನ ಶಿವಭಕ್ತಿ ॥ ೫ ॥

ಬಲಕೇರಿ ಗುಂಡಯ್ಯ ಬಲವಂತ ಶಿವಭಕ್ತ
ಕುಲವಂತ ಶರಣ ಕುಂಬಾರ । ಕಾಯಕವು
ಕುಲಗೆಲಸ ನಿತ್ಯ ಜೀವನಕೆ ॥ ೬ ॥

ಮಡದಿ ಕೇತಲದೇವಿ ಒಡನಾಡಿ ಗುಂಡನಿಗೆ
ಎಡೆಬಿಡದೆ ಸೇವೆಮಾಡುತಲಿ । ಬತ್ತಿಯೊಳು
ಬಿಡದೇರಿ ಎಣ್ಣೆಯುರಿದಂತೆ ॥ ೭ ॥

ಪ್ರಾಣಲಿಂಗಿಯು ಗುಂಡ ಏನೊಂದು ಹೊರಗರಿಯ
ಪ್ರಾಣಲಿಂಗದೊಳು ಶಿವಬೆಳಕು । ಬೀಳುತಲಿ
ತಾಣ ಕಳೆಯೇರಿ ಕಾಯಕವು ॥ ೮ ॥

ಮೂರು ಲಿಂಗದ ಕಳೆಯ ಬೀರುತಲಿ ಗುಂಡಯ್ಯ
ತೋರಿ ಆ ಕಳೆಯು ತನ್ನೊಳಗೆ । ಒಡಮೂಡಿ
ಸೂರಿ ಕಾಯಕವೆ ಜನಕಾಯ್ತು ॥ ೯ ॥

ಕಾಯಕವೆ ಶಿವಭಕ್ತಿ ಕಾಯಕವೆ ಶಿವಭಜನೆ
ಕಾಯಕವೆ ಲಿಂಗ ಶಿವಪೂಜೆ । ಶಿವಯೋಗ
ಕಾಯಕವೆ ಕಾಯ್ವ ಕೈಲಾಸ ॥ ೧೦ ॥

ಜನಗಂಡ ಕಾಯಕವು ಮನಗಂಡು ಗುಂಡನಿಗೆ
ಹೊನಲಾಗಿ ಅಂತರಂಗದೊಳು । ಹರಿಯುತಲಿ
ಮನದೊಳಗೆ ಲಿಂಗ ಕಳೆಬೆಳಗಿ ॥ ೧೧ ॥

ಅಂತರಂಗವೆ ತಿಗರಿ ಚಿಂತೆ ತುಂಬಿದಬಾಳು
ಕುಂತ ಕೆಸರಾಯ್ತು ತಿಗರಿಯೊಳು । ಶಿವನಿಷ್ಠೆ
ನಿಂತ ಕೋಲಾಯ್ತು ತಿರಿಗಿಸಲು ॥ ೧೨ ॥

ಕೋಲು ತಿಗರಿಯ ತಿರುವಿ ಮೇಲೆ ಕೈಗಳು ಆಡಿ
ಮೇಲೆ ಮಡಿಕ್ಯಾಗಿ ಶಿವಭಕ್ತಿ । ಹೊರಬಂತು
ತೇಲಿ ಶಿವಬೆಳಕು ಮೈ ಮರೆತು ॥ ೧೩ ॥

ನಾಣಕೊಡತಿಯನೆತ್ತಿ ಜಾಣ ಮಡಕಿಯನುಡಿಸಿ
ತಾನ ಎದೆ ತುಂಬಿ ಒಂದಾಗಿ । ಗುಂಡಯ್ಯ
ಗೇಣಿಸದೆ ಬೆರತು ಪರಮನೊಳು ॥ ೧೪ ॥

ಅರಿಯ ಹೊರಗಿನ ಜಗವ ಮರೆಯ ಒಳಗಿನ ಬೆಳಕ
ಸರಿಯೆಂದ ಕೊಡತಿ ಸಪ್ಪಳವು । ಕುಣಿತದೊಳು
ಕರಡಿ ಮದ್ದಲಿಯ ಜೋಡಣೆಗೆ ॥ ೧೫ ॥

ಕಣಕಣಿಸಿ ಕರಡಿಗಳು ಝುಣಝುಣಿಸಿ ತಾಳುಗಳು
ದಣ ಧಣ್ಣ ಧಿತ್ತ ಮದ್ದಲೆಯು । ಕಿವಿಯೊಳಗೆ
ಘನಸೂರು ಓಡಿಯೆ ಗುಂಡನಿಗೆ ॥ ೧೬ ॥

ಬಂದವರ ಹೋದವರ ಎಂದೆಂದು ತಾನರಿಯ
ಒಂದೆ ಗತ್ತಿನಲಿ ಗಡಿಗೆಗಳ । ನುಡಿಸುತಲಿ
ಅಂದದಲಿ ಗುಂಡ ಕುಣಿಯುತಲಿ ॥ ೧೭ ॥

ಪ್ರಾಣಲಿಂಗವು ಕಂಡು ಏನನ್ನು ಗೇಣಿಸದೆ
ತಾಣದಲಿ ಕುಣಿಯೆ ಪರಶಿವನು । ಈ ಜಗವು
ಗೋಣೆತ್ತಿ ಕುಣಿದು ಮಣಿಮಣಿದು ॥ ೧೮ ॥

ಹೆಚ್ಚು ಹೇಳುವದೇನು ಎಚ್ಚರವು ಗುಂಡನಿಗೆ
ಮೆಚ್ಚಿ ತಾನಾಗಿ ಒಳಬರಲು । ಕಣ್ದೆರೆದು
ಉಚ್ಚ ಮಡಕಿಗಳ ನೋಡುತಲಿ ॥ ೧೯ ॥

ಅನುಭಾವ ಆವಿಗೆಗೆ ಕನಲೆಂಬ ಕಿಚ್ಚಿಟ್ಟು
ತಣಿವಂತೆ ಸುಡಲು ಶಿವಭಕ್ತಿ । ಮಡಿಕೆಗಳ
ದಣುವಾರಿಹೋಯ್ತು ಕಾಯಕದ ॥ ೨೦ ॥

ಹರುಷದಲಿ ಗಡಿಗೆಗಳ ಶರಣರಿಗೆ ಮಾರುತಲಿ
ಸರಸದಲಿ ಇದ್ದ ಸತಿಯೊಡನೆ । ಗುಂಡಯ್ಯ
ಸರಿಯಾರು ಶಿವನೆ ಶರಣರಿಗೆ ॥ ೨೧ ॥

ದಿನದಂತೆ ಗುಂಡಯ್ಯ ದಣಿಯದಲೆ ಕಾಯಕವ
ಕುಣಿಕುಣಿದು ಗಡಗಿ ಬಾರಿಸುತ । ನಡೆಸಿರಲು
ಮನಮೆಚ್ಚಿ ಶಿವನು ತಲೆದೂಗಿ ॥ ೨೨ ॥

ನಸುನಗುತ ಪಾರ್ವತಿಯು ನೊಸಲಗಣ್ಣನ ಮಡದಿ
ಹುಸಿನಗೆಯ ಮಾತ ಶಿವಗಾಡಿ । ಕೇಳಿದಳು
ಹೊಸತು ತಲೆಯೇಕೆ ತೂಗುವಿರಿ ॥ ೨೩ ॥

ಭೂಮಿಯೊಳು ಗುಂಡಯ್ಯ ಸೀಮೆ ಮೀರಿದ ಭಕ್ತ
ನೇಮದಲಿ ನುಡಿಸಿ ಗಡಿಗೆಗಳ । ಕುಣಿಯುವನು
ತೋಮ ಧಿತ್ತಯ್ಯ ಹೆಜ್ಜೆಯೊಳು ॥ ೨೪ ॥

ನಾದಗಾಳಿಯು ತುಂಬಿ ಭೇದಿಸಲು ನನ್ನೆದೆಯ
ಸಾಧಿಸುವೆ ದೇವಿ ಗುಂಡಯ್ಯ । ನೆದೆಯೊಳಗೆ
ಮೋದಿಸಲು ಕುಣಿವೆ ತಲೆದೂಗಿ ॥ ೨೫ ॥

ಕುಣಿತ ನೋಡುವ ಬಯಕೆ ಎನಿತು ಹೇಳಲಿ ಶಿವನೆ
ತಣಿಸೆನ್ನ ಮನವ ಕುಣಿದಾಡಿ । ಗಿರಿಜೆನಲು
ಝುಣಕಿದವು ಗೆಜ್ಜೆ ಕಾಲೊಳಗೆ ॥ ೨೬ ॥

ಹೋಗಿ ಕುಣಿಯುವೆ ದೇವಿ ತೂಗಿ ಗುಂಡನ ಕೂಡ
ನೀಗು ನೋಡುತಲಿ ನಿನ್ನಾಸೆ । ಶಿವನೆದ್ದು
ಸಾಗಿ ಸೇರಿದನು ಭೂಲೋಕ ॥ ೨೭ ॥

ನಡೆತಂದ ಮುಕ್ಕಣ್ಣ ಬಿಡದೆ ಬಲಕೇರಿಯೊಳು
ಗಡಿಗೆ ಸಪ್ಪಳಕೆ ಕವಿನಿಮಿರಿ । ಮನೆಮುಂದೆ
ತಡೆದು ಕುಣಿಯುವದ ನೋಡುತಲಿ ॥ ೨೮ ॥

ಶಿವಬಂದು ನಿಂತಿರಲು ಶಿವಭಕ್ತ ಗುಂಡಯ್ಯ
ಶಿವನೆಂಬುದರಿಯ ಕಾಯಕದ । ಗುಂಗಿನೊಳು
ಭವದೊಳಗೆ ಮಡಕಿ ನುಡಿಸುತಲಿ ॥ ೨೯ ॥

ಮಡಿಕೆಗಳ ಬಾರಿಸುತ ತೊಡಗಿದ್ದ ಕುಣಿತದೊಳು
ಹೆಡೆಯೆತ್ತಿ ನಾಗ ಮಣಿದಂತೆ । ಗುಂಡಯ್ಯ
ತಡೆತಡೆದು ಹೆಜ್ಜೆ ಹಾಕುತಲಿ ॥ ೩೦ ॥

ಪ್ರಾಣಲಿಂಗದ ಕೂಡ ತಾನೆ ತಾನಿಹ ಗುಂಡ
ನಾನು ಕಾಣಿಸುವ ಬಗೆ ಹೇಗೆ । ಶಿವನೆಂದು
ಪ್ರಾಣಲಿಂಗವನು ಓಡಿದೆತ್ತಿ ॥ ೩೧ ॥

ಧ್ಯಾನ ಕೆಡಿಸಲು ಶಿವನು ತಾನ ತಪ್ಪಿತು ಕುಣಿತ
ಗೋಣೆತ್ತಿ ಕಂಡ ಜಂಗಮನ । ಗುಂಡಯ್ಯ
ಮೌನದಲಿ ಹಿಗ್ಗಿ ಕುಣಿಯುತಲಿ ॥ ೩೨ ॥

ಜಂಗಮನ ಕಾಣುತಲಿ ಲಿಂಗಕಳೆ ಮೈದುಂಬಿ
ಅಂಗದೊಳು ಉಕ್ಕಿ ಆನಂದ । ಗುಂಡನಿಗೆ
ಜಂಗಮಗೆ ಶಿವಗೆ ಕಣ್ದುಂಬಿ ॥ ೩೩ ॥

ಹರುಷದಲಿ ಗುಂಡಯ್ಯ ಹರನೆಂದು ಜಂಗಮಗೆ
ತಿರುಗುತಲಿ ಸುತ್ತ ಬಾರಿಸುತ । ಗಡಿಗೆಗಳ
ತರತರದಿ ಕುಣಿಯೆ ಮೈಮರೆತು ॥ ೩೪ ॥

ನಾದ ಸೋಂಕಲು ಶಿವಗೆ ಆದರದಿ ಕುಣಿಯುದಕೆ
ಊದಿ ಶಿವಶಂಖ ಡಮರಿಯನು । ನುಡಿಸಿದನು
ಪಾದಗಳ ನುಡಿಸಿ ಹುಲಗೆಜ್ಜೆ ॥ ೩೫ ॥

ಜಡೆ ಕೆದರಿ ಹರಿದಾಡಿ ಮಡಗಿದವು ದಿಕ್ಕುಗಳು
ಮುಡಿಯೊಳಗೆ ಗಂಗೆ ತುಳಕಾಡಿ । ಲೋಕಗಳು
ನಡುಗಿದವು ಶಿವನ ಹೆಜ್ಜೆಯೊಳು ॥ ೩೬ ॥

ಪೆರೆಗೊರೆಯು ಓರ್‍ಯಾಗಿ ನರಲೋಕ ಇರುಳಾಗಿ
ಹರನ ಕಾಲ್ಗೆಜ್ಜೆ ಘಿಲಿಘಿಲಿಸಿ । ಕುಣಿಯುದಕೆ
ಸರಸದಲಿ ತಾನ ಕೊಡುತಿರಲು ॥ ೩೭ ॥

ಗುಂಡ ಕುಣಿದನು ಹೆಜ್ಜೆ ರುಂಢಧಾರಿಯ ಕೂಡ
ತಂಡಾಗಿ ಬಂದು ಶಿವಗಣವು । ಕುಣಿಯುತಲಿ
ಕಂಡು ಜಗವೆಲ್ಲ ಚೇತರಿಸಿ ॥ ೩೮ ॥

ಜಗದೊಳಗೆ ದನಿಹುಟ್ಟಿ ಸೊಗಸಿನಲಿ ರಸದುಂಬಿ
ಹಗುರಾಯ್ತು ಲೋಕ ಅರಳುತಲಿ । ಶಿವಗುಣಿತ
ಬಿಗಿಯಾಯ್ತು ತಡೆಯ ಹಾಕುದಕೆ ॥ ೩೯ ॥

ತಾನ ಹಿಡಿಯಲು ಜಗವು ಮೌನದಲಿ ಗಿಡಬಳ್ಳಿ
ಬಾನಿನೊಳು ನಿಗಿದು ಕುಣಿದಾಡಿ । ಗಾಳಿಗಳು
ಕಾಣಿಗಳು ಹರಿದೊಗೆದು ಬೀಸಿದವು ॥ ೪೦ ॥

ಉಕ್ಕಿ ಸಾಗರ ಚೆಲ್ಲಿ ಮುಕ್ಕುತಲಿ ಲೋಕಗಳ
ಬಿಕ್ಕಿ ಶಿವಗಣವು ಹೌಹಾರಿ । ಪಾರ್ವತಿಗೆ
ಉಕ್ಕರಿಸಿ ಬಿತ್ತು ಅಡಿಗಳಿಗೆ ॥ ೪೧ ॥

ಜಗದಂಬೆ ಶಿವ ಮರೆತು ಜಗದೊಳಗೆ ಕುಣಿಯುವನು
ಜಗ ಮುಳುಗಿ ಗೋಳು ಶಿವಲೋಕ । ಉಳಿಯುವದೆ
ನಗೆಯಲ್ಲ ನಿಲಿಸು ಶಿವಗುಣಿತ ॥ ೪೨ ॥

ನೋಡಿ ಗಿರಿಜೆಯು ತಿಳಿದು ಬೇಡಿದಳು ಕೈಮುಗಿದು
ಕೇಡೆನಲು ಶಿವನು ಕುಣಿಯುವದ । ನಿಲ್ಲಿಸಲು
ತೀಡಿ ಬೀಸಿದವು ಶಿವಗಾಳಿ ॥ ೪೩ ॥

ಎಲ್ಲೆಲ್ಲಿ ಶಾಂತತೆಯು ನಿಲ್ಲಿಸಲು ಶಿವಗುಣಿತ
ಸಲ್ಲಿಸಲು ಗಿರಿಜೆ ಶಿವಪೂಜೆ । ಜಗದೊಳಗೆ
ಗೊಲ್ಲ ಶಿವರೂಪ ತೋರಿಸಿದ ॥ ೪೪ ॥

ಪರಮನಪ್ಪಣೆ ಪಡೆದು ಪರಮಾತ್ಮಲಿಂಗಂದು
ಧರೆಯೊಳಗೆ ಗುಂಡನೆದೆಯೊಳಗೆ । ಸೇರುತಲಿ
ಅರಿತು ಗುಂಡಯ್ಯ ಕಣ್ತೆರೆದು ॥ ೪೫ ॥

ಮೈಮರೆತು ಗುಂಡಯ್ಯ ಕಾಮವೈರಿಯ ಕಂಡ
ಕ್ಷೇಮ ಸಂಪತ್ತ ಕೇಳಿದನು । ಶಿವ ನಕ್ಕು
ಪ್ರೇಮದಲಿ ನುಡಿದ ಗುಂಡನಿಗೆ ॥ ೪೬ ॥

ಈ ಮೂರು ಲೋಕದೊಳು ಹೂಮಾಲೆ ನಿನಗಿವೆ
ಭೂಮಿಯೊಳು ನಿನಗೆ ಮೆಚ್ಚಿದೆನು । ಎಲೆ ಗುಂಡ
ಸೀಮೆ ಮೀರಿಹುದು ಶಿವಭಕ್ತಿ ॥ ೪೭ ॥

ಶಿವಲೋಕದೊಳು ನಿನಗ ಶಿವಪದವ ಉಣಿಸುವೆನು
ಶಿವಗಣಕೆ ಸಾರಿ ಹೇಳುವೆನು । ಗುಂಡಯ್ಯ
ಶಿವಶರಣನೆಂದು ನಡೆ ಮೊದಲು ॥ ೪೮ ॥

ಬೇಡೆನಗೆ ಕೈಲಾಸ ಬಾಡುವದು ಕಾಯಕವು
ನೀಡೆನಗೆ ಶಿವನೆ ಕಾಯಕವ । ಕುಣಿದಾಡಿ
ನಾಡ ಹಂದರಕೆ ಹಬ್ಬಿಸುವೆ ॥ ೪೯ ॥

ಮಡಿಕೆಯನು ನುಡಿಸುವೆನು ನುಡಿಯು ಕೇಳಲಿ ನಿಮಗೆ
ಮಿಡಿಯುದಕೆ ಕೊಡತಿ ಬೆರಳಾಗಿ । ವರನೀಡು
ಮಿಡಿದು ಶಿವನಾದ ಬೆರೆಯುದಕೆ ॥ ೫೦ ॥

ಕರುಣಿಸಿದೆ ಗುಂಡಯ್ಯ ಪರಕೇಳಿ ನಸುನಗುತ
ಮಿರುಗಿ ಮಿಂಚುತಲಿ ಬೈಲಾದ । ಮಡಿಕೆಯನು
ವರಪಡೆದು ಗುಂಡ ನುಡಿಸಿದನು ॥ ೫೧ ॥

ಐದು ತಳದೊಳು ಮನವ ನಾದಿ ಕಾಯಕಮಾಡಿ
ಸಾಧಿಸಿದ ಶರಣ ಸಮರಸವ । ಗುಂಡಯ್ಯ
ಸೇದಿ ಆರರೊಳು ಬಯಲಾದ ॥ ೫೨ ॥

ತೊಂಡಲವು ಶಿವಗಣಕೆ ಗುಂಡಯ್ಯ ನೀನಾದಿ
ಇಂಡೆ ಕೊರಳೊಳಗೆ ಶಿವಗಾದಿ । ಶಿವಭಕ್ತ
ಗುಂಡ ನೀನೆಂದು ಜನಭಜಿಸಿ ॥ ೫೩ ॥

ಗುಂಡಯ್ಯ ಮೂರಾಸೆ ಭಂಡ ಜಗದೊಳು ಸುಟ್ಟು
ಗುಂಡ ಮಡಕಿಯೊಳು ಶಿವಭಕ್ತ । ರಸಕಾಸಿ
ಕಂಡು ಶಿವಸಾರ ಜನಕುಡಿದು ॥ ೫೪ ॥

ಹಿಂಡಿ ಮನವನು ಸೋಸಿ ಗುಂಡ ಮಾಡಿದ ಮಡಿಕಿ
ಜೊಂಡ ಸಂಸಾರ ಕುದಿಸಿದನು । ಜಗದೊಳಗೆ
ಉಂಡು ಶಿವಪದವ ಕೈದೊಳೆದ ॥ ೫೫ ॥

ಕುಂಬಾರ ಗುಂಡಯ್ಯ ತುಂಬಿ ತಿಗರಿಗೆ ಕೆಸರ
ಶಂಭುಹರನೆಂದು ತಿರುಗಿಸಲು । ಶಿವಕುಣಿದ
ಹಂಬಲಿಸಿ ಜಂಗ ಕಟಿಗೊಂಡು ॥ ೫೬ ॥

ಗುಂಡ ತಿಗರಿಯ ತಿರುವಿ ರುಂಡಧಾರಿಯು ಕುಣಿದು
ಥಂಡಿ ಬೀಳುತಲಿ ಬೆಳುವಲಕೆ । ಕುಂಬಾರ
ಗಿಂಡಿ ರಸಗಾಳಿ ಬೀಸುತಲಿ ॥ ೫೭ ॥

ಹಿಂಗಾರಿ ಬೆಳಸಾಗಿ ಮುಂಗಡವೆ ಬೆಳೆಬಂದು
ಟೆಂಗ ಬಿಳಿಜೋಳ ಒಕ್ಕುವದು । ಬೆಳುವಲವು
ಜಂಗಮಗೆ ಎದೆಯು ಹೊಸಬೆಳಸು ॥ ೫೮ ॥

ಹಂತಿಯದು ಹಾಡೆಂದು ಪಂತಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲೆ । ಗುಂಡಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೫೯ ॥

ಶರಣು ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸರಿ ಶರಣ ಗುಂಡಯ್ಯ । ನಮಗಿನ್ನು
ಹರಸರಿ ಹುಲುಸು ಹುಲ್ಲುಲ್ಲಿಗೊ ॥ ೬೦ ॥

ಕೃತಿ– ಕನ್ನಡ ಜಾನಪದ ಗೀತಗಳು

***

೭. ಗುಡಗುಂಟಿ ಅಮರೇಶ

ದುಂಡಗಲ್ಲಿನ ಮ್ಯಾಲೆ ತಂದುಂಡಿ ಏಳತಾನ ಬುತ್ತಿ
ಕಂದಾನ ಜೋಡಿ ಒಂದೇಳಿ ಬಾರಾ ತಂಗಿ ನೋಡ ಬಾರಾ
ನೋಡು ಬಾರವ್ವ ತಂಗಿ ನೋಡು ಬಾರಾ ಗುಡಿವಳಗ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ ॥ ೧ ॥

ಅತ್ತ ಬಂಡಿ ಮ್ಯಾಲ ಬಿಸುಂಡಿ ಏಳತಾನ ಬುತ್ತಿ
ಕಂದನ ಜೋಡಿ ಒಂದೇಳಿ ಬಾರಾ ತಂಗಿ ನೋಡು ಬಾರಾ
ನೋಡು ಬಾರವ್ ತಂಗಿ ನೋಡು ಬಾರಾ ಗುಡಿವಳಗ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ ॥ ೨ ॥

ಆಶಾಡ ಮರಗಳು ಬೀಸ್ಯಾಡಿ ಅತ್ತ್ಯಾನ
ಅತ್ತಿ ನೋಡ್ಯಾನ ತನ್ನ ಪರಿಶ ಅಮರೇಶ
ನೋಡು ಬಾರವ್ವ ತಂಗಿ ನೋಡು ಬಾರಾ ಗುಡಿ ಒಳಗ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ ॥ ೩ ॥

ಅತ್ತಿಯ ನೋಡ್ಯಾನ ತನ ಪರಿಶೆ ಅಮರೇಶ
ಇನ ಒಂದ ಕಳಸ ಬರಲಿಲ್ಲ ತಂಗಿ ನೋಡುಬಾರಾ
ನೋಡು ಬಾರವ್ವ ತಂಗಿ ನೋಡು ಬಾರ ಗುಡಿವಳಗ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ ॥ ೪ ॥

ಇನ್ನ ಒಂದ ಕಳಸ ಬರಲಿಲ್ಲೇಳ ಗುಂತಗುಳಿ
ಬಂಗಾರದ ಕಳಸ ಬಂಡಿಮ್ಯಾಲೆ ಇಟಗಂದು
ಬಂದಾರ ಗುಂತಗುಳಿ ದೊರಿಗೋಳು ತಂಗಿ ನೋಡು ಬಾರಾ
ನೋಡು ಬಾರವ್ವ ತಂಗಿ ನೋಡು ಬಾರ ಗುಡಿವಳಗ

ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ ॥ ೫ ॥

ಬಂಗಾರದ ಕಳಸ ಬಂಡಿಮ್ಯಾಗ ಇಟಗಂದ
ಬಂದಾರ ಗುಂತಗುಳಿ ದೊರಿಗೋಳ ತಂಗಿ ನೋಡುಬಾರಾ
ಬಂದಾರ ಗುಂತಗುಳಿ ದೊರಿಗೋಳೇಳ ಅಮರೇಶ
ಕಾಯಿ ಒಡದ ತೇರ ಎಳಸರವ್ವ ತಂಗಿ ನೋಡುಬಾರಾ
ನೋಡು ಬಾರವ್ವ ತಂಗಿ ನೋಡು ಬಾರಾ ಗುಡಿವಳಗ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ ॥ ೬ ॥

ಕುಗ್ಗಲಿ ಮರಗೋಳು ಬಗ್ಗುಸಿ ಅತ್ಯಾನ
ಅತ್ತಿ ನೋಡ್ಯಾನ ತನ ಪರಿಶೆ ತಂಗಿ ನೋಡುಬಾರಾ
ಇನ್ನ ಒಂದ ಕಳಸ ಬರಲಿಲ್ಲ ಗುಡಗಂಟಿ
ನೋಡು ಬಾರವ್ವ ತಂಗಿ ನೋಡು ಬಾರಾ ಗುಡಿವಳಗ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ ॥ ೭ ॥

ಇನ್ನ ಒಂದ ಕಳಸ ಬರಲಿಲ್ಲೇಳ ಗುಡಗುಂಟಿ
ಬೆಳ್ಳಿಯ ಈ ಕಳಸ ಬಂಡಿ ಮ್ಯಾಲೆ ಇಟಗಂದ
ಬಂದಾರ ಗುಡಗುಂಟಿ ದೊರಿಗೋಳ ತಂಗಿ ನೋಡು ಬಾರಾ
ನೋಡು ಬಾರವ್ವ ತಂಗಿ ನೋಡು ಬಾರಾ ಗುಡಿವಳಗ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರಾ ॥ ೮ ॥

ಬಂದಾರ ಗುಡಗುಂಟಿ ದೊರಿಗೋಳೇಳ ಅಮರೇಶ
ಚಪ್ಪಳಿಗಿಟ್ಟ ತೇರ ಎಳಸ್ಯಾರವ್ವ ತಂಗಿ ನೋಡುಬಾರಾ
ನೋಡು ಬಾರವ್ವ ತಂಗಿ ನೋಡು ಬಾರಾ ಗುಡಿವಳಗ
ರುಡಿಗೀಶ್ವರನ ಅಮರೇಶ ತಂಗಿ ನೋಡು ಬಾರ
ರುಡುಗೀಶ್ವರನ ಅಮರೇಶ ತಂಗಿ ನೋಡು ಬಾರಾ ॥ ೯ ॥

– ಕೃತಿ: ನಮ್ಮ ಕನ್ನಡ ಪ್ರೇಮದ ಜೋತಿ

***

೮. ಗೋರಕ್ಷ

ದೀನ ದಯಾ ಗೋರಕನಾಥ

ದೀನ ದಯಾ ಗೋರಕನಾಥ
ದಯಾ ತೋರೋ ಭಕ್ತ ವರದಾತ
ದೀನ ದಯಾ ಗೋರಕನಾಥ ॥ ೧ ॥

ನಾನಾ ಎಂಬುವವರ ಗರ್ವ ಹರಸಿದಂತ
ನಿನ ಎದಿ ಬೇಡಿದವಗೆ ಬೇಡಿದ ಕುಡುವಂತ
ದೀನ ದಯಾ ಘನ ಗೋರಕನಾಥ ॥ ೨ ॥

ಭದ್ರಿಕಾಶ್ರಮದಿ ತಪಗೈದಂತ
ಶ್ರೀ ಗುರು ದತ್ತನ ಕೃಪೆ ಪಡೆದಾತ
ದೀನ ದಯಾ ಘನ ಗೋರಕನಾತ ॥ ೩ ॥

ಗೋರಕನಾಥನ ವಾಸ ಗೋರಟಿಪುರ ಪ್ರಖ್ಯಾತ
ಮಾಡುತ ನಿನ್ನಯ ಧ್ಯಾಸ ಕಲಿ ವಿರೂಪಾಕ್ಷ
ದೀನ ದಯಾ ಘನ ಗೋರಕನಾಥ ॥ ೪ ॥

–ಶ್ರೀ ಮಲ್ಲಿಕಾರ್ಜುನ ಹಡಪದ, ಗೋರಟಾ
***

ದಯ ತೋರೋ ಮಹಾಮಹಿಮನೇ

ದಯೆ ತೋರೋ ಮಹಾ ಮಹಿಮನೇ ಶ್ರೀ ಗೋರಕ್ಷನೇ
ದಯ ತೋರೋ ಮಹಾ ಮಹಿಮನೇ ॥ ಪ ॥

ಸದಾ ನಿಮ್ಮ ಧ್ಯಾನವಗೈಯುತಲಿರುವೆವು
ದಯ ತೋರೋ ಮಹಾ ಮಹಿಮನೇ
ದಯ ತೋರೋ ಮಹಾ ಮಹಿಮನೇ ಶ್ರೀ ಗೋರಕ್ಷನೇ ॥ ೧ ॥

ಗುರುವಿನ ತೃಪ್ತಿಗಾಗಿ ನೇತ್ರ ಕೊಟ್ಟವನೇ
ಗುರುಭಕ್ತಿ ಮಿಗಿಲಾಗಿ ಮಾಡಿದನಾಥನೇ
ದಯೆ ತೋರೋ ಮಹಾ ಮಹಿಮನೇ ಶ್ರೀ ಗೋರಕ್ಷನೇ ॥ ೨ ॥

ಲೋಕದಿ ಸಾಬರಿ ಮಂತ್ರ ಪ್ರಕಟಿತನೇ
ಅನಂತ ಮಹಿಮೆಯ ತೋರಿದನಾಥಗೆ
ದಯೆ ತೋರೋ ಮಹಾ ಮಹಿಮನೇ ಶ್ರೀ ಗೋರಕ್ಷನೇ ॥ ೩ ॥

ಬಂಗಾರ ಮಣ್ಣಿಂದು ಒಗೆದು ಬಿಟ್ಟವನೇ
ಗುರು ಸಮಾಧಾನಕ್ಕಾಗಿ ಕನಕ ಗುಡ್ಡ ತೊರೆದವನೇ
ದಯೆ ತೋರೋ ಮಹಾ ಮಹಿಮನೇ ಶ್ರೀ ಗೋರಕ್ಷನೇ ॥ ೪ ॥

ಧರೆಯೋಳು ಗೋರಟಿಪುರ ಗೋರಕ್ಷನ ಜ್ಯೋತಿಯಪುರ
ಅವರದೇ ಆಧಾರ ವಿರೂಪಾಕ್ಷ ತಿಳಿಸ್ಯಾರ
ದಯೆ ತೋರೋ ಮಹಾ ಮಹಿಮನೇ ಶ್ರೀ ವಿರೂಪಾಕ್ಷನೇ ॥ ೫ ॥

–ಶ್ರೀ ಮಲ್ಲಿಕಾರ್ಜುನ ಹಡಪದ.

***

ಗೋರಕ್ಷನ ನಾಮ

ಗೋರಕ್ಷನ ನಾಮ ನುಡಿದರೆ ಜಲ್ಮ ಪಾವನ
ಗೋರಕ್ಷಾ ಆದಾನ ಭಕ್ತರ ಉದ್ಧಾರ ಮಾಡ್ಯಾನ ॥ ೧ ॥

ಕಾವಿಯ ಧರಿಸ್ಯಾನ ಬಗಲಲ್ಲಿ ಜೋಳಗಿ ಹಾಕ್ಯಾನ
ಗುರುವಿನ ಹುಡುಕ್ತಾನ ದೇಶ ಸಂಚಾರ ಮಾಡ್ಯಾನ ॥ ೨ ॥

ವೇಷ ಧರಿಸ್ಯಾನ ಪಾತಕ ಸಂಗಟ ಹೋಗ್ಯಾನ
ತಬಲ ಭಾರಸ್ಯಾರ ಗುರುವಿನ ಗುರುತಾ ಹಿಡದಾನ ॥ ೩ ॥

ಆಯಾ ಗೋರಕನಾಥ ತುಮಿ ಚಲೋ ಮಚೇಂದ್ರನಾಥ
ನಾಮ ನುಡುಸ್ಯಾನ ಆವಾ ಮೃದಂಗ ಭಾರಸ್ಯಾನ ॥ ೪ ॥

ವಾಪಾಸ ಗೊಂಟಾರಾ ಯಾಂಹಾ ಕ್ಯಾ ಡರ್ ಹೈ ಅಂತಾರ
ಡರ ಗೈ ನರ್ಮತೋ ನೀ ಚಲೋ ಅಂತಾರ ॥ ೫ ॥

ಮಚೇಂದ್ರ ಅಂತಾರ ನನ್ನ ಭಂಗಾರಂತಾರ
ಗುರುಗೋಳು ಕೇಳತಾರ ನನ್ನ ಭಂಗಾರ ಅಂತಾರ
ಕುಡುಸ್ತನಕ ನಾನು ಬರೋದಿಲ್ಲಂತಾರ ॥ ೬ ॥

ಗೋರಕ್ಷ ಅಂತಾರ ತೊಗೋರಿ ಬಂಗಾರಂತಾರ
ಭಸ್ಮ ಹಾಕ್ಯಾರಾ ಭಂಗಾರ ಗುಡ್ಡ ಮಾಡ್ಯಾರ ॥ ೭ ॥

ಗುರುಗೋಳು ನೋಡ್ಯಾರ ಭಾಳ ಸಮಧಾನಾಗ್ಯಾರ
ನಡಿಯಪ್ಪ ಹೋಗಾರಿ ಮುಂದಕ್ಕಂತಾರ ॥ ೮ ॥

ತಿರುಕೋತ ಹೊಂಟಾರ ಕಾಂತಿ ಬಿಕ್ಷಾ ಕೂಗ್ಯಾರಾ
ಕಣ್ಣ ಕೊಟ್ಟ ಕೊಟ್ಟಾರ ಗುರುವಿಗೆ ಕಡುಬಾ ತುಂಬ್ಯಾರ ॥ ೯ ॥

ಗುರುಗೋಳು ನೋಡ್ಯಾರ ನಿನ್ನ ಕಣ್ಣೇನಂತಾರ
ಕಣ್ಣಾ ಕೊಟ್ಟೇನಿ ನಾ ಕಡುಬ ತಂದೀನಿ ॥ ೧೦ ॥

ಗುರುಗೋಳು ನೋಡ್ಯಾರ ಭಾಳ ಸಮಧಾನ ಆಗ್ಯಾರ
ಭಸ್ಮ ಹಾಕ್ಯಾರ ಶಿಷ್ಯನ ಕಣ್ಣ ತಂದಾರ ॥ ೧೧ ॥

ಗೋರಕ್ಷನ ಶಿಷ್ಯ ಗೋರಟಿ ಊರೊಳಗೆ ಹಾನ
ಭಜನಾ ಮಾಡತಾನ ಗುರುವಿನ ನಾಮ ನುಡಿತಾನ ॥ ೧೨ ॥

–ಶ್ರೀ ಮಲ್ಲಿಕಾರ್ಜುನ ಹಡಪದ, ಗೋರ್ಟಾ(ಬಿ).

***

ಜಯಶ್ರೀ ಗೋರಕನೇ

ಜಯಶ್ರೀ ಗೋರಕನೆ ಜಯ ಮಂಗಳ ರೂಪನೇ
ಗೋರಟಿ ಗ್ರಾಮಕೆ ನೀನು ಸದಾಕಾಲ ರಕ್ಷಿಪನೇ
ಓಂ ಜಯಶ್ರೀ ಗೋರಕನೇ ॥ ೧ ॥

ಗಿರಿಜಾ ಪರ್ವತದಿ ಮಚೇಂದರ ಸಂಚಾರದಿ ಚಂದ್ರಗಿರಿ ಗ್ರಾಮದಲಿ
ಮಕ್ಕಳಿಲ್ಲದ ಸರಸ್ವತಿಗೆ ಗುರು ಮಚೇಂದರ ಕೊಟ್ಟ ಭಸ್ಮದಿ ಜನಿಸಿದಿ ನೀ
ಓಂ ಜಯಶ್ರೀ ಗೋರಕನೇ ॥ ೨ ॥

ಮೂಢ ಭಾವದಿ ಸರಸ್ವತಿ ತಾಯಿ ಚೆಲ್ಲಿದ ಭಸ್ಮದೋಳು
ನೀನು ಆಕಳ ಸಗಣಿಯೊಳು ಹನ್ನೆರಡು ವರುಷ ಭೂಮಿಯೋಳು ಧರಸಿದ
ಗೋರಕನೇ ಓಂ ಜಯಶ್ರೀ ಗೋರಕನೇ ॥ ೩ ॥

ಬದ್ರಿನಾಶ್ರಮದಲಿ ತಪವನುಗೈದು ದತ್ತನ ಕೃಪೆ ಪಡೆದು
ಗುರು ದತ್ತನ ಕೃಪೆ ಪಡೆದು ಶಂಕರನೊಲಿಸಿಕೊಂಡು
ಶಂಕರನೂಲಿಸಿಕೊಂಡು ಗುರು ಸೇವೆಯಗೈದು
ಓಂ ಜಯಶ್ರೀ ಗೋರಕನೇ ॥ ೪ ॥

ಸಂಜೀವಿನಿ ಮಂತ್ರವ ಪಠಿಸಿತು ಮಣ್ಣಿನ ಪುತ್ಥಳಿಗಿ ನೀನು
ಮಣ್ಣಿನ ಪುತ್ಥಳಿಗಿ ಜೀವ ಕಳೆಯನು ತುಂಬಿ ಜೀವ ಕಳೆಯನು ತುಂಬಿ
ಮಚೀಂದರ ಘನ ಬಲದಿ ಓಂ ಜಯಶ್ರೀ ಗೋರಕನೇ ॥ ೫ ॥

ಆದಿ ಅನಾದಿ ಯೋಗಿ ಬಂದು ತಪವನುಗೈದವನೇ ಇಲ್ಲಿ ತಪವನು ಗೈದವನು
ನಿನ್ನಯ ನಾಮವನಿಟ್ಟು ನಿನ್ನಯ ನಾಮವನಿಟ್ಟು ಗ್ರಾಮ ನಿರ್ಮಿಸಿದಾತನೇ
ಓಂ ಜಯಶ್ರೀ ಗೋರಕನೇ ॥ ೬ ॥

ಧರೆಯೋಳು ಗೋರಟಿ ಗ್ರಾಮದಲ್ಲಿ ಲಿಂಗ ರೂಪನೇ
ಗೋರಕ್ಷನ ನಾಮವೆ ಗೋರಟಿ ವಿರೂಪಾಕ್ಷನಿಗೆ
ಗೋರಟಿ ವಿರೂಪಾಕ್ಷನಿಗೆ ದಯವನು ತೋರಿದ ನೀ
ಓಂ ಜಯಶ್ರೀ ಗೋರಕನೇ ॥ ೭ ॥

–ಶ್ರೀ ಮಲ್ಲಿಕಾರ್ಜುನ ಹಡಪದ

***

ಗೋರಕನಾಥನ ಗುಡಿಯ ಮ್ಯಾಲೆ

ಗೋರಕನಾಥನ ಗುಡಿಯ ಮ್ಯಾಲೆ ಬಂಗಾರ ಛಡಿಯೇ
ಯಾರ ಕಟುಸ್ಯಾರೇ ಇದೇ ಗುಡಿಯೇ ॥ ಪ ॥

ಏನು ಬರುವಾದೇನು ಸಂಗಾಟ ಏನ ಬರುವಾದೇ
ಯಾರು ಕಟುಸ್ಯಾರೆ ಈ ಗುಡಿ ಗೋರಟಿ
ನೀಲದುಂಗರದ ರೈತರೇ ॥ ೧ ॥

ಕಲ್ಯಾಣನೆಂಬುದು ಬಲ್ಲೇನೆ ಹಡದಮ್ಮ
ಮಗ ಬಿತ್ತ್ಯಾರ ಬೆಳದಾರೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೨ ॥

ಹಾದ ಬಿತ್ತಿಯಾಗ ಬೆಳಿಯಂಥ ಶರಣರು
ಹಾರ ಕಲ್ಯಾಣದ ತಳದಲ್ಲೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೩ ॥

ಗಂಗಿ ಭಿಡಲ ಮಿಂಚಿ ಚಂದ್ರಮುಖಿ ಮಳಿ ಸುರಿದು
ಬಂಗಾರ ಚಿಗುದಾ ಸಸಿ ಹೋಯ್ತು
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೪ ॥

ಚಂದ್ರಮಾವನ ಬಲ್ಲೇ ಒಂದೇ ಚುಕ್ಕಿಯ ಬೆಳಗಿ
ಉಂಗಾರದ ಬೆಳಗೆ ಬೆರಳಗಿ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೫ ॥

ಉಂಗಾರದ ಬೆಳಗೆ ಬೆರಳಿಗೆ
ನಿನ ತಮ್ಮ ಚಂದ್ರಮನನ ಬೆಳಗೆ ತವರೀಗೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೬ ॥

ಬಂಗಲ ದೇಶ್ಯಾದಿಂದೇ ಬಂದಾರ ಗೋರುಕನಾಥ
ಬಂಗಾರ ಜಡಿಯವನ ಹುತ್ತ
ಏನ ಬರುವಾದೇನು ಸಂಗಟ ಏನ ಬರುವಾದೇ ॥ ೭ ॥

ಭಂಗೂವರ ಜಡಿಯೇ ಹೊನ್ನ ಹುತ್ತ ಗೋರುಟಿ
ತಳವ ಬುಡದಿಂದೇ ಇಳದಾರ
ಏನ ಬರುವಾದೇನು ಸಂಗಟ ಏನ ಬರುವಾದೇ ॥ ೮ ॥

ಶರಣರ ನೆನದಾರ ಸರಗಿಯ ಇಟ್ಟಾಂಗ
ಹರಳ ಮಲ್ಲಿಗಿ ಮುಡದ್ದಾಂಗ
ಏನ ಬರುವಾದೇನು ಸಂಗಟ ಏನ ಬರುವಾದೇ ॥ ೯ ॥

ಹರಳ ಮಲ್ಲೀಗಿ ಮುಡದ್ದಾಂಗ
ಕಲ್ಯಾಣದ ಶರಣರೀಗಿ ಜಾಬ ಬರದ್ದಾಂಗ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೧೦ ॥

ಚುಕ್ಕಿ ಚಂದರಮಗ ಹೊಂದು ಸಿಟ್ಟವರೇರಿ
ರಂಟಿಗಿ ಮರುಷವರ ಶುದ್ಧ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೧೧ ॥

ರಂಬಿವಿಗಿ ಮರುಷವರ ಶುದ್ಧ ನಿದ್ದರ
ಭಂಗಾರನ್ಯಾಕ ಬಗಸ್ಯಾಳೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೧೨ ॥

ಬಿದ್ಹೋಗ ಕಾಯಕ ಬಿಗುವಿನ ಮಾತ್ಯಾಕ
ಖಿದ್ದಾರವ್ಯಾಕೆ ಮನದಾಗ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೧೩ ॥

ಖಿದ್ದವರ್ಯಾಕ ಮನದಾಗ ಮರುತೇದಾಗ
ಮುದ್ದಾಗಿ ಮುರ ದಿನ ಇರಬೇಕೆ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೧೪ ॥

ಜೋಳದ ಹಂತಿ ಕಟ್ಟಿ ನಾಳಿಗಿ ತಿಂಗಳಾಗಿ
ಆನಿ ಕಟ್ಟಿದರ ನುರಿವಲದೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೧೫ ॥

ಆನಿ ಕಟ್ಟಿದಾರ ನುರಿವಲದೇ
ಕಂದನ ಹೋರಿ ಕಟ್ಟಿದರ ಮದನಾಗೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೧೬ ॥

ಸಂಭಾ ಸಂಭಾನಂಬ ಒಂಬತ್ತ ಎತ್ತಗೋಳೇ
ಶಿಂಬಿ ಶಿಂಬೆಂಬ ತೆನಿಗೋಳೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೧೭ ॥

ಶಿಂಬಿ ಶಿಂಬಿ ಎಂಬ ತೆನಿಗೋಳು ಚಂದುರುಕಾಂತ
ಸಂಭಾ ನಿನ ತೊಡಿ ಉದ್ದ ಮದನಾವೋ
ಏನ ಬರುವಾದೇನು ಸಂಗಾಟ ಏನ ಬರುವುದೇ ॥ ೧೮ ॥

ಸಂಗದೇವರ ಗುಂಡ ಥುಂಬಾಲೇ ಟುಳುಕಾಲೆ
ಕಟ್ಟಿ ಕೆಳಗಾಗಿ ಹರಿಯಾಲೇ
ಏನ ಬರುವಾದೇನು ಸಂಗಟ ಏನ ಬರುವಾದೇ ॥ ೧೯ ॥

ಕಟ್ಟಿ ಕೆಳಗಾಗಿ ಹರಿಯಲಿ
ಕಲ್ಯಾಣದ ಕಂತಾಲೆತ್ತೋಗಿ ಮುಗಿಯಾಲೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೨೦ ॥

ಸತ್ತರ ಸಂಗಾಟ ಏನಾ ಬರುತಾದಂತ
ಭಾವ ಕೇಳ್ಯಾಳೇ ಪುರುಷಗ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೨೧ ॥

ವಾರುತಿ ಕಿರೂತಿ ಅಂಗೈದಾಗಿನ ಲಿಂಗ
ಸಂಗಾಟ ಬರುತಾದ ಸತಿಯಳೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೨೨ ॥

ಹಾಡುವರ ಲಿಂಗ ಗಡುಗ್ಯಾಗ ಇಡುಬ್ಯಾಡೇ
ಮಡದಿ ನಿನುಗಲ್ಲೇ ಮುಡುಚೇಟ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೨೩ ॥

ಮಡದಿ ನಿನಗಲ್ಲ ಮುಡುಚಟ
ಶರಣರೆ ಸುಳುದಾರೇ ನಿನ್ನರಮನಿಯೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೨೪ ॥

ಈರ ಸಂಗಯ್ಯನ ಮಡದಿ ನಾರಿ ಚಂದ್ರಾಣಿದೇವಿ
ಕೋಲೂಟ ಉಂಡೇ ಬರುತಾಳೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೨೫ ॥

ಕೋಲ ಊಟ ಉಂಡೇ ಬರುತಾಳ
ಭಾಸ್ಕರಾಯ ಬೀದ್ಯಾಗ ಸೆರುಗಾ ಸೆಳದಾರೆ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೨೬ ॥

ಸ್ವಾನ ಮುಟ್ಟಿದ ಸೆರಗಾ ಏನಾ ಮಾಡಲಿನಂದೇ
ಸೀಳಿದಳ ಸೆರಗೇ ನಡವಿಗೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೨೭ ॥

ಸೀಳಿದಾಳೆ ಸೆರಗಾ ನಡವಿಗಿ ಕಲ್ಯಾಣದ
ಶರಣರಿಗಿ ಜವಾಬ ಬರುದಾಳೇ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೨೮ ॥

ಶರಣರು ಬಂದಾರ ಸಾಲ್ಹತ್ತಿ ನಿಂತಾರ
ಧಿಡ ಉಳ್ಳ ಮನಿಯ ಹುಡುಕ್ಯಾರ
ಏನ ಬರುವಾದೇನು ಸಂಗಾಟ ಏನ ಬರುವಾದೇ ॥ ೨೯ ॥

ಧಿಡವುಳ್ಳ ಮನಿಯೇ ಹುಡುಕ್ಯಾರ ಬಸವರಾಜ
ನಿಜವುಳ್ಳ ಭಕುತಾ ಹಿಡಿಪಾದ
ಏನ ಬರುವಾದೇನು ಸಂಗಾಟ ಏನಾ ಬರುವಾದೇ ॥ ೩೦ ॥

– ಶ್ರೀಮತಿ ಭಾಗ್ಯಮ್ಮ ಹಾಗೂ
ಶ್ರೀಮತಿ ರಾಜೇಶ್ವರಿ ಗೋರ್ಟಾ(ಬಿ).

***

೯. ಗ್ವಾಲಗೇರಿ ಲಿಂಗಯ್ಯ

ತೂಗಿರೆವ್ವ ತೂಗೀರೇ । ಗುರುವೆ ಗೊಲ್ಲಾಳ ತೊಟ್ಟೀಲ ॥ ॥ ಪ ॥

ತೆಂಗೀನ ಬನದೊಳಗ । ತಂಗೇರss ತೊಟ್ಟೀಲ ।
ತಂಗೇರೆಲ್ಲರು ತೂಗೀರೇ । ಗುರುವೆ ಗೊಲ್ಲಾಳ ತೊಟ್ಟೀಲ ॥ ॥ ೧ ॥

ಬಾಳಿಯ ಬನದೊಳಗ । ಬಾಲೇರ ತೊಟ್ಟೀಲ ।
ಬಾಲೇರೆಲ್ಲರು ತೂಗೀರೇ । ಗುರುವೆ ಗೊಲ್ಲಾಳ ತೊಟ್ಟೀಲ ॥ ॥ ೨ ॥

ನಿಂ[illegible] ಬನದೊಳಗ । ರಂಬೇರ ತೊಟ್ಟೀಲ
ರಂಬೇರೆಲ್ಲರು ತೂಗೀರೇ । ಗುರುವೆ ಗೊಲ್ಲಾಳ ತೊಟ್ಟೀಲ ॥ ॥ ೩ ॥

ಉತ್ತತ್ತಿ ಬನದೊಳಗ । ಮಿತ್ರೇರ ತೊಟ್ಟೀಲ ।
ಮಿತ್ತೇರೆಲ್ಲರು ತೂಗೀರೇ । ಗುರುವೆ ಗೊಲ್ಲಾಳ ತೊಟ್ಟೀಲ ॥ ॥ ೪ ॥

ಅರಸೀಣ ಬನದೊಳಗ । ಅರಸೇರ ತೊಟ್ಟೀಲ ।
ಅರಸೇರೆಲ್ಲರು ತೂಗೀರೇ । ಗುರುವೆ ಗೊಲ್ಲಾಳ ತೊಟ್ಟೀಲ ॥ ॥ ೫ ॥

ದೇಶಕ ದಿಕವಾದ । ವಾಸುಳ್ಳ ವಡಗೇರಿ
ವಾಸಮಾಡ್ಯಾನ ಮನಿವೊಳಗ । ಗೊಲ್ಲಾಳ ।
ತೂಗೀರೆವ್ವ ತೂಗೀರೇ । ಗುರುವೆ ಗೊಲ್ಲಾಳ ತೊಟ್ಟೀಲ ॥ ॥ ೬ ॥

ಸೂಚನೆ :– ಗ್ವಾಲಗೇರಿ ಗೊಲ್ಲಾಳೇಶ್ವರ ಜಾತ್ರೆಯ ಸಮಯದಲ್ಲಿ ಮಾಲಿ ಇಳಿಸುವಾಗ ಈ ಹಾಡು ಹಾಡುತ್ತಾರೆ

– ಶ್ರೀ ನಿಂಗಣ್ಣ ಮ.ಪೂಜಾರಿ

***

ಗ್ವಾಲಗೇರಿ ಲಿಂಗಯ್ಯ

ಗ್ವಾಲಗೇರಿಯ ಲಿಂಗ ಎಲಿಯ ಪೂಜಿನೆ ವಲ್ಲ ।
ಯಾಕೊ ನಮ್ಮನಿಗೆ ಬರವಲ್ಲೋ । ಲಿಂಗಯ್ಯ ।
ಲಾಬಾನದ ಹೊಗಿಯ ತಗೊವಲ್ಯೊ ॥ ೧ ॥

ಲಿಂಗಯ್ಯ ಲಿಂಗಯ್ಯನಂತೆ ತಿಂಗಳತನ ಹೋದ ।
ಲಿಂಗಯ್ಯ ನಮಗ ದೊರಿಲಿಲ್ಲ । ಗ್ವಾಲಗೇರಿ ।
ಬಂಗಾರದೊಳಗ ಮುಣಗ್ಯಾನೊ ॥ ೨ ॥

ಆಡಿನ ಹಿಕ್ಕಿಯ ತಂದು ತೀಡಿ ಲಿಂಗವಮಾಡಿ ।
ನೋಡಿರಿ ಶಿವನ ಮಹಿಮವೆ । ಗ್ವಾಲಗೇರಿ ।
ಆಡಿನ ಹಿಕ್ಯಾಗ ನೆನದಾನೊ ॥ ೩ ॥

ಒಳ್ಳೇದು ಗ್ವಾಲಗೇರಿ ಒಳಗೆ ಸೇದಿಯ ಬಾಂಯಿ ।
ಲಿಂಗಮುದ್ದರಿ ನೆಲಗಚ್ಚೊ । ಬಾಂವ್ಯಾಗ ।
ಅಪ್ಪಲಿಂಗಯ್ಯನ ಜಳಕವೊ ॥ ೪ ॥

ಗ್ವಾಲಗೇರಿಯ ಥೇರ ಮ್ಯಾಲಕೆ ಬಹುದೂರ ।
ಗಾಳಿಬೀಸಿದರ ಬಳಕುವದೊ । ಆ ಥೇರ ।
ಎಳಿಯ ಬಿಸಲಿಗೆ ಹೊಳಿತಾದೊ ॥ ೫ ॥

ಗೆಳಿಯ ಬರತಾನಂತ ಜಾತ್ರಿಗಿ ನಾ ಹೋದೆ ।
ಗೆಳಿಯ ಬರಲಿಲ್ಲ ಜಾತ್ರಿಗೊ । ಗ್ವಾಲಗೇರಿ ।
ಥೇರ ಬರಲಿಲ್ಲ ಜಾಗಕೊ ॥ ೬ ॥

ಹಾದಿಗ ಹೋಗವನ ಕೈಯಾಗ ಹೊಳೆವಗೋಲುಂಗ
ಹೋಗೊ ನಿನ ದಾರಿ ಬಹುದೂರ । ಗೊಲಗೇರಿ
ಥೇರ ನಿಂತಾದ ನಿನಗಾಗ್ಯೊ ॥ ೭ ॥

ಮಾಡಿಲ್ಲ ಮುಗಿಲಿಲ್ಲ ಮ್ಯಾಲ ಗದ್ದರಣಕಿಲ್ಲ
ಯಾಕಡದು ಬಂತು ಹಿರಿಹೊಳೆಯೊ । ಗ್ವಾಲಗೇರಿ
ಥೇರಿನ ಕಳಸ ಮುಣಗ್ಯಾದೊ ॥ ೮ ॥

ಇಂದಿಗಿ ಸ್ವಾಮಾರ ಸಂಗಯ್ಯನ ಅರಷಿಣ ।
ಲಿಂಗಯ್ಯ ನಿಬ್ಬಣಕ ಬರಬೇಕೊ । ಪಾತಳದ ।
ಗಂಗಮ್ಮ ಐರಾಣಿ ತರಬೇಕೊ ॥ ೯ ॥

ಕಾರಿಯ ಕಂಟ್ಯಾಗ ಹೇರೆತ್ತ ನಡದಾವ ।
ಹೇರೆತ್ತಿನ ಮ್ಯಾಗ ಜಗಜಂಪ । ಗೋಲಗೇರಿ
ಥೇರಿನ ಮ್ಯಾಗ ಕೊಡಿತಂಪೊ ॥ ೧೦ ॥

ಥೇರಿನ ಹಿಂದ್ಹಾನೊ ಥೇರಿನ ಮುಂದ್ಹಾನೊ ।
ಥೇರ ಚಾಂಗಿದರ ನಡುವ್ಹಾನೊ । ಲಿಂಗಯ್ಯ ।
ತಗ್ಗಿಯ ಮುಂದ್ಹಾನೊ ಬಸವಣ್ಣೊ ॥ ೧೧ ॥

ಥೇರಿನ ತತ್ತಿಗೆ ಟೆಂಗ ಹೊಡದಕಿನ್ಯಾರೊ ।
ಕಬ್ಬ ಹೊಡದಾಳ ಕಳಸಾಕೊ । ಆ ಬಾಲಿ ।
ಮಕ್ಕಳ ಹರಕಿ ಬೇಡ್ಯಾಳೊ ॥ ೧೨ ॥

ಗೋಕಾವಿಗ್ಹೋಗವರು ಈಕಾಯಿ ಒಯ್ಯರವ್ವ ।
ಗೋಕಾವಿ ಕೆಳಗ ಗೊಲಗೇರಿ । ಲಿಂಗಯ್ಯಗ ।
ಈ ಕಾಯಿ ಒಯ್ದು ಒಡಿರವ್ವೊ ॥ ೧೩ ॥

ಕಣದ ಪಾಳೆದಮ್ಯಾಲ ಕೆರಿನಿಂಬಿ ಗಿಡಹುಟ್ಟಿ ।
ಕರ್ಪುರ ಘಟಕ ಕುಡಿಚ್ಯಾಗಿ । ಗೊಲಗೇರಿ ।
ಲಿಂಗಯ್ಯನ ಮ್ಯಾಲ ಹೂವ್ಪುದರಿ ॥ ೧೪ ॥

ಕಲ್ಲ ಕಟ್ಟಿದ ಬಾವಿ ಮಲ್ಲಿಗಿ ಸೋಪಾನ
ಗೊಲ್ಲ ಗೊಲ್ಲೆಂಬ ಗೊಲಗೇರಿ । ಜಾತ್ರ್ಯಾಗ
ಗೊಲ್ಲನಾಗ್ಯಾನ ಬಸವಣ್ಣೊ ॥ ೧೫ ॥

– ಕೃತಿ: ಉತ್ತರ ಕರ್ನಾಟಕದ
ಹಂತಿಯ ಹಾಡುಗಳು

***

ಗ್ವಾಲಗೇರಿ ಲಿಂಗಯ್ಯ

ಶ್ರೀಶ್ರೈಲದಲ್ಲಿ ಇರುವಂಥ ಶ್ರೀ ಸಾಂಭ ಶಿವ ಹರನು
ಕುರಿ ಹಿಕ್ಕಿದೊಳು ಸೇರಿ ತೋರಿದಾನು ತನ್ನ ಲೀಲಾ ।
ಮೇಲಾದ ಗೋಲಗೇರಿ ಗೊಲ್ಲಾಳ ಲಿಂಗ ಮಾಡಿದಂತ ತಪಸೀಲ ।
ಕುಂತು ಕೇಳಬೇಕರಿ ಸಂತೋಷಲಿಂದ ಸರ್ವರೆಲ್ಲ ।
ವಚ್ಚ ಕುರುಬನ ಹುಚ್ಚ ಭಕ್ತಿಗಿ ಮೆಚ್ಚಿ ಶಂಕರ
ಶಂಕರ ಮುಕ್ತಿಕೊಟ್ಟ ಕೇವಲ ।
ಉದ್ಧಾರ ಮಾಡಲಾಕ ಸಿದ್ಧ ಆಗಿ ನಿಂತಿದಾನು ಜಗಪಾಲ ॥ ಜೀ ಜೀ ॥

ಗ್ವಾಲಗೇರಿ ಸೀಮಿಯೊಳಗ ತೋಲ ಮಂದಿ ಸಾಲ ಹಿಡಿದು
ಶ್ರೀಶೈಲಕ ಹೋಗುವಾಗ ಶಿವಹಾರ ಅಂತಿರು ದಾರಿ ಮ್ಯಾಲ ।
ಒಬ್ಬ ಕುರುಬ ಕುರಿ ಕಾಯ್ಕೋತ ನಿಂತು ಎಲ್ಲಾ ಕೇಳ್ಯಾನಲ್ಲ
ಹಿಂದ ಬರುವ ಜಂಗಮ ತಿಳಿಸಿ ಹೇಳತಾನ ತಪಸೀಲ ।
ಪರುತಗಿರಿ ಮಲ್ಲಯ್ಯನ ಪಾದ ದರುಶನ ಆದರ ಸಾಕು
ಪಾಪ ಎಲ್ಲ ಲೋಪ ಮಾಡತಾನ ಭೂಪಾಲ
ಸರ್ವ ದೋಷನಾಶ ಆಗತಾದ ಅಂಬೊ ಹಂಬಲ ॥ ಜೀ ಜೀ ॥

ಜಂಗಮ ಹೇಳ್ತಾನ ಲಿಂಗ ಭಾಳ ಅವ ಅಲ್ಲಿ
ಸಂಗಮನಾಥನ ಹಂತಿಲಿ ಸಾಲಾಗಿ ಸಾಲ ।
ರೊಕ್ಕ ಕೊಟ್ಟ ಒಯ್ಯವರೀಗಿ ಬೇಕಾದರ ಸಿಗತಾದ ಸಸ್ತಾದ ಮ್ಯಾಲ ।
ಎಲ್ಲ ಕೇಳಿ ಕುರುಬರ ಗೊಲ್ಲಾಳಗ ಆಯ್ತು ಹಂಬಲ ।
ಮಳ್ಳತಾನದಿಂದ ಅಂವ ಕುಳ್ಳಿ ಹೊನ್ನ ತಗುದು ಕೊಟ್ಟ
ಲಿಂಗ ಒಂದು ತಂದು ಕುಡು ಅಂದಾನಲ್ಲ ।
ಜಂಗಮ ಕೇಳಿ ಅವನ ಮಾತಿಗಿ ಕಬುಲ ಬಿಟ್ಟು ಆದ ಖುಸಿಯೇಲ ॥ ಜೀ ಜೀ ॥

ದುಮಾಲಿ :
ಅಯ್ನೋರ ಆಗಿ ಆನಂದ । ಠೀಕ ಆಯ್ತು ಅಂದ ।
ಹ್ವಾದ ಭರದಿಂದ । ಪುರುತಗಿರಿಗಿ ।
ಬಾಳ ಖರ್ಚಾ ಮಾಡ್ಯಾನ ದೇವರಿಗಿ ॥ ಜೀ ಜೀ ॥

ಮಲ್ಲಯ್ಯನ ಜಾತ್ರಿ ಹೆಚ್ಚಿಂದ । ಆಗಿತು ಚಂದ ।
ಮಾಡಿ ಅಂದ ಧುಂದ । ಹೊಂಟಿದಾನು ತಿರುಗಿ ।
ಭೌಪರಾಕ ಹೊಡಿಯತಿದ್ದ ಕೂಗಿ ॥ ಜೀ ಜೀ ॥

ಗೊಲ್ಲಾಳ ನಿಂತಿದಾನು ಮುಂದ । ಘಾತ ಆಯ್ತು ಅಂದ ।
ಮರ್ತು ನಾ ಬಂದ । ಸ್ವಾಮಿ ಲಿಂಗೈಗಿ ।
ಏನು ಹೇಳಲಿ ಹೋಗಿ ಇವನೀಗಿ ॥ ಜೀ ಜೀ ॥

ಏರು :
ಗಾಬರಿ ಆಗಿ ಸುತ್ತ ಮುತ್ತ ನೋಡಿದಾನು ಜಂಗಮನ ಮುಂದೆ
ಒಂದು ಆಡಿನ ಹಿಕ್ಕಿ ಬದ್ದಿತ್ತಲ್ಲ ।
ಕಾಲಿನಿಂದ ಕದ್ದ ತೊಗೊಂಡ ಯಾರು ನೋಡಿಲ್ಲ ।
ಜಂಗಮನ ಪಾದ ಅಂಗುಲದಿಂದ ಜನಸಿ ಬಂದಾನಲ್ಲ
ವಚ್ಚ ಕುರುಬನ ಹುಚ್ಚ ಭಕ್ತಿಗಿ ಮೆಚ್ಚಿ ಶಂಕರ ।
ಮುಕ್ತಿ ಕೊಟ್ಟಿದಾನ ಕೇವಲ ॥ ಜೀ ಜೀ ॥ ॥ ಚೌಕ ೧ ॥

ಗೊಲ್ಲಾಳ ಎಂಬೊ ಕುರುಬ ಗ್ವಾಲಗೇರಿ ಸೀಮಿ ಮ್ಯಾಲ ।
ಕುರಿ ಹಿಂಡ ಕಾಯತಿದ್ದ ದಾರಿ ನೋಡುತ್ತ ।
ಮನದೊಳು ಗ್ಯಾನಸ್ತಾನ ನಮ್ಮ ಅಯ್ನೋರು
ಇನ್ನ ಯಾಕ ಬರಲಿಲ್ಲ ಅಂತ ।
ಲಿಂಗ ತಂದಿನಿ ಓಡಿ ಅಂದು ಬಂದು ಜಂಗಮ ಮುಂದ ನಿಂತ ।
ನಮಸ್ಕಾರ ಮಾಡಿ ಗೊಲ್ಲಾಳ ಬೇಡಿಕೊಂಡು ಕೇಳತಾನ ।
ಏನು ಕಡಿಮಿ ನನಗ ಇಲ್ಲ ಅಂತ ।
ರೂಢಿಯಲ್ಲಿ ಬೇಡಿ ಬಂದಿನಿ ಹಾಲ ಹೈನ ಕೊಟ್ಟ ಭಗವಂತ ॥ ಜೀ ಜೀ ॥

ಹೊಂಬ ಕುರುಬ ಕೇಳತಾನ ಸಾಂಬಲಿಂಗ ಶಿವನಿಗಿ
ಹ್ಯಾಂಗ ಪೂಜಿ ಮಾಡ್ಬೇಕು ಹೇಳ ತರಬೇತ
ಮಳ್ಳ ಕುರುಬಗ ಸುಳ್ಳ ಲಿಂಗ ಕೊಟ್ಟಬಿಟ್ಟ ಮಾಡಿ ಸಿದ್ಧಾಂತ
ಗಟ್ಟಿ ನಂಬಿಗಿ ಇಟ್ಟು ನಡಿಯೊ ಹಾನ ಭಗವಂತ
ಕುರಿ ಹಿಕ್ಕಿ ಥಿಗ್ಗಿ ಹಾಕಿ ಮ್ಯಾಲ ಕೂಡಿಸಿ ಹಾಲ ಎರದ ।
ಲಿಂಗೈಗಿ ಅಭಿಷೇಕ ಪಂಚಾಮೃತ ।
ನಿತ್ಯ ಅವನು ಕುಂತಲ್ಲೆ ಸತ್ಯ ಶಿವನ ಸೇವಾ ಮಾಡುತ ॥ ಜೀ ಜೀ ॥

ಕುರಿ ಹಿಂಡ ಕಾಯಲಾಕ ಬ್ಹಾಳ ಇದ್ದಾರು ಆಳ ಮಂದಿ ।
ಕೇಳಿದಾನು ಅವರ ತಂದಿ ಪಾಲ ಮಸರ ಬಂದಿಲ್ಲ ಯಾಕ ಅಂತ ।
ಆಳ ಮಕ್ಳು ಹೇಳ್ತಾರ ಗೊಲ್ಲಾಳ ಮಾಡಿದಂಥ ವೃತ್ತಾಂತ ।
ಅಷ್ಟು ಕೇಳಿ ಅನು ಹೊಂಟಿದಾನು ಪಲ್ಲ ತಿನ್ನುತ್ತ ।
ಸಿಟ್ಟಿಲಿಂದ ಅಲ್ಲಿಗಿ ಬಂದು ಮೆಟ್ಟಿ ಕಾಲಿನಿಂದ ಒದ್ದ
ಕಟ್ಟೀದ ಕಟ್ಟಿ ಎಲ್ಲ ನಷ್ಟ ಆಯಿತ ।
ಹಾಲ ತುಪ್ಪ ಅಭಿಷೇಕ ಮಾಡಿದ ಲಿಂಗ ಮುಣಗಿ ಹೋಗಿತ ॥ ಜೀ ಜೀ ॥

ದುಮಾಲಿ :
ಗೊಲ್ಲಾಳ ಕುಂತಿದ ಪೂಜಿಗಿ । ಹೆಂತಾ ಸೋಜಿಗಿ ।
ಆಯಿತು ದಗಿ । ಮಾಡಬೇಕ ಏನ ।
ಹೊರಳ್ಯಾಡಿ ಬಿದ್ದು ಅಳತಾನ ॥ ಜೀ ಜೀ ॥

ಎದ್ದು ನೋಡಿ ಗಾಬರಿ ಆಗಿ । ತೊಗೊಂಡು ಕೊಡಲಿಗಿ ।
ಕಡದ ತಂದಿಗಿ । ಹೆಂತ ದೃಢವಾನ ।
ಹಾರಿತು ಅವನ ಅವಸಾನ ॥ ಜೀ ಜೀ ॥

ಹೌಹಾರಿ ಉರಳಿ ಧರುಣಿಗಿ । ಹುಡುಕಿ ಲಿಂಗೈಗಿ ।
ಸಿಗಲ್ದಂಗಿ ಆಗಿ । ಹೋದ ಭಗವಾನ ।
ಗೊಲ್ಲಾಳಗ ತಂದ ಬಂಧನಾ ॥ ಜೀ ಜೀ ॥

ಏರು :

ಗೊಬ್ಬರದೊಳಗೆ ಅಡಗಿ ಕುಂತ । ತಿಳಿಲಾರದು ಅವನ ಅಂತ ।
ಭಗವಂತ ಹಾಕಿದಾನು ಮಾಯದ ಜಾಲ ।
ತಿಳಿಲಾರ್ದೆ ತಂದಿಗಿ ಹೊಡ್ದಿದಾನ ಗೊಲ್ಲಾಳ ಹಾಲ ಹಾಲಾ ।
ಬೀರ ಅವನ ಬಲ್ಲೆ ಸತ್ತ ಬಿದ್ದಾನು ಅರುವೆ ಇಲ್ಲ ।
ವಚ್ಚ ಕುರುಬನ ಹುಚ್ಚ ಭಕ್ತಿಗಿ ಮೆಚ್ಚಿ ಶಂಕರ ।
ಮುಕ್ತಿ ಕೊಟ್ಟಿದಾನ ಕೇವಲ ॥ ಜೀ ಜೀ ॥ ॥ ಚೌಕ ೨ ॥

ಗಾಬರಿಗೊಂಡು ಗೊಲ್ಲಾಳ ಗೊಬ್ಬರದಾಗ ಹುಡುಕತಾನು ।
ಅಬ್ಬರಿಸಿ ಅಳತಾನು ಉರಳಿ ಧರಣಿಲಿ ।
ಇಲ್ಲೆ ಮುಣಗಿ ಹೋದ ಲಿಂಗೈಯ ಸಿಗಲಿಲ್ಲ ಹ್ಯಾಂಗ ಮಾಡಲಿ ।
ತಂದಿಗಿ ಹೊಡ್ದಿದಾನು ಕೊಡ್ಲಿ ಇತ್ತು ಅವನ ಹಂತೀಲಿ ।
ಇರಬಾರ್ದು ಅಂದು ತಾನು ಶಿವನ ಧ್ಯಾನ ಮಾಡಿದಾನು ।
ಹೊಡಕೊಂಡು ಸಾಯತಿದ್ದ ಅಷ್ಟರದಲ್ಲಿ ।
ಗಂಗಾಧರನು ಪ್ರಭುಲಿಂಗ ಪ್ರಸನ್ನ ಆಗಿ ಬಂದಾನ ಅಲ್ಲಿ ॥ ಜೀ ಜೀ ॥

ಹಿಡಿದು ಸಾಂಭಾ ಕೇಳತಾನು ಏನು ಬೇಡುತಿ ಬೇಡು ನೀನು ।
ನಾನು ದೃಢನೋಡಿ ಬಂದೆ ನಿನ್ನ ಹಂತಿಲಿ ।
ಗೊಲ್ಲಾಳಂತಾನ ಲಿಂಗೈಯ್ಯ ಕಳದಾನು ಹ್ಯಾಂಗ ಮಾಡಲಿ ।
ಸಿಕ್ಕರ ಸಾಕು ನನಗ ಏನೂ ಬೇಕಾಗಿಲ್ಲ ಲೋಕದಲ್ಲಿ ।
ಪ್ರಸನ್ನ ಆಗಿ ಶಿವನು ಲಿಂಗ ತಂದು ತೋರಸ್ಯಾನು ।
ಕುರುಬ ನೋಡ್ಯಾನ ಅಂಗ ಎಂಬೊ ಆತ್ಮದಲ್ಲಿ ।
ಸಾಕು ಇನ್ನ ನನ್ನಗ ಸದಾ ಕಾಲ ಇರ್ತಿನಿ ನಿನ್ನ ಹಂತಿಲಿ ॥ ಜೀ ಜೀ ॥

ಗ್ವಾಲಗೇರಿ ಗೊಲ್ಲಾಳನ ಭಕ್ತಿಗಿ ಮೆಚ್ಚಿ ಶಿವನು
ಗಚ್ಚಿ ಅಲ್ಲೇ ಕುಂತಿದಾನು ಸ್ವಚ್ಛ ಇದ್ದಿಲ್ಲ ಜ್ಯಾಗ ಏನ ಹೇಳಲಿ ।
ಕುರಿ ಹಟ್ಟಿ ಜಿಡ್ಡ ನಾತಾ ವಾಸ ಇತ್ತು ಭಾಳ ಗದ್ದಲಿ ।
ತಂದಿಗಿ ಮಗ ಕಡದು ಹಾಕ್ಯಾನ ಹೊಡ್ದು ಕೊಡ್ಲೀಲಿ ।
ಸ್ವಚ್ಛ ಮಾಡಿ ಎಬ್ಬ್ಯಾನಲ್ಲ ಗಚ್ಚಿ ಹಿಡದಾರ ಶಿವನ ಕಾಲ
ಹುಚ್ಚ ಕುರುಬಗ ಮೆಚ್ಚಿದಾನು ಧರಣಿಯಲ್ಲಿ
ಗೊಲ್ಲಾಳ ಲಿಂಗ ಅನಸಿ ಮೆರದಾನು ಗೋಲಗೇರಿಯಲ್ಲಿ ॥ ಜೀ ಜೀ ॥

ದುಮಾಲಿ :

ಭಕ್ತಿನೋಡಿ ಮುಕ್ತಿ ಕುಡುತಾನ । ಸ್ವಾಮಿ ಭಗವಾನ ।
ಮಾಡರಿ ಅವರ ಧ್ಯಾನ । ಬೇಗು ಬೆಳತನಕ ।
ಜಲ್ಮ ಆಗತಾದ ಸಾರ್ಥಕ ॥ ಜೀ ಜೀ ॥

ಯಾವ ಜಾತಿ ಆಗಿದರ ಏನ । ನಿರಾಳ ಇಡು ಮನ ।
ಭಕ್ತಿನೆ ಕಾರಣ । ಮುಕ್ತ ಆಗುದಕ ।
ಗುರು ಶಿಕ್ಷ ಬೇಕು ಮೋಕ್ಷಕ ॥ ಜೀ ಜೀ ॥

ಮೊಗಲಾಯಿ ಹೈದ್ರಾಬಾದಿ ದಕ್ಕನ್ನ । ಇಡಿ ಹಿಂದುಸ್ತಾನ ।
ಕರ್ನಾಟಕ ಘನ । ಕಲಬುರಗಿ ಜಿಲ್ಲಾಕ ।
ಧಂಗಾಪೂರ ಹೆಸರ ದೂರ ತನಕ ॥ ಜೀ ಜೀ ॥

ಏರು :
ಅಂಜನಿ ಸುತನಾದ ಸಂಜೀವ ಮಾರೂತಿ ದೇವರ ಕೃಪಾಲಿಂದ ।
ಕವಿ ಮಾಡಿ ಭಾಗಣ್ಣ ಇಟ್ಟಾನಲ್ಲ ।
ಬೇಕಾದವರು ಕಲಗಿ ಪದ ಕಲ್ತು ಹಾಡ್ರಿ ನಾಡಮ್ಯಾಲ ।
ಗೋಲಗೇರಿ ಲಿಂಗಯ್ಯ ಮೂಡಿ ಆಡಿನ ಹಿಕ್ಯಾಗ ಮಾಡಿ ಲೀಲ ।
ವಚ್ಚ ಕುರುಬನ ಹುಚ್ಚ ಭಕ್ತಿಗಿ ಮೆಚ್ಚಿ ಶಂಕರ ।
ಮುಕ್ತಿ ಕೊಟ್ಟಿದಾನು ಕೇವಲ ।
ಉದ್ಧಾರ ಮಾಡಲಾಕ ಸಿದ್ಧ ಆಗಿ ನಿಂತಿದಾನು ಜಗಪಾಲ ॥ ಜೀ ಜೀ ॥
॥ ಚೌಕ ೩॥

ಕೃತಿ : ಹರದೇಶಿ ನಾಗೇಶಿ
ಕವಿ : ಬಸವಣ್ಣಪ್ಪ ಧಂಗಾಪೂರ

***

ಎಳೆಯೋಣು ಬಾರ ಗ್ವಾಲಗೇರಿ ತೇರ

ಎಳೆಯೋಣು ಬಾರ ಗ್ವಾಲಗೇರಿ ತೇರ ।
ಭಕ್ತಿ ಮುಕ್ತಿಯ ಸಾರ ॥
ನಿತ್ಯ ಕಾಲದಲ್ಲಿ ಭಜನಿಯ ಮಾಡಿ ।
ಮುಕ್ತಿಯ ಪಡಿದಾರ ॥ ಎಳೆಯೋಣು ..... ॥ ಪ ॥

ದಿನನಿತ್ಯ ಕಾಲದಲ್ಲಿ ಜಳಕವ ಮಾಡಿ
ಹೊಂಟಾರ ಗೋಲಗೇರಿಗಿ ॥
ನೇಮದಿಂದ ಹಾಮದಿಂದ ಹೊಂಟಾರ ।
ಗೊಲ್ಲಾಳನ ದರುಶನಕ ॥ ಎಳೆಯೋಣು ..... ॥ ೧ ॥

ಬರದಿಂದ ಬಂದಿತ್ತು ಹಳ್ಳವ । ತುಂಬಿ ಸೋಸಿತ್ತು ।
ಕಂಬಳಿಯ ಹಾಸಿತ್ತು ॥

ಗೋರ ತಪಕೆ ಮೆಚ್ಚಿ ।
ಬಂದ ಆದಿ ಲಿಂಗ ವಡಗೇರಿಗಿ ॥ ಎಳೆಯೋಣು ..... ॥ ೨ ॥

ಸೋಮವಾರ ದಿಂದಲಿ ಪೂಜೆಯ ಮಾಡುತ್ತಿದ್ದ ।
ಗೋರ ಕುಂಬಾರ ॥
ಆಕಾಶದಿಂದ ಘಂಟಿ ತಾನೆ ನುಡಿತ್ತಿತ್ತು ।
ಒಂದೇ ಸವನ ॥ ಎಳೆಯೋಣು ...... ॥ ೩ ॥

ಗೋರ ಕುಂಬಾರಗ । ಹೇಳತಿದ್ದ ಲಿಂಗಯ್ಯ ।
ನಾ ಬರುವೆ ನಿನ್ಹಿಂದ ॥
ನೀ ಇದ್ದಲಿಗಿ ನಾ ಬರುವೆನು ।
ಹೊಳ್ಳಿ ನೋಡಬ್ಯಾಡಂತ ॥ ಎಳೆಯೋಣು ॥ ೪ ॥

– ಶ್ರೀ ನಿಂಗಣ್ಣ ಮಹಾಂತಪ್ಪ ಕುಂಬಾರ

***

ಗ್ವಾಲಗೇರಿ ಹುಟ್ಟಲಿ

ಗ್ವಾಲಗೇರಿ ಹುಟ್ಟಲಿ । ಹೊಸ ಮಠ ಕಟ್ಟಲಿ ।
ದಶಿವಂತರ ಬಾಳಿ ಚಿಗಿಯಲಿ । ಗೊಲ್ಲಾಳನ । ಶಿವಲಿಂಗು ಬನ್ನಿರೆಯ್ ॥
ದಶಿವಂತರ ಬಾಳಿ ಚಿಗಿಯಲಿ । ಗೊಲ್ಲಾಳನ ।
ಹಸುಮಗನ ಸತ್ಯ ನಡಿಯಲಿ । ಶಿವಲಿಂಗು ಬನ್ನಿರೆಯ್ ॥ ೧ ॥

ಗ್ವಾಲಗೇರಿ ಹುಟ್ಟಲಿ । ಹೊಸಮಠ ಕಟ್ಟಲಿ ।
ದಶಿವಂತರ ಕಬ್ಬ ಚಿಗಿಯಲಿ । ಶಿವಲಿಂಗು ಬನ್ನಿರೆಯ್ ॥
ದಶಿವಂತರ ಕಬ್ಬ ಚಿಗಿಯಲಿ । ಗೊಲ್ಲಳನ ।
ಹಸುಮಗನ ಸತ್ಯ ನಡಿಯಲಿ । ಶಿವಲಿಂಗು ಬನ್ನಿರೆಯ್ ॥ ॥ ೨ ॥

ಅಪ್ಪನ ಗುಡಿಯಾಗ । ಇಪ್ಪತ್ತು ಒಲಿ ಹೂಡಿ ।
ತುಪ್ಪದ ಹೋಳಿಗಿ ಬೆಳಗಾನ । ಶಿವಲಿಂಗು ಬನ್ನಿರೆಯ್ ॥
ತುಪ್ಪದ ಹೋಳಿಗಿ ಬೆಳಗಾನ । ಗೊಲ್ಲಾಳನ ।
ಅಪ್ಪ ಗೊಲ್ಲಾಳನ ನೆವದೆಕ । ಶಿವಲಿಂಗು ಬನ್ನಿರೆಯ್ ॥ ॥ ೩ ॥

ಅಣ್ಣನ ಗುಡಿಯಾಗ । ಹನ್ನೆರಡ ಒಲಿ ಹೂಡಿ ।
ಎಣ್ಹೋಳಿಗಿ ಬೆಳಗಾನ । ಶಿವಲಿಂಗು ಬನ್ನಿರೆಯ್ ॥

ಎಣ್ಣೋಳಿಗಿ ಬೆಳಗಾನ । ಗೊಲ್ಲಾಳನ ।
ಅಣ್ಣ ಗೊಲ್ಲಾಳನ ನೆವದೇಕ । ಶಿವಲಿಂಗು ಬನ್ನಿರೇಯ್ ॥ ॥ ೪ ॥

ಆಡಿನ ಹಿಕ್ಕಿಯ ತಂದು । ತೀಡಿ ಲಿಂಗವ ಮಾಡಿ ।
ನೋಡಿರಿ ಶಿವನ ಮಹಿಮವ । ಶಿವಲಿಂಗು ಬನ್ನಿರೆಯ್ ॥
ನೋಡಿರಿ ಶಿವನ ಮಹಿಮವ । ಗೊಲ್ಲಾಳನ ।
ಆಡಿನ ಹಿಕ್ಯಾಗ ನೆನದಾನ । ಶಿವಲಿಂಗು ಬನ್ನಿರೆಯ್ ॥ ॥ ೫ ॥

ಅಪ್ಪನ ಗುಡಿಯಾಗ । ಕಪ್ಪ ಮೂಗಿನಾಕೆ ।
ಬಣ್ಣ ತುಂಬ್ಯಾರ ಗರಿಗರಿಯ । ಶಿವಲಿಂಗು ಬನ್ನಿರೆಯ್ ॥
ಬಣ್ಣ ತುಂಬ್ಯಾರ । ಗರಿ ಗರಿಯ । ಗೌಡರ ಮಗಳ ।
ಕಳಸಕ ತುಂಬ್ಯಾಳ ಹಿಡಿ ಹೊನ್ನ । ಶಿವಲಿಂಗು ಬನ್ನಿರೆಯ್ ॥ ॥ ೬ ॥

ಅಣ್ಣನ ಗುಡಿಯಾಗ । ಸಣ್ಣ ಮೂಗಿನಾಕೆ ।
ಕರಪುರ ತುಂಬ್ಯಾರ । ಗರಿಗರಿಯ । ಶಿವಲಿಂಗು ಬನ್ನಿರೆಯ್ ॥
ಕರಪುರ ತುಂಬ್ಯಾರ । ಗರಿಗರಿಯ । ಗೌಡರ ಮಗಳ ।
ಕಳಸಕ ತುಂಬ್ಯಾರ ಹಿಡಿ ಹೊನ್ನ । ಶಿವಲಿಂಗು ಬನ್ನಿರೆಯ್ ॥ ॥ ೭ ॥

ಅಪ್ಪನ ಗುಡಿಯಾಗ । ದೊಡ್ಡ ದೊಡ್ಡ ಗಿಡ ಹುಟ್ಟಿ ।
ದೊಡ್ಡ ರುದ್ರಾಕ್ಷಿ ಜಪಮಣಿಯ । ಶಿವಲಿಂಗು ಬನ್ನಿರೆಯ್ ॥
ದೊಡ್ಡ ರುದ್ರಾಕ್ಷಿ ಜಪಮಣಿಯ । ಗೊಲ್ಲಾಳನ ।
ಬೆರಳ ತಾಕಿದರ ಉದುರ್ಯಾವ । ಶಿವಲಿಂಗು ಬನ್ನಿರೆಯ್ ॥ ॥ ೮ ॥

ಅಣ್ಣನ ಗುಡಿಯಾಗ । ಸಣ್ಣ ಸಣ್ಣ ಗಿಡಹುಟ್ಟಿ
ಸಣ್ಣ ರುದ್ರಾಕ್ಷಿ ಜಪಮಣಿಯ । ಶಿವಲಿಂಗು ಬನ್ನಿರೆಯ್ ॥
ಸಣ್ಣನೆ ರುದ್ರಾಕ್ಷಿ ಜಪಮಣಿಯ । ಗೊಲ್ಲಾಳನ ।
ಶಲ್ಯ ತಾಕಿದರ ಉದುರ್ಯಾವ । ಶಿವಲಿಂಗು ಬನ್ನಿರೆಯ್ ॥ ॥ ೯ ॥

ಪಲ್ಲಕ್ಕಿ ಹೊತ್ತಣ್ಣ । ಮೆಲ್ಲಕ ನಡಿರೆಣ್ಣ ।
ಕಲ್ಲಾಗ ಕಾಲ ತಗುಲ್ಯಾವ । ಶಿವಲಿಂಗು ಬನ್ನಿರೆಯ್ ॥
ಕಲ್ಲಾಗ ಕಲ ತಗುಲ್ಯಾವ । ಗೊಲ್ಲಾಳನ ।
ಪಲ್ಲಕ್ಕಿ ಮುತ್ತ ಉದುರ್ಯಾವ । ಶಿವಲಿಂಗು ಬನ್ನಿರೆಯ್ ॥ ॥ ೧೦ ॥

ಛತ್ರಕಿ ಹಿಡದಣ್ಣ । ಮೆಲ್ಲಕ ನಡಿರೆಣ್ಣ ।
ಕಲ್ಲಾಗ ಕಾಲ ತಗುಲ್ಯಾವ । ಶಿವಲಿಂಗು ಬನ್ನಿರೆಯ್ ॥
ಕಲ್ಲಾಗ ಕಾಲ ತಗುಲ್ಯಾವ । ಗೊಲ್ಲಾಳನ ।
ಛತ್ರಕೆನ ಗೊಂಡೆ ಸಡಲ್ಯಾವ । ಶಿವಲಿಂಗು ಬನ್ನಿರೆಯ್ ॥ ॥ ೧೧ ॥

ಕಳಸ ಹಿಡಿದಕ್ಕ । ಮೆಲ್ಲಕ ನಡಿರೆವ್ವ ।
ಕಲ್ಲಾಗ ಕಾಲ ತಗುಲ್ಯಾವ । ಶಿವಲಿಂಗು ಬನ್ನಿರೆಯ್ ॥
ಕಲ್ಲಾಗ ಕಾಲ ತಗುಲ್ಯಾವ । ಗೊಲ್ಲಾಳನ ।
ಕಳಸದಾನೆಣ್ಣಿ ತುಳಕ್ಯಾವ । ಶಿವಲಿಂಗು ಬನ್ನಿರೆಯ್ ॥ ೧೨ ॥

ಮಕ್ಕಳ ಬೇಡವರು । ಪಟ್ಟಣಕ ನಡಿರೆವ್ವ ।
ಪಟ್ಟಣದ ತಳಗ ಗೋಲಗೇರಿ । ಶಿವಲಿಂಗು ಬನ್ನಿರೆಯ್ ॥
ಪಟ್ಟಣದ ತೆಳಗ ಗೋಲಗೇರಿ । ಗೊಲ್ಲಾಳನು ।
ತೊಟ್ಟೀಲ ಹೊರಸಿ ಕಳವ್ಯಾನ । ಶಿವಲಿಂಗು ಬನ್ನಿರೆಯ್ ॥ ೧೩ ॥

ಆಡಿನ ಹಿಕ್ಕಿಯ ತಂದು । ತೀಡಿ ಲಿಂಗವ ಮಾಡಿ ।
ನೋಡಿರಿ ಶಿವನ ಮಹಿಮವ । ಶಿವಲಿಂಗು ಬನ್ನಿರೆಯ್ ॥
ನೋಡಿರಿ ಶಿವನ ಮಹಿಮವ । ಗೊಲ್ಲಾಳ ।
ಆಡಿನ ಹಿಕ್ಕ್ಯಾಗ ನೆನದಾನ । ಶಿವಲಿಂಗು ಬನ್ನಿರೆಯ್ ॥ ॥ ೧೪ ॥

ಆಡಿನ ಹಿಕ್ಕ್ಯಾಗ ನೆನದಾನ ಹಿರಿಹೊಳಿಯ
ಹಾಲ ಬಂದಾವ ಅಭಿಷೇಕ । ಶಿವಲಿಂಗು ಬನ್ನಿರೆಯ್ ॥
ಹಾಲಾನೆ ಬಂದಾವ ಅಭಿಷೇಕ । ಗೊಲ್ಲಾಳನ ।
ಬಿಂದಗಿ ಎಲಿಯ ಬಂದಾವ ಪೂಜಕ । ಶಿವಲಿಂಗು ಬನ್ನಿರೆಯ್ ॥ ॥೧೫ ॥

ಎಲಿಯನೆ ಬಂದಾವ । ಪೂಜಕ ಗೊಲ್ಲಾಳನ ।
ಅಪ್ಪ ನಿನ ಪೂಜಿ ಉದಿಯಾಕ । ಶಿವಲಿಂಗು ಬನ್ನಿರೆಯ್ ॥
ಅಪ್ಪ ನಿನ ಪೂಜಿ ಉದಿಯಾಕ । ಗೊಲ್ಲಾಳನ ।
ಆಕಾಶದ ಘಂಟಿ ಥಣಲೆಂದ । ಶಿವಲಿಂಗು ಬನ್ನಿರೆಯ್ ॥ ೧೬ ॥

ಇಲ್ಲೀಗಿ ಹರಹರ । ಇಲ್ಲೀಗಿ ಶಿವಶಿವ ।
ಇಲ್ಲಿಗಿ ಗೊಲ್ಲಾಳನ ಪದ ಮುಂದ । ಶಿವಲಿಂಗು ಬನ್ನಿರೆಯ್ ॥
ಇಲ್ಲೀಗಿ ಗೊಲ್ಲಾಳನ ಪದ ಮುಂದ । ಹಾಡಿದರ ।
ಕಾಯಿ ಒಡೆದ ಕೈಯ ಮುಗದೇವ । ಶಿವಲಿಂಗು ಬನ್ನಿರೆಯ್ ॥ ೧೭ ॥

ಯಾ ಅವ್ವ ಹಾಡ್ಯಾಳ । ಯಾ ಅವ್ವ ಕೇಳ್ಯಾಳ ।
ಯಾ ಅವ್ವ ಗಣಿತ ಮುರದಾಳ । ಶಿವಲಿಂಗು ಬನ್ನಿರೆಯ್ ॥
ಗ್ವಾಲಮ್ಮ ಹಾಡ್ಯಾಳ । ಕಮಲಮ್ಮ ಕೇಳ್ಯಾಳ ।
ಶಾಂತಮ್ಮ ಗಣಿತ ಮುರದಾಳ । ಶಿವಲಿಂಗು ಬನ್ನಿರೆಯ್ ॥ ॥ ೧೮ ॥

ಹಾಡೀದ ಅವ್ವಗ ಸೀರಿ ಕೇಳಿದ ಅವ್ವಗ ಕುಬಸ
ಗಣಿತ ಮುರದವ್ವಗ ನೆನಿದಂಡಿ । ಶಿವಲಿಂಗು ಬನ್ನಿರೆಯ್ ॥
ಹಾಡಿ ಹಾಡಿ ನಮ್ಮ ಬಾಯಿ ಬತ್ಯಾವ ।
ಬಾಯಿ ಬೇಡ್ಯಾವ ವಿಳ್ಯದಡಕೆ । ಶಿವಲಿಂಗು ಬನ್ನಿರೆಯ್ ॥ ॥ ೧೯ ॥

ಬಾಯಿನೆ ಬೇಡ್ಯಾವ ವಿಳ್ಯದಡಕೆ
ಶಾಂತಮ್ಮ ಹಚ್ಚಿ ಕೊಡವ್ವ ವೀಳ್ಯದೆಲಿಯ । ಶಿವಲಿಂಗು ಬನ್ನಿರೆಯ್ ॥೨೦ ॥

– ಶ್ರೀಮತಿ ಭೌರಮ್ಮ ಅಮ್ಮಣ್ಣ ಪೂಜಾರ

***

ಗೋಲಗೇರಿ ಅಂಬುದು ಗೊಲ್ಲನ ಕುರಿದೊಡ್ಡಿ

ಗ್ವಾಲಗೇರಿ ಅಂಬುದು । ಗೊಲ್ಲನ ಕುರಿ ದೊಡ್ಡಿ ।
ಅಲ್ಲಿ ನಿಂಗಯ್ಯ ನೆನದಾನ । ಕಾರಣದಿಂದ ।
ಗ್ವಾಲಗೇರಿ ಅಂಬ ಹೆಸರಾಗಿ ॥ ॥ ೧ ॥

ಆಡಿನ ಹಿಕ್ಕಿಯ ತಂದು । ತೀಡಿ ಲಿಂಗವ ಮಾಡಿ ।
ನೋಡಿರಿ ಶಿವನ ಮಹಿಮವೊ । ಗೋಲಗೇರಿ ।
ನಿಂಗಯ್ಯ ಆಡಿನ ಹಿಕ್ಯಾಗ ನೆನೆದಾನ ॥ ॥ ೨ ॥

ಸಿದ್ಧ ಸಿದ್ಧರ ಕೂಡಿ । ಬುದ್ಧಿವಂತರು ಕೂಡಿ ।
ಸಿದ್ಧಯ್ಯ ಕೂಡಿ ಶಿವಕೂಡಿ । ಮಾಡ್ಯಾರ ।
ಅಪ್ಪ ಗೊಲ್ಲಾಳನ ಹೊಸತೇರ ॥ ॥ ೩ ॥

ಅಪ್ಪನ ತೇರಿಗಿ । ಇಪ್ಪತ್ತ ಮಿಣಿಹಚ್ಚಿ ।
ಪಪ್ಪಳ ಶಲ್ಯ ಪತಿ ಹಚ್ಚಿ । ನಿಂಗಯ್ಯನ ।
ಚಪ್ಪಳಗಿ ಇಟ್ಟು ತೇರ ಎಳದೇವ ॥ ॥ ೪ ॥

ಗ್ವಾಲಗೇರಿಯ ತೇರ । ಗಾಲ ಮೆಲಾಗ್ಯಾವ ।
ಮ್ಯಾಲಿನ ಕಳಸ ಅದರ‍್ಯಾವ । ಗೊಲ್ಲಾಳ ।
ಗಾಬರಿಯಾಗ್ಯಾನ ಗಳಗ್ಯಾಗ ॥ ೫ ॥

ಆಲಗೂರ ಅಕ್ಕಿ । ಗ್ವಾಲಗೇರಿಯ ಬೆಲ್ಲ ।
ಕೆಳಗ ಡಂಬಳದ ಕೆನಿ ಮಸರ । ಕೂಡಿಸಿ ।
ಅಪ್ಪ ನಿಂಗಯ್ಯನ ಅಭಿಷೇಕ ॥ ॥ ೬ ॥

ಗ್ವಾಲಗೇರಿಯ ಗೊಲ್ಲ । ಎಲಿ ಪೂಜಿನೇ ಒಲ್ಲ ।
ಯಾಕೋ ನಮ್ಮನಿಗಿ ಬರುವಲ್ಲ । ಗೊಲ್ಲಾಳ ।
ಪಲ್ಲಕ್ಕಿ ಬೇಡಿ ಮುನಿದಾನ ॥ ॥ ೭ ॥

ಪಲ್ಲಕ್ಕಿ ಹೊತ್ತಣ್ಣ । ಮೆಲ್ಲಕ ನಡಿರೆಣ್ಣ ।
ಕಲ್ಲಾಗ ಕಾಲ ಅದರ್‍ಯಾವ । ಗೊಲ್ಲಾಳನ
ಪಲ್ಲಕ್ಕೆನ ಮುತ್ತ ಉದುರ್‍ಯಾವ ॥ ೮ ॥

ಕುರಿಹಿಂಡ ಕಟಗೊಂಡು । ಮರತಿದ್ದ ಬಡತನ ।
ಇರುವುತಲಿ ಹುಟ್ಟಿ ಮಗನೊಬ್ಬ । ಗೊಲ್ಲಾಳ ।
ವರಪುತ್ರನಾದ ಪಡೆದವನ ॥ ೯ ॥

ಹಡೆದವನು ಬಡ ಕುರುಬ । ನಡೆಸಿದ್ದ ಜೀವನವ ।
ಕಡದುಳಿದ ಮಡದಿಯೊಡಗೂಡಿ । ಕುರಿಹಿಂಡ ।
ಎಡಬಿಡದೆ ಬೆಳಸಿ ದೊರಿಯಾದ ॥ ೧೦ ॥

ಮಳ್ಳಿ ಮಾಗಣಗೇರಿ । ಎಲ್ಯಾದ ಕುಳಗೇರಿ ।
ತೆಗ್ಗೀನಾಗಾದ ಗ್ವಾಲಗೇರಿ । ನಿಂಗಯ್ಯನ ।
ಹುಬ್ಬಿನ್ಯಾಗಾದ ಹರಿನಾಮೋ ॥ ೧೧ ॥

ಕಲ್ಲ ಕಟ್ಟಿಸಿದ ಬಾಂವಿ । ಮಲ್ಲೀಗಿ ಸೊಪ್ಪಾನ ।
ಗಲ್ಲ ಗುಲ್ಲೆಂಬ ಗ್ವಾಲಗೇರಿ । ನಿಂಗಯ್ಯ ।
ಮಲ್ಲೀಗಿ ಹೂವಿನ್ಯಾಗ ನೆನದಾನ ॥ ೧೨ ॥

ತೆಗ್ಗಿಲ್ಲ ತೆವರಿಲ್ಲ । ಮುಗ್ಯಾವ ಎರಡಾನಿ ।
ತೆಗ್ಗಿನ್ಯಾಗಾದ ಗ್ವಾಲಗೇರಿ । ನಿಂಗಯ್ಯನ ।
ಹುಬ್ಬಿನ್ಯಾಗಾದ ಹರಿನಾಮೋ ॥ ೧೩ ॥

ನಿಂಗಯ್ಯನ ಗುಡಿಮುಂದ । ನಿಂಗ ಮುದ್ರಕಿಯ ಕಲ್ಲ ।
ನಿಂದ್ರಸಿ ಎತ್ತಿ ಇಳದಾಳ । ಆ ಬಾಲಿ ।
ವಂದಿಸಿ ಕೈಯ್ಯ ಮುಗಿದಾಳ ॥ ೧೪ ॥

– ಶ್ರೀ ಮಡಿವಾಳಪ್ಪ ಪೂಜಾರಿ

***

ಚಪ್ಪರದ ಪಲ್ಲಂಗಿನ ಮ್ಯಾಲ

ಚಪ್ಪರದ ಪಲ್ಲಂಗನ ಮ್ಯಾಲ । ಚಿತ್ರದ ಸೀಗಿಕಾಯಿ ।
ಬಾಲ ಗೊಲ್ಲಾಳನ ಭೂಸಾನಗಯ್ಯ ॥ ಜೋ ಜೋ ॥
ಮಾಲಿಂಗ ಮಲಗಯ್ಯ ॥ ೧ ॥

ಬಾಳಿಯ ಬನದಾಗ । ಬಾಲ್ಯಾರು ತೊಟ್ಟಿಲ ಕಟ್ಟಿ
ಬಾಲ ಗೊಲ್ಲಾಳನ ಭೂಸಾನಗಯ್ಯ ॥ ಜೋ ಜೋ ॥
ಮಾಲಿಂಗ ಮಲಗಯ್ಯ ॥ ೨ ॥

ನಿಂಬಿಯ ಬನದಾಗ । ರೆಂಬೇರು ತೊಟ್ಟಿಲ ಕಟ್ಟಿ ॥
ರಂಬಾ ಗೊಲ್ಲಾಳನ ಭೂಸಾಗಯ್ಯ ॥ ಜೋ ಜೋ ॥
ಮಾಲಿಂಗ ಮಲಗಯ್ಯ ॥ ೩ ॥

ಅರಸೀಣ ಬನದಾಗ । ಸರಸೇರು ತೊಟ್ಟಿಲ ಕಟ್ಟಿ ।
ಅರಸ ಗೊಲ್ಲಾಳನ ಭೂಸಾನಗಯ್ಯ ॥ ಜೋ ಜೋ ॥
ಮಾಲಿಂಗ ಮಲಗಯ್ಯ ॥ ೪ ॥

ಉತ್ತತ್ತಿ ಬನದಾಗ । ಮಿತ್ರೇರ ತೊಟ್ಟಿಲ ಕಟ್ಟಿ ।
ಪುತ್ರ ಗೊಲ್ಲಾಳನ ಭೂಸಾನಗಯ್ಯ ಜೋ ಜೋ ॥
ಮಾಲಿಂಗ ಮಲಗಯ್ಯ ॥ ೫ ॥

ತೆಂಗೀನ ಬನದಾಗ ತಂಗೇರು ತೊಟ್ಟಿಲ ಕಟ್ಟಿ ।
ತಮ್ಮ ಗೊಲ್ಲಾಳನ ಭೂಸಾನಗಯ್ಯ ॥ ಜೋ ಜೋ ॥
ಮಾಲಿಂಗ ಮಲಗಯ್ಯ ॥ ೬ ॥

– ಶ್ರೀಮತಿ ಭೌರಮ್ಮ ಅಮ್ಮಣ್ಣ ಪೂಜಾರಿ

***

ಗೋಲಗೇರಿ ನಿಂಗಯ್ಯ

ಜೋ ಜೋ ಎಂದು ಜಲ್ಮಾಕೆ ಬಂದು
ಜೋ ಎಂದು ಗೊಲ್ಲಾಳ ಶಿವ ತಂದೆನೆಂದು
ಡವಳಾರ ಪಟ್ಟಣಕ ಅಧಿಕಾರ ನಂದು
ಜೋಗುಳ ಪದಕೆಲ್ಲ ಸಾದೇವನಂದ ಜೋ ಜೋ ॥ ೧ ॥

ಡಂಬಾಳ ತಳದಲ್ಲಿ ಹಾಕಿರಿ ಹಟ್ಟಿ
ಪರವುತಾಕಾ ರ‍್ಯಾದವರಿಗಿ ಆಗಿರಿ ಬೆಟ್ಟ
ಅವರ ಪಾಲಿಗಿ ನೀವು ಆಗಿರಿ ಎಟ್ಟಿ ಜೋ ಜೋ ॥ ೨ ॥

ಕಾಶಿ ಪರ್ವತಕಾ ಹೋಗ್ತಿರಿ ಕಂದಾ
ದಕ್ಷಿಣ ಕೊಟ್ಟು ನಿಂಗ ತಾ ಎಂದಾ
ಗಿರಿ ಏರಿದ ಅಯ್ಯ ನಂದಯ್ಯನು
ನಿಂಗಾ ತಾ ಒಂದು ಬಿಟ್ಟಾ ಬಂದವನು
ಅವನ ಖೂನಾ ಕಂಡು ಗಾಬರಿಯಾದವನು
ಪರಿ ಪರಿಕೊಂಡು ಕುರಿಯ ಹಿಕ್ಕಿಯನು ಜೋ ಜೋ ॥ ೩ ॥

ಕುರುಬಾನ ಕೈಯಲ್ಲಿ ಕೊಟ್ಟಾ ನಿಂಗವನು
ನಿತ್ಯ ಅಭಿಷೇಕ ಮಾಡಂತ್ಹೇಳಿದನು
ಮುಗದಾ ಗೊಲ್ಲಾಳ ತಾ ಮಾಡಿದನು
ತಂದಿಯ ಶಿರವಾ ಕಡದಾಹಾಕಿದನು ಜೋ ಜೋ ॥ ೪ ॥

ಯಾರಿಗಿ ಆಗದಂಥ ತೇರನೇರಿಸಿದಾ
ದೇಶಾದೊಳಗ ತನ್ನ ಭಕ್ತರ ಸಲುವಿದಾ
ಇಂಗ್ರೇಜಿ ಸರಕಾರಕ್ಕ ಪ್ರಸಿದ್ಧವಾದ ಜೋ ಜೋ ॥ ೫ ॥

ತಾಯಿ ದುಗ್ಗಾಣಿ ಹೊಟ್ಟೀಲಿ ಹುಟ್ಟಿದಿ ಗೊಲ್ಲ
ಉಸಬಾನೆ ಉಂಡ ಶಿವತಾನೇ ಬಲ್ಲ
ಅರತಾ ಅರಿಯದುಂಟ ಅಂವ ಏನು ಬಲ್ಲ
ಸಕಲ ದೇವರೊಳಗೆ ಸಂಪನ್ನನಲ್ಲ ಜೋ ಜೋ ॥ ೬ ॥

ಅತ್ತಿ ಮನಿ ಸೊಸಿ ಡಂಬಳ ಗೌರವ್ವ
ಅಕೀಗಿ ತೋರಿಸ್ಥ ತನ್ನ ಮಹಿಮಾವ
ನಂದಿ ಈಶ್ವರ ಲಕ್ಷ್ಮೀ ಬಾಳಿಗೊನಿಯವನು ಜೋ ಜೋ ॥ ೭ ॥

ಈ ಪದಾ ಹುಟ್ಟಿತಾ ಈ ಸ್ಥಲವಾ
ಇಂದ ಈರಪಾಕ್ಷಪ್ಪ ತಾ ಘೋರ ಚಲುವಾ
ಲಾಲಿಸಿ ಕೇಳಿದವರಿಗಿ ಆದಾರಿ ಫಲವಾ ಜೋ ಜೋ ॥ ೮ ॥

– ಕೃತಿ: ಗೆಜ್ಜೆ ನುಡಿದಾವ ಗಿಲಿಗಿಲಿ

***

ಬಂಗಾರ ತೊಟ್ಟಿಲು

ಬಂಗಾರ ತೊಟ್ಟಿಲು ಬೆಳ್ಳಿ ಸರಪಳಿಯೆ
ರಂಗ ಮಾಣಿಕದ್ದರಳು ಕಟ್ಟ್ಯಾರರಗಿಳಿಯೆ
ಮಂಗಲ ವಾದ್ಯವು ಶುಭ ಚಿನ್ನ ತಿಳಿಯೆ । ಹಿಂಗ ।
ಗಂಗಾಪಾರ್ವತಿ ದೇವಿಯರು ಬಂದಾರು ಕರಿಯೆ ಜೋ ಜೋ ॥ ೧ ॥

ಮುದ್ದರಾಗುತ ಚೌವರಿ ಹರಳ ಬಂಗಾರ
ಪದ್ಮ ಸರೋವರದಲ್ಲಿ ನೀರಾಟವಾಡುವರ
ಮುದ್ದ ರಾಯರ ಮತಕ ಸರಿಯನಾದವರ । ಹಿಂಗ ।
ಖುದ್ದ ಬಾಗಿಣ ತಂದಾರ ಊರ ಜೋಯಿಸರು ಜೋ ಜೋ ॥ ೨ ॥

ಉಟ್ಟ ಪೀತಾಂಬರ ಜರದ ಶಲ್ಲೆಗಳು
ತೊಟ್ಟ ಕುಪ್ಪಸ ಮೇಲೆ ಜೋಡ ಗಿಳಿಗಳು
ಕಟ್ಟಾಣಿ ಮುತ್ತು ರತ್ನದ್ದರಳು । ಹಿಂಗ ।
ದಿಟ್ಟ ಪರೋಹಿತ ನಮ್ಮ ಆದಿಗುರುಗಳು ಜೋ ಜೋ ॥ ೩ ॥

ಶ್ರೇಷ್ಠಾದ ಕುಲಕರ್ಣಿ ಪಟ್ಟದ ಸ್ತ್ರೀಯರು
ನಿಷ್ಠ ಭಾವದಿಂದ ಅವರು ಬಂದವರು
ಎಷ್ಟು ದಾಗಿಣ ಮೈಮೇಲೆ ಹಾಕಿಕೊಂಡವರು । ಹಿಂಗ ।
ಶ್ರೇಷ್ಠ ಕುಲದವರು ಬಂದಾರು ಬಾಗಿಣಕ ಜೋ ಜೋ ॥ ೪ ॥

ಗೌಡರ ಸ್ತ್ರೀಯರು ಆರ್ಭಟದಿಂದ
ದಿವ್ಯ ಕಂಟಿಯ ಗೋಪುರ ಕೊರಳೊಳಗ ಚಂದ
ಹವಳ ಮಾಣಿಕ ಮುತ್ತು ಒಂದೊಂದು । ಹಿಂಗ ।
ಅವರು ಬಾಗಿಣ ತಂದಾರು ಐಶ್ವಯ್ಯದಿಂದ ಜೋ ಜೋ ॥ ೫ ॥

ರೈತ ರಾಣಿಯರೆಲ್ಲ ಸಂಬ್ರಮದಿಂದಲಿ
ಮುತ್ತೈದೇರು ಕೂಡಿ ಬಹಳ ಹರುಷದಲಿ
ಜತ್ಯಾಗಿ ಬಾಣ ತಂದಾರು ಪ್ರೀತಿಯಲಿ । ಹಿಂಗ ।
ಶೀಲವಂತ ಜನರು ಪರಿವಾರದಲ್ಲಿ ಜೋ ಜೋ ॥ ೬ ॥

ಸೆಟ್ಟಿ ಸಾಹುಕಾರರು ಬಂದಾರು ಮೆರಕೋತ
ದಟ್ಟ ಮುತ್ತಿನ ದಂಡಿ ಅವರು ಮುಡಿಯುತ್ತ
ಮಠದ ಸ್ತ್ರೀಯರು ಬಂದರ‍್ಯಾವತ್ತ । ಹಿಂಗ ।
ದಿಟ್ಟ ಬಾಗೆಣ ತಂದಾರ ಮುನ್ನೂರದರವತ್ತು ಜೋ ಜೋ ॥ ೭ ॥

ಸ್ವಾದರತ್ತಿ ನಿನಗ ಗುದ್ದೇನ ಬಾರೆ
ಮುದ್ದು ವಾಕ್ಯದಿಂದ ಶುಭ ಚಿನ್ನ ತೋರೆ
ಮೋಹದಿಂದ್ದೆ ಸರಿಟ್ಟ ಮದನವ ತೋರೆ । ಹಿಂಗ ।
ನಿಂದೆಷ್ಟು ಬಡಿವಾರ ತೋರು ಬಾರೆ ಜೋ ಜೋ ॥ ೮ ॥

ಹೇಲ ಗುಗ್ಗುರಿ ತಿಂದು ಇಟ್ಟಾರೋ ಹೆಸರ
ಎಲ್ಲರಿಗೂ ಗುದ್ದಿದರ ಉಳಿಲಿಲ್ಲೋ ಕಸರ
ಎಲ್ಲರೂ ಶಿವ ಶಿವ ಸಂಸಾರವೋ । ಹಿಂಗ ।
ಎಲ್ಲರ ಕೊರಳಾಗ ಹೂವಿನ ಹಾರ ಜೋ ಜೋ ॥ ೯ ॥

ಜೀವಂತಿ ಮಾಡಿ ಸ್ಮರಣಿ ನಿಂತಾಳೋ
ಜೀವಪ್ಪ ನೆಂದು ಹೆಸರಿಟ್ಟಾಳೋ
ಬಾಳ ಶಂಕರನೆಂದು ಕರೆದಾಳೊ ಚಲುವಿ । ಹಿಂಗ ।
ಮುತ್ಯಾ ಮಹಾಂತನ ಹೆಸರನಿಟ್ಟಾಳೊ ಜೋ ಜೋ॥ ೧೦ ॥

– ಕೃತಿ: ಗೆಜ್ಜೆ ನುಡಿದಾವ ಗಿಲಿಗಿಲಿ

***

ಗ್ವಾಲಗೇರಿ ಲಿಂಗ

ಮೊದುಲೀಗಿ ನೆನುದೇನೋ ಮಾದೇವನ ಮಗಳಿಗಿ
ಗರಿ ಮುಂದಿರುವ ಗಣಪತಿಗೆ । ನೆನುದೇನು
ತುದಿನಾಲಿಗೆ ಮ್ಯಾಲೆ ಸರಸ್ವತಿಗೇ ॥ ॥ ೧ ॥

ಖಣ ಯಾರೇ ಕಡುದಾರೆ ನೀರ್ಯಾರು ಹೊಡುದಾರೆ
ಹೊಟ್ಟಾಕಿ ಮೇಟಿ ಜಡುದಾರೋ । ನಮ್ಮೂರು
ಮುತ್ತೈದೇರು ಬಂದು ಮುರುದಾರೋ ॥ ॥ ೨ ॥

ಹಂತಿಯ ಸುರುವಾಯ್ತೊ ಸರ್ಗಾದೆ ಹೂಟಾಯ್ತೊ
ಸಣ್ಣ ದೊಡ್ಡವರ ದನಿಯಾಯ್ತೊ । ನಮ್ಮೂರು
ಪುಣ್ಯವಂತರೇ ಕಣುದಾಗ ॥ ॥ ೩ ॥

ಕಡಿಸುತ್ತಿನೆತ್ತಿಗಿ ಕಾಲಗಗ್ಗರಿಗ್ಹಾಕಿ
ಕೊಂಬಣಸ ಜಂಗ ಕೊರಳಿಗೆ । ಹಾಯ್ಕೊಂಡು
ಇಂಬಾಗಿ ಬಾರೋ ಬಸವಣ್ಣ ॥ ॥ ೪ ॥

ಹೆಜ್ಜ್ಯಾಗ ಹೆಜ್ಜಿಡುವ ಗೆಜ್ಜಿ ಕಾಲಿನ ಬಸುವ
ಹೆಜ್ಜಿತಪ್ಪಿದುರ ಬಹುಜ್ವಾಕಿ । ಬಸವಣ್ಣ
ಗೆಜ್ಜಿ ಬಾರ್‍ಕಲ್ಲ ಎಗುರ್‍ಯಾದ ॥ ॥ ೫ ॥

ಹಂಡಾಗಹಣಿ ಕಟ್ಟೊ ಚಿಂಚಾಗ ಚಿಣಿಮಗಡ
ಜಾಲ ಹೋರಿಗಿ ಜಗಜಂಪೊ
ಜಾಲ ಹೋರಿಗಿ ಜಗಜಂಪನ್ಹಾಯ್ಕೊಂಡು
ಜಾಣ ಹೊಂಟಾನೋ ಜಾತರಿಗೆ ॥ ॥ ೬ ॥

ಆಡಿನ ಹಿಕ್ಕಿಯ ತಂದು ತೀಡಿ ಲಿಂಗನೆ ಮಾಡಿ
ನೋಡರಿ ಶಿವನಾ ಮಹಿಮಾವು
ನೋಡರಿ ಶಿವನ ಮಹಿಮಾ ಗೊಲ್ಗೇರಿ ಲಿಂಗ
ಆಡಿನ ಹಿಕ್ಯಾಗ ನೆನುದಾನೊ ॥ ॥ ೭ ॥

– ಶ್ರೀ ಕಲ್ಲಪ್ಪ ಅಣವಾರ ಮೇಟಿ

***

ಗೊಲ್ಲಾಳಲಿಂಗನ ಹಾಡು

ಗೊಲ್ಲಾಳ ಶಿವುನೆ ನಲ್ಲಾಳು ಮುತ್ತು ನೀನ್
ಎಲ್ಲ್ಯಾಡಿ ಬಂದೆ ನನ್ನಯ್ಯ
ಎಲ್ಲ್ಯಾಡಿ ಬಂದಿದಿ ಅಲ್ಲೇಳೊ ಗುರುವೆ
ಕಾಲೆಲ್ಲ ಕೆಂಧೂಳೇನ ॥ ೧ ॥

ಕಾಲೆಲ್ಲ ಕೆಂಧೂಳೋ ಲಿಂಗಯ್ಯ
ಹೊಟ್ಟೆಲ್ಲ ಎಣ್ಣಿ ಅರಸೀಣ
ಹೊಟ್ಟೆಲ್ಲ ಎಣ್ಣಿ ಅರಸೀಣ ಲಿಂಗಯ್ಯ
ದಟ್ಟೆಲ್ಲಾ ಪರಿಮಾಳೇನ ॥ ೨ ॥

ದಟ್ಟೆಲ್ಲಾ ಪರಿಮ್ಯಾಳೋ ಲಿಂಗಯ್ಯ
ಮದುಮಗಳಾಗ್ಯಾನೇನಯ್ಯ
ಬಲಬಂದವೆ ಬಲ ಬಂದಾವು ಲಿಂಗಾಗ
ಭಾಷಿಂಗದೆ ಬಲು ಬಂದಾವೇ ॥ ೩ ॥

ಭಾಷಿಂಗದೆ ಬಲು ಬಂದಾವು ಲಿಂಗಾಗ
ಶ್ಯಾಸಿ ಲಗ್ಗಣು ಬಂದಾವೆ

ಎದ್ರ್ಯಾನು ಛತ್ತುರ್ಕಿ ಏಳ್‌ನೂರು ಗೊಂಡ್ಯಾ
ಮುತ್ತ್ಹುಚ್ಚಿದೆ ಪಲ್ಲಕ್ಕಿನಾ ॥ ೪ ॥

ಮುತ್ತ್ಹುಚ್ಚಿದೆ ಪಲ್ಲಕ್ಕಿ ಅವ್ರೇನಮ್
ಮುತ್ತ್ಯಾಶಿವು ಬಂದು ಇಳುದಾನೆ
ಮುತ್ತ್ಹುಚ್ಚಿದೆ ಪಲ್ಲಕ್ಕೀಯ ಒಳುಗನ ಮ್
ಮುತ್ತ್ಯಾ ಶಿವುಬಂದು ಇಳುದಾನೆ ॥ ೫ ॥

– ಶ್ರೀ ಕಲ್ಲಪ್ಪ ಅನವಾರ ಮೇಟಿ

***

ಭಕ್ತ ಗೊಲ್ಲಾಳನ ಲಿಂಗಪೂಜೆ

ಡೋಣಿ ಹುಲಸಿನ ನಾಡು ದಾನಧರ್ಮದ ಬೀಡು
ತಾಣ ಜಂಗಮರ ತಾಯ್ನಾಡು ಗೋಲಗೇರಿ
ತಾಣ ಗೊಲ್ಲಾಳ ಹುಟ್ಟಿದ ಬೀಡು ॥ ೧ ॥

ಇರುತಿರ್ದ ಬಡಕುರುಬ ನಡೆಸಿದ್ದ ಜೀವನವ
ಕಡು ದುಡಿದು ಮಡದಿಯೊಡಗೂಡಿ ಕುರಿಹಿಂಡ
ಎಡೆ ಬಿಡದೆ ಕಾಯ್ದು ದೊರೆಯಾದ ॥ ೨ ॥

ಊರ ಕೇರಿಗಳಲ್ಲಿ ಬೀರಮಂದಿಯ ವಾಸ
ಮೀರಿಯೂ ಜಂಗಮರ ಮಠವಾಸ ನಿತ್ಯದೊಳು
ಸಾರುವರು ಲಿಂಗಮಹಿಮೆಯನು ॥ ೩ ॥

ಕುರಿ ಕಾಯ್ವ ಕುಲಗೆಲಸ ನಿರುತದಲಿ ಗೆಯ್ಯುವುದು
ಹೊರಸಿದನು ತಂದೆ ತನಯನಿಗೆ ಗೊಲ್ಲಾಳನಿಗೆ
ಹರುಷದಲಿ ಕಾಯ್ದ ಕುರಿಹಿಂಡ ॥ ೪ ॥

ಪರುವುತದ ಕಂಬಿಗಳು ಬರತಿರುವ ಹಾದಿಯೊಳು
ಮರೆಯದಲೆ ಹೋಗಿ ಗೊಲ್ಲಾಳ ಕುರುಬ
ಹೇಳಿರುವ ತರಲು ಶಿವಲಿಂಗ ॥ ೫ ॥

ಮುದುಕ ಜಂಗಮನಾತನು ಎದಕೆ ಕುರುಬರಿಗೆಂದು
ಬದಿಯಲ್ಲಿ ಬಿದ್ದಿದ್ದ ಕುರಿಹಿಕ್ಕಿ ತೆಗೆದೆತ್ತಿ
ಇದೊ ಲಿಂಗವ ಕೊಡುವೆ ಗೊಲ್ಲಾಳ ॥ ೬ ॥

ಹರಹರನೆ ಶಿವಲಿಂಗ ಗುರುಲಿಂಗವೆನಗಾದಿ
ಹರುಷದಲಿ ಎರಗಿದನು ಭಕ್ತಗೊಲ್ಲಾಳ
ಕುರುಬರೊಡಗೂಡಿ ಕಾಡೊಳಗೆ ॥ ೭ ॥

ಗೊಬ್ಬರ ದಿನ್ನೆಯಮಾಡಿ ಹೊಳೆವ ಹಿಕ್ಕಿಯನಿಕ್ಕಿ
ಉಬ್ಬರದಲಿ ಶಿವಲಿಂಗ ಇಲ್ಲಿ ನೆನೆಯೆಂದ
ತಿಳಿಗೊಳದ ನೀರ ಸಿಂಪಡಿಸಿ ॥ ೮ ॥

ಕಾಡ ಪತ್ರಿಯನೆತ್ತಿ ಕಕ್ಕೆ ಎಕ್ಕೆ ಹೂಗಳ ಕೊಯ್ದು
ಧೂಪ – ದೀಪಾರತಿಯೆತ್ತಿ ಶಿವಪೂಜೆ ಮಾಡಿದರ
ನೋಡಿ ನಗತಿದ್ದ ಶಿವಲಿಂಗೆ ॥ ೯ ॥

ಕಾಡಿನೊಳು ಗೊಲ್ಲಾಳ ಬೇಡಿದನು ಲಿಂಗಯ್ಯಗೆ
ನಾಡು ಚಂದಲ್ಲ ಶಿವಲಿಂಗ ನೋಡಿಲ್ಲಿ ನೋಡು
ಬೀಡು ಬಿಟ್ಟಿಹುವುದು ಬನಸಿರಿಯು ॥ ೧೦ ॥

ನೊರೆಬಂದ ಕುರಿಹಾಲು ಹರಗೆಂದು ಎಡೆಮಾಡಿ
ಕುರಿಹಿಕ್ಕಿಗಂದು ಲಿಂಗಯ್ಯ ಬೆಳಗಿದರೆ
ಧರೆಗೆಲ್ಲ ಬೆಳಕು ಹರಿಯುವದು ॥ ೧೧ ॥

ಹಿಂಡಿನೊಳಗಿರು ನಾಯಿ ಹಿಂಡಗಲಿ ಕೇಳುವವು
ಬೆಂಡಮೇಲೆತ್ತಿ ಶಿವಭಜನೆ ಆದಾಗ ತೊರೆಬಿಟ್ಟು
ಹಿಂಡುವದು ನಿಂತು ಕುರಿಹಿಂಡು ॥ ೧೨ ॥

ಹರನೊದ್ದ ನರಪಾಪಿ ಶಿವದ್ರೋಹಿ ಇರಬಾರದಿನ್ನು
ಕರೆಯಲಾರೆನು ತಂದೆಯೆಂದು ಸಹಿಸುವೆನೆ
ಹರನಿಂದೆ ಎಂದೆ ಗೊಲ್ಲಾಳ ॥ ೧೩ ॥

ಕುರಿಯ ಹಿಕ್ಕಿಯ ನಂಬಿ ಹರನೆಂದು ಪೂಜಿಸಿದ
ಕುರುಬ ಶಿವಭಕ್ತ ಗೊಲ್ಲಾಳಗ ಹರಮೆಚ್ಚಿ
ಕರೆದೊಯ್ದನವನ ಶಿವಪುರಕೆ ॥ ೧೪ ॥

ಶರಣು ಶರಣೆನ್ನುವೆನು ಹರಣಹಾರುವ ತನಕ
ಕರುಣಿಸಿ ಶರಣ ಗೊಲ್ಲಾಳ ನಮಗಿನ್ನು
ಹರ ಕುಂತು ಎದೆಯೊಳಗೆ ನುಡಿಸಿದ ॥ ೧೫ ॥

– ಶ್ರೀಮತಿ ಪ್ರೇಮಾ ಅಣ್ಣಿಗೇರಿ, ಗುಲ್ಬರ್ಗಾ
ಕೃತಿ : ಶರಣ ಗೊಲ್ಲಾಳ

***

ವೀರಗೊಲ್ಲಾಳ

ವಾಲಗಿಡುವನು ಬನ್ನೀರೆ ಕೈಲಾಸಾದ್ರಿ ನಿವಾಸನೆ
ನಾದಬಿಂದು ಕಲಿದಾತನೆ ವೇದಕ ನಿಲುಕದಾತನೆ
ಸತ್ಯವಾದ ಶರಣರಡಿಗೆ ನಾ ವ್ಯರ್ಥಾನಂದದಿ ಕುಣಿದೇನು
ಹಾರಿ ಕುಣಿದು ಡೊಳ್ಳುಬಾರಿಸಿ ಬೀರನೋಲಗ ಇಡುವವನು
ಪೊಡವಿಯೊಳು ದೃಢಭಕ್ತ ಗೊಲ್ಲಾಳ ಬಿಡದೆ ಕುರಿಯ ಕಾಯುವನು
ಅಡವಿಯಲ್ಲಿ ಕುರಿಯ ಮೇಸಿ ಮಡದ ನೀರು ತಾ ಕುಡಿಸುವವನು
ಮುಂದಿನವೆಲ್ಲ ಕುರಿಗಳ್ಹೊಡೆದು ಹಿಂದಿನ ನಾಯಿ ಕರೆಯುವನು
ಗುಡ್ಡದಂತ ದೊಡ್ಡ ದೇಹ ಗಡ್ಡ ಮೀಸೆ ಬೆಳಸಿರುವವನು
ಶುದ್ಧ ಮನಸಿನ ಗೊಲ್ಲಾಳ ಗದ್ದಕ ಕೋಲು ಕೊಟ್ಟಾನು
ಎಲ್ಲಿ ನೋಡಿದರ ಹರ ಹರನೆಂಬುದುಸೊಲ್ಲು ಗೊಲ್ಲಾಳ ಕೇಳ್ಯಾನು
ಇಂದು ಗುಳೇವ ಕಟ್ಟಿಕೊಂಡು ಮುಂದಕೆಲ್ಲಿ ಹೋಗುವಿರೋ
ಮರುಳನೆಂದು ನಕ್ಕು ಅವರು ತಿರುಗಿ ಮಾತನಾಡಲಿಲ್ಲವೋ
ಅರುವುಗೆಟ್ಟು ಹೋಗತಾವೆಂದು ಕುರುಬ ಮನಕ ತಿಳಕೊಂಡಾನು
ಹಿಂದ ಬರುವ ಜಂಗಮಯ್ಯನ ನಂದ ಗೊಲ್ಲಾಳ ಕೇಳ್ಯಾನು
ಇಂದು ಗುಳೆವ ಕಟ್ಟಿಕೊಂಡು ಮುಂದಕೆಲ್ಲಿ ಹೋಗುವಿರೋ?
ಆಗ ನೋಡೋ ಜಂಗಮಯ್ಯ ಎಲ್ಲ ತಿಳಿಸಿ ಹೇಳ್ಯಾನು
ಮಲ್ಲಿಕಾರ್ಜುನ ದರ್ಶನಕ ನಿಲ್ಲದೆ ನಾವು ಹೋಗುವೆವು
ಬೇಡಿದಂತ ಪದವಿಯ ನನಗ ತಂದುಕೊಡಬೇಕು ಅಂದಾನೋ
ಬಿಂದಿಗಿ ಹೊನ್ನ ಕೊಟ್ಟರ ಲಿಂಗ ತಂದು ಕೊಡುತೇನಂದಾನೋ
ದಡ್ಡಿಯಲ್ಲಿ ಹುಗುದ ಹೊನ್ನು ಅಡ್ಡ ಗಾಳಿಗೆ ತೂರುವನು
ಮಡ್ಡಗುರುಬ ದಡ್ಡಿಯಲ್ಲಿ ಬಿಂದಿಗೆ ಹೊನ್ನ ಎಬ್ಬಿ ಕೊಟ್ಟಾನು
ದುಡ್ಡು ತಗೊಂಡು ಜಂಗಮಯ್ಯ ದೊಡ್ಡ ಹರುಷವಾಗ್ಯಾನು
ಮಲ್ಲಿಕಾರ್ಜುನನ ದರ್ಶನಕ್ಹೋಗಿ ತನ್ನ ಹರಕೆಯ ಮುಟ್ಟಿಸ್ಯಾನು
ದುಡ್ಡು ದೊರೆತ ಮಬ್ಬಿನಿಂದ ಲಿಂಗ ತರುವುದ ಮರತಾನು
ತಿರುಗಿ ಬರುತ ಜಂಗಮಯ್ಯ ಕುರುಬನ ಕಣ್ಣಿಲೆ ಕಂಡಾನು
ಕುರಿಯ ಹಿಕ್ಕಿಯ ತಗೊಂಡು ಜಂಗಮ ವಲ್ಲಿ ಪದರು ಕಟ್ಯಾನು
ವೀರಗೊಲ್ಲಾಳ ಜಂಗಮನ ಕಂಡು ತಾರೋ ಲಿಂಗ ಒಂದನ್ನು
ಕುರಿಯ ಹಿಕ್ಕಿಯ ಕೊಟ್ಟು ಜಂಗಮ ಜಾರಿಕೊಂಡು ತಾ ನಡದಾನು
ಕುರಿಯ ಹಿಕ್ಕಿಯ ಕಟ್ಟಿಯ ಕಟ್ಟಿ ಅಷ್ಟಮೂರುತಿ ಇಟ್ಟಾನು
ವೀರ ಕುರಿಯ ಹಾಲ ಹಿಂಡಿ ಶ್ರೇಷ್ಠ ಲಿಂಗಕೆ ಎರದಾನು
ಮನೆಗೆ ಹಾಲು ಬಾರದಿರಲು ಜನಕ ಕೋಪವ ತಾಳ್ಯಾನು
ಹೊಂದಿಕಿಲಿಂದ ಕೊಡಲಿಯ ಪಿಡಿದು ತರುಳನ ಬಳಿಗೆ ಬಂದಾನು
ಹಿರಿಯ ಕುರುಬ ಲಿಂಗವನು ಕೆರವುಗಾಲಿಲೆ ಒದ್ದಾನು
ತರುಬಿ ಅವನ ಕೊಡಲಿಯ ಪಿಡಿದು ತಂದಿಯ ಶಿರವ ಕಡಿದಾನು

ಕುರಿಯ ಹಿಕ್ಕಿಲಿಂದ ಮರೆದು ಗ್ವಾಲಿಗೇರಿ ಲಿಂಗ ಎನಸ್ಯಾನು
ಕರುಣದಿಂದ ಅವರಿಗೆ ಮೋಕ್ಷ ಕೊಟ್ಟ ಜಗದ್ಗುರು ಮಲ್ಲೇಶ್ವರ

ಕೃತಿ : ದೇವರು ಬಂದಾರ ಬನ್ನೀರೆ

***

ಗೊಲ್ಲಾಳ ಡಂಬಳ ದಾರ್‍ಯಾಗ ನಿಂತಾನ

ಹುಲಿಗೋ ಹುಲಿಗೋ ಸಾಲು ಹುಲಿಗೋ ಹೋ ಮಲ್ಲಯ್ಯ

ಧವಳಾರದಾಗಿರುವರು ಕುರುಬ ಭಲ್ಲುಗ
ಧರ್ಮಪತ್ನಿ ದುಗಳವ್ವನ ಹೊಟ್ಟ್ಯಾಗ । ಪುತ್ರ
ಗೊಲ್ಲಾಳ ಹುಟ್ಟ್ಯಾನ ॥ ೧ ॥

ಆಡನ ಕಾಯುತ ಉಣ್ಣೀಯ ನೂಲುತ
ಕೈಯಾಗ ಪರಕೀಯ ಹಿಡದಾನ । ಗೊಲ್ಲಾಳ
ಡಂಬಳ ದಾರ್‍ಯಾಗ ನಿಂತಾನ ॥ ೨ ॥

ಶ್ರೀಶೈಲಕ ಹೋಗವರು ನನ್ನಯ್ಯ । ಮುತ್ತಯ್ಯ
ದಾರಿ ತರುಬ್ಯಾನ ಗೊಲ್ಲಾಳ । ಎಲ್ಲಿಗೆ
ಹೋಗತಿರಿ ನನಗ ಹೇಳರಿ ॥ ೩ ॥

ಶ್ರೀಶೈಲಕ ಹೋಗತೀವಿ ಮಲ್ಲಯ್ಯನ ತರತೀವಿ
ಗಿಳಿಪೋಚದುಂಡಿ ದವನವ । ತಗೊಂಡು
ದವನದ ಹುಣ್ಣಿವೆಗೆ ಬರತೀವಿ ॥ ೪ ॥

ಹೇ ಮುತ್ತ್ಯಾ ಹೇಳತೀನಿ ಕಾಲೀಗೆ ಬೀಳತೀನಿ
ಬಿಂದಿಗಿ ಹೊನ್ನ ಕುಡತೀನಿ । ನನನ ಮುತ್ತ್ಯಾ
ನನಗೊಂದು ಲಿಂಗ ತರಬೇಕು ॥ ೫ ॥

ಶ್ರೀಶೈಲಕ ಹೋಗ್ಯಾನ ಜಾತ್ರೀಯ ಮಾಡ್ಯಾನ
ಲಿಂಗ ನೆನಪ ಹಾರಿ ಬಂದಾನ । ಮುತ್ತಯ್ಯ
ಎದುರಿಗೆ ಗೊಲ್ಲಾಳ ನಿಂತಾನ ॥ ೬ ॥

ಎಡಗೈಲಿ ತಗೊಂಡು ಬಲಗೈಲಿ ಹಿಡದಾನ
ಆಡಿನ ಹಿಕ್ಕೊಂದು ಕೊಟ್ಟಾನ । ನನ್ನಯ್ಯ
ಭಕ್ತೀಲಿ ಗೊಲ್ಲಾಳಗ ಕೊಡತಾನ ॥ ೭ ॥

ಮೂಖಂಡುಗ ಹಾಲ ತಂದು ನಾಖಂಡುಗ ತುಪ್ಪ ತಂದು
ರುದ್ರಾಭಿಷೇಕ ಮಾಡ್ಯಾನ ಗೊಲ್ಲಾಳ । ಗೊಲ್ಲಾಳ
ಕಾಡ ಪತ್ರಿಯ ಏರಿಸ್ಯಾನ ॥ ೮ ॥

ಆವಾಗ ಭಲ್ಲುಗ ಅರಿವಿಕೆಯಾಗ್ಯಾನ
ಹಾಳ ಮಾಡತಾನಂತ ಗೊಲ್ಲಾಳಗ । ಹೊಡಿಲಾಕ
ಕೊನೆ ಕೊಡಲೀಯ ತಂದಾನ ಭಲ್ಲುಗ ॥ ೯ ॥

ಗೊಬ್ಬರದ ಗುಂಡೀಗೆ ಹೋಗ್ಯಾನ ಭಲ್ಲುಗ
ಆಗ ಆಳು ಗೊಲ್ಲಾಳಗ ಕೂಗ್ಯಾನ । ಆವಾಗ
ಆಳು ಜೋರಾಗಿ ದೂಸ್ಯಾನ ॥ ೧೦ ॥

ಸಿಟ್ಟಿಗೇರಿ ಗೊಲ್ಲಾಳ ಕೊಡಲಿಯ ತಗೊಂಡು
ತಂದೀಯ ರುಂಡ ಹೊಡದಾನ । ಗೊಲ್ಲಾಳಗ
ಪರಮಾತ್ಮ ಪ್ರತ್ಯಕ್ಷನಾಗಿ ಹೇಳ್ಯಾನ ಎಲ್ಲರಿಗೆ
ಕೈಲಾಸಕ್ಕ ಕರದೊಯ್ದು ಮತ್ತೆ । ಹೇಳ್ತಾನ
ಭೂಲೋಕಕ್ಕೆ ನಡಿಯಿರೆಂದು ॥ ೧೧ ॥

ಕೃತಿ : ಶರಣ ಗೊಲ್ಲಾಳ

***

ಜಾನಮ್ಮ ಹೊಂದಿಸಿ ಕೈಯ ಮುಗದಾಳ

ಲಿಂಗಯ್ಯನ ಗುಡಿಮುಂದ ಲಿಂಗ ಮುದ್ರೆಕಲ್ಲು
ನಿಂದರಿಸಿ ಎತ್ತಿ ಇಳುವ್ಯಾಳ । ಜಾನಮ್ಮ
ಹೊಂದಿಸಿ ಕೈಯ ಮುಗದಾಳ ॥ ೧ ॥

ಅಪ್ಪನ ಪೌಳ್ಯಾಗ ಲ್ಯಾವಳ ಬಿದ್ದದ
ಹಾವಂತ ಜೀವ ಹೆದರ್ಯಾದ । ಜಾನಮ್ಮ
ಹಾವಲ್ಲ ಶಿವನ ಉಡದಾರ ॥ ೨ ॥

ಅಪ್ಪನ ಪೌಳ್ಯಾಗ ನೀರ್ಯಾರ ಚೆಲ್ಲ್ಯಾರ
ಪಾರಿವಾಳ ಆಡಿ ಗಿಳಿ ಆಡಿ । ಜಾನಮ್ಮನ
ಮೊಮ್ಮಕ್ಕಳಾಡಿ ಮನಗ್ಯಾರ ॥ ೩ ॥

ಅಣ್ಣ – ತಮ್ಮರು ಕೂಡಿ ಹೊನ್ನಗುಡ್ಡಕ ಹೋಗಿ
ಚೆನ್ನಂಗಿ ಬಿದರ ಕಡದಾರ ಕಡಿಯುತ । ಮಾಡ್ಯಾರ
ಹೊನ್ನ ಹೊಸತೇರ ಗೋಲಗೇರಿ ॥ ೪ ॥

ಗೋಲಗೇರಿಯ ತೇರ ಮ್ಯಾಲಕ ಬಹುದೂರ
ಸುಳಿಗಾಳಿಗೊಮ್ಮೆ ಸುಳುಕುತ । ತೇರಿನ ಮ್ಯಾಲೆ
ಕೈಹೊಡೆದು ಗೊಂಬೆ ನಗತಾವ ॥ ೫ ॥

ಅಪ್ಪನ ತೇರಿಗೆ ಎಪ್ಪತ್ತು ಮಿಣಿ ಹೂಡಿ
ಬಪ್ಪರಿ ಶಲ್ಲ್ಯಾ ಬಹದ್ದೂರ । ಗೊಲ್ಲಾಳನ
ಚಪ್ಪಡಿ ತೇರ ಎಳದೇವ ॥ ೬ ॥

ಗ್ವಾಲಗೇರಿ ತೇರ ಗಾಲಮ್ಯಾಲ ಆಗೇದ
ಸೀರಿ ಉಟ್ಟಬಾಲಿ ಅಳತಾಳ । ನನಬಾಲ
ಶಾಲ ಉಟ್ಟ ದೊರಿ ನಗತಾನ ॥ ೭ ॥

ಗ್ವಾಲಗೇರಿ ತೇರ ಗಾಲ ಮೇಲಾಗೇದ
ಮ್ಯಾಲೀನ ಕಳಸ ಹೊರಳ್ಯಾದ । ಲಿಂಗರಾಯ
ಗಾಬರಾಗ್ಯಾನ ಗುಡಿಯಾಗ ॥ ೮ ॥

ಹೋಗವನ ಕೈಯಾಗ ಗೋಲ್ಯಾಡ ಉಂಗುರ
ಹೋಗೋ ನಿನದಾರಿ ಭವದೂರ । ಗ್ವಾಲಗೇರಿ
ತೇರ ನಿಂತದ ನಿನಗಾಗಿ ॥ ೯ ॥

ಗ್ವಾಲಗೇರಿಯ ನೋಡ ಗೊಲ್ಲಾಳನ ಗುಡಿ ನೋಡ
ತಾಯಿ ಜಾನಮ್ಮನ ಅರಮನಿ । ಪಡಸಾಲ್ಯಾಗ
ಉಂಡ ಜಂಗಮರ ತವನೋಡ ॥ ೧೦ ॥

ಕೊಂಡಗೂಳಿ ದಾರೀಲಿ ಮಂದ್ಯಾಕ ನೆರದಾರ
ನಂದೀ ಕೋಲಾಟ ನವಿಲಾಟ । ಗೊಲ್ಲಾಳನ
ಬಿಂದಿಗಿಯೂಟ ಗುಡಿಯಾಗ ॥ ೧೧ ॥

ಅಲ್ಲಿ ಹಾನ ಇಲ್ಲಿ ಹಾನ ಹಳ್ಳದ ದಂಡ್ಯಾಗ ಹಾನ
ಕೂಗಳತಿಮ್ಯಾಲ ನೆಲದಾನ ಅಗ್ನಿಬಸವ । ಗೊಲ್ಲಾಳ
ಕೂಗಿದರ ದನಿಯ ಕೊಡತಾನ ॥ ೧೨ ॥

ಮಳ್ಳಿಮಾಗಣಗೇರಿ ಎಲ್ಲ್ಯಾದ ಕುಳಗೇರಿ
ತೆಗ್ಗಿನ್ಯಾಗಾದ ಗ್ವಾಲಗೇರಿ । ಗೊಲ್ಲಾಳನ
ಹುಬ್ಬಿನ್ಯಾಗಾದ ಹರಿಹಾವು ॥ ೧೩ ॥

ಆಲಗೂರದ ಹಾಲ ಗ್ವಾಲಗೇರಿಯ ಬೆಲ್ಲ
ಮ್ಯಾಲ ಡಂಬಳದ ಕೆನಿ ಮೊಸರು । ಗ್ವಾಲಗೇರಿ
ತಂದಿ ಗೊಲ್ಲಾಳಗ ಅಭಿಷೇಕ ॥ ೧೪ ॥

ಜಾನಮ್ಮ : ಗೊಲ್ಲಾಳೇಶ್ವರ ಗುಡಿಯನ್ನು ಕಟ್ಟಿಸಿದ ಮರಿಯಪ್ಪ ದೇವರ (ಫ) ಮನೆಯವರ ಸೊಸೆ. ಜಾತ್ರೆಗೆ ಬಂದ ಭಕ್ತಾದಿಗಳಿಗೆ ಅನ್ನದಾಸೋಹ ನಡೆಸುವ ಕಾರ್ಯದಲ್ಲಿ ಅವರ ಪಾತ್ರ ಹಿರಿದಾಗಿತ್ತು. ಭಕ್ತರಿಗೆ ತಾವೇ ನಿಂತು ಸಜ್ಜಕಕ್ಕೆ ತುಪ್ಪ ನೀಡುತ್ತಿದ್ದರು. ಆಗ ಅವರು ತೋರುವ ಕಾಳಜಿ, ವಾತ್ಸಲ್ಯದಿಂದಾಗಿ ಜನಾನುರಾಗಕ್ಕೆ ಪಾತ್ರರಾಗಿದ್ದರು. ಅದು ಮಾತ್ರವಲ್ಲದೆ ಯಾವತ್ತು ಬಂದ ಭಕ್ತರಿಗೆ ಪ್ರಸಾದದ ಕೊರತೆ ಬೀಳದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ನಿರ್ವಹಿಸುವ ಹೊಣೆ ಜಾನಮ್ಮ ತಾಯಿಯದಾಗಿತ್ತೆಂದು ಹಿರಿಯರು ಹೇಳುತ್ತಾರೆ. ಜಾನಮ್ಮನ ಔದಾರ್ಯವನ್ನೇ ಜನಪದರು:

"ತಾಯಿ ಜಾನಮ್ಮನ ಅರಮನಿ ಪಡಸಾಲ್ಯಾಗ
ಉಂಡ ಜಂಗಮರ ತವನೋಡ" ಎಂದ ಕೊಂಡಾಡಿದ್ದಾರೆ.

ಕೃತಿ : ಶರಣ ಗೊಲ್ಲಾಳ

***

ಮರಿಯಪ್ಪ ಸಾವುಕಾರ ಗುಡಿಯ ಕಟ್ಟಿಸ್ತೀನಿ ಅಂದಾನ

ಹಳಿಸಾಗರದಾಗ ಇರುವರು ಮರಿಯಪ್ಪ ಸಾವುಕಾರ್‍ರು
ಮುತ್ತಿನ ವ್ಯಾಪಾರ ನಡೆಸ್ಯಾರ ಸಾವುಕಾರ್‍ರು । ಗೊಲ್ಲಾಳನ
ಆ ಹಟ್ಟೀಗೆ ವಸ್ತೀ ಮಲಗ್ಯಾರ ॥ ೧ ॥

ವಸ್ತೀಯ ಮಾಡ್ಯಾನ ಗಸ್ತೀಯ ತಿರುಗ್ಯಾಡಿ
ಮಳಿಗೂಟ ತಲಿಯಾಗ ಹೊಡೆದಾಗ । ಸಾವುಕಾರ
ಹೇರೆತ್ತಿನ ಕಣ್ಣು ಹೋಗ್ಯಾವ ॥ ೨ ॥

ಆವಾಗ ಸಾವುಕಾರನ ಸ್ವಪ್ನವ ಬಿದ್ದದ
ಗುಡಿಯ ಕಟ್ಟಿಸೆಂದು ಹೇಳ್ಯಾನ । ಸಾವುಕಾರ
ಗುಡಿಯ ಕಟ್ಟಿಸ್ತೀನಿ ಅಂದಾನ ॥ ૩ ॥

ಆವಾಗ ಹೇರೆತ್ತಿನ ಕಣ್ಣು ಬಂದಾವು ಸಾವುಕಾರ
ವ್ಯಾಪಾರ ಮಾಡ್ಯಾನ ಲಾಭಾನ ಆಗೇದ । ಘನಲಾಭ
ಆಡೀದ ಮಾತ ನೆನಪ ಹಾರ್‍ಯಾನ ॥ ೪ ॥

ಆವಾಗ ಸಾವುಕಾರಗ ಬೆನ್ನಹುಣ್ಣ ಹುಟ್ಟೇದ
ಏನ ಹಚ್ಚಿದರೂ ಮಾಯಲಿಲ್ಲ । ಸಾವುಕಾರ
ಬೇಗಂ ಬೆಳಗ ಹಲುಬ್ಯಾನ ॥ ೫ ॥

ಕಂಬಳಿ ಟೊಪ್ಪಿಗಿ ಮಾಡಿ ಕೈಯಾಗ ಕೋಲ ಹಿಡಿದು
ಹಳಿಸಾಗರಕ ಹೋಗಿ ನಿಂತಾನ । ಗೊಲ್ಲಾಳ
ಆಡಿನ ಹಿಕ್ಕೊಂದು ಕೊಟ್ಟಾನ ॥ ೬ ॥

ಆಡೀನ ಹಿಕ್ಕೊಂದು ಕೊಟ್ಟಾನ ಗೊಲ್ಲಾಳ
ತೇಯಿದು ಹಚ್ಚಂತ ಹೇಳುತ ನಡದಾನ ।
ಆವಾಗ ಸಾವುಕಾರಗ ಅರಿವಾಗಿ ॥ ೭ ॥

ಎಲ್ಲಾ ದೇವರಗುಡಿ ಕಲ್ಲೀಲೆ ಮುಗದಾವ
ಬಲ್ಲಿದ ಗೊಲ್ಲಾಳನ ಅರಮನಿ ಪದರಿಗೋಡೆ
ಮಲ್ಲೀಗಿ ಹೂವೀಲೆ ಮುಗದಾವ ॥ ೮ ॥

ಹೋ ಹೋ ಹುಲಿಗೋ ... ಹುಯೋ ... ಹೋ... ಮಲ್ಲಯ್ಯ

ಕೃತಿ : ಶರಣ ಗೊಲ್ಲಾಳ

***

ಹಂತಿಯ ಹಾಡು

ಉಗಾದಿ ಹೊಸದಿನ ಹೊಸ ಹೋರಿಗಳ ಹೂಡಿ
ರೈತ ನಿನರಾಬ ಕುರುಬಾಗಿ ಗೊಲ್ಲಾಳಗ । ಕಾಯ ಒಡೆದು
ಕೈಯ ಮುಗಿದೇನ ॥ ೧ ॥

ನೇಗಿಲಟ್ಟಿಯ ಕುಂಟಿ ಕೊರಳ ಒಳಗಿನ ಗಂಟೆ
ಕಾಶಿಕರಿಗಲ್ಲ ತೆಗೆದು ಸೋಸಿ । ಗೊಲ್ಲಾಳ
ನೋಡ್ಯಾನೋ ಭೂಮ್ಯಾಗ ॥ ೨ ॥

ರೋಣಿ ಮಿರುಗದ ಮಳೆಯ ತುಂಬಿಬಂದದ ಹೊಳೆಯು
ಆರಿದ್ರಾ ಮಳೆಗೆ ಹಸಿಯಾಗಿ । ಗೊಲ್ಲಾಳ
ಖುಷಿಯಾದ ರೈತ ಮನದಾಗ ॥ ೩ ॥

ಜಾಣ ನನ ಗೊಲ್ಲಾಳ ಜಾಲೀಯ ಕಡಿದಾನ
ತಾಳೇದ ಕಟಗೀನ ಸವರ್ಯಾನ । ಗೊಲ್ಲಾಳ
ಹಳಕಟ್ಟಿಗೊಯ್ದು ಒಗದಾನ ॥ ೪ ॥

ಬಡಿಗ್ಯಾನು ದಿಂಡ ಕೆತ್ತಿ ತಾಳಹೊಂದಾಳ ಕಟ್ಟಿ
ಬಂಡಿ ಬಿಗಿದಾನ ಜಿಗಿಜಿಗಿದು । ಗೊಲ್ಲಾಳ
ಬೀಜ ತರಲಾಕ ಮನೆಗ್ಹೋಗಿ ॥ ೫ ॥

ಕಂಬಳಿ ಟೊಪ್ಪಿಗಿ ಮಾಡಿ ದಿಂಡ ತಲಿಮ್ಯಾಲೆ ಹೊತ್ತು
ತುಂಬಿದ ಕೊಡ ಎದುರಾಗಿ । ಗೊಲ್ಲಾಳ
ಖುಷಿಯಾದ ರೈತ ಮನದಾಗ ॥ ೬ ॥

ದಿಂಡ ಹೊಲದಾಗ ಇಳಿಸಿ ಬಂಧುರವನ ಹೂಡಿ
ಗಂಗೀಯ ದಿಕ್ಕಿಗೆ ನಿಂತಾನ । ಗೊಲ್ಲಾಳ
ಅಯ್ಯ ಸಿದ್ದನ ನೆನೆದಾನ ॥ ೭ ॥

ಸೆಜ್ಜಿ ಸೆಂಗಾದ ಬೀಜ ಹುರಳಿ ಮೂಗಣಿ ಬೀಜ
ಪುಂಡೀಯ ಪಟ್ಟಿ ಹೊಡದಾನ । ಗೊಲ್ಲಾಳ
ಮುಂಗಾರಿ ಬಿತ್ತಿ ಬರತಾನ ॥ ೮ ॥

ಇಷ್ಟು ಹಾಡಿದರು ಹಾಡು ಅಪ್ಪ ಲಿಂಗಯ್ಯನ ಮ್ಯಾಲೆ
ಇನ್ನು ಮುಗಿಲಿಲ್ಲ ನಿನ ಹಾಡ । ಗೊಲ್ಲಾಳ
ಇಲ್ಲಿಂದ ಕೈಯ ಮುಗಿದೇನ ॥ ೯ ॥

ಹೋ ಹೋ ಹುಯ್ಯೋ ..... ಹುಲಿಗೋ ಸಾಲಾ ಹುಲಿಗೋ....

ಕೃತಿ : ಶರಣ ಗೊಲ್ಲಾಳ

***

ಗೊಲ್ಲಾಳನ ತೂಗಿರೆ ನಿಚ್ಚ ಮುತ್ತೈದೇರು

ತೂಗಿರೆ ರಂಗನ್ನ ತೂಗಿರೆ ಬಾಲನ್ನ
ತೂಗಿರೆ ಅಚ್ಚ ಮುತ್ತನ್ನ – ಗೊಲ್ಲಾಳನ
ತೂಗಿರೆ ನಿಚ್ಚ ಮುತ್ತೈದೇರು ॥ ಪ ॥

ಬೆಳ್ಳಿಯ ಆವೀಗಿ ಮೆಟ್ಟಿ ಬಿಸಲಾಗ ನಿಂತಾನ
ಶಿಶುವ ಗೊಲ್ಲಾಳನ್ನ ಪೂಜಾದ ಹೊತ್ತಿಗೆ
ಹಸು ಮಕ್ಕಳ ತೊಟ್ಟಿಲ ತೂಗೀರೆ ॥ ೧ ॥

ದಾಸವಾಳದ ಹೂವ ಹಂಚೂತ ಬರತಾರ
ಕಾಶೀ ದೇಶದ ಶರಣರು – ಬರುವಾಗ
ಕಾಶೀ ವಿಶ್ವೇಶ್ವರನನ್ನು ತೂಗೀರೆ ॥ ೨ ॥

ಮಲ್ಲಿಗಿ ಹೂವ ಚೆಲ್ಲುತ ಬರತಾರ
ಕಲ್ಯಾಣದ ದೇಶದ ಶರಣರು – ಬರುವಾಗ
ಮಲ್ಲಿಕಾರ್ಜುನನ್ನು ತೂಗೀರೆ ॥ ೩ ॥

ಸಂಪೀಗಿಯ ಹೂವ ಹಂಚುತ ಬರತಾರ
ಹಂಪಿ ದೇಶದ ಶರಣರು – ಬರುವಾಗ
ಹಂಪೀ ವಿರುಪಾಕ್ಷನ್ನ ತೂಗೀರೆ ॥ ೪ ॥

ಅಡಕೀಯ ಹೂವ ಕಡಕೀಲೆ ತರತಾರ
ಕಡಿದೇಶದ ಶರಣರು – ಬರುವಾಗ
ಒಡೆಯ ಗೊಲ್ಲಾಳನ್ನ ತೂಗೀರೆ ॥ ೫ ॥

ಕೃತಿ : ಶರಣ ಗೊಲ್ಲಾಳ

***

ಜೋಯೆಂದು ತೂಗೀರೆ ಬಾಲನ

ಜೋಯೆಂದು ತೂಗೀರೆ ಬಾಲನ
ಜೋಜೋ ಎಂದು ತೂಗೀರೆ ಗೊಲ್ಲಾಳನ ॥ ಪ ॥

ಜೋ ಜೋ ಜೋಯೆಂದು ಜನ್ಮಕೆ ಬಂದು
ಜೋಯೆಂದು ಗೊಲ್ಲಾಳ ಶಿವತಾನೆ ಬಂದು
ಢವಳಾರ ಪಟ್ಟಣಕೆ ಅಧಿಕಾರಿಯಾಗಿ ನಿಂದು
ಹಿಂಗ ಜೋಗುಳ ಪದಕೆ ಸಾಧ್ಯವಾಗೆಂದು ॥ ೧ ॥

ಕೈಲಾಸದೊಳಗೆ ಮುಗ್ಧನು ತಾನು
ಗಣಪತಿಯೆಂಬ ನಾಮ ಉಳ್ಳವನು
ದೇವತೆಯೊಳಗೆ ತಾನು ಹಿರಿಯನು
ಹಿಂಗ ಸಾರಿ ಹೇಳಿದನು ತನ್ನ ಹುಟ್ಟವನು ॥ ೨ ॥

ತಾಯಿ ದುಗ್ಗಳವ್ವನ ಹೊಟ್ಟೆಯಲಿ ಹುಟ್ಟಿ
ಢವಳಾರ ಅಡವಿಯಲಿ ಹಾಕ್ಯಾನ ಹಟ್ಟಿ
ಪರ್ವತಕ ಹೋಗುವಾಗ ಆಗ್ಯಾನ ಭೆಟ್ಟಿ
ಆಗ ನಂದಯ್ಯನ ಪಾದ ಹಿಡಿದಾನ ಗಟ್ಟಿ ॥ ೩ ॥

ಏಳೇಳೊ ಬಾಲ ನಿನ್ನ ಪರಿಯೇನು?
ಎಲ್ಲಿಬಿಟ್ಟಿ ನಿನ್ನ ಕುರಿಯ ಮರಿಗಳನು
ಹಿಂಗ್ಯಾಕ ಆಗೀದಿ ಹುಚ್ಚನು ನೀನು
ಎಂದು ಸಾರಿ ಕೇಳಿದನು ನಂದಯ್ಯನು ॥ ೪ ॥

ಪರವುತ ಗಿರಿಯ ಏರುತ ನಂದಯ್ಯನು
ಲಿಂಗವ ತಾರದೆ ಮರೆತು ಬಂದಿಹನು
ಕುರುಬನ ಕಂಡು ಗಾಬರಿಯಾದನು
ಆಗ ಕಾಲೀಲಿ ಹಿಡಿದು ಕೊಟ್ಟನು ಕುರಿಹಿಕ್ಕಿಯನು ॥ ೫ ॥

ಗೊಲ್ಲಾಳ ಭಾವಕೆ ಮೆಚ್ಚಿದ ಈಶ್ವರನು
ಪಾದಕೆ ನಿಲುಕದಂತಾತನು ಕುರಿಯ
ಹಿಕ್ಕಿಯೊಳು ಬೆರೆತ ಲಿಂಗಯ್ಯನು ಇಂಥ
ಗೋಲಗೇರಿ ಕ್ಷೇತ್ರಕ್ಕೆ ಮಿಗಿಲಾದವನು ॥ ೬ ॥

ಯಾರಿಗಾಗದಂಥ ತೇರು ನಿರ್ಮಿಸಿದ
ದೇಶದೊಳಗಿನ ತನ್ನ ಭಕ್ತರ ಸಲುಹಿದ
ಇಂಗ್ಲೀಷ ಸರಕಾರಕ್ಕೆ ಪ್ರಸಿದ್ಧನಾದ
ಇಂಥ ಲಿಂಗಯ್ಯ ಹುಟ್ಟಿದ್ದು ಅಮೃತಗಳಿಗೆ ॥ ೭ ॥

ಸಿದ್ಧಲಿಂಗಸ್ವಾಮಿಗೆ ಒಲಿಸಿಕೊಂಡವನು
ತ್ರಿಕಾಲಪೂಜೆ ನಡೆಸಿಕೊಂಡವನು
ಜಂಗಮದಾಸೋಹ ಇಡಿಸಿಕೊಂಡವನು
ಹಿಂಗ ದಿನದಿನಕ ಪ್ರಸಿದ್ಧಿ ಪಡೆದವನು ॥ ೮ ॥

ಮರಿಯಪ್ಪ ಸಾವುಕಾರಗ ಹುಣ್ಣು ಹುಟ್ಟಿಸಿದವನು
ಕುರಿಯ ಹಿಕ್ಕೀಲಿ ವಾಸಿಮಾಡಿದವನು
ಚರಸೇವೆಗೆಂದವರ ಕರೆಯಿಸಿಕೊಂಡವನು
ಹಿಂಗ ಹೆಸರಾದ ಗುಡಿಯ ಕಟ್ಟಿಸಿಕೊಂಡವನು ॥ ೯ ॥

ಈ ಪದ ಹುಟ್ಟಿದ್ದು ಹಂಪಿಯ ಸ್ಥಳವು
ವಿರುಪಾಕ್ಷ ಹಾನ ಸಾಕಾರ ಚೆಲುವು
ಜೋಕೆಯಿಂದಲಿ ತನ್ನ ಶಿಶುವ ಕಳಿಸಿದನು
ಹಿಂಗ ಲಾಲಿಸಿ ಕೇಳಿದವಗ ಆದೀತು ಫಲವು ॥ ೧೦ ॥

ಕೃತಿ : ಶರಣ ಗೊಲ್ಲಾಳ

***

ತೇರು ಸಾಗತದ ತಂಗಿ ನೋಡಾಕ ಹೋಗೋಣ ಬಾರ

ತೇರು ಸಾಗತದ ತಂಗಿ ನೋಡಾಕ ಹೋಗೋಣ ಬಾರ
ತೇರು ಎಳೆಯುತದ ತಂಗಿ ಗ್ವಾಲಗೇರಿ ಲಿಂಗನ ತೇರು ॥ ಪ ॥

ಒಂಬತ್ತು ಅಂಕಣ ತೇರು ಸಮಜೋಡಿ ಗಾಲಿಯ
ಮೂರು ಅಚ್ಚಿನೊಳಗ ನಲಿದು ನಲಿದು ತಿರುಗುವ ॥ ೧ ॥

ಒಂದು ಅಂಕಣದೊಳು ಆನಿ ಅಂಬಾರಿ ನೋಡ
ಎರಡು ಅಂಕಣದೊಳು ಕುದುರಿ ಸವಾರಿ ನೋಡ
ಮೂರು ಅಂಕಣದೊಳು ನರಸಿಂಹ ಅವತಾರ ನೋಡ
ನಾಲ್ಕು ಅಂಕಣದೊಳು ಪಗಡಿಯ ಬಜಾರ ನೋಡ ॥ ೨ ॥

ಐದು ಅಂಕಣದಲ್ಲಿ ಈಶಗೊಲ್ಲಾಳನ ಅವತಾರ ನೋಡ
ಆರು ಅಂಕಣದೊಳಗ ಭೃಂಗಿಯ ನಾಟ್ಯವ ನೋಡ
ಏಳು ಅಂಕಣದಲ್ಲಿ ಗೊಲ್ಲಾಳನ ಗುಮ್ಮಟ ನೋಡ
ಎಂಟು ಅಂಕಣದಲ್ಲಿ ಪಂಚತತ್ವದ ಕಳಸ ನೋಡ ॥ ೩ ॥

ಒಂಬತ್ತು ಅಂಕಣದೊಳು ಭೂ ಚಕ್ರದ ಕೊಡೆಯವ ನೋಡ
ಹತ್ತು ಅವತಾರದೊಳು ಗೊಲ್ಲಾಳ ಹೊಂಟಾನ ನೋಡ
ಅಹಂಕಾರ ಬಿಟ್ಟು ಬ್ರಹ್ಮಸೂತ್ರವ ಹಿಡಿಯನು ಬಾರ
ಗೊಲ್ಲಾಳಲಿಂಗನ ಸೇವೆಯಮಾಡಿ ಮುಕ್ತಿ ಪಡೆಯೋಣ ॥ ೪ ॥

ಕೃತಿ : ಶರಣ ಗೊಲ್ಲಾಳ

***

ಹೋಗೋಣ ಗೊಲ್ಲಾಳನ ದರುಶನಕ

ನಡಿ ತಂಗಿ ನಡಿಯೇ ಹೋಗೋಣ ಗ್ವಾಲಗೇರಿ ಕ್ಷೇತ್ರಕ್ಕೆ
ಗೊಲ್ಲಾಳಲಿಂಗನ ದರುಶನ ಪಡೆಯುದಕ
ಢವಳಾರ ಪಟ್ಟಣ ಗೊಲ್ಲಾಳನ ಊರ
ಕುರಬರ ಕುಲದಲಿ ಜನಿಸಿದ ಧೀರ ॥ ೧ ॥

ಮೂರು ಸಾವಿರದ ಮುನ್ನೂರದ ಅರವತ್ತು
ಕುರಿಯ ದೊಡ್ಡಿಯ ಗ್ವಾಲಗೇರಿ ಊರ
ಕುರಿಯ ಹಿಕ್ಕಿಯಲಿ ಲಿಂಗವ ಮೂಡಿ
ಕುರಿಯ ಹಿಕ್ಕಿಯಲಿ ಶಿವರೂಪವ ತೋರಿದ ॥ ೨ ॥

ಗೊಲ್ಲಾಳ ಗೊಲ್ಲನ ಮಹಿಮೆಯ ನೋಡಲು
ಸುರಪುರ ಮರಿಯಪ್ಪ ಲಿಂಗಯ್ಯನ ಭಕ್ತ
ಪೂಜೆಯ ಸಲುವಾಗಿ ಅವನ ಕರಸ್ಯಾನು
ನಂಬಿಗೆಯಿಟ್ಟು ನಡೆದರೆ ಗೊಲ್ಲಾಳ ಕೊಡುವ ದರುಶನವ ॥ ೩ ॥

ಕೃತಿ : ಶರಣ ಗೊಲ್ಲಾಳ

***

ಗೊಲ್ಲಾಳನ ಪಾದಕ್ಕೆ ಶರಣೆಂಬೆ

ಎಲ್ಲಾ ದೇವರೊಳು ಬಲ್ಲಿದ ನೀನು
ಗೊಲ್ಲಾಳ ತಂದೆ ನಿನ್ನ ಪಾದಕೆ ಶರಣೆಂದೆ ॥ ಪ ॥

ಟೊಂಕದಲ್ಲಿ ಕಠಾರಿ ಕೈಯಲಿ ಕೊಡಲಿಯ ಹಿಡಿದೆ
ಕುರಿಗಳನೆಲ್ಲ ಮುಂದೆ ಮಾಡಿಕೊಂಡು ರಕ್ಷಿಸುತ ನಿಂದೆ

ಲಕ್ಷದ ಮೇಲೆ ತೊಂಬತ್ತುಸಾವಿರ ಕುರಿಗಳ
ತುರಬಿದೆ ಸಾಕ್ಷಾತ್ ಶಿವನಾದೆ ॥ ೧ ॥

ಉದಯ ಕಾಲದ ಸೂರ್ಯನ ಕಿರಣ ಭೂಮಿಗೆ ಹರಡಲು
ಕುರಿಗಳ ಕಾಲಿನ ಸಪ್ಪಳಕೆ ಧೂಳು ಮುಗಿಲು ಸೇರುತಿರಲು
ಡಂಬಳ ಪಟ್ಟಣ ಹಳ್ಳದ ದಂಡಿಯಲಿ ಗೊಲ್ಲಾಳ
ಬರುತಿರಲು ಕೊಳಲಿನ ನಾದವ ತುಂಬಿರಲು ॥ ೨ ॥

ಫಾಲ್ಗುಣ ಮಾಸದಿ ವಾಡಿಕೆಯಂತೆ ಶರಣರು ನಡಿದಿರಲು
ಶ್ರೀಗಿರಿಗೆ ಹೋಗಲು ಭಕ್ತರಸಾಲು ತಾನೆ ಬರುತಿರಲು
ಪರಿಸೆಯ ಜನರ ಭಜನೆಯ ಕೇಳುತ ನಿಂತಿರಲು
ಗೊಲ್ಲಾಳ ಆನಂದದಿಂದಲಿ ಕುಣಿಯುತಿರಲು ॥ ೩ ॥

ಅಣ್ಣ ಅಪ್ಪ ನೀವೆಲ್ಲಾ ಎಲ್ಲಿಗೆ ಹೋಗುತಿರುವಿರೆಂದು
ಕೇಳಿದ ಗೊಲ್ಲಾಳ, ಜಂಗಮನೊಬ್ಬ ಹೇಳ್ತಾನ ಬಳಿ ಬಂದು
ನಿನ್ನ ಹೆಸರೇನು ಹೇಳೊ ತಮ್ಮಾ ಹೇಳುವೆ ಮಂದಿಂದು
ಶಿವನ ಮಹಿಮದ ಕತೆಯೊಂದು ॥ ೪ ॥

ಕುರಿಯ ಹಿಕ್ಕಿಯ ಗೊಬ್ಬರದ ಗುಂಡಿಗೆ ಜಂಗಮ ತಾ ಬಂದು
ಇದರೊಳಗಿರುವ ಲಿಂಗಕ್ಕೆ ನೀನು ಪೂಜಿಸಬೇಕೆಂದು
ಜಂಗಮನ ಮಾತಿಗೆ ಗೊಲ್ಲಾಳ ನಂಬಿದ
ನನ್ನ ತಂದೆಯಿವನೆಂದು ಶಿವನೇ ತಾನಾದನಂದು ॥ ೫ ॥

ಕೃತಿ : ಶರಣ ಗೊಲ್ಲಾಳ

***

೧೦. ಜಾತಿಗರ ಚೌಡಯ್ಯ

ಸೂಚಕ ಪದ್ಯ :– ಶಿವರೂಪ ಕಾಯಕವ ಶಿವ ಶರಣ ಚೌಡಯ್ಯ
ಭವದೊಳಗೆ ಮಾಡಿ ಹೆಸರಾದ । ಶರಣನಿಗೆ
ಶಿವಮೆಚ್ಚಿ ಕೊಟ್ಟ ಶಿವಪದವ ॥ ೧ ॥

ಸುಗ್ಗಿಯಾ ಕಣಕೇಳೊ ಸಗ್ಗವದು ರೈತನಿಗೆ
ಹಿಗ್ಗು ಹಾಡುದಕೆ ಬೆಳುವಲವು । ಚೌಡಯ್ಯ
ಬುಗ್ಗೆ ಕುಣಿಯುದಕೆ ಶಿವರೂಪ ॥ ೨ ॥

ಕುಣಿಕುಣಿದು ಚೌಡಯ್ಯ ಮಣಿಮಣಿದು ಹಾಡಿದರೆ
ಕಣತುಂಬಿ ರಾಶಿ ಹೊರಸೂಸಿ । ಒಕ್ಕಲಿಗ
ಮಣಿದು ದಾಸೋಹ ಹೊಸಮತಕೆ ॥ ೩ ॥

ಸುಂಕರೂಪವ ಹಾಕಿ ಕಂಕರಿಯ ಬಾರಿಸುತ
ಕಂಕಣವ ಕಟ್ಟಿ ಚೌಡಯ್ಯ । ಕುಣಿಯುದಕೆ
ಕಂತಿ ಹುಲುಸಾಗಿ ಕಣತುಂಬಿ ॥ ೪ ॥

ಗೆಜ್ಜೆಕಟ್ಟಿದ ಕಾಲು ಹೆಜ್ಜೆ ಹಾಕುವ ಕುಣಿದು
ಸಜ್ಜು ನಿನ್ಹಾಡು ಬೆಳವಲಕೆ । ಚೌಡಯ್ಯ
ಗುಜ್ಜೆ ಕಣದೊಳಗೆ ಬೆಳತನಕ ॥ ೫ ॥

ನೆನಿಸಿ ಕುಣಿಕುಣಿದಾಡಿ ತೆನಿರಾಶಿ ಹಂತಿಯೊಳು
ಬನದ ಹುಲುಸೆಲ್ಲ ಕಣಕೆರಗಿ । ಚೌಡಯ್ಯ
ಉಣಿಸೊ ಬೆಳುವಲವ ಬೆಳೆಹೊಕ್ಕು ॥ ೬ ॥

ಚೌಡ ಕುಣಿಯುವ ಹಾಡ ಹಾಡಿ ಹೊಲ ಹದ ಮಾಡಿ
ಮೋಡ ಮಳೆಗರೆಯೆ ಒಕ್ಕಲಿಗ । ಬಿತ್ತಿದರೆ
ನಾಡೆಲ್ಲ ಬೆಳೆಸು ಹುಲುಸಾಗಿ ॥ ೭ ॥

ಶಿವಲೀಲೆಗಳನಾಡಿ ಶಿವಲೋಕ ಮರೆಸಿದನು
ಶಿವಶರಣ ಚೌಡ ಜಗದೊಳಗೆ । ಕಲ್ಯಾಣ
ಶಿವಮತಕೆ ತವರು ಬೆಳೆಯುದಕೆ ॥ ೮ ॥

ಶಿವನ ಭೈರವ ರೂಪ ಶಿವಶರಣ ನೀಕುಣಿಯೆ
ಶಿವಗಾಳಿ ಬೀಸಿ ಜಗ ನಡುಗಿ । ಹೊಸಮತದ
ಶಿವನುಡಿಯ ಕೇಳಿ ಜನವೆದ್ದು ॥ ೯ ॥

ನಾಡ ಮೇಲಿನ ಜನರು ಹೂಡುದಕೆ ವಾದಗಳ
ತೋಡಿ ರಾಪ್ಹಾಕಿ ಚೌಡನಿಗೆ । ಸೋಲಿಸಲು
ಕಾಡಿದರು ಸೇರಿ ಮಂಟಪವ ॥ ೧೦ ॥

ಆಡಿ ಸೋತರು ರೂಪ ಬೇಡಿದರು ಕೈಮುಗಿದು
ಚೌಡ ಶಿವಶರಣ ಊದಿದನು ಶಿವಮಂತ್ರ
ನಾಡುನಾಡೆಲ್ಲ ಹೊಸಮತವು ॥ ೧೧ ॥

ನಾಡೊಳಗೆ ರೇಕಳಿಗೆ ಬೀಡು ಶಿವಶರಣರಿಗೆ
ಮೂಡಿ ಶಿವಭಕ್ತಿ ಧರ್ಮವತಿ । ಜನವಶಕೆ
ಚೌಡ ವಂಗನಾಗಿ ಹುಟ್ಟಿದನು ॥ ೧೨ ॥

ಶಿವಲೀಲೆ ಹೆಪ್ಪಾಗಿ ಶಿವಶರಣ ಚಾಡಾಗಿ
ಭವದೊಳಗೆ ಹುಟ್ಟಿ ಶಿವನುಡಿಯ । ಸಾರಿದನು
ಶಿವಗಂಗೆ ಸುತ್ತ ಹರಿದಂತೆ ॥ ೧೩ ॥

ಭರತ ವಿದ್ಯೆಯ ಕಲಿತು ನುರಿತು ಬಲು ನಿಪುಣಾದ
ಹರನೆಂದು ಹಾಡಿ ಮೈ ಮರೆತು । ಚೌಡಯ್ಯ
ಅರಿತು ಕುಣಿಯುವನು ಶಿವಲೀಲೆ ॥ ೧೪ ॥

ಜಾತಿಗರ ಚೌಡಯ್ಯ ಬೇತುಳ್ಳ ಶಿವಶರಣ
ನೀತಿ ನೀರಾಯ್ತು ಬಳಸುದಕ । ಪರಮತವು
ಸೋತು ನಾಯಾಯ್ತು ಶಿವನಡಿಗೆ ॥ ೧೫ ॥

ಚರಮೂರ್ತಿ ರೇಕಯ್ಯ ಗುರುವಾದ ಚೌಡನಿಗೆ
ಹರಸಿ ಶಿವದೀಕ್ಷೆ ನೀಡಿದನು । ಕಾಯಕವು
ಹರಸೇವೆಯೆಂದು ಜಗದೊಳಗೆ ॥ ೧೬ ॥

ಶಿವಮತವ ಹಬ್ಬಿಸಲು ಶಿವನ ಅಪ್ಪಣೆ ಪಡೆದು
ಶಿವಕಳೆಯು ಸಿಡಿದು ಹುಟ್ಟಿದರು । ಚೌಡನಿಗೆ
ಶಿವಶರಣರಂದು ಕುಣಿಯುದಕೆ ॥ ೧೭ ॥

ಛಪ್ಪನ್ನ ದೇಶದೊಳು ಒಪ್ಪಿದರು ಜಾತಿಗರು
ತಪ್ಪದಲೆ ಕಲಿತು ಕುಣಿಯುದಕೆ । ಶಿವರೂಪ
ಬೆಪ್ಪಾಯ್ತು ಜಗವು ಶರಣರಿಗೆ ॥ ೧೮ ॥

ಕುಣಿಯುದಕೆ ಕಾಯಕವು ತಣಿಸುವದೆ ದಾಸೋಹ
ತಣಿದ ಜಂಗಮರ ಶಿವಕೂಟ । ಚೌಡನಿಗೆ
ಗಣಶಿವನು ಕುಣಿವ ಶಿವಲೋಕ ॥ ೧೯ ॥

ಆಡಿದನು ಬಹುರೂಪ ನೋಡಿ ಭಕ್ತರು ಮೆಚ್ಚಿ
ನೀಡಿದರು ಜನರು ಧನಮನವ । ಚೌಡಯ್ಯ
ಮಾಡುತಲಿ ನಿತ್ಯ ದಾಸೋಹ ॥ ೨೦ ॥

ಮರ್ತ್ಯದೊಳು ಚೌಡಯ್ಯ ನಿತ್ಯ ಕುಣಿಯುತಲಿದ್ದ
ಹೊತ್ತೇರಿ ಶಿವನ ಲೀಲೆಗಳ । ಜನನೋಡಿ
ಹೊತ್ತು ಶಿವನುಡಿಯ ಕೈಮುಗಿದು ॥ ೨೧ ॥

ಕೊಟ್ಟಗಿರಿ ಅಚ್ಯುತನು ಅಟ್ಟವೇರಿದನಂದು
ಪಟ್ಟಣದ ರಾಯ ನೆರವಿತ್ತು । ವಾದಿಗಳ
ಬಟ್ಟಿಟ್ಟು ಕರೆವ ಕುಣಿಯುದಕೆ ॥ ೨೨ ॥

ನಟರಾಯ ತಾನೆಂದು ಕಟುಮದವು ಅಚ್ಯುತಗೆ
ಸೆಟೆಮಾತು ಕೇಳಿ ಚೌಡಯ್ಯ । ಕಾಯಕವ
ದಿಟವೆಂದು ಕುಣಿದು ತೋರಿಸಲು ॥ ೨೩ ॥

ಆಟಮೇಳಗಳೊಡನೆ ಮೇಟಿ ಹುದ್ದರಿಯಾಗಿ
ದಾಟಿಗಡಿ ಹೊಕ್ಕ ಕೊಟ್ಟಗಿರಿ । ಪುರದೊಳಗೆ
ಕೂಟ ಕೂಡಿಸಿದ ಕುಣಿಯುದಕೆ ॥ ೨೪ ॥

ಆಡಿದನು ಶಿವಲೀಲೆ ನಾಡೆಲ್ಲ ಹೂವಾಯ್ತು
ಮೂಡಿ ಶಿವಭಕ್ತಿ ಹಣ್ಣಾಯ್ತು । ಶಿವನುಡಿಯ
ಕೋಡಿರಸ ಹರಿದು ಜನಕುಡಿದು ॥ ೨೫ ॥

ಚೌಡಯ್ಯ ಬಹುರೂಪ ಆಡಿದರೆ ಪುರವೆಲ್ಲ
ನೋಡಿ ಮೈಮರೆತು ಮನೆಗೆಲಸ ಮರೆಯುವರು
ಹಾಡುವರು ಚೌಡ ಶರಣೆಂದು ॥ ೨೬ ॥

ಪುರವೆದ್ದು ಕೇಳುತಲಿ ಪುರ ಹೋಗಿ ನೋಡುತಲಿ
ಪುರವೆ ಮಾತಾಡಿ ಚೌಡನಿಗೆ ಮೆಚ್ಚಿದರು
ಸರಿಯಾರು ಎಂದು ಕುಣಿತದೊಳು ॥ ೨೭ ॥

ಅಚ್ಯುತನು ಕೇಳಿದನು ಕಿಚ್ಚಾಗಿ ಹಟತೊಟ್ಟು
ಕಚ್ಚಿ ಕೆದಹುವನು ಕುಣಿತದೊಳು । ಚೌಡನಿಗೆ
ರೊಚ್ಚೆದ್ದು ಸಿಂಹ ಜಿಗಿದಂತೆ ॥ ೨೮ ॥

ಅರಸನಿಗೆ ಅಚ್ಚುತನು ಕರಿಸೆಂದ ಚೌಡನಿಗೆ
ನೆರೆಸೆಂದ ಸಾರಿ ಡಂಗುರವ ಪುರದೊಳಗೆ
ಇರಸೆ ಚಿತ್ತೆಂದ ಕುಣಿಯುದಕೆ ॥ ೨೯ ॥

ಅರಸನಂಗಳ ಮುಂದ ಪರಿಸಿ ಕೂಡಿತು ಕೇಳೊ
ಹರಭಕ್ತ ಚೌಡ ಅಚ್ಚುತರು । ಕುಣಿಯುದಕೆ
ತರತರದ ರೂಪ ತೊಟ್ಟೆದ್ದು ॥ ೩೦ ॥

ಧಿಮ್ಮಯ್ಯ ಧಿತ್ತಯ್ಯ ದಮ್ಮಡಿಯು ಢಮ್ಮೆಂದು
ದಿಮ್ಮ ಕಣಕಣಿಸಿ ಕುಣಿತದೊಳು । ಚೈಯ್ಯಾಕ
ಝುಮ್ಮೆಂದು ನುಡಿಯೆ ಜನತುಂಬಿ ॥ ೩೧ ॥

ಕೋಣೋಡಿ ಬಲು ದಣಿದು ಊನಾಗಿ ಬೀಳ್ವಂತೆ
ಜಾಣ ತಾನೆಂಬ ಹೆಮ್ಮೆಯೊಳು । ಅಚ್ಚುತನು
ಗೋಣು ಕೆಳಗಾಗಿ ನೆಲಕುರುಳಿ ॥ ೩೨ ॥

ಕುಣಿದ ರೂಪಗಳುಟ್ಟು ಮಣಿದು ಹಾಡಿದ ಚೌಡ
ದಣಿವೆ ಕಾಯಕವು ಶರಣರಿಗೆ । ದಿನಮಣಿಗೆ
ಪಣವೆ ಈ ಜಗವ ಬೆಳಗುದಕೆ ॥ ೩೩ ॥

ಕರಗಿ ಹೋಯಿತು ಹೆಮ್ಮೆ ಮರೆತು ಹೋಯಿತು ಕುನುಸು
ನರಿ ಜಿಗಿದು ಸಿಂಹವೆನಬಹುದೆ । ಜಗದೊಳಗೆ
ಹರಭಕ್ತ ಸೇವೆ ಮಿಗಿಲೆಂದು ॥ ೩೪ ॥

ಸೋತ ಅಚ್ಚುತನೆದ್ದು ನೀತಿಯಲಿ ಮಾತಾಡಿ
ಜ್ಯೋತಿ ನೀ ಗುರುವು ಚೌಡಯ್ಯ । ಕೈಮುಗಿದು
ಜೀತೆಂದು ಮೇಳ ಸೇರಿದನು ॥ ೩೫ ॥

ಮೇಳದೊಳು ಅಚ್ಚುತನು ಆಳಾಗಿ ಚೌಡನಿಗೆ
ಊಳಿಗದ ಕೂಡ ಇರುತಿದ್ದ । ನೆರುವಾಗಿ
ವಾಲಗವ ಹಾಡಿ ಕುಣಿಕುಣಿದು ॥ ೩೬ ॥

ಜಕ್ಕಯ್ಯ ಬಹುರೂಪಿ ತಕ್ಕೊಂಡು ಮೇಳಗಳ
ಸೊಕ್ಕಿನಲ್ಲಿ ಗಂಡಭೇರುಂಡ । ಕುಣಿತದೊಳು
ಮಿಕ್ಕಿದೆನು ಎಂದು ಪುರಹೊಕ್ಕ ॥ ೩೭ ॥

ಶರಣ ಚೌಡನ ಹೆಸರ ಪುರದೊಳಗೆ ಕೇಳಿದನು
ಹರರೂಪ ಹಾಡಿ ತೋರುದಕ । ಜಕ್ಕಯ್ಯ
ತುರಿಸು ಬಿತ್ತೆಂದ ಕುಣಿಯುದಕೆ ॥ ೩೮ ॥

ಚೌಡ ಗೆದ್ದರೆ ಕಾಯ್ವೆ ಕಾಡಿನೊಳು ಕತ್ತೆಗಳ
ತೋಡಿ ಜಿದ್ದಿಟ್ಟ ಚೌಡನಿಗೆ ಜಕ್ಕಯ್ಯ
ನೋಡುದಕೆ ಬಂತು ಪುರಕೇಳಿ ॥ ೩೯ ॥

ಆಡಿದನು ಜಕ್ಕಯ್ಯ ಚೌಡಯ್ಯ ರೂಪಗಳ
ನೋಡಿ ಜಗವೆಲ್ಲ ಬೆರಗಾಯ್ತು । ಜಕ್ಕಯ್ಯ
ಆಡಿತೋರಿಸಿದ ಜಿಣರೂಪ ॥ ೪೦ ॥

ಶಿವಲೀಲೆ ಆಡುತಲಿ ಶಿವನ ತಾಂಡವ ಕುಣಿದ
ಶಿವನೆಂದು ಚೌಡ ಎದೆನಡುಗಿ । ಜಕ್ಕಯ್ಯ
ಕವಳೇರಿ ಬಿದ್ದ ಭೂತಳಕೆ ॥ ೪೧ ॥

ಮದ್ದಲಿಯ ಸಪ್ಪಳಕೆ ಬಿದ್ದ ಜಕ್ಕನು ಎದ್ದು
ಹುದ್ದೆ ಬೇಡೆಂದು ಎರಗಿದನು । ಚೌಡನಿಗೆ
ಉದ್ಧರಿಸಿ ಗುರುವೆ ಸೇವಕನು ॥ ೪೨ ॥

ಕತ್ತೆಗಳ ಜಕ್ಕಯ್ಯ ಮರ್ತ್ಯದೊಳು ತಾಕಾಯ್ದು
ಮತ್ತೆ ಚೌಡನಿಗೆ ಆಳಾಗಿ । ಮೇಳದೊಳು
ನಿತ್ಯದೊಳು ಕುಣಿದ ಶಿವಮತಕೆ ॥ ೪೩ ॥

ಜಗವೆಲ್ಲ ಕೇಳುತಲಿ ಯುಗದೊಳಗೆ ಜಾತಿಗರ
ಮಿಗಿಲಾದ ಚೌಡ ಶರಣೆಂದು । ಕೂಡಿದವು
ಜಗದ ಬಹುರೂಪಿ ಮೇಳಗಳು ॥ ೪೪ ॥

ಕಾಡಸಿದ್ಧರು ಕೇಳಿ ನಾಡ ಬುಡಬುಡಕಿಗಳೂ
ಓಡಿ ಶಂಖಯ್ಯ ಸುಡುಗಾಡ । ಸಿದ್ಧರೆಲೆ
ನಿಡಿದರು ಸೇವೆ ಚೌಡನಿಗೆ ॥ ೪೫ ॥

ಹೇಳಿದನು ಚೌಡಯ್ಯ ಕೇಳಿದನು ರಾಗಗಳ
ನಾಳೆನ್ನದೆ ಕಲಿತು ಹಾಡಿದರು । ಶಿವಮತವ
ಮೂಳಾಯ್ತು ಕೇಳಿ ಪರಮತವು ॥ ೪೬ ॥

ಪ್ರೇಮದಲಿ ಹಾಡುವನು ರಾಮರಾಗದ ಚೌಡ
ಸೀಮೆ ದಾಟುವನು ಲಿಂಗದೊಳು । ಶಿವಪೂಜೆ
ನೇಮಾಯ್ತು ನಿತ್ಯ ಬೆಳಗಿನಲಿ ॥ ೪೭ ॥

ಲಿಂಗಪೂಜೆಗೆ ರಾಗ ಸಂಗ ಜೋಡಣೆಯಾಗಿ
ಅಂಗದೊಳು ಲಿಂಗ ಬೆರೆದಂತೆ । ಚೌಡನಿಗೆ
ಅಂಗಲಿಂಗಾಯ್ತು ಈ ರಾಗ ॥ ೪೮ ॥

ಇರುತಿರಲು ಚೌಡಯ್ಯ ಮೆರೆಸುದಕೆ ಶಿವಲಿಂಗ
ನರಲೋಕದೊಳಗೆ ಶಿವನುಡಿಯ । ಸಾರುದಕೆ
ವರುವರುಷ ಹಬ್ಬ ಲೇಸೆಂದು ॥ ೪೯ ॥

ಭಕ್ತಜಂಗಮರುಣಿಸಿ ಮುಕ್ತರಾಗಲು ಬೇಕು
ಭಕ್ತ ಶಿವಶರಣ ಚೌಡಯ್ಯ । ಬಯಸಿದನು
ಯುಕ್ತಿಯಲಿ ಹಬ್ಬ ಮಾಡುದಕೆ ॥ ೫೦ ॥

ಹಬ್ಬವನು ಹೂಡಿದನು ಉಬ್ಬ ಊಳಿಗಕೆಲ್ಲ
ಜಿಬ್ಬ ಕವಡೊಂದು ಬಳಿಯಿಲ್ಲ । ಚೌಡನಿಗೆ
ನಬ್ಬುನಸಕಿನಲಿ ಮನೆಬಿಟ್ಟ ॥ ೫೧ ॥

ಮಸಕು ಹರಿಹರಿಯುತಲಿ ನಸಕು ಬರುಬರುತಿರಲು
ಯಶವು ಬಂದಂತೆ ಅಂಗಳಕೆ । ಅರಸನಿಗೆ
ಒಸಗೆ ಚೌಡಯ್ಯ ಕಳಿಸಿದನು ॥ ೫೨ ॥

ಹಣ ಹತ್ತು ಸಾವಿರವು ಗಣಪರ್ವ ಮಾಡುದಕೆ
ಎಣಿಕೆಯಲಿ ಸಾಲ ಮೂವರುಷ । ತಪ್ಪಿದರೆ
ರುಣವ ಇಮ್ಮಡಿಗೆ ತೀರಿಸುವ ॥ ೫೩ ॥

ಅರಸು ಕೇಳಿದ ಮಾತ ಹರುಷದಲಿ ಚೌಡನಿಗೆ
ಇರಿಸುದಕೆ ಈಡು ಏನುಂಟು । ಹಣಕೊಡುವೆ
ತರಿಸೆಂದ ಅರಸ ಚಣದೊಳಗೆ ॥ ೫೪ ॥

ಆಡುವದು ಶಿವರೂಪ ಹಾಡುವದು ಶಿವನುಡಿಯು
ಮಾಡುವದು ನಿತ್ಯ ಶಿವಪೂಜೆ । ಶರಣರಿಗೆ
ಈಡು ಜಗದೊಳಗೆ ಏನುಂಟು ॥ ೫೫ ॥

ಸೊತ್ತು ಜಗದೊಳಗೆನಗೆ ಮತ್ತೆ ಏನಿಲ್ಲಯ್ಯ
ಸೊತ್ತೊಂದೆ ರಾಮಕ್ರಿಯೆ ರಾಗ । ತನಗೆಂದು
ಒತ್ತೆಯದನಿಡುವೆ ನಿನ್ನಲ್ಲಿ ॥ ೫೬ ॥

ಈಡಿಡುವ ರಾಗವನೆ ಹಾಡು ಚೌಡನೆ ಕೇಳ್ವೆ
ನೋಡಿ ಹಣಕೊಡುವೆ ನಾನಿನಗೆ । ಚೌಡಯ್ಯ
ಮಾಡಿದನು ರಾಗ ಹಾಡಿನೊಳು ॥ ೫೭ ॥

ಕೇಳುತಲಿ ಅರಸನಿಗೆ ತೋಳುಗಳ ಬಲತುಂಬಿ
ತಾಳಿ ಸಪ್ತೇಳು ಸಾಗರದ । ಬುಡವನ್ನು
ಏಳ್ಹೆಡೆಯ ಸರ್ಪ ಹೊತ್ತಂತೆ ॥ ೫೮ ॥

ಒತ್ತಿ ನೀ ರಾಗಿಟ್ಟಿ ಮತ್ತೆ ಗೆಲ್ಲುವೆ ಲೋಕ
ಸುತ್ತ ಈ ಲೋಕ ಆಳುವೆನು । ಚೌಡಯ್ಯ
ಸತ್ಯ ನಿನ್ಹಾಡು ಬೆಳಕಿನಲಿ ॥ ೫೯ ॥

ಏಣಿಸಿದನು ಚೌಡನಿಗೆ ಹಣ ಹತ್ತು ಸಾವಿರವ
ಗಣಪರ್ವ ಮಾಡಿ ಚೌಡಯ್ಯ । ಜಂಗಮರ
ಉಣಿಸುವದ ನೋಡಿ ಶಿವಲೋಕ ॥ ೬೦ ॥

ಶಿವಭಕ್ತ ಶಿವಶರಣ ಶಿವಕಳೆಯು ಶಿವಲೀಲೆ
ಶಿವರೂಪವೆಂದು ಶಿವಗಣವು । ಚೌಡನಿಗೆ
ಶಿವಲೋಕದೊಳಗೆ ಭಜಿಸಿದರು ॥ ೬೧ ॥

ಒತ್ತೆ ಹಾಕಿದ ರಾಗ ಚಿತ್ತದೊಳು ನೆನೆಯದಲೆ
ನಿತ್ಯ ಶಿವಪೂಜೆ ಚೌಡಯ್ಯ । ಮಾಡುತಲಿ
ಇತ್ತ ಶಿವಗಾಯ್ತು ಗಡಿಬಿಡಿಯು ॥ ೬೨ ॥

ಆತುರತೆ ಹೆಚ್ಚಾಗಿ ಕಾತರಸಿ ಶಿವಬಂದ
ಬೇತಿನಲಿ ತೊಟ್ಟು ಜಂಗಮನ । ನಿಜರೂಪ
ನೀತಿಯಲಿ ರಾಗ ಕೇಳುದಕೆ ॥ ೬೩ ॥

ಬರುತಿರುವ ಜಂಗಮಗೆ ಪರಮ ಚಿತ್ಕಳೆಯಂದ
ಪರಮಾತ್ಮನೆಂದು ಚೌಡಯ್ಯ । ಆದರಿಸಿ
ಬರುವ ಕೇಳಲ್ಕೆ ಜಂಗಮನು ॥ ೬೪ ॥

ರಾಮಕ್ರಿಯೆ ರಾಗವ ಸೀಮೆ ಹೊಗಳುವದಯ್ಯ
ಕಾಮಹರ ಭಕ್ತ ಚೌಡಯ್ಯ । ಶಿವಶರಣ
ಸಾಮಿ ಕೇಳುವೆನು ಹಾಡೆನಲು ॥ ೬೫ ॥

ಹತ್ತು ಸಾವಿರ ಹಣಕೆ ಒತ್ತೆ ಬಿದ್ದಿದೆ ರಾಗ
ಒತ್ತೆ ಬಿಡುತನಕ ಬಾಯಿಲ್ಲ । ಹಾಡುದಕೆ
ಸತ್ಯ ಕೇಳಿದರೆ ಶಿವಗಿಲ್ಲ ॥ ೬೬ ॥

ಶಿವನೆ ಜಂಗಮನಾಗಿ ಶಿವಪೂಜೆ ಚೌಡಯ್ಯ
ಭವದೊಳಗೆ ಮಾತು ರಾಗ್ಹಾಡಿ । ಕೈಮುಗಿವೆ
ಶಿವಲೋಕ ಕೇಳಿ ತಣಿಯುವದು ॥ ೬೭ ॥

ಜಂಗಮನೆ ನಾಗಯ್ಯ ತಂಗಿಲ್ಲಿ ಮೂವರುಷ
ಹಿಂಗಿಸುವೆ ನಿನ್ನ ಹಿರಿಯಾಸೆ । ಮರುದಿನವೆ
ಹಂಗೀಗರಾಗ ಬೇಡೆಂದ ॥ ೬೮ ॥

ಹಾಡದಾಸೆಗೆ ಒಪ್ಪಿ ಬೀಡಿಟ್ಟ ಜಂಗಮನು
ಗೂಢ ಶಿವತತ್ವ ಬೋಧಿಸಲು । ಶಿವಶರಣ
ಚೌಡ ಆಚರಿಸಿ ಗುರುವೆಂದು ॥ ೬೯ ॥

ದೀಕ್ಷೆಗುರು ರೇಕಯ್ಯ ಮೋಕ್ಷಗುರು ನಾಗಯ್ಯ
ಶಿಕ್ಷಕ ಗುರುವು ಶಿವಮತವು । ಜಗದೊಳಗೆ
ಭಕ್ಷವೆನಗಾಯ್ತು ಕಾಯಕವು ॥ ೭೦ ॥

ಶಿವಲೀಲೆಯಾಡುತಲಿ ಶಿವಮತವ ಸಾರುತಲಿ
ಭವದ ರೇಕಯ್ಯ ನಾಗಯ್ಯ । ತಂದೆಗಳ
ಶಿವನಡಿಗೆ ಬೆರೆಸಿ ಹಾಡುತಲಿ ॥ ೭೧ ॥

ಜನವೆಲ್ಲ ಮೌನಾಗಿ ಮನವೊಪ್ಪಿ ಕೇಳುತಲಿ
ತನುವ ನೀಡಿದರು ಹೊಸ ಮತಕೆ । ಜಗದೊಳಗೆ
ಹೊನಲಾಗಿ ಹರಿದು ಶಿವಬೆಳಕು ॥ ೭೨ ॥

ಗುರುನಾಗಿನಾಥಯ್ಯ ಹರುಷದಲಿ ಚೌಡನಿಗೆ
ಅರುಹಿದರು ಗುಟ್ಟ ಕಾಯಕವ । ನಡೆಸುದಕೆ
ಶರಣ ಗಣಚರಿತೆ ಕುಣಿಯುದಕೆ ॥ ೭೩ ॥

ಹೊಸಮತದ ಲಿಂಗಿಗಳ ಹೆಸರಾದ ಚರಿತೆಗಳ
ಹೊಸ ಸೋಗ ಹಾಕಿ ಚೌಡಯ್ಯ । ನೀ ಕುಣಿಯೊ
ಹಸನಾಗಿ ಜಗವು ಬೆಳಗುವದು ॥ ೭೪ ॥

ಬಡಿಹೋರಿ ಬೊಮ್ಮಯ್ಯ ಬಡಿಸಿಕೊಂಬುವ ರೂಪ
ನಡುಗಿ ಲಿಂಗಿಗಳು ಉರುಳುತಲಿ । ಲೋಗನಿಗೆ
ಕೊಡಗೂಸು ನುಂಗ್ವ ಶಿವರೂಪ ॥ ೭೫ ॥

ಮೊರನ ಮೇಮನ ರೂಪ ಬರಡು ಬಂಕನ ರೂಪ
ಶರಣೆ ಕಾರಿಕಾಲಮ್ಮಯರ । ನಿಜರೂಪ
ಹರನುಂಡ ರೂಪ ಮಾದರಲಿ ॥ ೭೬ ॥

ಬಿಟ್ಟೆ ಮಾಡಿದ ರೂಪ ಪಿಟ್ಟವ್ವೆ ಅಮುಗನಿಗೆ
ತೊಟ್ಟ ಶಿವರೂಪ ಮಾದೇವಿ । ಉಡಿಯೊಳಗೆ
ಬಿಟ್ಟು ನೀ ಬಿಡದೆ ಕುಣಿಯೆನುಲು ॥ ೭೭ ॥

ಚೌಡಯ್ಯ ರೂಪಗಳ ಆಡಿ ಕುಣಿಯಲು ಲೋಕ
ನೋಡಿ ಶಿವಮತದ ಬೆಳೆಬಂತು । ಜಗವೆಲ್ಲ
ನೀಡಿ ಕಾಯಕಕೆ ಹಣಗೂಡಿ ॥ ೭೮ ॥

ಸಾಲ ಹರಿದನು ಚೌಡ ಕಾಲದಲಿ ಅರಸನಲಿ
ಮೇಲು ರಾಗೆಂದು ಕಾಯಕವ । ಹಾಡಿದನು
ಕೇಳಿ ಶಿವಲೋಕ ಬೆರಗಾಯ್ತು ॥ ೭೯ ॥

ನಾಗಿನಾಥನೆ ಶಿವನು ಆಗಿದ್ದ ಜಂಗಮನು
ರಾಗ ಕೇಳಿದನು ಹರುಷದಲಿ । ಚೌಡನಿಗೆ
ತೂಗಿ ತೋರಿದನು ನಿಜರೂಪ ॥ ೮೦ ॥

ನಡೆ ಚೌಡ ಹೋಗೋಣ ಕೊಡೆ ನಿನಗೆ ನಾ ಹಿಡಿವೆ
ದ್ರುಢಭಕ್ತ ನಿನಗೆ ಸರಿಯಾರು । ಹೊಸಮತಕೆ
ಹೊಡೆಯಾದಿ ಬೆಳಸು ಹುಲುಸಾಯ್ತು ॥ ೮೧ ॥

ಬೇಡೆನಗೆ ಕೈಲಾಸ ನೀಡೆನಗೆ ಶಿವಭಕ್ತಿ
ಮಾಡುವೆನು ಸೇವೆ ಶಿವಮತಕೆ । ಶರಣರಿಗೆ
ನಾಡ ಕಾಯಕವೆ ಕೈಲಾಸ ॥ ೮೨ ॥

ನಸುನಕ್ಕು ಶಿವಕೇಳಿ ಮುಸುಕಿನಲಿ ಮರೆಯಾದ
ಹೊಸಬೆಳಕು ಬಂತು ಚೌಡನಿಗೆ । ಮೂಡಣವು
ನಸುಕಿನಲಿ ಕೆಂಪು ಹರಿದಂತೆ ॥ ೮೩ ॥

ಜಾತಿಗರು ಕೂಡಿದರು ಕೋತುಳ್ಳ ಚೌಡನಿಗೆ
ನೀತಿಯಲಿ ಆಡಿ ರೂಪಗಳ । ಜಗದೊಳಗೆ
ಸೋತು ಪರಮತವು ಕೈಮುಗಿದು ॥ ೮೪ ॥

ಕೊಟ್ಟಗಿರಿ ಪಟ್ಟಣವ ಬಿಟ್ಟು ಚೌಡನು ಹೊರಟ
ನಿಟ್ಟು ಕಲ್ಯಾಣ ಸೇರುದಕೆ । ಶರಣರಿಗೆ
ಗುಟ್ಟು ತಿಳಿಸುದಕೆ ಕಾಯಕದ ॥ ೮೫ ॥

ಬಾರಿಸುತ ಹಾಡುವನು ತೋರಿಸಲು ಕುಣಿಯುವನು
ಸಾರುತಲಿ ಬಂದ ಹೊಸಮತವ । ಚೌಡಯ್ಯ
ಮೀರಿ ಶಿವಮತವು ಹೆಸರಾಯ್ತು ॥ ೮೬ ॥

ಹಾದಿಯೊಳು ಹಾಡುತಲಿ ಬೋಧಿಸುವ ಶಿವಲೀಲೆ
ಹೋದ ಹೋದಲ್ಲಿ ಜನಮೆಚ್ಚಿ । ಶಿವಮಂತ್ರ
ಊದಿದಕೆ ತೂಗಿ ಬೆನ್ಹತ್ತಿ ॥ ೮೭ ॥

ಕಲ್ಯಾಣಮಂಟಪದ ಎಲ್ಲ ಶರಣರು ಕೇಳಿ
ಸೊಲ್ಲು ಹೊಸಮತವ ಸಾರುದಕೆ । ಚೌಡಯ್ಯ
ಒಳ್ಳೆ ಆದರವ ತೋರಿದರು ॥ ೮೮ ॥

ಅಲ್ಲಮನೆ ಮೊದಲಾಗಿ ಕಲ್ಲೆದೆಯ ಮಡಿವಾಳ
ಚೆಲ್ಲಿ ಶಿವಬೆಳಕ ಚೌಡಯ್ಯ । ಲಿಂಗದೊಳು
ಸಲ್ಲಿಸುತ ಸೇವೆ ಬಯಲಾದ ॥ ೮೯ ॥

ಜಾತಿಗಾರರ ಕಸಬು ನೀತಿಯಲಿ ಶಿವಶರಣ
ಕೋತಿನಲಿ ತೋರಿ ಹೆಸರಾದ । ಜಗದೊಳಗೆ
ಮಾತು ಬಹುರೂಪ ಚೌಡಯ್ಯ ॥ ೯೦ ॥

ಬೆಳುವಲವು ಬೆಳೆಯಾಗಿ ಬಳುವಲಿಯು ಹೊಸಮತಕೆ
ಬೆಳತನಕ ಚೌಡ ಕಣದೊಳಗೆ । ನಿನ್ನಾಡು
ಬೆಳೆಗೆ ಬಳುವಲಿಯು ಹುಲುಸಾಯ್ತು ॥ ೯೧ ॥

ಹಂತಿಯದು ಹಾಡೆಂದು ಪಂತಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲೆ । ಚೌಡಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೯೨ ॥

ಶರಣು ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸಿರಿ ಶರಣ ಚೌಡಯ್ಯ ನಮಗಿನ್ನು
ಹರಸರಿ ಹುಲುಸು ಹುಲ್ಲುಲ್ಲಿಗೊ ॥ ೯೩ ॥

ಕೃತಿ : ಕನ್ನಡ ಜಾನಪದ ಗೀತಗಳು

***

೧೧. ನುಲಿಯ ಚಂದಯ್ಯ

ಯಾರಿಗೀ ಯಾರಿಲ್ಲೊ

ಯಾರಿಗೀ ಯಾರಿಲ್ಲೊ ಶರಣರಿಗ । ಸದ್ಗುರುವಿನ್ಹಂಗ
ಯಾರಿಗೀ ಯಾರಿಲ್ಲೋ ಶರಣರಿಗ ॥ ॥ ಪ ॥

ಅನುಭವ ಮಂಟಪ ಕಲ್ಯಾಣದೊಳಗ
ಅಂಗದ ಮೇಲೆ ಲಿಂಗ ಇರಬೇಕೆಲ್ಲರಿಗ
ಲಿಂಗ ಇಲ್ಲದ ಭವಿಹನ ಕಟ್ಟಕಡೀಗ ॥ ॥ ೧ ॥

ಶ್ರಿಂಗಾರಲಿಂಗ ಶರೀರ ಮೇಲೆ ।
ಈಭೂತಿ ಇರಬೇಕು ಹಣಿಯ ಮೇಲೆ ।
ಅಕ್ಷರ ಲಿಂಗವನ್ನು ಕಟ್ಟಿ ಕೊರಳಿಗೆ ।
ನುಲಿಕಿ ಮಾರುತ್ತಿದ್ದ ತಾ ಬೇಗ ಬೆಳಗ ॥ ॥ ೨ ॥

ನುಲಕಿ ಚಂದಯ್ಯ ಹನ ಸಂತರೊಳಗ
ಲಿಂಗ ಇಲ್ಲರೀ ಅವನ ಕೊರಳಗ
ಜ್ಯೋತಿರ್ಲಿಂಗ ದೃಷ್ಟಿ ಇತ್ತರಿ ಅವನಿಗ
ಕಳದ ಹೋದ ಲಿಂಗ ಯಾತಕ್ರಿ ನಿಮಗ ॥ ೩ ॥

ಲಿಂಗಕ್ಕೆ ನೀರು ಬೆರಸಲೆಂದಿಗ
ಲಿಂಗಪ್ಪ ಬ್ಯಾಸರಾದ ಅವನ ಕೊರಳಿಗ
ಮೆದಿ ಕೊಯ್ಲಿಕ್ಕೆ ಶರಣ್ಹೋದ ಹೊಳಿಗ
ಲಿಂಗಾ ಛಿಡಿದು ಬಿತ್ತೊ ನೀರಿನ ಹೊಳಿಗಾ ॥ ॥ ೪ ॥

ಆ ಮಾತು ಶರಣರಿಗಿ । ಗೊತ್ತಿದ್ದಿಲ್ಲಾಗ
ಹುಲ್ಲಿನ ಹೊರಿ ಹೊತ್ತಿಕೊಂಡ ತಲಿಮ್ಯಾಲ
ಲಿಂಗಪ್ಪ ಕರಿತನ ನುಲಕಿ ಚಂದಗ
ನಿನ್ನ ಲಿಂಗವಿದ ತೊಕೊ ಮೈಮ್ಯಾಲ ॥ ॥ ೫ ॥

ಚಂದಯ್ಯ ಅನುತಾನೊ ಆ ಲಿಂಗಪ್ಪಗ
ನನ್ನ ಲಿಂಗವಿದ್ದ ಬಿಟ್ಟೋದಿ ಹ್ಯಾಂಗ
ಕಡೀಗಾದ ಲಿಂಗ ಕಟ್ಟಲೆಂದಿಗ
ಪಂಚಾಯ್ತಿ ಬಿದ್ದಾಯ್ತಿ ಶರಣರೊಳಿಗ ॥ ॥ ೬ ॥

ಲಿಂಗಪ್ಪ ಹೇಳುತಾನ ಕರದೆಲ್ಲರಿಗ
ಶರಣ ಅನುತಾರ ಆ ಲಿಂಗಪ್ಪಗ
ಮಂತ್ರದ ಅಧಿಕಾರ ಇಲ್ಲರೀ ನಮಗ ॥ ೭ ॥

ಮುಡಬಿ ಮಠ ಅದಾ ನೋಡು ಕಟ್ಟಕಡಿಗ
ಆನಂದಯ್ಯ ಗುರು ಹೇಳುತಾರೊ (ಮಠದಾಗ) ಎಲ್ಲರಿಗ
ಬಂದು ಶಿವಮಂತ್ರ ಓದಿ ಕಿವ್ಯಾಗ
ಘನಲಿಂಗ ಕಟ್ಟ್ಯಾರ ಶರಣನಿಗಾಗ ॥ ೮ ॥

– ಶ್ರೀಮತಿ ಸರಸ್ವತಿ ಗದಗೆಪ್ಪಾ ಧಬಾಲೆ.

***

ಏನಂತ ಮಾತಾಡ್ಲಿ ನಾನು

ಏನಂತ ಮಾತಾಡ್ಲಿ ನಾನು
ನೂಲಿ ಚಂದಯ್ಯ ಹೋಗಿ ಹೇಳೋ ನೀನು ॥ ಪ ॥

ತಾನು ತಾನುವು ಕೂಡಿ
ತಾನು ತನ್ನದು ಮೇಲ
ಮಾತಾಡಲ್ಹೋದರ ಏನಾಗದೋ ತಮ್ಮಾ । ಏನಂತ ......! ॥ ೧ ॥

ನಾ ಏನ ಮಾಡಿದ ತಪ್ಪ
ಎನಗ ಬಿಗಬಿಗದು ಕಟ್ಟಿರೆಪ್ಪ
ಶಿವಪೂಜಿ ಮಾಡದು ಸುಮ್ಮನಿಲ್ಲ
ನಮ್ಮ ಬೇಡರ ಕಣ್ಣಯ್ಯ ತಾನೇ ಬಲ್ಲ । ಏನಂತ ...... ! ॥ ೨ ॥

ಕಮರಕಂಡರೆ ಶಿವಪೂಜೆ ಮಾಡಿದನೋ
ಬೀಸಿ ಹೊಳಗ್ಯಾಗ ಮನಸಿಟ್ಟಿದಾನೋ
ಶಿವಪೂಜಿ ಮಾಡಾದು ಸುಮ್ಮನಿಲ್ಲ
ನಮ್ಮ ಬೇಡರ ಕಣ್ಣಯ್ಯ ತಾನೇ ಬಲ್ಲ । ಏನಂತ ...... ! ॥ ೩ ॥

ನಾ ಏನು ಮಾಡಿದೆನಲ್ಲಾ
ಎನಗ ಅಡಕಿಲ್‌ಗಡಗ್ಯಾಗ ವಯ್ದಿಟ್ಟಿದೆಲ್ಲ
ಮಂದಿ ಉಳ್ಳಾಕ್ ಹೇಳ್ದುರ್ ವ್ರತಾದು ನೆನಪ
ಉಟ್ರಾಗ ಸಿಗಸ್ಕೊಂಡು ನಡದೆಲ್ಲೊ ಮುಪ್ಪ । ಏನಂತ .... !॥ ೪ ॥

ಗುಡಿ ಘಡಗಡಂದಿದರೆ
ಓಡಿ ಹೋಗಾಂವ ನೀನು
ರಾಜ ಸಿಂಹಸನ ಮೇಲೆ ಸಂಗ್ಯೆನೇ ಬಂದ
ಈ ಲಿಂಗದ ಮಾತ್ವ ಸಂಗ್ಯೆನೇ ಬಲ್ಲ । ಏನಂತ .... ! ॥ ೫ ॥

– ಶ್ರೀಮತಿ ಉತ್ತಮಬಾಯಿ ಮಠಪತಿ ಹಾಗೂ
ಶ್ರೀಮತಿ ಭಾಗೀರಥಿ ಸ್ವಾಮಿ, ಮೋಳಕೇರಾ

***

ಗಂಗಿಗೂ ಪವಿತ್ರ ತಿಪುರಾಂತ ಕೆರಿಯದು

ಗಂಗಿಗೂ ಪವಿತ್ರ ತಿಪುರಾಂತ ಕೆರಿಯದು
ಅಂಗದ ಪಾಪ ನಾಶ ತಾ ಮಾಡ್ಯಾದ ॥ ಪ ॥

ತಿಪುರಾಂತ ತಡಿಮ್ಯಾಲ ನುಲಿಯ ಚಂದಯ್ಯ
ಅಪ್ಪ್ಯಾನ ತನ್ನ ಕಾಯಕಕ
ಖಬರಿಲ್ಲ ಅವನಿಗೆ ಯಾತರದು ॥ ೧ ॥

ಶಿವಾ ಶಿವಾ ಎನುತಲಿ ಹಗ್ಗವ ಹೊಸಿತಾನ
ಶಿವರೂಪಿ ಲಿಂಗ ನೀರಾಗ ಬಿದ್ದಾದ
ಖಬರಿಲ್ಲ ಅವನಿಗಿ ಯಾತರದು ॥ ೨ ॥

ಬರುತ್ತಿನಿ ಬರುತ್ತಿನಿ ಅನುತಾದ ಲಿಂಗವು
ಭಕುತಿಯು ಚಂದಯ್ಯಗ ಕಾಯಕದ ಮ್ಯಾಲ
ಖಬರಿಲ್ಲ ಅವನಿಗಿ ಲಿಂಗದು ॥ ೩ ॥

ಶರಣರ ಹತ್ತಿರ ಹೋಗ್ಯಾದ ಲಿಂಗವು
ಕರುಣೆಯಿಂದಲಿ ಕತೆಯು ಹೇಳ್ಯಾದ ಅವರಿಗಿ
ಖಬರಿಲ್ಲ ಚಂದಯ್ಯಗ ಲಿಂಗದು ॥ ೪ ॥

ಶರಣರು ಬಂದಾರ ಪರಿಪರಿಲಿ ಹೇಳ್ಯಾರ
ಒಪ್ಯಾರ ಚಂದಯ್ಯ ಅವರ ಮಾತಿಗಿ
ಲಿಂಗಕ ಬಾಯೆಂದು ಕರೆದಾರ ॥ ೫ ॥

ಲಿಂಗದ ಕೈಯಾಗ ಕಣ್ಣಿ ತಾ ಕೊಟ್ಟಾರ
ಕಲ್ಯಾಣ ಊರಾಗ ಮಾರಲಾಕ ಖಳುವ್ಯಾರ
ಇದು ಎಂತ ವಿಚಿತ್ರ ಜಗದಾಗ ॥ ೬ ॥

– ಶ್ರೀಮತಿ ಕಾಡಾದಿ ಗೌರವ್ವ

***

ಶರಣರೊಳಗ ನೂಲಿ ಚಂದಯ್ಯನ

ಶರಣರೊಳಗ ನೂಲಿಚಂದಯ್ಯನ ।
ದೇವರಿಗಿ ದುಡದೇಳಯ್ಯಾ ॥ ಪ ॥

ಪೂರ್ವ ದಕ್ಷಿಣ ಸುರಪೂರದವನು
ಕಲ್ಯಾಣ ನಗರಕ್ಕ ಹೊಂಟ ಬಂದವನು
ನಿತ್ಯ ನೇಮದಲ್ಲಿ ಕಾಯಕ – ಮಾಡಿ
ಸತ್ಪಥದಲ್ಲಿ ಅಡಿಗಿ ಉಂಬುವನಯ್ಯಾ ॥ ೧ ॥

ಹಗ್ಗ ಕುಡಗಲು ಕೈಯಾಗ ಹಿಡದವನು
ಮದಿ ಹುಲ್ಲ ತರಲಿಕ್ಕೆ ನಡದಾನು
ಹಣಿಗಿ ವಿಭೂತಿಪಟ್ಟಾ ಬಿಗದ ನಡಕಟ್ಟಾ
ತ್ರಿಪುಂಡ ಭಸ್ಮ ಧರಿಸಿದವನಯ್ಯಾ ॥ ೨ ॥

ಕಲ್ಯಾಣ ಊರಲ್ಲಿ ತಿರುಗ್ಯಾಡುವವನು
ಬಸವಣ್ಣ ಶಿವಲಿಂಗ ತಂದು ಕಟ್ಟುವನು
ಲಿಂಗ ನೋಡಿ ಆನಂದ ಆದ ಚೆಂದಯ್ಯಾ
ನಾಲ್ವತ್ತು ವರುಷ ನಿತ್ಯ ದುಡದೇಳಯ್ಯಾ ॥ ೩ ॥

ನೂಲಿ ಹೊಸದ ಚೆಂದಯ್ಯ ಕೈಯಲ್ಲಿ ಹಿಡದಾನ
ಪ್ಯಾಟಿಯಲ್ಲಿ ಅದನ ಒಯ್ದು ಮಾರುವನು
ಮಡಿದಿಂದ ನೆವದ್ಯ ಲಿಂಗಕ ತೋರಿಸೀ
ಪರಪಂಚ ಪಾರಮಾರ್ತಕ ಸಲಿಸಿದನಯ್ಯಾ ॥ ೪ ॥

ಲಿಂಗದ ಮೇಲೆ ಹೂ ಪತ್ರಿ ಏರಿಸುವನು
ಕಡಿಗಿ ತಗದ ಕರಿಒಳಗ ಚೆಲ್ಲುವನು
ಹಗಲರಾತರಿ ಅವನ ದ್ಯಾನದೊಳಗ
ಬ್ಯಾಸರಿಲ್ಲದೆ ಕಾಲ ಕಳಿಯುವನು ॥ ೫ ॥

ಭರಭರಾ ಹುಲ್ಲ ಕೊಯ್ಯಲಾಕ ಹತ್ಯಾನು
ಕೊರಳ ಲಿಂಗಪ್ಪ ಕೆಳಗ ಬಿದ್ದಾನು
ನನ್ನ ಕೈ ಜಾರಿ ಬಿಟ್ಟ ಲಿಂಗಪ್ಪನೆಂದ
ಚಿಂತಿಸುತ ನಿಂತಾನಯ್ಯಾ ॥ ೬ ॥

ತಿರಿಗಿ ಮನಿದಾರಿ ಹಿಡಿಯುವನು
ಬಸವಣ್ಣನ ಮುಂದ ಕರದ ಹೇಳ್ಯಾನು
ನೀನು ಕಟ್ಟಿದ ಲಿಂಗ ನನ್ನ ಬಿಟ್ಟು ತಂತಾನೆ ಬಿತ್ತು
ಇದಕ್ಕೇನು ಅಪ್ಪಣೆ ಕೊಡಂದನಯ್ಯಾ ॥ ೭ ॥

ಅವನ ವನಕ ಕರಕೊಂಡು ಹೋದಾನು
ಅವನ ಬಿಟ್ಟು ಕೆಳಗ ಬಿದ್ದ್ಯಾಕ ನೀನು
ಇಂಥ ಶರಣನ ನಾವು ಎಂದು ನೋಡಿಲ್ಲಾ
ಕರಮುಗಿದು ಕಡಿ ನಿಂತಾನ ಹೇಳಯ್ಯ ॥ ೮ ॥

ಲಿಂಗಪ್ಪ ಇವರಿಗೆ ಕಬರ ಮಾಡ್ಯಾನು
ನಿನ್ನ ಮನಿಯಲ್ಲಿ ಸದಾ ದುಡಿತೆನು
ನೂಲಿ ಚೆಂದಯ್ಯನ ನಿಷ್ಠೆ ಭಕ್ತಿಗೆ
ಶಿವಲಿಂಗ ಇವನಲ್ಲಿ ದುಡಿತೆಳಯ್ಯ ॥ ೯ ॥

ಬಸವ ಪುರಾಣ ತೆಗೆದು ಓದಿ ನೋಡುವನು
ಬಾಳಿಗೇರಿ ಊರಲ್ಲಿ ಕವಿ ಮಾಡುವನು
ನೂಲಿ ಚೆಂದಯ್ಯನ ಭಕ್ತಿಗೆ ಹೆಸರಾದನು
ಕಾಯಕವೆ ಕೈಲಾಸವೆಂದು ಸಾರಿದನಯ್ಯ
ಸಾತಯ್ಯ ಸ್ವಾಮಿ ನಿತ್ಯ ನೆನಸುವನಯ್ಯ ॥ ೧೦ ॥

– ಶ್ರೀ ಸಾತಯ್ಯಸ್ವಾಮಿ ಬಾಳಿಗೇರಿ

***

ನುಲಿಯ ಚೆಂದಯ್ಯ

ದುಂದುಮೆ ಎಂದೆಂದು ಪಾಡಿರಿ ಜನರೆ
ದುಂದುಮೆ ಬಸವಂತನ ಹಬ್ಬ । ದುಂದುಮೆ
ದುಂದುಮೆ ನಿರ್ದುಮೆ ಸಾಲಗನ್ನಿರೆ
ದುಂದುಮೆ ಕೇಳ್ರಿ ದುಂದುಮೆ ॥ ಪ ॥

ಶ್ರೀಗುರುವೆ ನಿತ್ಯ ನಿರ್ಮಳ ನಿಜಾವರಣ ಶಿವ
ಯೋಗಿಜನ ಹೃದಯ ಮಂದಿರನೆ । ಸಕ
ಲಾಗಮ ಮುಕ್ತಿಯ ಕೊಡುವ ಸುಂದರನೆ । ಶಿವ
ಯೋಗ ಧಾರುಣ ಸುಧಾಕರನೆ
ಬೇಗದಿನ್ನುಲಿಯ ಚೆಂದಯ್ಯನಾ ಸ್ತುತಿಗೆ ದಯ
ವಾಗೆಮಗೆ ಕರುಣಸಾಗರನೆ ॥ ೧ ॥

ಕಲ್ಯಾಣ ನಗರದೊಳಗೆಲ್ಲ ಪ್ರಮಥಾವಳಿಯೊಳು
ಉಲ್ಲಾಸದಿಂದ ಮೆರೆದಿಹನು । ಮೆದಿ
ಹುಲ್ಲ ನುಲಿ ಹೊಸೆದು ಮಾರುವನು । ಹಾಗ
ದಲ್ಲಿ ಚರತತಿಗೆ ನೀಡುವನು
ಮಲ್ಲ ಶರಹರನ ಧ್ಯಾನದೊಳು ತದ್ಗತನಾಗಿ
ಅಲ್ಲಮನ ಬರವ ಬಯಸುವನು ॥ ೨ ॥

ಲಿಂಗಾಂಗ ಸಮರಸದೊಳಂಗಮನಭಾವದಲಿ ಸ
ರ್ವಾಂಗಮಯ ಲಿಂಗಿ ತಾನಾಗಿ । ಈತ
ರಂಗ ಭೋಗವನೆಲ್ಲ ನೀಗಿ । ತಾನು
ಮಂಗಳಾತ್ಮಕ ಮಹಿಮನಾಗಿ
ಲಿಂಗಾರ್ಚನೆಯ ಬಾಹ್ಯದಲ್ಲಿರಿಸಿ ಜಂಗಮ
ಹಿಂಗದರ್ಚಿಸುವ ನಿಜವಾಗಿ ॥ ೩ ॥

ಹರನು ತಾನರಿದು ಈ ತೆರನ ಪ್ರಮಥರ ಮುಂದೆ
ಭರದಿಂದೆ ನೋಡಬೇಕೆಂದು । ತಾನು
ಶರಣ ಸೇವೆಯ ಮಾಡಲೆಂದು । ಇರದೆ
ಶರಣ ಮೆದಿ ಕೊಯ್ಯುತಿರಲಂದು
ಉರದ ಲಿಂಗವು ಸಡಿಲಿ ಕೆರಿಯೊಳಗೆ ಬೀಳೆ
ಶರಣ ನಡೆಯಲು ಲಿಂಗ ಬಂದು ॥ ೪ ॥

ಯಾಕೆ ನುಲಿಯ ಚೆಂದಯ್ಯಾಕೆ ದೃಢಭಕ್ತನೆ
ಯಾಕೆನ್ನನಗಲಿ ಹೋಗುವರೆ । ಗುರುವಿ
ನೈಕ್ಯದುಪದೇಶ ಮೀರುವರೆ । ನಿಮಗೆ
ಏಕಾತ್ಮರುಗಳು ಮೆಚ್ಚುವರೆ
ಬೇಕೆಂದು ಜಲದೊಳಗೆ ಬಡಲಿಂಗದ ಬಿಟ್ಟು
ಧಿಕ್ಕರಿಸಿ ನೀನು ಹೋಗುವರೆ ॥ ೫ ॥

ತೆರಹಿಲ್ಲದಿಹ ಘನವು ಶರಧಿಯೊಳು ಮುಳುಗಲ್ಕೆ
ಬರಿದೆ ಬಣ್ಣಿಸಲ್ಯಾತಕಯ್ಯ । ನಾನು
ಇರದೆ ಪೂಜಿಸಲಾರೆನಯ್ಯ । ಇನ್ನು
ವರವ ಬೇಡುವರ ಕೂಡಯ್ಯ
ಚರವರತೃಪ್ತಿಗೆ ತಡೆವುದೆಂದು ಭರದಿಂದೆ
ಹೊರೆ ಹೊತ್ತು ನಡೆದ ಚೆಂದಯ್ಯ ॥ ೬ ॥

ಇಂದುಧರ ಹೆದರಿ ಮೊದಲಂದಗಳನಡಗಿಸುತ
ಮುಂದೆ ಪುರುಷಾಕಾರವಾಗಿ । ಬಿಡದೆ
ಚೆಂದಯ್ಯನ ಸೆರಗ್ಹಿಡದ ಹೋಗಿ । ಆತ
ಮುಂದಕ್ಕೆ ನಡೆದ ಶಿರಬಾಗಿ
ಇಂದು ಪ್ರಭುರಾಯನಾಣೆ ಎನಗಾವ ಗತಿ
ಹೊಂದಿಸಿ ಹೋಗೊ ನಿಜವಾಗಿ ॥ ೭ ॥

ಯಾಕ ಮಡಿವಿಲಿ ಬಿದ್ದಿಯಾಕ ಬೆನ್ನಿಲಿ ಬಂದಿ
ಯಾಕ ಕಾಡಿದಿ ದೇವಯೆಂದ । ಎನ್ನ
ಧಿಕ್ಕರಿಸಿ ಹೋಗುವದು ಚೆಂದ । ಇಬ್ಬ
ರೇಕಾಕಿಯಾಗಿ ತರ್ಕೈಸುವದೆಂದ
ಆ ಕರುಣದಿಂ ಮಡಿವಾಳ ಮಾಚಿತಂದೆ ಬರೆ
ತಾ ಕಂಡು ಹರ ಮುಂದೆ ನಿಂದ ॥ ೮ ॥

ಕಡಲಜನ ಧರಿಸಿದೆನ್ನೊಡನೆ ಸಮರಸವಾದ
ಮಡಿವಾಳ ತಂದೆ ಕೇಳ್ ಮಾತ । ಈತ
ದೃಢಭಕ್ತ ಚೆಂದಯ್ಯನೀತ । ಲಿಂಗ
ಸಡಲಿದರೆ ತಗಿಯ ಪ್ರಖ್ಯಾತ
ಬಿಡದರ್ಚಿಸುವ ಘನಬಿಟ್ಟು ನಡೆವುದು ನೀತೆ
ಒಡನೆ ಕೇಳಿನ್ನು ಬಲ್ಲಾತ ॥ ೯ ॥

ಮೃಡನು ಪೇಳ್ವುದ ಕೇಳಿ ಮುಗುಳನಗೆಯನೆ ನಕ್ಕು
ಮಡಿವಾಳ ಸ್ವಾಮಿ ತಾ ಬಂದ । ಶರಣ

ರಡಿಗೆ ಸಾಷ್ಟಾಂಗ ಶರಣೆಂದ । ಬಿಡದೆ
ದೃಢಭಕ್ತಿಯಲಿ ಬಂದು ನಿಂದ
ಅಡಿಯಿಡಲ್ ಬಾರದಾಕ್ಷಣ ಲಿಂಗವನಗಲಿ
ನಡೆವುದೆಂತೆನಗೆ ತಿಳುಪೆಂದ ॥ ೧೦ ॥

ಲಿಂಗಮಧ್ಯದಿ ಜಗವು ಜಗವೆಲ್ಲ ಲಿಂಗಮಯ
ಹೀಂಗಿರುವುದೆಂತೆನ್ನಿರಯ್ಯ । ಪ್ರಾಣ
ಲಿಂಗವೇಕಾತ್ಮವೆಂದರಿಯ । ಈತ
ಭಂಗಿಸಿದನೊಂದು ಪರಿಯ
ಜಂಗಮಾರ್ಚನೆಗೆ ತಾತ್ಪಣವಾಗಿರೆ ಲಿಂಗ
ವಂಗವಾಗಿರುವದೇನಾಶ್ಚರ್ಯ ॥ ೧೧ ॥

ಶರಣರಿಗೆ ಪ್ರತಿ ಉತ್ತರವೆ ನಾಯಕ ನರಕ
ಇರದೆ ನಾನಂಜುತಿಹೆನಯ್ಯ । ನಿಮ್ಮ
ಕರದೀಶನಲ್ಲವೆ ಜೀಯ । ಆವ
ಪರಿಯಾದಡೇನು ಹಿಡಿಕೈಯ
ಚರರೂಪವಾದಡೊಲ್ಲೆನು ನಾನು ಪರಶಿವನು
ಪರಮ ಗಾವುದಿಯಾದೆನಯ್ಯ ॥ ೧೨ ॥

ಮಿಡಿವಡೆದ ಬೆರಳುಗಳು ಬಿಡಿಬಿಟ್ಟ ತೊಡೆತೋಳು
ನಡು ಡೊಂಕ ಬಂಕುಣಿಯ ಕಾಲು । ಹಲ್ಲು
ಕಡು ದೊಡ್ಡ ಮೀಸೆ ತುಟಿ ಜೋಲು । ತೋಳು
ನಿಡಿದಾದವೊಡಲು ಹಿರಿಕೇಲು
ಉಡುಗೆ ಅರ್ಧವನುಟ್ಟು ನಡುವಿಗರ್ಧವ ಸುತ್ತಿ
ಉಡುಪದರು ಗಾವುದಿಗೆ ಮೇಲು ॥ ೧೩ ॥

ಶರಣಲಿಂಗವನೊಂದು ಮಾಡಿ ಮಾಚಯ್ಯಗಳು
ಭರದಿಂದ ತಾವತ್ತ ಪೋಗೆ । ತಮ್ಮ
ಶರಣ ನುಲಿಹೊಸೆದು ಮಾರಿ ತಾ । ಬೇಗ
ಅರಮನೆಗೆ ನಡೆತಂದರಾಗ
ಹರನು ಸಣ್ಣ ದೊಡ್ಡ ಸಪ್ಪುರಿಯ ಗಂಟಿಕ್ಕಿ
ಭರದಿಂದ ನುಲಿ ಹೊಸೆದನಾಗ ॥ ೧೪ ॥

ಕಲ್ಯಾಣಕೇರಿಯೊಳಗೆಲ್ಲ ಜನರಿಗೆ ತೋರಿ
ಒಲ್ಲೆನೆಂಬುತ ಕೂಡಲು ತಿರಿಗಿ । ನುಲಿಯ
ನಲ್ಲಲ್ಲಿ ತೋರಿ ಮನ ಮರುಗಿ । ಬಸವ

ನಲ್ಲಿಗೈತಂದು ಮನ ಸೊರಗಿ
ನಿಲ್ಲದೆ ನುಲಿ ಕೊಳ್ಳಿರೆಂದು ಮುಂದಿಡಲು
ನಿಲ್ಲು ದಾರೆಂದು ಮನ ಕರಗಿ ॥ ೧೫ ॥

ಏನು ಹೇಳಲಿ ವೃಷಭ ಮೇಲು ದೇಶದೊಳೊಂದು
ಕಾನನದ ಪಳ್ಳಿ ಶಿವಪೂರ । ಗೌಡ
ಏನಿಮಯ್ಯನ ಹುಡುಗ ಪೋರ । ಕರಣಿ
ಕನು ತಲೆಯಿಲ್ಲದವನು ಅವಿಚಾರ
ಏನೆಂಬೆವೂರ ಆಚಿಲೆನ್ನ ಹೆತ್ತವರ
ಮೌನದ್ಹುಲಿ ತಿಂತು ಗಂಭೀರ ॥ ೧೬ ॥

ಅಮ್ಮವ್ವೆ ಎಂಬಾಕಿ ಆಕ್ಷಣದಿ ಕರೆದೊಯ್ದು
ಸಮ್ಮತದಿ ಸಲಹಿದಳು ಎನ್ನ । ಹೇರೂರ
ಬೊಮ್ಮನೆಂದ್ಹೆಸರಿಡಲು ಎನ್ನ । ಹೆರ ಜನರು
ಒಮ್ಮನದಲಾಡಿಸಲು ಎನ್ನ
ತಮ್ಮ ತಮ್ಮನೆಗೆ ಕರೆದೊಯ್ದು ಅನ್ನವನಿಕ್ಕೆ
ದಮ್ಮಾಯ್ತು ಹೊಟ್ಟಿಗುಣರಣ್ಣಾ ॥ ೧೭ ॥

ಮದುವೆಗೋಸ್ಕರವಾಗಿ ಸದ್ಭಕ್ತ ಚಂದಯ್ಯನ
ಸದನಕ್ಕೆ ಆಳಾದೆನಲ್ಲಾ । ಸತ್ತ
ರುದಕ ನೀಡನು ಮುದುಕ ಹೊಲ್ಲ । ಎನಗೆ
ಹೊದಿಯಲಿಕ್ಕೆ ಅರಿವಿ ಮುನ್ನಿಲ್ಲ
ಮೆದಿಯ ಕೊಯ್ಯುತ್ತಿರಲು ಮಡುವಿನೊಳು ನೂಕಿ
ದನು ಮದನಾರಿ ಕೇಳ್ ಭಕ್ತ ಸೊಲ್ಲ ॥ ೧೮ ॥

ಶರಣರಾಳಗಲ್ಕೆ ಪರಿಭವಂಗಳು ತಪ್ಪಿ
ಇರದೆ ನಿಜಮುಕ್ತಿ ನಿನಗಹುದು । ನೀನು
ಶರಣ ಸೇವೆಯನಗಲದಿಹುದು । ನಿತ್ಯ
ಹುರಿಮಾಡಿ ನುಲಿಯ ತಂದಿಹುದು
ಇರದೆ ಹಾಗವನ್ನೈದು ಶರಣರಿಗೆ ಕೊಟ್ಟು
ನಮ್ಮರಮನೆಯೊಳುಂಡು ಸುಖಿಯಹುದು ॥ ೧೯ ॥

ಎಂದು ಸನ್ಮತ ಮಾಡಿ ಬಸವರಾಜೇಂದ್ರ ತಾ
ಮುಂದೆ ಸಾಸಿರ ಹೊನ್ನ ಕೊಟ್ಟು । ನುಲಿಯ
ಚಂದದಿಂದರಮನೆಯೊಳಿಟ್ಟು । ಹರನು
ಬಂದು ಬಲು ಸಂತೋಷಬಟ್ಟು

ಚೆಂದಯ್ಯ ಶಿವಧ್ಯಾನದೊಳಗೆ ಇರುತಿರಲಾಗ
ಮುಂದೆ ಸುರುಹಿದ ಗಂಟು ಬಿಚ್ಚಿಟ್ಟು ॥ ೨೦ ॥

ಹೊನ್ನು ಕಾಣುತ ಶರಣ ಗನ್ನಘಾತಕ ಮಾಡಿ
ಕನ್ನವಿಕ್ಕಿದನೆಂದು ತಿಳಿದು । ಎಲವೊ
ಇವನೆಲ್ಲಿ ತಂದೆ ಮನೆಯಳಿದು । ಬಸವ
ತನ್ನ ಭವನಕೆ ಕೊಟ್ಟನೊಲಿದು
ಇನ್ನು ಸಾಕಯ್ಯ ಇವ ಕೊಟ್ಟು ನುಲಿ ತಾಯೆಂದು
ಮುನ್ನ ಕಳುಹಿದ ಕೋಪ ಬಲಿದು ॥ ೨೧ ॥

ಬಸವ ಕೇಡು ಬಂತು ನುಲಿಯ ತಾರೈಯೆಂದು
ಅಸಮಾಕ್ಷ ಬಂದು ತಾ ನಿಂದ । ಚೆನ್ನ
ಬಸವೇಶ ಪ್ರಮಥಗಣ ವೃಂದ । ಸಹಿತ
ಅಸಮ ಭಕ್ತನ ಮನೆಗೆ ಬಂದ
ಜಸವೆತ್ತ ಜಂಗಮಪ್ರಾಣಿ ಸದ್ಗುಣಶ್ರೇಣಿ
ವಸುಧಿಪಾಲಿಪನೆ ಸಲಹೆಂದ ॥ ೨೨ ॥

ಬಸವೇಶ ಪ್ರಮಥಗಣ ನಿಕರದೊಳು ಅನುಭಾವ
ಅಸಮಗುರು ಚೆಂದಯ್ಯನೆಂದ । ಆತ
ಗುಸುರಲಳವಲ್ಲ ನಾವೆಂದು । ಚೆನ್ನ
ಬಸವೇಶ ಬಲ್ಲ ಇದನೆಂದು
ಕುಶಲನಿಧಿ ಕೇಳಿ ಅವರಂದಮಂ ದೃಷ್ಟಮಂ
ವಸುಧಿಪಾಲಿಪನೆ ಸಲಹೆಂದ ॥ ೨೩ ॥

ನೆರೆದ ಜನಸಂದೋಹಕ್ಕೆರಗಿ ಬಿನ್ನೈಸುತಲಿ ಪರಿ
ಪರಿಯ ಪ್ರಮಥತತಿಗೂಡಿ । ಪ್ರಭುವಿ
ಗಿರದೆ ಪಾದಾರ್ಚನೆಯ ಮಾಡಿ । ಗಣಕೆ
ಪರಮಾನ್ನ ಭಕ್ಷ್ಯವನು ನೀಡಿ
ಚರಣೋದಕದಿ ನುಲಿಯ ಸುವರ್ಣವನು ಮಾಡಿ
ಚರಕೆ ಕೊಡಲು ಜನರು ಕೊಂಡಾಡಿ ॥ ೨೪ ॥

ದಶಭುಜವು ಪಂಚಮುಖ ಮಿಸುವ ಕಿಡಿಗಣ್ಣಿನಿಂದ
ಅಸಮ ಪ್ರಭು ತನ್ನ ನಿಜದೋರಿ । ಸುರಿವ
ಕುಸುಮದ ಮಳೆ ಸೂಳೈಪ ಭೇರಿ । ರವದಿ
ಎಸೆವ ಸಾಂಬವನೊಯ್ದು ಸಾರಿ

ಜಸವೆತ್ತ ಕರ್ಪೂರೇಶನ ಕರುಣದಿಂ ಚೆನ್ನ
ಬಸವ ಸಾರಿದನು ನಲವೇರಿ ॥ ೨೫ ॥

– ಜೀ.ಜೋ.ದುಂದುಮೆ ಪದ

***

ಶಿವಶರಣ ನುಲಿಯ ಚೆಂದಯ್ಯ

ಬುದ್ಧಿವಂತರು ನೆರೆದು ಕುಂತೀರಿ ತಿದ್ದಿ ನಿಮಗ ಹೇಳತೀನಿ
ಶುದ್ಧಭಾವದಿಂದ ನಿತ್ಯಕಾಯಕ ಶರಣರ ।
ಇದ್ದನೊಬ್ಬ ನುಲಿಯ ಚೆಂದಯ್ಯನೆಂಬ ಸುಕುಮಾರ
ಕಂದುಗೊರಳ ಶಂಕರನನ್ನು ಒಲಿಸಿ ಬಹದ್ದೂರ
ಎದ್ದ ಕೂಡಲೆ ಶಿವನನು ಭಜಿಸಿ ಮೆದಿ ಹುಲ್ಲು ಕೊಯ್ದು ಕೂಡಿಸಿ
ನುಲಿಯ ಹೊಸೆದು ಬೆಲೆಗೆ ಮಾರಿ ಧಾನ್ಯ ತರುವರು
ತಂದು ಜಂಗಮಗುಣಿಸಿ ದಾಸೋಹ ನಡೆಸಿ ತಾವು ಉಣ್ಣುವರು ॥ ೧ ॥

ಗುರುಕೊಟ್ಟ ಇಷ್ಟಲಿಂಗ ಶ್ರೇಷ್ಠವೆಂದು ಕೊರಳಿಗೆ ಕಟ್ಟಿ
ಎಷ್ಟೋ ದಿವಸವಾದರೂ ಲಿಂಗ ಅಲ್ಲೇ ಮರತಾರ
ಕಾಯಕವೇ ಕೈಲಾಸವೆಂದು ಬಿಡದೇ ದುಡಿಯುವರು
ಕಟ್ಟಿದ ಇಷ್ಟಲಿಂಗಕ್ಕಿಂತ ಕಾಯಕ ಮಿಗಿಲೆಂದು ಸಾಗಲಾಗಿ
ಕೊರಳಿಗೆ ಸುತ್ತಿದ ವಸಕೊಳೆತು ಹರಿದು ಲಿಂಗ ಧರೆಗೆ ಬಿದ್ದು
ಶ್ರದ್ಧಾನೋಡಿ ಲಿಂಗಯ್ಯೆ ತಾನೇ ಬೆನ್ನು ಹತ್ತಿದರ
ಉದ್ಯೋಗದಲ್ಲಿ ಚೆಂದಯ್ಯನಿಗೆ ಇಲ್ಲ ದರಕಾರ ॥ ೨ ॥

ಕುಳಿತು ಧ್ಯಾನಿಸಿದರೆ ಶಿವ ನಿಂತು ಕೇಳುವನೆಂಬರು
ನಿಂತು ಭಜಿಸುವ ಭಕ್ತನ ಬೆನ್ನ ಹತ್ತುವನೆನ್ನುವರು
ಅದರಂತೆ ಚೆಂದಯ್ಯ ಕೇಳತಾನ ಲಿಂಗದ ಎದುರು
ಯಾರಿಗಿ ಕೇಳಿ ಭೂಮಿಗಿ ಬಿದ್ದೆಂತ ತಪ್ಪ ಹೊರಿಸ್ಯಾರ
ಎಷ್ಟು ಬೆನ್ನ ಬಿದ್ದರು ಕೂಡ ಮುಟ್ಟಲಾರೆ ನಿನ್ನ ನಾನು
ನನ್ನ ಅಪ್ಪಣೆ ಇಲ್ಲದೆ ಭೂಮಿಗಿ ಹ್ಯಾಂಗ ಬಿದ್ದಿ ಎಂದಾನ
ಆಗ ಲಿಂಗ ತಾನೇ ಬೆನ್ನು ಹತ್ತಿ ನಡದೈತಿ ಆತನ ॥ ೩ ॥

ಚಾಲ
ಲಿಂಗ ಜಂಗಮ ಆಗಿ ಚೆಂದಯ್ಯಗ । ಬಿದ್ದು ಬೆನ್ನಿಗಿ
ಮೆಚ್ಚೀನಿ ನಿನ್ನ ಭಕ್ತಿಗಿ । ಕಟ್ಟಿಕೊಳ್ಳು ನಿನ್ನ ಕೊರಳಾಗ ॥ ೧ ॥

ಕೂಡಲಸಂಗಮ ಲಿಂಗನೆ ಪ್ರತ್ಯಕ್ಷ ಆಗಿ ಎದುರಿಗಿ
ಚೆಂದಯ್ಯನ ಅಪ್ಪಿಕೊಂಡು ಮಾಯವಾದ ಅವನ ಭಕ್ತಿಗಿ ॥ ೩ ॥

ಚಾಲ

ಲಿಂಗಯ್ಯ ಚಂದಯ್ಯರ ಕತೆ । ಒಪ್ಪುವದಿಲ್ಲ ಜನತೆ
ವಿಜ್ಞಾನಿಗಳ ಮನಸಿಗಿ । ಲಿಂಗಯ್ಯ ಆಡಿದ ಮಾತಿಗಿ ॥ ೧ ॥

ವಿಶ್ವವ್ಯಾಪಿ ಪರಮಾತ್ಮನ । ಗುರುತ ಗೋಲ ಲಿಂಗಂತ
ಆಕಾಶ ಬಣ್ಣ ನೀಲವಾಗಿ । ಏಕಾಕಾರದ ನಿಧಿಧ್ಯಾಸಾsಗಿ ॥ ೨ ॥

ಜೀವಭಾವದ ವ್ಯವಹಾರವೆಲ್ಲ ಮರೆತ । ವಿಶ್ವತುಂಬ ಬೆರೆತ
ವಿಶ್ವವೆಲ್ಲ ತಾನೇತಾನಾಗಿ । ಮುಕ್ತನಾಗು ತನ್ಮಯನಾಗಿ ॥ ೩ ॥

ಏರ

ಮೂಲತತ್ವ ತಿಳಿಸಿದಂಥ ವಾಲಿ ಶರಣನ ಸಣ್ಣ ಕಥಾ ।
ಹಣ್ಣ ಮಾಡಿ ತಿಳಿಯಬೇಕು ತಾವೇ ಸರ್ವರೂ
ಎಲ್ಲರಿಗೆ ಮಾಡಿ ಹೇಳತಾನ ತನ್ನ ನಮಸ್ಕಾರ
ಗೀಗೀ ಮೇಳ ಕಟ್ಟಿದ ನಾಲ್ವರಿವರು ಸಾಲೋಟಗಿಯವರು ॥ ೩ನೇ ಚೌಕ ॥

– ಕವಿ: ಶರಣಪ್ಪ ವಾಲಿ
ಕೃತಿ– ಶರಣಸ್ಮೃತಿ

***

ಚಾಲ

ಲಿಂಗಯ್ಯನ ಸ್ಥಿತಿಯನು ನೋಡಿ । ಬಸವ ಲಗುಮಾಡಿ ।
ಹಣಕೊಡುವೆ ನಡಿಸ ಮನಿಕಡಿ । ಲಿಂಗಯ್ಯ ಹೊರಟ ಗಡಿಬಿಡಿ ॥ ೧ ॥

ಗಂಟ ಕಟ್ಟಿಕೊಟ್ಟ ಕಾಳುಕಡಿ । ಬಂಗಾರದ ತುಕಡಿ ।
ರೊಕ್ಕ ರೂಪಾಯಿ ಅರಿವೆ ಅಂಚಡಿ । ಹೊತ್ತುನಡೆದ ಚೆಂದಯ್ಯನ ಕಡಿ ॥ ೨ ॥

ಚೆಂದಯ್ಯ ಲಿಂಗಯ್ಯನ ನೋಡಿ । ಕಣ್ಣಲಿ ಕಿಡಿಕಿಡಿ
ಸಿಟ್ಟಿನಿಂದ ಬಂದ ಲಗುಮಾಡಿ । ತಂದೀದಿ ಇದನ ತುಡುಗು ಮಾಡಿ ॥ ೩ ॥

ಏರ

ಲಿಂಗಯ್ಯ ಹೇಳತಾನ ಥರಥರ ನಡುಗಿ ಬಸವಣ್ಣ ಕೊಟ್ಟಾನ ತಾಬೇಕಾಗಿ
ಅಡಗಿಮಾಡಿ ನಡಿಸಬೇಕು ದಾಸೋಹ ಅಂದಾರ
ಅದಕ ಚೆಂದಯ್ಯ ಅಂತಾನ ಬಸವಗ ರೊಕ್ಕದ ಸೊಕ್ಕ ಬಂದರ
ಅವನ ಮನಿಮುಂದ ನೀನು ಎಲ್ಲಿಯಾರೆ ಒಯ್ದು ಸುರುವು ಅಂದಾರ
॥ ೨ನೇ ಚೌಕ ॥
ದುಡಿಸಲಾರದೆ ತಂದ ಹಣ ಸಾಲಕ್ಕಿಂತ ಕೀಳು ಅಂತ
ತಡಾಮಾಡದೆ ಹೋಗಿ ಹೇಳು ಅ ಬಸವಗ ।
ದುಡಿದ ಹಗ್ಗದ ಬೆಲೆಯೇ ಸಾರ್ಥಕ ಸತ್ಯವಂತರಿಗೆ
ರೊಕ್ಕದ ಮದ ಏರಿದರೆ ನಡೆಯದು ನಮಗ
ಇಷ್ಟು ಅಂದಕೂಡಲೆ ಲಿಂಗಯ್ಯ ಗಾಬರ್‍ಯಾಗಿ ಓಡತಾನ ।
ಹೋಗಿ ನಡದ ಸುದ್ದಿ ತಿಳಿಸ್ಯಾನ ಅಣ್ಣ ಬಸವಗ
ಬಸವಣ್ಣ ತಾನೇ ಅಂದ ಸತ್ಯಶರಣ ಚೆಂದಯ್ಯಗ ॥ ೧ ॥

ಬಸವಣ್ಣ ಸಹಿತ ಶರಣರಗೂಡಿ ಚೆಂದಯ್ಯನ ನೇಮವ ನೋಡಿ
ಅಂಗಕ ಲಿಂಗ ಸಂಗಮಾಡಲು ಕೇಳ್ಯಾರ ಚೆಂದಯ್ಯಗ
ಆಗ ಅಂಗಸತಿ ಲಿಂಗಪತಿ ಬೇಕು ಮೊದಲಿಗಿ
ಅಂಗ ತಾನೇ ಲಿಂಗವಾದಮ್ಯಾಲ ಮತ್ತ್ಯಾಕ ಲಿಂಗ ॥
ಕಣ್ಣೀಗಿ ಕಾಣದ ಗುರಿತಾಗಲು ನಡುವೆ ಒಂದು ಗುರ್ತುಬೇಕ ।
ಅದಕ್ಕಾಗಿ ಲಿಂಗ ಬೇಕು ನಮ್ಮ ಕೊರಳಾಗ
ಲಿಂಗದ ಮ್ಯಾಲ ಮನಸಿಟ್ಟು ಹೊರಗಿನ ವ್ಯಾಪಾರ ಮರಿಲಾಕ ॥ ೨ ॥
ಹೃದಯದಲಿ ಇದ್ದ ಆತ್ಮಾ ಅರಳಿದಾಗ ಅಂತರಾತ್ಮಾ
ಕೂಡಿದಾಗ ಪರಮಾತ್ಮ ಅಂತ ಆಧ್ಯಾತ್ಮದಾಗ ।
ಅರಳುವ ಅಂತರಾತ್ಮನೆ ಇಷ್ಟಲಿಂಗ ದೇಹದಮ್ಯಾಗ
ಪರಮಾತ್ಮನನು ಕೂಡಿಸುವವನೇ ಸಂಗಮಲಿಂಗ
ಇಷ್ಟು ತತ್ವ ಬಸವಣ್ಣನವರು ಚೆಂದಯ್ಯನಿಂದ ಕೇಳುವಾಗ

೧೨. ನೇಗಿಯ ಅಮುಗಯ್ಯ

ಸೂಚಕ ಪದ್ಯ : ನೇಗಿಯದೆ ಕಾಯಕವ ಚಾಗಿ ಅಮುಗನು ಮಾಡಿ
ಯೋಗ ಹೊಂದಿದನು ಹೂಳಚೆಯ । ಜನ ಭಜಿಸಿ
ತೂಗಿದಾಸೋಹ ತೇರೆಳೆದು ॥ ೧ ॥

ಅಮುಗಯ್ಯ ನಿನ್ನಾಡು ನಮಗಾಯ್ತು ಶಿವಮಂತ್ರ
ಯಮಗಾಯ್ತು ಕುತ್ತು ಶಿವಜೀವ । ಎತ್ತುದಕೆ
ಅಮರಾಯ್ತು ಜನಕೆ ಹೊಸಮತವು ॥ ೨ ॥

ಉಂಕಿ ಹೂಡುವ ಮುಂದ ಕಂಕಿತೂರುವ ಮುಂದ
ಸುಂಕ ರಾಸಿಯೊಳು ನಿನ್ನಾಡು । ಅಮುಗಯ್ಯ
ಸಂಕು ಯಾತರದು ಶಿವಮತಕೆ ॥ ೩ ॥

ದಾಸಿಮಯ್ಯನ ನೆನಸಿ ಕೂಸು ನೇಯುವದಯ್ಯ
ಹಾಸುಹೊಕ್ಕಾಗಿ ನಿನ್ನಾಡು । ಜಗದೊಳಗೆ
ಸೋಸಿ ನಡೆದವಗೆ ಶಿವಬೆಳಕು ॥ ೪ ॥

ಅಗಿದು ನೋಡುವರಾರು ನಗೆಯಲ್ಲ ನಿನ್ನಾಡು
ನಗನೋಡು ಬಾಳ ಚಕ್ಕಡಿಗೆ । ಶಿವಮತಕೆ
ಬಿಗಿನೋಡು ಸುತ್ತ ಹಬ್ಬುದಕೆ ॥ ೫ ॥

ನೇಗಿ ಕಾಯಕವಯ್ಯ ತಾಗು ಬಾಗಿನಜೇಡು
ಬೀಗದಾ ಕೈಯು ಕಾಯಕಕೆ । ಜಗದೊಳಗೆ
ಹಾಗುಳ್ಳ ಕಸಬು ಜನಪದಕೆ ॥ ೬ ॥

ಕುರುಸೆಟ್ಟಿ ಲಿಂಗಿಗಳು ಹರಮತದ ಸೇವಕರು
ನೆರುವಾಗಿ ನೇಗಿ ಕಾಯಕವು । ಸೊನ್ನಲಗಿ
ಶರಣ ಅಮುಗಯ್ಯ ಹುಟ್ಟಿದ್ದು ॥ ೭ ॥

ದಾನವ್ವ ಶಿವಶರಣಿ ನಾಣಿ ಅಮುಗನ ಮಡದಿ
ಏನು ಹೇಳುವದು ಶಿವಭಕ್ತಿ । ಮನೆಯೊಳಗೆ
ತಾಣದೀವಿಗೆಯು ಕಾಯಕಕೆ ॥ ೮ ॥

ಇಷ್ಟಲಿಂಗದ ಮೇಲೆ ಇಟ್ಟ ಭಕ್ತಿಯು ಮಿಗಿಲು
ಕಟ್ಟಲಿಂಗಿಗಳ ಮನೆದೇವ । ಹೂಳಜೆಯ
ಶಿಷ್ಟ ಸೋಮೇಶ ದಯಮಾಡಿ ॥ ೯ ॥

ಸಿದ್ಧಸೋಮನ ನೆನಿಸಿ ಎದ್ದುಕಾಯಕ ನಡಿಸಿ
ಬದ್ಧ ಕಂಕಣನು ಅಮುಗಯ್ಯ । ಶಿವಮತಕೆ
ಮದ್ದು ಭವಿಮತಕೆ ಜಗದೊಳಗೆ ॥ ೧೦ ॥

ಜೋಡೆಳೆಯ ಹಣಿಗೆಯೊಳು ತೋಡಿ ಗಿಂಟದ ಮಡಕಿ
ಹೂಡಿದನು ಶರಣ ಅಮುಗಯ್ಯ । ಕಾಯಕವು
ನೋಡಿ ಲೋಕೆಲ್ಲ ಬೆರಗಾಗಿ ॥ ೧೧ ॥

ಜೋಡು ಹಣಿಗೆಯು ಕಾಣೊ ಜೋಡುಕಣ್ಣಿನ ನೋಟ
ಜೋಡಾಗಿ ಮಡದಿ ಕಾಯಕಕೆ । ಕೈಗೂಡೆ
ಮೂಡಿ ಶಿವಭಕ್ತಿ ಹೂಬಿಟ್ಟು ॥ ೧೨ ॥

ಟಾಣಕೋಲುಗಳೆರಡು ಕಾಣಿಮಗ್ಗದೊಳೇನೊ
ತಾಣಹೊಂದಿಹುದು ಜಗದೊಳಗೆ । ಹೊಸಮತಕೆ
ಕಾಣಿದಾಸೋಹ ಕಾಯಕವು ॥ ೧೩ ॥

ಕಾಲಪವಡಿಗಳೊತ್ತಿ ಕೋಲಕಂಬಿಗಳೆಳೆದು
ನೂಲೆಳೆದು ಲಾಳಿ ಶಿವಸೂತ್ರ । ಪೋಣಿಸಲು
ಸೀಲಪಾವಡದ ಲಿಂಗುಟ್ಟ ॥ ೧೪ ॥

ಪರಹೆಣ್ಣು ಕಣ್ಣೊಳಗೆ ಪರಹೊನ್ನು ಮನದೊಳಗೆ
ಪರಮಣ್ಣು ಕೈಗೆ ಮುಟ್ಟಿದರೆ । ಸೀಲೆಂದು
ಶರಣ ಅಮುಗಯ್ಯ ಸಾರಿದನು ॥ ೧೫ ॥

ಒಂದಣಿಯು ಹಾರಿದರೆ ಮುಂದಣಿಗಳ್ಹಾರುವವು
ಹೊಂದುವದು ಕಷ್ಟ ಶಿವಪದವ । ಹೊಸಮತವು
ಹೊಂದಿದಣಿಯುಳ್ಳ ಪಾವಡವು ॥ ೧೬ ॥

ಮಗ್ಗದೊಳಗಿನ ಹಲಗಿ ಸಗ್ಗದೊಳಗಿನ ನಂದಿ
ಜಗ್ಗಿನೇದಿಟ್ಟ ಹೊಸಮತವು । ಜಗದೊಳಗೆ
ಸುಗ್ಗಿಯಾ ಜೇನು ಪರಮತಕೆ ॥ ೧೭ ॥

ಅಣಿಸೆಳ್ಳು ಬೆಜಗೋಲ ಮಣಿಮಣಿಯೊಳೆಳೆಯೆಳೆದು
ಗಿಣಿಲಿಂಗಪೇಟೆ ಜೋಲ್ಬಿಟ್ಟು । ಅಮುಗಯ್ಯ
ಎಣಿಯೆಣಿಸಿ ನೇದ ಶಿವನುಡಿಯ ॥ ೧೮ ॥

ಶಿವ ಮೆಚ್ಚಿ ಅಮುಗನಿಗೆ ಹವಣಿಸಿದ ನೆರವಿಡಲು
ಭವದೊಳಗೆ ಬಂದು ಆಳಾಗಿ । ಹಗಲಿರುಳು
ಜವುಳಿ ನೇಯುದಕೆ ಹೆಸರಾದ ॥ ೧೯ ॥

ಹಾಸ್ಹೋದು ಮುಟೆಸುತ್ತಿ ಈಸ ವುಂಕಿಯಕೆಚ್ಚಿ
ಬೇಸರಿಲ್ಲದಲೆ ಶಿವಪೂಜೆ । ಅಮುಗಯ್ಯ
ದಾಸಾಗಿ ಸೇವೆ ಸಲ್ಲಿಸುತ ॥ ೨೦ ॥

ನೇಗಿಯೊಳು ಶರಣರಿಗೆ ಯೋಗವಸ್ತರ ನೇದು
ಹೋಗಿ ಸೊನ್ನಲಿಗೆ ಪೇಟೆಯೊಳು । ದಿನ ಮಾರಿ
ಸಾಗಿಸುತಲಿದ್ದ ದಾಸೋಹ ॥ ೨೧ ॥

ಸಿದ್ದರಾಮನು ಕೇಳೊ ಗೆದ್ದು ಸಿದ್ದಿಗಳಂದು
ಹುದ್ದೆಹೊಂದಿದ್ದ ಸೊನ್ನಲಿಗೆ । ಪುರದೊಳಗೆ
ಬಿದ್ದು ಪರಮತವು ಕೈಮುಗಿದು ॥ ೨೨ ॥

ಕಪಿಲ ಮಲ್ಲಯ್ಯನಿಗೆ ತಪವಿದ್ದು ಸಿದರಾಮ
ಜಪಿಸೆ ಹಗಲಿರುಳು ಮಲ್ಲಯ್ಯ । ಮೆಚ್ಚಿರಲು
ಅಪಜಯವ ಗೆದ್ದು ಜಗ ಗೆದ್ದು ॥ ೨೩ ॥

ಗುರುಮಲ್ಲಿಕಾರ್ಜುನಗೆ ವರಸಿದ್ಧರಾಮಯ್ಯ
ಮೆರೆಯಿಸುವ ಹಬ್ಬ ಸಾರಿದನು । ಸೊನ್ನಲಿಗೆ
ಪುರವೆದ್ದು ಬಂತು ಸೌರಿಸಲು ॥ ೨೪ ॥

ಕುಟ್ಟುವದು ಬೀಸುವದು ಬುಟ್ಟಿಯೊಳು ತುಂಬುವದು
ಒಟ್ಟು ಜನಗೂಡಿ ಸೌರಣೆಯ । ನಡೆಸಿರಲು
ಬಟ್ಟಬಯಲಾತು ಹಂದರವು ॥ ೨೫ ॥

ಇಷ್ಟಲಿಂಗದ ಭಕ್ತ ಬಿಟ್ಟುಳಿದ ಮನೆಯೊಳಗೆ
ಕಟ್ಟಿ ಶಿವಶರಣ ಅಮುಗಯ್ಯ । ಸೇವಕರು
ಕೊಟ್ಟಣಕೆ ಬಿಟ್ಟೆ ಬಾಯೆಂದು ॥ ೨೬ ॥

ನಿಮ್ಮ ದೊರೆಗಳ ಬಿಟ್ಟೆ ಅಮ್ಮೆಂದು ಮೂಡುವದೆ
ಹುಮ್ಮ ನಿಮ್ಮರಸ ಲಿಂಗಿಲ್ಲ । ದಿರುತಿಹನು
ದಿಮ್ಮಿದನು ತಾನು ಜಗಕೆಂದು ॥ ೨೭ ॥

ಲಿಂಗಿಗಳು ನಾವಿದ್ದು ಸಂಗ ಭವಿಗಳದೇಕೆ
ಲಿಂಗನಿಗೆ ಸೇವೆ ಜಗದೊಳಗೆ । ಶರಣರದು
ಅಂಗ ಸವಿತನಕ ಕಾಯಕವು ॥ ೨೮ ॥

ಸೇವಕರು ತಿಳಿಸಿದರು ಯಾವದನು ಬಚ್ಚಿಡದೆ
ಕಾವಾಗಿ ರಾಮ ಅಮುಗನಿಗೆ । ಆಣತಿಯ
ಜಾವದೊಳು ಊರ ಬಿಡಲೆಂದು ॥ ೨೯ ॥

ಹುಟ್ಟಲಿಂಗವು ಬೇರೆ, ಕೊಟ್ಟ ಲಿಂಗವು ಬೇರೆ
ಇಷ್ಟಲಿಂಗೆಂದು ಬೇರುಂಟೆ । ಮೈತುಂಬ
ನಟ್ಟಿಹವು ಲಿಂಗ ತನಗೆಂದ ॥ ೩೦ ॥

ಹುಟ್ಟಲಿಂಗಿಗೆ ಏಕೆ ಕಟ್ಟಿದಾ ಲಿಂಗೆಂದು
ಬಟ್ಟಿಟ್ಟು ಅಮುಗ ಭವಿಯೆಂದು । ಕರೆದೆನಗೆ
ಬಿಟ್ಟು ಹೋಗಲವ ನಮ್ಮೂರ ॥ ೩೧ ॥

ತಡಬೇಡ ಹೇಳೆಂದ ಬಿಡಬೇಕು ನಮ್ಮೂರ
ಎಡಬಲಕೆ ಸಹಿತ ತಾಣಿಲ್ಲ । ಹದ್ದಿನೊಳು
ಹಿಡಿತ ತಪ್ಪಿದರೆ ಕೆಡಕೆಂದ ॥ ೩೨ ॥

ಹೇಳಿದರು ಸೇವಕರು ಕೇಳಿದನು ಅಮುಗಯ್ಯ
ತಾಳಿ ಶಿವಭಕ್ತಿ ಮನದೊಳಗೆ । ಬತ ತೊಟ್ಟ
ನಾಳಿನುದಯಕ್ಕೆ ಊರ್ಬಿಡಲು ॥ ೩೩ ॥

ವರದಾನಿ ಹೆಂಡತಿಯೆ ತರವಲ್ಲ ಈ ಊರು
ಮರುದಿನವೆ ನಡೆದು ಕಲ್ಯಾಣ । ಸೇರೋಣ
ತರವಲ್ಲ ಭವಿಯ ಗಾಳೆಂದು ॥ ೩೪ ॥

ಹೊತ್ತು ಮುಣಗುವ ಮುನ್ನ ಕಿತ್ತು ಕಟ್ಟಿದ ಕಂಬಿ
ಎತ್ತಿಡಿದ ಹೊರೆಯು ಮೂರಾಗೆ । ಗಟ್ಟೆಂದ
ಕತ್ತಲಕೆ ಊರ ಬಿಡುವುದಕೆ ॥ ೩೫ ॥

ನಡು ರಾತ್ರಿ ಮಿರಿರಲು ಮಡದಿ ದಾನಿಯ ಕರೆದ
ತಡವೇಕೆ ಗಂಟು ಹೊರಸಿದನು । ತಾನೊಂದು
ಹಿಡಿದೆತ್ತಿ ಹೊತ್ತು ಮನೆಬಿಟ್ಟ ॥ ೩೬ ॥

ಮೂರನೆಯ ಹೊರೆಯನ್ನು ಯಾರು ಹೊತ್ತರಬೇಕು
ನಾರಿ ದಾನವ್ವ ಕೇಳಿದಳು । ಅಮುಗಯ್ಯ
ಬೇರಿಟ್ಟ ಹೊರೆಯ ಚಿಂತ್ಯಾಕೆ ॥ ೩೭ ॥

ನಿನ್ನ ಹೊರೆ ನೀ ಹೊತ್ತಿ ನನ್ನ ಹೊರೆ ನಾ ಹೊತ್ತೆ
ಇನ್ನುಳಿದ ಹೊರೆಯು ಶಿವಗೆಡೆಯು । ಶಿವಭಕ್ತಿ
ಕಣ್ಣು ಹೊಸ ಮತದ ಕಾಯಕಕೆ ॥ ೩೮ ॥

ಮಿಕ್ಕುಳಿದುದೀ ಹೊರೆಯ ಮುಕ್ಕಣ್ಣ ಹೊತ್ತರುವ
ತೆಕ್ಕೆಯೆಳು ಯೆತ್ತಿ ಆಡಿಸುವ । ಶಿವಭಕ್ತಿ
ತುಕ್ಕು ಹಿಡಿಯುವದೆ ಜಗದೊಳಗೆ ॥ ೩೯ ॥

ಹರಭಜನೆ ಮಾಡುತಲಿ ಹೊರಹೊಂಟ ಊರ್ಬಿಟ್ಟು
ಶರಣ ಅಮುಗನಿಗೆ ಪಂಜಾಗಿ । ಶಿವಬೆಳಕು
ಇರುಳೆಲ್ಲ ಹಾದಿ ತೋರಿಸಿತು ॥ ೪೦ ॥

ಕಾಲೆತ್ತಿ ನಡೆಯುದಕೆ ತೇಲಿ ಹೋಯಿತು ಇರುಳು
ಹಾಲಗಡಲುಕ್ಕಿ ದಿನವೆದ್ದು । ಮೂಡಲಕೆ
ಮೇಲೆಂದು ಶರಣ ಜಗ ಬೆಳಗಿ ॥ ೪೧ ॥

ಗಂಡ–ಹೆಂಡರು ಕೂಡಿ ಕಂಡು ಶಿವಪುರ ಸೇರಿ
ಕಂಡು ಮೂರನೆಯ ಹೊರೆಯನ್ನು । ಶಿವಶರಣ
ಕೆಂಡಗಣ್ಣನದೆ ಆಟೆಂದು ॥ ೪೨ ॥

ನಮ್ಮೊಡನೆ ಕಾಣದಲೆ ಹುಮ್ಮಸದಿ ನಮ್ಮಯ್ಯ
ಒಮ್ಮೆಲೀ ಊರ ಹದ್ದಿನೊಳು । ಹೊತ್ತಿಟ್ಟ
ನಮ್ಮನೆಯ ಗಂಟು ನೋಡೆನುತ ॥ ೪೩ ॥

ಮುಕ್ಕಣ್ಣ ನೆನೆದಿಹನು ಇಕ್ಕಿದೀ ಗಂಟಿನೊಳು
ಇಕ್ಕರವೆ ಸಾರಿ ಹೇಳುವುದು । ಎಲೆ ಮಡದಿ
ಹಕ್ಕು ನಮಗಿಲ್ಲ ತಂಗುದಕೆ ॥ ೪೪ ॥

ಶಿವಪುರಕೆ ಬೀಡಾದ ಶಿವಶರಣ ಅಮುಗಯ್ಯ
ಶಿವನೆಂದು ಮಾಡಿ ಹೊರೆಯಿಳಿಸಿ । ಕಾಯಕವು
ದವನಾಯ್ತು ಶಿವಗೆ ದಾಸೋಹ ॥ ೪೫ ॥

ಇತ್ತ ಸಿದ್ಧರಾಮೇಶ ಹೊತ್ತು ಹೊರಡುವ ಮುನ್ನ
ಸುತ್ತು ಜನಗೂಡಿ ಅಭಿಷೇಕ । ಮೆರೆಯುತಿರೆ
ನೆತ್ತಿ ನೋವೆನಗೆ ಲಿಂಗೆನಲು ॥ ೪೬ ॥

ಮುಟ್ಟ ಬೇಡಲೆ ರಾಮ ಬಿಟ್ಟ ಹೊತ್ತಿದೆ ನೆತ್ತಿ
ಜುಟ್ಟ ಸಹಿತೆನಗೆ ನೋಯುತಿದೆ । ನಿನ ಪಾಪ
ಸಿಟ್ಟಾಗಬೇಡ ದಿಟಮಾತು ॥ ೪೭ ॥

ಲಿಂಗ ನುಡಿಯುದ ಕೇಳಿ ದಂಗು ಹಿಡಿಯಿತು ಜನಕೆ
ನುಂಗಿ ತನ್ನುಡಿಯ ಹೌಹಾರಿ । ಸಿದರಾಮ
ಲಿಂಗ ಹೇಳೆನಗ ಕಾರಣವ ॥ ೪೮ ॥

ಪಾಪಿ ಶರಣನ ದೂಡಿ ಕೋಪದಿಂದಲಿ ಉಬ್ಬಿ
ತಾಪ ನನಗಿಟ್ಟಿ ಬೆಳತನಕ । ಹೊತ್ತೊಯ್ದೆ
ದಾಪ್ಷತ್ತಿ ಹೊರೆಯ ಶಿವಪುರಕೆ ॥ ೪೯ ॥

ನೆತ್ತಿಮೇಲಿನ ಹೊರೆಯ ಎತ್ತಿಳಿವಿ ಇದೆ ಬಂದೆ
ಹೊತ್ತ ಹೊರೆಯಾಯ್ತು ಬೆಟ್ಟೆನಗೆ । ಕುಸಿಬಿದ್ದು
ಕತ್ತು ಹಿಚುಕಿಡಲು ನರ ತೊಡಕಿ ॥ ೫೦ ॥

ನೀನು ಕಾರಣ ಕೇಳೊ ಮಾನಿಸಿದ ರಾಮೇಶ
ನಾನೆಂಬ ಹಟವ ಬಿಡು ಮುಂದೆ । ಶರಣರಿಗೆ
ಹೀನೆಂಬ ನುಡಿಯು ಸಲ್ಲುವದೆ ॥ ೫೧ ॥

ಗಂಗೆ ಚಂದ್ರರ ಹೊತ್ತು ಹಂಗಿಲ್ಲದಾಳಾಗಿ
ಜಂಗು ಕಟಿಗೊಂಡು ಮಣ್ಹೊತ್ತಿ । ಮನೆಯೊಳಗೆ
ಲಿಂಗ ನಿನಗೆಲ್ಲಿ ದಣುವಿತ್ತು ॥ ೫೨ ॥

ನೋಸಿ ಅಮುಗನ ಮನವ ಘಾಸಿಮಾಡಿದ ಹೊರೆಯು
ಸೀಸದಾ ಬೆಟ್ಟ ನಿನಗಾಯ್ತು । ಇದು ಸತ್ಯ
ದೋಷಿ ನಾನಿದಕೆ ಕೈಮುಗಿವೆ ॥ ೫೩ ॥

ತಪ್ಪು ಮಾಡಿದೆ ದೇವ ಒಪ್ಪಿದೆನು ನಿಮ್ಮುಂದೆ
ಅಪ್ಪಿ ಕ್ಷಮಿಸೆನ್ನ ಅಮುಗನಿಗೆ । ಕರೆತರುವೆ
ಉಪ್ಪರಿಗಿ ಶರಣ ಶಿವಮತಕೆ ॥ ೫೪ ॥

ಹುಡುಕುತಲಿ ಸಿದರಾಮ ನಡೆತಂದು ಶಿವಪುರಕೆ
ಕಡೆಗಲ್ಲಿ ಕಂಡು ಅಮುಗನಿಗೆ । ಕೈಮುಗಿದು
ಒಡೆಯ ನಾನೆಂಬ ಹಟ ಮರೆತೆ ॥ ೫೫ ॥

ನನ್ನಿಂದ ತಪ್ಪಾಯ್ತು ಸನ್ನುತದ ಶಿವಶರಣ
ಹೊನ್ನಗಡಲುಕ್ಕಿ ಇಳಿಯದುದೆ । ಜಗದೊಳಗೆ
ತನ್ನೆದೆಯ ಉಬ್ಬು ಕುಗ್ಗದುದೆ ॥ ೫೬ ॥

ಅಡಿಗಳಿಗೆ ಎರಗುತಲಿ ನಡಿ ಶರಣ ನಮ್ಮೂರಕೆ
ಕಡೆಗಾಣಬೇಡ ನಿನ್ನವನು । ಸಿದರಾಮ
ತಡೆದಿಹುದು ಹಬ್ಬ ನಿನ್ನಿಂದ ॥ ೫೭ ॥

ಲಿಂಗ ನಿನಗಿಲ್ಲೆಂದು ಕಂಗೊಳಿಸುದೆನಗಿನ್ನು
ನುಂಗುವಾ ತುತ್ತ ಲಿಂಗನಿಗೆ । ಎಡೆಮಾಡಿ
ಲಿಂಗಧಾರ್‍ಯಾಗಿ ಹೊಸಮತಕೆ ॥ ೫೮ ॥

ಹರ ಮತವೆ ಹೇಳುವದು ನೆರೆ ಬೇಡ ಭವಿಗಳದು
ಕೊರಗುವದು ಮನವು ಕಡೆತನಕ । ಹೊಸಮತವು
ತೊರೆಬಿಟ್ಟ ಹಸುವು ಶರಣರಿಗೆ ॥ ೫೯ ॥

ಲಿಂಗಧಾರಿಯು ಆಗಿ ತಂಗೆರಡುದಿನವಿಲ್ಲಿ
ಹಿಂಗಿಸಲೆ ಬತವ ನನ್ನೊಡನೆ । ಸಿದರಾಮ
ಮುಂಗಡವೆ ಬರಲು ಬೇಡೆನಗೆ ॥ ೬೦ ॥

ತಿರುಗಿ ಸೊನ್ನಲಪುರಕೆ ಹರಭಜನೆ ಮಾಡುತಲಿ
ವರಿಸೆಂದ ಕಪಿಲ ಮಲ್ಲಯ್ಯ । ಸಿದರಾಮ
ವರಲಿಂಗವಿತ್ತು ಉದ್ಧರಿಸು ॥ ೬೧ ॥

ಸೊನ್ನಲಿಗೆ ಪುರಸೇರಿ ತನ್ನಮನೆದೇವನಿಗೆ
ಚಿನ್ನಗಿರಿ ಕಪಿಲ ಮಲ್ಲನಿಗೆ । ಹೇಳಿದನು
ಇನ್ನೆನಗೆ ಲಿಂಗಧರಿಸೆಂದು ॥ ೧೨ ॥

ಜಂಗಮನ ಅಂಗದೊಳು ಲಿಂಗ. ಕಟ್ಟುವನಿಂದು
ಲಿಂಗಾಭಿಷೇಕ ದಂಡೇಶ । ಮಾಡುವನು
ಲಿಂಗಧಾರ್‍ಯಾಗು ಸಿದರಾಮ ॥ ೧೩ ॥

ಮಲ್ಲಿಕಾರ್ಜುನ ಧರಿಸಿ ಹೋಲ್ವ ಜಂಗಮರೂಪ
ನಿಲ್ಲದಲೆ ಲಿಂಗ ರಾಮನಿಗೆ । ಕಟ್ಟಿದನು
ಚೆಲ್ಲಿದನು ಬೆಳಕು ಚಿಲ್ಲಿಂಗ ॥ ೧೪ ॥

ಬೆಳಕಿನೊಳು ಸಿದರಾಮ ತಿಳಿಬಿಟ್ಟ ತನ್ಮನವ
ಹೊಳೆದನಮುಗಯ್ಯ ಕಣ್ಮುಂದೆ । ಶರಣರಿಗೆ
ಹಳಸುವದೆ ಕೇಳೊ ಶಿವಭಕ್ತಿ ॥ ೧೫ ॥

ಕರೆತರಲು ಅಮುಗನಿಗೆ ಮರುದಿನವೆ ಶಿವಪುರಕೆ
ಶರಣೆನುತ ಮತ್ತೆ ಕೈಮುಗಿದು । ದಯಮಾಡಿ
ಬರಬೇಕು ಹಬ್ಬ ಮುಗಿಸುದಕೆ ॥ ೧೬ ॥

ಸೋದರರದಿ ರಾಮನಿಗೆ ಕೋರಿದನು ಶಿವಭಕ್ತಿ
ತೋರಿದನು ಕರುಣೆ ಅಮುಗಯ್ಯ । ಸತ್ಕರಿಸಿ
ಮೂರು ಲಿಂಗಗಳ ಅರಿಯುದಕೆ ॥ ೧೭ ॥

ಕಲ್ಯಾಣಪುರ ಸೇರಿ ಎಲ್ಲ ಶರಣರ ಕಾಣು
ನಲ್ಲ ಶರಣರಿಗೆ ಲಿಂಗಯ್ಯ । ಜಗದೊಳಗೆ
ಸೊಲ್ಲು ಹಗಲಿರುಳು ಶಿವಮತಕೆ ॥ ೧೮ ॥

ಬರಲಾರೆ ಸಿದರಾಮ ತಿರುಗಿ ಸೊನ್ನಲಪುರಕೆ
ಶರಣರೂಳಿಗವು ಕರೆಯುವದು । ಮಂಟಪಕೆ
ನೆರುವಾಗಿ ಸೇವೆ ಸಲ್ಲಿಸುವೆ ॥ ೧೯ ॥

ತಿಳಿಹೇಳಿ ಅಮುಗಯ್ಯ ಕಳಿಸಿದನು ರಾಮನಿಗೆ
ಹೊಳಲುಗಳ ಕಟ್ಟಿ ದೊರೆಯಾಗು । ಸೊನ್ನಲಿಗೆ
ಕಳಸಾಗಿ ಬೆಳಗಿ ಹೊಸಮತಕೆ ॥ ೨೦ ॥

ಸಿದ್ಧರಾಮನ ಕಳಿಸಿ ಎದ್ದ ಶಿವ ಪರಬಿಟ್ಟು
ಹೊದ್ದು ಶಿವನುಡಿಯ ಮೈತುಂಬ । ಅಮುಗಯ್ಯ
ಮೆದ್ದುದಕೆ ಸೇರಿ ಕಲ್ಯಾಣ ॥ ೭೧ ॥

ನೇಗಿಕಾಯಕ ಹೂಡಿ ತಾಗುಬಾಗಿನ ಶರಣ
ಕೂಗಿ ನೇಯುತಲಿ ಕಲ್ಯಾಣ । ಮಂಟಪವು
ಬಾಗಿ ಶರಣೆಂದು ಬಾರೆಂದು ॥ ೭೨ ॥

ಮಿದ್ದಿದನು ಶಿವಗೋಷ್ಠಿ ಬಿದ್ದು ವೇದಗಳಂದು
ಹುದ್ದೆ ಹೊಂದಿದವು ಜಗದೊಳಗೆ । ವಚನಗಳ
ಸುದ್ದಿ ನಾಡ್ತುಂಬಿ ಜನಹಿಗ್ಗಿ ॥ ೭೩ ॥

ಸೋಸಿ ವಚನದ ತಿರುಳ ಬೀಸಿದವು ಶಿವಗಾಳಿ
ಮೂಸಿಬಂದಂತೆ ಗುಂಗಿಗಳು । ಹೂಗಳಿಗೆ
ರಾಸಿ ಜನ ಬಂತು ಮಂಟಪಕೆ ॥ ೭೪ ॥

ವಚನ ಮಂಟಪ ಬಳ್ಳಿ ಸುಚಿ ಮೊಗ್ಗೆ ಹೂಬಿಡಲು
ರುಚಿಜೇನು ಹುಟ್ಟ ಹೊಸಮತವ । ಕಟ್ಟಿದರು
ವಚನ ಶಾಸ್ತ್ರಕರು ನಾಡೊಳಗೆ ॥ ೭೫ ॥

ಕೊಂಡಿಗಳು ಹಾರುವರು ಕಂಡು ಮಂಟಪಕಂಜಿ
ಹಿಂಡುವದು ನಮ್ಮ ಶಿವಮತವು । ನಾಡೊಳಗೆ
ಭಂಡು ಎಬ್ಬಿಸುದೆ ಲೇಸೆಂದು ॥ ೭೬ ॥

ಆಳುವರಸನೆ ಕೇಳು ಬೀಳುವದು ನಿಮ್ಮತವು
ತಾಳಿ ದೊರೆತನವ ಶಿವಶರಣ । ರಾಳುವರು
ಗೋಳು ನಿಮ್ಮತಕೆ ನೀವಿದ್ದು ॥ ೭೭ ॥

ಕುಲಗೆಡಿಸಿ ಬಸವೇಶ ಕಲಕುಮಾಡಿದ ನಾಡು
ಚಿಲಕ ಮುರಿದಂತೆ ಬಾಗಿಲಕೆ । ಅರಮನೆಯ
ಮಲಕು ಮುರಿದಂತೆ ಅರಸಿದ್ದು ॥ ೭೮ ॥

ಕುಲಹಿಡಿದು ಬಿಜ್ಜಳನು ಹೊಲೆತನದ ಬಲವೆಂದು
ಚಿಲಕಕ್ಕೆ ಬಿಗಿದ ಹರಳಯ್ಯ । ಮಧುವರಗೆ
ಹುಲಿಕೊಂದ ಬತವು ಹಾರುವಗೆ ॥ ೭೯ ॥

ಕಂಡೆಲ್ಲ ಜಂಗಮರು ಹುಂಡೆಂದು ಬಿಜ್ಜಳಗೆ
ಕೆಂಡದುರಿಯೊಳಗೆ ಉಗ್ಗಿದರು । ಕಾದೆಣ್ಣೆ
ಮಂಡಿಗುಣ್ಣುದಕೆ ಹಾರುವರು ॥ ೯೦ ॥

ಬಿಜ್ಜಳನ ವಧೆಯಾತು ಹೆಜ್ಜೆ ಮೀರಿತು ನಾಡು
ಕಜ್ಜ ಹದಗೆಟ್ಟು ಶಿವಶರಣ । ರೂಳಿಗವು
ಸಜ್ಜುಗೇಡಾಗಿ ಊರ್ಬಿಟ್ಟು ॥ ೯೧ ॥

ದೂರದೂರವೆ ಸಾಗಿ ಸೇರಿದರು ಹಳ್ಳಿಗಳ
ಯಾರು ಯಾರೆಂಬ ಗುರುತಳಿದು । ಮರೆಯಾಗಿ
ಆರಿಕೆಂಡಡಗಿ ಬೂದಿಯೊಳು ॥ ೯೨ ॥

ಮಂಟಪದ ಹೆಜ್ಜೇನ ಗಂಟೇರು ಕೆಡಸಿದರೆ
ಕುಂಟಿತವೆ ಜೇನ ನೊಣಗಳಿಗೆ । ಹುಟ್ಟಿಡಲು
ಬಂಟ ಶರಣರಿಗೆ ಕಂಟಕವೆ ॥ ೯೩ ॥

ಶಿವಶರಣ ತುಂಬಿಗಳು ಭವದೊಳಗೆ ಹಾರ್ಹಾರಿ
ಶಿವಮತದ ಹುಟ್ಟ ಕಟ್ಟಿದವು । ವಚನಗಳು
ಸವೆಯದುಳಿದಿರುವ ಹೊಸಜೇನು ॥ ೯೪ ॥

ಸೋಮನಾಥನ ನೆನಿಸಿ ಸೀಮೆ ಬಿಟ್ಟನು ಅಮುಗ
ಸಾಮಿ ನಿನ್ನಡಿಗೆ ನಾ ಬರುವೆ । ಅನುನೀಡು
ನೇಮ ನಿನ್ನೆಡೆಯು ಕಾಯಕವು ॥ ೯೫ ॥

ಹೂಳಜೆಯ ಅಮುಗಯ್ಯ ಧೂಳಚೆಂಜೆಗೆ ಸೇರಿ
ಮಾಳದೊಳು ಬಿಟ್ಟ ಬೀಡಾರ । ಬೆಳೆತನಕ
ಬೀಳುಗತ್ತಲೆಯು ಬೆಳಕಾಗಿ ॥ ೯೬ ॥

ಊರರಿತು ಮರುದಿನವೆ ತೂರಿತುಂಬಿತು ಮಾಳ
ಸಾರಿದರು ಅಮುಗ ಶಿವಭಕ್ತಿ । ಕಣಿಯೆಂದು
ತೋರಿ ಶುಭಚಿಹ್ನ ಬೀಡಿಟ್ಟು ॥ ೯೭ ॥

ಶಿವಕೂಟ ಕುಡಿಸುತ ಶಿವಗೋಷ್ಠಿ ನಡೆಸಿದನು
ಶಿವಶರಣ ಅಮುಗ ಗುರುವೆಂದು । ಜನಬರಲು
ಶಿವಮಂತ್ರ ಊದಿ ನಿತ್ಯದಲಿ ॥ ೯೮ ॥

ಸಿದ್ಧ ಸೋಮೇಶನಿಗೆ ಇದ್ದೂರು ಮಣಿಮಣಿದು
ಸುದ್ದಿ ಅಮುಗಯ್ಯ ಶರಣೆಂದು । ಹಬ್ಬುತಲಿ
ಬಿದ್ದು ಜನಬಂತು ನೋಡುದಕೆ ॥ ೮೯ ॥

ತರದೇವಾಡಿಯ ರಾಯ ಹುರಿಯಾಳು ಜೈತುಗಿಯು
ಹಿರಿಮಗನು ಶೂರ ಸಿಂಘಣನು । ಕೇಳಿದನು
ಶರಣ ಅಮುಗಯ್ಯ ಗುರುವೆಂದು ॥ ೯೦ ॥

ಕೇಳಿ ಕಾಣಲು ಬಯಸಿ ಹೂಳಜೆಗೆ ನಾಳೆನದೆ
ಪಾಳೆಯೊಡಗೂಡಿ ಮುಟ್ಟಿದನು । ಕೈಮುಗಿದ
ತಾಳಿಮನದೊಳಗೆ ಗುರುವೆಂದು ॥ ೯೧ ॥

ಶಿವಮಂತ್ರ ಶಿಂಘಣಗೆ ಶಿವಶರಣನೂದಿದನು
ಶಿವನೆಂದು ದಂಡು ಭಜಿಸುತಲಿ । ಬಂದವರು
ಶಿವಮತಕೆ ಮೆಚ್ಚಿ ಕೈಮುಗಿದು ॥ ೯೨ ॥

ಶುದ್ಧೇಕ ದಶಮಾಘ ಸಿದ್ಧಾರ್ಥಿ ವರುಷದೊಳು
ಸಿದ್ಧಸೋಮೇಶ ಭಕ್ತನಿಗೆ । ಸಿಂಘಣನು
ಇದ್ದೂರ ಗಡಿಗಿಥ್ಥೆ ವತನಿತ್ತ ॥ ೯೩ ॥

ದೀಪಮಾನೆಯ ಕೊಟ್ಟ ಧೂಪಮಾನೆಯ ಕೊಟ್ಟ
ಸೋಪಾನ ಕಟ್ಟಿ ಭೀಮೆಯೊಳು । ಇಳಿಯುದಕೆ
ಸೋಪಾನಮಾನೆ ವತನಿತ್ತ ॥ ೯೪ ॥

ಸೋಯಿದೇವನು ಕೂಡ ಜೋಯಿದೇವನು ಕೂಡಿ
ಕಾಯಕದ ಅಮುಗ ಗುರುವೆಂದು । ಊಳಿಗಕೆ
ದಾಯಿಮಾನೆಂದು ವತನಿತ್ತ ॥ ೯೫ ॥

ಸಿಂಘಣನ ಗುರುಭಕ್ತಿ ಲಿಂಗವಂತರು ಕೇಳಿ
ಜಂಗ ಕಟಗೊಂಡು ಹಾಡಿದರು । ಹೊಸಮತವು
ನುಂಗಿ ನಾಡನ್ನು ನೀರ್ಕುಡಿದು ॥ ೯೬ ॥

ಅನುಭಾವಿ ಅಮುಗಯ್ಯ ತನುಮನವ ಕಾಯಕಕೆ
ಅನುನಯದಿ ನೀಡಿ ಶಿವಮತವ । ಹಬ್ಬಿಸಿದ
ಗಣಸಾಸಿರೊಳಗಾದ ಶಿವಶರಣ ॥ ೯೭ ॥

ಮಾಗಿ ಕಾಲಕೆ ಬಿಡದೆ ಬೇಗಿನೊಳು ಶಿವಪೂಜೆ
ಚಾಗಿ ಅಮುಗಯ್ಯ ಮಾಡುತಲಿ । ಲಿಂಗದೊಳು
ಸಾಗಿ ಬಯಲಾಗಿ ಬೆಳಗಾಗಿ ॥ ೯೮ ॥

ಸಾಲು ದೀವಿಗೆ ಹಚ್ಚಿ ಮೇಲೆ ತೇಲಿತು ಭಕ್ತಿ
ಗಾಳಿ ಸಗ್ಗದೊಳು ಹೊತ್ತುಯ್ದು । ಬೀಸುತಲಿ
ಮೇಲು ಅಮುಗೆಂದು ಶಿವಗಣಕೆ ॥ ೯೯ ॥

ನೇಗಿಯದೆ ಕಾಯಕವ ಚಾಗಿ ಅಮುಗನು ಮಾಡಿ
ಯೋಗ ಹೊಂದಿದನು ಹೂಳಜೆಯ । ಜನಭಜಿಸಿ
ತೂಗಿದಾಸೋಹ ತೇರೆಳೆದು ॥ ೧೦೦ ॥

ಸಾಸಿರಾ ಗಣದೊಳಗೆ ಬಾಸಿಗವು ಅಮುಗಯ್ಯ
ಕೋಶ ಮಂಟಪಕೆ ಕಲ್ಯಾಣ । ಪುರದೊಳಗೆ
ಸೋಸಿ ನಡಕೊಂಡ ಶಿವಭಕ್ತ ॥ ೧೦೧ ॥

ಐದು ಕಾಯಕ ಶರಣ ನೇದು ಹೊದಿಸಿದ ಜಗವ
ವೇದ ಭೇದಗಳು ಮಾಯಾಗಿ । ಹೊಸಮತಕೆ
ಬೋಧಿಸಲು ವಚನ ಶಾಸ್ತ್ರಯ್ತು ॥ ೧೦೨ ॥

ಸೊನ್ನಲಿಗೆ ಅಮುಗಯ್ಯ ಬೆನ್ನಹುರಿ ಮಂಟಪಕೆ
ಪುನ್ನಾಗನಾತ ಗಾಳಿಯೊಳು । ಹರಿದಂತೆ
ಸನ್ನುತದ ವಚನ ಹೊಸಮತಕೆ ॥ ೧೦೩ ॥

ಲಿಂಗವೇದಕ ಶರಣ ಲಿಂಗೈಕ್ಯ ಅಮುಗಯ್ಯ
ಲಿಂಗೈಕದೇಹಿ ಹೂಳಜೆಯ । ಸೋಮನಿಗೆ
ಗುಂಗಿ ಪೂಜಿಸುವ ಹೂವಡಿಗೆ ॥ ೧೦೪ ॥

ಉಗುಳು ನುಂಗದ ಭಜನೆ ಹಗಲಿರುಳು ಮಾಡುವರು
ಹೊಗಳುವದು ಪರಸಿ ಅಮುಗಯ್ಯ । ಶರಣೆಂದು
ಸೊಗಸಿನೊಳು ಹಾಡಿ ತೇರೆಳೆದು ॥ ೧೦೫ ॥

ನೇಗಿ ಹೂಡಿದ ಜೇಡ ನೇಗಲಿಯ ಒಕ್ಕಲಿಗ
ಹಾಗಿನಲಿ ಹಾಡಿ ಹುಲುಸಾಗಿ । ಭೂಲೋಕ
ತೂಗಿ ತೊನೆಯುವದು ಬೆಳೆತುಂಬಿ ॥ ೧೦೬ ॥

ಹಂತಿಯದು ಹಾಡೆಂದು ಪಂತಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲೆ । ಅಮುಗಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೧೦೭ ॥

ಶರಣ ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸರಿ ಶರಣ ಅಮುಗಯ್ಯ । ನಮಗಿನ್ನು
ಹರಸರಿ ಹುಲುಸು ಹುಲ್ಲುಲ್ಲಿಗೊ ॥ ೧೦೮ ॥

– ಕೃತಿ: ಕನ್ನಡ ಜಾನಪದ ಗೀತಗಳು

***

೧೩. ಭೋಗಣ್ಣ

ಶ್ರೀಗುರು ಜಂಗಮ ಯೋಗೇಂದ್ರ ಕಸ್ತೂರಿ
ಭೋಗಿಸೋ ಗುರುವೀರಾ ॥ ॥ ೧ ॥

ತ್ಯಾಗದ ಸುರಕುಜವಾಗಿ ಮೆರಿವ ಗುಣ
ಸಾಗರ ಗುರುತಿನ ಜಾಗ ಸುರಮುದ
ಈ ಘನ ಶೆಟ್ಟಿಯ ರಾಗದಿ ಪಾಲಿಪ
ಭೋಗ ಗಣೇಶ್ವರ ಭೋಗರ ಧರನೇ
ಶ್ರೀ ಗುರು ಜಂಗಮ ಯೋಗೇಂದ್ರ ಕಸ್ತೂರಿ
ಭೋಗಿಸೊ ಗುರುವೀರಾ ॥ ॥ ೨ ॥

ರುದ್ರವೀರ ಭದ್ರಾವತಾರ ಕಾಶ್ಮೀರಾ ರಾಜನ
ಮುದ್ರೆಯ ಮನೆಯೊಳಗಿರುವ ಪ್ರಮಥಗಣ ಆರು ಸಾವಿರಾ
ಶುದ್ಧವಮಾದತೀ ಶುದ್ಧಮೂರ್ತಿ ಚನ್ನವೀರಾ
ಬಸವನ ಕದ್ದುತರಲು ಬಂದಾದ್ಯರ ಕೂಡಿದ ಧೀರಾ
ಮುದ್ದು ಬಾಚ್ಚಯ್ಯನ ಉದ್ಧರಿಸುತದಿ ವಿರುದ್ಧವಾದಿಗಳ ಸಾಧ್ಯದಿ ಜೈಸಿದ
ಬುದ್ಧಿವಂತರಿಗೆ ಸಾಧ್ಯವಾದ ಕನಕಾದ್ರಿ ಚಾಪ ಸತ್‌ಛಿದ್ರಸಂಹಾರಾ

ಶ್ರೀ ಗುರು ಜಂಗಮಾ ಯೋಗೇಂದ್ರ ಕಸ್ತೂರಿ
ಭೋಗಿಸೋ ಗುರುವೀರಾ ॥ ॥ ೩ ॥

ದಕ್ಷರಾಕ್ಷಸನ ಶಿಕ್ಷಿಸಿದಂಥ ಕರಾಳ ತೇಜಗ
ದೀಕ್ಷ ಮೋಕ್ಷಕದಕ್ಷ ಮಷರತನೀಲ
ಪಕ್ಷಿಗಮನ ರತ್ನಾಕ್ಷಿ ವರ್ಣತನ ಲೋಲ ರೈತಪ ದುಷ್ಟ
ರಕ್ಷಣ ಜೋಕ್ಷಣೋಕ್ಷಣ ಹರಿಮಾಲ ಅಕ್ಷಯ ಶಂಕರ
ಯಕ್ಷರಾಜ್ಞಿವಿತ ಪಕ್ಷಿಪರಾತ್ಪರ ಕುಕ್ಷಿಭುವನ ತ್ರಯ
ರುಕ್ಷಪತಿ ಮಕುಟ ಬಿಕ್ಷುಕ ಕುಲಸಂರಕ್ಷಕ ವಿಮಲ ಪ್ರೇಕ್ಷನ ಶರಭಾ ॥॥ ೪ ॥

ಒಲಿದವರಿಗೆ ವಕ್ರ (ಜ) ಕವಚ ಕರುಣಾಕರ ದೇವ
ಒಲಿದು ನಿಂತ ಮಹನಿಯರ ಗಂಡ ಬಹು ಭೀಕರ
ಸರ್ವ ನೀನೆ ಛಲದಂಕ ಸರ್ವರಿಗೆ ಶೇಖರ
ಕಂಟಕಗಳನು ಸುಲಭದಿ ಗೆಲಿಸುವ ಶರಣು ಶೇಖರ
ಕಲಿತು ಕಲಿಯುಗದ ಕಾಲಭೈರವ ಲಲಿತ ಶುಭೋದಯ
ಶುಭಕರ ಸುಚರಿತ ಸುಲಲಿತ ಸಿಂಧುಗೆ
ನಿಲಯ ನಿರಾಮಯ ಬಗೆಗೊಂಬೆನು ಬಾ ಭಲರೆ ಭಾಪುರೇ
ಶ್ರೀ ಗುರು ಜಂಗಮ ಯೋಗೇಂದ್ರ ಕಸ್ತೂರಿ
ಭೋಗಿಸೋ ಗುರುವೀರಾ ॥ ॥ ೫ ॥

– ಶ್ರೀ ನಂದಿಸೂಗಯ್ಯ

***

ಭೋಗಣ್ಣ

ಶ್ರೀ ಗುರು ಜಂಗಮ ಯೋಗೇಂದ್ರ ಕಸ್ತೂರಿ
ಭೋಗಿಸು ಗುರುವೀರಾ ॥ ೧ ॥

ತ್ಯಾಗದಿ ಸುರಕುಜವಾಗಿ ಮೆರೆವ ಗುಣ
ಸಗರ ಗುರುತಿನ ಜಾಗೆ ಸುರಪುರದ
ಈ ಘನಶೆಟ್ಟಿಯ ರಾಗದಿ ಪಾಲಿಪ
ಭೋ ಗಣೇಶ್ವರ ಭೋಗರ ಧರನೇ ॥ ೨ ॥

ರುದ್ರವೀರ ಭದ್ರಾವತಾರಕ ಕಾಶ್ಮೀರಾ
ರಾಜನ ಮುದ್ರೆಯ ಮನೆಯೊಳಗಿವ ಪ್ರಮಥಗಣ ಆರುಸಾವಿರ
ಶುದ್ಧವನಾದತಿ ಶುದ್ಧಮೂರ್ತಿ ಚೆನವೀರ
ಬಸವನು ಕದ್ದು ತರಲು ಬಂದಾದ್ಯರ ಕೂಡಿದ ಧೀರ
ಮುದ್ದು ಬಾಚಯ್ಯನ ಉದ್ಧರಿಸುತಲಿ
ವಿರುದ್ಧವಾದಿಗಳ ಸಾಧ್ಯದಿ ಜೈಸಿದ
ಬುದ್ಧಿವಂತರಿಗೆ ಸಾಧ್ಯನಾದ ಕಾದ್ರಿಕನ
ಭಾಪ ಸಭಿದ್ರಸಂಹಾರ ॥ ೩ ॥

ದಕ್ಷ ರಾಕ್ಷಸನ ಶಿಕ್ಷಿಸಿದಂತ ಕರಾಲ
ತ್ರಿಜಗ ದೀಕ್ಷ ಮೋಕ್ಷ ದಕ್ಷ ಪುಷ್ಯ ವೃತ ನೀಲ
ಪಕ್ಷ ಗಮನರ ತಾಕ್ಷಿ ವರುಣ ತನುಲೋಲ ರಹಿತ

ಸದ್ವೃಕ್ಷ ಲಕ್ಷಣವಿ ಚಕ್ಷಣೋಕ್ಷ ಹರಿ ಮೂಲ
ಅಕ್ಷಯ ಶಂಕರ ಯಕ್ಷ ರಾಗ್ನಿಜೀತ ಪಕ್ಷ ಪರಾತ್ಪರ ಕುಕ್ಷ ಭವನ ಚಯ
ರುಕ್ಷಪತಿ ಮುಕುಟ ಬಿಕ್ಷುಕ ಕುಲ ಸಂರಕ್ಷಕ ವಿಮಲಾ ತ್ರೇಕ್ಷನೆ ಶರಭಾ ॥೪॥

ಒಲಿದವರಿಗೆ ವರ ವಜ್ರಕವಚ ಕರುಣಾಕರ
ಮಲೆತುನಿಂತ ಮನ್ನೆಯರ ಗಂಡ ಬಹು ಭೀಕರ
ಚಲುವ ನೀನು ಛಲದಂಕ ಸರ್ವರಿಗೆ ಶೇಖರ
ಕಂತಕಗಳನು ಸುಲಭದಿಂ ಗೆಲಿಸುವ ಶರಣು ಶಂಕರ
ಕಲಿತ ಕಲಿಯುಗದ ಕಾಲಭೈರವಾ ಲಲಿತ ಶುಭೋದಯ
ಶುಭಕರ ಸುಚರಿತ ಸುಲಲಿತ ಸಿಂಧಗಿ ನಿಲಯ ನಿರಾಮಯ
ಬಲಗೊಂಬೆನು ಬಾ ಭಲರೆ ಭಾಪು ಸೈ ॥೫॥

– ಸಿದ್ರಾಮಪ್ಪ ಮಾಲಿಪಾಟೀಲ

***

೧೪. ಮಡಿವಾಳ ಮಾಚಯ್ಯ

ಅಪ್ಪ ಮಡಿವಾಳನ ಎದಿಯ ಮ್ಯಾಲ

ಅಪ್ಪನ ಎದಿಯ ಮ್ಯಾಲ ಇಪ್ಪತ್ತೊಂದು ಸೇರಿನ ಚೌಕ ।
ಬಂಗಾರದ ಪುಡಿಯ ಹೊಳವುತ ಶಿವಶಿವ
ಬಂಗಾರದ ಪುಡಿಯ ಹೊಳವುತ ಶಿವ ಶಿವ
ಬಂಗಾರದ ಪುಡಿಯ ಹೊಳವುತಲಿ ಹಿಪ್ಪರಗಿ
ಅಪ್ಪ ಮಡಿವಾಳನ ಎದಿಯ ಮ್ಯಾಲ ಶಿವ ಶಿವ
ಅಪ್ಪ ಮಡಿವಾಳನ ಎದಿ ಮ್ಯಾಲ ಶಿವ ಶಿವ ॥ ॥ ೧ ॥

ಅಣ್ಣನ ಎದಿಮ್ಯಾಲ ಹನ್ನೆರಡ ಸೇರಿನ ಚೌಕ
ಬಂಗಾರದ ಪುಡಿಯ ಹೊಳವುತ ಶಿವ ಶಿವ
ಬಂಗಾರದ ಪುಡಿಯ ಹೊಳವುತ ಶಿವ ಶಿವ
ಬಂಗಾರದ ಪುಡಿಯ ಹೊಳವುತಲಿ । ಹಿಪ್ಪರಗಿ
ಅಣ್ಣ ಮಡಿವಾಳನ ಎದಿ ಮ್ಯಾಲ ಶಿವ ಶಿವ
ಅಣ್ಣ ಮಡಿವಾಳನ ಎದಿ ಮ್ಯಾಲ ಶಿವ ಶಿವ ॥ ॥ ೨ ॥

ಅಪ್ಪನ ಗುಡಿಮುಂದ ಇಪ್ಪತ್ತೊಂದು ಒಲಿ ಹೂಡಿ
ತುಪ್ಪೋಳಿಗಿ ಆಗ್ಯಾವ ಬೆಳಗೆನ ಶಿವ ಶಿವ
ತುಪ್ಪೋಳಿಗಿ ಆಗ್ಯಾವ ಬೆಳಗನ ಶಿವ ಶಿವ
ತುಪ್ಪೋಳಿಗಿ ಆಗ್ಯಾವ ಬೆಳಗಾನ । ಹಿಪ್ಪರಗಿ
ಅಪ್ಪ ಮಡಿವಾಳನ ನೆವದೇಕ ಶಿವ ಶಿವ
ಅಪ್ಪ ಮಡಿವಾಳನ ನೆವದೇಕ ಶಿವ ಶಿವ ॥ ॥ ೩ ॥

ಅಣ್ಣನ ಗುಡಿಮುಂದ ಹನ್ನೆರಡು ಒಲಿಹೂಡಿ
ಎಣ್ಣೋಳಗಿ ಆಗ್ಯಾವ ಬೆಳಗನ ಶಿವಶಿವ
ಎಣ್ಣೋಳಗಿ ಆಗ್ಯಾವ ಬೆಳಗನ ಶಿವ ಶಿವ
ಎಣ್ಣೋಳಗಿ ಆಗ್ಯಾವ ಬೆಳಗಾನ । ಹಿಪ್ಪರಗಿ
ಅಣ್ಣ ಮಡಿವಾಳನ ನೆವದೆಕ್ಕ ಶಿವ ಶಿವ
ಅಣ್ಣ ಮಡಿವಾಳನ ನೆವದೆಕ್ಕ ಶಿವ ಶಿವ ॥ ೪ ॥

ಕರಿಯ ಆಕಳ ಮೊಲಿಯ ತೊಂಡೀಯ ಹೆಪ್ಪ್ಯಾಂಗ
ಹರೆಗೊಂಡ್ಹಂಗ ಹಾಲ ಸುರದಾವ ಶಿವ ಶಿವ
ಹರೆಗೊಂಡ್ಹಂಗ ಹಾಲ ಸುರದಾನ ಶಿವ ಶಿವ
ಹರೆಗೊಂಡ್ಹಂಗ ಹಾಲ ಸುರದಾವೇ । ಹಿಪ್ಪರಗಿ ।
ಅಪ್ಪ ಮಡಿವಾಳನ ಅಭಿಷೇಕ ಶಿವ ಶಿವ
ಅಪ್ಪ ಮಡಿವಾಳನ ಅಭಿಷೇಕ ಶಿವ ಶಿವ ॥ ॥ ೫ ॥

ಕರಿಯ ಆಕಳ ಮೊಲಿಯ ತೊಂಡೀಯ ಕಾಯ್ದಂಗ
ಹರೆಗೊಂಡ್ಹಂಗ ಹಾಲ ಸುರದಾನ ಶಿವ ಶಿವ
ಹರೆಗೊಂಡ್ಹಂಗ ಹಾಲ ಸುರದಾನ ಶಿವ ಶಿವ
ಹರೆಗೊಂಡ್ಹಂಗ ಹಾಲ ಸುರದಾವೀ । ಹಿಪ್ಪರಗಿ ।
ಅಣ್ಣ ಮಡಿವಾಳನ ಅಭಿಷೇಕ ಶಿವ ಶಿವ
ಅಣ್ಣ ಮಡಿವಾಳನ ಅಭಿಷೇಕ ಶಿವ ಶಿವ ॥ ॥ ೬ ॥

ಅಪ್ಪನ ಗುಡಿಮುಂದ ತುಳಿಗೆಸರ ಮಳಿಗೆಸರ
ನಾರೇರ ನಿಲಿಯ ಮಳದೊತ್ತೆ ಶಿವಶಿವ
ನಾರೇರ ನಿಲಿಯ ಮಳದೊತ್ತೆ ಶಿವ ಶಿವ
ನಾರೇರ ನಿಲಿಯ ಮಳದೊತ್ತ್ಯೆಲಿ । ಹಿಪ್ಪರಗಿ
ಕಂಚಿನಾರುತಿ ಜತನವ ಶಿವ ಶಿವ
ಕಂಚಿನಾರುತಿ ಜತನವ ಶಿವಶಿವ ॥ ॥ ೭ ॥

ಅಡಕಿಯ ತೇರಿಗಿ ಕಿಡಕಿಯ ತಗಸ್ಯಾರ
ಮುಂದ ಸರದಾವ ಕಟಸ್ಯಾರ ಶಿವ ಶಿವ
ಮುಂದ ಸರದಾವ ಕಟಸ್ಯಾರ ಸಿವಶಿವ ।
ಮುಂದಾನೆ ಸರದಾವ ಕಟಸ್ಯಾರೀ । ಹಿಪ್ಪರಗಿ
ಗದ್ದರಸ್ತ ತೇರ ಎಳದೇವ ಶಿವ ಶಿವ
ಗದ್ದರಸ್ತ ತೇರ ಎಳದೇವ ಶಿವ ಶಿವ ॥ ॥ ೮ ॥

–ಶ್ರೀಮತಿ ತುಳಸಮ್ಮ ಬಸವರಾಜ ಹೂಗಾರ
(ಪೂಜಾರಿ)

***

ಕ್ಯಾವಿಯ ಉಟ್ಟಾರ

ಕ್ಯಾವಿಯ ಉಟ್ಟಾರ ಕ್ಯಾವಿಯ ಹೊತ್ತಾರ
ಗದ್ದಿಗಿ ಮೇಲೆ ಕುಳಿತಾರ ಮಡಿವಾಳ ಸ್ವಾಮಿ
ನೀವು ಬರ್ರಿ ಲಿಂಗದ ಪೂಜಕ ॥ ೧ ॥

ಹಾವ ಹಾಸಿಗಿ ಮಾಡಿ ಚೋಳ ಗದ್ದಿಗಿ ಮಾಡಿ
ಹಾವಿಗಿ ನಿಮಗ ಒಳಮಾತ ಮಡಿವಾಳ ಸ್ವಾಮಿ
ನೀವು ಬರ್ರಿ ಲಿಂಗದ ಪೂಜಕ ॥ ೨ ॥

ಪಲ್ಲಕ್ಕಿ ಹೊತ್ತಣ್ಣ ಮೆಲ್ಲಕ ನಡೆದರ
ಪಲ್ಲಕ್ಯನ ಗೊನಿಯ ಉದುರ್ಯಾವ ಮಡಿವಾಳ ಸ್ವಾಮಿ
ನೀವು ಬರ್ರಿ ಲಿಂಗದ ಪೂಜಕ ॥ ೩ ॥

ಬರಿ ಬೀರಿ ಬಂದಾರ ಖುರ್ಚಿಯ ಮೇಲೆ ಕುಂತಾರ
ಆಶೀರ್ವಾದ ಹೊಳಕಿ ಕೊಡತಾರ ಮಡಿವಾಳ ಸ್ವಾಮಿ
ನೀವು ಬರ್ರಿ ಲಿಂಗದ ಪೂಜಕ ॥ ೪ ॥

– ಶ್ರೀಮತಿ ಭೌರಮ್ಮ ಮಲ್ಲಯ್ಯ ಸಾತಿಹಾಳಮಠ

***

ಹಿಪ್ಪರಗಿ ಮಾಚಯ್ಯ

ಹಿಪ್ಪರಿಗಿ ಮಾಚಯ್ಯ ಬಲು ಸಿಟ್ಟಿನ ಶರಣ
ಸಾಕ್ಷಾತ ವೀರಭದ್ರನ ಅವತರಣ ॥ ॥ ಪ ॥

ಹುಟ್ಟೂರು ತಾ ಬಿಟ್ಟು ಕಲ್ಯಾಣಕ ತಾ ಬಂದು
ಶರಣರ ಬಟ್ಟೆಯ ಮಡಿಮಾಡ್ಯಾರ ಮಾಚಣ್ಣ ॥ ॥ ೧ ॥

ಹೊಂಡಕ ಬರತಾರ ಬಟ್ಟೆಯು ಒಗಿತಾರ
ದಂಡಿಯ ಮ್ಯಾಲ ಕುಂತು ಪೂಜೆಯು ನಡೆಸ್ಯಾರ ॥ ॥ ೨ ॥

ಶರಣರ ವಸ್ತ್ರಗಳು ಮಡಿ ಮಾಡಿ ತರತಾರ
ಮರೆತರ ಭವಿಗಳ ನೆರಳರ ಬೀಳಲಿಲ್ಲ ॥ ॥ ೩ ॥

ಹೀಂಗೊಮ್ಮೆ ಮಾಚಯ್ಯ ಮಡಿವಸ್ತ್ರ ತರಮುಂದ
ಕೊಂಡೆಯರು ತಾ ಹೋಗಿ ಮುಟ್ಟ್ಯಾರ ವಸ್ತ್ರಗಳ ॥ ॥ ೪ ॥

ಸಿಟ್ಟಿಲಿ ಮಾಚಯ್ಯ ಖಡ್ಗವ ಸೆಳೆದಾನ
ರುಂಡ ಮುಂಡ ಮಾಡಿ ನೆಲಕರ ಒಗಿತಾನ ॥ ॥ ೫ ॥

ಆ ಸುದ್ದಿಯು ತಿಳಿಯಲು ಬಿಜ್ಜಳ ಓಡಿ ಬಂದ
ಮಾಚಯ್ಯನಿಗೆ ಶಿಕ್ಷೆ ಕೊಡಬೇಕಂತಂದ ॥ ॥ ೬ ॥

ಬಸವಣ್ಣ ಬಂದಾರ ಬುದ್ಧಿಯ ಹೇಳ್ಯಾರ
ಶರಣರ ಜೊತೆಯಲ್ಲಿ ಸರಸವು ಯಾಕಂದಾರೆ ॥ ॥ ೭ ॥

ಬಿಜ್ಜಳ ಶರಣ ಹೋಗ್ಯಾನ ಆವಾಗ
ಮುಂಡಗಳು ಎದ್ದು ನಿಂತಾವ ಗಳಿಗ್ಯಾಗ ॥ ॥ ೮ ॥

ಮಾಚನ ಮಹಿಮೆಯು ಹರಿಯಲಿ ನಾಡಾಗ
ಮಡಿವಸ್ತ್ರದ್ಹಾಂಗ ಮಡಿಯಾಗಲಿ ಜನುಮ ॥ ॥ ೯ ॥

– ಶ್ರೀಮತಿ ಕಾಡಾದಿ ಗೌರವ್ವ

***

ಮಡಿವಾಳ ಮಾಚಯ್ಯ

ಸೂಚಕ ಪದ್ಯ:ಮಡಿವಾಳ ಮಾಚಯ್ಯ ದುಡವುಳ್ಳ ಶಿವ ಭಕ್ತ
ಮಡದಿಯನು ಕೊಂದು ರಗುತದಲಿ । ತಾ ತೊಳೆದ
ಒಡೆಯನೊಸ್ತಿರವ ಭಕುತಿಯಲಿ ॥ ೧ ॥

ಹಿಪ್ಪರಗಿ ಮೆರೆಯುತಲಿ ಉಪ್ಪರಗಿ ಆಗೆಂದು
ತುಪ್ಪ ಹೊಳೆಯಾಗಿ ಹರಿಯುತಲಿ । ಊರೊಳಗೆ
ಅಪ್ಪ ಮಾಚಣ್ಣ ಜನಿಸಿದನು ॥ ೨ ॥

ಹಿಪ್ಪರಗಿ ಶರಣನಿಗೆ ತಪ್ಪದಲಿ ಬಾಗುವೆವು
ಮುಪ್ಪಾಗದಿರಲಿ ನಿಮ್ಹಾಡ । ಮಾಚಯ್ಯ
ಅಪ್ಪಿ ಹಾದಿಯನು ತೋರಿಸಲಿ ॥ ೩ ॥

ಲಿಂಗಿಗಳು ಹಡೆದವರು ಸಂಗ ಭವಿಗಳದಲ್ಲ
ಲಿಂಗವಂತರಾ ಉಡುತೊಡಿಗೆ । ತೊಳೆಯುತಲಿ
ಅಂಗ ಸವೆತನಕ ಕಾಯಕವು ॥ ೪ ॥

ಮನೆಗೆಲಸ ಮಡಿವಾಳ ದಿನಗೆಲಸ ಶಿವ ಭಕ್ತಿ
ಮನ ಬೆರತ ಲಿಂಗ ದೇಹದಲಿ । ಬಲು ಒಪ್ಪಿ
ಕನಕ ಜನಕಾಗಿ ಬಾಳುವೆಯು ॥ ೫ ॥

ಮಡಿವಾಳ ಮಾಚಣ್ಣ ಕಡುಭಕ್ತಿ ತಾನಾಗಿ
ಹಡೆದವರ ಕೆಲಸ ಕೈಕೊಂಡ ಊರೊಳಗೆ
ಬಡವರಿಗೆ ಭಾಗ್ಯ ನಿಧಿಯಾದ ॥ ೬ ॥

ಸಂಗಯ್ಯಗ್ಹೋಗದೆ ಲಿಂಗನಿಗೆ ನೀರೆರೆಯದೆ
ಜಂಗು ಕಟ್ಟದಲೆ ಕಾಯಕವ । ಮಾಚಣ್ಣ
ಹಿಂಗಿಸನು ತನ್ನ ಕುಲಗೆಲಸ ॥ ೭ ॥

ಕಾಯಕವ ಪಾಲಿಸಿದ ನಾಯಕನು ವೀರನವ
ಮಾಯೆಗೊರೆಗಲ್ಲು ಮಾಚಯ್ಯ । ನಿತ್ಯದಲಿ
ಜೀಯ ವಾಸನೆಗೆ ಶಿವಶರಣ ॥ ೮ ॥

ಕಾಯಕವೆ ಕತ್ತ್ಯಾಗಿ ಘಾಯ ಮಾಡುತ ಹೊರಟ
ರಾಯರಾಯರೆಲೆ ನಡುಗಿದರು । ಮಾಚನಿಗೆ
ನ್ಯಾಯ ಸಹ ನಡುಗಿ ಸಭೆಯೊಳಗೆ ॥ ೯ ॥

ಎಂಟು ಕಟ್ಟುಗಳರಿತ ಬಂಟ ಮಾಚನೆ ಹೌದು
ನೆಂಟನವ ಹೌದು ವಾದಿಗಳ । ಪರ ಮತಕೆ
ಕಂಟಕವೆ ಹೌದು ಸಭೆಯೊಳಗೆ ॥ ೧೦ ॥

ಆರು ತಳಗಳ ಬಿಚ್ಚಿ ಬೀರಿದನು ಜಗಕೆಲ್ಲ
ಕಾರಗತ್ತಲೆಯು ಬೆಳಗಾಗಿ । ಶಿವಮತಕೆ
ಸಾರು ದೀವಟಿಗೆ ತಾನಾಗಿ ॥ ೧೧ ॥

ಪರ ಮತದ ವಾದಿಗಳು ಥರಥರನೆ ನಡುಗುತಲಿ
ಸೊರಗಿ ಪಾದಕ್ಕೆ ಬೀಳುತಲಿ । ಮಾಚನಿಗೆ
ಕರುಣಿಸರಿ ಗುರುವೆ ಎನ್ನುತಲಿ ॥ ೧೨ ॥

ವೀರಭದ್ರನೆ ಅಂದು ವೀರ ಮಡಿವಾಳಾಗಿ
ಸಾರುತಲಿ ವೀರ ಧರ್ಮವನೆ । ಜಗಕೆಲ್ಲ
ತೋರಿದನು ಮುಕ್ತಿ ಮಾರ್ಗವನು ॥ ೧೩ ॥

ಹಿಪ್ಪರಗಿ ಹಾರುವರು ಕಪ್ಪ ಕಾಣಿಕೆ ಹೊತ್ತು
ಗಪ್ಪ ಬರುತಿಹರು ಮಾಚನಿಗೆ । ಕೈ ಮುಗಿದು
ಅಪ್ಪ ನಿನ ಭಕ್ತರಾಗುವೆವು ॥ ೧೪ ॥

ಬಾಗೋಡಿ ಬಸವಣ್ಣ ಸಾಗುತಲಿ ಕಲ್ಯಾಣ
ಕೂಗಿಡಲು ಭೂಮಿ ಲಿಂಗಗಳ । ವೈಭವವ
ತೂಗುತಲಿ ಧರ್ಮ ತೊಟ್ಟಿಲವು ॥ ೧೫ ॥

ಬಸವ ಬೋಧೆಯು ಬೆಳೆದು ವಸುಧೆಯೊಳು ಹಬ್ಬುತಲಿ
ಹಸುಗೂಸು ಕೇಳಿ ಕಿವಿಗೊಟ್ಟು । ಚಣದೊಳಗೆ
ಹೊಸ ಮತವು ಉದಿಸಿ ಭೂ ಜನಕೆ ॥ ೧೬ ॥

ನಾಡ ಜಾಣರು ಬರಲು ಹೂಡುದಕೆ ವಾದಗಳ
ಕೂಡಿ ಕಲ್ಯಾಣ ಮಂಟಪಕೆ । ಮಾಚಯ್ಯ
ನೋಡಿ ಬಂದಲ್ಲಿ ತಲುಪಿದನು ॥ ೧೭ ॥

ಈರಾಡಿ ವೇದಗಳು ಹಾರಾಡಿ ವಾದಗಳು
ಜೋರಾಗಿ ನಡೆದು ನಿಲ್ಲುತಲಿ । ಸಾಗರವ
ಏರಿ ಕಡೆದಂತೆ ರಕ್ಕಸರು ॥ ೧೮ ॥

ಸುರರು ಕಡೆದಂತೆಲ್ಲ ವರಮಣಿಗಳುದಿಸಿದುವು
ಚಿರಕಾಲ ಉಳಿದು ಭೂಮಿಯೊಳು । ವಚನಗಳು
ಶರಣಗಣ ಕಡೆದ ಮಣಿಯೇನೊ ॥ ೧೯ ॥

ವಾದ ಚಕಮಕಿ ಬೆಂಕಿ ದೂದಿ ಕೂಮತ ಸುಡಲು
ವಾದಿಗಳ ಕಾದ ತಲೆಮಾರಿ । ವಚನಗಳ
ನಾದ ತುಂಬುತಲಿ ಭವಿಗಳಿಗೆ ॥ ೨೦ ॥

ಕಲ್ಯಾಣ ಮಂಟಪಕೆ ಬಲ್ಲವರು ಬಂದಿರಲು
ಅಲ್ಲಗಳೆಯುದಕೆ ಶರಣರನು । ಮಾಚಯ್ಯ
ಎಲ್ಲರೊಳಗವನು ಮಿಗಿಲಾದ ॥ ೨೧ ॥

ನೂರೊಂದು ತಲೆಗಳಿಗೆ ನೂರೊಂದು ಶರಣರು
ವೀರ ಮಾಚಣ್ಣ ಕರವಾಳು । ಬಸವನಿಗೆ
ಧೀರ ಕಾಯಕದ ಹುರಿಯಾಳು ॥ ೨೨ ॥

ಶಿವ ಭಕ್ತರರಿವೆಗಳ ತವಕದಲಿ ತೊಳೆ ತರುವ
ಭವಿ ಜನರ ಬಟ್ಟೆ ಮುಟ್ಟುವನೆ । ಮಾಚಯ್ಯ
ಜವನ ದವಡ್ಯಾದ ಕೂಮತಕೆ ॥ ೨೩ ॥

ಬಸವಾದಿ ಪ್ರಮಥರ ಹಸನಾಗಿ ತೊಳೆದರಿವೆ
ಬಿಸಲಿಗೊಣ ಹಾಕಿ ಗಳಿಗೆಗಳ । ಹೊತಗೊಂಡು
ಬಸವನರಮನೆಗೆ ಬರುವಾಗ ॥ ೨೪ ॥

ಹೆಮ್ಮೆಯಲಿ ಕೊಬ್ಬಿರುವ ಹುಮ್ಮ ನರ ಪಾಪಿಗಳು
ತಮ್ಮ ತಮ್ಮೊಳಗೆ ಮಾತಾಡಿ । ಮಾಚನಿಗೆ
ಬಿಮ್ಮದಲಿ ತಡವಿ ಹಾದಿಯಲಿ ॥ ೨೫ ॥

ಹೊತ್ತ ಮಟ್ಟೆಯ ತೂರಿ ಕತ್ತಿಯೊರೆಯಿಂದ್ಹಿರಿದು
ಕತ್ತರಿಸಿ ತೂರಿ ಪಾಪಿಗಳ । ಮುಗಿಲೊಳಗೆ
ಎತ್ತ ನೋಡಿದರು ಕತ್ತಲೆಯು ॥ ೨೬ ॥

ಕಾಯಕವು ನೆನಪಾಗಿ ಮಾಯವಾಯಿತು ಸಿಟ್ಟು
ಜೀಯ ಬಸವನಿಗೆ ಸೇವೆಯನು । ತಪ್ಪಿಸಿದೆ
ಹೇಯವಿಲ್ಲೆಂದು ಶಪಿಸುತಲಿ ॥ ೨೭ ॥

ಧೂಳ ಸಂಜೆಯ ಮುಂದೆ ಬೀಳುತೇಳುತ ಸಾಗಿ
ಕಾಲ ಜಂಗನ್ನು ಬಲು ನುಡಿಸಿ । ಮಾಚಯ್ಯ
ವೇಳೆಗರಮನೆಗೆ ತಲುಪಿದನು ॥ ೨೮ ॥

ಅರಸ ಬಿಜ್ಜಳರಾಯ ಹರುಷದಲಿ ವಾಲಗವ
ನೆರಸಿ ನಡೆಸಿದ್ದ ಚಾವಡಿಯ । ಕೇಳುದಕೆ
ಪರಸಿ ಕೂಡಿತ್ತು ಗಾವುದಕೆ ॥ ೨೯ ॥

ಹೇಳುವದು ಕೇಳುವದು ಆಳ್ವ ಭೂಪನೆ ಉಂಟು
ಮೇಳೈಸು ನಮ್ಮ ಕೋರಿಕೆಯ । ಪಿಸುಣಿಗರು
ಹೇಳ ತೊಡಗಿದರು ಕೈ ಮುಗಿದು ॥ ೩೦ ॥

ಅಗಸ ಮಡಿವಾಳಯ್ಯ ಒಗೆಯನರಸನ ಅರಿವೆ
ಮಿಗಿಲೆಂದು ಬಿಜ್ಜಗತ್ತಿಯಲಿ । ಜನಕೊಂದು
ಒಗೆದಾಡಿ ಊರನಂಜಿಸುವ ॥ ೩೧ ॥

ಶರಣ ತಾನೆಂದೆಂಬ ತುರುಸು ಮಾತಿನ ಮಾಚ
ಮರೆಯುವನೆ ತನ್ನ ಒಣ ಹೆಮ್ಮೆ । ದೊರೆಗಳಿಗೆ
ಅರಸೆಂದು ಕರೆಯನವನೆಂದು ॥ ೩೨ ॥

ಅರಸ ಬಿಜ್ಜಳರಾಯ ಬಿರುಸು ಮಾತನು ಕೇಳಿ
ಕರೆಸಿ ಕೊಲ್ಲೆಂದು ಅಪ್ಪಣೆಯ । ಚಾರರಿಗೆ
ಸಿರವ ಕತ್ತರಿಸಿ ಚೆಲ್ಲೆಂದು ॥ ೩೩ ॥

ಜಟ್ಟಿಗಳ ಕರೆತರಿಸಿ ಜುಟ್ಟ ಹಿಡಿದೆಳತರಿಸಿ
ಕಟ್ಟಿ ಹೊಡೆದವನ ಬಿಗಿ ಹಾಕಿ । ನೀವೆಲ್ಲ
ಕುಟ್ಟಿ ನಾದೆಂದ ಒಣಕಿಯಲಿ ॥ ೩೪ ॥

ಕೇಳಿ ಕಂಗಾಲಾಗಿ ಹೇಳಿದನು ಬಸವಣ್ಣ
ಕೀಳ ಕೆಲಸರಸ ಕೇಳೆಂದ । ಮಾಚಯ್ಯ
ಭಾಳಲೋಚನನ ಅವತಾರಿ ॥ ೩೫ ॥

ಬಸವನಾಡಿದ ಮಾತ ಕಸಕಿಂತ ಕಡೆಮಾಡಿ
ನಸುಕಿನಲಿ ಕಳಸಿ ಜಟ್ಟಿಗಳ । ಆನೆಗಳ
ಕಸ ತುಳಿಸಿದಂತೆ ತುಳಿಸುದಕೆ ॥ ೩೬ ॥

ಮರು ದಿನವೆ ನಸಕ್ಹರಿದು ಹರಸಿದನು ದಿನದೊಡೆಯ
ಶರಣ ಮಾಚನಿಗೆ ಬಲು ಬೆಳಕ । ಕಾಯಕದ
ಕಿರಣ ಬೆಳಗೆಂದ ಜಗಕೆಂದು ॥ ೩೭ ॥

ವೀರ ಘಂಟೆಯನಾದ ಕೇರಿ ಕೇರಿಗೆ ತಲುಪಿ
ಸಾರಿ ಮಾಚಯ್ನ ಬರುವನ್ನು । ಶರಣರಿಗೆ
ಬೀರಿ ಕಾಯಕದ ಹೊತ್ತನ್ನು ॥ ೩೮ ॥

ತಟ್ಟಲಾ ಮಾಚನಿಗೆ ಜಟ್ಟಿಗಳು ಬರಲಾಗ
ಬಟ್ಟ ಬಯಲಲ್ಲಿ ಎದುರಾಗಿ । ಮಾಚಯ್ಯ
ಗುಟ್ಟಿಲುಘೆ ಮಂತ್ರ ಜಪಿಸಿದನು ॥ ೩೯ ॥

ಉಘೇ ಗುರು ಪ್ರಭುದೇವ ಊಘೇ ಭಕ್ತಿನಿಧಿ ಬಸವ
ಊಘೇ ಜ್ಞಾನಿ ಚೆನ್ನಬಸವನೆ । ಊಘೆಲಿಂಗ
ಊಘೇ ಶರಣರೆ ಲಿಂಗವಂತರೆ ॥ ೪೦ ॥

ಹಿರಿಯರೇ ಸಲುಹಿರೈ ಕಿರಿಯ ಮಾಚನ್ನಿಂದು
ನರಭವಿಗಳೆನ್ನ ತಟ್ಟುವರು । ನಾಮುಂದೆ
ಕುರಿಗಳಿಗೆ ತಿಳಿಸಿ ಹರ ಮತವ ॥ ೪೧ ॥

ಸಿಟ್ಟಿನಲಿ ಸಿಡಿಗುಂಡ ಬಿಟ್ಟು ಬಿಡದಲೆ ಕಾರಿ
ಸುಟ್ಟ ಜಟ್ಟಿಗಳ ಆನೆಗಳ । ಬಿಜ್ಜಳನು
ಬಿಟ್ಟ ನಿಟ್ಟುಸರ ನಿಂತಲ್ಲಿ ॥ ೪೨ ॥

ಪಟ್ಟದಾ ಮದಗಜವ ಬಿಟ್ಟ ಬಿಜ್ಜಳರಾಯ
ರಟ್ಟೆಯಲಿ ಹಿಚುಕಿ ಎಳೆದೊಗೆದ । ಮಾಚಯ್ಯ
ಹುಟ್ಟಿದೀ ನರಲೋಕ ಕಲಿರುದ್ರ ॥ ೪೩ ॥

ಮಾರಿಮಸಿ ಹತ್ತುತಲಿ ದೂರ ಸರಿದಾಗರಸ
ನೀರ ಸಿಗದಂತೆ ಮಾಡುವೆನು । ಮಾಚನಿಗೆ
ಚಾರ ಕಾವಲಿಯ ಜಲಕಿಡಿಸಿ ॥ ೪೪ ॥

ಅರಸನಪ್ಪಣೆಯನ್ನು ಸಿರಬಾಗಿ ಹೊತಗೊಂಡು
ಸರನೆ ಸಾಗಿದರು ಸೇವಕರು । ಕಾವಲೆಯು
ಬರದಂತೆ ಗುಂಗಿ ನೀರ್ಗೆರಿಗೆ ॥ ೪೫ ॥

ಪಟ್ಟಣದ ಕೆರೆತೊರೆಯ ಕಟ್ಟು ಕಾವಲಿಗಿಟ್ಟ
ತಟ್ಟಂತ ನೀರು ಸಿಗದಂತೆ । ಮಾಡಿದರು
ಕೆಟ್ಟ ಪಿಸುಣಿಗರು ಮಾಚನಿಗೆ ॥ ೪೬ ॥

ಮಡದಿಯನು ಕರಕೊಂಡು ಕಡು ಭಕ್ತ ಮಾಚಯ್ಯ
ಬಿಡದೆ ತಿರುಗಿದನು ಕರೆತೊರೆಯ । ಕಾವಲೆಯು
ನಡೆದಿತ್ತು ಎಲ್ಲಿ ಹೋದಲ್ಲಿ ॥ ೪೭ ॥

ಅಂಗದೊಳು ಬೆರತಿರುವ ಲಿಂಗವೇ ನೀ ಗತಿಯು
ಭಂಗವಾಗುವದು ಕಾಯಕವು । ಹಿಪ್ಪರಗಿ
ಸಂಗ ನೀನೆನ್ನ ಸಲುಹಿಂದು ॥ ೪೮ ॥

ಹೊತ್ತು ಮುಣುಗುತ ಬಂತು ಬತ್ತಲೆಯ ಜಗಕೆಲ್ಲ
ಸತ್ಯ ನಂದಿಂದು ಹುಸಿಯಾತು । ಕಾಯಕದ
ಬುತ್ತಿ ತೀರಿತ್ತೈ ಈ ದಿನಕೆ ॥ ೪೯ ॥

ಮಾಚಯ್ಯನಾ ಮಡದಿ ಸೂಚನೆಯನೀಯುತಲಿ
ಯಾಚನೆಯು ಬೇಡ ಪತಿದೇವ । ನೀನೆನ್ನ
ನಾಚದಲೆ ಹಿಂಡು ಎದೆರಗುತ ॥ ೫೦ ॥

ಊರ ಮುಂದಿನ ಸರವು ಯಾರ ಸುಳಿವೇ ಇಲ್ಲ
ನೀರು ಸಿಗದಿನ್ನು ಪತಿದೇವ । ಎದೆರಗುತ
ನೀರಲರಿವೆಗಳ ತೊಳೆದ್ಹಾಕು ॥ ೫೧ ॥

ಹಡದಿ ಹಾಸಿದ ಮಾಚ ಮಡದಿಯೆದೆ ತಾಕೊಯ್ದು
ಒಡನೆ ಬಲು ಚಿಮ್ಮಿ ಬಿಸಿರಗುತ । ಹೊಳೆಯಾಗಿ
ಮಡುಗಟ್ಟಿ ನೀರ ಕೆರೆಯಾತು ॥ ೫೨ ॥

ನೀರ ಕಾಣುತ ಮಾಚ ತೀರಿಸಿದ ಕಾಯಕವ
ಆರಿಸರಿವೆಗಳ ಮಡಿಮಾಡಿ । ಕೂಗಿದನು
ಬಾರೆ ಸಂಗಡತಿ ತಡವಾತು ॥ ೫೩ ॥

ಬಸವಾದಿ ಪ್ರಮಥರಾ ಹಸನ ಪೂಜೆಗೆ ನಾವು
ನಸು ನಗುತ ಹೋಗಿ ತಲಪೋಣ । ಸಮಯದಲಿ
ನೊಸಲಗಣ್ಣನಿಗೆ ಬಾಗುದಕೆ ॥ ೫೪ ॥

ಅನ್ನುತನ್ನುತ ಮಾಚ ಮುನ್ನ ಮುನ್ನವೆ ಹೊರಟ
ಕಿನ್ನ ಕಿನ್ನರಿಯ ವೇಗದಲಿ । ಹೊತಗೊಂಡು
ಚೆನ್ನ ಬಸವರಿಗೆ ಶರಣೆಂದು ॥ ೫೫ ॥

ಮುನ್ನವೇ ಇದನರಿತ ಚೆನ್ನ ಬಸವಾದಿಗಳು
ನನ್ನೆಯಲಿ ಅಪ್ಪ ಮಾಚಯ್ಯ । ಬೀರಿದರು
ಉನ್ನತದ ಶರಣ ಮಂಟಪಕೆ ॥ ೫೬ ॥

ಅನುಭಾವ ಮಂಟಪಕೆ ಅನುನಯದಿ ಹಾಡುತಲಿ
ಬನವು ಕೂಗುತಲಿ ಮಾಚಯ್ಯ । ಶರಣೆಂದು
ಜನವಿಂದು ಭಜನೆ ಮಾಡುವದು ॥ ೫೭ ॥

ಮಡಿವಾಳ ಮಾಚಯ್ಯ ಧುಡವುಳ್ಳ ಶಿವ ಭಕ್ತ
ಮಡದಿಯನು ಕೊಂದು ರಗುತದಲಿ । ತಾ ತೊಳೆದ
ಒಡೆಯನೊಸ್ತಿರವ ಭಕತಿಯಲಿ ॥ ೫೮ ॥

ಪತಿಯ ಕಾಯಕ ಸೇರಿ ಮತಿವಂತಿ ಎದೆಗೊಟ್ಟು
ಗತಿಯ ಹೊಂದಿದಳು ಸಗ್ಗದಲಿ । ಶಿವಗಣವು
ಅತಿನುತಿಸಿ ಮಾನ ಸಲ್ಲಿಸಿತು ॥ ೫೯ ॥

ಮುತ್ತೈದಿ ನಿನ ಮರಣ ಎತ್ತ ಹೋದರು ಪೂಜೆ
ಕತ್ತೂರಿ ನಾತವಿದ್ದಂತೆ । ಜಗದೊಳಗೆ
ಉತ್ತಮರ ಮನಕೆ ಕಾಯಕವು ॥ ೬೦ ॥

ಮುಂಬರುವ ಸ್ಥಿತಿಗತಿಗೆ ಕಂಬ ಮಾಚನೆ ಬೇಕು
ನಂಬಿಗೆಯ ಧೀರ ಅವ ಬೇಕು । ಬಸವನಿಗೆ
ಮುಂದೆ ಕೂಡುದಕೆ ಶಿವಗಣಕೆ ॥ ೬೧ ॥

ಎಂದು ಹೇಳಿದ ಶಿವನು ಅಂದು ಕೂಡಿದ ಗಣಕೆ
ಇಂದು ಸರಿ ಉಂಟೆ ಸಗ್ಗದಲಿ । ಪೂಜಿಸಿರಿ
ಬಂದಿರುವ ಸತಿಗೆ ಕೈ ಮುಗಿದು ॥ ೬೨ ॥

ಹಡದಿ ಹಾಸಿದ ತಳವು ಮಡದಿಯಾ ನೆತ್ತರವು
ಮಡುವು ಮಾಚಯ್ನ ಕರೆಯೆಂದು । ಕಲ್ಯಾಣ
ಪಡುವಣಕೆ ಇಂದು ಮರೆಯುವದು ॥ ೬೩ ॥

ಮರುದಿನವೆ ಬಿಜ್ಜಳನು ಕರೆ ಕಳಸಿ ಬಸವನಿಗೆ
ನರಪಾಪಿ ನನ್ನ ಉಳಿಸೆಂದು । ಕೈ ಮುಗಿವೆ
ಶರಣ ಮಾಚನಿಗೆ ಕ್ಷಮಿಸೆಂದು ॥ ೬೪ ॥

ದಂಡ ನಾಯಕ ಬಸವ ಬಂಡು ಆದೆನು ನಾನು
ಕಂಡ ಜನ ಮಾತ ಕಿವಿಕೊಟ್ಟು । ಪಿತ್ತೇರಿ
ಹೆಂಡ ಕುಡಿದಂತೆ ಮಂಗನಿಗೆ ॥ ೬೫ ॥

ಮಂತ್ರಿ ಬಸವನೆ ಕೇಳು ತಂತ್ರಿಗಳ ಮಂತ್ರಗಳು
ಜಂತ್ರದಲಿ ತೆಲೆಯ ಕೊಟ್ಟಂತೆ । ಬೇಡಿನ್ನು
ತಂತ್ರದೊಡೆತನವು ಅರಸನಿಗೆ ॥ ೬೬ ॥

ಬಸವೇಶನಲ್ಲಮನಿಗೆ ಹಸಗೆಟ್ಟಿತೀಕಾಲ
ಮಸಣವಾಗುವುದು ಕಲ್ಯಾಣ । ಇಲ್ಲಿಂದ
ನುಸುಳುವದೆ ಲೇಸು ಶರಣರಿಗೆ ॥ ೬೭ ॥

ವಿಕ್ರಮಾ ವರುಷದಲಿ ಹೊಕ್ಕಿವೀ ಕಲ್ಯಾಣ
ವಕ್ರ ರಾಕ್ಷಸವು ಬರಲಿಂದು । ಕಲಿಕಾಲ
ನಕ್ಕು ಶರಣರನು ನುಂಗುವದು ॥ ೬೮ ॥

ಜಗದೇವ ಬೊಮ್ಮಯ್ಯ ಮಿಗಿಲಾದ ಮಾಚಯ್ಯ
ಬಗೆಸುವರು ಹಿತವ ಶರಣರಿಗೆ । ಬಿಜ್ಜಳನ
ನೆಗೆದು ಕೊಲ್ಲುವರು ಕದನಲಿ ॥ ೬೯ ॥

ಅಮರ ಗಣಗಳ ಕೂಡಿ ಗಮನಿಸಿದ ಶರಣರಿಗೆ
ಮಮತೆಯಲಿ ಕರೆಸಿ ತಿಳಿಸದನು । ಬಸವಯ್ಯ
ನಮಿಸಿ ಸಂಗಮಕೆ ಸಾಗಿದನು ॥ ೭೦ ॥

ಬಸವ ಪಯಣದಿ ಕೇಳು ಮಸಣವೆನಿಸಿತು ಊರು
ಗಸನೆ ಆ ಸುದ್ದಿ ಹರಡುತಲಿ । ಅರಸನಿಗೆ
ವಿಷಯ ತಿಳಿಲಿಲ್ಲ ಎಳ್ಳಷ್ಟು ॥ ೭೧ ॥

ಬಸವನನು ಚಿಂತಿಸುವ ವೆಸನದಲಿ ಮುಣಗಿರಲು
ಹೊಸ ಮಂತ್ರಿ ಚೆನ್ನ ಬಸವುಂಟು । ಬಿಜ್ಜಳಗೆ
ನಸುನಗುತ ನುಡಿಯ ವಾಲಗವು ॥ ೭೨ ॥

ಚೆನ್ನ ಬಸವನ ಕರೆಸಿ ಹೊನ್ನ ಕಡಗವ ಹಾಕಿ
ಇನ್ನು ಚೆನ್ನಬಸವ ದಂಡೇಶ । ಅರಸನಿಗೆ
ಸನ್ನುತಕೆ ಸಲಹೆ ಮಂತ್ರೀಶ ॥ ೭೩ ॥

ಖುಲ್ಲ ಬಿಜ್ಜಳರಾಯ ಬಲ್ಲವನು ಆಗುವನೆ
ಇಲ್ಲದಕೆ ಮತ್ತೆ ಕಿವಿಗೊಟ್ಟ । ಕೊಂಡಿಗಳು
ಅಲ್ಲಗಳೆಯುದಕೆ ಲಿಂಗಿಗಳ ॥ ೭೪ ॥

ಸಲ್ಲು ಸಲ್ಲಿಗೆ ಬಂದು ಸಲ್ಲಾದ ಮಾತೆತ್ತಿ
ನಿಲ್ಲದಲೆ ಚಾಡಿ ಹೇಳಿದರು । ಬಿಜ್ಜಳಗೆ
ತಲ್ಲಣಿಸಿ ಎದೆಯು ದಿನದಿನಕೆ ॥ ೭೫ ॥

ಮೆಚ್ಚಿದನು ಮಧುವರಸ ಹೆಚ್ಚಿನವ ಹರಳೆಂದು
ನೆಚ್ಚಿತಾ ಮಗಳ ಕೊಡಲೊಪ್ಪಿ । ಬೀಗತನ
ಇಚ್ಛೆ ಮಾಡಿದನು ಹೊನ್ನನಿಗೆ ॥ ೭೬ ॥

ಹರಳ ಮಧುವರಸನಿಗೆ ಮರುಳ ಮಾಡಿದನೆಂದು
ಹರಳ ಸಿಟ್ಟಿನಲಿ ಹಾರುವರು । ಬಿಜ್ಜಳಗೆ
ಕೆರಳಿ ಚಾಡಿಯನೆ ಹೇಳಿದರು ॥ ೭೭ ॥

ಹೊಲೆಯ ತಾ ಹರಳಯ್ಯ ಒಲಿಸಿ ಮಧುವರಸನಿಗೆ
ಹೊಲೆಯ ಹಚ್ಚಿದನು ಕುಲಕೆಲ್ಲ । ಎಳೆತರಿಸಿ
ಗಳುಪಿಸದೆ ಕಣ್ಣ ಕೀಳಿಸರಿ ॥ ೭೮ ॥

ಚೆನ್ನ ದಂಡಾಧಿಪನು ಕುನ್ನಿ ಅರಸನಿಗೆಂದ
ಹೊನ್ನು ಶಿವಶರಣ ಹರಳಯ್ಯ । ಕುಲವುಂಟೆ
ಜೊನ್ನ ತಲೆಯವನ ಭಕ್ತರಿಗೆ ॥ ೭೯ ॥

ಹರನ ಭಕ್ತರ ಮಹಿಮೆ ಒರಗೆ ಹಚ್ಚುವದುಂಟೆ
ಪರಿಕಿಸಲು ಉಂಟೆ ಫಣಿರತ್ನ । ಜಗದೊಳಗೆ
ತರಕಿಸಲು ಉಂಟೆ ಶಿವ ಭಕ್ತಿ ॥ ೮೦ ॥

ಪೆಂಗಿ ಬಿಜ್ಜಳ ಬೇಡ ನುಂಗುವುದು ಈ ಕಜ್ಜ
ಭಂಗವಾಗುವುದು ನಿನ ರಾಜ್ಯ । ಮನೆ ದೀಪ
ಇಂಗಿ ಹೋಗುವುದು ಕಡೆತನಕ ॥ ೮೧ ॥

ಕೇಳೆದೆಲೆ ಬಿಜ್ಜಳನು ಹೇಳಿ ಎಳೆ ತರಿಸಿದನು
ಕೀಳಿಸಿದ ಕಣ್ಣ ನಿಂತಲ್ಲೆ । ನೋಡದಲೆ
ಹೋಳಾತು ಶಿವಶರಣರೂಳಿಗವು ॥ ೮೨ ॥

ಮಾದರಸು ಹರಳಯ್ಯ ಹೋದ ದಿನ ಶಿವನಡಿಗೆ
ಬೀದಿ ಬೀದಿಗಳು ಕಿಡಿಕಾರಿ । ಕಲ್ಯಾಣ
ಗಾದಿ ಹೌಹಾರಿ ತಳಮಳಿಸಿ ॥ ೮೩ ॥

ಹೀನಗೆಲಸವ ಮಾಡಿ ಮಾನ ಪಡೆದೆನ್ನುತಲಿ
ನಾಣಿ ತನಗಾರು ಸರಿಯುಂಟೆ । ಜನದೊಳಗೆ
ಕಾಣೆಂಬ ಮಬ್ಬು ಮದವೇರಿ ॥ ೮೪ ॥

ಅಂದು ಸಂಜೆಗೆ ಶಿವನೆ ಹೊಂದಿ ಮಂಟಪ ಕೂಡಿ
ಬಂದ ಬವಣೆಯನು ಗಳೆಯುದಕೆ । ದಂಡೇಶ
ಸಂದಣಿಗೆ ಉಳವಿ ಸೇರೆಂದ ॥ ೮೫ ॥

ಬಿಚ್ಚಗತ್ತಿಯ ಮಾಚ ಕೆಚ್ಚೆದೆಯ ಬಂಟನವ
ರೊಚ್ಚ ಬೊಮ್ಮಯ್ಯ ಜಗದೇವ । ನಿಮ್ಮಾಣೆ
ನುಚ್ಚು ಬಿಜ್ಜಳನ ಕಡಿಯುವೆವು ॥ ೮೬ ॥

ಊಳಿಗವು ಹೊರಡುದಕೆ ನಾಳಿನಾ ಉದಯದೊಳು
ಕಾಳಗವು ಎಸಗೆ ಕೂಮತಕೆ । ಮಾಚಯ್ಯ
ಹೇಳಿ ಸಜ್ಜಾದ ಕಾಳಗಕೆ ॥ ೮೭ ॥

ಕಾಳರುದ್ರನು ಮಾಚ ಭಾಳಲೋಚನ ಭಕ್ತ
ಮೊಲ್ಲ ಬೊಮ್ಮಯ್ಯ ಜಗದೇವ । ಮನೆಹೊಕ್ಕು
ಸೀಳಿ ತಲೆಹೊಡೆದು ಬಿಜ್ಜಳನ ॥ ೮೮ ॥

ಅಳಿಯ ಬಿಜ್ಜಳರಾಯ ಕೊಲೆಯ ಕೇಳುತಲೆದ್ದ
ತಳಮಳಿಸಿ ಬಳಗ ಕೂಡಿಸಿದ । ದಂಡೆತ್ತಿ
ಉಳುವೆ ಬಳಿಯವರ ತಡೆಗಟ್ಟಿ ॥ ೮೯ ॥

ಕಾದರೊಳ್ಳಿಯ ಮುಂದೆ ಕಾದಿದರು ಜಂಗಮರು
ಕಾದಿ ಹಿಮ್ಮೆಟ್ಟಿ ಜೈನರನು । ಮುರಗೋಡ
ಹಾದಿಯೊಳು ಮುರಿದ ಮಾಚಯ್ಯ ॥ ೯೦ ॥

ತುಂಡ ಜಂಗಮದಂಡು ದಂಡನಾಯಕ ಮಾಚ
ಕಂಡಕಂಡಲ್ಲಿ ವೈರಿಗಳ । ಚೆಲ್ಲಿದರು
ಚಂಡು ಕಳೆಕೊಂಡ ಮರಿ ಅರಸ ॥ ೯೧ ॥

ಬೆನ್ನಹತ್ತಿದ ವೈರಿ ತಣ್ಣಗಾಯಿತು ಚೆದರಿ
ಮಣ್ಣಗೂಡಿಸಿದ ಮಾಚಯ್ಯ । ಕೈಯೆತ್ತಿ
ಚಿನ್ಹವುಳಿಸಿದನು ಲಿಂಗಿಗಳ ॥ ೯೨ ॥

ಹರಭಜನೆ ಗುರುಸೇನೆ ಉರುತರದಿ ಮಾಡುತಲಿ
ಶರಣಗಣ ಕೂಡಿ ಉಳಿವೆಯೊಳು । ಮರುದಿನವೆ
ಮೆರೆಸಿದರು ತತ್ವಮಂಟಪವ ॥ ೯೩ ॥

ಚೆನ್ನಬಸವೇಶ್ವರನು ಉನ್ನತನುಭಾವಿಗಳು
ಚಿನ್ನಮಯವಾತು ಆ ಉಳಿವೆ । ಲಿಂಗಿಗಳ
ಕನ್ನೆ ಭಕ್ತಿಯಾ ಗೂಡಾತು ॥ ೯೪ ॥

ಹರನ ಭಕ್ತರ ಮಹಿಮೆ ಮರಣದಲಿ ನೋಡೆಂದ
ಕರುಣೆಯಲಿ ಕಾಣೊ ಗುರುಭಕ್ತಿ । ಮಾಚನಿಗೆ
ಹರಸುತಲಿ ಹಾಡಿ ಶಿವಲೋಕ ॥ ೯೫ ॥

ಶಿವನೆ ಶಿವದ್ರೋಹರನೆ ಭವದೊಳಗೆ ಬೇಡಿನ್ನು
ತವಕದೊಯ್ಯಂದ ಮಾಚಯ್ಯ । ಹಿಪ್ಪರಗಿ
ಗವಿಯ ಸಂಗನೊಳು ಒಂದಾದ ॥ ೯೬ ॥

ಹೂವಿನಾ ಮಳೆಗರೆದು ಹೂವಿನಾ ರಾಶಾಗಿ
ದೇವ ಹಿಪ್ಪರಗಿ ಹೆಸರಾಗಿ । ಸಗ್ಗದಲಿ
ಹೂವಾದ ಮಾಚ ಶಿವಪದಕೆ ॥ ೯೭ ॥

ಶರಣ ಮಡಿವಾಟಾದ ಕರಿಬಂಟ ಕಣದೊಳಗೆ
ಹರಳಾದ ಕಣಕೆ ಬಿಳಿಬಂಟ ಅಲ್ಲಮನು
ಗುರುಬುದ್ಧಿವಂತ ಲಿಂಗಾದ ॥ ೯೮ ॥

ಹೊನ್ನೀಯ ಹುಳದಂಗ ಮುನ್ನೂರು ದೀವಟಗಿ
ಹೊನ್ನ ಹಿಪ್ಪರಗಿ ಬೈಯಲಾಗ । ಮಾಚಯ್ಯ
ಬನ್ನೀಯ ಮುಡಿದು ಬರತಾನೊ ॥ ೯೯ ॥

ಹಂತಿಯದು ಹಾಡೆಂದು ಪಂತಕಟ್ಟಲು ಬೇಡ
ಕಂತಿಕರಗುವದು ನಿಂತಲ್ಲೆ । ಮಾಚಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೧೦೦ ॥

ಶರಣು ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸರಿ ಶರಣ ಮಾಚಯ್ಯ । ನಮಗಿನ್ನು
ಹರಸರಿ ಹುಲುಸು ಹುಲ್ಲುಲ್ಲಿಗೊ ॥ ೧೦೧ ॥

– ಕೃತಿ: ಕನ್ನಡ ಜಾನಪದ ಗೀತಗಳು

***

ಮಡಿವಾಳ ಮಾಚಯ್ಯ

ಎದ್ದೊಡನೆ ನೆನೆವೇನು ಮುದ್ದು ಕಿಡಿಗಣ್ಣನ
ರುದ್ರಾಕ್ಷಿಕಂತೆ ಹಿಡಿಯುವನ – ನೆನೆದರೆ
ಹೊದ್ದಿದ್ದ ಪಾಪ ಪರಿಹಾರ

ಶಿಕ್ಷೆ ಗುರುವಿಗೆ ಶರಣು ಮೋಕ್ಷಗುರುವಿಗೆ ಶರಣು
ಶಿಕ್ಷೆ ನೇಮಿಸಿದ ಗುರುವಿಗೆ
ಶಿಕ್ಷೆ ನೇಮಿಸಿದ ಗುರುವಿನ ಪಾದಕೆ
ಮೋಕ್ಷದಿಂದಲೆ ಹೋಗಿ ಶರಣೆಂದೆ

ವಿದ್ಯೆ ಗುರುವಿಗೆ ಶರಣು ಬುದ್ಧಿ ಗುರುವಿಗೆ ಶರಣು
ಇದ್ಯ ಕಲಿಸಿದ ಗುರುವಿಗೆ
ಇದ್ಯ ಕಲಿಸಿದ ಗುರುವಿನನ ಪಾದಕೆ
ಎದ್ದೊಂದು ಘಳಿಗೆ ಶರಣೆಂದೆ

ಹರಹರ ಅನ್ನೋರ ನೆರೆಯಲ್ಲಿ ಇರಿಸಯ್ಯೊ
ಮರುಗ ಮಲ್ಲಿಗೆ ತಂದು ಶಿವನಿಗೆ – ಪಾದಪೂಜೆ ಮಾಡುವರ
ನೆರೆಯಲ್ಲಿ ನಮ್ಮ ಇರಿಸಯ್ಯ

ಪಂಚಾಕ್ಷರಿ ಎಂಬುವರ ಕಡೆ ಪಂಕ್ತಿಲಿ ಇರಿಸಯ್ಯ
ಪಂಚಪತ್ರೆ ತಂದು ಗುರುವಿಗೆ – ಪಾದಪೂಜೆ ಮಾಡುವರ
ಕಡೆಯ ಪಂಕ್ತಿಯಲಿ ನಮ್ಮ ಇರಿಸಯ್ಯ

ತುಂಬೆಯ ಹೂವ ತುಂಬ ಮೂಗಳ ಕೊಯ್ದೆ
ಮಲ್ಲಯ್ಯನ ಲಿಂಗಕ್ಕೆ ಧರಿಸುವೆ ಬೆನವಯ್ಯ
ನಿನ್ನಲ್ಲಿ ಎಳ್ಳಟ್ಟು ಮತಿಯ ಕೊಡು ನಮಗೆ

ಮಲ್ಲಿಗೆ ಹೂವ ತುಂಬ ಮೂಗಳ ಕುಯ್ದೆ
ನಮ್ಮ ಮಲ್ಲಿಕಾರ್ಜುನಗೆ ಧರಿಸುವೆ – ಬೆನವಯ್ಯ
ನಿಮ್ಮಲ್ಲಿ ಇದ್ದಟ್ಟು ಮತಿಯ ಕೊಡು ನಮಗೆ

ಹೆತ್ತವರ ಹಿರಿಯರ ಪಾದ ಮತ್ತೆ ಗುರುವಿನ ಪಾದ
ಹೊತ್ತಿರುವ ಭೂಮಮ್ಮ ನಿನ್ನ ಶ್ರೀಪಾದ – ನೆನೆದರೆ
ನಮಗೆ ಶತಕೋಟಿ ಕರ್ಮ ಪರಿಹಾರ

ಅತ್ತೆ ಮಾಮಯ್ನ ಪಾದ ಮತ್ತೆ ಗುರುವಿನ ಪಾದ
ಕುಂತಿರುವ ಸಭೆ ಜನರೆ ನಿಮ್ಮ ಶ್ರೀಪಾದ –ನೆನೆದರೆ
ನಮಗೆ ಶತಕೋಟಿ ಕರ್ಮ ಪರಿಹಾರ

ಮಡಿವಾಳ ಮಾಚಯ್ಯ ಅವನ ಮಡದಿ ಮಲ್ಲಿಗದೇವಿ
ಕೈಲಾಸದಿಂದ ಬರುತಾರೆ ಮಾಚಯ್ಯ
ಕಲ್ಯಾಣ ಪಟ್ಟಣದಲ್ಲೊಂದು ಮಠಕಟ್ಟಿ

ಕಲ್ಯಾಣ ಪಟ್ಟಣದಲ್ಲೊಂದು ಮಠಕಟ್ಟಿ ಮಾಚಯ್ಯ
ಶರಣರ ಮೈಲಿಗೆಯ ಒಗೆಯುತಾರೆ
ಕುಲಕೊಬ್ಬ ಶರಣರ ಕೋಟಿಗೊಬ್ಬ ಭಕ್ತರ
ಶರಣರ ಮಡಿಯ ಮಾಡುತಾರೆ

ಮಡಿವಾಳ ಮಾಚಯ್ಯ ಕಲ್ಯಾಣ ಪಟ್ಟಣಕ್ಕೆ ಬಂದರು
ಏಳೇಳು ಬೀದಿವೊಳಗೆ ಮಡಿಯನ್ನೆ – ಕೊಟ್ಟು ಬಿಟ್ಟು
ಮೈಲಿಗೆ ಎತ್ತೊಗೊಂಡು ನಮ್ಮ ಧರಗೆ ದೊಡ್ಡೋರ
ಗುರುಮಠಕಾಣೆ ಬರುವಾಗ

ನೀಲಮ್ಮ ತಾಯಿ ತಂದು ಆರತಿಯು ಬೆಳಗ್ಯಾಳೆ
ಯಾರಿಗೆ ಮಗನಪ್ಪ ಯಾರಿಗೆ – ಶಿಶುವಯ್ಯ
ಯಾವ ಹೆಚ್ಚಿನ ನೀನು ಘನ ಶರಣ

ಪಾರ್ವತಿಯ ಮಗನು ಪರಮೇಶ್ವರನ ಸುತನು
ದಕ್ಷಣನ ವೈರಿ ಈರಭದ್ರ – ಮಾಚಯ್ಯ
ಇಲ್ಲಿ ಶರಣ ಮೈಲಿಗೆ ಒಗೆಯುತೀನಿ

ನೀನು ಬಂದದ್ದು ಚಂದವಾಯಿತಯ್ಯ
ನಮ್ಮ ಮಠ ಮನೆ ಮೈಲಿಗೆ ಒಗಿಯಿರಯ್ಯ
ಅಕ್ಕನಾಗಮ್ಮನವರ ಗೊಂಬೆ ತೆರೆಯಬಣ್ಣ
ನಿವೊಪ್ಪದಿಂದ ಒಗೆಯೊ ಮಡಿವಾಳಿ

ಅಕ್ಕ ಚೋಳಕ್ಕನವರ ಕಾವಿಯ ದೇವಾಂಗ
ನೇಮದಿಂದ ಒಗಿಯೊ ಮಡಿವಾಳಿ

ತಾಯಿ ದೇವಮ್ಮನ ಪಟ್ಟೆಯ ದೇವಾಂಗ
ಬಹಳ ಒಪ್ಪದಿಂದ ಒಗೆಯೊ ಮಡಿವಾಳಿ

ನಮ್ಮ ಶರಣೆ ನೀಲಮ್ಮನವರ ಕಾವಿಯ ದೇವಾಂಗ
ಕಾವಿಯ ಕುಪ್ಪಸವ ನೀನಾದರೆ –ಮಡಿವಾಳಿ
ಬಹಳ ನೇಮದಿಂದ ನೀನೊಗೆಯೊ – ಎನುತೇಳಿ
ಕೊಟ್ರು ಮಾಚಯ್ನ ಹಸ್ತಕೆ

ಶರಣರ ಮೈಲಿಗೆನೆಲ್ಲ ಬಿಳಿಯಾನೆ ಮೇಲೇರಿದನು
ಮಠಮನೆ ಮೈಲಿಗೆ ಗಂಟು ಕಟ್ಟಿ –ಮಾಚಯ್ಯ
ಎತ್ತಿ ನೆತ್ತಿಯ ಮೇಲೆ ಒತ್ತುಗಂಡ

ದೊಡ್ಡಾನೆ ಹೊಡಕೊಂಡ ಮರಿಯಾನೆ ಅಟ್ಟಿಕೊಂಡು
ಕಡವಿನ ಬಳಿಗೆ ಬರುತಾನೆ – ಮಾಚಯ್ಯ
ಆಲದ ಮರಕೆ ಆನೆ ಬಿಗಿದಾನು ಮಾಚಯ್ಯ
ನೀರಿಗೆ ಮೈಲಿಗೆ ಉನಿಯಾಕಿ

ತೆಳ್ಳನೆ ಹೊಳವೀಗೆ ಒಳ್ಳೇಯ ಬಿಸಲೀಗೆ
ತೆಳ್ಳನೆ ಹೊಳವ ಬಿಸಲಿಗೆ – ಮಾಚಯ್ಯ
ಶರಣ ಮೈಲಿಗೆ ಒಗೆದು ಅರುವುತಾನೆ

ಹಳ್ಳದ ನೀರಿಗೆ ಒಳ್ಳೆಯ ಕಲ್ಲಿಗೆ
ನೆಟ್ಟನೆ ಹೊಳೆಯ ಬಿಸಲಿಗೆ – ಮಾಚಯ್ಯ
ಶರಣರ ಮೈಲಿಗೆಯ ಒಗೆದು ಹರವುತಾನೆ

ಅರಯ ಕಲ್ಲು ಮೇಲೆ ತಂದು ಹರವಿದನು ಮಾಚಯ್ಯ
ಕಡವಿನ ಬಳಿಯಲ್ಲಿ ಶರಣರು – ಮಡಿಮಾಡುವುದು
ನಮ್ಮ ಏಕ ಪರಂಜೋತಿಗೆ ಅರಿವಾದೊ

ಮಾಚಯ್ನ ದೃಢಮನವ ಈಗ ನೋಡುತಿನಂದು
ಆನಂದ ರೂಪವನು ತೊಟ್ಟರು ಅವರಾಗ

ಕೈಯೂವೆ ಸೊತ್ತುಗಳು ಕಾಲುವೆ ಕುಂಟುಗಳು
ಕಣಿವೆ ಕುರುಡುಗಳು ಅವರಿಗೆ ಮೈಯೆಲ್ಲ
ಕಜ್ಜಿ ಕುರುವಾದರೆ ತುಂಬಿರುವದು

ಮುನ್ನೂರು ಮುವತ್ತು ಕಂಡುಗ ನೊಣವನ್ನು
ಮುತ್ತಿಸಿಕೊಂಡು ಕೀವು ರಕ್ತಾವ – ಚೊಟ್ಟಿಡುತ
ಕಡವಿನ ಬಳಿಗೆ ಬರುತಾರೆ

ಕಿವಿಯಲಿ ಬಂಗಿಸೊಪ್ಪು ಕೈಲಿ ಸುರೆಯ ಗಡಿಗೆ
ಸತ್ತೆಮ್ಮೆ ಕರುವ ಹೆಗಲ ಮೇಲೆ – ಹೊತ್ತುಗಂಡು
ಕಡವಿನ ಬಳಿಗೆ ಅವರು ಬರುತಾರೆ

ಬರುವಂಥ ಗುರುಸ್ವಾಮಿ ಕಂಡನು ಮಾಚಯ್ಯ
ಬಂದು ಪಾದಕೆ ಶರಣನ್ನ

ಯಾರಿಗೆ ಮಗನಪ್ಪ ಯಾರಿಗೆ ಶಿಶುವಯ್ಯ
ಯಾವ ಹೆಚ್ಚಿನ ಘನ ಶರಣ

ಪಾರ್ವತಿಯ ಮಗನಯ್ಯ ಪರಮೇಶ್ವರನ ಸುತನು
ದಕ್ಷಣನ ವೈರಿ ಈರಭದ್ರ – ಮಾಚಯ್ಯ
ಶರಣರ ಮೈಲಿಗೆಯ ನಾನು ಒಗೆಯುತೀನಿ

ನೀನು ಬಂದದ್ದು ಚಂದಾಯ್ತು ಮಾಚಯ್ಯ
ನಮ್ಮ ಶಿವ ಕಂತೆನೆಲ್ಲ ಒಗೆಯಿರಯ್ಯ

ಕಾಶಿ ಹುಟ್ಟಿದನಿಂದ ಕೈಲಾಸ ಪಡೆದನಿಂದ
ಆಕಶ ಹುಟ್ಟಿದ ದಿನದಿಂದ – ಈ ಭೂಮಿಯ
ಪಡೆದ ದಿನದಿಂದ ನೀ ಕೇಳಯ್ಯ

ಭೂಲೋಕ ನಕ್ಷತ್ರ ಸೂರ್ಯ ಚಂದ್ರರುಗಳು
ನಮ್ಮ ಕಂತೆಯನಾದರೆ ಯಾರುವೆ – ಕೇಳಪ್ಪ ನೀನು ಘನಶರಣ
ಚಲುವೆಯ ಮಾಡಿಲ್ಲ ನೀನಾದರೆ ಚಲ್ವೆ ಮಾಡಪ್ಪ

ನೀಲಿಗಾಕಿ ಶರಣ ಹಿಂಡಿ ತಂದು ಕೊಟ್ಟಾರೆ
ಬಹಳ ಕೋಟಿ ಧರ್ಮ ಬರುತದೆ

ಮುಂದೆ ಬರುವ ಪಾಡ ತಿಳಿಯದೆ ಮಾಚಯ್ಯ
ಧರೆಗೆ ದೊಡ್ಡೋರ ಕರಣಾವು – ಮಂಡೆಯ ಮೇಲೆ
ಒದಗಿದರೆ ಕಂಡ ಭಾವವು ?

ಚಲಮೆ ಮಾಡಿ ಕೊಡುತೀನಿ ಗುರುಪಾದಕ್ಕೊಪ್ಪಿಸುತೀನಿ
ಲಿಂಗಯ್ಯ ಕಂತೆ ದಯಮಾಡಿ – ಎನುತೇಳಿ
ಎರಡಸ್ತವ ನೀಡಿ ಬೇಡಿದನು

ಸುಮ್ಮನೆ ಕಂತೆಯ ನಾವು ಕೊಟ್ಟರೆ ಮಾಚಯ್ಯ
ಇದರ ತೂಕ ತುಂಡು ಹ್ಯಾಗೆ ಕಾಣಬೇಕು – ಮಾಚಯ್ಯ
ತೂಕವ ಮಾಡಿ ಕೊಡುತೀನಿ

ಜೋಳಿಗೆ ಒಳಗಿದ್ದ ತರಾಸು ತಕ್ಕಡಿ ತೆಗೆದು
ಈ ಭೂಮಿತಾಯಿ ಒಚ್ಚಾರೆ ಎತ್ತಿ ಮಡಗಿದನು – ಪ್ರಭುದೇವ
ಶಿವಕಂತೆ ಒಚ್ಚಾರೆ ಮಡಗಿದನು

ಅಂತರಿಕ್ಷ ಮಾರ್ಗದೊಳಗೆ ನಿಂತುಕಂಡು ಪ್ರಭುದೇವ
ದೇವರು ತೂಗಿದರು ಶಿವಕಂತೆ

ಭೂಮಿ ತಾಯಿ ಏಳಂಗುಲ ಕಮ್ಮಿಯಾದಳಲ್ಲೊ
ಕಂತೆ, ಏಳಂಗುಲ ಹೆಚ್ಚಿ ಬಂದೊ

ಕಂತೆ ಮುತ್ತಿನ ಕಂತೆ, ಕಂತೆ ಚಿನ್ನದ ಕಂತೆ
ಕಂತೆಗೆ ಅಪರಂಜಿ ಸರಪಣಿ – ಸವದರೆ
ಆ ಕಂತೆಯ ಹೆಸರು ಕಲಿಬೀರಿ – ತಂತ್ರಿ ಮಂಟೇಸ್ವಾಮಿ
ಹೊದ್ದು ಕುಂತವರೆ ಕಂತೆಯ

ಈ ಕಂತೇಯ ತೂಕವ ನೀ ಕಂಡೀಯ ಮಾಚಯ್ಯ
ಈ ಶಿವಕಾಶಿ ಲೆಕ್ಕ ಹೇಳ್ತೀನಿ

ಹೇನು ಮೂಗಂಡುಗ ಕೂರೆ ಮೂಗಂಡುಗ
ಸೀರು ಮೂಗಂಡುಗ ಜೀವರಾಕ್ಷ

ಉಣ್ಣೆಯೆ ಮೂಗಂಡುಗ ಚಿಗುಟ ಮೂಗಂಡುಗ
ಅದರ ಮರಿಯಾದರೆ ಮೂರು ಕಂಡುಗವು – ಜೀವರಾಕ್ಷ
ಹದಿನೆಂಟು ಕಂಡುಗ ಇರುವೋದು

ಹದಿನೆಂಟು ಸಾವಿರ ಜೀವರಾಕ್ಷದೊಳಗಾದ್ರೆ
ಒಂದು ಸತ್ತಾರೆ ಕಂತೆ ಮುಟ್ಟೋದಿಲ್ಲ – ಮಾಚಯ್ಯ
ಸಾಯದೆ ಇದ್ರೂ ಕಂತೆ ನಾವೊಪ್ಪೋದಿಲ್ಲ

ಸೋಮವಾರದ ದಿನ ನೀ ಉಬ್ಬೆಯ ಸುತ್ತು ಮಾಚಯ್ಯ
ಶುಕ್ರವಾರದ ಪರಿಯಂತ ನೀ ಉಬ್ಬೆಯ ಕಾಯಯ್ಯ – ಮಾಚಯ್ಯ
ಒಗೆವ ಕಲ್ಲಿನ ಮೇಲೆ ನೀ ಕಂತೆ ಒಗಿಯಯ್ಯ

ಒಗೆವ ಕಲ್ಲಿನ ಮೇಲೆ ನೀ ಕಂತೆಯ ಒಗೆದಾರೆ
ಕಂತೆಯ ಒಳಗೆ ನೀ ಒಗೆಯದಿದ್ರು – ಮಾಚಯ್ಯ
ಕಂತೆಯ ನಾವು ಮೊದಲೊಲ್ಲೊ

ತಳಿಗಂಜಿ ಚಬಕಾರ ಮಾಡಿದ ಕಂತೆ ಒಲ್ಲೊ
ನೀಲಿ ರವೆ ಮಾಡಿದರೆ ಕಂತೆಯ ಮೊದಲೊಲ್ಲೊ

ಅಡಗೊಡತಿ ಮೇಲೊಂದು ಬಿಡುಗಡತಿ ತಕ್ಕೊಂಡು
ಗಡಸು ಗಳಿಗೆ ಮಾಡಿದರೆ ಕಂತೆ ಮೊದಲೊಲ್ಲೊ

ಒಗುಬಂದ ಯಾಳ್ಯಾದಲೆ ಮುಳ್ಳುತಕ್ಕೊಂಡು ನೀನು
ದಾಯನಾಡಿದರೆ ಕಂತೆ ಮೊದಲೊಲ್ಲೊ

ಸೋಮವಾರದ ದಿನಕೆ ಕಂತೆಯು ತಂದರೆ
ನೀ ತರದೆ ಇದ್ದಾರೆ ಕಂತೆ ಮುಟ್ಟುವದಿಲ್ಲ

ಕಟ್ಟುವರೆ ವಸ್ತ್ರವಿಲ್ಲ ಮಿಗಿಲೊಂದು ಕೈವಾಗಿಲ್ಲ
ಈ ಶಿವ ಕಂತೆ ಅಲ್ಲಾದರೆ ನಮಗೆ ಮೊದಲಿಲ್ಲ – ಮಾಚಯ್ಯ
ನೀ ಹ್ಯಾಗೆ ಮಾಡಿದರು ಸರಿಯೆ ಮಡಿವಾಳಿ

ನಾವು ಬೂದಿಯ ನಂಬ್ದೊ ನಮ್ಮ ಬೂದಿಯ ನಂಬ್ತು
ನೀ ಹ್ಯಾಗೆ ಮಾಡಿದರು ಸರಿಯೆ ಮಾಚಯ್ಯ

ಸೋಮವಾರದ ಬಿನ್ನಕೆ ಕಂತೆ ತರಬೇಕೆನುತೇಳಿ
ಭೂಮಿಗೆ ದೊಡ್ಡೋರು ನುಡಿದವರೆ

ಧರಗೆ ದೊಡ್ಡೋರ ಮಾತ ಕೇಳಿದರು ಮಾಚಯ್ಯ
ಧರೆ ಕಂಪಲಾಗಿ ಮಲಗ್ಯವನೆ

ತನ್ನ ಮೂರ್ಚೆಯ ತಾನು ತಿಳಿದೆದ್ದನು ಮಾಚಯ್ಯ
ಆ ಘನ ಶರಣ ಏನ ನುಡಿದನು

ನಾನಾರು ಕಂತೆಯ ಒಗೆದೆನು ನನ್ನೊಡೆಯ
ನನ್ನ ಮಡದಿ ಮಲ್ಲಿಗೆಯ ಮಾದೇವಿ – ಗುರುಸ್ವಾಮಿ
ಊರಿಗೆ ಗಂಜಕ್ಕಿ ತರಲೋಗಿ ಬಂದಿಲ್ಲ
ಮಡದಿ ಬಂದಲ್ದೆ ಕಂತೆ ಎಡೆಯಲ್ಲ

ಮಡದಿಯಾಗುವೆ ನೀನೆ ಪುರುಷನಾಗುವೆ ನೀನೆ
ಕೊಳ್ಳೊ ಮಾಚಯ್ಯ ನಿನ್ನ ಹಸ್ತಕೆ – ಎಂದರೆ
ತಡಿಯ ಮೇಲೆ ನೀವು ಕಂತೆಯನಾದರೆ
ಮಡಗಿ ನಿಮ್ಮ ಮಠಕೆ ಬಿಜುಮಾಡಿ

ಒಂದು ಜಲ್ಲು ದಾರ ಬಿದ್ದಾರು ತೂಕ ಕಡಿಮೆಯು ಕಾಣೊ
ಕೊಳ್ಳೊ ಮಾಚಯ್ಯ ನಿನ್ನ ಹಸ್ತಕೆ

ಯಾಕೋ ಕಾಣೆ ಮಂಚಯ್ಯ ಕಂತೆಯು ಹಿಡಿಯೋದಿಲ್ಲ
ಕಂತೆ ಹಿಡಿವಂತ ಗ್ಯಾನ ಕೊಡುತಾರೆ

ಸಡಗರದಿಂದಲಿ ನೆಗೆದೆದ್ದ ಮಾಚಯ್ಯ
ಎರಡಸ್ತವ ನೀಡಿ ಬೇಡಿಕಂಡ

ಮಡಿವಾಳ ಮಾಚಯ್ನ ಹಸ್ತವ ಮೇಲಾದ್ರೆ
ಶಿವಕಂತೆ ಮಡಗಿದರು ಪ್ರಭುದೇವ

ಏಕೋ ಪರಂಜೋತಿ ಮಾಯವಾದರಂತೆ
ಮಾಚಯ್ನ ದೃಢಮನವ ಈಗ ನೋಡಬೇಕು – ಅನುತೇಳಿ
ನಮ್ಮ ಭೂಮಿಗೆ ದೊಡ್ಡೋರು ನುಡಿದಾರು

ಕಡುವಿನ ಬಳಿಯಲ್ಲಿ ಚಂದಂಗಿನ ಸುಳಿಮ್ಯಾಲೆ
ಹೋಗಿ ಮೂರ್ತವಾದರು ಪ್ರಭುದೇವ

ಕಳಿಯಕೆ ಬರನಿಲ್ಲ ಸಾಲುಳಿಯಕ್ಕೆ ಬರನಿಲ್ಲ
ಭೂಮಿಗೆ ದೊಡ್ಡೋರ ಶಾಪಕೆ – ಸಿಕ್ಕೋದೆನಲ್ಲೋ
ಎನುತೇಳಿ ಶೋಕವ ಮಾಡುತಾನೆ

ಕರಿಯ ಕಂಬಳಿ ತಂದ ಮುರಿದು ಗದ್ದುಗೆ ಮಾಡಿ
ಆ ದೇವರು ಕಂತೆಯ ಪೂಜೆಯಮಾಡಿ – ಮಾಚಯ್ಯ
ಸಾಂಬ್ರಾಣಿ ಬೆಳಗಿ ಶರಣೆನ್ನ

ಶರಣರ ಮೈಲಿಗೆಯ ಒಗೆದು ಹರವಿದನಲ್ಲ
ಒಳ್ಳೊಳ್ಳೆ ಮಡಿಯ ಎಳೆತಂದ ಮಾಚಯ್ಯ
ಹಾಸಿಗೆ ಸುಪ್ಪತ್ತಿಗೆ ಮಾಡಿ ಮಡಗ್ಯವನೆ – ಮಾಚಯ್ಯ
ಭೂಮಿಗೆ ದೊಡ್ಡೋರೆ ಗತಿಯನ್ನ

ಭೂಮಿಗೆ ದೊಡ್ಡೋರೆ ನಿಮ್ಮ ಶ್ರೀಪಾದಕೆ ಗತಿಯನ್ನ
ಬಲಮಗ್ಗಲಾಗಿ ಮಲಗ್ಯವನೆ

ಕಡವ ಬಳಿಯಲ್ಲಿ ಶರಣರು ಕಡು ಚಿಂತೆಮಾಡುವುದು
ಮಡದಿ ಮಲ್ಲಿಗೆ ದೇವಿಗೆ ಅರುವಾದೊ – ಕಾಲದಲಿ
ಆ ಮಲ್ಲಿಗೆ ಮಾದೇವಿ ಏನ ನುಡಿದಳು

ಎಂದೆಂದು ಶರಣರು ಊಟಕೆ ಬರುತಿದ್ರು
ಇಂದೇನೊ ಕಾಣೆ ಬರನಿಲ್ಲ

ಯಾವಾಗ ಸಜ್ಜನರು ಮಜ್ಜನಕೆ ಬರುತಿದ್ರು
ಇಂದೇನೋ ಕಾಣೆ ಬರನಿಲ್ಲ – ಎನುತೇಳಿ
ಮಲ್ಲಿಗೆ ಮಾದೇವಮ್ಮ ನುಡಿದಳು

ಶರಣ ಮೈಲಿಗೆ ಹೆಚ್ಚಾದವೊ ಏನೊ
ನಮ್ಮ ಶರಣರು ಹೋಗಿ ಬರನಿಲ್ಲ

ತುಂಡು ಕೆಲಸಕೆ ಹೋಗಿ ನೆರವಾಗಬೇಕು ಅಂದು
ರಂಭೆ ಮಾದೇವಮ್ಮ ನುಡಿದಳು

ಆದಂಥ ಅಡುಗೆಯ ಹೊಸ ಕುಕ್ಕೆಗೆ ತುಂಬಿದಳು
ಪಟ್ಟೆ ದೇವಾಂಗ ಮುಸುಗಿಟ್ಟು – ಮಾದೇವಿ
ಈರ ಸಂಗಯ್ನ ಮಠಕೆ ಬರುತಾಳೆ – ಮಾದೇವಿ
ಮಗನ ಈರಭದ್ರನ ಕ್ವಾಮಾರನ ಕರದವ್ಳೆ

ಹಾಲು ಕೊಟ್ಟಳು ತಾಯಿ ಮಗನಿಗೆ ಆಗಲೆ
ಈರಸಂಗಯ್ನ ಮಠಕೆ ಕಳುವಿದರು

ಒಂದು ಮೂಗುತ್ತದ ಬಳಿಗೆ ಬರುತಾಳೆ ಮಾದೇವಿ
ಬಂದು ಕಾಳಿಂಗ ಸರ್ಪನ ಹಿಡಿದಳು – ಮಾದೇವಿ
ತನ್ನ ಗುರುಮಠಕೆ ಬರುತಾಳೆ

ಶರಣ ಪರಿವಾರ / ೧೮೬

ಕಾಳಿಂಗ ಸರ್ಪನ ನುಲಿದು ಸಿಂಬೆಯಮಾಡಿ
ನೆತ್ತಿಯ ಮೇಲೆ ಇರಿಸಿದರು

ನೆತ್ತಿಯ ಮೇಲೆ ಸರ್ಪನ ಸಿವುಡುಮಾಡಿ
ಅನ್ನದ ಕುಕ್ಕೆಯ ತಲೆಮ್ಯಾಲೆ – ಹೊತ್ತುಗೊಂಡು
ಕಡವಿನ ಕಡೆಗೆ ಬರುತಾಳೆ

ಆಲದ ಮರಕೆ ಆನೆಯು ಬಿಗಿದೈತೆ
ಕಡವಿನ ಬಳಿಗೆ ಬಂದಳು ಮಾದೇವಿ
ಅನ್ನ ಕುಕ್ಕೆಯ ಇಳಿಮಡಗಿ

ಸರ್ಪನ ಶಿವುಡನೆ ಭೂಮಿಯ ಮೇಲೆ ಮಡಗಿ
ಅದರ ಮೇಲೆ ಅನ್ನದ ಕುಕ್ಕೆಯ – ಇಟ್ಟಳು
ಪುರಷರ ಬಳಿಗೆ ಬಂದಳು

ಪುರುಷರ ತಲೆದಸಿಲಿ ಕುಂತುಗಂಡು ಮಾದೇವಿ
ಕಂಡು ಕಂಡಾಳು ತಾಯಿ ನೆನು ಮುಖವ

ಪುರುಷರ ಮುಖದ ಮುಸುಗನ್ನೆ ತೆಗೆದಳು
ಎಂದೆಂದು ನಿಮ್ಮ ಮುಖವಾದ್ರೆ – ಚಂದ್ರನ ಪ್ರಕಾಶ
ಇಂದ್ಯಾಕೆ ಸ್ವಾಮಿ ಕಂದು ಕರಗೋದೊ

ಯಾವಾಗ ನಿಮ್ಮ ಮುಖ ಸೂರ್ಯನ ಪ್ರಕಾಶ
ಇಂದ್ಯಾಕೆ ಸ್ವಾಮಿ ಕದಲಿದೊ – ಹಾಗನುತ
ರಂಬೆ ಮದೇವಮ್ಮ ನುಡಿದಳು

ಹೆಣ್ಣೆ ನಿನ್ನಂಗು ನನಗ್ಯಾಕೆ ನಿನ್ನ ಮಠದಂಗು ನನಗ್ಯಾಕೆ
ಮಗ ಈರಭದ್ರನ ಹಂಗು ಮೊದಲ್ಯಾಕೆ – ಮಾದೇವಿ
ಚಂದಾಗಿ ಬಾಳೋಗೆ ನಿನ್ನ ಮಠದಲ್ಲಿ

ನಿಮಗೆ ಬಂದ ಕಷ್ಟ ನಮದಲ್ಲವೆ ನನ್ನೊಡಯ
ನಮಗೆ ಬಂದ ಕಷ್ಟ ನಿಮದಲ್ಲವೆ

ಆದುದಾದರು ಏನು ನಮ್ಮೊಡನೆ ಉಸುರಯ್ಯ
ಕಲ್ಯಾಣ ಪಟ್ಟಣದಿಂದ ಮಡಿಯನ್ನೆ – ಕೊಟ್ಟು ಬಿಟ್ಟು

ನೀನು ಮೈಲಿಗೆ ತರುವಾಗ – ಯಾವ ಶರಣರು
ನಿನ್ನನಾದರೆ ಜರಿದರು

ಯಾವ ಶರಣರು ಕೊಂದರು ಯಾವ ಶರಣರು ಬೋದರು
ಅದೇನು ನನ್ನೊಂದಿಗೆ ಉಸಿರಯ್ಯ

ಎಲೆ ಹಣ್ಣು ಜಂಗಮನಲ್ಲ ಕ್ವಾಣ ಬಸವನು ಅಲ್ಲ
ನಿನ್ನೊಂದಿಗೆ ಹೇಳಿದರೆ ಫಲವೇನೆ – ಮಾದೇವಿ
ಚಂದವಾಗಿ ಬಾಳೋಗೆ ನಿನ್ನ ಮಠದಲ್ಲಿ

ನನ್ನೊಂದಿಗೆ ಹೇಳಿದರೆ ನಾನೆ ಹಾರಿಸಬಲ್ಲೆ
ನಾನೆ ತೀರಿಸಬಲ್ಲೆ ತಿಳಿಯಯ್ಯ – ನನ್ನೊಡಯ
ಅದೇನು ನನ್ನೊಂದಿಗೆ ಉಸುರಯ್ಯ

ನೆಂಬ ನಾರಿ ಹೆಣ್ಣೆ ನೆಂಬ ನಾರಿ ಚಲ್ವೆ
ನೆಂಬಿಗೆ ತಾರೆಣ್ಣೆ ನಿನ್ನ ಬಲಗೈಯ – ಎಂದರೆ ತಾಯಿ
ನೆಂಬಿಗೆ ಕೊಟ್ಟರು ಬಲಗೈಯ

ಮಡದಿ ಮಲ್ಲಿಗೆ ದೇವಿ ಕೈಲಿ ಭಾಷೆಯ ತೆಗೆದುಕೊಂಡು.
ಭೂಮಿಗೆ ದೊಡ್ಡೋರೆ ಗತಿಯನ್ನ

ಧರೆಗೆ ದೊಡ್ಡೋರೆ ನಿಮ್ಮ ಶ್ರೀಪಾದ ಗತಿಎಂದು
ಬಲ ಮಗ್ಗುಲಾಗಿ ಶರಣ ಎದ್ದುಕುಂತ

ಬಲ ಮಗ್ಗುಲಾಗಿ ಎದ್ದಾನು ಮಾಚಯ್ಯ
ಕೇಳೆಣ್ಣೆ ಅದರ ತರಗೋಳ

ಕಲ್ಯಾಣ ಪಟ್ಟಣಕೆ ಹೋಗಿದ್ದೆ ಮಾದೇವಿ
ಮಡಿಯ ಕೊಟ್ಟು ಮೈಲಿಗೆ ತಂದೆನಲ್ಲೆ

ಕಡವಿನ ಬಳಿಯಲ್ಲಿ ಶರಣರ ಮಡಿ ಇಡುವಾಗ
ಒಬ್ಬ ಹುಚ್ಚು ಬೆಪ್ಪಿನ ಒಡೆಯ ಬಂದನಲ್ಲೆ

ಕಾಶಿ ಹುಟ್ಟಿದನಿಂದ ಕೈಲಾಸ ಪಡೆದನಿಂದ
ಭೂಲೋಕ ಹುಟ್ಟಿದನಿಂದ ನಕ್ಷತ್ರ ಹುಟ್ಟಿದನಿಂದ

ಸೂರ್ಯ ಹುಟ್ಟಿದನಿಂದ ಚಂದ್ರ ಹುಟ್ಟಿದನಿಂದ
ನಮ್ಮ ಕಂತೆಯ ಯಾರು ಚಲುವೆಯ – ಮಾಡಲಿಲ್ಲ
ನೀನಾರ ಚಲುವೆಯ ಮಾಡೆಂದರಾಗ

ನಾ ಮುಂದೆ ಬರುವ ಪಾಡ ತಿಳಿಯದೆ ಮಾದೇವಿ
ಎರಡಸ್ತನೀಡಿ ಬೇಡಿಕೊಂಡೆ

ಈ ಕಂತೆಯ ತೂಕವ ನೀ ಕಂಡೀಯ ಮಾಚಯ್ಯ
ಶಿವಕಾವಿ ಲೆಕ್ಕವ ಹೇಳ್ತೀವಿ ಕೇಳು

ಹೇನು ಮೂಗಂಡುಗ ಕೂರೆ ಮೂಗಂಡುಗ
ಸೀರು ಮೂಗಂಡುಗ ಜೀವರಾಕ್ಷ

ಹುಣ್ಣಿ ಮೂಗಂಡುಗ ಚಿವುಟ ಮೂಗಂಡುಗ
ಅವರ ದುರಿಯೆ ಮೂಗಂಡುಗ ಜೀರರಾಕ್ಷ

ಮಣ್ಣಿನಲಿ ಹದಿನೆಂಟು ಕಂಡುಗ ಜೀವರಾಕ್ಷದೊಳಗೆ
ಒಂದು ಸತ್ತರೆ ಕಂತೆ ಮುಟ್ಟೋದಿಲ್ಲ – ಮಾಚಯ್ಯ
ಸಾಯ್ದೆ ಇದ್ದರೂ ಕಂತೆ ವೊಪ್ಪೋದಿಲ್ಲ

ಸ್ವಾಮುವಾರದ ದಿನ ನೀ ಉಬ್ಬೆ ಸುತ್ತು ಮಾಚಯ್ಯ
ಶುಕ್ರವಾರ ಸರಿಯಂತ ನೀ ಉಬ್ಬೆಕಾಯ್ಸು – ಮಾಚಯ್ಯ
ಒಗೆವ ಕಲ್ಲಿನ ಮೇಲೆ ಕಂತೆ ಒಗೆಯಯ್ಯ

ಒಗೆವ ಕಲ್ಲಿನ ಮೇಲೆ ಕಂತೆಯ ಒಗೆದರೆ
ಕಂತೆಯ ನಾನು ಒಲ್ಲೆನಲ್ಲ – ಮಾಚಯ್ಯ
ನೀ ಒಗೆಯದಿದ್ದರೂ ಕಂತೆ ನಾನೊಲ್ಲೆ

ತಳಿಗಂಜಿ ಚಬಕಾರ ಮಾಡಿದ ಕಂತೆ ಒಲ್ಲೊ
ನೀಲಿ ರವೆ ಮಾಡಿದರೆ ಮೊದಲೊಲ್ಲೊ

ಅಡಗೊಡತಿ ಮೇಲೆ ಒಂದು ಬಡುಗೊಡತಿ ತಕ್ಕೊಂಡು
ಗಟ್ಟಸುಗಳಿಗೆ ಮಾಡಿದರೆ ಕಂತೆ ಮೊದಲೊಲ್ಲೆ
ಹೋಗು ಒಂದು ಯಾಳ್ಳ ತ್ರಿಮುಳ್ಳ ತಕ್ಕೊಂಡು

ದಾಯವಾಡಿದರೆ ಕಂತೆ ಮೊದಲೊಲ್ಲೆ

ಸೋಮುವಾರದ ಬಿನ್ನಕೆ ನೀ ಕಂತೆಯ ತರದಿದ್ದರೆ
ಈ ಕಂತೆಯ ನಾವು ಮುಟ್ಟೋದಿಲ್ಲ – ಅನುತೇಳಿ
ಹುಚ್ಚು ಬೆಪ್ಪಿನ ಒಡೆಯರು ನುಡಿದವರೆ

ಅಂದದಲಿ ಅತಿ ಚಲ್ವೆ ರಂಬೆ ಕೇಳೆ ಮಾದೇವಿ
ಯಾವ ಭಾವದಲಿ ಚಲವೆ ಮಾಡಬೇಕೆ

ಅವರ ಕಂತೆಯ ಚೆಲ್ವೆಯ ಮಾಡಬಾರ್ದು
ಪಟುವಲ ದೇಶಕೆ ಕದ್ದು ಓಡೋಗುವ

ಅಂದದಲಿ ಅತಿ ಚಲ್ವೆ ರಂಬೆ ಕೇಳೆ ಮಾದೇವಿ
ಮನದಲ್ಲಿ ಅದನೆ ಯೋಚಿಸಿದ್ದೆ

ಪಡುವಲ ದೇಶಕೆ ಕದ್ದು ಓಡುವ ನಡಿಯೆ
ನನ್ನ ಮನದಲ್ಲು ಹಾಗೆಯ ಅನುತಿದ್ದೆ
ಹುಚ್ಚು ಮಡಿವಾಳಿ ಹೋಗೊ ಬೆಪ್ಪು ಮಡಿವಾಳಿ ಹೋಗೊ
ಈ ಸೀಮೆಯವರದು ಕಾಣಿರಯ್ಯ – ಮಾಚಯ್ಯ
ಈ ಭೂಮಿ ಅವರದು ಕಾಣಿರಯ್ಯ

ಈ ಭೂಮಿಯ ಅಗೆದು ಒಕ್ಕರೂವೆ ಬಿಟ್ಟಾರೆ
ಅವರ ಕಂತೆಯ ನಾವು ಚಿಲುಮೆಯ – ಮಾಡದಿದ್ದರೆ
ಕೈಲಾಸ ನಮಗೆ ಹೊರಗಯ್ಯ

ಅವರ ಕಂತೆಯ ನಾವು ಚಲುಮೆಯ ಮಾಡದಿದ್ರೆ
ಕಲ್ಯಾಣ ನಮಗೆ ಹೊರಗಯ್ಯ

ಅವರ ಕಂತೆಯ ಒಗೆದು ಮುಕ್ತಿಯ ಹೊಂದಬೇಕು
ಕಂತೆ ಒಗೆವುದ ನಾನು ಹೇಳುತೀನಿ – ಮಾಚಯ್ಯ
ಲಿಂಗದಗ್ಗಣಿಗೆ ಕೈಕೊಂಡು

ನೆಂಬನಾರಿ ಹೆಣ್ಣೆ ನೆಂಬನಾರಿ ಚಲುವೆ
ನೆಂಬಿಗೆ ತಾರೆಣ್ಣೆ ಬಲಗೈಯ – ಅಂದಾರೆ
ನೆಂಬಿಗೆ ಕೊಟ್ಟಳು ತಾಯಿ ಬಲಗೈಯ

ಮಡದಿಯ ಕೈಯಲ್ಲಿ ಭಾಷೆಯ ತಕ್ಕೊಂಡು
ತಾನ ಮಡಿಗಳನೆ ಮಾಡಿದನು

ತಾನ ಮಡಿಗಳ ಮಾಡಿ ಮೀದು ಮಡಿಗಳ ಉಟ್ಟು
ಸಜ್ಜೆಗೆ ಲಿಂಗವ ಅಳವಡಿಸಿ – ಮಾಚಯ್ಯ
ತನ್ನ ಲಿಂಗ ಶಿವಪೂಜೆ ಬಿಟ್ಟು ಈಚೆ ಬರುತಾನೆ

ಶಿವಪೂಜೆಯಬಿಟ್ಟು ಈಚೆಗೆಬಂದ ಮಾಚಯ್ಯನಿಗೆ ತಾಯಿ
ಒಪ್ಪದಿಂದೆಡೆಯ ಪಡಿಸಿದರು

ಒಂದು ಬಾಳೆಲೆಯ ಮೇಲೆ ಒಂಬತ್ತು ಕಜ್ಜಾಯ
ಬಂದಳದ ಮೊಸರು ಎರೆದುಪ್ಪ– ರಾಜೀರುಳ್ಳಿ
ತಂದು ಮಮಚಯ್ಯನಿಗೆ ಎಡೆಮಾಡಿ

ಆರಾಗ್ರ ಮೇಲಾಗ್ರ ಮೊದಲಾದ ಹೆರೆದುಪ್ಪ
ಕೀರು ಸ್ವಾಮಿಗೆ ತನಿಹಾಲು – ಬೆಲ್ಲದಪಾಯಿಸ
ನಾನಾ ಪರಿಯದಲಿ ಎಡೆಯಾಯ್ತು

ಸಣ್ಣಕ್ಕಿ ಸಾದರ ಬೆಣ್ಣೆ ಕಾಯಿಸಿದ ತುಪ್ಪ
ಒಪ್ಪದಿಂದೆಡೆಯ ಪಡಿಸಿದರು

ಹದ್ನಾರು ಬಗೆಯ ಪದಾರ್ಥಗಳನಾಗ
ಎಡೆಯ ಮಾಡಿದರು ಅಮ್ಮಯ್ಯ – ಮಾದೇವಮ್ಮ
ಸಾಂಬ್ರಾಣಿ ಬೆಳಗಿ ಶರಣೆಂದ್ಲು – ಮಾದೇವಮ್ಮ
ಪಾವನ್ನ ಮೂರ್ತಿ ನೀ ಸಲಿಸಯ್ಯೋ

ಕೇಳಯ್ಯ ಘನಶರಣ ಕೇಳಯ್ಯ ಮಾಚಯ್ಯ
ಈಗ ಹೇಳುವೆ ನನ್ನ ನಿಜಗೋಳ

ನಾನೂವೆ ನೀನೂವೆ ಹೊನುಗೂಡಿ ಕೇಳಯ್ಯ
ಇಂದೀಗೆ ಇಪ್ಪತ್ನಾಕು ವರ್ಷವು – ಮಾಚಯ್ಯ
ಹೊಂದಿಗೆ ಊಟವ ಮಾಡಬೇಕು

ನೀನು ಹೆಂಗಸು ಅಲ್ಲೆ ನಾನು ಗಂಡಸು ಅಲ್ಲೆ
ನನ್ನ ಹೊಂದಿಗೆ ನೀನು ಉಣ್ಣುವ ಬಗೆ ಹೇಗೆ

ಗಂಡನ ದೃಢವು ಹೆಂಡತಿಯ ದೃಢವು
ಬೇರೆ ಬೇರೆಯೆ ಆದರೆ – ನನ್ನೊಡೆಯ
ದೇವರು ಕಂತೆಯ ಒಪ್ಪೋದಿಲ್ಲ

ಇಬ್ಬರ ದೃಢವು ಒಂದೇಯ ಆದರೆ
ಧರೆಗೆ ದೊಡ್ಡೋರು ಕಂತೆ ಒಪ್ಪುತಾರೆ

ಸತಿ ಪತಿಯರು ಇಬ್ಬರು ಹೊಂದುಗೂಡಿ
ಕಡಬಿನ ಬಳಿಯಲ್ಲಿ ಹೊಂದಿಗೆ – ಭೋಜಣವ
ಆಗ ಅವರಿಬ್ಬರುವೆ ಸಲಿಸಿದರು

ಕಡಬಿನ ಬಳಿಯಲ್ಲಿ ಭೋಜಣವ ಸಲಿಸಿ ಮಾದೇವಮ್ಮ
ಅಂಗೈ ಹಸ್ತವ ಹಲುಬಿದರು ಮಾದೇವಮ್ಮ
ಒಂದು ಮಡಿಯಮೇಲೆ ಕುಳಿತರು

ಒಂದು ಮಡಿಯಮೇಲೆ ಸತಿಪತಿಯರು ಕೂತುಗಂಡು
ಹೊಂದಿಗೆ ಈಳ್ಯವ ಸಲಿಸಿವರೆ

ಅಂದದಲಿ ಅತಿಚಲ್ವೆ ರಂಬೆ ಕೇಳೆ ಮಾದೇವಿ
ನಾ ಯಾವ ಬಗೆಯಲಿ ಚಲುವೆ ಮಾಡಬೇಕು

ನಿನ್ನ ಕಣ್ಣಿಗೆ ಬೇಕಾದ ಒಂದು ಮಡಿಯ ತಕ್ಕೊಂಡು
ರುದ್ರಾಕ್ಷಿ ಮಠವ ಕಡೆದೋಗು – ನನ್ನೊಡೆಯ
ಬದ್ರಾಕ್ಷಿ ಮಠವ ಕಡೆದೋಗು

ಗುಂಡುಬ್ರಹ್ಮಯ್ನ ಮಠಕೋಗಿ ನೀವಾದ್ರೆ
ಅವನಿಗೆ ಬೇಕಾದ ಒಂದು ಮಡಿಯನ್ನೆ – ಕೊಟ್ಟುಬಿಟ್ಟು
ಒಂದು ಚೌಳು ಬಾನಿಯ ನೀ ತಗತತ್ತ

ಒಂದು ಚೌಳು ಬಾನಿಯ ತಂದರೆ ಮಾಚಯ್ಯ
ಆಗ ಹೇಳುವೆ ಅದರ ತೆರಗಳ

ಬೇಕಾದ ಒಂದು ಮಡಿಯ ತಕ್ಕೊಂಡು ಮಾಚಯ್ಯ
ರುದ್ರಾಕ್ಷಿ ಮಠವ ಕಡೆದನು – ಮಾಚಯ್ಯ
ಬದ್ರಾಕ್ಷಿ ಮಠವ ಕಡೆದನು – ಮಾಚಯ್ಯ
ಗುಂಡುಬ್ರಹ್ಮಯ್ನ ಮಠಕೋದ

ಮಡಿವಳ ಮಾಚಯ್ಯ ಕಂಡನು ಗುಂಡುಬ್ರಹ್ಮಯ್ಯ
ಒಂದನೆ ಕರವ ಮುಗಿದನು

ನಿನ್ನ ಹೊಂದಿಗೆ ಒಬ್ಬರಿಲ್ಲ ಒಡನೆ ಜಟ್ಟಿಗರಿಲ್ಲ
ನೀವು ಬಂದ ಕಾರಣದ ಬಗೆ ಹೇಗೆ ಎನುತೇಳಿ
ಕೂಡೆರಡು ಕರವ ಮುಗಿದನು

ಕಣ್ಣಿಗೆ ಬೇಕಾದ ಮಡಿಯನ್ನೆ ತಂದಿವ್ನಿ
ಒಪ್ಪಿಸಿಕೊಳ್ಳು ಗುಂಡುಬ್ರಹ್ಮಯ್ಯನವರೆ

ನಮ್ಮ ಮಡಿಯನ್ನೆ ನೀವಾದರೆ ಒಪ್ಪಿಸಿಕೊಂಡು
ಚೌಳುರಂಜಳಿಗೆ ನೀವು ಕೊಡಬೇಕು

ಅಪ್ಪ ಭೂಮಿಗೆ ದೊಡ್ಡೋರು ಚೌಳುರಂಜಳಿಗೆಗೇಳಿ
ಇಂದಿಗೆ ಇಪತ್ನಾಕು ವರ್ಷವು – ಮಾಚಯ್ಯ
ಇಂದಿಗೆ ಅದರ ಕೆಲಸ ತೀರಿತು – ಮಾಚಯ್ಯ
ಮಿಕ್ಕನಾದ ಓಡು ನನ್ನಮಲ್ಲಿಲ್ಲ

ಇಲ್ಲ ಅಂದಮೇಲೆ ಯಾತಕೆ ನಿಂತಿರಬೇಕೆಂದು
ಹಿಂದಕೆ ತಿರುಗಿ ಹೊಂಟನು

ಚಿನ್ನದ ರಂಜಳಿಗೆಯ ಕೊಡಬೇಕು ಅನ್ನೋದಾಗಿ
ಗುಂಡುಬ್ರಹ್ಮಯ್ಯನ ಮನದಲ್ಲಿ – ಆಗಲೆ
ಸ್ವಾಮಿ ಗ್ಯಾನವ ಕೊಡುತಾರೆ

ನೀ ಬಂದು ಯಾತಕೆ ಸುಮ್ಮನೆ ಹೋಗಬೇಕು
ಬಾರಪ್ಪ ನೀನು ಮಾಚಯ್ಯ –ಮಂಡೆ ಮೇಲೆ
ದೊಡ್ಡೋರ ಕರುಣ ಒದಗ್ಯದೆ

ದೊಡ್ಡೋರ ಕರುಣ ನನ್ನ ಮಂಡೆ ಮೇಲೆ ಒದಗ್ಯದೆ
ನಾ ಇನ್ನೊಂದ ಮಾಡಿಕೊಡುತೀನಿ

ಇನ್ನೊಂದು ಮಾಡಿ ಪಾದಕೆ ಒಪ್ಪಿಸುತೀನಿ ಮಾಚಯ್ಯ
ಹೋಗಿ ನಿನ್ನ ಕೆಲಸ ತೀರಿಸಿರಯ್ಯ

ಕಣ್ಣಿಗೆ ಬೇಕಾದ ಒಂದು ಮಡಿಯನ್ನೆ ಈಸುಗಂಡ
ಚೌಳು ರಂಜಿಗೆಯನ್ನೆ ಕೊಟ್ಟನಾಗ

ಚೌಳುರಂಜಳಿಗೆ ತಗದು ಹೆಗಲಮೇಲೆ ಹೊತ್ತುಕೊಂಡು
ಬದ್ರಾಕ್ಷಿ ಮಠಕೆ ಕಡೆದನು – ಮಾಚಯ್ಯ
ರುದ್ರಾಕ್ಷಿ ಮಠಕೆ ಕಡೆದನು

ಕೇಳಿದ ಭಾವಕ್ಕೆ ಬಾನಿಯ ತಂದಿನ್ನಿ
ಯಾವ ರೀತೀಲಿ ಕಂತೆ ಚಿಲುಮೆಯ ಮಾಡಬೇಕು

ಬದಲಾಗಿ ಒಂದು ಸಣ್ಣ ಕಾವಿ ಮಡಿಯನ್ನೆ ತಕ್ಕೊಂಡು
ರುದ್ರಾಕ್ಷಿ ಮಠನ ಕಡೆದೋಗು –ನನ್ನೊಡೆಯ
ಬದ್ರಾಕ್ಷಿ ಮಠನ ಕಡೆದೋಗು – ನನ್ನೊಡೆಯ
ಇಸು ಬ್ರಹ್ಮನ ಮಠ ಮನೆಗೋಗು

ಕಣ್ಣಿಗೆ ಬೇಕಾದ ಒಂದು ಮಡಿಯನ್ನೆ ಕೊಟ್ಟು ಬಿಟ್ಟು
ಒಂದು ಚಂದ್ರಾಯುಧದ ಪಟವ ನೀ ತೆಗತತ್ತ

ಕಣ್ಣಿಗೆ ಬೇಕಾದ ಮಡಿಯನ್ನೆ ತಕ್ಕೊಂಡು
ಮಡಚಿ ಕಂಕುಳಿಗೆ ಮಡಗಿದ

ರುದ್ರಾಕ್ಷಿ ಮಠನ ಕಡೆದನು ಮಾಚಯ್ಯ
ಬದ್ರಾಕ್ಷಿ ಮಠವ ಕಡೆದನು
ಇಸು ಬ್ರಹ್ಮನ ಮಠಕೆ ಬಂದನು ಮಾಚಯ್ಯ
ಒಂದನೆ ಕರವ ಮುಗಿದನು

ಬಂದರಿಯ ಎನುತೇಳಿ ಸಡಗರದಿಂದ ನಸುನುಗುತ
ಒಂದಿಸಿ ಕರವ ಮುಗಿದನು

ಕಣ್ಣಿಗೆ ಬೇಕಾದ ಮಡಿಯನ್ನೆ ತಂದಿವ್ನಿ
ಚಂದ್ರಾಯುಧ ಪಟವ ನೀ ತರಬೇಕು

ಭೂಮಿಗೆ ದೊಡ್ಡೋರು ಚಂದ್ರಾಯುಧ ಪಟಕೇಳಿ
ಇಂದಿಗೆ ಇಪ್ಪತ್ನಾಕು ವರ್ಷವು – ಮಾಚಯ್ಯ
ಇಂದಿಗೆ ಅದರ ಕೆಲಸ ಮುಗಿದಿತು

ಬೆಟ್ಟುದ್ದ ಚೂರಿ ನನ್ನ ಮನೆಯಲ್ಲಿಲ್ಲವು
ಇದ್ದರೆ ನಿನ್ನಳತೆಗೆ ಬರುವುದಿಲ್ಲ
ಇಲ್ಲ ಅಂದತಾವು ಯಾಕೆ ನಿಂತಿರಬೇಕು
ಎಂದು ಈಗಲೆ ಅವನಾದ್ರೆ – ಮಾಚಯ್ಯ
ಮುಂದಕೆ ಮೂರಜ್ಜೆ ಮಡಗಿದ

ಯಾಕೋ ಕಾಣೆ ಇವನು ಮಡಿವಳಿ ಮಾಚಯ್ಯನಿಗೆ
ಚಂದ್ರಾಯುಧವ ಕೊಡಲಿಲ್ಲ ಅನ್ನುತ – ಇಸುಬ್ರಹ್ಮನಿಗೆ
ಕೊಡುವಂತ ಗ್ಯಾನ ಕೊಡುತಾರೆ

ಧರಗೆ ದೊಡ್ಡೋರ ಕರುಣ ನನ್ನ ಮಂಡೆಮೇಲೆ ಒದಗ್ಯದೆ
ನಾ ಇನ್ನೊಂದು ಕತ್ತಿಮಾಡಿ ಕೊಡುತೀನಿ – ಮಾಚಯ್ಯ
ಹೋಗಿ ನಿನ್ನ ಕೆಲಸ ತೀರಿಸಿಕೊ
ಸಣ್ಣ ಕಾವಿಯ ಮಡಿಯ ಕೊಟ್ಟುಬಿಟ್ಟು ಮಾಚಯ್ಯ
ಒಂದು ಚಂದ್ರಾಯುಧ ಪಟವ ತಗತಂದ

ಕಡವಿನ ಬಳಿಗೆ ಬಂದನು ಮಾಚಯ್ಯ
ಯಾವ ಪ್ರಕಾರದಲ್ಲಿ ಕಂತೆ ಚೆಲುವೆಯ – ಮಾಡಬೇಕು
ಮಾದೇವಿ ನೀನು ತಿಳಿದೇಳೆ

ಅಂದದಲಿ ಅತಿ ಚೆಲುವೆ ರಂಬೆ ಕೇಳೆ ಮಾದೇವಿ
ಹೇಳೆಣ್ಣೆ ಅದರ ತೆರೆಗೋಳ

ಕೇಳಯ್ಯ ಶರಣ ಕೇಳಯ್ಯ ಮಾಚಯ್ಯ
ಈಗ ಹೇಳುವೆ ನಾ ನಿಜಗಳ

ಚಂದ್ರನು ಸೂರ್ಯನುವೆ ಲಿಂಗ ಹುಟ್ಟಿದ ಶರಣರು
ಕಡವಿನ ಬಳಿಯಲಿ ಚಂದ್ರಮಂಡಲ – ಚಪ್ಪರವ
ಈಗಾದರೆ ನೀನು ಹಾಕಬೇಕು

ಒಳ್ಳೊಳ್ಳೆ ಮಡಿಯ ತಂದು ಅಲ್ಲಿಗೆ ಈಗ
ಹಾಸಿಗೆ ಸುಪ್ಪತ್ತಿಗೆ ಮಾಡಿ ಇರಿಸಬೇಕು

ಹರಿವ ಸರ್ಪವ ತಂದು ನುಲಿವ ಸಿಂಬಿಯ ಮಾಡಿ
ಚೌಳು ರಂಜಳಿಗೆಯ ಮಡಗಬೇಕು

ಕಾಳಿಂಗ ಸರ್ಪನ ಸಿವುಡನ್ನೆ ನೀ ಮಾಡಿ
ಬೆಳ್ಳಿ ಗುಡಾಣ ತಂದು ಮಡಗಯ್ಯ

ಇಸುಬ್ರಹ್ಮನ ತಾವು ತಂದಿರುವೆ ಚಂದ್ರಾಯುಧವ
ತಂದು ಬಲಗೈಲಿ ನೀನು ಹಿಡಿಯಯ್ಯ – ಮಾಚಯ್ಯ
ಹಾಸಿಗೆ ಸುಪ್ಪತ್ತಿಗೆ ಮ್ಯಾಲೆ ಕುಂತಿರು

ಮಡಿಗಳ ನಾನು ಮಾಡುತೀನಿ ಮಾಚಯ್ಯ
ಸೀತಾಳ ಚಪ್ಪರಕೆ ಬರುತೀನಿ

ಸೀತಾಳ ಚಪ್ಪರಕೆ ಬಂದ ಯಾಳ್ಯಾದ ಒಳಗೆ
ಮರಿವ್ಯಾಗ್ರನಂದದಲಿ ನೀ ಮೊರಿದೇಳೊ
ಎಡಗೈಲಿ ಮುಂದಲೆ ಹಿಡುದುಕೊ ಮಾಚಯ್ಯ
ಜಡಿದು ಕೆಳವೀಕೆ ಕೆಡವಿಬಿಡು

ಬಲದ ಮಂಡಿಯನ್ನು ಎದೆ ಮೇಲೆ ಊರಯ್ಯ
ಎಡಗೈಲಿ ಮುಂದಲೆಯ ಹಿಡಿಯಯ್ಯ – ನನ್ನೊಡೆಯ
ಆಗ ಮುಂದೇನು ಮಾಡಬೇಕು

ಬಲಗೈಲಿ ಚಂದ್ರಾಯುಧವ ನೀನಾದರೆ ಹಿಡುಕೊಂಡು
ಗರಗರನೆ ಸಿರವ ಹರಿಯಯ್ಯ

ನನ್ನ ಮುಂಡವ ಎತ್ತಿಹಿಡಿದು ನೀನಾದರೆ
ಆ ಚಿನ್ನದ ರಂಜಳಿಗೆ ಹಿಡಿಯಯ್ಯ

ಚಿನ್ನದ ರಂಜಳಿಗ್ಗೆ ಬೆಳ್ಳಿ ಗುಡಾಣಕ್ಕೆ
ನನ್ನ ಚೋಣಿತವ ಬಸುಕೊಂಡು – ಮಾಚಯ್ಯ
ಹಲವು ಕಂಡ ಮಾಡಿ ನನ್ನ ಕೊರೆಯಯ್ಯ

ಒಳ್ಳೊಳ್ಳೆ ಮಾಂಸವ ಕುಯ್ಕಿಕೊಂಡು ಮಾಚಯ್ಯ
ಚೌಳುರಂಜಳಿಗ್ಗೆ ನೀನು ತುಂಬಯ್ಯ

ಚೌಳುರಂಜಳಿಗ್ಗೆ ಬೆಳ್ಳಿ ಗುಡಾಣಕ್ಕೆ
ಈ ಮಾಂಸವನಾದರೆ ತುಂಬಿಬಿಟ್ಟು – ಮಾಚಯ್ಯ
ನನ್ನ ದುಂಡುಗಂಡ ಮಾಡಿ ನೀ ಕೊರೆಯಯ್ಯ

1

ಬೆನ್ನಿನ ಹಾಸಿಗೆಯ ಅಚ್ಚಾಯದಿಂದ ಕುಯಿಕೊಂಡು
ನೀ ಒಗುವ ಕಲ್ಲುಮಾಡಿ ಮಡಗಯ್ಯ

ದೊಕ್ಕೆ ಮೂಳೆಯ ಅಚ್ಚಾಯದಿಂದ ಕುಯಿಕೊಂಡು
ಉಬ್ಬೆ ಗುಡಾಣ ಮಾಡಿ ನೀ ಮಡಗಯ್ಯ

ತಲೆಯ ಮಿದಲನೆ ನೀ ಅಚ್ಚಾಯದಿಂದ ತಕ್ಕೊಂಡು
ತಿಳಿಗಂಜಿ ಮಾಡಿ ಮಡಗಯ್ಯ

ನನ್ನ ಕಣ್ಣಿನ ಗುಡ್ಡೆಯ ಅಚ್ಚಯದಿಂದ ಕುಯಿಕೊಂಡು
ನೀ ನೀಲಿ ರೆವೆ ಮಾಡಿ ಮಡಗಯ್ಯ

ಎಡಗಡೆ ಕಿರುಬೆರಳ ಉಗುರನ್ನೆ ಕುಯಿಕೊಂಡು
ನೀ ತ್ರಿಮುಳ್ಳು ಮಾಡಿ ಮಡಗಯ್ಯ

ಎಡಚನೆ ತೊಡೆಯ ಮೂಳೆಯ ಕುಯಿಕೊಂಡು
ನೀ ಕೆಳಗಲ ಕೊಡತಿ ಮಾಡಿ ಮಡಗಯ್ಯ

ತೋಳಿನ ಮೂಳೆಯ ಅಚ್ಚಯದಿಂದ ಕುಯಿಕೊಂಡು
ನೀ ಮ್ಯಾಗಳ ಕೊಡತಿ ಮಾಡಿ ಮಡಗಯ್ಯ

ಮಿಕ್ಕಂಥ ಮಾಂಸವ ಈರ ಮಾಚಯ್ಯನವರೆ
ಶ್ರೀಗಂಧದ ಸೌದೆ ನೀ ಅಸಳೇಯ – ಹೂತುಬಿಟ್ಟು
ಸುಟ್ಟು ಭಸ್ಮವ ಮಾಡೆಂದಳು

ಸುಟ್ಟು ಭಸ್ಮವ ಮಾಡಿಬಿಟ್ಟು ನನ್ನೊಡೆಯ
ಗಂಗೆಗೆ ನೀ ಬೂದಿಯ ಬಿಡು ಎಂದಳು
ಮಡದಿಯಾಡಿದ ಮಾತ ಕೇಳಿದನು ಮಾಚಯ್ಯ
ಅತ್ತತ್ತು ದುಃಖ ಪಡುತಾನೆ

ಅಂದದಲಿ ಅತಿ ಚೆಲ್ವೆ ರಂಬೆ ಕೇಳೆ ಮಾದೇವಿ
ಯಾವ ಪ್ರಕಾರದಲಿ ನಿನ್ನ ಪ್ರಾಣ ಕೊಲ್ಲಬೇಕೆ

ಗಂಡನ ದೃಢಬೇರೆ ಹೆಂಡತಿಯ ದೃಢಬೇರೆ
ಆದರೆ ನನ್ನೊಡೆಯ ಕೇಳಯ್ಯ – ಮಾಚಯ್ಯ
ಧರೆಗೆ ದೊಡ್ಡೋರು ಕಂತೆ ಒಪ್ಪೋದಿಲ್ಲ

ನನ್ನ ಧೃಢ ನಿನ್ನ ಧೃಡ ಒಂದೇ ಆದರೆ ಮಾಚಯ್ಯ
ದೇವರು ಕಂತೆಯ ಒಪ್ಪುತಾರೆ

ಚಂದ್ರ ಮಂಡಲದ ಚಪ್ಪರವ ಹಾಕಿದನು ಮಾಚಯ್ಯ
ಹಾಸಿಗೆ ಸುಪ್ಪತ್ತಿಗೆ ಮಾಡಿ ಇರಿಸಿದನು

ಬೆಳ್ಳಿ ಗುಡಾಣವ ಮಡಗಿದನು ಮಾಚಯ್ಯ
ಚಿನ್ನದ ರಂಜಳಿಗೆ ಮಡಗ್ಯವ್ನೆ

ಧರೆಗೆ ದೊಡ್ಡೋರ ಸಿರಿಪಾದವೆ ಗತಿ ಎಂದು ಮಾದೇವಮ್ಮ
ತಾನ ಮಡಿಗೊಳ ಮಾಡಿದಳು

ಒದ್ದೆಯ ಬಟ್ಟೇಲಿ ಮಲ್ಲಿಗೆ ಮಾದೇವಮ್ಮ
ಪುರುಷರ ಬಳಿಗೆ ಬರುತಾಳೆ

ಯಾತಕೊ ಕಾಣೆ ಮಡಿವಾಳ ಮಾಚಯ್ಯ
ಮಡದಿಯ ತಾನು ಕೊಲ್ಲುವದಿಲ್ಲ – ಅನುತೇಳಿ
ಕೊಲ್ಲುವ ಗ್ಯಾನ ಕೊಡುತಾರೆ

ಎಡಗೈಲಿ ಮುಂದೆಲೆಯ ಹಿಡಿದನು ಮಾಚಯ್ಯ
ಜಡಿದು ಕೆಳವಿಕೆ ಕೆಡವಿದನು – ಮಾಚಯ್ಯ
ಗರಗರನೆ ಶಿರವ ಹರಿದನು

ಗರಗರನೆ ಶಿರವ ಹರಿದನು ಮಾಚಯ್ಯ
ಅವಳ ಚೋಣ್ತ ಚಂದಾಗಿ ಬಸಗಂಡ

ಹಲವು ಗಂಡವ ಮಾಡಿ ಕೊರೆದನು ಮಾಚಯ್ಯ
ಚಿನ್ನದ ರಂಜಳಿಗ್ಗೆ ತುಂಬಿಕೊಂಡ

ದುಂಡು ಗಂಡನ ಮಾಡಿ ಕೊರೆದನು ಮಾಚಯ್ಯ
ಕಂತೆ ಒಗೋಕೆ ಬಿರುದುಗಳ ಮಾಡಿಕೊಂಡ

ಮಿಕ್ಕಂತ ಮಾಂಸವ ವೀರ ಮಾಚಯ್ಯನವರು
ಗಂಧದ ಸೌದೆಯಲಿ ಸುಟ್ಟು ಭಸ್ಮವ ಮಾಡಿ – ಬೂದಿಯ
ಹರಿವ ಜಲಧಿಗೆ ಬಿಡುತಾನೆ

ಕರಿಯ ಕಂಬಳಿ ತಂದು ಮರಿದು ಗದ್ದುಗೆ ಮಾಡಿ
ಆ ದೇವರ ಕಂತೆಯ ಪೂಜಿಸಿ – ಮಾಚಯ್ಯ
ಸಾಂಬ್ರಾಣಿ ಬೆಳಗಿ ಶರಣೆನ್ನ

ಧರೆಗೆ ದೊಡ್ಡೋರ ಕಂತೆ ಒಳಗೆ ಇರುವಂಥ
ಮಣಿವೋಲು ಹದಿನೆಂಟು ಕೋಟಿಯು ಜೀವರಾಕ್ಷವೆಲ್ಲ
ಆ ಚೌಳುರಂಜಳಿಗ್ಗೆ ಸೇರೋದವಲ್ಲ

ಶುಕ್ರವಾರದ ದಿನ ಉಬ್ಬೆ ಸುತ್ತಿ ಮಾಚಯ್ಯ
ಸ್ವಾಮವಾರ ಪರ್ಯಂತ ಉಬ್ಬೇಯ ಕಾಯ್ಸಿದ

ಒಗೆವ ಕಲ್ಲಿನ ದಂಡೆಗೆ ಕಂತೆಯ ತರುತಾನೆ
ಹಾಡಾಡಿ ಕಂತೆ ಒಗುದಾನೆ

ಭೂಮಿಗೆ ದೊಡ್ಡೋರ ಸಿರಿಪಾದವ ನೆನಕಂಡು
ಸಂಗನ ಬಸವಣ್ಣನ ಪಾದವ ನೆನೆದರು

ನಾಲಗೆ ಒಳಗೆ ನಾರಾಯಣ ದೇವರು ಎಂಬುವರ
ಆ ದೇವರ ತಂದರಿ ಬಸವಯ್ಯೋ – ಎನ್ನೂತ
ಹಾಡಾಡಿ ಕಂತೆ ಒಗೆದನು

ಮೂಗಿನ ಒಳಗೆ ಮುನೇಶ್ವರ ಸ್ವಾಮಿ ಎನ್ನುವರ
ದೇವರು ತಂದರಿ ಬಸವಯ್ಯ – ಎನ್ನೂತ
ಹಾಡಾಡಿ ಕಂತೆ ಒಗೆದನು

ಕಿವಿಯ ಒಳಗೆ ಕರುಣ ದೇವರು ಎಂಬುವರ
ಆ ದೇವರ ತಂದರಿ ಬಸವಯ್ಯ – ಎನ್ನೂತ
ಹಾಡಾಡಿ ಕಂತೆ ಒಗೆದನು

ಕೊಂಬಿನ ಒಳಗೆ ಕುಂಭಕರ್ಣ ಅನ್ನೋರ
ರಾಕ್ಷಸನ ತಂದರಿ ಬಸವಯ್ಯ – ನೀವಾದರೆ
ನಿಮ್ಮ ದೊಕ್ಕೆಯ ಒಳಗೆ – ಎನ್ನುತ
ಹಾಡಾಡಿ ಕಂತೆ ಒಗೆದನು

ಒಕ್ಕಲಿಗರ ಮುದ್ದಯ್ಯ ಅನುವಂತ ಶರಣನ
ನೀವಾದರು ತಂದರಿ ಬಸವಯ್ಯ – ಅನುತೇಳಿ

ಹಾಡಾಡಿ ಕಂತೆ ಒಗೆದನು

ನಿಮ್ಮ ಪಚ್ಚೆಯ ಒಳಗೆ ಪರಮೇಸುರ ಅನ್ನೋರ
ದೇವರ ತಂದರಿ ಬಸವಯ್ಯ – ಅನುತೇಳಿ
ಹಾಡಾಡಿ ಕಂತೆ ಒಗೆದನು

ನಿಮ್ಮ ಈಲಿಯ ಒಳಗೆ ಈರಭದ್ರ ಅಂಬುವರ
ದೇವರ ತಂದರಿ ಬಸವಯ್ಯ – ಅನುತೇಳಿ
ಹಾಡಾಡಿ ಕಂತೆ ಒಗೆದನು

ನಿಮ್ಮ ಎಡದ ಪಾದದ ಒಳಗೆ ಮಾದಾರಿ ಚನ್ನಯ್ಯ ಅಂಬುವನ
ಶರಣನ ತಂದರಿ ಬಸವಯ್ಯ – ಅನುತೇಳಿ
ಹಾಡಾಡಿ ಕಂತೆ ಒಗೆದನು

ಬಲದ ಪಾದದ ಒಳಗೆ ಹೊಲೆಯ ಹೊನ್ನಯ್ಯ ಅಂಬುವನ
ಶರಣನ ತಂದರಿ ಬಸವಯ್ಯ – ಅನುತೇಳಿ
ಹಾಡಾಡಿ ಕಂತೆ ಒಗೆದನು

ನಿಮ್ಮ ಕಣ್ಣಿನ ಒಳಗೆ ಕರ್ಣದೇವರು ಅಂಬೊ
ಶರಣರ ತಂದರಿ ಬಸವಯ್ಯ – ಅನುತೇಳಿ
ಹಾಡಾಡಿ ಕಂತೆ ಒಗೆದನು

ನೀನು ಮಿಕ್ಕರೋಮ ಈಗ ಒದರುವ ಹೊತ್ತಿಗೆ
ಮೋಗಲ ನಕ್ಷತ್ರ ಈಗ ಪಡೆದೀರಿ – ಅನುತೇಳಿ
ಹಾಡಾಡಿ ಕಂತೆ ಒಗೆದನು

ಅರೆಯ ಕಲ್ಲಿನ ಮೇಲೆ ಕಂತೆ ಹರವಿದನು ಮಾಚಯ್ಯ
ಅದಕೆ ತಳಗಂಜಿ ಚವಕಾರವನೆ ಮಾಡಿ – ಮಾಚಯ್ಯ
ನೀಲಿರವೆ ಮಾಡಿ ಮಡಗವನೆ

ತಿರುಮುಳ್ಳ ತಕ್ಕಂಡು ದಾಯವಾಡಿ ಕಂತೆಮಡಗವನೆ
ಮಡಿಸಿ ಶಿವಕಂತೆಯ ಮಡಗಿದನು

ಧರೆಗೆ ದೊಡ್ಡೋರ ಕಂತೆಗೆ ಶರಣನ್ನ
ಚೆನ್ನದ ರಂಜಲಿಗೆ ಹತ್ತಿರಕೆ ತಗತನ್ನ

ಕರಿಯ ಕಂಬಳಿಯ ಮ್ಯಾಲೆ ತಂದು ಮಡಗಿದ ಆಗ
ಧರೆಗೆ ದೊಡ್ಡವರೆ ನಿಮ್ಮ ಸಿರಿಪಾದ – ಗತಿಯೆಂದು
ಕೂಡೆರಡು ಕರವ ನಮಿಸಿದ

ಶರಣ ಭಕ್ತಿಯ ಕಂಡಿತು ಜೀವರಾಕ್ಷ
ಚಿನ್ನದ ರಂಜಳಿಗೆಯಿಂದ ಬೆಳ್ಳಿಯ – ಗುಡಾಣದಿಂದ
ಬಂದು ಧರೆಗೆ ದೊಡ್ಡೋರ ಕಂತೆ ಸೇರ್‍ಕೋಡೊ

ಮಣಿವೋಲು ಹದಿನೆಂಟು ಕಂಡುಗ ಜೀವರಾಕ್ಷ
ಕಂತೆಗೆ ಬಂದು ಸೇರೋದೊ

ಕಂತೆಯ ಎತ್ತಿ ನೆತ್ತಿಮ್ಯಾಲೆ ಹೊತ್ತುಕಂಡು
ಕಲ್ಯಾಣ ಪಟ್ಟಣಕೆ ಬರುತಾನೆ

ಮಡಿವಾಳ ಮಾಚಯ್ಯ ಕಂತೆಯ ಹೊತ್ತುಕಂಡು
ಕಲ್ಯಾಣ ಪಟ್ಟಣಕ್ಕೆ ಬರುವೋದು – ನಮ್ಮ
ಧರೆಗೆ ದೊಡ್ಡೋರಿಗೆ ಅರಿವಾದೊ

ಬಹಳ ಕಟ್ಟದಿಂದ ಕಂತೆಯ ಚಲ್ವೆಮಾಡಿ
ಮಡಿವಾಳ ಮಾಚಯ್ಯ ಬರುತಾನೆ – ನಾನಾದರೆ
ಇನ್ನೆರಡು ಹಗಲು ಸಿಕ್ಕಬಾರದು

ಇನ್ನೆರಡು ಹಗಲು ಸಿಕ್ಕದೆಹೋದರೆ
ಮನದಲ್ಲಿ ಏನಂತ ಬೈವೋನೊ –ಎನುತೇಳಿ
ಪ್ರಭುದೇವ ಮೂಡಲ ಬೀದಿಯೊಳಗೆ ಬರುತಾರೆ

ಮೂಡಲ ಬೀದಿಯೊಳಗೆ ಮಾಚಯ್ಯ ಬರುವುದಕಂಡು
ಬಡಗಲ ಬೀದಿಗೆ ಬರುತಾರೆ

ಬಡಗಲ ಬೀದೀಲಿ ಮಾಚಯ್ಯ ಬರವುದ ಕಂಡು
ತೆಂಕಲು ಬೀದಿಗಾಣೆ ಬರುತಾರೆ

ಕಲ್ಯಾಣ ಪಟ್ಟಣದ ಒಂದೊಂದು ಬೀದಿಯು
ಹನ್ನೆರಡು ಯೋಜಣ ಇರುವುದು – ಮಾಚಯ್ಯ
ಸಂದಿ ಗೊಂದಿನೆಲ್ಲ ತಡಕ್ಯವನೆ

ಭೂಮಿಗೆ ದೊಡ್ಡೋರೆ ನಿಮ್ಮ ಸಿರಿಪಾದ ಗತಿ ಎಂದು
ಅತ್ತತ್ತು ದುಃಖ ಪಡುತಾನೆ

ನಡೆದ ಕಾಲು ಎಲ್ಲ ಒಡೆದು ರಕ್ತ ಸುರಿದು
ಬೀಸೊ ತೋಳೆಲ್ಲ ಬೆಂಡಾದೊ – ಕಾಲದಲಿ
ಅರೆಯ ಕಲ್ಲಿಗೆ ತಲೆಯ ಒಗೆದಾನು

ಇನ್ನು ಮಾಚಯ್ನ ಹೊಟ್ಟೆಯ ಉರಿಸೋದು
ತರವಲ್ಲ ಎಂದು ಸ್ವಾಮಿಯು – ಅವಾಗ
ಜಂಗಮನ ಯಾಸ ತಾಳಿಕೊಂಡು
ಅತ್ತಿಂದಾದರೆ ಬರುತಾರೆ

ಜಂಗಮರ ಕಂಡು ಈರುಮಾಚಯ್ಯನವರು
ನಮ್ಮ ಕಂತೆಯ ಕೊಟ್ಟ ಒಡೆಯರೆ ಈಗಾದ್ರೆ
ಕಾಣಲೆ ಇಲ್ಲವು ಎನುತೇಳಿ ಮಾಚಯ್ಯ
ಹೋಗಿ ಪಾದಕೆ ಶರಣನ್ನ

ಹುಚ್ಚು ಮಡಿವಾಳ ಹೋಗೋ ಬೆಸ್ಪು ಮಡಿವಾಳಿ ಹೋಗೊ
ನಿಮಗೆ ಕಂತೆಯ ಕೊಟ್ಟ ಒಡೆಯನು – ಮಡಿವಾಳಿ
ನೆನ್ನೆ ರುದ್ರಾಕ್ಷಿ ಮಂಟಪದಲ್ಲಿ ತೀರೋದ

ರುದ್ರಾಕ್ಷಿ ಮಂಟಪದಲಿ ಅವನಾದ್ರೆ ತೀರೋದ
ನಿನ್ನ ನೆತ್ತಿಮ್ಯಾಗಳ ಕಂತೆ ಕೊಡುನನಗೆ

ಮುತ್ತು ರತ್ನ ಬೇಕಾದರೆ ಮತ್ತಷ್ಟು ಕೊಡುತೀನಿ
ನನ್ನ ಜೀವ ಹೋದರು ಕಂತೆ ಕೊಡಲಾರೆ – ಅನುತೇಳಿ
ಅಲ್ಲಿಂದ ಮುಂದಕೆ ಬರುತಾನೆ

ಇನ್ನು ಮಾಚಯ್ನ ಹೊಟ್ಟೆಯ ಉರಿಸೋದು
ತರವಲ್ಲ ಎಂದು ಸ್ವಾಮಿಯು – ಆವಾಗ
ಹರಳಯ್ಯನವರ ಬೀದಿಗೆ ಬರುತಾರೆ

ಹರಳಯ್ಯನವರ ಬೂದಿಗುಂಡಿಯ ಮೇಲೆ
ಭಂಗಿ ಪಲಾರ ಮಾಡ್ತಾ ಕುಂತವರೆ

ಭಂಗಿ ಪಲಾರವ ಮಾಡೋ ಒಡೆಯನ ಕಂಡು
ಗುಡಗುಡನೆ ಓಡೋಗಿ ಮಾಚಯ್ಯ – ತಾನಾಗ
ಸ್ವಾಮಿ ಪಾದಕೆ ಶರಣನ್ನ

ಬಹಳ ಕಷ್ಟದಿಂದ ಕಂತೆ ಚಲುಮೆಯ ಮಾಡಿವ್ನಿ
ಗುರುವೆ ನಿಮ್ಮ ಕಂತೆ ಒಪ್ಗಯ್ಯ
ನೀ ಒಬ್ಬಾನೆ ಕಂತೆಯ ತಂದ್ಯಲ್ಲೊ ಮಾಚಯ್ಯ
ನೀವು ಸತಿಪರಿಯರು ಹೊನ್ನುಗೂಡಿ – ಬಂದರೆ
ಆಗ ನಮ್ಮ ಕಂತೆ ಒಪ್ಪತೀನಿ

ಅನ್ನ ಬಾರದ ಮಾತ ಅಂದಳು ಮಾದೇವಿ
ನಾ ಹೊಡೆಯಬಾರದು ಏಟ ಹೊಡೆದಿವ್ನಿ – ನನ್ನೊಡೆಯ
ಮುನಿಸಿಗಂಡೋಗ್ಯವಳೆ ತವರಿಗೆ

ಹೋದವಳ ಸುದ್ದಿ ಏನಯ್ಯ ಮಡಿವಾಳಿ
ಹುಚ್ಚು ಮಡಿವಾಳಿ ಕೇಳಯ್ಯ – ಈಗಾದ್ರೆ
ಕಡವಿನ ಬಳಿಗೆ ಹೋಗಯ್ಯ

ಕಡವಿನ ಬಳಿಗೆ ಹೋಗಿ ನೀನಾದರೆ
ನಿನ್ನ ಮಡದಿಯ ಹೆಸರಿಡಿದು ಕರಿಯಯ್ಯ

ಸ್ವಾಮಿಯ ಮಾತ ಕೇಳದನು ಮಾಚಯ್ಯ
ಸ್ವಾಮಿಯ ಕಂತೆಯ ನೆತ್ತಿಮ್ಯಾಲೆ – ಹೊತ್ತುಗಂಡು
ಕಡವಿನ ಬಳಿಗೆ ಬರುತಾನೆ

ಯಾವ ಪರಿಯಲಿ ಸ್ವಾಮಿ ಮಡದಿಯ ಪಡೆದರೊ
ಹಲವು ಗಂಡವಮಾಡಿ ಅವಳನ್ನೆ – ಕೊರದಿವ್ನಿ
ಇನ್ನಾವ ಪರಿಯಲಿ ಎದ್ದು ಬರುತಾಳೊ

ಕಡವಿನ ಬಳಿಯಲಿ ದುಃಖವ ಮಾಡುತ್ತ
ಮಡದಿಯ ಹೆಸರಿಡಿದು ಕರೆದವರೆ

ಅಂದದಲಿ ಅತಿ ಚಲ್ವೆ ರಂಬೆ ಕೇಳೆ ಮಾದೇವಿ
ಎಲ್ಲಿದ್ದೀಯೆ ನನ್ನ ಮಡದಿಯೆ – ಎನ್ನುತ
ಮಡದಿಯ ಹೆಸರ ಕರೆದನು

ಪುರುಷರು ಕರೆದ ಮಾತ ಕೇಳಿದಳು ಮಾದೇವಿ
ತಾನ ಮಡಿಗಳನೆ ಮಾಡಿದಳು

ಮೂರ್ಕಟ್ಟಿನ ಈಭೂತಿ ಪಣೆಯಲ್ಲಿಂಬಿಟ್ಟುಕೊಂಡು
ಹಿಡಿಯಲೆ ಹಿಡಿಯಡಕೆ ಬಲಗೈಲಿ – ತಕ್ಕೊಂಡು
ನಗುನಗುತ ಬಳಿಗೆ ಬರುತಾಳೆ

ದೊಡ್ಡೋರ ಕಂತೆಯ ಇನ್ನೂ ಒಪ್ಪಿಸಲಿಲ್ಲವೆ ಎಂದು
ಬಾಗಿ ಪಾದಕೆ ಬಂದು ಶರಣನ್ನ

ಬಂದ ಮಡದಿಯ ಕಂಡನು ಮಾಚಯ್ಯ
ಆ ಶರಣ ಓಗ್ಗಿದನು ಮನದಲ್ಲಿ

ಹಲವು ಗಂಡನಮಾಡಿ ನಾ ಕೂಡಿದ್ದೆ ಮಾದೇವಿ
ಯಾವ ಪರಿಯಲಿ ನಿನ್ನ ಪ್ರಾಣ ಪಡೆದರೊ

ಇಂತಿ ತೆ ಫಲಗಳನು ನಾವು ಪಡೆದಿದ್ದೊ ನನ್ನೊಡೆಯ
ಈ ಭೂಮಿಗೆ ದೊಡ್ಡೋರ ಕರುಣದಿಂದ

ನಾ ವೊಬ್ಬನೆ ಕಂತೆಯ ತಕ್ಕೊಂಡು ಹೋಗೋವತ್ಗೆ
ಸತಿಪತಿಯರಿಬ್ಬರುವೆ ಹೊನ್ನುಗೂಡಿ – ಬನ್ನಿರೆಂದು
ಗುರುವಿನ ಅಪ್ಪಣೆ ಆಗಿದೆ

ಪುರುಷರ ಕೈಲಿ ಕಂತೆಯ ಹೊರಸಿಕೊಂಡು
ಕಲ್ಯಾಣ ಪಟ್ಟಣಕೆ ಆಗ ಬರುತಾರೆ

ಸತಿ ಪತಿಯರಿಬ್ಬರುವೆ ಹೊಂದುಗೂಡಿ ಬರುವುದು
ನಮ್ಮ ಏಕಪರಂಜೋತಿಗೆ ಅರಿವಾಯ್ತು

ಬಾಳ ಕಟ್ಟದಿಂದ ಮಾಚಯ್ಯ ಮಾದೇವಿ
ಕಂತೆ ಚಲುವೆಯ ಮಾಡ್ಯವರೆ – ನಾನಾದ್ರೆ
ಇನ್ನೆರಡು ಹಗಲು ಸಿಕ್ಕಬಾರ್ದು – ಎನುತೇಳಿ
ಬೀದಿ ಬೀದಿಯ ಒಳಗೆ ತಿರುಗ್ಯವರೆ

ಕಲ್ಯಾಣ ಪಟ್ಟಣದ ಏಳೇಳು ಹದಿನಾಲ್ಕು
ಬೀದಿಯ ಸಂದುಗೊಂದು ಬಿಡದಂಗೆ – ತಿರುಗ್ಯವರೆ
ನಡೆದ ಕಾಲು ಹೊಡೆದು ರಕ್ತ ಸುರಿದೊ

ಶರಣ ಪರಿವಾರ / ೨೦೪

ನಡೆದ ಕಾಲಲ್ಲೆ ಹೊಡೆದು ರಕ್ತವೆಸೋರಿ
ಬೀಸೋ ತೋಳೆಲ್ಲ ಬೆಂಡಾದ – ಕಾಲದಲಿ
ಧರಗೆ ದೊಡ್ಡೋರೆ ಗತಿಯೆಂದು

ಭೂಮಿಗೆ ದೊಡ್ಡೋರೆ ನಿಮ್ಮ ಸಿರಿ ಪಾದವೆ ಗತಿಎಂದು
ಅರೆಯ ಕಲ್ಲಿಗೆ ತಲೆಯ ಒಗೆದರು

ಅರೆಯ ಕಲ್ಲಿಗೆ ತಲೆಯ ಒಗೆವ ಕಾಲದಲಿ
ಸ್ವಾಮಿ ಬುಡುಬುಡಿಕೆಯವನಾಗಿ ಬರುತಾನೆ

ಅಂದುಳ್ಳೆ ಪಕ್ಷಿರಾಯ ಚಂದುಳ್ಳೆ ಪಕ್ಷಿರಾಯ
ನಮ್ಮ ಪಂಚೆಕೊಟ್ಟರಾಯನ ನೀವು ಕಾಣಲಿಲ್ಲವೆ

ಹುಚ್ಚು ಮಡಿವಾಳಿ ಹೋಗೋ ಬೆಪ್ಪು ಮಡಿವಾಳಿ ಹೋಗೋ
ನಿಮ್ಮ ಕಂತೆ ಕೊಟ್ಟು ಒಡೆಯನಾದ್ರೆ ಕಲ್ಯಾಣಪಟ್ಟಣದ
ಚಿನ್ನದ ಮಂಟಪದಲ್ಲಿ ತೀರೋದ – ಮಡಿವಾಳಿ
ನೆತ್ತಿ ಮ್ಯಾಗಳ ಕಂತೆ ಕೊಡೊನಮಗೆ

ಮುತ್ತು ರತ್ನ ಬೇಕಾದರೆ ಮತ್ತಷ್ಟು ಕೊಡುತೀನಿ
ನನ್ನ ಜೀವವೋದರು ಕಂತೆ ಕೊಡಲಾರೆ

ಹೊನ್ನು ಚಿನ್ನ ಬೇಕಾದರೆ ಮತ್ತಷ್ಟು ಕೊಡುತೀನಿ
ಪ್ರಾಣ ಹೋದರು ಕಂತೆ ಕೊಡಲಾರೆ

ಆಗಲಿ ಹೋಗಯ್ಯ ಹಾಗಂದು ಪಕ್ಷಿರಾಜ
ಅಲ್ಲಿಂದ ಮಾಯವಾಗಿ ಬರುತಾನೆ

ಕಲ್ಯಾಣ ಪಟ್ಟಣದ ನೂರತೊಂಬತ್ತು ಯೋಜನನೆಲ್ಲ
ಸಂದು ಗೊಂದಿನೆಲ್ಲ ತಡಕ್ಯವರೆ

ಹರಳಯ್ಯನವರ ಬೀದೀಲಿ ಇರಬೌದು ಅನುತೇಳಿ
ಹರಳಯ್ಯನವರ ಬೀದಿಗೆ ಬರುತಾರೆ

ಹರಳಯ್ಯನವರ ಬೀದಿಯ ಬೂದಿಗುಂಡಿಯ ಮೇಲೆ
ಏಕೋ ಪರಂಜೋತಿ ಕೂತವರಲ್ಲ

ಸ್ವಾಮಿ ಪಾದವ ಕಂಡನು ಮಾಚಯ್ಯ
ಬಾಗಿ ಪಾದಕೆ ಶರಣನ್ನ

ಬಹಳ ಕಟ್ಟಿದಿಂದ ನಾವು ಕಂತೆ ಚಿಲ್ವೆಮಾಡಿ ಬಂದೀವಿ
ದೇವರ ನಿಮ್ಮ ಕಂತೆ ಒಪ್ಗಯ್ಯ – ಎನುತೇಳಿ
ಬಾಗಿ ಪಾದಕೆ ಶರಣೆಂದ್ರು

ಸುಮ್ಮನೆ ಕಂತೆಯ ಒಪ್ಪೋದಿಲ್ಲ ಮಾಚಯ್ಯ
ನಿಮ್ಮಲ್ಲಿ ಬಿನ್ನ ಮಾಡಿ ಕಂತೆ ಒಪ್ಪುತೀನಿ

ನಿಮ್ಮನೆಯಲಾದರೆ ನೇವೇನಡಿಗೆಯ
ಮಾಡೀಯೆ ಹೇಳೊ ನೀ ಮಾಚಯ್ಯ

ಹಪ್ಪಳುಪ್ಪಿನ ಕಾಯಿ ಹಲಸು ಬಾಳೆಹಣ್ಣು
ಘಟ್ಟದಕೊಬರಿ ಕೆನೆಮೊಸರು – ನನ್ನೊಡೆಯ
ನಾನಾದರೆಡೆಯ ಮಾಡುತೀನಿ – ದೇವರೆ
ಸ್ವಾಮುವಾರದ ಬಿನ್ನಕೆ ದಯಮಾಡಿ

ಊಟ ಅಂದರೆ ನಾನೊಂದ ಹೇಳತೀನಿ
ನಾ ಇನ್ನೊಂದು ಬಿನ್ನ ಹೇಳತೀನಿ – ಮಾಚಯ್ಯ
ನೀನಾದರುಡುಗೆಯ ಮಾಡಬೇಕು

ಅಡಬಾರದ ಅಡುಗೆಬೇಕು ಮಾಡಬಾರದ ಮಾಡಬೇಕು
ನರಮನುಷನ ಮಾಂಸ ಆಗಬೇಕು

ನಿಮ್ಮ ಮಗನಾದರೆ ಈರಭದ್ರಕುಮಾರ
ಅವನ ಕೂದು ಅಡುಗೆಯ ಮಾಡಿದರೆ – ಶರಣನೆ
ಆಗ ನಿಮ್ಮ ಕಂತೆ ಒಪ್ಪುತೀನಿ

ನೀವು ಕೊಟ್ಟ ಬೇಳೆಯ ನೀವು ಬಿನ್ನಮಾಡಲು
ಮನದಗೆ ಚಿಂತೆ ಯಾತಕೆ –ದೇವರೆ
ಬಿನ್ನಕೆ ನೀವು ದಯಮಾಡಿ

ಸ್ವಾಮಿ ಪಾದವ ಮುಟ್ಟಿ ಭಾಷೆಯ ಮಾಡಿದರು
ತಮ್ಮ ಗುರುಮಠಕೆ ಬರುತಾರೆ

ದೇವರ ಕಂತೆಯ ಮಂಚದ ಮೇಲೆ ಮಡಗಿದರು
ಸಾಂಬ್ರಾಣಿ ಬೆಳಗಿ ಶರಣೆಂದ್ರು

ದೊಡ್ಡೋರ ಶಿವಕಂತೆ ದಂಡೇಲಿ ಮಾಚಯ್ಯ
ಬಲ ಮಗ್ಗುಲಾಗಿ ಮಲಗ್ಯವನೆ

ತಮ್ಮ ಗುರುಮಠನೆಲ್ಲ ತಾರ್ಸಿ ರಂಗೋಲೆಬಿಟ್ಟು
ಹೋಮ ನೇಮವ ಮಾಡಿದಳು – ಮಾದೇವಿ
ಪುಣ್ಯ ಮಜ್ಜನವ ಮಾಡಿದಳು

ಹಳೆಯ ಬಾಂಡವನ ಬಿಸಾಕಿ ಮಾದೇವಿ
ಹೊಸ ಬಾಂಡಗಳ ತಗತನ್ನು ಮಡಿಕಂಡು
ಧರೆಗೆ ದೊಡ್ಡೋರೆ ಗತಿಯಂದ್ಲು

ಮಲ್ಲಿಗೆ ಮಾದೇವಿ ಅಣಿಮಾಡಿಕೊಳ್ಳುವಾಗ
ಈರ ಸಂಗಯ್ಯನ ಮಠಕಾಗಿ – ಆವಾಗ
ಶರಣ ಮಾಚಯ್ಯ ಬರುತಾನೆ

ಬಾರಯ್ಯ ನನಮಗನೆ ಈರಭದ್ರಕುಮಾರ
ಅನ್ನೂತ ಮಗನ ಕರೆದವರೆ

ಕುಣಕೋತ ಓಡೂತ ನುಡಿಗೆಜ್ಜೆ ನುಡಿಸುತ
ಬಂದು ಪಾದಕ್ಕೆ ಶರಣನ್ನ

ಅಯ್ಯೋ ಕಂದಣ್ಣ ಇನ್ನೊಂದು ಘಳಿಗೆ ನೀ
ಇಲ್ಲಿಯೇ ಇದ್ದರೆ ಕೇಳಪ್ಪ – ನಿನಗಾದ್ರೆ
ಹೇಳೂವೆ ಒಂದು ತೆರಗಳ
ಕಲ್ಯಾಣ ಪಟ್ಟಣದ ಒಬ್ಬ ಜಂಗಮನಿಗೆ
ನಿನ ಕೂದು ಅಡುಗೆಯ ಮಾಡುತೀವಿ – ಎನ್ನೂತ

ಭಾಷೆಯ ನಾವು ಮಾಡಿಬಂದೊ –ಈರಭದ್ರ
ಹೋಗಯ್ಯ ನಮ್ಮ ಗುರುಮಠಕೆ

ತಾಯಿ ತಂದೆಗೆ ಬಂದ ಕಷ್ಟ ನಮಗಲ್ಲವೆ
ನಮಗೆ ಬಂದಂತ ಕಷ್ಟವಾದರೆ – ನನತಂದೆ
ನಮ್ಮ ತಾಯಿ ತಂದೆಯ ಕಷ್ಟವಲ್ಲವೆ

ತಾಯಿ ತಂದೆಯ ದೃಢವು ಒಂದೇ ದೃಢವಾಯಿತು
ಮಗನ ದೃಢವು ಒಂದೆ ಆಯಿತು

ಈರ ಸಂಗಯ್ಯನ ಮಠಕಾದರಾಗಲೆ
ಮಲ್ಲಿಗೆ ಮಾದೇವಿ ಬರುತಾಳೆ – ಆವಾಗ
ಬಾರಯ್ಯ ನನ್ನ ಕಂದ ಅನ್ನುತಾಳೆ

ತಾಯಿ ಆಡಿದ ಮಾತ ಕೇಳಿದ ಕಂದಣ್ಣ
ಗುಡಗುಡನೆ ಓಡಿ ಬರುತಾನೆ

ಹುಸಿನಗುವ ನೆಗುವುತ ಈರಭದ್ರಕುಮಾರ
ತಾಯಿ ಕಂಕಳಿಗೆ ನೆಗದು ಕೂತುಗಂಡ

ಮುಡಿಯನ್ನೆ ಸವರುತ ಕಣ್ಣೀರ ಸುರುಸುತ
ತನ್ನ ಮಠಕೆ ತಾಯಿ ಬರುತಾಳೆ

ತಾನ ಮಡಿಗಳನು ಮಾಡಿಸಿದಳು ಆವಾಗ
ಮಗನಿಗೆ ಮಡಿಗಳ ತೊಡಿಸಿದಳು

ತೊಡೆಯ ಮೇಲಾದರೆ ಮಗನ ಕೂರಿಸಿಕೊಂಡು
ತನ್ನ ನಿಜವನ್ನೆ ಹೇಳುತಾಳೆ

ಕೇಳಯ್ಯ ನನ ಕಂದ ಈರ ಸಂಗಯ್ಯನೆ
ಕಲ್ಯಾಣದ ಒಬ್ಬ ಜಂಗಮರಿಗೆ – ನಿನ್ನಕೂದು
ಅಡುಗೆ ಮಾಡಿಕ್ಕುತೀವಿ ಅನುತೇಳಿ – ಬಂದೀವಿ
ನೀ ಏನ ಹೇಳತೀಯೊ ಕಂದಯ್ಯ

ಬೇಲೀಯೆ ಎದ್ದು ಹೊಲವನ್ನೆ ಮೆಯ್ಯುವಾಗ
ಇದಕೆ ನ್ಯಾಯವ ಹೇಳುವರುಂಟೆ

ಅವರು ಕೊಟ್ಟ ಬೆಳೆಯ ಅವರು ಊಟ ಮಾಡುವುದಕೆ
ಅದಕ್ಯಾಕೆ ಚಿಂತೆ ಕೊಳ್ಲಿರಮ್ಮ

ಮಗನ ಮುಂದಲೆ ಜುಟ್ಟ ಹಿಡಿದಳು ಮಾದೇವಿ
ಗಿಡಿದು ಕೆಳವಿಕೆ ಕೆಡವಿದಳು

ಎಡಗೈಲಿ ಜುಟ್ಟ ಹಿಡಿದಳು ಮಾದೇವಿ
ಬಲಗೈಲಿ ಚಂದ್ರಾಯುಧ ತೆಗೆದವಳೆ
ಮಗನ ಎದೆಯ ಮ್ಯಾಲೆ ಮಂಡಿ ಊರಿದಳು ಮಾದೇವಿ
ಗರಗರನೆ ಶಿರವ ಹರಿದಳು

ಚೋಣ್ತ ಚಂದಾಗಿ ಬಸಗಂಡ ಮಾದೇವಿ
ಹುರಿಗಂಡಮಾಡಿ ಮಗನ ಕುಯ್ವಾಳು

ಹಲವು ಗಂಡನಮಾಡಿ ಕೊರೆದಳು ಮಾದೇವಿ
ಕುಯ್ದು ಹೆಜ್ಜೆಗೆಯ ತುಂಬ್ಯಾಳು

ಹಗಲಾಯ್ತು ಅಂದರೆ ಬೆಳಗಾಯ್ತು ಅಂದರೆ
ಮಗನ ಮುಖವನ್ನೆ ನೋಡುತಿದ್ವಿ – ನಮ್ಮ ಮಗನೆ
ಇನ್ನಾರ ಮುಖವ ನೋಡಬೇಕು

ಪಟ್ಟೆ ಜೋತ್ರಕೆ ತಲೆಯನ್ನೆ ಮಡಗಿದಳು
ಪಟ್ಟೆಯ ಜೋತ್ರದಲಿ ಗಂಟುಕಟ್ಟಿ – ಮಾದೇವಿ
ಅಟ್ಟದಮೇಲೆ ಅದನು ಬಚ್ಚಿಟ್ಟಳು

ಮಿಕ್ಕ ಮಾಂಸವ ಸುಟ್ಟಳು ಮಾದೇವಿ
ಬೂದಿಯ ಕುಂಡೋಗಿ ಹರಿವ ನೀರಿಗೆ – ಮಾದೇವಿ
ಬಿಟ್ಟು ಬಂದಳು ಆವಾಗ

ಅಡುಗೆಯ ಅರಮನೆಗೆ ಬರುತಾಳೆ ಮಾದೇವಿ
ಅಡುಗೆ ಪದಾರ್ಥವ ಮಾಡುತಾಳೆ

ಚೋಣವ ಮಾಡಿದಳು ಹುರಿಮಾಂಸ ಮಾಡಿದಳು
ಒಳ್ಳೊಳ್ಳೆ ಅಡಿಗೆ ಮಾಡಿದಳು

ಹನ್ನೆರಡು ಗಂಟೆಯ ಸಮಯಕ್ಕೆ ಸರಿಯಾಗಿ
ಭೂಮಿಗೆ ದೊಡ್ಡೋರು ಆಗಲೆ – ಸರಿಯಾಗಿ
ಮಾಚಯ್ಯ ಮನೆಗೆ ಬರುತಾರೆ

ಬಂದ ಗುರುಸ್ವಾಮಿಯ ಕಂಡು ಮಾದೇವಮ್ಮ
ಓಡೋಗಿ ಪಾದಕ್ಕೆ ಶರಣನ್ನ

ನೀವು ಕೇಳಿದ್ದ ಭಾಮಕ್ಕೆ ಅಡುಗೇಯ
ಆಗ್ಯದೆ ದೇವರೆ ದಯಮಾಡಿ

ಮಾದೇವಿಯ ಮಾತ ಕೇಳಿದರು ಗುರುಸ್ವಾಮಿ
ಮಾಚಯ್ನ ಅರಮನೆಗೆ ಬರುತಾರೆ

ಚಿನ್ನದ ಕಾಲು ಮಣೆಯಮೇಲಾಗಲೆ
ನಡುಮನೆಯ ಒಳಗೆ ಗುರುಸ್ವಾಮಿ – ಬಂದೀಗ
ಮುರ್ತ ಮಾಡಿದರು ಅವರಾಗ

ಅಗ್ರದ ಬಾಳೆಎಲೆ ತಂದಳು ಮಾದೇವಿ
ಐದು ಬಾಳೆಎಲೆ ಹಾಸುತಾಳೆ

ನಿಲ್ಲಮ್ಮ ಮಾದೇವಿ ಮಲ್ಲೀಗೆ ಮಾದೇವಿ
ನೀ ಏನೂ ಭಿನ್ನವ ಮಾಡಲಿಲ್ಲವೆ

ಬಾಳ ವಂಚಣೆಗಾರ್ರು ವಂಚಣೆ ಕಲಿತಿದ್ದೀರಿ
ಏನೂ ಭಿನ್ನವ ಮಾಡಲಿಲ್ಲವೆ
ಏನೂ ಭಿನ್ನವ ಮಾಡಿಲ್ಲ ಗುರುಪಾದವಲಿ ಎನ್ನೂತ
ಕೂಡೆರಡು ಕರವ ನಮಿಸಿದರು

ಅಟ್ಟದ ಮೇಲೆ ಬಚ್ಚಿಟ್ಟಿರೋದೇನಮ್ಮ
ಮಿಕ್ಕ ರಸವೆಲ್ಲ ಅದರಲ್ಲೆ – ತುಂಬ್ಯದೆ
ಅದು ಒಂದು ವಂಚಣೆಯ ಮಾಡಲಿಲ್ಲವೆ

ಇದನೂವೆ ಸ್ವಾಮಿ ಕಂಡರು ಎನುತೇಳಿ
ಅಟ್ಟಕ್ಕೇಣಿಯ ಹಾಕುತಾಳೆ

ಒಳ್ಳೇಲಿ ತಲೆಯ ಮಡಗಿದಳು ಮಾದೇವಿ
ಇಕ್ಕಣ್ಣು ಒನಕೇಲಿ ಇಡಿದಳು

ಸಣ್ಣ ಬಟ್ಟೆಒಳಗೆ ತಲೆಯ ಸೋಸಿಕಂಡು
ಕಷಾಯ ಕಾಯ್ಸಿ ಮಡಗಿದಳು

ಬಾಯಿಗೆ ಬಾಯಿಕಟ್ಟು ಹಾಕ್ಕೊಂಡು ಮಾದೇವಿ
ಸ್ವಾಮಿಗೆ ಎಡೆಯ ತರುವುದಕೆ – ಆಗಲೆ
ಕ್ವಾಣೆಗೆ ಅವಳು ಈಗ ಹೋಗುತಾಳೆ

ಬಾರಮ್ಮ ಮಾದೇವಿ ಮಲ್ಲಿಗೆ ಮಾದೇವಿ
ಇನ್ನೊಂದು ಬಿನ್ನ ಹೇಳುತೀನಿ

ಮಕ್ಕಳಿಲ್ಲದ ಮಲ್ಲಿ ಊಟವ ಮಾಡೋದಿಲ್ಲ
ನಿನ್ನ ಮಗನ ನೀನು ಈಗ ಕರಿಯಮ್ಮ

ಬಾಳ ಹೊತ್ತಿನಿಂದ ನೋಡಿದೆ ಮಾದೇವಿ
ನಿನ್ನ ಮನೆಯ ಒಳಗಾದ್ರೆ ಮಕ್ಕಳಿಲ್ಲ

ಅನ್ನಬಾರದ ಮಾತ ಅಂದೆನು ಕಂದಣ್ಣಗೆ
ನಾ ಹೊಡೆಯಬಾರದ ಏಟ ಹೊಡೆದಿವ್ನಿ – ನನ್ನೊಡೆಯ
ಮುನಸ್ಕಂಡೋಗ್ಯವನೆ ತವರಿಗೆ – ನನ್ನೊಡೆಯ
ಹೋದೋನ ಸುದ್ದಿ ಏನ್ರಯ್ಯ

ಅಲ್ಲವ್ನೆ ಇಲ್ಲವ್ನೆ ಅಂತ ದುಃಖಮಾಡಲು ಬೇಡ
ಈರ ಸಂಗಯ್ನನ ಮಠಕೋಗಿ ಕರೆತತ್ತ

ಸ್ವಾಮಿಯ ಮಾತ ಕೇಳಿದಳು ಮಾದೇವಿ
ಅತ್ತತ್ತು ದುಃಖ ಪಡುತಾಳೆ

ಈರ ಸಂಗಯ್ನ ಮಠಕಾದರು ಬರುತಾಳೆ
ಮಾದೇವಿ ದುಃಖವ ಮಾಡುತಾಳೆ

ಮಾಡಿದ್ದ ಅಡುಗೆ ಮೇಲೆ ಭೂಮಿಗೆ ದೊಡ್ಡೋರು
ತೀರ್ಥ ಪ್ರಸಾದವ ತಳಿದವರೆ ನನ್ನೊಡೆಯ
ಈರಭದ್ರಕುಮಾರನ ಪಡೆದವರೆ

ತಾಯಿಗೆ ಮೊದಲಾಗಿ ಮಗನ ತಂದು ಬಿಟ್ಟವರೆ
ಮನಗೆ ಬಂದು ಮೂರ್ತ ಮಾಡ್ಯವರೆ

ಮಗನ ಮಠಕೆ ಈಗ ಬಂದಳು ಮಾದೇವಿ
ಮಗನ ಹೆಸರಿಡಿದು ಕರೆದಳು

ಎಲ್ಲಿದ್ದೀಯೋ ನನ್ನ ಕುಲದೇವ್ರೆ ಎಂದು
ಮಗನ ಹೆಸರಿಡಿದು ಕೂಗ್ಯಾಳು
ತಾಯಿ ಕರೆದ ಮಾತಿಗೆ ಗುಡಗುಡನೆ ಓಡಿಬಂದು
ಪಾದಕೆ ಶರಣು ಮಾಡಿದನು

ಮಗನ ಮುಖವನ್ನೆ ನೋಡಿದಳು ಮಾದೇವಿ
ಮನದಲ್ಲಾದರೆ ಓಗ್ಗಿದಳು

ಮಗನನ್ನು ಎತ್ತಿಗಂಡು ಮಠಕಾದರೆ ಬಂದಳು
ಸ್ವಾಮಿಯ ಜೊತೆಗೆ ಬಿಡುತಾಳೆ – ಮಾದೇವಿ
ಈ ಅಡುಗೆಯ ಬಡಿಸಿದಳು

ಸ್ವಾಮಿಯ ಜೊತೆಯಲ್ಲಿ ಕುಂಡ್ರಿಸಿ ಮಗನಿಗೆ
ಅಡುಗೆಯನಾದರೆ ಬಡಿಸಲು – ಮಾದೇವಿ
ಮಾಡಿದ್ದ ಅಡುಗೆಯ ನೋಡುತಾಳೆ

ಹಪ್ಪಳುಪ್ಪಿನಕಾಯಿ ಹಲಸು ಬಾಳೆಹಣ್ಣು
ಘಟ್ಟದ ಕೊಬರಿ ಕೆನೆಮೊಸರು
ಒಪ್ಪಂದಿಂದಿರುವುದ ಕಂಡಳು

ಸ್ವಾಮಿಯ ಪಾದಕೆ ಮಾದೇವಿಯಾದರೆ
ಸಾಂಬ್ರಾಣಿ ಬೆಳಗಿ ಶರಣೆಂದು
ಒಪ್ಪದಿಂದೆಡೆಯ ಪಡಿಸಿದಳು –ಮಾದೇವಿ
ಪಾವನ್ನ ಮೂರ್ತಿ ಸಲಿಸಯ್ಯೊ

ಮಡಿವಾಳ ಮಾಚಯ್ಯ ಮನೆಯಲ್ಲಿ ಸ್ವಾಮಿಯು
ಬಿನ್ನ ಏನಾದರೆ ಅಳೆದರು –ಆವಾಗ
ಬಂದು ಮಂಚದಮೇಲೆ ಕುಳಿತರು

ತಾಂಬೂಲ ತಂದು ಮಡಗಿದಳು ಮಾದೇವಿ
ಬಾಗಿ ಪಾದಕೆ ಶರಣೆನ್ನ

ಬಾಗಿ ಪಾದಕೆ ಶರಣೆಂದು ಬೇಡಿದರು
ದೇವರೆ ನಿಮ್ಮ ಕಂತೆ ಒಪ್ಪಿರಯ್ಯ

ಇಲ್ಲಿಯೆ ಕಂತೆ ನಾ ಒಪ್ಪೋದಿಲ್ಲ ಮಾಚಯ್ಯ
ನಮ್ಮ ಕೈಲಾಸಕೆ ನೀವು ಬರಬೇಕು – ಹಾಗಂದು

ಅಲ್ಲಿ ನಮ್ಮ ಕಂತೆ ಒಪ್ಪುತೀನಿ – ಎನುತೇಳಿ
ಅಲ್ಲಿಂದ ಮಾಯವಾಗಿ ಹೋಗುತಾರೆ

ಗಂಡ ಹೆಂಡರು ಒಂದುಗೂಡಿ ಅವಾಗ
ಈರಭದ್ರನ ಕರಕಂಡು –ಅವರಾದ್ರೆ
ಕೈಲಾಸಕೆ ಸಗಿ ಬರುತಾರೆ

ಕೈಲಾಸದ ದ್ವಾರದ ಒಲಗಾದ್ರೆ ಸ್ವಾಮಿಯು
ರಾವುತಯ್ಯನಾಗಿ ನಿಂತವರೆ

ಯಾರಯ್ಯ ನೀವು ಎಲ್ಲಿಂದ ಬಂದಿರಿ
ಕೈಲಾಸಕೆ ನಿಮ್ಮ ಬಿಡುವುದಿಲ್ಲ

ಅಪ್ಪ ಭೂಮಿಗೆ ದೊಡ್ಡೋರಿಗೆ ಕಂತೆ ಒಪ್ಪಿಸಬೇಕು
ದಾರಿ ಬಿಡಿರಯ್ಯ ರಾವುತಯ್ಯ

ದಾರಿಯನಾದರೆ ನಾನೀಗ ಬಿಡುತೀನಿ
ಸ್ವಾಮಿಗೆ ನೀವು ಏನೇನು – ಮಾಡಿದಿರಿ
ಹೇಳಿದರೆ ನಾನು ಬಿಡುತೀನಿ

ಏನ ಹೇಳಲಿ ಹೆಚ್ಚಿನ ರಾವುತಯ್ಯ
ಮಡದಿ ಶಿರವ ಕೂದು ಕಂತೆಯ –ಒಗೆದೆನು
ಮಗನ ಕೂದು ಅಡುಗೆಯಮಾಡಿದೆನು

ಮಗನ ಕೂದು ಅಡುಗೇಯ ಮಾಡಿ ಇಕ್ಕಿದರೂನು
ಇನ್ನು ದೊಡ್ಡೋರು ಕಂತೆ ಒಪ್ಪಲಿಲ್ಲ

ನೋಡಿದರ ಮಾಚಯ್ನ ದೃಢಮನವ ಈಗಲೆ
ಇಕ್ಕೀದ ಅನ್ನವ ಹಂಗಿಸಬಹುದೆ – ಮಾಚಯ್ಯ
ನೀ ಹೊತ್ತಕಂತೆ ಹೊತ್ತಾಗೆ ನಿಂತಿರಬೇಕು

ಸತ್ತು ಹುಟ್ಟುವದ ಬಿಡಿಸೊ ಲಿಂಗಯ್ಯೋ
ಸಿರಿಗಿರಿ ಪಟ್ಟಣದೋನೆ ಕೈಲಾಸದ ಪ್ರಭುವೆ ಲಿಂಗಯ್ಯೋ
ನೀ ಕಯ್ಯ ಬಿಟ್ಟಾರೆ ಲಿಂಗಯ್ಯೋ
ನೀ ಕಯ್ಯ ಬಿಡಲಾರೆ ಲಿಂಗಯ್ಯೋ
ನೀ ಕಯ್ಯ ಬಿಟ್ಟರೆ ನಾಯಾರ್ತ ಸೇರಲಿ ದೇವ ಲಿಂಗಯ್ಯೋ
ಮಧ್ಯ ಸಮುದ್ರದ ಒಳಗೆ ಲಿಂಗಯ್ಯೋ
ಹಡಗು ಮುಳುಗಿದಂಗಾಯ್ತೊ ಲಿಂಗಯ್ಯ
ಕಡೆಯ ತೇಲಿಸೋ ಗುರುವೆ ಲಿಂಗಯ್ಯೋ

ಯಾರಿಗ್ಯಾರಿಲ್ಲವಲ್ಲ ಲಿಂಗಯ್ಯೋ
ಗುರುವೆ ದಾರಿಗೊಬ್ಬರ ಸಂಗಡವಿಲ್ಲ ಲಿಂಗಯ್ಯೋ
ಕಡೆಯ ತೇಲಿಸು ಮಂಟೇಂದ ಲಿಂಗಯ್ಯೋ
ಇಲ್ಲಿ ಹೊತ್ತಕಂತೆ ಹೊತ್ತಾಗೆ ನಿಂತಿವ್ನಿ ಲಿಂಗಯ್ಯೋ
ಆವಾಗ ಪರಮೇಶ್ವರನಿಗರಿವಾದೊ ಲಿಂಗಯ್ಯೋ
ಆಗ ಶರಣರ ಕರೆದನಂತೆ ಜಗದೀಶ ಲಿಂಗಯ್ಯೋ
ಮಗನಿಗೆ ಶಾಪವ ಕೊಟ್ಟವರೆ ಲಿಂಗಯ್ಯೋ
ಶರಣರ ಬಟ್ಟೆಯ ಒಎದವರೆ ಅವರು ಲಿಂಗಯ್ಯೋ
ದೇವರ ಬಟ್ಟೆಯನಾದರೆ ಒಗೆದವರೆ ಅವರು ಲಿಂಗಯ್ಯೋ
ಕೈಲಾಸವ ಅವರು ಕಂಡರಯ್ಯೋ ಲಿಂಗಯ್ಯೋ
ಬಂದು ಕೈಲಾಸವ ಸೇರ್‍ಯವರೆ ಲಿಂಗಯ್ಯೋ
ವೀರಭದ್ರಕುಮಾರನಿಗೆ ಲಿಂಗಯ್ಯೋ
ಏನ ಹೇಳುತಾರೆ ಸ್ವಾಮಿ ಲಿಂಗಯ್ಯೋ
ನೀ ಹೋಗಿ ನರಮಾನ್ಯವರ ಬಟ್ಟೇನೆಲ್ಲ ಒಗೆದು ಲಿಂಗಯ್ಯೋ
ಮುನಿಗಳ ಬಟ್ಟೆಯ ಒಗೆದು ಲಿಮಗಯ್ಯೋ
ಅವರ ನರಲೋಕಕ್ಕೆ ಕಳುಸುತಾರೆ ಲಿಂಗಯ್ಯೋ
ನಾವು ಕರೆದಾಗ ನೀವು ಬನ್ನಿ ಲಿಂಗಯ್ಯೋ
ನಿಮಗೆ ಮೋಕ್ಷವ ಕೊಡುತೀವಿ ಲಿಂಗಯ್ಯೋ
ಇವರು ಹೊತ್ತಕಂತೆ ಹೊತ್ತಾಗೆ ನಿಲ್ಲಲಿ ಲಿಂಗಯ್ಯೋ
ಗಂಡ ಹೆಂಡರಿಗೆ ಮೋಕ್ಷವ ನೀಡುತಾರೆ ಲಿಂಗಯ್ಯೋ
ಅಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಪಲ್ಲೇಶ್ವರ ಮಠದಲ್ಲಿ ಪ್ರಭುಲಿಂಗ
ಮಡಿವಾಳ ಮಾಚಯ್ಯ ವಚನ
ಇಲ್ಲಿಗೆ ಮುದ್ರೆ ಶರಣು ಶರಣಾರ್ತಿ
ಮಡಿವಾಳ ಮಾಚಯ್ಯ ವಚನ ಹೇಳಿದ ಪುಣ್ಯಾತ್ಮರಿಗೆ
ಹೇಳಿಸಿದ ಮಹಾತ್ಮರಿಗೆ
ಬೆಳ್ಳಿ ತೊಳೆದಂತೆ ಪಾಪ ಪರಿಹಾರ
ಇಲ್ಲಿಗೆ ಮುದ್ರೆ ಶರಣು ಶರಣಾರ್ತಿ

– ಕೃತಿ : ಕನ್ನಡ ವೃತ್ತಿಗಾಯಕ ಕಾವ್ಯಗಳು

***

೧೫. ಮಾದರ ಚೆನ್ನಯ್ಯ

ಮಾದಾರ ಚನ್ನನ ಮಡದಿ ಪತಿವ್ರತಿ ಗಂಗಮ್ಮ
ಗಂಡನ ಮಾತ ಗೆದಿಸ್ಯಾಳ । ಭಕುತಿಗಿ
ಹೆಸರ ಆಗ್ಯಾಳ ಕಲ್ಯಾಣ ಊರಾಗ ॥ ॥ ೧ ॥

ಆಚ್ಯಾಕ ಹರಳಯ್ಯ ಈಚಾಕ ಚನ್ನಯ್ಯ
ನಟ್ಟನಡು ಹರ ಕಕ್ಕಯ್ಯ । ಮೂವರು
ಅನುಭಾವ ನಡಸಿ ಕಲ್ಯಾಣ ಊರಾಗ ॥ ॥ ೨ ॥

ಮೂರಕಲ್ಲಿನ ಒಲಿಹಾಕಿ ಗಡಿಗ್ಯಾಗ ಎಸರಿಟ್ಟು
ಭಕುತಿಲಿ ಅಂಬಲಿ ಮಾಡ್ಯಾರ । ಶರಣರಿಗಿ
ಕರೆದು ಬಂದಾರ ಬಿನ್ನಾಕ ಕಲ್ಯಾಣ ಊರಾಗ ॥ ॥ ೩ ॥

ಬಸವಣ್ಣ ಒಳಗೆಲ್ಲ ಪರಸಾದ ಪಡಿತಾರ
ಅಂಬಲಿಯ ರುಚಿಯ ನೆನಸ್ಯಾರ । ಬೇಡಿ ಬೇಡಿ
ಅಂಬಲಿ ಊಟ ಮಾಡ್ಯಾರ ಕಲ್ಯಾಣ ಊರಾಗ ॥ ॥ ೪ ॥

ಕೊಂಡಿಯ ಮಂಚಣ್ಣ ಬಿಜ್ಜಳಗ ಹೇಳ್ಯಾರ
ಬಿಜ್ಜಳ ಕರಸ್ಯಾನ ಬಸವಗ । ಬಸವಣ್ಣ ಅಂಬಲಿ
ರುಚಿಯ ವರ್ಣನೆ ಮಾಡ್ಯಾರ ಕಲ್ಯಾಣ ಊರಾಗ ॥ ॥ ೫ ॥

ಬಿಜ್ಜಳ ಬರತಾನ ಅಂಬಲಿ ಕೇಳ್ಯಾನ
ಭವಿಗಂಬಲಿ ಕೊಡಲ್ಲೆಂದು ನುಡಿತಾರ – ಚನ್ನ ಅಂಬಲಿ
ಅಂಬಲಿ ಗಡಿಗಿ ಒದಿತಾರ ಆಗ ಕಲ್ಯಾಣ ಊರಾಗ ॥ ॥ ೬ ॥

ಬಿಜ್ಜಳನ ಕಾಲದಾಗ ಉರಿ ಹತ್ತಿದಂಗ ಬ್ಯಾನಿ
ಕಾಲ ತಿಕ್ಯಾನ ಬಿಜ್ಜಳ । ಅಂಬಲಿ ಹರದಾದ
ಗಡಿಗ್ರಾಮ ಗಾಬರಿ ಆಗ್ಯಾರ ಕಲ್ಯಾಣ ಊರಾಗ ॥ ॥ ೭ ॥

ಬಸವಣ್ಣ ಬಂದಾರ ಬುದ್ಧಿಯ ಹೇಳ್ಯಾರ
ತಪ್ಪಾಯ್ತು ಎಂದು ನುಡಿತಾನ । ಕಾಲನಾ
ಉರಿನಿಂತು ಅಂಬಲಿ ಹರಿಯದು ಬಿಡ್ತು ಕಲ್ಯಾಣ ಊರಾಗ ॥ ॥ ೮ ॥

–ಶ್ರೀಮತಿ ಗೌರವ್ವ ಕಾಡಾದಿ

***

ಮಾದಾರ ಚೆನ್ನಯ್ಯ

ಸೂಚಕ ಪದ್ಯ : ಜಾತಿಯೊಳು ಮಾದರನು ನೀತಿಯೊಳು ಶಿವಶರಣ
ಮಾತುವಚನಗಳು ಚೆನ್ನಯ್ಯ । ಶಿವನುಂಡ
ಕೂತು ಎದೆಯೊಳಗೆ ಅಂಬಲಿಯ ॥ ೧ ॥

ನೆನಿಸಿ ಹಾಡುವೆ ಶರಣ ಎನಿತು ನಿನ್ನೀ ಮಹಿಮೆ
ಕುಣಿಕೆ ಬಾಳುವೆಯ ಬಿಚ್ಚುದಕೆ । ವರಗ್ಯಯು
ಮನಕೆ ಶಿವಬೆಳಕ ತೋರುದಕೆ ॥ ೨ ॥

ಕಣದೊಳಗೆ ಒಕ್ಕಲಿಗ ದನಿಯೆತ್ತಿ ಬೆಳತನಕ
ಧನಿಯೆಂದು ಹಾಡಿ ಬೆಳಕೊಂಡು । ಒಕ್ಕುವನು
ಕಣರಾಶಿಯುಣಿಸಿ ಜಂಗಮಕೆ ॥ ೩ ॥

ಹಂತಿಗಣ್ಣಿಯು ಚೆನ್ನ ಚಿಂತೆಯಿಲ್ಲದ ರಾಶಿ
ಬಂತು ಮಹಮನೆಗೆ ಬಸವಣ್ಣ । ನುಣಸಿದ್ನು
ನಿಂತು ಶಿವಮತದ ಅಂಬಲಿಯ ॥ ೪ ॥

ಬಳ್ಳಿಗಾವಿಯು ಕೇಳೊ ಒಳ್ಳೆ ಶರಣರ ಊರು
ಕಳ್ಳು ಮಿಣಿ ಹೆಣೆದು ಆಯದೊಳು । ಚೆನ್ನಯ್ಯ
ಒಳ್ಳೆ ದಾಸೋಹ ನಡೆಸಿದ್ದ ॥ ೫ ॥

ಹದಮಾಡಿ ತೊಗಲನ್ನು ನೆದರೊಡೆವ ಜೋಡುಗಳ
ಮುದದಿ ಚೆನ್ನಯ್ಯ ತಾಮಾಡಿ । ಶರಣರಿಗೆ
ಸದರ ಪೇಟೆಯೊಳು ಮಾರುತಲಿ ॥ ೬ ॥

ಬಳ್ಳಿಗಾವಿಗೆ ಬಂತು ಹಲ್ಲೆ ಹೊರಗಿನ ದಂಡು
ಕೊಳ್ಳಿ ಮಿಗಿಲಾಗಿ ನಾಡೊಳಗೆ । ಪಲ್ಲವರ
ತಳ್ಳಿ ಚಾಲುಕ್ಯರಾಳುತಲಿ ॥ ೭ ॥

ಅರಸು ಅರಸರ ಜಗಳ ಬರಸಾಯ್ತು ದೇಶದೊಳು
ಎರವಾಯ್ತು ಊರು ಶರಣರಿಗೆ । ಚೆನ್ನಯ್ಯ
ನೆರಗಡಿಗೆ ಹೋದ ಕಾಯಕಕೆ ॥ ೮ ॥

ಕರಿಕಾಲ ಚೋಳರಸ ಹರುಸ ಬಿತ್ತಿಗೆ ಮಾಡಿ
ಎರಕ ಹೊಯ್ದಿದ್ದ ಶಿವಭಕ್ತ । ನಾಡೊಳಗೆ
ನೆರಿಕೆ ತನಗೆಂದು ಚೆನ್ನಯ್ಯ ॥ ೯ ॥

ವರಕಾಂಚಿ ಸೇರಿದನು ಹರನೆಂದು ಚೆನ್ನಯ್ಯ
ಸರದೀಪ ಹಚ್ಚಿ ಕರಿಕಾಲ । ಚೋಳರಸ
ಸಿರಬಾಗಿ ಶಿವನ ಶಿವಪೂಜೆ ॥ ೧೦ ॥

ಛಪ್ಪನ್ನ ದೇಶದೊಳು ಒಪ್ಪಿ ಮೆರೆಯಿತು ಕಾಂಚಿ
ಸಿಪ್ಪೆ ಸಂಪತ್ತು ಜಗದೊಳಗೆ । ಚೋಳರಸ
ಅಪ್ಪಿ ಜನರನ್ನು ಆಳುತಲಿ ॥ ೧೧ ॥

ಮಡದಿ ಗಂಗೆಯ ಕೂಡಿ ಬಡವ ಮಾದರ ಚೆನ್ನ
ತಡೆದ ಕಾಂಚಿಯೊಳು ಕಾಯಕಕೆ । ನಿತ್ಯದಲಿ
ಅಡಕದಲಿ ನೆಡಿಸಿ ಶಿವಪೂಜೆ ॥ ೧೨ ॥

ಪಾಯಲಾಯಕೆ ಹುಲ್ಲ ಸಾಗಿಸುವ ಕೆಲಸವನು
ಬೇಗುಬೆಳಗಿನಲಿ ಕಾಂಚಿಯೊಳು । ಕಬಾಡರು
ಹಾಗಿಲದೆ ಮಾಡಿ ಅರಸನಿಗೆ ॥ ೧೩ ॥

ಅಡಕದಲಿ ಶಿವಪೂಜೆ ಬಿಡದೆ ಮಾಡುತ ಶರಣ
ಮಿಡುಕದಲೆ ಹುಲ್ಲ ಹೊತ್ತೊಗೆವ । ಕಾಯಕವ
ಒಡೆಯ ಚೋಳನಿಗೆ ನಡೆಸಿದನು ॥ ೧೪ ॥

ಲಾಯದೊಳು ಹುಲ್ಲೊಗೆವ ಕಾಯಕವ ಕೈಕೊಂಡು
ಕಾಯೊ ಲಿಂಗಯ್ಯ ನಿನ್ನಾಟ । ಈ ಬಾಳು
ನ್ಯಾಯ ನಿನಗುಣಿಸಿ ಉಣ್ಣುವದು ॥ ೧೫ ॥

ಉಂಬಲ್ಲಿ ಉಡುವಲ್ಲಿ ಕೊಂಬಲ್ಲಿ ಕೊಡುವಲ್ಲಿ
ಶಂಭು ಹರನೆಂದು ಶಿವಗುಣಿಸಿ । ಮಾಡುವನು
ತುಂಬ ಶಿವಶರಣ ಚೆನ್ನಯ್ಯ ॥ ೧೬ ॥

ಹೊಸ ಹೊಲಬ ಕೆಲಸದೊಳು ಹೊಸಬನೊಳು ಜನಕಂಡು
ಹೊಸತು ತಮಗೆಂದು ಚನ್ನನಿಗೆ । ಕಬಾಡರು
ಹಸುಮಕ್ಕಳಂತೆ ಕಿವಿಗೊಡಲು ॥ ೧೭ ॥

ಹುಲ್ಲಗುತ್ತಿಗೆ ಕೆಲಸ ಎಲ್ಲರೊಪ್ಪಿಗೆಯಿಂದ
ಕಲ್ಲಿನೊಳಗಾದ ಲಿಂಗನಿಗೆ । ಎಡೆಮಾಡಿ
ನಲ್ಲೆಯೊಡಗೂಡಿ ದಾಸೋಹ ॥ ೧೮ ॥

ಕಾಡಕಾಡೊಳು ಹುಲ್ಲ ಸೂಡ ಸೂಡನೆ ಕೊಯ್ಲಿ
ಗೂಡ ಬಣವೆಗಳ ಒಟ್ಟಿಸುವ । ಚೆನ್ನಯ್ಯ
ಹಾಡಿ ಶಿವಭಜನೆ ನಿತ್ಯದಲಿ ॥ ೧೯ ॥

ಕಂಡದ್ದು ಕೇಳಿದ್ದು ರುಂಡದಾರಿಗೆ ಉಣಿಸಿ
ಉಂಡು ಭೋಗಿಸುವ ಚೆನ್ನಯ್ಯ । ಕಾಡೊಳಗೆ
ಮಂಡಲವೆ ನೋಡಿ ಕೈಮುಗಿದು ॥ ೨೦ ॥

ಉಸುರೊಡನೆ ವಾಸನೆಯ ಹಸನ ಮನದಲಿ ಭಜಿಸಿ
ನೊಸಲಗಣ್ಣನಿಗೆ ಎಡೆಮಾಡಿ । ಚಿತ್ತದೊಳು
ಹಸಗೂಸಿನಂತೆ ಚೆನ್ನಯ್ಯ ॥ ೨೧ ॥

ಕಾವರದ ಕಾಡೊಳಗೆ ಹೂವಿನ್ಹಂದರ ಹುಡಿಕಿ
ಹೂವಾಗಿ ಚೆನ್ನ ಲಿಂಗನಿಗೆ ಕೂತಿರಲು
ಕಾವಣವ ನೋಡಿ ಹರುಸಾಗಿ ॥ ೨೨ ॥

ಕರಡಿಗೆಯ ಲಿಂಗಯ್ಯ ಕರದೊಳಗೆ ತಾ ಕೂತು
ಎರೆ ಎನಗೆ ಚೆನ್ನ ತಿಳಿನೀರ । ಮುಡಿಸೆನಗೆ
ಅರಳುವೀ ಅರಳಬನದೊಳಗೆ ॥ ೨೩ ॥

ಗುಂಗಿ ಮುಟ್ಟದ ಹೂವ ಲಿಂಗನಿಗೆ ತಿರಿತಂದು
ತಂಗೊಳದ ಮಡಿಯ ತಿಳಿನೀರ । ಚೆನ್ನಯ್ಯ
ಟೆಂಗು ಹಣ್ಣುಗಳ ಎರೆದುಣಿಸಿ ॥ ೨೪ ॥

ಲಿಂಗನಿಗೆ ಹಿಡಿದೆಡೆಯ ಅಂಗ ತಣಿಯಲಿ ಎಂದು
ಲಿಂಗಯ್ಯ ಕೊಟ್ಟ ತುತ್ತೆಂದು । ಚೆನ್ನಯ್ಯ
ನುಂಗಿ ಹರನೆಂದು ಕೈಮುಗಿದು ॥ ೨೫ ॥

ಹುಲ್ಲ ಹೊರೆಗಳ ಹೊರಿಸಿ ಚೆಲ್ಲಿಸಿದ ಲಾಯದೊಳು
ಒಳ್ಳೆ ಶಿವಶರಣ ಚೆನ್ನಯ್ಯ । ಕಾಯಕವು
ಗೊಲ್ಲಯ್ಯನೆಂದು ಮನಸೇರಿ ॥ ೨೬ ॥

ಮನವಿರುವ ಈ ಚಿಕ್ಕ ತನು ಮನೆಯು ಇರಲೇನು
ಮನ ಸಣ್ಣ ದೇನು ಚೆನ್ನನದು । ಶಿವಲಿಂಗ
ತನುವಿನೊಳು ತುಂಬ ನಿಂತಿರಲು ॥ ೨೭ ॥

ಗುತ್ತ ಎದೆಯೊಳು ಚೆನ್ನ ಬಿತ್ತುವನು ಶಿವಪೂಜೆ
ಎತ್ತವನು ಎಡಿಯ ಹೊಡಗುಂಟಿ । ಹಸಮನವ
ಕತ್ತಲೆಯ ಕಳೆಯ ತಗೆಯುದಕೆ ॥ ೨೮ ॥

ಮಡದಿ ಗಂಗಾದೇವಿ ಒಡೆಯ ಚೆನ್ನನ ಕಂಡು
ಒಡಲೂಟ ಉಂಟು ಆನಂದ । ನೀಡುವಳು
ಒಡಲಡಿಗಿ ಪತಿಗೆ ಎಡೆಗೆಂದು ॥ ೨೯ ॥

ಎಡೆಯ ಮಾಡಿದ ಅಡಿಗಿ ಒಡೆಯ ಲಿಂಗನಿಗುಣಿಸಿ
ಒಡಲಿಗಮರುತದ ಎಡೆಯಾಯ್ತು । ಚೆನ್ನಯ್ಯ
ಬಡವಾದರೇನು ಶಿವಶರಣ ॥ ೩೦ ॥

ಗಂಡ ಭಕ್ತನು ಹಣತೆ ಹೆಂಡತಿಯು ಶಿವಬತ್ತಿ
ಉಂಡ ಬಾಳುವೆಯು ಹಣತೆಣ್ಣೆ । ಕಾಯಕವು
ಕಂಡ ಶಿವಬೆಳಕು ಜಗದೊಳಗೆ ॥ ೩೧ ॥

ಅರಿಯದಲೆ ಜಗವಿರಲು ಹರಭಕ್ತನಿವನೆಂದು
ಮರೆಯಿಸಲು ಶಿವನು ಜಗದೊಳಗೆ । ಶಿವಭಕ್ತಿ
ಹರುಷದಲಿ ಬಂದ ಹಟತೊಟ್ಟು ॥ ೩೨ ॥

ಇರುತಿರುವ ದಿನಗಳೆದು ಬರಲೆಂದು ದಿನಬಂತು
ಹೊರೆಯ ಹುಲ್ಲನ್ನು ಲಾಯದೊಳು । ಹೊತ್ತೊಗೆದು
ಹರುಷದಲಿ ಬಂದ ಚೆನ್ನಯ್ಯ ॥ ೩೩ ॥

ಪರಮಾತ್ಮ ಲಿಂಗನಿಗೆ ಮರೆಯದಲೆ ಮನೆಯೊಳಗೆ
ಪರಮ ಧ್ಯಾನದೊಳು ಮುಳುಗಿರಲು । ಲಿಂಗಯ್ಯ
ಹರದಾಡಿ ಬೆರದ ಮೈಯೊಳಗೆ ॥ ೩೪ ॥

ಹೊರಹೊತ್ತ ದಣುವೆಂದು ಹರದೆ ಗಂಗಾದೇವಿ
ಶರಣ ಚೆನ್ನನಿಗೆ ದಿನದೂಟ । ನೀಡುದಕೆ
ಹರುಷದಲಿ ಬಗೆಸಿ ನೋಡಿದಳು ॥ ೩೫ ॥

ಬರೆ ಮನೆಯು ಏನಿಲ್ಲ ಬರೆ ಮುಕ್ಕು ಜೋಳೊಂದು
ಹರನೆಂದು ಬೀಸಿ ಅಂಬಲಿಯ । ಮಾಡಿದಳು
ಶರಣ ಚೆನ್ನಯ್ಯ ಉಣಲೆಂದು ॥ ೩೬ ॥

ತೆಳ್ಳನ್ನ ಅಂಬಲಿಯ ಸಳ್ಳೆಂದು ಕುಡಿಕುಡಿದು
ಕಳ್ಳುಗಳು ದಣುವ ನೀಗಿಸಲಿ । ಹಗುರಾಗಿ
ಒಳ್ಳೆ ಕಾಯಕವ ಮಾಡುದಕೆ ॥ ೩೭ ॥

ಮಸೆದಾಡಿ ಜಗದೊಳಗೆ ಹಸಿದಿರುವ ಶಿವನನ್ನು
ಹಸಿದಿರುವನೆಂದು ಕರೆಯದಕೆ । ಬೇಸತ್ತೊ
ಮಸಣದೊಳು ಇದ್ದ ಹಸುವಾರಿ ॥ ೩೮ ॥

ಶಿವಶರಣ ಚೆನ್ನಯ್ಯ ಶಿವಗೆಡೆಯ ಮಾಡುದಕೆ
ಶಿವಗಾಯ್ತು ಹಸಿವು ಉಣ್ಣುದಕೆ । ಅಂಬಲಿಯ
ಶಿವರೂಪ ತೋರಿ ಚೆನ್ನನಿಗೆ ॥ ೩೯ ॥

ನಾಮುಂಚೆ ಚೆನ್ನಯ್ಯ ನೀಮಾತ್ರ ತಡೆ ಭಕ್ತ
ಕ್ಷಾಮ ಎನಗಾರು ಉಣಿಸುವರು । ಹಸಿದಿರುವೆ
ನೇಮ ನಿತ್ಯಗಳ ಬದಿಗಿಡುವೆ ॥ ೪೦ ॥

ಕಂಡು ಬಾಯೆಂಜಲವ ರುಂಡಧಾರಿಯು ಮಾಡಿ
ಉಂಡ ಶಿವಭಕ್ತಿ ಅಂಬಲಿಯ । ಚೆನ್ನಯ್ಯ
ಕೆಂಡಗಣ್ಣನಿಗೆ ಕೈಮುಗಿದ ॥ ೪೧ ॥

ಉಳಿದ ಅಂಬಲಿ ಚೆನ್ನ ತಳಿಗೆಯನೆ ಬಾಯ್ಗಿಡಲು
ತಳಿಗೆಯೊಳು ಶಿವನು ಕೈಹಾಕಿ । ಸುರಕೊಂಡ
ಒಳೆಸುಖವು ಮಿಗಿಲೆ ಶಿವಲೋಕ ॥ ೪೨ ॥

ಅಂಬಲಿಯೊ ಅಮೃತವೊ ಶಂಭುಹರನೆಂಜಲವೊ
ಹಂಬಲಿಸಿ ಹರನು ಉಣ್ಣುವದೊ । ಶರಣನಿಗೆ
ನಂಬಿ ಶಿವಕೊಟ್ಟ ಶಿವಪದವೊ ॥ ೪೩ ॥

ಮುಂದಿಟ್ಟ ಅಂಬಲಿಯ ಹೊಂದಿ ಶಿವ ಕುಡಿಯುತಲಿ
ವಂದಿಸುತ ಚೆನ್ನ ಲೋಲಾಡಿ । ದಿನಗಳೆದ
ಅಂದದಲಿ ಉಂಡು ಶಿವನೊಡನೆ ॥ ೪೪ ॥

ಮರುದಿನವೆ ಮುಂಜಾನೆ ಕರಿಕಾಲ ಚೋಳರಸ
ಹರಭಕ್ತ ಶಿವನ ಗುಡಿ ಹೊಕ್ಕು । ನಿಂತಿರಲು
ದರುಶನದಿ ಬಯಕೆ ಎದೆತುಂಬಿ ॥ ೪೫ ॥

ಒಲಿಸುವೆನು ಎದುರಿನಲಿ ನಲುಮೆಯಲಿ ಶಿವನನ್ನು
ಚಲತೊಟ್ಟು ಚೋಳ ಮರಳಿದನು । ಅರಮನೆಗೆ
ಹಲ ಬಗೆಯ ಪೂಜೆ ಸೌರಣೆಗೆ ॥ ೪೬ ॥

ಪನ್ನೀರಿನಭಿಷೇಕ ಹೊನ್ನಕಳಸಕೆ ತುಂಬಿ
ಪನ್ನಂಗಧರಗೆ ಎರೆಯದಕೆ । ತಕ್ಕೊಂಡು
ರನ್ನಮಣಿ ಮುಕುಟ ಹಾಕುದಕೆ ॥ ೪೭ ॥

ಗಂಧ ತೀಡಿದ ಪತ್ರಿ ಕೆಂದಾವರೆ ಹೂವುಗಳ
ನಂದಿವಾಹನಗೆ ಉಡುಗರೆಯ । ಜರತರೆಯ
ತಂದು ಕರಿಚೋಳ ಪೂಜಿಸಿದ ॥ ೪೮ ॥

ಕೈಮುಗಿದು ಭಜಿಸಿದನು ಸೂಮನದಿ ರಸದೂಟ
ಸೋಮಧರ ಉಣ್ಣು ಹಸಿದಿರುವಿ । ಭಕ್ತನಿಗೆ
ಸೈಮಾಡು ಮೆಚ್ಚಿ ಶಿವಲಿಂಗ ॥ ೪೯ ॥

ನನ್ನೆದುರು ಉಣ್ಣದಕೆ ಮನ್ನಣೆಯು ಇರದಿರಲು
ಉಣ್ಣು ಮರೆಮಾಡಿ ನಿಲ್ಲುವೆನು । ನೀನುಂಡ
ಸನ್ನುತದ ಸರವ ಕೇಳುತಲಿ ॥ ೫೦ ॥

ಮರೆಮಾಡಿ ಚೋಳರಸ ತೆರೆಯೊಳಗೆ ತುಂಬಿಟ್ಟ
ಹರಿವಾಣ ನೂರು ಶಿವಲಿಂಗ । ಉಣಲೆಂದು
ಸಿರಬಾಗಿ ಹೊರಗೆ ಭಜಿಸುತಲಿ ॥ ೫೧ ॥

ಸೂಡಗಟ್ಟಿದ ಜಡೆಯು ತೀಡಿಟ್ಟ ಪರೆಕೋರೆಯು
ಜೋಡುಗೈಯೊಳಗೆ ಡವಿಗೆಯನು । ಹಿಡಿಯುತಲಿ
ಬೇಡಿ ಉಂಡವನೆ ನೀನುಣ್ಣು ॥ ೫೨ ॥

ಸಿರಯಾಳ ಚೆಂಗಳೆಯ ಕರುಮಗನ ಉಂಡವನೆ
ಮರೆದುಂಡೆ ಮಾಂಸ ಚೆನ್ನನದು । ಶಿವಲಿಂಗ
ಹೊರತೇಕೆ ಇಂದು ನೀನುಣ್ಣು ॥ ೫೩ ॥

ಕದ್ದು ದೋಸೆಯ ತಿಂದೆ ಇದ್ದು ಹೊಟ್ಟೆಗೆ ಹೊತ್ತಿ
ಸದ್ದೇನು ತರುಳೆ ಹಾಲ್ತರಲು । ನೀ ಕುಡಿದೆ
ಜಿದ್ದೇನು ಶಿವನೆ ನೀನುಣ್ಣು ॥ ೫೪ ॥

ಹೊರ ಅಗಸಿ ನೌಬತ್ತು ಅರಮನೆಯ ಚೌಗಡವು
ತರತರದಿ ನುಡಿದು ಮೊಳಗಿದವು । ಗಗನದೊಳು
ಗಿರಿಜೆ ಹರನೊಡನೆ ಶಿವಗಣವು ॥ ೫೫ ॥

ನೋಡಿ ನಲಿಯಿತು ಶಿವಗೆ ನೀಡಿಟ್ಟು ರಸದೂಟ
ಹಾಡಿ ಶಿವಭಜನೆ ಕೇಳುತಲಿ । ಚೋಳರಸ
ಮಾಡಿರುವ ಪೂಜೆ ಹೋಗಳುತಲಿ ॥ ೫೬ ॥

ಶಂಭುಹರನೆಂದೆನುತ ನಂಬಿರುವ ಶಿವಭಕ್ತ
ಕಂಬದಡಿ ಮರೆಯ ಇಣಕಿಣಕಿ । ನೋಡಿದನು
ತುಂಬಿಟ್ಟ ಊಟ ತುಂಬಿರಲು ॥ ೫೭ ॥

ಇಟ್ಟೇನು ಈ ಜೀವ ಕಟ್ಟೆನೆಲೆ ಶಿವಲಿಂಗ
ಮುಟ್ಟದಲೆ ಹೋಯ್ತು ಶಿವಭಕ್ತಿ । ಶಿವನಡಿಗೆ
ಬಿಟ್ಟೆಯನು ಹೋದ ದನದಂತೆ ॥ ೫೮ ॥

ಒರೆಯ ಕತ್ತಿಯ ಚೋಳ ಹಿರಿದು ಕತ್ತಿಗೆ ಇಡಲು
ಕೊರಳ ಶಿವಲಿಂಗ ಕೈಹಿಡಿದು । ಎಲೆಚೋಳ
ತರವಲ್ಲ ಹತ್ಯ ಭಕ್ತನಿಗೆ ॥ ೫೯ ॥

ಸ್ವೈರಣಿಯು ಅರಸನಿಗೆ ಮೀರಿದರೆ ಗತಿಯೇನು
ಚೂರುಚೂರಾಗಿ ಒಡೆತನವು । ಜಗದೊಳಗೆ
ಹೋರಾಟವೆದ್ದು ಕದನೆದ್ದು ॥ ೬೦ ॥

ತಡೆಚೋಳ ಭಿಡೆಬೇಡ ಒಡಲೂಟ ಉಂಡಿಹೆನು
ಬಡವ ಚನ್ನಯ್ಯನೊಡಗೂಡಿ । ಅಂಬಲಿಯ
ಕಡುಮಾತು ಹಸಿವೆ ಹಿಂಗಿಹುದು ॥ ೬೧ ॥

ಏನು ಹೇಳಲಿ ರುಚಿಯ ಹೀನಾಯ್ತು ಅಮರುತವು
ನಾನೊಬ್ಬ ಕುಡಿದೆ ಅಂಬಲಿಯ । ಸರಿ ಏನು
ನೀನು ತಂದಿರುವ ಈ ಊಟ ॥ ೬೨ ॥

ಶಿವನುಂಡ ಚೆನ್ನಯ್ಯ ಶಿವಭಕ್ತನೆಲ್ಲಿಹನು
ಭವದೊಳಗೆ ನನ್ನ ರಾಜ್ಯದೊಳೆ । ನಿಜಹೌದೆ
ಶಿವನುಡಿಯು ಸತ್ಯವಿರಬಹುದೆ ॥ ೬೩ ॥

ಚೆನ್ನಯ್ಯ ಭಕ್ತನನು ಮುನ್ನನೋಡುವ ಬಯಕೆ
ತನ್ನೆದೆಯು ತುಂಬಿ ಹೊರಹೊಂಟ । ಚೋಳರಸ
ಮನ್ನಣೆಯನಿತ್ತು ಕರೆತರಲು ॥ ೬೪ ॥

ಸುತ್ತ ಚಾರರು ಹೋಗಿ ಸತ್ಯ ಶರಣನ ಹುಡುಕಿ
ಹೊತ್ತಿನಲಿ ಊರಕೇರಿಯನು । ಸೇರಿದರು
ಉತ್ತಮರ ಮಾತ ಕೇಳುತಲಿ ॥ ೬೫ ॥

ಚೆನ್ನಯ್ಯ ಶಿವಶರಣ ಏನೊಂದು ಅರಿಯದಲೆ
ಮುನ್ನ ತಂದೆಯನು ಪೂಜಿಸುತ । ಇರುತಿರಲು
ಸೊನ್ನಿಯಲಿ ತಿಳಿದು ಸೇವಕರು ॥ ೬೬ ॥

ಅರಸ ಚೋಳನೆ ಕೇಳು ಇರುತಿಹನು ಚೆನ್ನಯ್ಯ
ಹೊರಗೆ ಕೇರಿಯೊಳು ಮಾದಿಗನು । ಶಿವಭಕ್ತ
ಪರಿವಾರ ನುಡಿದು ಕೈಮುಗಿದು ॥ ೬೭ ॥

ಉಕ್ಕಿಬಂದಿತು ಹರುಷ ತಕ್ಷಣವೆ ಅರಸನಿಗೆ
ನಕ್ಕುಂಡ ಕೂಸಿಗಾನಂದ । ಮೈದುಂಬಿ
ಜಕ್ಕಲಿಸಿ ತೂಗೆ ಜೋಯೆಂದು ॥ ೬೮ ॥

ಮಾದಾರಾ ಕೇರಿಯನು ಆದರದಿ ಚೋಳರಸ
ಹೋದ ಪರಿವಾರ ಮಜಲಿನಲಿ । ಪುರದೊಳಗೆ
ನಾಡೆದ್ದು ಊರು ಗಡಚಿಕ್ಕಿ ॥ ೬೯ ॥

ಊರೆಲ್ಲ ಮೈಮರೆತು ಹೋರೆಯನೆ ಬಿಟ್ಟೆದ್ದು
ಸಾರಿ ತಂದಿಟ್ಟು ನೆರೆಯುತಲಿ । ಚೆನ್ನಯ್ಯ
ಯಾರೇಕೆ ಶಿವನೆ ಅರಸೇಕೆ ॥ ೭೦ ॥

ಶಿವಶಿವಾ ಬದುಕುವದು ಶಿವಭಕ್ತ ನಾನೆಂದು
ಕವಡಕಂಟಕವು ಪುರದೊಳಗೆ । ಮಾದರನು
ಶಿವಶರಣನೆಂದು ಜನಕೇಳಿ ॥ ೭೧ ॥

ಗುಪ್ತ ಭಕ್ತಿಯು ಶಿವನೆ ಮುಕ್ತಿಗಾರುತಿ ಬೆಳಕು
ಚಿತ್ತ ಮನಗಂಡು ಕಾಣುದಕೆ । ಮುನ್ನವೇ
ಎತ್ತ ಬೈಲಾಯ್ತು ಶಿವಶಿವನೆ ॥ ೭೨ ॥

ತಪ್ಪೇನು ಮಾಡಿದೆನು ಒಪ್ಪಿಕೊಳ್ಳುವೆ ಶಿವನೆ
ಅಪ್ಪಿ ಮಗನೆಂದು ನೀ ಸಲುಹು । ಜಗದಪ್ಪ
ದರ್ಪ ನನಮೇಲೆ ಅರಸರದೆ ॥ ೭೩ ॥

ಚಿಂತಿಸುತ ಚೆನ್ನಯ್ಯ ಕುಂತಿರಲು ಮನೆಯೊಳಗೆ
ಬಂತು ಪರಿವಾರ ಚೋಳರಸ । ಕೈ ಮುಗಿದು
ನಿಂತು ಸಾಷ್ಟಾಂಗವೆರಗಿದನು ॥ ೭೪ ॥

ನಡುಗುತಲಿ ಚೆನ್ನಯ್ಯ ಉಡುಗುಡಗಿ ಮನದೊಳಗೆ
ಬಿಡು ಅರಸ ಕಾಲ ನಿನ್ನಾಣೆ । ಎನ್ನಾಣೆ
ಹಡದಪ್ಪನಾಣೆ ಶಿವನಾಣೆ ॥ ೭೫ ॥

ಅರಸ ಚೋಳನೆ ಕೇಳು ಹರಕ ಜಾತಿಯ ಮಾದ
ತಿರುಕ ನನಗೇಕೆ ಉಪಚಾರ । ಸೇವಕನು
ಸರಿಯೇನು ದೊರೆಯೆ ಹೀಗೇಕೆ ॥ ೭೬ ॥

ಹರನೊಲಿದ ಜಾತಿಯೇ ವರಜಾತಿ ಜಗದೊಳಗೆ
ಮರೆಮಾತು ಏಕೆ ನಡೆಮೊದಲು । ಹೋಗೋಣ
ಹರನ ಬಳಿ ಇದನು ಅರಿಯುದಕೆ ॥ ೭೭ ॥

ನಿನ್ನೊಡನೆ ಶಿವನುಂಡ ಇನ್ನೊಂದು ಮಾತೇಕೆ
ಹೊನ್ನೆಂದು ಜಂಗು ಹಿಡಿಯುವದೆ । ಕುಲಜಾತಿ
ಮಣ್ಣು ಆಚಾರವಿಲ್ಲದಕೆ ॥ ೭೮ ॥

ಆಚಾರ ಕುಲ ಕೇಳು ಬೇಚಾರ ಹೊಲೆ ನೋಡು
ತಾಚ್ಯಾರ ತುತ್ತು ಕಾಯಕಕೆ । ಶರಣರಿಗೆ
ನೀಚರಿಗೆ ಏನು ಜಗದೊಳಗೆ ॥ ೭೯ ॥

ನಡೆಮೊದಲು ಹರನೆಡಗೆ ಬಿಡೆ ನಾನು ಚೆನ್ನಯ್ಯ
ಒಡೆಯ ಗುರು ನನಗೆ ಅಂಬಾರಿ । ಏರಿಸಿದ
ಸಡಗರದಿ ಗುಡಿಗೆ ನಡೆತಂದು ॥ ೮೦ ॥

ಶಿವಲಿಂಗ ಕಾಣುತಲಿ ಶಿವನೆಂದು ಚೆನ್ನಯ್ಯ
ಅವಸರದಿ ಹೊಕ್ಕು ಗುಡಿಯನ್ನು । ಕೇಳಿದನು
ಶಿವ ನಿನಗೆ ತರವೆ ಆ ಆಟ ॥ ೮೧ ॥

ಹಿಡಿಸೆನ್ನ ತರಿಸಿದಿರಿ ಒಡೆಯ ಚೋಳನಗೂಡ
ಕಡುಮಾತು ಹೇಳು ಮಾಡಿರುವ । ಅಪರಾಧ
ಬಡಭಕ್ತನಾಗಿ ನಾನಿದ್ದೆ ॥ ೮೨ ॥

ಬೇಡಿಲ್ಲ ಪದವಿಯನು ಕಾಡಿಲ್ಲ ಕೊಡದಿರಲು
ಮಾಡಿ ಶಿವಭಕ್ತಿ ಅರಿಯದಲೆ । ನಾನಿದ್ದೆ
ಕೇಡು ಜನ ಕೇಳಿ ನಾನಿರಲೆ ॥ ೮೩ ॥

ಉಡಗುವದೆ ಶಿವಭಕ್ತಿ ಅಡಗುವದೆ ಶಿವಬೆಳಕು
ನಡುಗುವನೆ ಹೇಳು ಶಿವಶರಣ । ಧರೆನಡುಗಿ
ಮುಡುಗಿದರೆ ಇರುವ ಶಿವಲಿಂಗ ॥ ೮೪ ॥

ಇದೆ ಕೊಳ್ಳು ಶಿವ ನನ್ನ ಹದವಾದ ಶಿವಭಕ್ತಿ
ಎದೆ ಮಾತು ಎಂದು ಕಂಬಕ್ಕೆ । ತಲೆಗೊಡಲು
ಸದರು ಝುಗಝುಗಿಸಿ ಶಿವನೆದ್ದು ॥ ೮೫ ॥

ಶಿವಶರಣ ಚೆನ್ನಯ್ಯ ಅವಿಚಾರ ಸರಿ ನಿನಗೆ
ಭವದೊಳಗೆ ನಿನ್ನ ಶಿವಭಕ್ತಿ । ಹೇಳಿದರೆ
ಶಿವಶಿವಾ ಕೋಪ ಬರಬೇಕೆ ॥ ೮೬ ॥

ಚೋಳರಾಯನೆ ಕೇಳು ಹೇಳಲಾರದ ಭಕ್ತಿ
ಕೀಳೇನು ಕುಲವು ಚೆನ್ನನದು । ನಡೆನುಡಿಯು
ಮೂಳಾದ ಕುಲವೆ ಹೊಲೆಗುಲವು ॥ ೮೭ ॥

ಮೆಚ್ಚಿದೆನು ಶಿವಶರಣ ಉಚ್ಚ ಭಕ್ತಿಗೆ ನಾನು
ಬಚ್ಚಿರುವ ನಿನ್ನ ಶಿವಭಕ್ತಿ । ಬೆಳಗುದಕೆ
ಇಚ್ಚೆ ಮಾಡಿದೆನು ಜಗದೊಳಗೆ ॥ ೮೮ ॥

ಹರಸಿದನು ಶಿವಲಿಂಗ ಮೆರೆದು ಮೂಡಲಿ ಶರಣ
ಪರಸಾದ ತೋರಿ ಸೇವಿಸಲಿ । ಜನವೆಂದು
ಕರುಣಿಸಿದ ಶಿವನು ಲಿಂಗದಲಿ ॥ ೮೯ ॥

ಕರಿಕಾಲ ಚೋಳರಸ ಅರಿತು ಹೊಸಮತವನ್ನು
ಗುರುದೇವ ಎನಗೆ ಚೆನ್ನಯ್ಯ । ನೆಂದಿರಲು
ಶರಣ ಸಮರಸವ ಹೊಂದಿದನು ॥ ೯೦ ॥

ಶಿವಲಿಂಗ ಬೆಳಗಿದವು ಶಿವಕಾಂಚಿ ಹೆಸರಾಯ್ತು
ಶಿವಕೂಟವಾಯ್ತು ಶರಣರಿಗೆ । ಶಿವನೆನಲು
ಶಿವಲೋಕ ನಾಚಿ ಕೆಳಗಾಯ್ತು ॥ ೯೧ ॥

ಜಾತಿಯೊಳು ಮಾದರನು ನೀತಿಯೊಳು ಶಿವಶರಣ
ಮಾತು ವಚನಗಳು ಚೆನ್ನಯ್ಯ । ಶಿವನುಂಡ
ಕೂತು ಎದೆಯೊಳಗೆ ಅಂಬಲಿಯ ॥ ೯೨ ॥

ಅಂಬಲಿಯ ನೀಡುತಲಿ ಎಂಬಲವ ಹಾಕುತಲಿ
ಕಂಬಿಗಳ ಹೊತ್ತು ಮೆರೆಸುತಲಿ । ಹೊಸದಿನಕೆ
ಶಂಭುಹರನೆಂದು ಬೆಳವಲವು ॥ ೯೩ ॥

ಹಾಡುತಲಿ ಒಕ್ಕಲಿಗ ಮಾಡುವನು ಸುಗ್ಗಿಯನು
ನೀಡು ಚೆನ್ನಯ್ಯ ಹುಲುಸನ್ನು । ಕಾಡೊಳಗೆ
ನಾಡು ತುಂಬಿರಲಿ ಶಿವಭಕ್ತಿ ॥ ೯೪ ॥

ಹಂತಿಯದು ಹಾಡೆಂದು ಪಂತ ಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲೆ । ಚೆನ್ನಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೯೫ ॥

ಶರಣು ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸರಿ ಶರಣ ಚೆನ್ನಯ್ಯ । ನಮಗಿನ್ನೂ
ಹರಸರಿ ಹುಲುಸು ಹುಲ್ಲುಲ್ಲಿಗೊ ॥ ೯೬ ॥

–ಕೃತಿ : ೧. ಕನ್ನಡ ಜಾನಪದ ಗೀತಗಳು ೨. ಹಂತಿ ಹಾಡುಗಳು

***

೧೬. ಮೇದಾರ ಕೇತಯ್ಯ

ಕೋಲು ಕೋಲಿನ ರನ್ನದ ಕೋಲು ಕೋಲಿನ
ಕೋಲನಾಡಿರಿ ಶಿವನ ಸ್ಮರಿಸ ಬನ್ನಿರಿ ॥ ಪ ॥

ಗರುವಿನಡಿಗಳ ಬಿಡದೆ ಸ್ಮರಣೆ ಮಾಡುವೆ
ಶರಣ ಖ್ಯಾತನ ಕಥೆಗೆ ವರವ ಬೇಡುವೆ ॥ ೧ ॥

ಶಂಭುಶಂಕರ ಬಲವಗೊಂಬೆ ನಿಮ್ಮನು
ಕಂಬು ಕಂಧರ ಕೃತಿಗೆ ಇಂಬುದೋರಿಸು ॥ ೨ ॥

ಆದಿಶಕ್ತಿಯ ದೇವಿ ಪಾದಕಮಲಕೆ
ಮೋದದಿಂದಲಿ ನಮಿಸಿ ಮತಿಯ ಬೇಡುವೆ ॥ ೩ ॥

ಮದನ ವೈರಿಗೆ ನಮಿಸಿ ಪಾದಕೆರಗುವೆ
ಚದುರ ಮತಿಯನು ಕೊಟ್ಟು ರಕ್ಷಿಸೆನ್ನನು ॥ ೪ ॥

ಧೀರ ವೀರನ ಚರಣ ಪೂರ ನೆನೆವೆನು
ಸಾರ ಕವನಕೆ ಜ್ಞಾನವಿತ್ತು ಸಲುವದು ॥ ೫ ॥

ಲಂಬೋದರನ ಪಾದ ನಂಬಿ ಭಜಿಸುವೆ
ಸಾಂಬಪುತ್ರನೆ ಬೆಸನವಾಗು ಕವನಕೆ ॥ ೬ ॥

ವಾಣಿ ಸರಸ್ವತಿ ಜಗಜ್ಞಾಣಿ ಶಾರದೆ
ಮಾಣದೆಮ್ಮಯ ರಸನೆಯಲ್ಲಿ ನೆಲಸಿರು ॥ ೭ ॥

ಇಳೆಯೊಳಧಿಕವು ದಿವ್ಯ ಪೊಳೆವ ಕಲ್ಯಾಣ
ಕಳಸವೆನಿಸಿತು ದೇಶದೊಳಗೆ ನೋಡಿರಿ ॥ ೮ ॥

ಮತ್ತೆ ಕಲ್ಯಾಣಪುರ ಮರ್ತ್ಯಲೋಕದಿ
ರತ್ನದಂತೆ ಸುಶೋಭಿಸುತ ಮರೆವುದು ॥ ೯ ॥

ಅಲ್ಲಿ ಶರಣರು ನಿಷ್ಠೆಯಲ್ಲಿ ಧುರಿಣರು
ಎಲ್ಲ ಶಿವಗಣ ಸ್ತುತಿಸಿ ಬಲವಗೊಂಬೆನು ॥ ೧೦ ॥

ಬಸವ ನೀಲಮ್ಮ ಚನ್ನಬಸವ ಮಡಿವಳ
ಕುಶಲ ಕಿನ್ನರಿ ಖ್ಯಾತಗೊಸೆದು ನಮಿಸುವೆ ॥ ೧೧ ॥

ಸಿದ್ಧರಾಮಗೆ ಚಲ್ವ ಮುಗ್ಧಸಂಗಗೆ
ಬುದ್ಧಿಸೋಮಗೆ ನಮಿಸಿ ವರವ ಬೇಡುವೆ ॥ ೧೨ ॥

ಇಂತು ಶಿವಗಣ ಮುಖ್ಯ ತಿಂತಿಣಿಯೊಳಗೆ
ಕಂತುಹರನ ಭಕ್ತ ಖ್ಯಾತದೇವನು ॥ ೧೩ ॥

ಶಿವನ ನಿಷ್ಠೆಯ ನಡೆಸುತವನು ಮೆರೆವನು
ವಿವರವೆಲ್ಲವ ಹೇಳಲಿಷ್ಟು ಖ್ಯಾತನ ॥ ೧೪ ॥

ಕಥೆಯ ನಡೆಸುವೆ ಅವನ ವ್ರತವ ಪೇಳುವೆ
ಮತಿಯವಂತರು ನೀವು ಹಿತದಿ ಕೇಳಿರಿ ॥ ೧೫ ॥

ಶರಣಮಹಿಮೆಯ ಪೇಳಲರಿಯಬಾರದು
ಹರನು ನುಡಿಸಿದ ಪರಿಯ ನುಡಿಯ ಪೇಳುವೆ ॥ ೧೬ ॥

ಓಡಿದು ಗುರುವಿನ ಆಜ್ಞೆ ಬಿಡದೆ ಕಾಯಕ
ನಡೆಸುತಿದ್ದನು ಗಣಕೆ ಬಿದಿರ ಚಿಬ್ಬಲ ॥ ೧೭ ॥

ನಿತ್ಯವೊಂದನು ಗಣಕೆಯಿತ್ತು ಚಿಬ್ಬಲ
ಸತ್ಯಹಾಗವ ತಾನು ಚರಕೆ ನೀಡುವ ॥ ೧೮ ॥

ತರುವ ಹಾಗವ ಮಾಡಿ ತೃಣಕೆ ಸರಿಯನು
ಗುರುಪ್ರಸಾದವ ಕೊಂಡು ಸುಖದೊಳಿರ್ಪನು ॥ ೧೯ ॥

ಕೆಲವು ಕಾಲವು ನಿಷ್ಠೆಯಿಂದ ನಡೆಸುತ
ಕುಲಕೆ ಶರಣರ ಖ್ಯಾತತಿಲಕನೆನೆಸಿದ ॥ ೨೦ ॥

ಹಣವುರಿಯೆಂದು ಮಾಡಿ ತೃಣಕೆ ಸರಿಯನು
ಫಣಿಯಭರಣನ ನಿಷ್ಠೆ ನಡೆಸುತಿರ್ದನು ॥ ೨೧ ॥

ಖ್ಯಾತದೇವನು ಜಗದಿಖ್ಯಾತನೆಂತಲು
ಕೀರ್ತಿ ಹೋಯಿತು ಕೈಲಾಸಪುರದೊಳಗೆ ॥ ೨೨ ॥

ಶಿವನು ಕೇಳುತ ಮನವ ನೋಡಬೇಕೆಂದು
ತವಕದಿಂದಲಿ ಇಳಿದು ಬಂದನರ್ತಿಯಲಿ ॥ ೨೩ ॥

ಹೊನ್ನ ಸಾವಿರ ಗಂಟನೊಂದು ಕಟ್ಟುತ
ಭಿನ್ನವಿಲ್ಲದೆ ಕೊಡುವೆನೆನುತ ಶಂಕರ ॥ ೨೪ ॥

ಶಶಿಯಜೂಟನು ತಾಳ್ದ ಬಸವ ರೂಪವ
ಅಸಮ ಖ್ಯಾತನ ಮನೆಯ ಬಂದು ಹೊಕ್ಕನು ॥ ೨೫ ॥

ಬರಲು ಮುನ್ನವೆ ಖ್ಯಾತವನಕೆ ಪೋಗಿರೆ
ಶರಣೆ ಕಾಣುತ ಪಾದಕೆರಗಿ ನಿಂತಳು ॥ ೨೬ ॥

ಏನು ಕಾರಣ ಬಂದುದೇನು ಹದನವು
ಜ್ಞಾನಮೂರ್ತಿಯೆ ಬಸವ ಹೇಳಿರೆಂದಳು ॥ ೨೭ ॥

ಕೇಳು ಶರಣೆಯೆ ನಿಮ್ಮ ಪತಿಯ ಬಡತನ
ಕೇಳಿ ಬಂದೆನು ಹೊನ್ನು ಕೊಳ್ಳು ಬೇಗನೆ ॥ ೨೮ ॥

ಇನಿತು ದ್ರವ್ಯವ ಕನಸಿನಲ್ಲಿಯಾದರು
ನೆನೆಸಿ ನೋಡುವರಲ್ಲವೆಂದು ನುಡಿದಳು ॥ ೨೯ ॥

ಶರಣ ಖ್ಯಾತನ ಕೇಳೀ ಪರಿಯ ಬಡತನ
ಕರುಣ ಹುಟ್ಟಲು ಹೊನ್ನ ಕೊಳ್ಳು ಬೇಗನೆ ॥ ೩೦ ॥

ಹಣವನ್ನೊಲ್ಲೆವು ನಮಗೆ ತ್ರಿನಯನಿರುವನು
ಮಣಿದು ಶರಣೆಯು ಹೋಗಿರೆಂದು ನುಡಿದಳು ॥ ೩೧ ॥

ಭಲರೆ ಶರಣೆಯೆ ದ್ರವ್ಯವೊಲ್ಲೆನೆಂಬರೆ
ಅಲ್ಲ ಮಾತಿದು ಹೊನ್ನ ಕೊಳ್ಳು ಬೇಗನೆ ॥ ೩೨ ॥

ಶರಣರುತ್ತರಕೆ ತಿರುಗಿ ಮಾಡಲುತ್ತರ
ಪರಿಭವಂಗಳು ತಪ್ಪದಿರವು ಎನುತಲಿ ॥ ೩೩ ॥

ಎಂಬ ನೀತಿಯ ತಿಳಿದು ಅಂಬುಜಾಕ್ಷಿಯು
ಸಾಂಬನೇ ಗತಿಯೆಂದು ಸಮ್ಮನಿದ್ದಳು ॥ ೩೪ ॥

ಶರಣಿಮನೆಯೊಳು ಹೊನ್ನ ಸುರುವಿ ಸಾಂಬನು
ತಿರುಗಿ ಪೋದನು ತನ್ನ ನಿಜನಿವಾಸಕೆ ॥ ೩೫ ॥

ಇತ್ತ ಖ್ಯಾತನು ಬಿದಿರ ಮೆಳೆಯ ಕಡಿಯುತ
ಹೊತ್ತು ಹೊರೆಯನು ಕೊಂಡು ಮನೆಗೆ ಬಂದನು ॥ ೩೬ ॥

ಬರಲು ಮನೆಯೊಳು ಇಳುಹಿ ಬಿದಿರ ಹೊರೆಯನು
ಶರಣ ಕಂಡನು ಮನೆಯೊಳಿರುವ ಹೊನ್ನನು ॥ ೩೭ ॥

ಹೊನ್ನ ಕಾಣುತ ಕೋಪವನ್ನು ತಾಳುತ
ಘನ್ನ ಘಾತಕಿ ನೀನು ಎಂದು ನುಡಿದನು ॥ ೩೮ ॥

ಎಲೆಲೆ ಮಾನಿನಿ ನಿನ್ನ ಹೊಲಬು ತಿಳಿಯದು
ಮಲವು ಮನೆಯೊಳು ಬಂದುದೇನು ಕಾರಣ ॥ ೩೯ ॥

ಉಗ್ರರೂಪದಿ ನುಡಿದ ವ್ಯಾಘ್ರನಂದದಿ
ಸೀಗ್ರದಿಂದಲಿ ಪೇಳು ಎಂದ ಖ್ಯಾತನು ॥ ೪೦ ॥

ಆಗ ಶರಣೆಯು ಪಾದಕೆರಗಿ ನುಡಿದಳು
ನಾಗಭೂಷಣ ಭಕ್ತಿ ಬಸವರಾಜನು ॥ ೪೧ ॥

ಬಂದು ಮನೆಯೊಳು ದ್ರವ್ಯತಂದು ಸುರುವಿದ
ತಂದ ದ್ರವ್ಯವ ಒಲ್ಲೆನೆಂದು ನುಡಿದೆನು ॥ ೪೨ ॥

ಒಲ್ಲೆನೆಂದರೆ ದ್ರವ್ಯಚೆಲ್ಲಿ ಪೋದನು
ಎಲ್ಲ ಮಾತನು ಲಿಂಗದಲ್ಲಿ ನೋಡಿರಿ ॥ ೪೩ ॥

ಕೇಳಲಾಕ್ಷಣ ಕೋಪತಾಳಿ ಖ್ಯಾತನು
ಹಾಳ ಮಾತನು ನುಡಿದ ಬಸವರಾಜಗೆ ॥ ೪೪ ॥

ರೊಕ್ಕ ಹೆಚ್ಚಿತೆ ಅವಗೆ ಸೊಕ್ಕು ಬಂದಿತೆ
ಇಕ್ಕಿ ಪೋದನೆ ಹೊನ್ನ ಬಸವ ಮನೆಯೊಳು ॥ ೪೫ ॥

ಹೆಚ್ಚು ಆದರೆ ಬೆಂಕಿ ಹಚ್ಚಬಾರದೆ
ಅಚ್ಚ ಶರಣೆಯೆ ಹೊರಗೆ ಬಿಸುಟು ಎಂದನು ॥ ೪೬ ॥

ನುಡಿದ ಮಾತಿಗೆ ಶರಣಿ ತಡವ ಮಾಡದೆ
ಒಡನೆ ಹೊನ್ನನು ಹೊರಗೆ ಎಸೆದು ಬಂದಳು ॥ ೪೭ ॥

ಮಲವು ಸೋಂಕಿತು ಮನೆಯನೆಲ್ಲ ಸಾರಿತು
ಲಲನೆ ಎನ್ನಲು ಸಾರಣಿಯನು ಗೈದಳು ॥ ೪೮ ॥

ಚದುರ ಖ್ಯಾತನು ಮಾಡಿ ಬಿದಿರ ಪೆಟ್ಟಿಗೆ
ಸದಮಲಾತ್ಮಕ ಶರಣಗಣಕೆ ಕೊಟ್ಟನು ॥ ೪೯ ॥

ತಂದ ಹಾಗದೊಳು ಮನೆಗೆ ಬಂದ ಮೂರ್ತಿಗೆ
ಚಂದದಿಂದಲಿ ಉಣಿಸಿ ಉಳಿದ ಶೇಷವ ॥ ೫೦ ॥

ಕೊಂಡು ಸತಿಪತಿ ಸಹಿತ ಉಂಡ ಸುಖದೊಳು
ಚಂಡ ಖ್ಯಾತನು ಬಿಡದೆ ನಿಷ್ಠೆ ನಡೆಸಿದ ॥ ೫೧ ॥

ಮತ್ತೆ ಖ್ಯಾತನ ಕೀರ್ತಿಯೆತ್ತಿ ಮರೆಯಿತು
ಅತ್ತ ಕೈಲಾಸಪುರ ತುಂಬಿ ತುಳುಕಿತು ॥ ೫೨ ॥

ಹರನು ಕೇಳ್ದನು ಖ್ಯಾತನಿರವನೆಲ್ಲವ
ಪರಿಯ ಪರಿಯಲಿ ಮನವನೊರೆದು ನೋಡುವೆ ॥ ೫೩ ॥

ಎಂದು ಯೋಚಿಸಿ ಹರನು ಬಂದ ಮರ್ತ್ಯಕೆ
ಚಂದಬಿದರೊಳು ತುಂಬಿಯಿಟ್ಟ ಹೊನ್ನನು ॥ ೫೪ ॥

ಬಿದಿರನೊಯ್ವನೊ ಚದುರ ಹೊನ್ನನೊಯ್ವನೊ
ಇದರ ಪರಿಯನು ನೋಳ್ಪೆನೆನುತ ನಿಂತನು ॥ ೫೫ ॥

ಹೊತ್ತು ಮುಳುಗಿತು ಕಾಳಗತ್ತಲಾಯಿತು
ಮತ್ತೆ ಶುಕ್ರನು ಉದಿಸಿ ಬೆಳಗು ಬಂದಿತು ॥ ೫೬ ॥

ಇತ್ತ ಕ್ಯಾತನು ಉದಯಹೊತ್ತಿಗೇಳುತ
ಸತ್ಯಶರಣನು ಈಶನನ್ನು ಭಜಿಸುತ ॥ ೫೭ ॥

ಉದಯಕೆದ್ದು ತಾ ಶರಣ ಚರಣ ಮುಖವನು
ಉದಕದಿಂದಲಿ ತೊಳೆದು ಭಸಿತ ಧರಿಸಿದ ॥ ೫೮ ॥

ಪ್ರಣವ ಜಪಿಸುತ ಅಕ್ಷಮಾಲೆಯ ಧರಿಸುತ
ತ್ರಿಣಯಧ್ಯಾನದಿ ನಿಂತ ಖ್ಯಾತದೇವನು ॥ ೫೯ ॥

ಬಿದಿರ ತರುವೆನು ಎಂದು ಚದುರತನದಲ್ಲಿ
ಹದನಚೂರಿಯ ಕೊಂಡು ವನಕೆ ಬಂದನು ॥ ೬೦ ॥

ಬಂದು ಖಾತನು ಕಡಿದನೊಂದು ಬಿದಿರನು
ಅಂದ ಚಂದದಿ ಹೊನ್ನ ಸುರಿತ ಕಾಣುತ ॥ ೬೧ ॥

ಕೆಟ್ಟ ಬಿದಿರಿದು ಎಂದು ಬಿಟ್ಟು ನಡೆದನು
ದಿಟ್ಟ ಕಂಡನು ವನದಿ ಮತ್ತೆ ಮಳೆಯನು ॥ ೬೨ ॥

ಅಲ್ಲಿ ಕಡಿಯಲು ಬೇಗ ಹೊನ್ನು ಬೀಳಲು
ಎಲ್ಲ ಬಿದಿರನು ಕಡಿದು ನೋಡಿ ಖ್ಯಾತನು ॥ ೬೩ ॥

ಹುಳುಕು ಬಿದಿರುವು ಎಂದು ತಿಳಿದು ಬಿಟ್ಟನು
ಮಳೆಯ ಮೇಲಕೆ ಏರಿ ಕಡಿದ ಖಾತನು ॥ ೬೪ ॥

ಆಗ ಕಡಿಯಲು ಜೋಲಿ ಹೋಗಿ ಬಿದ್ದನು
ತಾಗಿ ನಟ್ಟಿತು ಹಸಿಯ ಬಿದಿರು ಎದೆಯೊಳು ॥ ೬೫ ॥

ನಟ್ಟು ಎದೆಯೊಳು ಬೆನ್ನೊಳ್ಳುಟ್ಟಿ ಬೆಳೆಯಿತು
ದಿಟ್ಟ ಖ್ಯಾತನು ಕೊಯ್ದು ನೆಟ್ಟ ಬಿದಿರನು ॥ ೬೬ ॥

ಹಿಂದು ಮುಂದನು ಸವರಿ ನಿಲ್ಲಲಾಕ್ಷಣ
ನೊಂದು ಮನದೊಳು ಬವಳಿಬಂದು ಬಿದ್ದನು ॥ ೬೭ ॥

ಬಳಲಿ ಮನದೊಳು ದೇಹ ಕಳವಳಿಸುತಲಿ
ಉಳಿಯದಂತೆಯು ಪ್ರಾಣ ಹೋಗತಿರ್ಪುದು ॥ ೬೮ ॥

ಪ್ರಾಣಹೋದರೆ ಪ್ರಮಥರಾಣೆ ಸಾಂಬನೆ
ಜಾಣ ಜಂಗಮಲಿಂಗ ತೃಪ್ತಿಯಾಗಲಿ ॥ ೬೯ ॥

ಕ್ರಿಯೆಯು ತೀರಿದ ಬಳಿಕ ಒಯ್ಯಲೆನ್ನನು
ಸೈಯ ಮಾತಿದು ಎಂದ ಪರಮಖ್ಯಾತನು ॥ ೭೦ ॥

ನಿಷ್ಠೆ ನೋಡಿದ ಶಿವನು ಬಟ್ಟು ಕಚ್ಚಿದ
ಗಟ್ಟಿ ಬಿದಿರನು ಒಂದುಮಾಡಿ ಪೋದನು ॥ ೭೧ ॥

ಅದನು ಕಾಣುತ ಬಂದು ಬಿದಿರ ಕಡಿದನು
ಚದುರ ಖಾತನು ಕೊಂಡು ಮನೆಗೆ ಬಂದನು ॥ ೭೨ ॥

ಶರಣೆ ಕಂಡಳು ತನ್ನ ಪುರುಷಗಾದುದ
ಪರಿಯ ಹೇಳುವೆ ಕಾಯಕ ಮುಗಿದ ಮೇಲೆ ॥ ೭೩ ॥

ತಂದ ಬಿದಿರೊಳು ಮಾಡಿ ಒಂದು ಚಿಬ್ಬಲ
ಚಂದದಿಂದಲಿ ಶರಣೆಗೆಂದ ಖ್ಯಾತನು ॥ ೭೪ ॥

ಚಿಬ್ಬಲೊಂದನು ಒಯ್ದು ಒಬ್ಬ ಶರಣೆಗೆ
ದಬ್ಬಿ ಹಾಗವ ಕೊಂಡು ಬಾರೆ ಬೇಗನೆ ॥ ೭೫ ॥

ಶರಣೆ ಒಯ್ದುಳು ಆದಿ ಬಸವ ನಲ್ಲಿಗೆ
ಇರಿಸಿ ಹಾಗವ ಕೊಂಡು ಬಂದು ಪ್ಯಾಟಿಗೆ ॥ ೭೬ ॥

ನೆಲ್ಲಿನಕ್ಕಿಯ ಬೆಲ್ಲ ಬೇಳೆ ತುಪ್ಪವ
ಎಲ್ಲ ಜೀನಸು ಹಾಗದೊಳಗೆ ತಂದಳು ॥ ೭೭ ॥

ತಂದು ಮನೆಯೊಳು ಇಟ್ಟು ಎಲ್ಲ ಜೀನಸ
ಮಿಂದು ಮಡಿಯನು ಉಟ್ಟು ಬೇಗದಿಂದಲಿ ॥ ೭೮ ॥

ಚಂದ ಚಂದದಿ ಅಡಿಗೆ ಮಾಡಿ ಇರಿಸುತ
ಸುಂದರಾಂಗಿಯು ಬೇಗ ಬಂದು ನುಡಿದಳು ॥ ೭೯ ॥

ಕೂಡಲೆ ಶರಣೆಯು ಸ್ನಾನಮಾಡಿರೆನುತಲಿ
ಮಾಡಿ ಬಿನ್ನಹ ಕೈಯಮುಗಿದು ನಿಂತಳು ॥ ೮೦ ॥

ಎದ್ದು ಜಳಕವಮಾಡಿ ಶುದ್ಧ ಉದಕದಿ
ಹೊದ್ದು ಕೊಂಡನು ದಿವ್ಯಮಡಿಯ ವಸ್ತ್ರದಿ ॥ ೮೧ ॥

ಅಂಗಶುಚಿಯಲಿ ಶರಣ ಲಿಂಗಪೂಜೆಗೆ
ಮಂಗಳಾತ್ಮಕ ಗದಿಗಿ ಮೇಲೆ ಕುಳಿತನು ॥ ೮೨ ॥

ಭಸಿತ ಧರಿಸಿದನಾಗ ಅಸಮ ಶರಣನು
ಎಸೆವ ಜಪಮಣಿ ಕೊರಳಮಾಲೆ ಮಾಡಿದ ॥ ೮೩ ॥

ನೀಡಿ ಮಜ್ಜನ ಲಿಂಗ ನೋಡಿ ದಿಟ್ಟಿಲಿ
ಪಾಡಿ ಭಸಿತವ ಧರಿಸಿ ಇಷ್ಟಲಿಂಗಕೆ ॥ ೮೪ ॥

ಬಿಲ್ವಪತ್ರಿಯು ಸಹಿತ ಎಲ್ಲ ಪುಷ್ಪದಿ
ಫುಲ್ಲಬಾಣನ ವೈರಿ ಪೂಜೆಗೈದನು ॥ ೮೫ ॥

ಪೂಜೆ ಮುಗಿಯಲು ಶರಣೆ ನೈಜ ಭಕ್ತಿಲಿ
ವಾಜಿ ವಾದ್ಯದಿ ಚರನ ಕರೆದು ತಂದಳು ॥ ೮೬ ॥

ಕೊಟ್ಟು ಉದಕವ ಪಾದಕಿಟ್ಟು ಆವಿಗೆ
ಮುಟ್ಟಿ ಪಾದವ ತೊಳೆದು ಒಳಗೆ ಕರೆದಳು ॥ ೮೭ ॥

ಬರಲು ಜಂಗಮ ಕಂಡು ಶರಣನೆದ್ದನು
ಪರಮ ಗದ್ದುಗೆ ಮೇಲೆ ಮೂರ್ತಗೊಳಿಸಿದ ॥ ೮೮ ॥

ಎರಗಿ ಪಾದಕೆ ಕೊಂಡು ಗುರುವಿನಪ್ಪಣೆ
ತ್ವರಿತದಿಂದಲಿ ಪಾದಪೂಜೆ ಮಾಡಿದ ॥ ೮೯ ॥

ಚರಣದುದಕವ ಸಲಿಸಿ ಕರೆದ ಶರಣೆಯ
ಶರಣೆ ಬರುತಲಿ ಪಾದಕೆರಗಿ ಸಲಿಸುತ ॥ ೯೦ ॥

ಗುರುವಿನಂಘ್ರಿಗೆ ಎರಗಿ ಬೇಗ ಶರಣೆಗೆ
ಸರಸಪಾಕವ ಎಡೆಯಮಾಡು ಅಂದನು ॥ ೯೧ ॥

ಮಾಡಿದೆಲ್ಲವ ತಂದು ನೀಡಿ ಗುರುವಿಗೆ
ಮಾಡಿದರ್ಪಿತ ಎಂದು ನಮಿಸಿ ಪಾದಕೆ ॥ ೯೨ ॥

ಗುರುವು ಸಲಿಸಿದ ಬಳಿಕ ಭಕ್ತಖ್ಯಾತನು
ಗುರುಪ್ರಸಾದವ ಬಿಡದೆ ಶರಣಸವಿದನು ॥ ೯೩ ॥

ಉಳಿದ ಶೇಷವ ಶರಣೆ ಕುಳಿತು ಸಲಿಸಲು
ಬಳಿಕ ಖ್ಯಾತನು ಗುರುವಿನಂಘ್ರಿಗೆರಗಿದ ॥ ೯೪ ॥

ಗುರುವೆ ನಮಗೇ ಭಸಿತ ಧರಿಸು ಪಣೆಯೊಳು
ಹರನ ಲೋಕಕೆ ನಾವು ಹೋಗುತಿರ್ದೆವು ॥ ೯೫ ॥

ಶರಣೆ ಕೇಳುತ ಪಾದಕೆರಗಿ ನುಡಿದಳು
ಶರಣ ಖ್ಯಾತನೆ ಚೋದ್ಯವೇನಿದೆಂದಳು ॥ ೯೬ ॥

ಶರಣೆ ಕೇಳೆಲೆ ಬಿದಿರು ತರಲು ಪೋಗಿರೆ
ಏರಿ ಕಡಿದೆನು ಹೊನ್ನು ಸುರಿಯುತಿದ್ದಿತು ॥ ೯೭ ॥

ಬಿಟ್ಟು ನಡೆದೆನು ಎಂಟು ಹತ್ತು ಮೆಳೆಯನು
ತುಟ್ಟತುದಿಯಲಿ ಬಂದು ಮೆಳೆಯನೇರಿದೆ ॥ ೯೮ ॥

ಏರಿ ಕುಡಿಯಲು ಕಾಲುಜಾರಿ ಬಿದ್ದೆನು
ಸೇರಿ ನಟ್ಟಿತು ಹಸಿಯ ಬಂಬು ಎದೆಯೊಳು ॥ ೯೯ ॥

ಪ್ರಾಣಹೋಗುವ ಕಾಲ ಕಾಣ ಬಂದಿತು
ಆಣಿ ಇಟ್ಟೆನು ಶಿವಗೆ ನವಗಣಂಗಳ ॥ ೧೦೦ ॥

ಬಿಟ್ಟೆ ಅಣಿಯ ಎದೆಗೆ ನಟ್ಟ ಬಿದಿರನು
ದಿಟ್ಟ ಶರಣೆಯೆ ತೆಗೆದು ಬಿಸುಟು ಅಂದನು ॥ ೧೦೧ ॥

ಚರನ ಪಾದಕೆ ಶರಣ ಎರಗಿ ಭಸಿತವ
ಧರಿಸು ಎನುತಲಿ ಹಣೆಗೆ ಭಸಿತ ಧರಿಸಿದ ॥ ೧೦೨ ॥

ನಟ್ಟ ಬಿದಿರನು ನೋಡಿ ಕಷ್ಟವಾಂತಳು
ಮುಟ್ಟಿ ಕೈಯಲಿ ಹಿಡಿದು ತೆಗೆದು ಬಿಸುಟಳು ॥ ೧೦೩ ॥

ಶರಣನೆದೆಯೊಳು ಭರದಿ ಬಿದಿರ ಕೀಳಲು
ಹರಹರೆನುತಲಿ ವಸ್ತು ಹಾರಿಹೋಯಿತು ॥ ೧೦೪ ॥

ಶರಣ ಖ್ಯಾತನ ಪ್ರಾಣಹರಣವಾಗಲು
ಶರಣೆ ಕಾಣುತ ಮರಗಿ ದುಃಖ ಮಾಳ್ಪಳು ॥ ೧೦೫ ॥

ಅಯ್ಯೊ ಪುರುಷನೆ ಎನ್ನ ಕೈಯ ಬಿಡುವರೆ
ಒಯ್ಯಬಾರದೆ ನಾನು ಬರುತಲಿರ್ದೆನು ॥ ೧೦೬ ॥

ಎನ್ನ ದೇವನೆ ಆಹಾ ಎನ್ನ ಭಾಗ್ಯವೆ
ನಿನ್ನ ಪಾದಕೆ ನಾನು ದೂರ ಆದೆನು ॥ ೧೦೭ ॥

ಶರಣೆ ಮನದೊಳು ಬಹಳ ಮರುಗಿ ದುಃಖದಿ
ಹರನೆ ಮುನಿದೆಯ ಎಂದು ಅಳುತ ಕುಳಿತಳು ॥ ೧೦೮ ॥

ಅಳುವ ಧ್ವನಿಯನು ಕೇಳಿ ಒಳೆಯಕೈದಿದ
ಅಳಿಯ ಗಣ್ಣನ ಭಕ್ತ ಪಡಿಹರಯ್ಯನು ॥ ೧೦೯ ॥

ತ್ವರಿತದಿಂದಲಿ ಒಳಗೆ ಬರುತ ಕೇಳಿದ
ಶರಣ ಖ್ಯಾತನು ಮಡಿದನೇನು ಕಾರಣ ॥ ೧೧೦ ॥

ಶರಣೆ ನುಡಿದಳು ಆದ ಪರಿಯನೆಲ್ಲವ
ಹರಹರೆನುತಲಿ ಮರುಗಿ ಪಡಿಹರಯ್ಯನು ॥ ೧೧೧ ॥

ಶರಣ ಪಡಿಹರ ಬೇಗ ತರುತ ಉದಕದಿ
ಭರದಿ ಖ್ಯಾತನ ತೊಳೆದು ಮೂರ್ತಿಗೊಳಿಸಿದ ॥ ೧೧೨ ॥

ಧರಿಸಿ ಭಸಿತವ ಕೊರಳಿಗಿರಿಸಿ ಜಪಮಣಿ
ಪರಮ ವಸ್ತ್ರವ ಹೊದಿಸಿ ಧೂಪವಿಕ್ಕಿದ ॥ ೧೧೩ ॥

ಪಡಿಹರಯ್ಯನು ಬೇಗ ನಡೆದು ಪುರುದೊಳು
ಒಡೆಯ ಬಸವನಿಗೆ ಕೈಯ ಮುಗಿದು ಪೇಳಿದ ॥ ೧೧೪ ॥

ಮ್ಯಾದರಯ್ಯನು ತಾನು ಹೋದ ಸ್ವರ್ಗಕೆ
ಆದಿ ಬಸವನೆ ಬಿಜಯಗೈಯ್ವುದಲ್ಲಿಗೆ ॥ ೧೧೫ ॥

ಸುದ್ದಿ ಕೇಳುತ ಬಸವನೆದ್ದನಾಗಳೆ
ಚೋದ್ಯವೆನುತಲಿ ಅವನ ಮನೆಗೆ ಬಂದನು ॥ ೧೧೬ ॥

ಬಂದು ಖ್ಯಾತನ ನೋಡಿ ನೊಂದ ಬಸವನು
ಇಂದುಶೇಖರ ಹೀಗೆ ಮಾಳ್ಪುದುಚಿತವೆ ॥ ೧೧೭ ॥

ಕರಿಯೊ ಪಡಿಹರ ಪುರದೊಳಿರುವ ಶರಣರ
ಬರಲಿ ಬೇಗನೆ ಎಂದು ಬಸವ ನುಡಿದನು ॥ ೧೧೮ ॥

ನುಡಿಯ ಕೇಳುತ ಬೇಗ ನಡೆದು ಪಡಿಹರ
ಒಡನೆ ಶರಣರ ಕರೆದು ತಿರುಗಿ ಬಂದನು ॥ ೧೧೯ ॥

ಸುದ್ದಿ ಕೇಳುತ ಶರಣರೆದ್ದು ಬಂದರು
ಪೆದ್ದಿಸೋಮನು ಬಂದ ಮುಗ್ಧಸಂಗನು ॥ ೧೨೦ ॥

ಕಿನ್ನರಯ್ಯನು ಬಂದ ಚೆನ್ನಬಸವನು
ಕನ್ನಬ್ಯಾಡರ ಕಲಿಯ ಕಾಮ ಬಂದನು ॥ ೧೨೧ ॥

ಸಿಂಧುಬಲ್ಲಾಳ ನುಲಿಯ ಚಂದ ಘಟಿವಳ
ಬಂದ ಸೌಂದರನಂಬಿ ಮರುಳ ಶಂಕರ ॥ ೧೨೨ ॥

ಹಡಪದಪ್ಪಣ ತಿಪ್ಪಯೆಡಬನಾಥನು
ಒಡಿಯ ಮಲಿಕನು ನಾಗಿದೇವ ಬಂದನು ॥ ೧೨೩ ॥

ಮೋಳಿಗಯ್ಯನು ಮಹಾಕಾಳಿದೇವನು
ಚೋಳರಾಯನು ಬಂದ ಚಾಮರಯ್ಯನು ॥ ೧೨೪ ॥

ಗೊಲ್ಲಳಯ್ಯನು ಪಿಡಿಯ ಹುಲ್ಲ ಬಂಕನು
ಕಲ್ಲುಗೆಲಸದ ದೇವಕುಲಖ್ಯಾತನು ॥ ೧೨೫ ॥

ಸುರಗಿಚೌಡನು ಏಲೇಶ್ವರದ ಖ್ಯಾತನು
ಉರಗಮಲ್ಲನು ಬಂದ ಉದ್ಭಟಯ್ಯನು ॥ ೧೨೬ ॥

ಕೇಶಿರಾಜನು ದೇವದಾಸಿಮಯ್ಯನು
ದಾಸನೂರಿನ ಅಸುರ ಧರ್ಮ ಬಂದನು ॥ ೧೨೭ ॥

ಗುಂಡಬ್ರಹ್ಮನು ಅಮರಗುಂಡ ತಂದೆಯು
ಗಂಡುಗತ್ತರಿ ನಾಚಿದೇವ ಬಂದನು ॥ ೧೨೮ ॥

ಮುಸಡಿಚೌಡ ಕಲಿಂಗ ಬಸವ ಬಂದನು
ಹಸಿಯಮಸ್ತಕ ಮಾಚಿದೇವ ಬಂದನು ॥ ೧೨೯ ॥

ಮಂಡಬ್ರಹ್ಮನು ಮೆರಿಯಮಿಂಡದೇವನು
ಮಿಂಡಸಂಗನು ಬಂದ ಮಾದಿರಾಜನು ॥ ೧೩೦ ॥

ಸೊಡ್ಡಳಯ್ಯನು ಬಂದ ಬುದ್ಧಬ್ರಹ್ಮನು
ವಡ್ಡ ಸೋಮನು ಬಲಿಯಗಾರಬಾಚನು ॥ ೧೩೧ ॥

ನಿಜಗುಣಯ್ಯನು ಬಂದ ಅಜಗುಣಯ್ಯನು
ವಿಜಯನಗರದ ಸ್ವಾಮಿ ಪೂರನಾಚನು ॥ ೧೩೨ ॥

ಮಳಿಯರಾಜನು ಬಂದ ಹಾಲಯುಧಯ್ಯನು
ಚಲುವ ಮೈದುನರಾಮ ಮಲುಹಣಯ್ಯನು ॥ ೧೩೩ ॥

ಅಕ್ಕನಾಗುಲಿ ಪ್ರಾಣಪಡೆದ ಚಂಗುಳಿ
ದುಃಖಮಾಡುತ ಶರಣರೆಲ್ಲ ಬಂದರು ॥ ೧೩೪ ॥

ದುಗ್ಗಲವ್ವೆಯು ಬಾಲೆ ಸುಗ್ಗಲವ್ವೆಯು
ಗೊಗ್ಗಲವ್ವೆಯು ನೀಲನಂಬಿಯಕ್ಕನು ॥ ೧೩೫ ॥

ನೀಲಲೋಚನಿ ಚಲ್ವಿಸೂಳಿ ನಿಂಬಿಯು
ಒಳ್ಳೆ ದುಃಖದಿ ಶರಣರೆಲ್ಲ ಬಂದರು ॥ ೧೩೬ ॥

ಏಳುನೂರದ ಎಪ್ಪತೇಳು ಪ್ರಮಥರ
ಮ್ಯಾಳಗೂಡಿತು ಖ್ಯಾತನಿರ್ದ ಮನೆಯೊಳು ॥ ೧೩೭ ॥

ನೆರೆದ ಪ್ರಮಥರ ಶರಣರೊಳಗೆ ಬಸವನು
ಶರಣ ಮಡಿವಳನೋರ್ವನಿಲ್ಲ ಎನುತಲಿ ॥ ೧೩೮ ॥

ನುಡಿದ ಬಸವನು ಕೇಳೊ ಪಡಿಹರಯ್ಯನೆ
ಮಡಿವಳಯ್ಯನು ಬಾರದ್ಯಾಕೆ ನಿಂತನು ॥ ೧೩೯ ॥

ಕರೆಯೊ ಪಡಿಹರ ಬೆಟ್ಟಪುರ ಮಡಿವಳನ
ಬರಲಿ ಬೇಗನೆ ಹೇಳೊ ನಮ್ಮ ಪರಿಯನು ॥ ೧೪೦ ॥

ಪಡಿಹರಯ್ಯನು ಕೇಳಿ ನಡೆದನಾಗಳೆ
ಮಡಿವಳಯ್ಯನ ಮನೆಯ ಬಂದು ಹೊಕ್ಕನು ॥ ೧೪೧ ॥

ಮಡಿವಳಯ್ಯನ ಕಂಡು ಅಡಿಗೆ ಎರಗುತ
ಒಡೆಯ ಬಸವನು ಕರೆಯಕಳುಹಿದೆನ್ನನು ॥ ೧೪೨ ॥

ದೊರೆಯು ಬಸವನು ನಮ್ಮ ಕರೆಯಕಳುಹಿದ
ಪರಿಯದೇನದು ಹೇಳು ಪಡಿಹರಯ್ಯನೆ ॥ ೧೪೩ ॥

ಜಾಣ ಮ್ಯಾದರ ಖ್ಯಾತ್ನ ಪ್ರಾನ ಅಳಿಯಲು
ಮಾಣದೆಲ್ಲರು ಕೂಡಿ ದುಃಖಮಾಳ್ಪರು ॥ ೧೪೪ ॥

ನುಡಿದ ಪಡಿಹರ ಕೇಳಿ ಮಡಿವಳಯ್ಯನು
ಒಡನೆ ಮನದೊಳು ನಗುತ ಮಾತನಾಡಿದ ॥ ೧೪೫ ॥

ಪ್ರಾಣವಳಿದನೆ ಖ್ಯಾತ ಬಸವನಿದ್ದನೆ
ಪ್ರಾಣ ಭಕ್ತರ ಪ್ರಾಣ ಪ್ರಾಣವೆಂಬುದು ॥ ೧೪೬ ॥

ಶರಣ ಬಸವಗೆ ಇಂದು ಮರವು ಸೋಂಕಿತೆ
ಅರಿವು ಇಲ್ಲವೆ ಐವತ್ತೆರಡು ಬಿರುದಿನ ॥ ೧೪೭ ॥

ಮೂರು ವಿಂಶತಿ ಮೇಲೆ ಮೂರು ಬಂದನು
ತೋರಿ ಆಡುವ ಭಾಷೆ ತಪ್ಪಿಹೋಯಿತೆ ॥ ೧೪೮ ॥

ಇಂತು ವಚನವ ಮರೆತು ಭ್ರಾಂತನಾದನೆ
ಚಿಂತೆಮಾಡುತ ಬಸವ ಕುಳಿತುಕೊಂಡನೆ ॥ ೧೪೯ ॥

ಅಸಮ ಪಡಿಹರ ಮಾತು ಹೊಸವು ಆದವು
ಬಸವನಿದ್ದರೆ ನಾನು ಬಾರೆ ಹೋಗೆಲೊ ॥ ೧೫೦ ॥

ಮಡಿವಳಯ್ಯನ ಮಾತು ಒಡನೆ ಕೇಳುತ
ಪಡಿಹರಯ್ಯನು ಬಸವನೆಡೆಗೆ ಬಂದನು ॥ ೧೫೧ ॥

ದಿಟ್ಟ ಶರಣನ ಯಾಕೆ ಬಿಟ್ಟು ಬಂದೆಯೊ
ಗುಟ್ಟದೇನದು ಹೇಳು ಪಡಿಹರಯ್ಯನೆ ॥ ೧೫೨ ॥

ಮ್ಯಾದರಯ್ಯನು ಮರಣವಾದ ಸುದ್ದಿಯ
ಒಯ್ದು ಹೇಳಲು ನಗುತ ಮಾತನಾಡಿದ ॥ ೧೫೩ ॥

ಧೀರ ಬಸವನೆ ಶರಣ ಬಾರೆನೆಂದನು
ಸಾರಿ ಹೇಳಿದ ನಿಮ್ಮ ಬಿರುದು ಭಾಷೆಯ ॥ ೧೫೪ ॥

ಮರೆತು ಕುಳಿತೆನೆ ವಚನ ಬಿರುದನೆಲ್ಲವ
ಶರಣಪಂಥವೆ ಅಲ್ಲವೆಂದು ನುಡಿದನು ॥ ೧೫೫ ॥

ಖ್ಯಾತ ಪೋಗಲು ಬಸವ ಸೋತು ಕುಳಿತನೆ
ಮಾತು ಸಲ್ಲದು ನಮಗೆ ಹೋಗು ಎಂದನು ॥ ೧೫೬ ॥

ತಂದೆ ಬಸವನೆ ನಾನು ಬಂದೆ ನಿಲ್ಲಿಗೆ
ಎಂದು ಪಡಿಹರ ಹೇಳಿ ಸ್ತಬ್ಧನಾದನು ॥ ೧೫೭ ॥

ಶರಣ ಮಡಿವಳ ನಮಗೆ ಗುರುಸ್ವರೂಪನು
ಅರಿವು ತೋರಿಸಿ ಸಲಹು ಎಂದ ಬಸವನು ॥ ೧೫೮ ॥

ಬಸವ ಮನದೊಳು ತಿಳಿದು ಅಸುವನಳಿಯುತೆ
ಅಸಮನೇತ್ರನ ಮುಂದೆ ಹೋಗಿ ಕುಳಿತನು ॥ ೧೫೯ ॥

ಇತ್ತ ಶರಣರು ನೋಡಿ ಸತ್ಯಬಸವನ
ವಸ್ತು ಹೋದುದ ತಿಳಿದು ಶೋಕಗೈದರು ॥ ೧೬೦ ॥

ಅಕ್ಕನಾಗುಲಿ ಕಂಡು ತೆಕ್ಕಿ ಹಾಯುತೆ
ದುಃಖ ಮಾಡುತ ಬಸವನಪ್ಪಿಕೊಂಡಳು ॥ ೧೬೧ ॥

ತಮ್ಮ ಬಸವನು ತಮಗಿನಿತಿಲ್ಲವಾತು
ಒಮ್ಮೆಯಾದರು ಹೇಳಿ ಹೋಗಬಾರದೆ ॥ ೧೬೨ ॥

ದಿಕ್ಕುಗೆಡಿಸಿದೆ ಮನೆಯ ಮಕ್ಕಳೆಲ್ಲರ
ಇಕ್ಕಿ ಸಲಹುವ ಬಸವ ಮುನಿದೆ ಇಂದಿಗೆ ॥ ೧೬೩ ॥

ನಿನ್ನ ಸೋದರ ಅಳಿಯ ಚೆನ್ನ ಬಸವಗೆ
ಎನ್ನ ತಮ್ಮನೆ ಏನು ಹೇಳಿ ಹೋದೆ ॥ ೧೬೪ ॥

ನೀಲಲೋಚನೆ ಸತಿಗೆ ಏನು ಹೇಳಿದಿ
ಕುಳಿತಳಾಕೆಯು ಬಹಳ ದುಃಖ ಮಾಡುತ ॥ ೧೬೫ ॥

ತರಳ ಬಸವನೆ ನನ್ನ ಕರೆದು ಕೊಟ್ಟೆಯೊ
ಚರರಿಗೆಲ್ಲ ನೀನೇನು ಹೇಳಿ ಹೋದೆಯೊ ॥ ೧೬೬ ॥

ಎನ್ನ ಪರುಷದಖಣಿಯೆ ಎನ್ನ ತಮ್ಮನೆ
ನಿನ್ನ ಬಳಗವ ಬಿಟ್ಟು ಹೋಗುದುಚಿತವೆ ॥ ೧೬೭ ॥

ಎನಿತು ಪೇಳಲಿ ನಿನ್ನ ಘನಮಹತ್ವವ
ದಿನಪನಂದದಿ ತೇಜವಡೆದು ಮೆರೆದೆಯೊ ॥ ೧೬೮ ॥

ಲಿಪಿಯು ಬೀಳಲು ಓದಿ ನಿಪುಣವೆನಿಸಿದೆ
ಗುಪಿತ ದ್ರವ್ಯವ ತೋರಿ ಬಿಜ್ಜಳರಸನಿಗೆ ॥ ೧೬೯ ॥

ಅರಸು ಮೆಚ್ಚುತ ಕೊಟ್ಟ ಹಿರಿಪ್ರಧಾನಿಕೆ
ಹಿರಿಯನೆನಿಸಿದೆ ಹಿರಿಯರೊಳು ಬಸವನೆ ॥ ೧೭೦ ॥

ಚರರ ಕಾಣುತ ನಮಿಸಿ ಗುರುಗಳೆನುತಲಿ
ಅರಿದು ಸಮಯವ ನೋಡಿ ನೀಡುತಿರ್ದೆಯೊ ॥ ೧೭೧ ॥

ಚರನು ಜೂಜಿಗೆ ಸಿಕ್ಕು ಸೆರೆಯ ಸಿಲುಕಿರೆ
ತರಿಸಿ ತೊಗರಿಯ ಮಾಣಿಕವನ್ನು ಮಾಡಿದೆ ॥ ೧೭೨ ॥

ಕೊರೆದ ಕಟ್ಟಿಗೆ ಚುಚ್ಚಿ ಶರಣ ಸಾಯಲು
ಹರಣ ಪಡೆಯುತೆ ಗೆಲಿದಿ ಜೈನಮತವನು ॥ ೧೭೩ ॥

ಖಿಲ್ಲಜೈನರು ಮಾಡಿ ಹುಲ್ಲುಬೊಂಬೆಯ
ಸೊಲ್ಲಿನಿಂದಲಿ ಪ್ರಾಣವಿತ್ತು ಮೆರೆದೆಯೊ ॥ ೧೭೪ ॥

ಬಾಲೆ ಗೊಲ್ಲತಿ ಹೊತ್ತು ಹಾಲು ತರುತಿರೆ
ಕಾಲುಜಾರಲು ಬಸವೆನೆನಲು ಕಾಯ್ದೆಯೊ ॥ ೧೭೫ ॥

ಪುರದ ಜೈನರು ಚಿತ್ರಬರೆದು ತೋರಲು
ಕರೆದು ಚರನನು ಮಾಡಿ ಮೆರೆದೆ ತಮ್ಮನೆ ॥ ೧೭೬ ॥

ಮುನ್ನೂರರವತ್ತೂ ಪವಾಡ ಗೆಲಿದಿಯೊ
ಎನ್ನ ಕಣ್ಣಿಗೆ ತೋರಿಸೊಂದು ಮಹತ್ವ ॥ ೧೭೭ ॥

ಎಷ್ಟು ಹೇಳಲಿ ನಿಮ್ಮ ಶ್ರೇಷ್ಠಗುಣಗಳ
ಅಷ್ಟ ನೆಲ್ಲವ ಕನಸು ಮಾಡಿ ಹೋದೆಯ ॥ ೧೭೮ ॥

ಯಾಕೊ ತಮ್ಮನೆ ಮುನಿದು ಮೂರ್ಖನಾದೆಯೊ
ಸಾಕುಮಾಡಿದೆ ಲೋಕದಾಟವೆಲ್ಲವ ॥ ೧೭೯ ॥

ಕೆಂಡದಲ್ಲಿಯೆ ಬಿದ್ದ ಕೀಡಿಯಂದದಿ
ದಂಡನಾಯಕ ನಾನು ಮಿಡುಕುತಿರ್ದೆನು ॥ ೧೮೦ ॥

ಕಣ್ಣು ತೆರೆದರೆ ನೋಡು ತಮ್ಮ ಬಸವನೆ
ಪುಣ್ಯಪುರುಷನೆ ಮಾತನಾಡು ಎನ್ನೊಳು ॥ ೧೮೧ ॥

ಮುಕ್ತಯಕ್ಕನು ನಿನ್ನ ಭಕ್ತಿ ಗುಣಗಳ
ವ್ಯಕ್ತದಿಂದಲಿ ನೆನೆಸಿ ಅಳುತ ಕುಳಿತಳು ॥ ೧೮೨ ॥

ನೀಲನೂರಿನ ನಂಬಿ ಬಾಲೆ ಅಳುವಳೊ
ಲೋಲಬಸವನೆ ಮಾತನಾಡೊ ಬೇಗನೆ ॥ ೧೮೩ ॥

ಅಕ್ಕ ಚಂಗುಳಿ ಬಹಳ ದುಃಖ ಮಾಳ್ಪಳು
ಇಕ್ಕಿ ಪೋದೆಯೊ ಕಿಚ್ಚಿನೊಳಗೆ ನಮ್ಮನು ॥ ೧೮೪ ॥

ಕರುಣಿ ಸುಗ್ಗಲಿ ನಿಮ್ಮ ಸ್ಮರಿಸಿ ಅಳುವಳೊ
ಮರುಗಿ ದುಗ್ಗಲಿ ನೆಲಕೆ ಬಿದ್ದು ಅಳುವಳೊ ॥ ೧೮೫ ॥

ಏನು ಮಾಡಲಿ ನಾನು ಎತ್ತ ಹೋಗಲಿ
ಕನಸು ಆಯಿತು ಈ ಕಲ್ಯಾಣ ಪಟ್ಟಣ ॥ ೧೮೬ ॥

ನೀರ ನಗಲಿದ ಮಿನಿನಂತೆ ಆದೆನೊ
ಹರಣ ಎನ್ನದು ಇಡಲಿ ಏಕೆ ತಮ್ಮನೆ ॥ ೧೮೭ ॥

ಇರಿದುಕೊಳ್ಳಲೆ ಬಾವಿ ಕೆರೆಯ ಬೀಳಲೆ
ಕೊರಳಿಗುರುಲನು ಹಾಕಿಕೊಂಡು ಸಾಯಲೆ ॥ ೧೮೮ ॥

ಮಡುವ ಧುಮುಕಲೆ ಇಸವ ಕುಡಿದು ಸಾಯಲೆ
ಖಡ್ಗದಿಂದಲಿ ನಾನು ಹೊಡೆದುಕೊಳ್ಳಲೆ ॥ ೧೮೯ ॥

ಎಂದೆದೆಯ ಬಡಿಯುತಲಿ ಉಸುರ ಹಕುತ
ಇಂದುವದನೆಯು ಮಿಕಿ ತಾಣ ಬಿಟ್ಟಳು ॥ ೧೯೦ ॥

ಶರಣರೆಲ್ಲರು ಭೋರ್ಗರೆಯುತ ಅಳುತಿರೆ
ಪುರದೊಳೆಲ್ಲರು ಕೂಡಿ ಸೋಕ ಮಾಳ್ಪರು ॥ ೧೯೧ ॥

ಅರಸು ಬಿಜ್ಜಳ ಕೊಂಡೆಯರನು ಕೇಳಿದ
ಪರಮ ಬಸವನ ಪ್ರಾಣ ಹೇಗೆ ಹೋಯಿತು ॥ ೧೯೨ ॥

ಅಸಿಯ ಶೂಲದ ಮಾತು ಬಸವರಾಜಗೆ
ಅಸಮ ಮಡಿವಳನುಡಿದು ಕೊಂದನೆನುತಲಿ ॥ ೧೯೩ ॥

ಅರಸು ಬಿಜ್ಜಳ ಕೇಳಿ ಪರಿಯಪರಿಯಲಿ
ಶರಣ ಬಸವಗೆ ಹ್ಯಾಸಮಾಡಿ ನಗುತಿರೆ ॥ ೧೯೪ ॥

ನುಡಿಯ ಬಿಜ್ಜಳ ಕೇಳಿ ಪಡಿಹರಯ್ಯನು
ಒಡನೆ ಬರುತಲೆ ಕಿನ್ನರಯ್ಯಗರುಹಿದ ॥ ೧೯೫ ॥

ಕಿನ್ನರಯ್ಯನ ಕೇಳಿ ಚನ್ನ ಪಡಿಹರ
ಇನ್ನು ಹೋಗುತ ಹೇಳು ಮಡಿವಳಯ್ಯಗೆ ॥ ೧೯೬ ॥

ಅಂದ ಮಾತನು ಕೇಳಿಬಂದ ಪಡಿಹರ
ನಿಂತು ಕರವನು ಮುಗಿದು ಮಡಿವಳಯ್ಯಗೆ ॥ ೧೯೭ ॥

ಏನು ಕಾರಣ ನೀನು ಬಂದೆ ಪಡಿಹರ
ಸಾನುರಾಗದಿ ಹೇಳು ಎಂದ ಮಡಿವಳ ॥ ೧೯೮ ॥

ಕಿನ್ನರಯ್ಯನು ತಾನು ಎನ್ನ ಮಡಿವಳಯ್ಯನೆ
ನಿನ್ನ ಪಾದಕೆ ಬಂದೆ ಮಡಿವಳಯ್ಯನೆ ॥ ೧೯೯ ॥

ಬಸವರಾಜನು ತಾನು ಅಸುವನಳಿದನು
ವಸುಮತೀಶನು ಹಾಸ್ಯಮಾಡಿ ನುಡಿದನು ॥ ೨೦೦ ॥

ಕೇಳಿ ಮಡಿವಳ ಉಗ್ರತಾಳಿ ಮನದೊಳು
ಸೀಳಿ ಬಿಡುವೆನು ಎಂದ ಬಿಜ್ಜಳರಸನ ॥ ೨೦೧ ॥

ಪಡಿಹರನೆ ಬೇಗ ನಡೆಯೊ ಬರುವೆನು
ತಡವು ಯಾತಕೆ ಅವರ ಪ್ರಾಣ ತರುವೆನು ॥ ೨೦೨ ॥

ವೀರಗಾಸೆಯನುಟ್ಟು ವೀರಕಂಕಣ
ವೀರಘಂಟೆಯ ಕೊಂಡು ಧೀರ ನಡೆದನು ॥ ೨೦೩ ॥

ಭವಿಗಳೆದುರಿಗೆ ಬಂದರವರ ಶಿರವನು
ಸವರಿ ಬಿಡುವೆನು ಎಂದು ಜಡ್ಡ ಪಿಡಿದನು ॥ ೨೦೪ ॥

ನಡೆದನಾಗಳೆ ಕಣ್ಣು ಕಿಡಿಯ ಸೂಸುತ
ಒಡನೆ ಬಂದನು ಶರಣರಿದ್ದ ಎಡೆಯೊಳು ॥ ೨೦೫ ॥

ಶರಣರೆಲ್ಲರು ಎದ್ದು ಕರವ ಮುಗಿಯುತೆ
ಹರುಷವಾದರು ಕಂಡು ಮಡಿವಳಯ್ಯನ ॥ ೨೦೬ ॥

ನೋಡಿ ಶರಣರ ಮಾತನಾಡಿ ಮಡಿವಳ
ಖೋಡಿ ಒಯ್ದನೆ ಶಿವನು ಖ್ಯಾತ ಬಸವನ ॥ ೨೦೭ ॥

ವೀರಘಂಟೆಯ ನಾದವೆರಸಿ ನುಡಿಸುತ
ಕೋರಿ ಮಿಸೆಯ ತಿದ್ದಿ ಮಾರವೈರಿಗೆ ॥ ೨೦೮ ॥

ಎಂದು ಮಡಿವಳ ಕೋಪದಿಂದ ನುಡಿದನು
ಇಂದು ನಿನ್ನೊಳು ಗರ್ವ ಬಂದು ಹೊಕ್ಕಿತೆ ॥ ೨೦೯ ॥

ಹರನೆ ಇರ್ವರ ಒಯ್ದು ಪರಿಯು ಏನಿದು
ತ್ವರಿತದಿಂದಲಿ ಅವರ ಕಳುಹದಿರ್ದೊಡೆ ॥ ೨೧೦ ॥

ನಿನ್ನ ಪಟ್ಟಣ ಧೂಳಿಯನ್ನು ಮಾಡುವೆ
ನಿನ್ನ ಬಿಂಕವ ಎಷ್ಟು ನೋಳ್ಪೆನೆಂದನು ॥ ೨೧೧ ॥

ಮೂರು ಲೋಕಕೆ ಶಿವನು ಬೇರೆಯೆನುತಲಿ
ಧೀರ ಡಂಗುರ ಹೊಡೆದ ಕ್ರೋಧಿದಿಂದಲಿ ॥ ೨೧೨ ॥

ಮಡಿವಳಯ್ಯನ ಘಂಟೆ ನುಡಿದ ಶಬ್ದವು
ಅಡರಿ ಶಿವಪುರ ಗಡಬಡಿಸಿತು ಶಿವಸಭೆ ॥ ೨೧೩ ॥

ಏನು ಚೋದ್ಯವು ಶಬ್ದವೇನು ಕಾರಣ
ಭಾನುತೇಜನೆ ಎಂದು ದೇವಿ ಕೇಳ್ದಳು ॥ ೨೧೪ ॥

ಗಿರಿಜೆ ಕೇಳೇ ಬಸವ ಶರಣ ಖ್ಯಾತನು
ಇರಥಲವರನು ನಾನು ತಂದ ಕಾರಣ ॥ ೨೧೫ ॥

ನೋಡು ಶಂಕರ ಕದನ ಬೇಡ ಅವರೊಳು
ಮಾಡಿ ಗೆಲಿದ್ಯಾ ಮುನ್ನ ಚರಮರಸನೊಳು ॥ ೨೧೬ ॥

ಓರ್ವಗೊಲ್ಲಳ ಕದ್ದು ಚೋರನೆನಿಸುತ
ಧೀರ ಗುಂಡನ ಮೊರೆಯ ಬೀಳಲಿಲ್ಲವೆ ॥ ೨೧೭ ॥

ತೋಂಡಿಶಂಕಿಯು ಒಗೆದ ಗುಂಡುಕಲ್ಲನು
ಕಂಡು ಅಂಜುತ ಗಿಡದೊಳಡಗಲಿಲ್ಲವೆ ॥ ೨೧೮ ॥

ಕೊರಳ ಲಿಂಗವು ಇಲ್ಲದಿರಲು ಕಾಣುತೆ
ಶರಣ ನಿಮ್ಮನು ಏರಗಟ್ಟಲಿಲ್ಲವೆ ॥ ೨೧೯ ॥

ನಿಮ್ಮಕಿಂತಲು ಘನವು ನಿಮ್ಮ ಶರಣರು
ಹಮ್ಮು ಅವರೊಳು ಬೇಡ ಕಳಹು ಈರ್ವರ ॥ ೨೨೦ ॥

ಕಳುಹದಿರ್ದೊಡೆ ನಮಗೆ ಉಳಿವು ಕಾಣದು
ಇಳೆಯ ಶರಣರು ನಿಮ್ಮ ಹೊರ್ತು ಮಾಡ್ವರು ॥ ೨೨೧ ॥

ಗಿರಿಜೆ ಮಾತನು ಕೇಳಿ ಹರನು ತಿಳಿಯುತೆ
ಭರದಿ ಅಪ್ಪಣೆಕೊಡಲು ಬಂದರೀರ್ವರು ॥ ೨೨೨ ॥

ಇತ್ತ ಬಸವನು ಖ್ಯಾತ ಉತ್ತಮಾಂಗದಿ
ಸತ್ತ ಪ್ರಾಣವು ಬರಲು ಶಿವಶಿವೆನುತಲಿ ॥ ೨೨೩ ॥

ಖ್ಯಾತ ಬಸವನು ಎದ್ದು ಮಾತನಾಡುತೆ
ಓತು ಶರಣರ ಪಾದಕೆರಗಿ ನಿಂತನು ॥ ೨೨೪ ॥

ನೋಡಿ ಶರಣರು ಹಸ್ತಗೂಡಿ ಚಪ್ಪಳೆ
ಮಾಡಿ ಸ್ತೋತ್ರವ ಮಡಿವಳಯ್ಯನಂಘ್ರಿಗೆ ॥ ೨೨೫ ॥

ಎರಗಿ ಬಸವನು ನಮಗೆ ಗುರುಸ್ವರೂಪನು
ಇರದೆ ಪ್ರಾಣವ ತಂದು ನಮ್ಮ ಸಲುಹಿದ ॥ ೨೨೬ ॥

ಮ್ಯಾದರಯ್ಯನು ಬಂದು ಪದಕೆರಗುತ
ಹೋದ ಪ್ರಾಣವ ತಂದೆ ಮಡಿವಳಯ್ಯನೆ ॥ ೨೨೭ ॥

ಸತ್ತ ಪ್ರಾಣವ ಪಡೆಯಲೆತ್ತಿ ಮೆರೆದಗೆ
ಉತ್ತಮೋತ್ತಮರುಂಟ್ಯೆ ಮಡಿವಳಯ್ಯಗೆ ॥ ೨೨೮ ॥

ಕಿನ್ನರಯನು ಸಹಿತ ಚನ್ನಬಸವನು
ಉನ್ನ ತೋನ್ನತವೆಂದು ನಮಿಸಿ ಪಾದಕೆ ॥ ೨೨೯ ॥

ಶರಣೆ ನಾಗಲಿ ಬಂದು ಚರಣಕೆರಗುತ
ಹರಣ ನಮ್ಮದು ತಂದೆ ಮಡಿವಳಯ್ಯನೆ ॥ ೨೩೦ ॥

ಶರಣರೆಲ್ಲರು ಕೂಡಿ ಕರವ ಮುಗಿಯುತೆ
ಬಿರುದು ಕಾಯ್ದೆಯೊ ಎಂದು ಮಡಿವಳಯ್ಯಗೆ ॥ ೨೩೧ ॥

ಮನದ ಮ್ಯೆಲಿಗಿ ತೊಳೆದ ಘನವಮಹಾತ್ಮನೆ
ಎನುತ ಬಸವನು ಪಾದಕೆರಗಿ ಸುತ್ತಿದ ॥ ೨೩೨ ॥

ಬಿರುದು ಭಾಷೆಯ ಕಾಯ್ದು ಮೆರೆದು ಮರ್ತ್ಯದಿ
ಗುರುಸ್ವರೂಪ ನೀ ನಮಗೆ ಎಂದಿಗಾದರು ॥ ೨೩೩ ॥

ಮಡಿವಳಯ್ಯನು ಬಸವನಡಿಗೆ ನಮಿಸುತ
ಪೊಡವಿಯೊಳು ನೀ ದ್ವಿತಿಯ ಶಂಭುವೆನಿಸಿದಿ ॥ ೨೩೪ ॥

ಬಸವ ನಿಮ್ಮಯ ಭಕ್ತಿ ಧರಣಿತಳದೊಳು
ಎಸೆಯುತಿರ್ಪುದು ನಿಮಗೆ ಸರಿಯಗಾಣೆನು ॥ ೨೩೫ ॥

ಮಡಿವಳಯ್ಯನೆ ನಾನು ನಡೆವ ಭಕ್ತಿಗೆ
ಎಡವುತಿರ್ದೆನು ಎತ್ತಿ ಸಲಹಿದೆನ್ನನು ॥ ೨೩೬ ॥

ಮೊದಲು ಮಾಡಿದ ಭಾಷೆಯನ್ನು ನಡಿಸಿದಿ
ಚದುರ ಖ್ಯಾತನ ಪ್ರಾಣ ತೆಂದು ಸಲುಹಿದಿ ॥ ೨೩೭ ॥

ನೀನು ನುಡಿದೊಡೆ ನಾನು ಹೋದೆನಲ್ಲಿಗೆ
ಜ್ಞಾನಿ ಮಡಿವಳ ನಮ್ಮ ತಂದೆಯೆನಿಸಿದಿ ॥ ೨೩೮ ॥

ಎಂದು ಸ್ತುತಿಸುತ ಕೂಡಿ ನಿಂತು ಶರಣರು
ಬಂದು ಖ್ಯಾತನು ಗುರುವಿನಡಿಗೆ ನಮಿಸುತೆ ॥ ೨೩೯ ॥

ಮಡಿವಳಯ್ಯನು ತಾನು ನುಡಿದ ಸಮುಹಕೆ
ಒಡೆಯ ಜಂಗಮ ಈತ ನಮ್ಮ ಸಲುಹಿದ ॥ ೨೪೦ ॥

ಈತನಿಂದಲೆ ನಮ್ಮ ಮಾತು ಗೆಲಿದಿತು
ಖ್ಯಾತ ಬಸವನ ಪ್ರಾಣ ತಂದು ಸಲುಹಿದ ॥ ೨೪೧ ॥

ಸತ್ಯ ಜಂಗಮ ಕಾಲಮೃತ್ಯುವಾದನು
ಕರ್ತ ಈತನು ನಮ್ಮ ಗಣಸಮೂಹಕೆ ॥ ೨೪೨ ॥

ಮಂಗಳಾತ್ಮಕ ಭಕ್ತ ಸಂಗಮದೇವನೆ
ಜಂಗಮಯ್ಯನೆ ಬಿಜಯಮಾಡಿಸೆಂದನು ॥ ೨೪೩ ॥

ಶರಣರೆಲ್ಲರು ಚರಣ ಪಿಡಿಯಲಾಕ್ಷಣ
ಹರುಷದಿಂದಲಿ ಹರಕೆ ವಚನವಿತ್ತನು ॥ ೨೪೪ ॥

ಎಷ್ಟು ಹೇಳಲಿ ನಿಮ್ಮ ಭಕ್ತಿನಿಷ್ಠೆಯ
ಶ್ರೇಷ್ಠರಾದಿರಿ ಮೂರು ಲೋಕವರಿಯಲು ॥ ೨೪೫ ॥

ಶರಣ ಭಕ್ತಿಗೆ ಪ್ರಭುವು ಬರುಲು ಬೇಗನೆ
ಪರಮ ಮುಕ್ತಿಯು ನಿಮಗೆ ಸಾಧ್ಯವಾಗಲಿ ॥ ೨೪೬ ॥

ಚರನು ಹರಿಸಲು ಕೇಳಿ ಶರಣರೆಲ್ಲರು
ಎರಗಿ ಪಾದಕೆ ದಂಡಿಗೆಯೊಳು ಮೂರ್ತಿಸಿ ॥ ೨೪೭ ॥

ಎತ್ತಿ ದಂಡೆಗೆ ಚೌರಿ ಛತ್ರಚಾಮರ
ಸತ್ಯ ಖ್ಯಾತನ ಮನೆಯೊಳಿಂದ ಹೊರಟರು ॥ ೨೪೮ ॥

ಬಸವ ದಂಡಿಗೆ ಮುಂದೆ ಒಸೆದು ಹೊತ್ತನು
ಅಸಮ ಖ್ಯಾತನು ಹಿಂದೆ ಹೆಗಲುಗೊಟ್ಟನು ॥ ೨೪೯ ॥

ಶರಣರೆಲ್ಲರು ಕೂಡಿ ಚರನ ಹರಸುತೆ
ಕರದಿ ಆರುತಿ ಪಡಿದಳಕ್ಕನಾಗುಲಿ ॥ ೨೫೦ ॥

ಕಿನ್ನರಯ್ಯನು ಛತ್ರವನ್ನು ಹಿಡಿದನು
ಚನ್ನಬಸವನು ಚಾಮರವನು ಬೀರಿದ ॥ ೨೫೧ ॥

ವೀರಘಂಟೆಯ ನುಡಿಸಿ ಧೀರ ಮಡಿವಳ
ಮಾರವ್ವೈರಿಯ ಪೊಗಳಿ ನಡೆದ ಮುಂದಕೆ ॥ ೨೫೨ ॥

ಹರಹರೆನುತಲಿ ಕೂಡಿ ಶರಣರೆಲ್ಲರು
ಭರದಿ ಮುಂದಕೆ ನಡೆದು ಬರುತಲಿರ್ದರು ॥ ೨೫೩ ॥

ಬಂದು ಅರಸನ ಮನೆಯ ಮುಂದೆ ನಿಂತರು
ಚಂದಚಂದದಿ ಶಿವನ ಪಾಡಿ ಹೊಗಳುತ ॥ ೨೫೪ ॥

ಅರಸು ದನಿಯನು ಕೇಳಿ ಹೊರಗೆ ಬಂದನು
ಶರಣ ಬಸವನ ಕಂಡು ಚೋದ್ಯವಾದನು ॥ ೨೫೫ ॥

ಮಡಿವಳಯ್ಯನು ನೋಡಿ ಘಟುಘಡೆನ್ನುತ
ಖೋಡಿ ನಿಂದಕ ನೋಡು ನಿಷ್ಠೆ ಶರಣರ ॥ ೨೫೬ ॥

ಅಂದ ಮಾತನು ಕೇಳಿ ನೊಂದು ಬಿಜ್ಜಳ
ಇಂದು ಶರಣರ ಮಾತು ಗೆಲಿಯಿತೆಂದನು ॥ ೨೫೭ ॥

ಶರಣ ಸಮುಹಕೆ ರಾಯ ಶಿರವ ಬಾಗಲು
ಭರದಿ ಮುಂದಕೆ ಹರಹರೆನುತ ನಡೆದರು ॥ ೨೫೮ ॥

ಅರಸು ಬಿಜ್ಜಳ ನೋಡಿ ಸ್ಮರಿಸಿ ಹರುಷದಿ
ಅರಸು ಸಕಲರ ಕೂಡಿ ಪುರದಿ ಮೆರೆಸುತ ॥ ೨೫೯ ॥

ಊಘೆಯಗೊಳಿಸುತ ಬಂದರಗಣಿತದಲ್ಲಿ
ಜಗಕೆ ಜಂಗಮ ಪೂಜ್ಯನೆಂದು ನುತಿಸುತ ॥ ೨೬೦ ॥

ಶರಣರೆಲ್ಲರು ಬಂದು ಚರನ ಮಠದೊಳು
ಇರಿಸಿ ದಂಡಿಗೆ ಪಾದಕೆರಗಿ ನಮಿಸುತ ॥ ೨೬೧ ॥

ಕೊಂಡು ಅಪ್ಪಣೆ ಬಸವಪ್ರಮಥರೆಲ್ಲರು
ದಂಡು ಹೋಯಿತು ತಮ್ಮ ತಮ್ಮ ಸದನೆಕೆ ॥ ೨೬೨ ॥

ಶರಣ ಖ್ಯಾತನು ಮೊದಲಿನಂತೆ ನಿಷ್ಠೆಯ
ಪರಿಯಪರಿಯಲಿ ಬಿಡದೆ ನಡೆಸುತ್ತಿದ್ದನು ॥ ೨೬೩ ॥

ಎಲ್ಲ ಗಣರಿಗೆ ಒಲಿದನಲ್ಲಿ ಘನಪ್ರಭು
ಮಲ್ಲಿಕಾರ್ಜುನ ನೆಲಿಸಿ ಮರೆದ ಮರ್ತ್ಯದಿ ॥ ೨೬೪ ॥

ಚಲುವ ಭಕ್ತರ ಮರೆಯದೆಲ್ಲರನು ನೀ
ಒಲಿದು ನಮ್ಮನು ಸಲಹು ಮಲ್ಲಿಕಾರ್ಜುನ ॥ ೨೬೫ ॥

ಖ್ಯಾತಮಯ್ಯನ ಕಥೆಯ ಕೂತು ಕೇಳಲು
ಪ್ರೀತಿಯಿಂದಲಿ ಒಲಿವ ಮಲ್ಲಿಕಾರ್ಜುನ ॥ ೨೬೬ ॥

ಮಾದರಯ್ಯನ ಚರಿತ್ರೆ ಓದಿದವರಿಗೆ
ನಾದಪ್ರೀಯನು ಒಲಿವ ಮಲ್ಲಿಕಾರ್ಜುನ ॥ ೨೬೭ ॥

ಮುದದಿ ಖ್ಯಾತನ ಕೋಲು ಪದವ ಕೇಳು
ಪರವಿ ಮುಕ್ತಿಯ ಕೊಡುವ ಮಲ್ಲಿಕಾರ್ಜುನ ॥ ೨೬೮ ॥

ಶರಣ ಖ್ಯಾತನ ಕಥೆಯ ಬರೆಯುವವರಗೆ
ಪರಮ ಪದವಿಯ ಕೊಡುವ ಮಲ್ಲಿಕಾರ್ಜುನ ॥ ೨೬೯ ॥

ಪರಕೆ ಪರತರವಸ್ತು ನಿರುಪಮಾತ್ಮನೆ
ಪರಮ ಶ್ರೀಗಿರಿ ಚನ್ನಮಲ್ಲಿಕಾರ್ಜುನ ॥ ೨೭೦ ॥

ರಕ್ಷಿಸೆನ್ನನು ಲಲಾಟಕ್ಷ ದೇವನೆ
ಮೋಕ್ಷದಾಯಕ ಚನ್ನ ಮಲ್ಲಿಕರ್ಜುನ ॥ ೨೭೧ ॥

ಪರಮಖ್ಯಾತನ ಕಥೆಯ ಮಂಜೆ ಮಾಡಲು
ವರ ಜಗದ್ಗುರು ಒಲಿವ ಮಲ್ಲಿಕಾರ್ಜುನ ॥ ೨೭೨ ॥

ಪಾಡಿ ಹರುಷದಿ ಮತ್ತೆ ಕೇಳಿ ಮುದದಲಿ
ಮಾಡಿ ಭಕ್ತಿಯ ಸ್ವಾಮಿಯಡಿಗೆ ಸಲ್ಲಿಸಿ ॥ ೨೭೩ ॥

ಧನ್ಯರಾಗಿ ಶಿವಶಿವೆನುತ ನುಡಿಯಿರಿ
ಚಿನುಮಯಾತ್ಮನು ಕಾಮಿತಾರ್ಥ ಕೊಡುವನು ॥ ೨೭೪ ॥

ವೀರಶೈವರೆ ಖ್ಯಾತ ಶರಣನಂದದಿ
ಮಾರವೈರಿಯ ಸ್ತುರಿಸಿ ಮುಕ್ತಿ ಪಡೆಯಿರಿ ॥ ೨೭೫ ॥

ಇಂತು ಕವನವ ಪರಿಶ್ರಮಿಸಿ ರಚಿಸಲು
ಸಂತಸಕೊಡುವ ನಮ್ಮ ಮಲ್ಲಿಕಾರ್ಜುನ ॥ ೨೭೬ ॥

ಮುತ್ತಿನಾರುತಿ ಪಿಡಿದು ಎತ್ತಿ ಬೆಳಗಿರಿ
ಚಿತ್ತಶುದ್ಧದಿ ಮಲ್ಲಿಕಾರ್ಜುನಯ್ಯಗೆ ॥ ೨೭೭ ॥

ಮಂಗಳಾರತಿ ಬೆಳಗಿರಂಗಜಾರಿಗೆ
ಲಿಂಗ ಶ್ರೀಗುರು ಮಲ್ಲಿಕಾರ್ಜುನಯ್ಯಗೆ ॥ ೨೭೮ ॥

ಕರ್ಪುರಾರುತಿ ಎತ್ತಿ ಸರ್ಪಭೂಷಗೆ
ಅರ್ಪಿಸುವೆನಾ ಮಲ್ಲಿಕಾರ್ಜುನಯ್ಯಗೆ ॥ ೨೭೯ ॥

ಕಡದ ಬತ್ತಿಯ ಬೆಳಗಿ ಮಂತ್ರ ಪುಸ್ಪವ
ಮೃಡನ ಪಾದಕೆ ಇರಿಸಿ ನಮಿಸಿರರ್ತಿಲಿ ॥ ೨೮೦ ॥

ಹರಹರವೆನ್ನಿ ನೀವು ಶಿವಶಿವೆನ್ನಿರಿ
ಕರುಣ ಭಕ್ತಿಲಿ ನಮಸ್ಕಾರ ಮಾಡಿರಿ ॥ ೨೮೧ ॥

– ಶ್ರೀಮತಿ ಸರ್ವಮಂಗಳ ಜೋಗೂರ ಹಾಗೂ ಪಾರ್ವತಿ ಜಮಶೆಟ್ಟಿ,
–ಶ್ರೀಮತಿ ಶಶಿಕಲಾಗಿರಿ,
– ಕೃತಿ: ಜೀವನ ಜೋಕಾಲಿ : ಕೋಲುಪದ

***

ಮೇದರ ಕೇತಯ್ಯ

ಸೂಚಕ ಪದ್ಯ :– ಮರಣ ಬಂದರು ಕೂಡ ಶರಣ ಕಾಯಕ ಮುಗಿಸಿ
ಹರುಷದಲಿ ಹರಣ ನೀಗಿದನು । ಕೇತಯ್ಯ
ಹರನಿತ್ತ ಪದವ ಕರುಣೆಯಲಿ ॥ ೧ ॥

ಶರಣ ಶಿವಕಾಯಕವ ಒರೆಗೆ ಹಚ್ಚುವರಾರು
ಹರ ಸಹಿತ ಸೋತು ಬದುಕಿಸಿದ । ಮೇದಾರ
ವರಕೇತ ನಿನಗೆ ಸರಿ ಯಾರು ॥ ೨ ॥

ಚಿರಜೀವಿ ಕೇತಯ್ಯ ಹರ ಭಕ್ತ ನೀನಯ್ಯ
ಹಿರಿಯರಾರಿಲ್ಲ ನಿನಗಿಂತ । ಜಗದೊಳಗೆ
ನರಲೋಕ ಹಾಡಿ ಭಜಿಸುವದು ॥ ೩ ॥

ನಿನ್ನ ಭಜನೆಯ ಹಾಡು ಹೊನ್ನ ಮಳೆ ಸುರಿದಂತೆ
ಹಣ್ಣಾದ ಎದೆಯ ಒಕ್ಕಲಿಗ । ಮಣ್ಣೊಳಗೆ
ಚಿನ್ನ ಬೆಳಕೊಂಡ ಒಣ ಬಿತ್ತ ॥ ೪ ॥

ರನ್ನ ಬಟ್ಟಲ ಸೆಡ್ಡಿ ನುಣ್ಣನ್ನ ಕೋಲುಗಳ
ಹೊನ್ನ ಕೂರಿಗಿಗೆ ಸರಿಪಡಿಸಿ । ಬಿತ್ತಿದರೆ
ಚಿನ್ನ ಬೆಳವಲಕೆ ಕೇತಯ್ಯ ॥ ೫ ॥

ಗುರುವಿಲ್ಲದೇ ಕಲಿತ ಹರಭಕ್ತ ನೀನೊಬ್ಬ
ನರಲೋಕದೊಳಗೆ ಯಾರುಂಟು । ಕೇತಯ್ಯ
ಚಿರವಂತ ಊಟ ನಿನ್ನಾಡು ॥ ೬ ॥

ಮಲೆನಾಡ ಗಡಿಯೊಳಗೆ ಉಳಿಮೆ ಬೆಟ್ಟದ ಬೆಳಗೆ
ಬೇಲೂರ ಕೇತ ಮೇದಾರ । ಕಾಡೊಳಗೆ
ಬೆಳದಾಡಿ ಕಲೆತ ಶಿವಮತವ ॥ ೭ ॥

ಕೇತಯ್ಯ ನಿನ ಮಡದಿ ಸಾತವ್ವಳೆಂಬವಳು
ಜಾತಿ ಮೇದರರದು ಕಸಬಿನಲಿ । ನಾಡೊಳಗೆ
ನೀತಿ ಶಿವಮತದ ಒರೆಗಲ್ಲು ॥ ೮ ॥

ಕಾಡಿನೊಳಗಿರು ಹಾದಿ ಮುಡಿ ವೇದಗಳಾಗಿ
ನಾಡೆನ್ನ ನುಂಗಿ ನಗುತಿರಲು । ಹೊಸ ಮತವು
ನಾಡಮೇಲಿರುವ ಶಿವಲೋಕ ॥ ೯ ॥

ಹುಲಿಸಿಂಗ ಕರಡಿಗಳು ಬಲವಂತ ಪ್ರಾಣಿಗಳು
ಛಲದಿಂದ ಕೊಂದು ತಿನ್ನುವವು । ಥೂ ಹಿಂಸೆ
ಮಲೆತು ನಿಂತಿಹುದು ಕಾಡೊಳಗೆ ॥ ೧೦ ॥

ನಾಡವರು ಹಾರುವರು ತೋಡಿ ಹೇಳುತ
ಹೂಡಿ ಯಾಗವನೆ ಕುರಿತಿಂದೊ । ಸಾರಿದರೆ
ನಾಡಿಗರು ಹೌದೆ ಶಿವಲಿಂಗ ॥ ೧೧ ॥

ವೇದದೊಳು ದಯವಿಲ್ಲ ವೇದಗಳೆ ಕಾರುತಿವೆ
ಸಾಧಿಸಲು ಹೊಟ್ಟೆ ಹಾರುವರು । ಮೋಡಿಕೆಯು
ವೇದೆಂದು ಹೇಳಿ ಜಗನುಂಗಿ ॥ ೧೨ ॥

ನಿತ್ಯದಲಿ ಕೇತಯ್ಯ ಕೆತ್ತುವನು ಬಿದಿರೆಳೆಯ
ಚಿತ್ತರದ ಬುಟ್ಟಿ ಮೊರಹೆಣೆದು । ಮಾರುವನು
ಉತ್ತಮರ ನಾಡು ಬೆಳವಲಕೆ ॥ ೧೩ ॥

ಬತ್ತೀಸ ರಾಗದೊಳ ಸುತ್ತು ಹಾಡಿದ ಬಿದಿರು
ಹೊತ್ತೊಯ್ದು ಕಂಬಿ ಪರವುತಕೆ । ಮಾಗಡದ
ಸತ್ಯುಳ್ಳ ತೇರು ಬೆಳವಲಕೆ ॥ ೧೪ ॥

ಚೆನ್ನಂಗಿ ಬಿದಿರೆಳೆಯ ನುಣ್ಣ ಮಾಟದ ತೇರ
ಹೊನ್ನ ಮಾಗಡದ ಹೂದೇರ । ಮೇದಾರ
ಅಣ್ಣಂದಿರಂದು ಕಟ್ಟಿದರು ॥ ೧೫ ॥

ವೀರಭದ್ರನ ಮುಂದೆ ಊರಿ ನಂದಿಯ ಕೋಲ
ಹಾರಾಡಿ ಕುಣಿದು ಕಡೆಹೇಳಿ । ಜಗದೊಳಗೆ
ಸಾರುವದು ಬಿದಿರು ಶಿವಮತವ ॥ ೧೬ ॥

ಬಿದಿರು ಶಿವಮತ ಹೇಳ್ವ ಚದುರ ಸಾಹಸವೆಂದು
ಉದರೆಂದು ತನ್ನ ಕಾಯಕವ । ನಡೆಸುದಕೆ
ನೆದರ ನಿಚ್ಚಣಿಕೆ ಶಿವಪುರಕೆ ॥ ೧೭ ॥

ಉದಿತ ಜೀವನ ರಾಟಿ ಕದರ ಕಾಯಕಮಾಡಿ
ನೆದರೆಂಬ ನೂಲ ಬಲುನೇತ । ಬಸವಣ್ಣ
ಸದರೆಂದು ನೇದ ಹೊಸಮತವ ॥ ೧೮ ॥

ಬಸವ ಸಾರಿದನಂದು ಕುಶಲದಲಿ ವಚನಗಳ
ಮಸುಕಿರುಳು ಹರಿದು ನಸಕಾತು । ಜಗದೊಳಗೆ
ಹೊಸಮತದ ಸೂರ್ಯನುದಿಸಿದನು ॥ ೧೯ ॥

ತುಂಬಿ ತುಳುಕಿತು ಬೆಳಕು ಇಂಬು ನೀಯಿತು ಜಗಕೆ
ಕಂಬ ಬಸವೆಂದು ಹೊಸಮತಕೆ । ಕಲ್ಯಾಣ
ಮುಂಬದಿಯ ಭೇರಿ ಮೊಳಗಿದವು ॥ ೨೦ ॥

ನಾನು ಬೊಮ್ಮನು ಎಂದು ತಾನ ಹಿಡಿಯಿತು ವೇದ
ಹೀನೆಂದು ಹೇಳಿ ವಚನಗಳು । ಸಾರಿದವು
ಮಾನ್ಯರಿಗೆ ಎಲ್ಲ ಬೊಮ್ಮೆಂದು ॥ ೨೧ ॥

ಮೇದಾರ ಕೇತಯ್ಯ ವಾದ ಹೂಡದೆ ಕಂಡ
ನಾದವಿಲ್ಲೆಂದು ವೇದದೊಳು । ವಚನಗಳು
ಬೋಧಿಸಲು ಮಿಗಿಲು ಜನಕೆಂದು ॥ ೨೨ ॥

ಶಿವಲಿಂಗ ನೆನಸಿದರೆ ಶಿವಪದವೆ ದೊರಕುವದು
ಭವದೊಳಗೆ ನೋಡು ವೇದಗಳು । ಹಾರುವರು
ರವಿಕೆ ಬಿಗಿದುಟ್ಟ ಗೊಂಬಿಗಳು ॥ ೨೩ ॥

ಕೇತ ಕೇಳಿದನಂದು ಸಾತವ್ವ ಹೇಳಿದಳು
ಜೇತ ಶಿವಮತಕೆ ನಾವಿಂದು । ಪತಿದೇವ
ಮಾತಾಡಿ ಬಹಳ ಫಲವೇನು ॥ ೨೪ ॥

ಕಲ್ಯಾಣ ಭೂಮಿಯೊಳು ಎಲ್ಲ ಜನ ಬಲ್ಲವರು
ಹೊಲ್ಲೆಂಬ ನುಡಿಗೆ ತಾಣಿಲ್ಲ । ಶಿವಮತದ
ಸೊಲ್ಲೊಂದೆ ಸುತ್ತ ಕೇಳುವದು ॥ ೨೫ ॥

ಜೀಯ ಬಸವನೆ ಶರಣು ಕಾಯಕವು ಶರಣರಿಗೆ
ತಾಯಿಬೇರಂತೆ ಶಿವಮತಕೆ । ಜಗದೊಳಗೆ
ಕಾಯಕವೆ ಕಾಣೊ ಕೈಲಾಸ ॥ ೨೬ ॥

ಮಲೆನಾಡ ಕಾಡೊಳಗೆ ಅಲೆದಾಡಿ ಕಲಿತಿರುವ
ಚೆಲುವ ಶಿವಮತದ ಬೆಳಕನ್ನು । ತಿಳಿಯುದಕೆ
ಒಲೆದು ಕಲ್ಯಾಣ ಸೇರೋಣ ॥ ೨೭ ॥

ಎಂದು ಕೇಳಿದ ಕೇತ ಅಂದು ಮನೆ ಬಿಟ್ಟಾತ
ಅಂದದಲಿ ಕೂಡಿ ಸತಿಯೊಡನೆ । ಕಲ್ಯಾಣ
ಚಂದ ಪಟ್ಟಣದ ಸೇರಿದನು ॥ ೨೮ ॥

ಕಲ್ಯಾಣ ಪುರದೊಳಗೆ ಎಲ್ಲ ಶರಣರ ಕಂಡು
ಸಲ್ಲಿಸಲು ಸೇವೆ ಶಿವಮತಕೆ । ಕೇತಯ್ಯ
ನಿಲ್ಲದಲೆ ಕೂಡಿ ಮಂಟಪಕೆ ॥ ೨೯ ॥

ಅಲ್ಲಮ ಪ್ರಭುವಿನಾ ಸೊಲ್ನುಡಿಗೆ ಕಿವಿಗೊಟ್ಟು
ಬಲ್ಲವರ ಮುಂದೆ ಕೈ ಮುಗಿದು । ಕೇತಯ್ಯ
ಹುಲ್ಲಾಗಿ ಮಾತ ಬೆಳೆಸಿದನು ॥ ೩೦ ॥

ಬತ್ತಲೆಯ ಜಗ ಬೈಲು ಎತ್ತ ನೋಡಲು ಬೈಲು
ಸುತ್ತಾಡಿ ನಾದ ಬಿಂದೊಡೆದು । ಕಲೆಯಾಗಿ
ಚಿತ್ಕಳೆಯು ತುಂಬಿ ಜಗ ಹುಟ್ಟಿ ॥ ೩೧ ॥

ನಾದವೇ ಬೀಜಾಗಿ ಭೇದಿಸಲು ಬಿಂದೊಡೆದು
ಸಾಧಿಸಲು ಕಳೆಯು ಮಳೆಯಾಗಿ । ಹೊಸ ಮತವು
ಪಾದೂರಿ ನಿಂತ ಶಿವ ಸಸಿಯು ॥ ೩೨ ॥

ಲಿಂಗವೆಂಬುದು ಕೇಳೊ ಸಂಗಡಿಸಿ ಮೂವೊಡವೆ
ಭಂಗಾಗಿ ಹುಟ್ಟಿ ಚಿತ್ಕಳೆಯು । ಪರಮಾತ್ಮ
ಕಂಗೊಳಿಸಿ ಬೆಳಗಿ ಜಗ ತುಂಬಿ ॥ ೩೩ ॥

ನಾದ ಕಲೆ ಬಿಂದುಗಳ ಹಾದಿ ಹೇಳಲು ಗಣಕೆ
ಮೇಧಾವಿ ಚೆನ್ನ ಬಸವಣ್ಣ । ಸಾರಿದನು
ಮೇದಾರ ಕೇತ ಬಂಟೆಂದು ॥ ೩೪ ॥

ದಿನ ದಿನಕೆ ಕೇತಯ್ಯ ಕನಕಾದ ಶರಣರಿಗೆ
ಜನಕಾದ ಕೇತ ನಿಚ್ಚಣಿಕೆ । ನಿಜ ಪದಕೆ
ಹೊನಲಾದ ಹೊಲಸು ತೊಳೆಯುದಕೆ ॥ ೩೫ ॥

ಹೊಸ ವಂತವೆ ಲಿಂಗಾಗಿ ಕಸವೆಂಬ ಕರಡಿಗೆಯು
ಹಸನ ಮನವದಕೆ ಶಿವದಾರ । ದಾಸೋಹ
ಉಸಿಲು ಶಿವಶರಣ ಕೇತನಿಗೆ ॥ ೩೬ ॥

ಹರಮತದ ಹಾಡುಗಳ ಮೊರದೊಳಗೆ ಹಣೆ ಹಣೆದು
ಕರಡಿಗೆಯ ತುಂಬಿ ಕಲ್ಯಾಣ । ಪೇಟೆಯೊಳು
ಶರಣರಿಗೆ ಮಾರಿ ದಾಸೋಹ ॥ ೩೭ ॥

ಬಡಜೀವಿ ಕೇತಯ್ಯ ಕಡು ಭಕ್ತ ಶಿವಮತಕೆ
ಅಡವಿಯೊಳು ಬಿದಿರು ಬಲು ಬೆಳೆದು । ಕೇತನಿಗೆ
ಸಡಗರದಿ ತೂಗಿ ಕರೆಯುವದು ॥ ೩೮ ॥

ಬಿದಿರು ಕೊಳ್ಳಕೆ ಹೋಗಿ ಹೊದರೊಳಗೆ ಕೈ ಹಾಕಿ
ಬಿದಿರೆಳೆಯ ಕೊಯ್ದು ನಿತ್ಯದಲಿ । ಕಾಯಕವ
ಬಿದಿಕಿಸುತಲಿದ್ದ ಸತಿಯೊಡನೆ ॥ ೩೯ ॥

ನಿತ್ಯದಲಿ ಜಂಗಮಕೆ ಸತ್ಯ ಸತಿ ಸಾತವ್ವ
ಅತ್ತಳದಿ ಪೂಜೆ ಗೈದುಣಿಸಿ । ದಾಸೋಹ
ಚಿತ್ತದಲಿ ನಡೆಸಿ ಇರುತಿರಲು ॥ ೪೦ ॥

ನೂರೊಂದು ಸಾವಿರದ ಭೂರಿ ಜಂಗಮರುಂಡು
ಸಾರಿದರು ವಚನ ಮಂಟಪಕೆ । ಕೇತನದು
ಹೇರೆಂದು ಭಕ್ತಿ ದಾಸೋಹ ॥ ೪೧ ॥

ದಿನದಂದೆ ಕೇತಯ್ಯ ಬನಸೇರಿ ಬಿದಿರುಗಳ
ಗೊನಗೊನೆಯ ಸವರಿ ಹಾಕುತಲಿ । ಗಗನದೊಳು
ಮನಸಿಜನ ವೈರಿ ಸತಿಯೊಡನೆ ॥ ೪೨ ॥

ನಂದಿ ವಾಹನವೇರಿ ಚೆಂದಾಗಿ ಬರುತಿರಲು
ಮುಂದೆ ಕಲ್ಯಾಣ ಕಾಡೊಳಗೆ । ಪಾರ್ವತಿಯು
ಮುಂದರಿತು ನೋಡಿ ಕೇತೆಂದು ॥ ೪೩ ॥

ಬಿದಿರುಗಳಗಳ ಸೀಳಿ ನೆದರಿಟ್ಟು ಬಲು ಸೋಸಿ
ಪೊದರುಗಳ ತೆಗೆದು ಒಣಹಾಕಿ । ಕೇತಯ್ಯ
ಚದುರ ಶಿವಶರಣ ಕೂತಿರಲು ॥ ೪೪ ॥

ಕೇತಯ್ಯನಿರುವಿಕೆಯ ಭೂತೇಶಗರುಹಿದಳು
ಸೈತೆ ಬಡತನವು ಶರಣರಿಗೆ । ಪತಿದೇವ
ದಾತೆಂಬ ನಾಮ ಹುಸಿ ನಿನಗೆ ॥ ೪೫ ॥

ಲೋಕದೊಳು ಇಳುವೇರು ಯಾಕೆ ಮಾಡಿದಿ ದೇವ
ಬೇಕು ಬೇಡೆಂಬ ಕಸತರವೆ । ಹುಡುಗಾಟ
ಸಾಕು ಮಾಡಿನ್ನು ಶರಣರಿಗೆ ॥ ೪೬ ॥

ನೋಡಲಾರದೆ ಭಕ್ತಿ ಕಾಡುವಿರಿ ಶರಣರನು
ಈಡೇನು ನಿಮ್ಮ ಶರಣರಿಗೆ । ಜಗದೊಳಗೆ
ಪೀಡಿಸಲು ಪೀಠ ಹೊಂದುವರು ॥ ೪೭ ॥

ಹೊನ್ನು ಕಾಸಲು ಮತ್ತೆ ಕನ್ನೆ ಕಳೆ ತುಂಬುವದು
ಚಿನ್ನ ಕಾದಂತೆ ಶಿವಭಕ್ತಿ । ಕರೆಯುವದೆ
ಕನ್ನಡಿಯು ಜನಕೆ ನೋಡೆಂದು ॥ ೪೮ ॥

ವರಶರಣ ಕೇತಯ್ಯ ಕೊರಗುವನೆ ಕಾಯಕಕೆ
ಕರುಣೆ ನಿಮಗಿಲ್ಲ ಶರಣರಲಿ । ಜಗದೊಡೆಯ
ಚೊರುಕೆನದೆ ನಿಮ್ಮ ಮನವೆಂತು ॥ ೪೯ ॥

ಸತಿಪತಿಯ ಮಹಿಮೆಯನು ನುತಿಸದವರಾರುಂಟು
ಬತವೇನು ಕಾಡಬೇಕೆಂಬ । ಶರಣರಿಗೆ
ಜತನದಲಿ ಕಾಯೊ ಸುಖವಿತ್ತು ॥ ೫೦ ॥

ಗಿರಿಜೆ ಹೇಳಲು ಹರಗೆ ಮರುಗಿ ಮಾತಾಡಿದನು
ಹೆರವರದು ತಟಕು ಮುಟ್ಟರೆಲೆ । ನೋಡೆಂದು
ಸುರಿಸಿದನು ಹೊನ್ನ ಬಿದಿರೊಳಗೆ ॥ ೫೧ ॥

ಕಂಬಿಗಳು ಚೆನ್ನಾಗಿ ತುಂಬಿದವು ಮಣಿಮುತ್ತು
ಶಂಭು ಹರ ದ್ರವ್ಯ ಹೆರವರದು । ಬೇಡೆಂದು
ಇಂಬೀಯದೆ ಮನಕೆ ಸಾಗಿದನು ॥ ೫೨ ॥

ಭಂಗಾರ ಹುಳ ಹತ್ತಿ ಭಂಗವಾಗಿದೆ ಬಿದಿರು
ಕಂಗಳಿಗೆ ಬೇಡ ಹೊಲೆಯೆಂದ । ದಾಸೋಹ
ಸಂಗ ಜೋಡಣೆಗೆ ಕುಂದೆಂದ ॥ ೫೩ ॥

ಮೆಳೆಮೆಳೆಯ ತಿರುಗಿದನು ಗಳವೊಂದು ಬಿದಿರಿಲ್ಲ
ಮೆಳೆ ತುಂಬ ನೋಡಿ ಮುತ್ತುಮಣಿ । ಮಾಣಿಕವ
ಮಳ ಮಳಿಸಿ ತಿಳಿದ ಹೊಲೆಯೆಂದು ॥ ೫೪ ॥

ಚಿಂತಿಸುವ ಶಿವನನ್ನು ಎಂಥ ಸಮಯವು ಬಂತು
ಪಂತವೇ ಹೋಯ್ತು ಕಾಯಕದ । ಕೇತೆಂದ
ಎಂತು ಸಾಗಿಸಲಿ ದಾಸೋಹ ॥ ೫೫ ॥

ಗಗನವನೆ ಮುದ್ದಿಡುತ ಸೊಗಯಿಸಿತು ಬಿದಿರೊಂದು
ಮಿಗೆ ಬೆಳೆದು ನಿಂತು ಕಾಡೊಳಗೆ । ಕೇತಯ್ಯ
ಬಗೆದವನೆ ಕೊಯ್ದು ಚೆಲ್ಲುದಕೆ ॥ ೫೬ ॥

ಕಸಬಗತ್ತಿಗಳನ್ನು ಮಸೆದು ಬಿಗಿದನು ನಡಕೆ
ಗಸನೆ ಕೈ ಕೊಟ್ಟು ಗಳವೇರಿ । ರೆಕ್ಕೆಗಳ
ತುಸು ಸವರಿ ತಳಕೆ ಚೆಲ್ಲಿದನು ॥ ೫೭ ॥

ಮೇಲೇರಿ ಕಡಿವಾಗ ಕಾಲು ಜಾರಿತು ತಪ್ಪಿ
ಗಾಲ ಮೇಲಾಗಿ ಕೇತಯ್ಯ । ಧುಪ್ಪೆಂದು
ಹೋಳಾಗಿ ಬಿದ್ದ ಎದೆಯವಚಿ ॥ ೫೮ ॥

ಕೂರಲಗು ಬಲು ನಟ್ಟು ಏರಿ ಮುರಿಯಿತು ಎದೆಗೆ
ಕಾರಗತ್ತಲೆಯೊ ಬವಳಿಕೆಯೊ । ಮನ ತುಂಬಿ
ತೋರದಲೆ ಹೋಯ್ತು ಕಣ್ಮುಂದೆ ॥ ೫೯ ॥

ಬಿಸಿರಗುತ ಚಿಮ್ಮುತಿರೆ ಹಸುನಗುತ ಕೇತಯ್ಯ
ನೊಸಲಗಣ್ಣನಿಗೆ ಕೈ ಮುಗಿದು । ಬೇಡಿದನು
ಕಸುವೊಂದೆ ಸಾಕು ಕಾಯಕಕೆ ॥ ೬೦ ॥

ಹಾರದಿರು ಪಡುಗಡಲ ಏರಿ ಇಳಿಯು ರವಿಯೆ
ಮಾರ ಹರನಾಣೆ ಎನ್ನಾಣೆ । ಶಿವಶರಣ
ಧೀರ ಕಾಯಕದ ಮನದಾಣೆ ॥ ೬೧ ॥

ಮೀರಿ ತುಂಬಿತು ಕಳೆಯು ವೀರ ಕೇತನಿಗಂದು
ತೀರಿಸುವೆ ದಿನದ ದಾಸೋಹ । ಈ ಹೊತ್ತು
ಹಾರಿದರೆ ಹರಣ ಕೇಡೆಂದು ॥ ೬೨ ॥

ಕಡಿದೊಗೆದ ಬಿದಿರೆಳೆಯ ತಡೆಯದಲಿ ಕಟಗೊಂಡು
ಓಡಿದ ಮನೆಹಾದಿ ಅವಸರದಿ । ಮೊರಹೆಣೆದು
ಗಡನೆ ಮಾರೆಂದ ಹೆಂಡತಿಗೆ ॥ ೬೩ ॥

ಹದಿಬದೆಯು ಸಾತವ್ವ ಕದಲಿಸದೆ ಅಣತಿಯ
ಕುದುಕಿನಲಿ ಹೋಗಿ ಪೇಟೆಯೊಳು । ಮೊರ ಮಾರಿ
ಒದಗಿಸಿದಳೂಟ ಜಂಗಮಕೆ ॥ ೬೪ ॥

ದಾಸೋಹದಾಪರಸಿ ಸೂಸಿ ತುಂಬಿತು ಮನೆಯ
ಈಸಾಡಿ ಮನಸು ಕೇತನದು । ಜಂಗಮರು
ಆಸೆ ಹಸುವಿನದು ಹಿಂಗಿದದು ॥ ೬೫ ॥

ಬಂದ ಜಂಗಮ ಪರಿಸೆ ಅಂದೆ ಕರಗಿತು ಉಂಡು
ನಂದದಾ ದೀಪ ಕಾಯಕವು । ಕೇತನಿಗೆ
ಎಂದೆನುತ ಹೊಗಳಿ ನಡೆದಿರಲು ॥ ೬೬ ॥

ಮುಂದೆ ಹೆಂಡತಿ ಕರೆದು ನೊಂದದಳಕದೆ ಕೇತ
ನಂದುವದು ದೀಪ ಮುರಿದಲಗ । ಕೀಳೆಂದ
ಹೊಂದುವೆನು ಶಿವನ ಅಡಿಗಳಿಗೆ ॥ ೬೭ ॥

ಶಿವನೆಂದು ಎದೆ ನೋಡಿ ತವಕದಲಿ ಕಿತ್ತೊಗೆಯೆ
ಶಿವ ಶಿವನೆ ಮುಗಿತು ಕಾಯಕವು । ಎಂದೆನುತ
ಶಿವಯೋಗ ರವಿಯು ಮುಣಗಿದನು ॥ ೬೮ ॥

ನೋಡಲಾರದೆ ರವಿಯು ಪಾಡ ಶಿವ ಶರಣರಿಗೆ
ಹೂಡುವದು ಆಟ ಕತ್ತಲೆಯು । ತಂದೆಂದು
ಬಾಡಿತಾಕಾಶ ಕಣ್ಮುಚ್ಚಿ ॥ ೬೯ ॥

ಸಾತವ್ವ ಬಳಲಿದಳು ಯಾತನೆಯು ಬಲು ಆಗಿ
ಜೀತ ಶಿವ ಮತಕೆ ಕುಂಟಾತು । ನಂದಿಂದು
ಯಾತರದು ಬಾಳು ಶಿವಲಿಂಗ ॥ ೭೦ ॥

ಪತಿಯು ಲಿಂಗಾಗಿದ್ದ ಸತಿ ಶರಣೆನಾನಿದ್ದೆ
ರತನ ಕಾಯಕವೆ ಶಿವಪೂಜೆ । ಇಂದ್ಹೋತು
ಜತನೇಕೆ ಇನ್ನು ಬಾಳುದಕೆ ॥ ೭೧ ॥

ಅಂಗವಿಲ್ಲದ ಲಿಂಗ ಭಂಗನಿನಗೆಂದುಂಟು
ಜಂಗಮವೆ ನೀನು ಶಿವ ಬೆಳಕು । ನನ್ನಯ್ಯ
ಸಂಗ ಬೆರಸಿದನು ನಿನ್ನೊಡನೆ ॥ ೭೨ ॥

ಇರುಳೆಲ್ಲ ಸಾತವ್ವ ಹೊರಳಾಡಿ ಪತಿ ನೆನೆದು
ಮರುಳು ನಾನಿನ್ನು ಗೋಳಿಡಲು । ಎಲೆ ಜೀವ
ತರುಳಾಗಿ ಮಾಡು ಕಾಯಕವ ॥ ೭೩ ॥

ಇತ್ತ ಕೇತನ ಕಳೆಯು ಬತ್ತಲೆಯ ಜಗಬಿಟ್ಟು
ನೆತ್ತಿ ದಿಕ್ಕಿನೊಳು ಮೇಲೇರಿ । ಸುಳಿಸುಳಿದು
ನಿತ್ಯ ಪರಮನೊಳು ಒಂದಾಗಿ ॥ ೭೪ ॥

ಕತ್ತಲೆಯು ತುಂಬಿದರು ಚಿತ್ಕಳೆಯು ಕೇತನದು
ಗುತ್ತ ಕಾಯಕದ ಕಿಡಿಕಾರಿ । ಸಿಡಿಸಿಡಿದು
ಸುತ್ತೇರ ಬಾನ ಚಿಕ್ಕಾಗಿ ॥ ೭೫ ॥

ಕೇತನಾ ಚಿತ್ಕಳೆಯು ಹೋತು ಶಿವ ಸನ್ನಿಧಿಗೆ
ಮಾತು ಗುಗ್ಗಾತು ಶಿವ ಗಣಕೆ । ಶಿವ ಲೋಕ
ಚೇತನೆಯು ತುಂಬಿ ಬೆಳಗಾತು ॥ ೭೬ ॥

ಬೆಳಕು ಮನೆಮನೆ ಹೊಕ್ಕು ಕಳಕಳಿಯು ಬರುವಂತೆ
ತಿಳಿಸುವದೊ ಸುದ್ದಿಯೆಂಬಂತೆ । ರವಿಕಿರಣ
ಹೊಳಪಿಳಿದು ಚೆದರಿ ಚೆಲ್ಲಿದವು ॥ ೭೭ ॥

ನಿತ್ಯದಲಿ ಊರೊಳಗೆ ಹೊತ್ತೊಯ್ದು ಹೂ ಪತ್ರಿ
ಹೊತ್ತು ಹೊರಡುದಕೆ ಹೂಗಾರ । ಮಾದಣ್ಣ
ಸತ್ಯ ಶರಣರಿಗೆ ಕೊಡುತಿರುವ ॥ ೭೮ ॥

ಮೇದಾರ ಕೇತಯ್ಯ ಹೋದಿರುಳು ನೀಗಿದುದು
ಚೋದ್ಯೆಂದು ಸುದ್ದಿ ಮಂಟಪಕೆ । ಹರವಿದನು
ಸೋದರರ ಸಾವು ಮೇಲೆಂದು ॥ ೭೯ ॥

ಕಲ್ಯಾಣ ಮಂಟಪವು ನಿಲ್ಲದಲೆ ಕೂಡೆದ್ದು
ತಲ್ಲಣಿಸಿಬಂತು ಆ ಮನಿಗೆ । ಕೇತನಿಗೆ
ಸಲ್ಲು ಸಮಾಧಿಯ ಮಾಡುದಕೆ ॥ ೮೦ ॥

ಎಲ್ಲ ಶರಣರು ಸೇವೆ ಸಲ್ಲಿಸಲು ಕೂಡಿರಲು
ಜಲ್ಲೆಂದು ಗಣಕೆ ಕೇಳಿದನು । ಬಸವಣ್ಣ
ಎಲ್ಲಿ ಮಾಚಯ್ಯ ಕರೆಕಳಿಸು ॥ ೮೧ ॥

ಉತ್ತಣ್ಣ ಪಡಿಹಾರಿ ಇತ್ತ ಬೇಗನೆ ಬಾರೊ
ಹೊತ್ತು ಗಳೆಯದಲೆ ಈ ಸುದ್ದಿ । ಮಾಚನಿಗೆ
ಹೊತ್ತೊಯ್ದು ತಿಳಿಸಿ ಬರಹೇಳು ॥ ೮೨ ॥

ನಂದಿಬಟ್ಟಲ ಹಿಡಿದು ಬಂದನಾ ಪಡಿಹಾರಿ
ಅಂದು ಉತ್ತಣ್ಣ ಕೈ ಮುಗಿದು । ಮಾಚನಿಗೆ
ಬಂದ ಕಾರಣವ ಹೇಳಿದನು ॥ ೮೩ ॥

ಶರಣಕೇತಯ್ಯಿಂದು ಹರಣ ನೀಗಿದ ದೇವ
ದೊರೆಬಸವ ನನ್ನ ಕಳಿಸಿದರು । ನಿಮ್ಮಡಿಗೆ
ಅರುಹಿ ಈ ಸುದ್ದಿ ಕರೆತರಲು ॥ ೮೪ ॥

ಹರಹರನೆ ಶರಣರಿಗೆ ಮರಣವೊದಗಿತೆ ಇಂದು
ಬರಲಾರೆ ಹೇಳು ಬಸವನಿಗೆ । ನಾನಲ್ಲಿ
ಹೊರತಾಗಿ ಮಾತ ನುಡಿಲಾರೆ ॥ ೮೫ ॥

ನಾನು ಬಸವನ ಮುಖವ ಏನು ನೋಡಲಿ ಕೇಳು
ಮಾನವಂತರಿಗೆ ತಮ್ಮೊಚನ । ಪ್ರಾಣೆಂಬ
ತಾನ ಬಿಟ್ಟಿಹನು ಬಸವೇಶ ॥ ೮೬ ॥

ತಾನೆ ಆಡಿದನಂದು ಮಾನಿ ಬಸವೇಶನಿಗೆ
ಪ್ರಾಣ ಶರಣಳಿವು ತನಗೆಂದು । ಮರೆತಿಂದು
ಗಾನಿ ತಾನೆಂದು ಕಳಿಸಿದನೆ ॥ ೮೭ ॥

ತನ್ನ ಮರೆತನು ಬಸವು ಇನ್ನೇನು ಜಗದೊಳಗೆ
ಎನ್ನ ಗೊಡವೇಕೆ ಬಸವನಿಗೆ । ಹೇಳವಗೆ
ತನ್ನಡತೆ ತನಗೆ ಮಿಗಿಲೆಂದು ॥ ೮೮ ॥

ಆಚಾರ ಹೊರಗಾಡಿ ಆರು ಬಿಡಿಕಿಯರೊಳಗೆ
ನಾಚದಲೆ ಇರುವ ಜನವುಂಟು । ಉತ್ತಣ್ಣ
ಬಾಚಿ ಹೊತ್ತಿರುವೆ ನಾನದಕೆ ॥ ೮೯ ॥

ಶಿವಮತವೆ ತಾಯ್ಮತವು ಭವದೊಳಗೆ ಮತಗಳಿಗೆ
ನೆವಹಿಡಿದು ಚುಚ್ಚಿ ಕಾಡಿದರು । ಶಿವಮತವು
ಹವಣಿಸಿತು ಎತ್ತಿ ಆಡಿಸಲು ॥ ೧೦೮ ॥

ಮಿಕ್ಕ ಕಸಬಿಗಳೆಲ್ಲ ಸಿಕ್ಕ ಮತವನ ಬಿಟ್ಟು
ಚೊಕ್ಕೆಂದು ಕೂಡಿ ಶಿವಮತಕೆ । ಕಾಯಕವು
ಉಕ್ಕಿ ಸಿರಿಯಾತು ಜನಪದಕೆ ॥ ೧೦೯ ॥

ಕೇತ ನಿನ ನೆನೆದಿರಕೆ ಯಾತರದು ಈ ಜೀವ
ಸೂತಕದ ಕೊಂಡ ಹುಳುಗೊಂಡ । ನೋಡರಿತು
ಚೇತನೆಯ ಹೊಂದು ನೆನೆನೆನೆದು ॥ ೧೧೦ ॥

ಮರಣ ಬಂದರು ಕೂಡ ಶರಣ ಕಾಯಕ ಮುಗಿಸಿ
ಹರುಷದಲಿ ಹರಣ ನೀಗಿದನು । ಕೇತಯ್ಯ
ಹರನಿತ್ತ ಪದವ ಕರುಣೆಯಲಿ ॥ ೧೧೧ ॥

ಹಂತಿಯದು ಹಾಡೆಂದು ಪಂತಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲೆ । ಕೇತಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೧೧೨ ॥

ಶರಣು ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸರಿ ಶರಣ ಕೇತಯ್ಯ । ನಮಗಿನ್ನು
ಹರಸರಿ ಹೋಸು ಹುಲು ಹಲಿಗೊ ॥ ೧೧೩ ॥

– ಕೃತಿ: ಕನ್ನಡ ಜಾನಪದ ಗೀತಗಳು

***

ಓಡುತೋಡುತ ಬಂದು ನೊಡಿ ಜನಜಂಗುಳಿಯು
ಗೋಳಿಡುವ ಕೇಳಿ ಎದೆ ತುಂಬಿ । ಮಾಚಯ್ಯ
ಹೇಳಿದನು ಜನಕೆ ಕೈ ಮುಗಿದು ॥ ೯೯ ॥

ಭಾಪುರೆ ಬಸವಣ್ಣ ಭಾಪು ಶಿವಮತ ಮಣಿಯೆ
ಭಾಪು ನಿನ್ನೆಸರು ಅಮರಾತು । ಜಗದೊಳಗೆ
ಭಾಪು ನಿನಗಾರು ಸರಿಯುಂಟು ॥ ೧೦೦ ॥

ಇದ್ದು ಬೀಳ್ವರು ಜನರು ಬಿದ್ದುಗೆದ್ದವನೊಬ್ಬ
ಗೆದ್ದಿ ಬಸವಯ್ಯ ನೀ ಬಿರುದ । ಶಿವಮತದ
ಸದ್ದು ಕೇಳುವದು ಜಗತುಂಬಿ ॥ ೧೦೧ ॥

ಹರನಿಗಾಯಿತೆ ಎದೆಯು ಶರಣರಸುವೊಯ್ಯುದಕೆ
ತಿರುಗದಿರೆ ಪ್ರಾಣ ಇಬ್ಬರಿಗು । ಈ ಚಣಕೆ
ಹರನ ಉಪ್ಪರಿಗೆ ಉರುಳಿಸುವೆ ॥ ೧೦೨ ॥

ಹೊಗಳುತಲಿ ಮಾಚಯ್ಯ ತೆಗೆದುಟ್ಟ ಕಂತೆಯನು
ನೆಗೆನೆಗೆದು ಘಂಟೆ ಬಾರಿಸಲು । ಮೂಜಗವು
ಮಗುವಾಗಿ ಕೇಳಿ ಹೌಹಾರಿ ॥ ೧೦೩ ॥

ಆಕಾಶ ಘಂಟೆಗಾ ಏಕಗುಣಿ ಕಾಯಕವ
ಸಾಕೆನ್ನದೆ ಮಾಚ ಬಾರಿಸಲು । ಗಡಚಿಕ್ಕಿ
ತಾಕಿ ದಿಕ್ಕುಗಳು ಶಿವನೆದ್ದು ॥ ೧೦೪ ॥

ನೂಕುವನು ಶಿವಲೋಕ ತೂಕ ಹಿಡಿಯಲು ಕಷ್ಟ
ಸಾಕು ಮಾಚಯ್ಯ ತಡೆನಿಲ್ಲು । ಅನ್ನುದಕೆ
ತೂಕಡಿಸಿ ಬಸವ ಕೇಳೆದ್ದು ॥ ೧೦೫ ॥

ಪುರಪುರವೆ ಭಜಿಸುತಲಿ ಹರಲೋಕ ಹರಸುತಲಿ
ಮೆರಸಿದನು ಮಾಚ ಕಾಯಕವ । ಕಳೆತುಂಬಿ
ನರಲೋಕವಾತು ಶಿವಲೋಕ ॥ ೧೦೬ ॥

ಶಿವನ ಬುಟ್ಟಿಯ ಮಾಡಿ ಭುವನ ಕಳಸಕೆ ಕಟ್ಟಿ
ಶಿವದೀಪ ಹಚ್ಚಿ ಕಲ್ಯಾಣ । ಪುರದೊಳಗೆ
ಶಿವಬೆಳಕ ಕಂಡ ಕೇತಯ್ಯ ॥ ೧೦೭ ॥

ಅರಮನೆಗೆ ಸಾಗಿ ಸೋಮಯ್ಯ ಬರುತಾನೇ
ದುಃಖಾವ ಮಾಡಿ ಮನಗಿದ್ದ ಗಂಡಾನ
ಲಾಲೀಸಿ ಆಗವಳು ಕೇಳುತಾಳೇss
"ಏನ ಹೇಳಲಿ ನಾನು ಮಾದೇವಿ
ಬಾಳಬಾರದು ನಾವು ಧರೆಯ ಮೇಲೇss
ಮಂದದ ಕಟ್ಟೇಲಿ ಬಂಜೇರು ಅಂತೇಳಿ
ಕತ್ತಿಡಿದು ನನ್ನ ನೂಕಿದರೂss
ಕುಂತಿದ್ದ ತಳವ ಶುದ್ಧೀಯ ಮಾಡುಕ್ಕೆ
ಮೂರು ಗುದ್ಲಿ ಮಣ್ಣ ಅವರು ತಗುದಾರುss

ಅಯ್ಯ ನೀರಿನ ದಾರಿಲ್ಲಿ ಸರಿಯ ನಾರಿರು ಸೇರಿ
ನನ್ನನ್ನು ಕೂಡಿ ಜರಿದಾರುss
ಬಾಳಬಾರದು ನಾಮು ಧರೆಯು ಮೇಲೆ
ಅಂಗಡಿ ಸಾಲಿಗೆ ನೀವು ಹೋಗಬೇಕುss
ಕಾಸೀನ ವಿಷವನು ತರಬೇಕು
ಬಾಳಬಾರದು ನಾಮು ಧರೆ ಮೇಲೆss
ಅಂಗಡಿಯ ಸಾಲಿಗೆ ಹೋದಾನು ಸೋಮಯ್ಯ
ಮೂರು ಕಾಸಿನ ವಿಷವ ತೆಗೆದಾನುss
ತಮ್ಮ ಅರಮನೆಗೆ ಸಾಗಿ ಬಂದಾನು
ಹೆಂಡತೀಯ ಕೈಲಾಗ ಕೊಟ್ಟಾನುss

ತಾಮ್ರಾದ ತಪ್ಪಲೆಯ ಒಲೆಮ್ಯಾಲೆ ಇಟ್ಟವಳೆ
ವಿಷವನ್ನೆ ತಾಯಿ ಆಗ ಕಾಯ್ಸುತಾಳೇss
ವಿಷವನ್ನೆ ಕುಡಿಬೇಕು ಅಂತೇಳಿ ಅವರೀಗ
ವಿಷದ ಕುಡಿಕೆಯನ್ನೆ ತಗಿದಾರುss
ಕೈಲಾಸ್ಕೆ ಕರವ ಮುಗಿದಾರು
ಪಾರ್ವತಿ ಪಾದಕ್ಕೆ ಶರಣೆಂದುss
ಕೈಲಾಸದಲ್ಲಿ ಪಾರ್ವತಿ ಶಿವರು
ಪಗಡೇಯ ತಾಮು ಆಡುತವರೇss
ತಟ್ಟನೆ ಪಗಡೇಯ ನಿಲ್ಸಿದ ಪಾರ್ವತಿ
ಪಕುಪಕುನೆ ತಾಯಿ ನೆಗುತಾಳೇss

ನಂದಿ ವಾನ ನೋಡಿ ನನ್ನ ನಾಗಭೂಷಣ ನೋಡಿ
ನೆಗಬಹುದೇ ಹೆಣ್ಣೇ ಪಾರ್ವತಿss
ನನ್ನ ಹರಕು ಜೋಳ್ಗೆ ನೋಡಿ ನನ್ನ ಮುರುಕು ಬೆತ್ತ ನೋಡಿ

೧೭. ಮೈದುನ ರಾಮಯ್ಯ

ಮೈದಾಳ ರಾಮ

ಸುವ್ವಾ ಬಾ ಚೆನ್ನಾಽಽ ಬಸವಣ್ಣಾಽಽ ॥ ಪ ॥

೧

ಭೀಮಾವತಿ ಎಂಬುವ ಪಟ್ಟಣದ ಒಳಗೆ
ಬ್ರಾಮಾರ ಕುಲದ ಸೋಮಯ್ಯಾಽಽ
ಬ್ರಾಮಾರ ಕುಲದ ಸೋಮಯ್ಯ ಆದಾರೆ
ಪ್ರೇಮಾದ ಸತಿಯು ಮಾದೇವಮ್ಮಾಽಽ
ಎಂಟು ಸುತ್ತಿನ ಕ್ವಾಟೆ ಗಂಟೇಯ ಒಳುಪಾದ
ಬಾಗು ಬಾಗಲಿಗೆ ಬಲು ಪಾರಾಽಽ
ಏಳು ಸುತ್ತೀನ ಕಂಚಿನ ಕ್ವಾಟಿ ಇಟುಗಂಡು
ಅವರು । ಬಾಳಾ ಭಕ್ತಿಯಲಿ ಇರುವಾರುಽಽ
ಅಂದದ ಊರಿನ ಚಂದದ ಜನರಿದ್ದ
ಮಂದದ ಕಟ್ಟೆಗೆ ದೇವ ಬರುತಾನೇಽಽ

ಕೂಡೀದ ಕುಲದಲ್ಲಿ ಸೇರಿದ ಸಭೆಯಲ್ಲಿ
ಮತ್ತೇನು ಗೌಡರು ನುಡಿದಾರುಽಽ
ಮಂದದ ಕಟ್ಟೇಲಿ ಬಂಜೇರ್ಗೆ ತಳವಿಲ್ಲ
ಅಂತವರ ಕತ್ತಿಡಿದು ನೀವು ತಳ್ಳಿರಯ್ಯಾಽಽ
ಶಿರವನ್ನೆ ಬಾಗವನೆ ತಲೆಯನ್ನೆ ದೂಗವನೇ
ಮತ್ತೆನು ಯೋಚಣೇಯ ಮಾಡಿದಾನುಽಽ
ಸುಳಿಯಿಲ್ದ ನನ್ನಂತವರು ಇರಬಾರದು ಅಂತೇಳಿ
ಮಂದದ ಕಟ್ಟೇಯ ಶಿವನೇ ಬಿಡುತಾನೇಽಽ
ಮಂದದ ಕಟ್ಟೇಲಿ ಶುದ್ದೀಯ ಮಾಡುಕೆ
ಮೂರು ಗುದ್ಲಿ ಮಣ್ಣ ಅವರು ತೆಗಿದಾರುಽಽ

ನಂದಿಯಾಗಿ ಒಂದೊರ್ಷ ಬಾಳುದ್ಲೇಸುss
ಬುದ್ಧಿಯಿಲ್ಲದ ಮಗನು ಇದ್ದರೇನು ಸತ್ತರೇನು
ಬುದ್ಧಿ ಇರುವಂತ ಮಗ ಬೇಕು"ss
ಮುತ್ತಿನ ಜೋಳಿಗೆಯಿಂದ ತೆಗೆದಾರೋ
ಅಲ್ಲಿ ಪಿಣ್ಣು ಪ್ರಸಾದವನ್ನೆ ಕೊಟ್ಟಾರೋss

ಮಾಯಾದ ಮನಿಯಾಗಿ ದೇವ ಹೊರಟಾರೋ.
ಅಲ್ಲಿ । ಪಿಣ್ಣು ಪ್ರಸಾದವನೆ ನುಂಗಿಕಂಡು ಅವರೀಗ
ಬಾಳ ಐಸುರದಲ್ಲಿ ಬದುಕುತ್ತಾರೇ.ss

೨

ಒಂದು ಮಾಸವೇ ತುಂಬಿ ಏಡು ಮಾಸವೇ ನಡದು
ಮೂರಾನೇ ಮಾಸ ಬಂದೀತು.
ಅಯ್ಯ । ನಾಲ್ಕು ಮಾಸ ತುಂಬಿ ಐದು ಮಾಸ ನಡದು
ಆರಾನೇ ಮಾಸಾ ಬಂದೀತು.
ಆರಾನೇ ಮಾಸಕ್ಕೆ ಏನೇನು ಬಯಸೀದ
ಆರೀದ ಅನ್ನ ಕನೆ ಮೊಸರು.

ಆರೀದ ಅನ್ನ ಕನೆ ಮೊಸರು ಉಂಡಂತೆ
ಏಳಾನೆ ಮಾಸಾಕ್ಕೆ ಏನೇನು ಬಯಸೀದ
ಏರೀಯ ಕೆಳಗೆ ಎರೆಮಣ್ಣು.
ಎಂಟಾನೇ ಮಾಸವೇ ನಡದೀತು
ಒಂಬತನೇ ಮಾಸಾವೇ ತುಂಬೀತು
ಬಂದು ಬಳಗವೆಲ್ಲ ಹಗೆಯೋರು
ಒಬ್ಬ ಸೂಲಗಿತ್ತಿಯ ದೇವ ಕರಸೀದಾ
ಅಯ್ಯಾ ಒಂಬತ್ತನೇ ತಿಂಗಳಿನಲ್ಲಿ
ಗಂಡು ಮಗನೇ ಅಲ್ಲಿ ಜರಣವಾದಾ.

ಮಕ್ಕಳಿಲ್ಲದ ಮನೆಗೆ ಮಕ್ಕಳಾದವು ಎಂದು
ಮಕ್ಕಳಾದವು ಎಂದು
ಭಾಳ ಹೆಚ್ಚಳವನ್ನೇ ಪಡುತಾನೆ । ದೇವಾ.
ತಮ್ಮ ಕುಲಗುರುಗಳ ದೇವ ಬರಿಸೀದಾ
"ಅಯ್ಯಾ ಮಗು ಹುಟ್ಟಿ ಏಳ್ನೇ ವರ್ಷಕ್ಕೆ
ಅಪ್ಪನಿಗೆ ಸರ್ಪ ದೃಷ್ಟವು" ಎಂದು ಬರುದಾನು.
"ಅಯ್ಯಾ ನಡುವಯಸ್ಸಿಗೆ ಮಗ ಹುಟ್ಟಿದ್ದರಿಂದ

ನೀ ನೆಗಬಹುದೆ ಹೆಣ್ಣೇ ಜಗದಾಂಬೇಽಽ
ನನ್ನ ಬಿಳಿಯ ಗಡ್ಡ ನೋಡಿ ನನ್ನ ಬಿಳಿಯ ಮೀಸೆ ನೋಡಿ
ನನ್ನ ಮುದಿಯ ಜಂಗುಮ ಎಂದು ನೆಗಬಹುದೇ?
ನಾ ನೆಗ ಬಂದ ಬಗೆಯ ಹೇಳುವೆನು
ನೀ ಒಂದು ಸಮನಾಗಿ ದೇವ ನೋಡಯ್ಯಾಽಽ
ನಿನ್ನ ನಂದಿ ವಾನ ನೋಡಿ ನಿನ್ನ ನಾಗಭೂಷಣ ನೋಡಿ
ನೆಗನಿಲ್ಲ ಸ್ವಾಮಿ ಪರಶೀವಾಽಽ

ಹೆಡ್ತೀಯ ಮ್ಯಾಲೆ ಕ್ವಾಪವ ಮಾಡಿಕಂಡು
ಆಗ ಕೈಲಾಸವನ್ನೆ ದೇವ ಬಿಡುತಾನೇಽಽ
ಜಂಗುಮನ ರೂಪ ತಾಳೀಕಂಡು ಅವರೀಗ
ಮುತ್ತಿನ ಕ್ವಾರಣ್ಯವ ಕೂಗುತಾರೇಽಽ
ಕ್ವಾರಣ್ಯ ಕೂಗೀದ ಶಬ್ದಾಕೆ
ಕೋಟೇಯ ಕದವೇ ತೆರದಾವುಽಽ
ಕದವನ್ನೆ ತಗುದಾಳು ಕೈಯೆತ್ತಿ ಮುಗುದಾಳು
ಅಲ್ಲಿ । ಶಿವನ ರೂಪನ್ನೆ ತಾಯಿ ನೋಡುತಾಳೆಽಽ
ಶಿವನ ರೂಪನ್ನೆ ನೋಡಿಕಂಡು ಮಾದೇವಮ್ಮ
ಮುಂದಾಲ ಮನೆಗೇ ದಯಮಾಡೀಽಽ

"ನಿನ್ನ ಒಲೆಮೇಲೆ ಇರುವ ಪಾಕಾವಾ
ತಾಯಮ್ಮ ನನಗೆ ಸ್ವಲ್ಪಾವ ನೀಡಮ್ಮಾಽಽ".
"ನಾನು ವಿಷದ ಅಡಿಗೇಯ ದೇವ ಮಾಡಿವ್ನೀ
ನೀನು ಮುಂದಾಲ ಮನೆಗೆ ತೆರುಳಯ್ಯಾಽಽ.
"ಮುಂದಾಲ ಮನೆಗೆ ಹೋಗುಕೆ ಬರನಿಲ್ಲ"
ಅವನು ಮುತ್ತೀನ ಕ್ವಾರಣ್ಯವ ಕೂಗಿದನು.
ವಿಷವನು ಅಟ್ಟಿದ್ದ ಕುಡಿಕೇಯ ತೆಗೆದು
ಶಿವನ ಪಾತ್ರೇಗೆ ತಾಯಿ ನೀಡಿದಾಳುಽಽ.
"ಅಮ್ಮ ಒಳ್ಳೆ ಮಗನು ಬೇಕೋ ಕೆಟ್ಟ ಮಗನು ಬೇಕೋ
ನಿನಗೆ ಯಾವಾ ಮಗಾನು ಬೇಕಮ್ಮಾ.ಽಽ

ಅಮ್ಮ ಒಳ್ಳೇಯ ಮಗನನ್ನು ಕೇಳಿದರೆ
ಬಾಳ ಬಡಸ್ತಾನವೇ ಬರುತಾದೇ
ಅಮ್ಮ ತಂದೇಗೆ ಮಿತ್ತು ಬರುತಾದೇ
ಅಮ್ಮ ಯಾವ ಮಗಾನು ನಿನಗೆ ಬೇಕಮ್ಮಾ.ಽಽ
"ಹಂದಿಯಾಗಿ ಹತ್ತೊರ್ಷ ಬಾಳುದ್ಕಿಂತ

ನೆತ್ತೀಯ ಮ್ಯಾಲೆ ಅಲ್ಲಿ ಶಕುನಾವು.
ಅವನು ಗುರುಮಟದ ಬಾಗ್ಲ ಕಡದಾನು

ಅಲ್ಲಿ ಬೆಕ್ಕು ಅಡ್ಡಲಾಗಿ ಶಿವನೆ ಬರುತಾದೇ.
ಅಯ್ಯಾ ಆಕಳಿಕೆ ತೂಕಡಿಕೆ ಉಂಟಾದೋ
ನಿದ್ರೆಗಾದರೆ ಶಿವನೆ ಮಲಗುತಾರೇ.
ಅಲ್ಲಿ ಮಾಯಾದ ನಿದ್ರೆ ಬಂದೀತು
ಮೃತ್ಯು ದೇವತೆ ಆಗ ಬಂದೀತು.
ಕರಿಯ ಕಾಳಿಂಗನಾಗಿ ಬರುತಾದೇ
ಸೋಮಯ್ಯನ ಕಾಲಿಗೆ ಒಡದಾನು.
ಅಯ್ಯ । ಆಗಲೀಗ ವಸ್ತು ಹೋಯಿತು
ಎಲ್ಲ ಹುಡುಗರು ಅಲ್ಲಿ ನಿಂತವರೇ.
ಬಂದಾನು ರಾಮಯ್ಯ ನಿಂತಾನು ಬಳಿಯಲ್ಲಿ

ತಂದೇಯ ಅವನು ಕೂಗುತಾನೇ.
ಅಲ್ಲಿ ದುಃಖಾವ ದೇವಾ ಮಾಡುತಾನೇ
ಅಲ್ಲಿ ಬಾಳ ಶೋಕವ ದೇವಾ ಮಾಡುತಾನೇ.
ಬಾಯನ್ನೇ ಬಡಿಕಂಡು ಕೈಯನ್ನೇ ಕಡಿಕಂಡು
ಸಾಗಿ ಬರುತಾಳೇ ತಾಯಿ ಮಾದೇವಿ.
ಕೈಯಿಡಿದ ಸ್ವಾಮಿಯ ವಸ್ತುವೆ ಹೋಯಿತು.
ಏಳನೇ ವರ್ಷಕೆ ತಬ್ಬಲಿ ಆದೇ.
ಅಲ್ಲಿ ದುಃಖಾವ ದೇವಾ ಮಾಡುತಾಳೇ
ಅಲ್ಲಿ ಬಾಳ ಶೋಕವ ದೇವಾ ಮಾಡುತಾಳೇ.
ಕುಲದವರು ಬಂದರು ಸೋಮಯ್ನ ಕಂಡರು

ಅವರು ಚೆನ್ನಾಗಿ ಒಪ್ಪವಾ ಮಾಡವರೇ.
ಅಲ್ಲಿ ಕುಲದವರು ನ್ಯಾಯ ಮಾಡವರೇ
ಅಯ್ಯ ಗಂಡುಮಗನು ನಾನು ಇರುವೇನು.
ತಾಯಿಗೆ ಮಂಡೆ ಬೋಳು ಮಾಡಬೇಡಿ
ಅವರು ಚೆನ್ನಾಗಿ ದಿವಸ ಮಾಡವರೇ.
ಅಯ್ಯ । ಚೆನ್ನಾಗಿ ಮಟದಲ್ಲಿ ಕಲಿಯಾಲಿ ಎಂದು
ಮಗನನ್ನು ಮಟಕೇ ಕಳಗುತಾಳೇ.
ಅಯ್ಯ । ಕ್ವಾರಣ್ಯದ ಜಂಗುಮ ಹೇಳಿದ ಹಂಗೇ
ಭಾಳ ಬಡಸ್ತಾನವೇ ಬಂದೀತು.
ಲಕ್ಕಿ ಸೊಪ್ಪಿನ ಗುಳ್ಳು ಎಕ್ಕದೆಲೆಕದ
ಒಕ್ಕಲಾದವರ ಮನೆಯ ಶಿವ ತಿರುಪೇ.

ಮೈಲಿಗೆ ರಾಮನೆಂದು ಕರೆಯಯ್ಯಾ".
ಅವನು ಹಂಗಂತ ಜಾತಾಕ ಬರುದಾನು
ಅವರು ದೇಶದೇಶಕ್ಕೆ ವಾಲೆ ಬರುದಾರು.

ಅಯ್ಯ । ಕೊಟ್ಟಣವ ಕುಟ್ಟವರೆ ಪಟ್ಟಣವ ತಾರ್ಸವರೇ
ಪಟ್ಣಾ ಸುಂಗರವ ಮಾಡಿಸವರೇ.
ಮುತ್ತೈದೆಯರು ಬಂದು ಮುತ್ತೀನ ತೊಟ್ಟಿಲ ಕಟ್ಟಿ
ಕಂದ ರಾಮಯ್ಯನ ತೂಗುತಾರೇ.
ರಂಬೇಯರೀಗ ಬಂದು ಇಂಬೀಯ ವನದಲ್ಲಿ
ಕಂದ ರಾಮಯ್ಯನ ತೂಗುತಾರೇ.
ಜೋ ಜೋ ಕಂದ ಜೋ ಮುದ್ದು ಕಂದ
ಜೋ ಜೋ ರಾಜ ಕಂದ ಜೋ ಮುದ್ದು ಕಂದ
ಜೋ ಜೋ ರಾಜ ಪರುಮೇಳ ರಾಮಗೋವಿಂದ.
ಅವರು । ದಾನ ದಕ್ಷಣೆಯನ್ನೇ ಕೊಡುತಾರೇ

ಅವರು ದಾನ ಧರ್ಮಾವನ್ನು ಮಾಡುತಾರೇ.
ಅಯ್ಯ । ಒಂದು ತಿಂಗಳು ತುಂಬಿ ಎರಡು ತಿಂಗಳು ನಡೆದು
ಮೂರಾನೇ ತಿಂಗಳು ನಡದೀತು.
ಒಂದು ವರ್ಷವೆ ತುಂಬಿ ಎರಡು ವರ್ಷವೆ ನಡೆದು
ಮೂರಾನೇ ವರ್ಷಾ ನಡದೀತು.
ದಿನಕೆ ಬಾ ಅಂದರೆ ಜಮಕೆ ಬಂದಾನು
ಅಯ್ಯ । ಐದಾನೇ ವರ್ಷ ನಡೇದೀತು.
ಓದುವ ಮಟಕೆ ದೇವ ಬರುತಾನೇ
ಅವನ ಶಿರಬಗ್ಗಿ ಶರಣ ಮಾಡುತಾನೇ
ಅಯ್ಯ । ಕರವೆತ್ತಿ ಕೈಯ ಮುಗಿತಾನೇ
ಗುರುಗೋಳು ಕೈಲಿ ಕೊಡುತಾನೇ.
ಓದು ಮಟವನ್ನೇ ದೇವ ಬಿಡುತಾನೇ

ಒಂದಕ್ಷರ ಹೇಳಿದರೆ ಎರಡಕ್ಷರ ಅವನು ಕಲಿತಾನು.
ಅಯ್ಯ ಏಳಾನೆ ವರ್ಷ ಅಲ್ಲಿ ನಡದೀತು
ಮೃತ್ಯು ದೇವತೆಯ ಕಳಗುತಾರೆ.
ಓದುವ ಮಠದಲ್ಲಿ ರಾಮಯ್ಯ ಚಂಡೀಯ ಮಾಡುತಾನೇ
ಓದುವ ಮಠಕಾಗಿ ದೇವ ಬರುತಾರೇ
ಚಂಡೀಯ ಮಾಡುತಿದ್ದ ಮಗನನ್ನು ಕರಿಕಂಡು
ಅಯ್ಯ । ಮನೆಗೀಗ ಅವನು ಹೊರಟಾನು.
ಒಂದು ಹೆಜ್ಜೆಯ ಎತ್ದ ಒಂದು ಹೆಜ್ಜೆಯ ಇಟ್ಟ

ಯಾವಾಲಣ್ಣಯ್ಯ ನಿನ್ನ ಒಡೆದಾರು."
"ಏನ ಅಂದರೆ ತಾಯಿ ಏನ ಹೇಳಲಮ್ಮಯ್ಯ
ಓದು ಮಟದಲ್ಲಿ ಆದ ಕಲಮೇಯ
ಅಕ್ಕಾನಿಲ್ಲವೆಂದು ಆಡವರೆ ಮಟದಲ್ಲಿ
ಮತ್ತೊಬ್ಬ ಬಾಲ ನನ್ನ ಜರಿದಾನು.
ಭಾವನಿಲ್ಲವೆಂದು ಆಡವರೆ ಮಟದಲ್ಲಿ

ಇನ್ನೊಬ್ಬ ಬಾಲ ನನ್ನ ಜರಿದಾನು.
ಅಮ್ಮ ಹೆತ್ತವ್ವ ಹೇಳೋ ನಿಜವಾಗಿ.
ಅಮ್ಮ ಹೆತ್ತವ್ವ ಹೇಲೋ ಸತ್ಯವಾಗಿ.
ಅಕ್ಕಯ್ಯ ಇರುವಾಳ ಭಾವಾಜಿ ಇರುವಾರ
ಮಿಕ್ಕ ಬಾಂಧವರು ಇರುವಾರಾ?"
ಕಂದನಾಡಿದ ಮಾತ ಕೇಳಿದಳು ಮಾದೇವಿ
ಕಂಣಿನಲಿ ಜಲವ ಸುರಿದಾಳು.
ಕೈಲಾಸಕೆ ಕರವ ಅವಳೀಗ ಮುಗಿದಾಳು
ಸ್ವಾಮಿ ಮಾದೇವ್ನ ನೆನೆದಾಳು
"ನೀನುವೆ ತಂದಂತ ಪೂರ್ವರದ ಫಲದಿಂದ

ನೀ ಹುಟ್ಟಿದವನೆ ಒಬ್ಬ ಮಗನಲ್ಲೋ
ನಿನ್ನ ಯಾರ ತೌರಿಗೆ ನಾನು ಕಳುಗಾಲಿ
ನೀ ಹುಟ್ಟಿದವನೆ ಒಬ್ಬ ಮಗನಲ್ಲೋ
ಅಕ್ಕಾನು ನಿನಗಿಲ್ಲಾ ಭಾವಾನು ನಿನಗಿಲ್ಲಾ
ಮಿಕ್ಕಾ ಬಾಂಧವರು ಮೊದಲಿಲ್ಲಾ
ಮಗನೆ ದುಃಖಾವ ಮಾಡುಬ್ಯಾಡ ಮೈದಾಳು
ಶಿವ। ಮತ್ತೊಂದು ವರವ ಕೊಡನಿಲ್ಲಾ
ಗಂಡು ಮಗ ನೀನೆಂದು ಗಂಡ ಸತ್ತ ಚಿಂತೇಯ
ನಿನ್ನ ನೋಡಿ ನಾನು ಮರೆತೇನು
ನೀನು ದುಃಖಾವ ಮಾಡುಬ್ಯಾಡ ಮೈಲಾಳು

ಶಿವ । ಮತ್ತೊಂದು ವರವ ಕೊಡನಿಲ್ಲಾ"
" ನಿನ್ನ ಹೊಟ್ಟೆಯಲ್ಲಿ ಇಲ್ಲಾದೆ ಇದ್ದಾರೇ
ನಿನ್ನ ಅಕ್ಕ ತಂಗೇರಿಗೆ ಇದ್ದಾರಾ.
ಅಕ್ಕಯ್ಯನ ಕರಕಂಡು ಭಾವಾಜಿ ಬರೇಳಿ
ಭವದಲ್ಲಿ ಹಬ್ಬಾವ ಮಾಡುವೇನು."
"ಕಂದ ನಾನುವೆ ತಂದಂತ ಪೂರ್ವರದ ಫಲದಿಂದ
ಹುಟ್ಟಿದವನೆ ಒಬ್ಬ ಮಗನಯ್ಯಾ

ಒಪ್ಪುದಲಿ ಮಗನ ಸಾಕುತಾಳೇ
ಮಗನೀಗೆ ಹನ್ನೊಂದ್ವರ್ಷ ತುಂಬುತಾದೇ.
ಹತ್ತೆಂಟು ಹುಡುಗರು ಅರ್ಥದಲಿ ಓದುವಾಗ
ಅಮವಾಸೆ ಬಂದೀತು ಸಮದಿನವೆ ತುಂಬೀತು.
ಅಯ್ಯಾ । ಸಮದಿನವೆ ತುಂಬಿದಾಗ
ಹೆಚ್ಚಾಳದಬ್ಬವೇ ಬಂದೀತು.
ಅಯ್ಯಾ । ಹುಡುಗರೆಲ್ಲ ಗುರುಗಳ ಮುಂದೆ ನಿಂತವರೇ
ಕರವೆತ್ತಿ ಕೈಯ ಮುಗಿದವರೇ.
ಅಕ್ಕಾ ಭಾವರನು ಕರೆಯಬೇಕೆಂದು

ಎಂಟು ದಿನದ ರಜವ ಕೇಳಿದರೂ.
ಅವನು ಗುರುಗಳ ಮುಂದೆ ಬರುತಾನೇ
ಅವರು ಗುಲುಗುಲನೆ ಎಲ್ಲ ನಗುತಾರೇ.
"ಹೊನ್ನು ಇರುವವರು ನಾವು ಚಿನ್ನ ಇರುವವರು ನಾವು
ಭಾಳ ಐಸುರ್ಯವಂತ ಮಕ್ಕಳಯ್ಯಾ.
ಅಕ್ಕಾ ಭಾವರ ಕರಿಕೆ ಹೋಯ್ತೀವಿ
ನಿನಗೆ ಹಬ್ಬಕೆ ರಜವ ಬೇಡಾವು."
"ಅಕ್ಕಾನ ಕರಿತೀನಿ ಭಾವನ ಕರಿತೀನಿ
ಪಾದ ಪೂಜೆಯ ನಾನು ಮಾಡುತೀನಿ.
"ಅಕ್ಕಾನೆ ನಿನಗಿಲ್ಲ ಭಾವನೆ ನಿನಗಿಲ್ಲಾ /

ಮಿಕ್ಕ ಬಾಂಧವರು ನಿನಗಿಲ್ಲಾ.
ನೀ ಹುಟ್ಟಿದವನೆ ಒಬ್ಬ ಮಗನಲ್ಲೋ
ನಿನಗೆ ಅಕ್ಕಾ ಭಾವಾರು ಇಲ್ಲಾವು.
ನಿನ್ ಅಕ್ಕಯ್ಯನ ಹೆಸರೇಳು ಭಾವಾಜಿ ಹೆಸರೇಳು
ಅಯ್ಯ । ಕೊಟ್ಟಿರುವ ಪುರದ ಹೆಸರೇಳು".
ಹುಡುಗರಾಡಿದ ಮಾತ ಕೇಳಿದನು ರಾಮಯ್ಯ
ಕಣ್ಣಿನಲಿ ಜಲವಾ ಸುರಿದಾನು.
ನಾನು ತಾಯಿಯ ಕೇಳಿಕಂಡು ಬರ್ತಿನೀ ಅಂತೇಳಿ
ಓದುವ ಮಟವನ್ನೆ ದೇವ ಬಿಡುತಾನೇ.
ಓದಿ ಬರುವ ಮಗನ ಬೀದಿಲ್ಲಿ ಕಂಡವಳೇ

ಮಾದೇವಿ ಮರುಗಿ ಅಳುತಾಳೆ.
"ಎಂದೆಂದು ನೋಡಿದರು ಚಂದ್ರಾನ ಕಳೆಯಲ್ಲ
ಇಂದ್ಯಾಕೋ ಮಗನೇ ನೆಗನಿಲ್ಲಾ.
ತಂದೆಯಿಲ್ಲದ ತಬ್ಬಲಿ ನಿನ್ನ ಕೊಂದವರು ಯಾರಪ್ಪ

ಕೊಟ್ಟಿರುವ ಪುರದ ಹೆಸರೇಳು.
ಬಾಯನ್ನೇ ಬಡಿಕಂಡು ಕೈಯನ್ನೇ ಕಡಿಕಂಡು
ಹೆಣ್ಣುಮಗಳು ಸಾಗಿ ಇಲ್ಲಿ ಬರಬೇಕು
ಹೆಣ್ಣುಮಗಳು ಸಾಗಿ ಬಂದಾರೆ ಇಲ್ಲಿ
ಅಮ್ಮ । ನೀನು ಸತ್ತಾಗ ನಿನ್ನಗೆ ಸ್ವರ್ಗಾವು
ಸೀತಾಳೆ ಚಪ್ಪರದ ಅಡಿಯಲ್ಲಿ ತಾಯಮ್ಮ
ಲಗ್ನಾವು ನನಗೆ ಆಗುವಾಗ ತಾಯಮ್ಮಾ
ಲಗ್ನಾವು ಆಗುವಾಗ ಹೆಣ್ಣುಮಗಳು ಬರಬೇಕು
ನಾನು ಸತ್ತಾಗ ನನಗೆ ಸ್ವರ್ಗಾವು
ಅಮ್ಮ ಹೆತ್ತವ್ವ ಹೇಳೊ ನಿಜವಾಗಿ

ಕೊಟ್ಟಿರುವಂತ ಪುರದ ಹೆಸರೇಳು".
ಅವಳು ಕೈಲಾಸಕೆ ಕರವಾ ಮುಗಿದಾಳು
ಶಿವನೊಂದು ಹೆಸರ ನೆನೆದಾಳು
"ಅಕ್ಕಾನೆ ಗೌರಮ್ಮ ಭಾವನೆ ಮಲ್ಲಯ್ಯ
ಮಿಕ್ಕ ಬಾಂಧವರು ಬಸವಣ್ಣ".
"ಗೌರಮ್ಮ ಅಕ್ಕನಾದರೆ ಮಲ್ಲಯ್ಯ ಭಾವನಾದರೆ
ಅಮ್ಮ । ಕೊಟ್ಟಿರುವ ಪುರದ ಹೆಸರೇಳು".
ಅಲ್ಲಿಗಿಲ್ಲಗೆ ವಾಸ ಕಲ್ಲಣದ ಬಸವೇಶ
ಭಾವಾಜಿ ಇರುವಾದು ಕೈಲಾಸ
ಹ್ಯಾಗೆ ಹೋಗುವೆ ನೀನು ಮೈಲಾಳು

ಅಪ್ಪ । ಒಬ್ಬಾನೆ ಮಗನಲ್ಲೋ ಮೈಲಾಳು".
"ಗೌರಮ್ಮ ಅಕ್ಕನಾದರೆ ಮಲ್ಲಯ್ಯ ಭಾವನಾದರೆ
ಅಷ್ಟು ದೂರಕೆ ನೀವು ಕೊಡಬಹುದಾ".
"ನಿಮ್ಮಕ್ಕನ ಚಂದ ನೋಡಿ ಭಾವ ಮಲ್ಲಯ್ಯಾ
ಭೀಮಾವತಿಗೆ ಅವರು ಬಂದಾರು
ಅಯ್ಯಾ ನಿನ್ ತಂದೆ ಸೋಮಯ್ಯನವರು
ಹೊರುಬಾರದ ಹೊನ್ನ ಹೊರಿಸೀದ
ಅಯ್ಯಾ ನಿನ್ನ ಭಾವ ಮಲ್ಲಯ್ಯನವರ
ಎತ್ತಬಾರದ ವರವಾ ಕೇಳಿದಾರು
ಆನೆ ಮೇಗಳ ಹೊನ್ನ ಏರಿಕಂಡು ಮಲ್ಲಯ್ಯ

ಭೀಮಾವತಿಗೆ ಬಂದಿದ್ದರಯ್ಯಾ
ಕೊಂಗದಲ್ಲಿ ತೂರ್ಕಂಡು ಕೊಳಗದಲ್ಲಿ ಅಳತೆ ಮಾಡಿ
ನಿಮ್ಮಕ್ಕಾನುದ್ದಾ ಹೊನ್ನ ಸುರಿದಾರು

ನಿನ್ನ ಯಾರ ತೌರಿಗೆ ನಾನು ಕಳುಗಾಲೀ
ಶಿವ । ಮತ್ತೊಂದು ವರವ ಕೊಡನಿಲ್ಲಾ "
" ಅಮ್ಮ ನನ್ನ ಬಾಳಿನಂಗೇ ನಿನ್ನ ಬಾಳು

ಶಿವ । ಮತ್ತೊಂದು ವರವ ಕೊಡನಿಲ್ಲಾ"
ಒಡಹುಟ್ಟಿಲ್ಲದ ಮ್ಯಾಲೆ ಮಡಗಲಾರಿ ನಾ ಪ್ರಾಣಾ
ಬಿಡತೀನಿ ತಾಯಿ ನನ್ನ ಪ್ರಾಣಾವಾ".
ಅಯ್ಯ । ಕತ್ತೀಯ ತಗದವನೇ ಕೈಯಲ್ಲಿ ಹಿಡಿಕಂಡ
"ಅಮ್ಮ ಬಿಡುತೀನಿ ನನ್ನ ಪ್ರಾಣಾವಾ".
ಕತ್ತೀಯ ಕಂಡವಳೆ ಸತ್ಯಾದ ಮಾದೇವಿ
ಮಗನ ಮುಂಗೈಯ ತಾಯಿ ಹಿಡಿದಾಳು.
ಒಬ್ಬ ಮಗ ಮಗನಲ್ಲ ಒಂದು ಕಣ್ಣು ಕಣ್ಣಲ್ಲ
ಕೈಲಾಸಕೆ ಕರವಾ ಮುಗಿದಾಳು.
"ಮಗನೆ ಅಕ್ಕಾನು ಇರುವಾಳು ಭಾವಾಜಿ ಇರುವಾರು

ಮಿಕ್ಕ ಬಾಂಧವರು ಇರುವಾರು ಕಂದಯ್ಯಾ
ಕತ್ತಿ ಬುಟ್ಟೇಳು ಮೈಲಾಳು".
ಅಕ್ಕ ಭಾವಾನ ಸ್ವರಣೆ ಕೇಳಿದ ರಾಮಯ್ಯ
ತಟ್ಟಿಗಂಡು ಎದ್ದ ಎದೆ ಭುಜವಾ
"ಅಕ್ಕಯ್ಯನ ಹೆಸರೇಳು ಭಾವಾಜಿ ಹೆಸರೇಳು
ಕೊಟ್ಟಿರುವ ಪುರದ ಹೆಸರೇಳು.
ಅಮ್ಮ । ಹೆಚ್ಚಾಳದಬ್ಬಾವ ಮಾಡುವೇನು
ಇರುವಂತ ಪುರದ ಹೆಸರೇಳು.
"ನೀ ಅಕ್ಕ ಅಕ್ಕಾ ಎಂದು ಅಕ್ಕನೀಗೆ ಬೆರಿಯುವೆ

ನಿಮ್ಮಕ್ಕಯ್ಯ ಕೊಡುವಾ ಬಹುಮಾನಾ
ಭಾವ ಭಾವ ಎಂದು ಭಾವನಿಗೆ ಬೆರಿಯುವೆ
ನಿನ್ನ ಭಾವಾಜೀ ಕೊಡುವ ಉಪಯೋಗ".
"ಅಮ್ಮ । ಹೆಣ್ಣು ಇಲ್ಲದವರಿಗೆ ಪುಣ್ಯವೇ ಮೊದಲಿಲ್ಲ
ಕಣ್ಣು ಇಲ್ಲಾದ ತೆರನಾಗಿ
ಅಣ್ಣಯ್ಯನ ಕುಲವ ಬಣ್ಣೀಸಿ ಪಾಡುದಕೆ
ಪುಣ್ಯ ಸಂತಾನಕೆ ಮಗ ಬೇಕು
ಹೆಣ್ಣಿನಿಂದಲೇ ಸ್ವರ್ಗ ಹೆಣ್ಣಿನಿಂದಲೇ ಬಳಗ
ಹೆಣ್ಣಿನಿಂದಾಲೇ ಸರ್ವವೂ
ನೀ ಹೆತ್ತಮ್ಮ ಹೇಳೋ ನಿಜವಾಗೀ

ಅವನು ಭಿಕ್ಷಕಾದರು ಹೊರಟಾನು.
ಅಮ್ಮಗಳಿರಾ ಅಕ್ಕಗಳಿರಾ
ಅಕ್ಕಿದಾನ ಕೊಡಿರಮ್ಮಾ
ಬೇಳೆ ದಾನ ಕೊಡಿರಮ್ಮಾ
ದಾನ ಧರ್ಮವನ್ನೇ ಕೇಳುತಾನೇ

ದಾನ ಧರ್ಮ ಮಾಡಿಕಂಡು ಮನೆಗೀಗ ಬಂದು
"ಅಮ್ಮ ಕಟ್ಟಮ್ಮ ನನಗೇ ಬುತ್ತೀಯ".
ಹಾಲಿಗೆ ಅಕ್ಕಿ ಸುರಿದು ನೀರಿಗೆ ಬೇಳೆ ಸುರಿದು
ಹಾಲು ಅನ್ನದ ಬುತ್ತಿ ಹದಮಾಡಿ ಮಾದೇವಮ್ಮ
ಶಿವನೀಗೆ ಬುತ್ತೀಯ ಕಟ್ಟತಾಳೇ.
"ಕಡಿರಸವೆ ಕಜ್ಜಾಯ ಮೇಲಾದ ತುಪ್ಪ ಹಾಕಿ
ಅಮ್ಮ । ಕಜ್ಜಾಯದ ಬುತ್ತೀಯ ಕಟ್ಟಮ್ಮಾ".
ಮಗನಂದ ಮಾತ ಕೇಳಿ ಐದು ಕಜ್ಜಾಯ ಮಾಡುತಾಳೇ
ಗೌರೀಗೆ ಕಜ್ಜಾಯ್ದ ಬುತ್ತಿ ಕಟ್ಟುತಾಳೇ

ಕಜ್ಜಾಯದ ಬುತ್ತೀಯ ಮ್ಯಾಲೆ ಬರದವಳೇ
ಅಡವೀಲಿ ಬಂದೆಂತ ಕಂದನಾದ ರಾಮಯ್ಯನ
ನಿನ್ನ । ಒಡಹುಟ್ಟು ಎಂದು ತಿಳಿಯಮ್ಮಾ"
ಹಂಗಂತ ಬುತ್ತಿ ಮ್ಯಾಲೆ ಬರದಂತ ಮಾದೇವಮ್ಮ
ಮಗನ ಬೆನ್ನೀಗೆ ಬುತ್ತಿ ಕಟ್ಟುತಾಳೇ.
ಭೀಮಾವತೀಲಿ ಕಟ್ಟೀದ ಬುತ್ತಿ ವಾಸನೆ
ಕೈಲಾಸಕೆ ಗಮನ ಹೊಡೆದಾವೋ.
"ಮಗನೆ ಆಯುಸವಂತನಾಗಿ ಅಸ್ಟು ಬಲ್ಲುಪನಾಗಿ
ನೀನು ಹೋದಂತ ಕಾರ್ಯ ಜಯವಾಗಲೀ".

ಅವನು ತಾಯ್ನ ಪಾದಕೆ ಶರಣೆಂದಾ
ಭೀಮಾವತಿಯನ್ನೆ ರಾಮ ಬಿಡುತಾನೇ.

೩

ಒಂದು ಯೋಜನ ನಡೆದಾ ಎರಡು ಯೋಜನ ನಡೆದಾ
ಮೂರೆಂಬ ಯೋಜನ ನಡೆದಾನು.
ಅಲ್ಲಿ ಅಕ್ಕ ಭಾವಾಜಿಯ ಕೂಗುತಾನೇ
ಮೈಲಾಳ ರಾಮ ದುಃಖನಾದರು ಮಾಡುತಾನೇ
ಅಡವಿಯನೇ ತಿರುಗಿ ಮಡುವಲ್ಲಿ ನೀರ ಕುಡಿದಿ

ಅಯ್ಯ । ಹೊನ್ನು ನಿಮ್ಮಾದೆಂದು ಹೆಣ್ಣು ನಮ್ಮಾದೆಂದು
ಅವರು । ಕಂಡೀಸ ಮಾಡಿಕೊಂಡೋದರು
ನೀನು ಹ್ಯಾಗೆ ಹೋಗುವೆ ಮೈಲಾಳು
ಒಬ್ಬಾನೆ ಮಗನಯ್ಯ ಮೈಲಾಳು".
"ಅಮ್ಮಾ । ಹೊನ್ನು ಎಂಬುವ ಆಸ್ಗೆ ಹೆಣ್ಣು ಮಾರೋ ಜಾತಿ
ನಿಮ್ಮ ನಂಬಬಾರದು ಧರೆಯಲ್ಲೀ
ಅಮ್ಮ ಹಿಂದಕ್ಕೊಂದು ಲಕ್ಷ ತರುವೇನು

ಕಟ್ಟಮ್ಮ ನನಗೆ ಬುತ್ತೀಯ
ಅಮ್ಮ । ಹೆಚ್ಚೀನ ಗೌರಮ್ಮನ ಕರೆತಂದು ನಾನು
ಹೆಚ್ಚಾಳದಬ್ಬವ ಮಾಡುವೇನು".
"ಲಿಂಗವಿಲ್ಲದೆ ನೀನು ಕೈಲಾಸಕೋದರೆ
ನಿನ್ನ । ಕತ್ತಿಡಿದು ಅವರು ತಳ್ಳುತಾರೇ".
"ಅಮ್ಮ । ಬ್ರಹ್ಮತಾತ ಬಲ್ಲ ವೇದ ಪುರಾಣದ
ಶಿವತಾತ ಬಲ್ಲ ಶಿವ ಮಹಿಮೆ
ತಾಯಿ ಮೂಗಲಿಂಗ ಮಾತ ಆಡಲೊಲ್ಲ
ಅಮ್ಮ ಆತ್ಮಲಿಂಗ ಮಾತ ಆಡಲೊಲ್ಲ
ಅಮ್ಮ ಆತ್ಮಲಿಂಗವ ತೋರಿಸ್ತೀನಿ" ಎಂದು
ಮೈಲಾಳು ಅಮ್ಮನಿಗೆ ಹೇಳಿದಾನು.

ಕತ್ತೀಯ ತೆಗೆದಾನು ಕೈಯಲ್ಲಿ ಹಿಡಿಕಂಡು
ತನ್ನ ದೇಹಾವ ತಾನು ಬಗೆದಾನು
ತನ್ನ ದೇಹಾವ ಬಗೆದುಕಂಡು ಅವನೀಗ
ಆತ್ಮಲಿಂಗಾವ ಅವನು ತೋರುತಾನೇ
ಆತ್ಮಲಿಂಗಾವ ಅವಳು ನೋಡಿಕಂಡು ಮಾದೇವಮ್ಮ
ಮಂಗಳಾರತಿಯ ಬೆಳಗೀದಾ
ಮಂಗಳಾರತಿಯ ಬೆಳಗೀ ಮಾದೇವಮ್ಮಾ
"ಮುಚ್ಚಪ್ಪ ನಿನ್ನ ಹೃದಯಾವಾ
ತಂದೆಯಾದ ಸೋಮಯ್ಯ ಸಂದೋದ ಕಾಲದಿಂದ
ಬಾಂಧವರು ನಮಗೆ ಹಗೆಯವರು

ಅಯ್ಯ । ಲಕ್ಕಿ ಸೊಪ್ಪಿನ ಗುಳ್ಳು ಎಕ್ಕದೆಲೆಯ ಕದ
ಒಕ್ಕಲಾದವರ ಮನೆಯ ಶಿವ ತಿರುಪೆ
ನಿನಗೆ ಯಾವ ಬುತ್ತೀಯ ನಾನು ಕಟ್ಟಲಯ್ಯಾ
ಹ್ಯಾಗೆ ಹೋಗುವೆಯೋ ನೀನು ಮೈಲಾಳು".
ತಾಯಿಯಾಡಿದ ಮಾತ ಕೇಳಿಕಂದು ರಾಮಯ್ಯ

ಪಾರ್ವತಿಗೆ ಅಕ್ಕಯ್ಯ ಅಕ್ಕಯ್ಯ ನಿನ್ನನ್ನು ಎಂದು ಕಾಣಲಿ, ಹೇಗೆ ಕಾಣಲಿ ಎಂದು ಮೊರೆಯಿಟ್ಟಿತಂತೆ. ತನ್ನ ಮುದ್ದಿನ ಗಿಳಿ ಮತ್ತೆ ತನ್ನ ಬಳಿಗೆ ಬರುವಂತಾಗಲಿ ಎಂದು ಪಾರ್ವತಿ ಪ್ರಾರ್ಥಿಸಿಕೊಳ್ಳಲು ಶಿವನು ಅವಳಿಗೆ ಇನ್ನು ೧೨ ವರ್ಷಕ್ಕೆ ನಿನ್ನ ತಮ್ಮನಾಗಿ ಬರುತ್ತಾನೆ ಎಂದನಂತೆ. ಅದೇ ಗಿಳಿಯೇ ಮೈದಾಳ ರಾಮನಾಗಿ ಮಾದೇವಿಯ ಗರ್ಭದಲ್ಲಿ ಹುಟ್ಟಿತಂತೆ. ಈ ಪ್ರಸಂಗವನ್ನೂ ಇದೇ ನಿರೂಪಕರು ತಿಳಿಸಿದರು.

ಅವನು ಮಾದೇವಿ ಗರ್ಭದಲ್ಲಿ ಹುಟ್ಟವನೇ
ಮಾದೇವಿ ಗರ್ಭದಲ್ಲಿ ಹುಟ್ಟಿದಂತ ಮೈದಾಳರಾಮ
ಕೈಲಾಸಕೀಗ ಬರುತವನೇ
ಕೈಲಾಸಕೀಗ ಬರುವಂತ ಮೈಲಾಳ ರಾಮನ
ಭಕ್ತಿಭಾವಾದ ನೋಡಬೇಕು
ಭಕ್ತಿಭಾವಾದ ನೋಡಬೇಕೆಂದು ಶಿವನು
ಮಾಯಾದ ಮನಿಯಾಗಿ ಬರುತಾನೇ

ಕೈಯಲ್ಲಿ ದೊಣ್ಣೆ ಹಿಡ್ಕಂಡು ಮೊಳುದ್ದ ಗಡ್ಡ ಬೆಳಿಸ್ಕಂಡು
ಕುಂಟುತ್ತಾ ಕುಸುಕುತ್ತಾ ಬರುತಾನೇ
"ಏನಪ್ಪಾ ಯಾವ ದೇಶದಿಂದ ಬಂದೆ ಅದನಾರು ಹೇಳಂದು"
ಪರಶಿವನು ರಾಮಾನ ಕೇಳುತಾನೇ.

"ನನ್ನಕ್ಕ ಭಾವಾಜಿಯ ಹೆಸರೇಳು ಮುದುಕಯ್ಯ
ನನ್ನಕ್ಕ ಭಾವಾಜಿಯ ತಳವೇಳು
ನನ್ನಕ್ಕನೆ ಗೌರಮ್ಮ ಭಾವನೆ ಮಲ್ಲಯ್ಯ
ಮಿಕ್ಕ ಬಾಂಧವರೇ ಬಸವಣ್ಣಾ
ಮಿಕ್ಕ ಬಾಂಧವರೇ ಬಸವಣ್ಣ ಮುದುಕಯ್ಯ
ಭಾವ ಮಲ್ಲಯ್ಯನ ತಳವೇಳು"

"ಹನ್ನೆರಡು ವರ್ಷದಿಂದ ಈ ಕಾಡಲ್ಲಿ ವನವಾಸ
ಅನ್ನ ಆಹಾರ ದೊರೆತಿಲ್ಲಾ
ನಿನ್ನ। ಭಾವ ಮಲ್ಲಯ್ಯನ ಗುರುತೇಳ್ವೆ ಕಂದಯ್ಯಾ
ತಂದಿರುವಂತ ಬುತ್ತಿ ಕೊಡು ಬೇಗ
"ಸುಳ್ಳು ಮಾತಾಡಿದವನಲ್ಲ ಕಳ್ಳತನ ಮಾಡಿದವನಲ್ಲ
ಭಾವ ಮಲ್ಲಯ್ಯನಿಗೆ ಹಾಲು ಅನ್ನದ ಬುತ್ತಿ
ಅಕ್ಕ ಗೌರಮ್ಮನಿಗೆ ಕಜ್ಜಾಯ
ಅವರ। ಮುಖವನ್ನೆ ನೋಡುವರ್ಗೆ ಬುತ್ತೀಯ ಬಿಚ್ಚೆಲ್ಲ
ನಮ್ಮಕ್ಕ ಭಾವಾಜಿಯ ತಳವೇಳೊ".

ಒಡ ಹುಟ್ಟಿನ ಪಾದಾ ದೊರೆಯಲಿಲ್ಲಾ । ನನಗೆ ದೊರೆಯಲಿಲ್ಲಾ
ಒಂದು ಬೆಟ್ಟದ ಮ್ಯಾಲೆ ನಿಂತುಕಂಡು
ಅಕ್ಕ ಭಾವಾಜಿಯನ್ನೇ ಕೂಗುತಾನೇ

ಕಡೆಯ ಹೊಲದ ಒಳಗೆ ಬಸವಣ್ಣ ಮೇವಾದ
ಒಡೆ ಎಂದ ಪಾಪ ನಂಗೆ ತಗಲೀತು
ಒಡೆ ಎಂದ ಪಾಪ ನಂಗೆ ತಗಲೀದ ಕಾಲದಲ್ಲಿ
ಒಡಹುಟ್ಟಿನ ಪಾದ ನಂಗೆ ದೊರೆಯಲಿಲ್ಲಾ.
ಒಂದು ಬೆಟ್ಟ ಇಳಿದು ಎರಡು ಬೆಟ್ಟಲತ್ತಿದ
ಮೂರನೆ ಬೆಟ್ಟಕೆ ದೇವಾ ಬರುತಾನೇ
ಮೂರನೆ ಬೆಟ್ಟಕ್ಕೆ ಬಂದಾನು ರಾಮಯ್ಯ
ಅಕ್ಕ ಭಾವಾಜಿಯನ್ನೆ ಕೂಗುತಾನೇ
ಬೆಟ್ಟಾದ ಕೂಗು ಓಯೆಂದು ಕೇಳುತಾದೋ
ಗೋಳು ಗೋಳೆಂದು ಬಾಲ ಅಳುತಾನೇ

ನಾಕಾನೆ ಬೆಟ್ಟವನ್ನೆ ಹತ್ತುತಾನೇ
ಮತ್ತೊಂದು ಬೆಟ್ಟಲತ್ತುತಾನೇ
ಅವನು ನಡೆದ ಕಾಲು ಒಪ್ಪಳೆ ಬಂದೋ
ಅವನ ಬೀಸಾದ ತೋಳು ಬೆರಗಾದೋ.
ಐದನೆ ಬೆಟ್ಟಕೆ ಬಂದಾನು ರಾಮಯ್ಯ
ಅಕ್ಕ ಭಾವಜೀಯ ಕೂಗುತಾನೇ
ಇನ್ನು ನೆಡವದಕ್ಕೆ ಸಾಧ್ಯವಿಲ್ಲ ಎಂದು
ಗೋಳು ಗೋಳೆಂದು ಬಾಲ ಅಳುತಾನೇ.
ಕಂದನಾಡಿದ ಕೂಗು ಕೈಲಾಸಕ್ಕೆ ಹೋದಾವೋ
ಶಿವನ ಕಿವಿಗಾದರೇ ಮುಟ್ಟುತಾದೇ

ಅಲ್ಲಿರುವ ಅಕ್ಕಯ್ಯ ಇಲ್ಲಿರುವ ಭಾವಾಜಿ
ಮಲ್ಲಿಕಾರ್ಜುನನ ಗಿರಿಯಲ್ಲೀ.
“ನೋಡೆಣ್ಣೆ ಪಾರ್ವತಿ ನಿನ್ನ ವರದಲ್ಲಿದ್ದಂತ ಗಿಳಿರಾಮ

ಪಾರ್ವತಿ ಒಂದು ಪಂಚವರ್ಣದ ಗಿಳಿಯನ್ನು ಸಾಕಿದ್ದಳಂತೆ. ಅದು ಯಾವಾಗಲೂ ಪಾರ್ವತಿಯ ಮುಂದೆ, ನಿನಗೆ ೧೨ ಕಳೆ, ಶಿವನಿಗೆ ೧೮ ಕಳೆ ಎನ್ನುತ್ತಿತಂತೆ. ಒಮ್ಮೆ ಯಾವುದೋ ಕಾರಣದಿಂದ ಶಿವನ ಮುಂದೆ, ನಿನಗೆ ೧೨ ಕಳೆ, ಪಾರ್ವತಿಗೆ ೧೮ ಕಳೆ, ಎಂದಿತಂತೆ. ಆಗ ಪಾರ್ವತಿಗಿಂತ ತನ್ನನ್ನು ಕಡಮೆಮಾಡಿತಲ್ಲಾ ಎಂದು ಶಿವನಿಗೆ ಕೋಪ ಬಂದು ಗಿಳಿಗೆ ಶಾಪ ಕೊಟ್ಟನಂತೆ. ಶಿವ ಶಾಪ ಕೊಡಲು ಕೈಯೆತ್ತಿದಾಗ ಗಿಳಿ

ಅಕ್ಕ ಭಾವಯ್ಯನ ತಳವು ಸಿಕ್ಕಾದೆ ಇರಲು
ಗೋಳು ಗೋಳೆಂದು ಬಾಳ ಅಳುತಾನೇ.
ಮಗನ ಸತ್ಯಾವ ನೋಡಾಲು ಮಾ ಶಿವನು
ಹುಲಿಯ ಹಿಂಡನ್ನೇ ಕಳುಗುತಾನೇ.
ಕೆಂಧೂಳ ಎರಚಿಕಂಡು ಮೂಲಂಗಿ ಹಲ್ಲ ಬಿಟ್ಟಿಕಂಡು
ಕೊಂಗದಗಲ ನಾಲಿಗೆ ನೀಡಿಕಂಡು

ಕೊಂಗದಗಲ ನಾಲಗೆಯ ನೀಡಿಕಂಡು ಹುಲಿರಾಜ
ಗರ್ಜಿಸಿ ಶಿವನೇ ಬರುತಾದೇ.
“ಕಾಡಲ್ಲಿ ಹುಟ್ಟವನೇ ಕಾಡಲ್ಲಿ ಬೆಳೆಯವನೇ
ಹುಲಿಯ ಹಿಂಡೀಗೆ ಯಜಮಾನ
ಹುಲಿಯ ಹಿಂಡೀಗೆ ಯಜಮಾನ ಹುಲಿರಾಯ
ನನ್ನ ಭಾವ ಮಲ್ಲಯ್ಯನ ತಳವೇಳು”.
ಕಂದಾನ ಮಾತು ಕೇಳಿ ಬೆನ್ನ ಮ್ಯಾಲೆ ಕೂರ್ಸಿಕಂಡು
ಹುಲಿರಾಯ । ಎಂಟನೆ ಬೆಟ್ಟಕೆ ತರುತಾನೇ.
ಎಂಟಾನೆ ಬೆಟ್ಟದಲ್ಲಿ ರಾಮಾನ ಬಿಟ್ಟುಬಿಟ್ಟು
ಹುಲಿರಾಯ ಮಾಯವಾಗಿ ಹೊರಟಾನು.

ಎಂಟಾನೆ ಬೆಟ್ಟದಲಿ ನಿಂತಿಕಂಡು ಮೈಲಾಳ
ಅಕ್ಕ ಭಾವಾಜಿಯನ್ನು ಕೂಗುತಾನೇ.
ಅಕ್ಕಾನು ಇಲ್ಲಾ ಭಾವಾನು ಇಲ್ಲಾ ಅಂದುಕಂಡು
ಗೋಳು ಗೋಳೆಂದು ಬಾಳ ಅಳುತಾನೇ.
ಅಡವಿಯ ನಾ ತಿರುಗಿ ಮಡುಗಲು ನೀರ ಕುಡಿದೆ
ಒಡಹುಟ್ಟಿನ ಪಾದ ದೊರೆಯಲಿಲ್ಲಾ.
ಕಂದಾನ ಸತ್ಯಾವ ನೋಡಾಲು ಮಾ ಶಿವನು
ಕೋತಿ ಹಿಂಡ ಕಳುಗುತಾನೇ.
ಕೋತಿಯ ಹಿಂಡು ಹಿಡಮರ ಮುರಿದು
ರಾಮಾನ ಮುಂದೆ ಎಸೆದಾವು.

“ಕಾಡಲ್ಲಿ ಹುಟ್ಟವನೆ ಕಾಡಲ್ಲಿ ಬೆಳಿಯವನೆ
ಕೊಂಬೇಲಿ ಹಣ್ಣು ಕುಯ್ಯುವನೇ
ಕೊಂಬೇಲಿ ಹಣ್ಣು ಕುಯ್ಯುವಂತ ಆಂಜನೇಯ
ಭಾವ ಮಲ್ಲಯ್ಯನ ತಳವೇಳು”.
ರಾಮಾನ ಮಾತಿಗೆ ಮರುಳಾಗಿ ಅಂಜನೇಯ
ಮರದ ಕೆಳಗಿಳಿದು ಬರುತಾನೇ.
“ಬಾರಪ್ಪ ಮಗನೇ ದುಃಖಾವ ಮಾಡಬ್ಯಾಡ

ಮಾಯಾದ ಶಿವನಿಗೆ ಕಂದನ ಭಕ್ತಿ ಕಂಡು
ಭಾಳ ಸಂತೋಷವು ಆಗುತಾದೇ
"ನೋಡಪ್ಪಾ ಕಂದಯ್ಯ ಬುತ್ತೀಯ ಕೊಡದಿದ್ರು
ನನ್ನ ಅವಲಕ್ಕಿಯ ನೀನು ಊಟಮಾಡು.
ಶಿವನು ಕೊಟ್ಟಂತ ಅವಲಕ್ಕಿ ಹುಳುವಾದೋ
ದೇಹಕ್ಕೆ ಅವನು ಸೇರಿಸುತಾನೆ
ಶಿವನು ಕೊಟ್ಟಂತ ಅವಲಕ್ಕಿ ತಿನ್ನುವಾಗ
ಮಾಯಾದ ಶಿವನು ಮರೆಯಾದ.
ಮಗನ ಸತ್ಯಾವ ನೋಡಾಲು ಮಾ ಶಿವನು
ಆನೇಯ ಹಿಂಡ ಕಳುಗುತಾನೇ.

ಗುಡುಗುಡನೆ ಓಡಿಕಂಡು ಮೈಲಾಳ್ನತಾಕೆ
ಇಟ್ಟಾಡಿ ಆನೆ ಬರುತಾವೇ.
ಅಂಜಬೇಡ ಘನವೇ ಹೆದರಬೇಡ ದ್ರೇಹಾವೇ
ಧೈರ್ಯ ತಾಳಯ್ಯ ಮನದಲ್ಲಿ
"ಕಾಡಲ್ಲಿ ಹುಟ್ಟವನೇ ಕಾಡಲ್ಲಿ ಬೆಳಿಯವನೇ
ಮಾರುದ್ದ ಸೊಂಡಿಲ ಬೀಸವನೆ ಗಜರಾಜ
ಆನೆಯ ಹಿಂಡಿಗೆ ಯಜಮಾನ
ನಮ್ಮ ಭಾವ ಮಲ್ಲಯ್ಯನ ತಳವೇಳೋ
ನಮ್ಮಕ್ಕ ಗೌರಮ್ಮನ ತಳವೇಳೋ".

ಕಂದಾನ ಮಾತ ಕೇಳಿಕಂಡು ಆನೇಯು
ಸೊಂಡಿಲಲ್ಲವನ ಎತ್ತಿಕಂಡ
ಸೊಂಡಿಲಲ್ಲವನ ಎತ್ತಿಕಂಡು ಆನೇಯು
ಅವನೊಂದು ಬೆಟ್ಟಕೆ ತರುತಾನೇ.
ಬೆಟ್ಟಾಕೆ ತಂದು ಸೊಂಡಿಲಲ್ಲಿ ಕೆಳಕಿಳಿಸಿ
ಆನೇಯ ಆಗ ಮಾಯಾವು.
ಏಳನೇ ಬೆಟ್ಟದಲ್ಲಿ ನಿಂತಿಕಂಡು ಮೈಲಾಳ
ಅಕ್ಕ ಭಾವಾಜಿಯನ್ನು ಕೂಗುತಾನೇ.
ಅಲ್ಲಿರುವ ಅಕ್ಕಯ್ಯ ಇಲ್ಲಿರುವ ಭಾವಯ್ಯ
ಮಲ್ಲಿಕಾರ್ಜುನನ ಗಿರಿಯಲ್ಲಿ

ಆಚಾರ್ಕೆ ಬೆಟ್ಟ ಈಚಾರ್ಕೆ ಬೆಟ್ಟ ಆದರೆ
ನಟ್ಟನಡುವೆ ಗುರುಮಠ
ನಟ್ಟನಡುವೆ ಗುರುಮಠ ಅಂತ
ತಾಯಮ್ಮ ಹೇಳಿದರು ಸಿಗನಿಲ್ಲ.

“ಬಂಡೇಯ ಮ್ಯಾಲಿಂದ ಬೀಳುವಂತ ರಾಮನ
ಮುತ್ತೀನ ಸೆರಗಿಂದ ಹಿಡಿಹೆಣ್ಣೀ
ಮುತ್ತೀನ ಸೆರಗಲ್ಲಿ ಹಿಡಿಕೊಂಡು ಮೈದಾಳನ
ಕೈಲಾಸದ ಬಾಗಲಲ್ಲಿ ಬಿಟ್ಟುಬಾರೇ.
ಪರಮೇಶ್ವರನ ಅಪ್ಪಣೆ ಪಡೆದು ಗೌರಮ್ಮ
ಕೈಲಾಸವನ್ನೇ ತಾಯಿ ಬಿಡುತಾಳೇ
ಭಾರಿಯ ಬಂಡೆಯ ಬೆಟ್ಟದ ಕೀಳೆ
ಗೌರಮ್ಮ ಬಂದು ನಿಂತವಳೇ.
ಹನ್ನೆರಡನೇ ಬೆಟ್ಟದಲಿ ರಾಮನ ರಕ್ತ ಕಾರಿ
ಬೆಟ್ಟದ ಕಲ್ಲೆಲ್ಲ ಕೆಂಪಗಾಯ್ತು ೫೪೦

ಬೆಟ್ಟದ ಕಲ್ಲೆಲ್ಲ ಕೆಂಪಗಾದರಲ್ಲೀಗ
ಅದಕೊಂದು ಶಾಪ ಕೊಡುತಾರೇ
ರಾಮನ ರಕ್ತ ಕಾರಿರುವ ಕಲ್ಲು ಜಂಗಮರಿಗೆ
ಕಾವೀಯ ಕಲ್ಲು ಆಗಲೀ.
ಕೈಲಾಸಕೆ ಕರವೆತ್ತಿ ಮುಗಿದಂತ ರಾಮನು
ಬಂಡೇಯ ಮ್ಯಾಲೆ ಮಲಗುತಾನೇ.
ಬಲದ ಮಗ್ಗುಲಾಗಿ ಮಲಗಿದ ಕಂದಯ್ಯ
ಬಂಡೇಯ ಕೀಳೆ ಉರುಳುತಾನೇ ೫೫೦

ಸತ್ವಂತೆ ಗೌರಮ್ಮ ಉರುಳಿ ಬರ್ವ ರಾಮಯ್ಯನ
ಮುತ್ತೀನ ಸೆರಗಲ್ಲಿ ಹಿಡಿದಾಳೋ
ಮುತ್ತೀನ ಸೆರಗಲ್ಲಿ ಹಿಡಿಕಂಡು ಗೌರಮ್ಮ
ಕೈಲಾಸದ ಬಳಿಗೆ ತರುತಾಳೆ
ದ್ವಾರದ ಬಾಗಲಲ್ಲಿ ನಿಂತಿಕಂಡು ಗೌರಮ್ಮ
ಮಗನ ಮೈಕೈ ನೋಡುತಾಳೇ
ಅಯ್ಯ ತೊನ್ನು ಮೈಯಿ ಈಗ ಹೊನ್ನು ಮೈಯು ಆಗಲಿ
ಅಲ್ಲಿ ಶಾಪಾವ ತಾಯಿ ಕೊಡುತಾಳೆ
ಅಯ್ಯ ಹೂವಿನ ಮಳೆಯನ್ನೇ ತಾಯಿ ಕರೆದಾಳೊ
ಮಯವಾಗಿ ತಾಯಿ ಹೊರಟಾಳೋ ೫೬೦

ಬಾಗಲು ಕಾಯುವಂತ ಜಂಗುಮರು ಬಂದೀಗ
ಮಗನನ್ನೇ ಅವರು ನೋಡುತಾರೇ.
ಲಿಂಗವಿಲ್ಲದ ಬವಿ ಬರಬಾರದು ಎಂದು
ಅಡ್ಡಲಾಗಿ ಶಿವನೇ ಬರುತಾರೇ.
ಜಂಗುಮರ ಮಾತನ್ನು ಕೇಳಿದ ಮೈಲಾಳನು

ಹೆಗಲ ಮ್ಯಾಲಾದರು ಕೂತುಕೊಳ್ಳೋ.
ಹೆಗಲಿನ ಮ್ಯಾಲೆ ರಾಮಾನ ಕೂರ್‍ಸಿಕಂಡು
ಅವರೊಂದು ಬೆಟ್ಟ ತರುತಾರೇ.

ಒಂಬತ್ತನೆ ಬೆಟ್ಟಕೆ ಅವರಾದರು ಬಂದಾರು
ಕೋತೀಯ ಹಿಂಡು ಮರೆಯಾದೋ.
ಒಂಬತ್ತನೆ ಬೆಟ್ಟ ಹತ್ತಿ ಹತ್ತನೆ ಬೆಟ್ಟ ಇಳಿದು
ಹನ್ನೊಂದನೆ ಬೆಟ್ಟಕೆ ಬರುತಾನೆ.
ಮಗಾನ ಸತ್ಯಾವ ನೋಡಲು ಮಾ ಶಿವನು
ಮತ್ತೊಂದು ಮಾಯ ಮಾಡವನೇ.
ಕಲ್ಲೆಲ್ಲ ಕನಕಾದೋ ಹುಲ್ಲೆಲ್ಲ ಲಿಂಗಾದೋ
ಮಲ್ಲಿಕಾರ್ಜುನನ ಗಿರಿಯಲ್ಲಿ.
ಕಾಲಲ್ಲಿ ಲಿಂಗವ ತುಳಿದಾರೆ ಪಾಪವು
ಅಕ್ಕ ಭಾವನ ಪಾದ ದೊರಿಯಲ್ಲಾ

ಅಕ್ಕ ಭಾವನ ಪಾದ ದೊರಿಯಲ್ಲ ಅಂತೇಳಿ
ಮಂಡಿಯಲ್ಲಿ ಯೋಜನ ತವೆದಾನು.
ಮಂಡಿಯು ಉರುಚಿ ಗಾಯಾವು ಆಯಿತು
ಮಗ್ಗುಲಲ್ಲಿ ಯೋಜನ ತವೆದಾನು.
ಮಗ್ಗುಲೆಲ್ಲ ಕಿತ್ತು ರಕ್ತಾವು ಕಾರಿತು
ಗೋಳುಗೋಳಂದು ಬಾಲ ಅಳುತಾನೇ.
ಉರಿವಾದು ಕೈಕಾಲು ಸುರಿವಾದು ರಕ್ತಾವು
ಗೋಳು ಗೋಳಂದು ಬಾಲ ಅಳುತಾನೇ.
ಮಗಾನ ಸತ್ಯಾವ ನೋಡಲು ಮಾ ಶಿವನು
ದುಂಡು ಮಲ್ಲಿಗೆ ಹೂವ ಚೆಲ್ಲುತಾನೇ.

ಚೆಲ್ಲಿದಂತ ಹೂವನ್ನು ನೋಡಿದಂತ ರಾಮನು
ಪೂಜೆಯ ಹೂವೆಂದು ತಿಳಿದಾನು.
ಕಾಲು ಗಗನಕೆ ಮಾಡಿ ಶಿರಸ ಕೆಳಕ್ಕೆ ಮಾಡಿ
ನೆತ್ತಿಯಲ್ಲೊಂದು ಯೋಜನ ತವೆದಾನು
ಹನ್ನೆರಡನೆ ಬೆಟ್ಟಕೆ ಬಂದಂತ ರಾಮನು
ಸುತ್ತಾ ದೃಷ್ಟೀಯ ಹರೀಸೀದ
ಉರುಳಿ ಪ್ರಾಣಾವ ಬಿಡುತೀನಿ ಅಂತೇಳಿ
ಕೈಲಾಸಕೆ ಕರವ ಎತ್ತಿದಾನು.
ಮಗನ ದುಃಖವನು ನೋಡಲಾರದೆ ಮಾ ಶಿವನು
ಪಾರ್ವತಿಯಾನ ಕರೆದಾನು

ಜಂಗಮರ ಮಾತನ್ನೇ ಕೇಳಿಕಂಡು ಮಾ ಶಿವನು
ಬೇಗದಲಿ ಅಪ್ಪಣೆಯ ಕೊಡುತಾನೇ.

ಅಂದದ ಪಲ್ಲಕ್ಕಿ ಸುಂಗಾರ ಮಾಡಿಕೊಂಡು
ಕಂದ ರಾಮಯ್ಯನ ಕೂರ್ಸುತಾರೇ
ಕಂದ ರಾಮಯ್ಯನ ಕೂರ್ಸಿಕಂಡು ಜಂಗುಮರು
ಕೈಲಾಸದ ಒಳಗೆ ತಂದವರೇ.

೪

ಎಡಗೈಲಿ ಅಕ್ಕನ ಪಾದ ಬಲಗೈಲಿ ಭಾವನ ಪಾದ
ಶಿರ ಬಗ್ಗಿ ಶರಣ ಮಾಡುತಾನೇ.
ಶರಣು ಮಾಡಿದ ಕಂದಯ್ಯನ ಗೌರಮ್ಮ
ಮೇಲಕ್ಕೆ ಎತ್ತಿ ಕೂರ್ಸಿದಾಳು.
"ಅಕ್ಕಾರೆ ಉಳ್ಳವರೇ ಚಿಕ್ಕವನೇ ಬಾಮೈದಾ
ನಮ್ಮತ್ತೆಮ್ ಚೆನ್ನಾಗಿ ಇರುವಾರಾ?"

"ಅಕ್ಕಾರೆ ಉಳ್ಳವರೇ ದೊಡ್ಡವರೆ ಭಾವಜಿ
ನಿಮ್ಮತ್ತೆಮ್ ಚೆನ್ನಾಗಿ ಇರುವಾರು"
"ಅಕ್ಕಾರೆ ಉಳ್ಳವನೆ ಚಿಕ್ಕವನೆ ತಮ್ಮಯ್ಯ
ಹೆತ್ತಮ್ಮ ಚೆನ್ನಾಗಿ ಇರುವಾಳ ?
"ಅಕ್ಕಾರೆ ಉಳ್ಳವಳೆ ದೊಡ್ಡವಳೆ ಗೌರಮ್ಮ
ಹೆತ್ತಮ್ಮ ಚೆನ್ನಾಗಿ ಇರುವಾಳು".
"ಭೂಲೋಕ ಬಿಟ್ಟು ಕೈಲಾಸ್ಕೆ ಯಾಕೆ ಬಂದೆ
ಅದನಾದರು ಕಂದ ಹೇಳಬೇಕು".
"ಅಕ್ಕಯ್ಯನ ಕರಕಂಡು ಭಾವಯ್ಯನ ಕರಕಂಡು
ಹೆಚ್ಚಾಳದ ಹಬ್ಬ ಮಾಡಬೇಕು.

ಹೆಚ್ಚಾಳದ ಹಬ್ಬಕೆ ಕರಿಯಾಕೆ ಬಂದೀವ್ನಿ
ಭೂಲೋಕ್ಕೆ ನೀಮು ತೆರುಳಯ್ಯಾ".
"ಭೂಲೋಕದಿಂದ ನಮಗೇನು ತಂದಿದ್ದೀ
ಅದನಾದರು ಕಂದ ತೋರಬೇಕು".
ಬುತ್ತೀಯ ಇಳಿಕಿದನು ಬುತ್ತೀಯ ಬಿಚ್ಚಿದನು
"ಸಂತೋಷದಲ್ಲಿ ನೀಮು ಊಟಮಾಡೀ".
"ಭೂಲೋಕದಿಂದ ತಂದ ಊಟಾವ ಮಾಡಿದರೆ
ಮೇಘದಲ್ಲಾದರೆ ಮಳೆಯಿಲ್ಲಾ.

ಕ್ವಾಪವ ಅವನು ತಾಳುತಾನೆ.
“ಯಾವ ಲಿಂಗವಯ್ಯಾ ಅದು ಯಾವ ಲಿಂಗವಯ್ಯಾ
ಅದು ಕಲ್ಲು ಲಿಂಗವಯ್ಯಾ ಶಿವನೇ ಹುಲ್ಲು ಲಿಂಗವಯ್ಯಾ
ಕಿವುಡು ಲಿಂಗವಯ್ಯಾ ಅದು ಮೂಗು ಲಿಂಗವಯ್ಯಾ
ಮಾತನಾಡಾದ ಲಿಂಗ, ಅಯ್ಯಾ ವರವ ಕೊಡುವುದಾ

ಅದು ಕಟ್ಟು ಲಿಂಗವಯ್ಯಾ ಶಿವನೇ ಅದು ಹುಟ್ಟು ಲಿಂಗವಲ್ಲ
ಆತ್ಮಲಿಂಗವು ಮಾತ್ಮನೊಳಿದ್ದರೆ ಶಿವನೆಲ್ಲಿಹನಯ್ಯಾ
ಆತ್ಮಲಿಂಗವು ದ್ರೇಹದಲ್ಲಿದ್ದರೆ ಶಿವನು ಅಲ್ಲೆ ಇಹನಯ್ಯಾ
ಆತ್ಮಲಿಂಗವು ತೋರಿದರೆ ಕೈಲಾಸ್ಕೆ ನೀಮು ಕಳುಗುವಿರಾ ?
“ಆತ್ಮಲಿಂಗವ ತೋರಿದರೆ ನೀನು ಮೈಲಾಳ
ನಿನ್ನ ಕೈಲಾಸಕ್ಕೆ ಕಳಗುವೆವು”.
ಕತ್ತೀಯ ತಗಿದಾನು ಕೈಯಲ್ಲಿ ಹಿಡಿಕಂಡು
ತನ್ನ ದ್ರೇಹವ ತಾನು ಬಗಿದಾನು
ತನ್ನ ದ್ರೇಹವ ತಾನು ಬಕ್ಕಂಡು ಮೈಲಾಳ
ಆತ್ಮಲಿಂಗಾವ ತೋರಿದನು.

ಮೈಲಾಳರಾಮನ ಹೃದಯದಲ್ಲೀಗ
ನೂರೊಂದು ಲಿಂಗ ಹೊಳುದಾವು
ವಿಭೂತಿ ಗಟ್ಟಿ ಬಿಲ್ವಪತ್ರೇಯ ಕಂಡು
ಮಂಗಳಾರತಿಯ ಬೆಳಗೀರು.
ಅಯ್ಯ ಈಶ್ವರನ ವರದ ಕುಮಾರ ನೀನು
ಮುಚ್ಚಯ್ಯ ನಿನ್ನ ದ್ರೇಹವಾ.
ಅಂದದ ಪಲ್ಲಕಿಯ ಸುಂಗಾರ ಮಾಡಿಕಂಡು
ಕಂದ ರಾಮಯ್ಯನ ಕೂರ್ಸಿಕಂಡು
ಕಂದ ರಾಮಯ್ಯನ ಕೂರ್ಸಿಕಂಡು ಜಂಗುಮರು
ಕೈಲಾಸದ ಬಳಿಗೆ ಬರುತಾರೇ.

ಪಾರ್ವತಿ ಪರಮೇಶ್ವರರಿಗೆ ಜಂಗುಮರು
ಶಿರಬಗ್ಗಿ ಶರಣ ಮಾಡುತಾರೇ.
“ಸಣ್ಣ ಬಾಲಕ ನಿಮ್ಮ ಹೆಸರು ಹೇಳಿಕಂಡು
ಬಂದವನೆ ಅಂತ ಹೇಳುತಾರೆ.
ಬಾಲಕನ ನಿಮ್ತಾಕೆ ತರೂಕೆ ಮಾ ಶಿವನೆ
ಅಪ್ಪಣೆಯ ಈಗ ಕೊಡಬೇಕು.
ಅಪ್ಪಣೆಯನ್ನು ಕೊಟ್ಟಾರೆ ಮಾ ಶಿವನ
ಕೈಲಾಸಕೆ ನಾಮು ತರುತೀಮಿ”.

ಶಿರಬಗ್ಗಿ ಶರಣ ಮಾಡುತಾರೇ.
ಗೌರಮ್ಮನನ್ನು ಆಗ ಬರಮಾಡಿಕೊಳ್ಳಲು
ಮುತ್ತೈದೇರನ್ನು ಕರಿದಾಳು.
ಅರಸಿನ ಕುಂಕುಮ ಸೈವಾಗಿ ಮಾದೇವಮ್ಮ
ಕೆರಿಯ ಏರಿಗೆ ಹೊರುಟಾಳು.
ಕೊಟ್ಟಣವ ಕುಟ್ಟವರೆ ಪಟ್ಟಣವ ತಾರ್ಸವರೆ
ಪಟ್ಟಣ ಸುಂಗರವ ಮಾಡವರೇ

ಹೆಚ್ಚಿನ ಗೌರಮ್ಮನ ಪೂಜೆಯ ಮಾಡ್ಕಂಡು
ಭೀಮಾವತಿಗೆ ಅವರು ತರುತಾರೇ.
ಭೀಮಾವತಿಗೆ ತಂದಾರು ಗೌರಮ್ಮನ
ಕ್ವಾಟೆ ಬಾಗಲಲ್ಲಿ ನಿಲ್ಲುತಾರೆ
ಕ್ವಾಟೆ ಬಾಗಲಲ್ಲಿ ನಿಂತಾಗ ಮುತ್ತೈದೇರು
ಮುತ್ತೀನಾರುತೀಯ ಬೆಳಗುತಾರೇ
ಪಾದಕ್ಕೆ ನೀರ ಎರಕಂಡು ಗೌರಮ್ಮನಿಗೆ
ತೂಗು ಮಂಚಾದಲ್ಲಿ ತೂಗುತಾರೇ.
ಇಂದು ಬಂದು ಗೌರಮ್ಮ ನಾಳೆ ಬಂದು ಗಣಪತಿ
ಹೆಚ್ಚಾಳದಬ್ಬಕೇ ಸುರುಮಾಡೀ

ಹೆಚ್ಚಾಳದ ಹಬ್ಬವ ಮರೆತಾರು ಜನಗಳು
ಹೆಚ್ಚಿನ ಗೌರಿಹಬ್ಬ ಮಾಡುತಾರೇ
ಹೆಚ್ಚೀನ ಗೌರಮ್ಮನ ಕರೆತಂದು ರಾಮಯ್ಯ
ಹೆಚ್ಚಾಳದಲ್ಲಿ ಹಬ್ಬ ಮಾಡವನೇ.
ನರಲೋಕದಲ್ಲಿ ಗೌರಿಹಬ್ಬ ನಾಮಕರಣ ಮಾಡಿ
ಭಾಳ ಸಂತೋಷ ಅವರು ಪಡುತಾರೇ
ಗೌರಮ್ಮನಿಗೆ ಬಟ್ಟೆಬರಿ ವಸ್ತ ತಂದು
ಚೆನ್ನಾಗಿ ಹಬ್ಬವ ಮಾಡುತಾರೇ.

೬

ನಾನು ಬಂದು ಐದು ದಿನ ತುಂಬಿ ಹೋಯ್ತು
ಕೈಲಾಸಕೆ ಹೋಗಬೇಕು ಅಂದಾಳು

ಗೌರಮ್ಮ ಆಡೀದ ಮಾತನ್ನೇ ಕೇಳಿಕಂಡು
ಮತ್ತೇನು ತಾಯಿ ನುಡಿದಾಳು
"ಮುತ್ತಿನಂತ ಗೌರಮ್ಮ ನಿನ್ನ ಬಿಟ್ಟು ಇವನಾರೊ
ನಮ್ಮನ್ನು ಕರಕಂಡು ನಡಿಯಮ್ಮಾ".
ತಾಯಿ ಆಡೀದ ಮಾತ ಕೇಳಿದಳು ಗೌರಮ್ಮ

ಕಾಮಧೇನು ಕರೆಯಲ್ಲ ಭೂಮಿಯಲ್ಲಿ ಬೆಳೆಯಿಲ್ಲ
ಹಸುಮಕ್ಕಳಿಗೆ ಹಾಲಿಲ್ಲ.

ಇರೆಂಬತ್ತು ಕೋಟಿ ಜೀವರಾಶಿಗೆಲ್ಲಾ
ಅಯ್ಯ । ನಷ್ಟಾವು ತಪ್ಪದೆ ಆಗುತಾದೆ".
ಭಸ್ಮಾವ ತೆಗೆದು ಬಲಗೈಲಿ ಹಿಡಿಕೊಂಡು
ಬುತ್ತೀಯ ಮ್ಯಾಲೆ ಚೆಲ್ಲುತ್ತಾರೇ.
ಬುತ್ತೀಯ ಊಟವನ್ನು ಮುಷ್ಕಾವ ಮಾಡಿ
ಕೈಲಾಸಕೆಲ್ಲ ಹರಡುತಾರೇ.
ಕಜ್ಜಾಯದ ಬುತ್ತೀಯ ಗೌರಮ್ಮ ತಕ್ಕಂಡು
ಬುತ್ತೀಯ ಬರಹವ ನೋಡುತಾಳೇ.
ಕಂದ ರಾಮಯ್ಯನ ಕರಕಂಡು ಗೌರಮ್ಮ
ಕಜ್ಜಾಯದ ಬುತ್ತಿ ಸವಿದಾಳು.

"ಭೀಮಾವತಿಯ ಪಟ್ಟಣದಲ್ಲಿ ಅಕ್ಕಯ್ಯ
ಹೆಜ್ಜಾಳದ ಹಬ್ಬ ಮಾಡಬೇಕು
ಹೆಜ್ಜಾಳದ ಹಬ್ಬ ಮಾಡಬೇಕು ಭಾವಯ್ಯ
ಇಬ್ಬಾರು ನೀಮು ಹೊರಡಬೇಕು".
"ಲಕ್ಕಿ ಸೊಪ್ಪಿನ ಗುಳ್ಳು ಎಕ್ಕದೆಲಿಯ ಕದ
ಒಕ್ಕಲಾದವರ ಮನೆಯ ತಿರುಪೇಯು
ಕೋಟಿಯ ಜಂಗುಮರು ಬಂದಾರೆ ನಿಮ್ಮನಿಗೆ
ಎಲ್ಲಿಂದ ಎಡಿಯ ಬಡಿಸುವೆ".
"ಅಕ್ಕಿ ಸಾವಿರ ಪಲ್ಲ ಬೇಳೆ ಸಾವಿರ ಪಲ್ಲ
ಮಿಕ್ಕನಾದ ಒಡವೆ ಸಾವಿರ

ಮಿಕ್ಕನಾದ ಒಡವೆ ಸಾವಿರ ಇರುವುದು
ಏಳುಸುತ್ತಿನ ಕ್ವಾಟೆ ಇರುವಾದು.
ಕಂದರಾಮಯ್ಯನ ಜರಿತಿದ್ದ ಕೇಳಿಕಂಡು
ಅಕ್ಕ ಗೌರಮ್ಮ ಕ್ವಾಪಗೊಂಡಳು
"ಅಕ್ಕೀಯ ಹಿಟ್ಟಿಗು ಅರಶಿನದ ಬಟ್ಟಿಗು
ಅಷ್ಟುಕು ನನ್ನವರು ಬಡವರ
ಅಷ್ಟುಕು ನನ್ನವರು ಬಡವರೇ ಆದರು
ಒಪ್ಪತ್ತಿದ್ದಾರು ಬರುವೇನು".
ಅಕ್ಕ ತಮ್ಮದಿರು ಆಡಿದಂತ ಮಾತ ಕೇಳಿ
ಬ್ರಹ್ಮದೇವರನ್ನು ಕರಿದಾನು
ಬ್ರಹ್ಮದೇವರನ್ನು ಕರಿದಂತ ಮಾ ಶಿವನು

ಮಾಯದಲಿ ಅಪ್ಪಣೆಯ ಮಾಡುತಾನೇ
“ನೀನು ಏಳು ಸುತ್ತೀನ ಕ್ವಾಟೇಯ ಕಟ್ಟಬೇಕು
ಏಳು ಕೋಟಿ ಭಾಗ್ಯ ತುಂಬಬೇಕು”.
ಪರಶಿವನ ಮಾತ ಕೇಳಿಕಂಡು ಬ್ರಹ್ಮದೇವರು
ಅವರು ಮಾಯದಲ್ಲಿ ಮರೆಯಾದರು.
ಅವರು ಏಳು ಸುತ್ತೀನ ಕ್ವಾಟೆಯ ಮಾಡುತಾರೇ
ಏಳು ಕೋಟಿ ಭಾಗ್ಯ ತುಂಬುತಾರೇ.

೫

ಕಂದ ರಾಮಯ್ಯನಿಗೂ ಅಕ್ಕ ಗೌರಮ್ಮನಿಗೂ
ಅಂದದ ಪಲ್ಲಕ್ಕಿ ತಂದಾರು.

ಇಬ್ಬರನ್ನು ಅದರಲ್ಲಿ ಕೂರಿಸಿ ಮಾಶಿವನು
ಬಸುವನ ವಾನವ ಏರಿದಾನು.
ಬಸುವನ ವಾನವ ಏರಿಕಂಡು ಅವರೀಗ
ಭೂಲೋಕದ ಕಡೆಗೆ ಬರುತಾರೇ.
ಬರುವಂತ ದಾರಿಲಿ ಭಾವಯ್ಯನೊಂದಿಗೆ
ರಾಮಯ್ಯ ಸರಸ ಆಡುತಾನೇ.
“ನಾಮು ಕೂತಿರುದು ಅಂದದ ಪಲ್ಲಕ್ಕಿ ಭಾವಯ್ಯಾ
ನೀನು ಕೂರಿರುದು ಅಗಸರ ಕತ್ತೆ”.
ರಾಮಯ್ಯ ಆಡಿದಂತ ಮಾತನ್ನೇ ಕೇಳಿಕಂಡು
ಕ್ವಾಪವನೇ ಶಿವ ತಾಳುತಾನೇ

ಕ್ವಾಪವನ್ನು ತಾಳಿದಂತ ಮಾಶಿವನು
ಹಿಂದಿರುಗಿ ಕೈಲಾಸಕೆ ಹೊರುಟಾನು.
ಹಿಂದಿರುಗಿದ ಮಾಶಿವನು ಕಂಡಂತ ಗೌರಮ್ಮ
ಓಡೋಗಿ ಪಾದಕೆ ಬಿದ್ದಾಳು.
“ಭಾವ ಭಾಮೈಕಳ ಸರಸಾದ ಮಾತಿಗೆ
ಕ್ವಾಪಾವ ನೀಮು ಮಾಡಬೇಡಿ
ಭೂಲೋಕ್ಕೆ ಹೋಗುಮ ಹೆಚ್ಚಳದ ಹಬ್ಬಕೆ
ಹಿಂದಿರುಗಿ ಬನ್ನಿ” ಎಂದಳು.
“ನಾನಕ ಬರುದಿಲ್ಲ ಕೇಳಲೆ ಪಾರ್ವತಿ
ನಾಳೆ ಗಣಪತಿಯ ಕಳಗುವೆ

ನಾಳೆ ಗಣಪತಿಯ ಕಳಗೂವೆ ಇಬ್ಬಾರು
ಹೆಚ್ಚಾಲದ ಹಬ್ಬವ ಮಾಡೀರಿ.".
ಕೈಲಾಸಕೆ ಶಿವನು ಹೊಂಟೋದ ಮ್ಯಾಲೆ
ಗೌರಮ್ಮ ಕಂದನ ಕರೆದಾಳು
ಗೌರಮ್ಮ ರಾಮನನು ಕರಕಂಡು ಹೊರಟಾಳು
ಕೈಲಾಸವನ್ನೆ ತಾಯಿ ಬಿಡುತಾಳೇ.
ಭೀಮಾವತಿಗೆ ಬಂದಾನು ರಾಮಯ್ಯ
ಮತ್ತೇನು ದೇವ ನುಡಿದಾನು.
"ಲಕ್ಕೀಯ ಗುಳ್ಳೀಗೆ ಅಕ್ಕಯ್ನ ಕರಿಯಾದು
ಹೆಂಗೇಂತ ಹೇಚುಣೆ ಮಾಡುತಾನೇ.

ಅಮ್ಮನಿಗೆ ಒಂದು ಮಾತ ಹೇಳಿಬಿಟ್ಟು ಬತ್ತೀನಂತ
ಭೀಮಾವತಿಗೆ ಅವನು ಹೋಗುತಾನೇ.
ಗೌರಮ್ಮ ಅಕ್ಕಯ್ಯನ ಕೆರತಾವು ನಿಲ್ಸಿಬಿಟ್ಟು
ಅಮ್ಮಾನ ಬಳಿಗೆ ಹೋಗುತಾನೇ.
ಅಮ್ಮಾನ ತಾಕೆ ಬರುವಂತ ಕಾಲದಲಿ
ಏಳುಸುತ್ತಿನ ಕ್ವಾಟೆ ಕಾಣುವಾದು.
ಕ್ವಾಟೆಯ ಮಧ್ಯದಲಿ ಗುಡ್ಲು ಮಾಯಾವಾಗಿ
ತೂಗು ಮಂಚಾವು ತೂಗುತಾದೇ.
ಶಿವನ ಮಾಯಾದಿಂದ ಬಡಸ್ತಾನ ಹೋಗಿ
ಸಿರಿಸ್ತಾನ ಬಂದು ಕವಿದಾದೇ.

ತೂಗು ಮಂಚಾದ ಮ್ಯಾಲೆ ಇದ್ದಂತ ತಾಯಮ್ಮನ
ರಾಮಯ್ಯನಾಗ ಕೂಗುತಾನೇ.
ಕಂದನು ಕೂಗಿದ ಶಬ್ದವ ಕೇಳಿಕಂಡು
ದಡಬಡನೆ ತಾಯಿ ಏಳುತಾಳೇ.
ಕಂದ ರಾಮಯ್ಯನ ಕಂಡಂತ ಮಾದೇವಮ್ಮ
ಭಾಳ ಸಂತೋಷವ ಪಡುತಾಳೇ.
"ನೀ ಒಬ್ಬಾನೆ ಬಂದ್ಯಾ ಕಂದ ರಾಮಯ್ಯ" ಅಂತೇಳಿ
ಅಕ್ಕಾರೆಯಿಂದ ಕೇಳುತಾಳೆ.
"ನಾ ಅಕ್ಕ ಗೌರಮ್ಮನ ಒಂದಿಗೆರ ಬಂದಿ ತಾಯಮ್ಮ
ನಾ ಅಕ್ಕ ಗೌರಮ್ಮನ ಕರತಂದೀ".

ಭೀಮಾವತಿ ಪಟ್ಟಣದಲ್ಲಿ ನಿಂದಿದ್ದ ಹುಡುಗರು
ಓಡೋಡಿ ಆಗ ಬರುತಾರೇ.
ಓಡೋಡಿ ಆಗ ಬಂದಂತ ಹುಡುಗರು

ಉಟ್ಟ ಬಟ್ಟೆಯ ದಟ್ಟಿ ಬಿಗಿದುಟ್ಟ ಚಲ್ಲಣ
ದಿಟ್ಟ ತಾ ಇವನಾರಮ್ಮ

ಸಕಲ ವಿದ್ಯವ ಬಲ್ಲ ರಾಣಿರಂಬಲ ಅರಿಯ
ನಮ್ಮಯ್ಯ ಗಣನಾಯಕ

ವಾರೆ ಕಪ್ಪಿನ ಜಡೆ ಮೊರದಗಲ ಚಿಮಿಯವ್ವ
ಕ್ವಾರೆ ದವಡೆಯವನಿವನ್ಯಾರಮ್ಮ

ಸಿರಿಹೊನ್ನ ಮಹದೇವಿ ಸೋಬಾನ ಪಾಡಿದ
ಶ್ರೀ ಪುಣ್ಯನಿಧಿಯೇ ವಂದಿಸುವೆನು ಪರಮೇಶ್ವರ
ಶ್ರೀ ಪದಕೆ ಎರಗಿ ಶರಣೆಂದೆ

ಮಲ್ಲಯ್ಯ ಗೌರಮ್ಮ ಎಲ್ಲ ಸತ್ಯಾತ್ಮರು
ಬಲ್ಲಿದ ರಮಯ್ಯನ ಕರತನ್ನೀ ಕೈಲಾಸಕೆ
ಎಲ್ಲರೂ ಹೋದ ಕತೆ ಕೇಳಿ

ಎಲ್ಲರು ಹೋದ ಕತೆಕೇಳಿದ ಸತ್ಯಾತ್ಮರಿಗೆ
ಇದ್ದಲ್ಲೆ ಪಾಪ ಪರಿಹಾರ

ಶ್ರೀಶೈಲ ಪರ್ವತಕೆ ಹೋಗದಿದ್ದವರೆಲ್ಲ
ಹೋಗಿ ಬಂದವನ ಕತೆ ಕೇಳಿ ಸತ್ಯಾತ್ಮರಿಗೆ
ಇದ್ದಲ್ಲೆ ಪಾಪ ಪರಿಹಾರ

ಹೇಳುವರಿಗೆ ಹತ್ತು ಕೋಟ ಕೇಳುವರಗೆ ಹನ್ನೊಂದು ಕೋಟಿ
ಸುವ್ವಿ ಅಂದರೆ ಕರ್ಮ ಪರಿಹಾರ

ಅತ್ತೆ ಮಾವನ ಪಾದ ಮತ್ತೆ ಗುರುವಿನ ಪಾದ
ಹೊತ್ತಿರುವ ಭೂಮಮ್ಮ ನಿನ್ನ ಶ್ರೀಪಾದ

ತಾಯಿ ತಂದೆಯ ಪಾದ ಮತ್ತೆ ಗುರುವಿನ ಪಾದ
ಕುಂತಿರುವ ಸಭೆಯವರೆ ನಿಮ್ಮ ಶ್ರೀಪಾದ

ಭೀಮಾವತಿ ಎಂಬ ಪಟ್ಟಣದೊಳಗೊಬ್ಬ
ಬ್ರಾಹ್ಮಣ ಕುಲದ ಶಿವಭಕ್ತ – ಸೋಮಯ್ಯನವರ
ಪ್ರಿಯಾದ ಸತಿಯು ಮಹದೇವಿ

ತಾಯಿ ತಮ್ಮಾನ ಇಬ್ರ ಕರಕಂಡು
ತಾಯಿ ತಮ್ಮಾನ ಕರಕಂಡು ಗೌರಮ್ಮ
ಕೈಲಾಸಕೆ ಶಿವನೆ ಹೊರಟಾಳೋ.
ನರಲೋಕದಲ್ಲಿ ಗೌರಿಹಬ್ಬ ನಡಿಯಲೆಂದು ಗೌರಮ್ಮ
ಶಾಪಾವ ಅವಳು ಕೊಟ್ಟಾಳೋ.

ಭೀಮಾವತಿಯ ಅವರು ಬಿಟ್ಟಂತ ಕಾಲದಲ್ಲಿ
ಏಳು ಸುತ್ತೀನ ಕ್ವಾಟೆ ಮಾಯಾವು.
ಏಳು ಸುತ್ತೀನ ಕ್ವಾಟೆ ಏಳು ಕೋಟಿಯ ಭಾಗ್ಯ
ಅದು । ಮಾಯಾವೆ ಆಗಿಹೋಯಿತು.
ಗೌರಮ್ಮ ಕೊಟ್ಟಂತ ಶಾಪದ ಫಲವಾಗಿ
ಗೌರೀಯ ಹಬ್ಬ ನಿಂತೀತು.

ಮಂಗಳಂ

ಮಂಗಳಾರತಿಯ ಎತ್ತಿದರು
ಗೌರಮ್ಮನಿಗೆ । ಕರ್ಪೂರದಾರತೀಯ ಬೆಳಗಿದರು
ಮಂಗಳಾರತಿಯ ಎತ್ತಿದರು
ಗಣಪತಿಗೆ । ಕರ್ಪೂರದಾರತಿಯ ಬೆಳಗಿದರು
ನೀನೆ ಗತಿಯೆಂದು
ಗಣಪತಿಯ ಕೊಂಡಾಡುತ
ಎತ್ತಿದರಾರತೀಯ
ಗಣಪತಿಗೆ । ಬೆಳಗಿದರಾರತಿಯ
ಎತ್ತಿದರಾರತಿಯ
ಗೌರಮ್ಮನಿಗೆ । ಬೆಳಗಿದರಾರರಿಯ

– ಕೃತಿ: ನಡುನೀರ ತಂಪು

***

ಮೈದಾಳು ರಾಮಯ್ಯ

ಅಮ್ಮಮ್ಮ ಸರಸ್ವತಿ ಚಿನ್ಮಯ ಮೂರುತಿ
ನಿಮ್ಮೊಳಗಿವನಾರಮ್ಮ

ಕಾಮಸುತನ ವೈರಿ ಸೊಂಡಲ ಬೆನವಣ್ಣ
ನಮ್ಮಯ್ಯ ಗಣನಾಯಕ

ಇಸದ ಪಾತ್ರೆಯ ತಂದು ಜಂಗಮರಿಗೆ ನೀಡ್ಯಾಳು
ಅಕ್ಷಯ ಪಾತ್ರೆಗೆ ಆಗ ಮಾದೇವಿ – ಜಂಗಮರು
ಇಸವ ಸೇವನೆಯ ಮಾಡಿದರು

ಇಸವ ಸೇವನೆ ಮಾಡಿ ಬಂದ ಜಂಗಮರಾಗ
ಮಹದೇವಿಗೆ ಏನ ಹೇಳುತಾರೆ.

ಅಮ್ಮ ನಿನಗೆ ಪುತ್ರ ಸಂತಾನ ಬೇಕೆ? ನವಮಾಸ ಒಂಬತ್ತು ತಿಂಗಳು ತುಂಬಿ ನಿನ್ನ ಹೊಟ್ಟೆಯಲ್ಲಿ ಗಂಡುಮಗನಾಗುತ್ತಾನಮ್ಮ. ಹುಟ್ಟಿದ ಹನ್ನೊಂದು ದಿವಸಕ್ಕೆ ಮೈದಾಳರಾಮ ಅಂತ ನಾಮಕರಣ ಕರೀಬೇಕಮ್ಮ. ಮೂರು ವರ್ಷಕ್ಕೆ ಓದುವ ಮಠಕ್ಕೆ ಹಾಕಬೇಕಮ್ಮ. ನೀವು ದಂಪತಿಗಳು ಮಠದಿಂದ ಬರುವ ಹಾದಿಯಲ್ಲಿ ಕಾಳಿಂಗ ಸರ್ಪ ಕಾದಿರುತ್ತದೆ. ಸೋಮಯ್ಯನವರಿಗೆ ಸರ್ಪ ದೃಷ್ಟವಾಗುತ್ತದೆ. ಸೋಮಯ್ಯನವರು ಕೈಲಾಸವನ್ನು ಕಂಡುಬಿಡುತ್ತಾರೆ. ನಿಮ್ಮ ಭಾಗ್ಯ ಯಾರ್ಥಾರ್ಥವಾಗಿ ಕಳೆದು ಹೋಗುತ್ತದೆ. ನಿಮ್ಮ ತಾಯಿ ಮಕ್ಕಳಿಗೆ ಒಂದು ಬಟ್ಟೆ ಆಗ್ತದೆ. ಬ್ರಾಹ್ಮಣ ಮನೆಯ ನಿತ್ಯಯಾತ್ರ ಆಗ್ತದೆ. ಇದು ನೆನಪಿನಲ್ಲಿ ಚಂದಾಗಿಟ್ಟುಕೊ ಹಾಗೆಂದು ಸ್ವಾಮಿ ವರವನ್ನು ಕೊಟ್ಟು ಕೈಲಾಸಕ್ಕೆ ಗುರುವು ತೆರಳಿದರು

ಸುವ್ವಿ ಹೇಳೊ ಲಿಂಗವೆ ಸುವ್ವಿ ಹೇಳೊ ಶ್ರೀಗುರುವೆ
ಸವ್ವಿ ಬಾ ಚನ್ನರಾಮಯ್ಯ

ನವ ಮಾಸ ಒಂಬತ್ತು ತಿಂಗಳು ತುಂಬಿತು
ಪುತ್ರ ಸಂತಾನ ಆಗುವುದು

ಕಂದನಿಗಾದರೆ ಮೀಯಾಣ ಮಾಡಿಸಿ
ಸಕ್ಕರೆ ದಾನವ ಮಾಡಿದರು

ಅನ್ನದಾನವ ಮಾಡಿದರು ಅವರಾಗ
ಅರವಟ್ಟಿಗೆ ಹಾಕಿಸಿ ಬಡವರಿಗೆ

ಅನ್ನದಾನವ ಮಾಡಿ ಬಟ್ಟೆದಾನವ ಮಾಡಿ
ಕಂದನ ಹೇಗೆ ಸಾಕುವರು – ರಾಮಯ್ನ
ಅಂಗೈಯ ಮೇಲೆ ಸಾಕುವರು

ಒಂದು ವರ್ಷವು ತುಂಬಿ ಎರಡು ವರ್ಷವು ತುಂಬಿ
ಮೂರೆಂಬೊ ವರ್ಷ ಬಟುವಾಯ್ತು

ಮಕ್ಕಳಿಲ್ಲದೆ ತಾಯಿ ದುಃಖವನೆ ಮಾಡಿದಳು
ಮುಕ್ಕಣ್ಣ ಶಿವನ ವರದಿಂದ – ರಾಮಯ್ಯ
ಭೀಮಾತಿ ಒಳೆಗೆ ಹುಟ್ಟುವನು

ಉತ್ತರ ದಿಕ್ಕಿನೊಳಗೆ ಉತ್ತಮ ಪುರವುಂಟು
ಮರ್ತ್ಯಕೆ ಮಕರ ಕಳಸಾವು – ಭೀಮಾವತಿಯು
ಉತ್ತಮ ಪುರವೆಂಬ ಹೆಸರುಂಟು

ಸುವ್ವಿ ಹೇಳೊಲಿಂಗವೆ ಸುವ್ವಿ ಹೇಳೊ ಶ್ರೀಗುರುವೆ
ಸುವ್ವ ಬಾ ಚನ್ನರಾಮಯ್ಯ

ಪರಮೇಶ್ವರ ಸ್ತೋತ್ರವನ್ನು ಮಾಡುತ್ತಾ ಮಕ್ಕಳಿಲ್ಲದ ಚಿಂತೆಯಲ್ಲಿ ಇದ್ದಾರೆ. ಅಮ್ಮಯ್ಯ ನೀರಿಗೆ ಹೋದರೆ ಪಟ್ಟಣದ ನಾರಿಯರು ಹುಟ್ಟು ಬಂಜೆ ನೀರಿಗೆ ಬರುತಾಳೆ, ನಾವು ಬಂಜೆ ಆಗುತೇವೆಂತ ದೂರ ಸರಿಯುತಾರೆ. ಸೋಮಯ್ಯ ನ್ಯಾಯ ಪಂಚಾಯಿತಿಗೆ ಹೋಗಿ ಕುಂತರೆ ಕುಂತಿದ್ದ ಸ್ಥಳ ಬಂಜೆಯಾಯಿತು ಎಂದು, ಹನ್ನೆರಡು ಗುದ್ದಲಿ ಮಣ್ಣು ತೆಗೆಸಿ ಹೊಸ ಮಣ್ಣು ತರಿಸಿ, ಸಗಣಿ ಹಾಕುವರು. ಪುತ್ರ ಹೀನರಾದ ಮೇಲೆ ಭೂಲೋಕದಲ್ಲಿರಬಾರದು, ಇಸ ಸೇವನೆ ಮಾಡಿ ಪ್ರಾಣತ್ಯಾಗ ಮಾಡಬೇಕೆಂಬುದಾಗಿ ಇಸದ ಗಂಜಿ ತಯಾರು ಮಾಡಿದರು ದಂಪತಿಗಳು. ಮಾತನ್ನು ಹೊಂದಿಸಿಕೊಂಡು ಸ್ನಾನ ಸಂಧ್ಯಾವಂದನೆ ಮಾಡಿಕೊಂಡು ಪರಮಾತ್ಮನ ತೋತ ಮಾಡಿ ಮಹಾದೇವಮ್ಮನವರು ತೋಟದಲ್ಲಿ ಗಂಜಿ ಇಟ್ಟು ಪಟ್ಟೆ ಮಂಚದ ಮೇಲೆ ದಂಪತಿಗಳು ಆಲೋಚನೆ ಮಾಡಿಕೊಂಡು ದುಃಖ ಮಾಡುವುದು ಶಂಭೋಶಂಕರನಿಗೆ ಅರುವಾದೊ.

ಮಹದೇವಮ್ಮನವರು ಸೋಮಯ್ಯನವರು ಅನ್ಯಾಯವಾಗಿ ಪ್ರಾಣ ಹತ್ಯವಾಗುವರೆಂದು ಸ್ವಾಮಿ ಜಂಗಮ ರೂಪವನ್ನೆ ಧರಿಸಿ ಮಾದೇವಮ್ಮನವರ ಮನೆಗೆ ಬಂದರು. ಮಾದೇವಿ ಪ್ರಾತಃಕಾಲದಲ್ಲಿ ಬಂದ ಜಂಗಮರಿಗೆ ಇಷ್ಟು ಭಿಕ್ಷ ನೀಡುವುದಿಲ್ಲವೆ. ಮುತ್ತು ನವರತ್ನ ಕೊಡಲು ಹೋದಳು. ಆಗ ಜಂಗಮರು ತಾಯಿ ಹಸಿದು ಬಂದಿದ್ದೇನೆ ಇಷ್ಟು ಅನ್ನ ಕೊಡು ಎಂದು ಕೇಳುತ್ತಾರೆ. ಒಂದು ಗಂಟೆ ಅವಕಾಶ ಕೊಡಿ; ಅನ್ನ ಕೊಡುವೆ ಎಂದು ಮಾದೇವಿ ಹೇಳುತ್ತಾಳೆ. ಇದು ಇಕ್ಕಲಾರದ ಮಾತು ಒಂದು ಗಂಟೆ ಇರಲಾರೆ ಎಂದು ಸ್ವಾಮಿ ಹೇಳುತ್ತಾನೆ. ಸ್ವಾಮಿ ಮಕ್ಕಳಿಲ್ಲದರಿಂದ ಕುಡಿದು ಸಾಯಲು ಇಸದ ಗಂಜಿಯನ್ನು ಮಾಡಿದ್ದೇವೆ; ಅದು ಮಾತ್ರ ಇದೆ. ಮತ್ತೇನು ಇಲ್ಲ ಎಂದು ಮಹದೇವಮ್ಮ ಹೇಳುತ್ತಾಳೆ.

ಹಸಿವಿನ ಯಾಳ್ಯೆಕೆ ಇಸವಾದರೇನಮ್ಮ
ಇಸದ ಗಂಜಿಯ ತಂದು ನೀಡಮ್ಮ

ಸುವ್ವಿ ಹೇಳೊ ಲಿಂಗವೆ ಸುವ್ವಿ ಹೇಳೊ ಶ್ರೀಗುರುವೆ
ಸುವ್ವ ಬಾ ಚನ್ನರಾಮಯ್ಯ

ರಾಮಯ್ನ ಕರೆತಂದು ಗುರುವಿನ ಕೈಲಿಕೊಟ್ಟು
ಚನ್ನಾಗಿ ಇದ್ಯೆ ಕಲಿಸೀರಿ

ಆಗ ಮೈದಾಳ ರಾಮಯ್ಯನವರು ಆಲೋಚನೆ ಮಾಡುತಾವರೆ ಹಕ್ಕಿ ಸಾಕಿ
ಬೆಕ್ಕಿನ ಕೈಲಿ ಕೊಟ್ಟಂತೆ ನಮ್ಮ ತಾಯಿಯವರು

ಹೆಣವನ್ನು ತೊಳೆದು ಕುರುಜಿಗೆ ಕುಂಡರಿಸಿ
ಸಿರಿಗಂಧವ ಸೌದೆ ತರಿಸಿದರು

ಬನ್ನಿ ಪತ್ರೆಯ ಸೌದೆ ಹೊನ್ನರಳಿ ಸೌದೆಯು
ಸತ್ತ ಸೋಮಯ್ಯನಿಗೆ ಅಣಿಯಾಗಿ

ಕುರುಜನ್ನೆ ಹೊತ್ತುಕೊಂಡು ಮಸಣಕ್ಕೆ ಬಂದರು
ಅಗ್ನಿಯ ಒಲಿಸಿ ಸೋಮಯ್ಯಗೆ – ಅವಾಗ
ಸುಟ್ಟು ಭಸ್ಮಾಂಕಾರ ಮಾಡಿದರು

ಸುಟ್ಟು ಭಸ್ಮಾಂಕಾರ ಮಾಡಿದ ಸಭೆಯಲ್ಲಿ
ಸ್ನಾನ ಸಂಧ್ಯಾವಂದನೆ ಮಾಡಿಕೊಂಡು – ಆವಾಗ
ತಮ್ಮ ಅರಮನೆಗೆ ಬಂದರು

ಒಂದು ದಿನ ತುಂಬಿತು ಎರಡು ದಿನ ತುಂಬಿತು
ಮೂರೆಂಬೊ ದಿನವು ಬಟುವಾಯ್ತು

ಮೂರೆಂಬೊ ದಿನಕೆ ಮೈದಾಳ ರಾಮನು
ಹಾಲು ತುಪ್ಪವನೆ ಮಾಡಿದನು

ಹನ್ನೊಂದು ದಿನಕೆ ಬ್ರಾಹ್ಮಣರ ಕರೆಸಿದನು
ಪಂಚಾಂಗ ತಗುದು ನೋಡಿಸಿದ

ಒಳ್ಳೇಯ ಗಳಿಗೇಲಿ ಒಳ್ಳೇಯ ತಿಥಿಯಲ್ಲಿ
ತಿಥಿಯ ಮಾಡಿ ಗತಿಯ ಹೊಂದಿಸಿದ

ಬ್ರಾಹ್ಮಣರ ಕರೆಸಿ ಪಿಂಡವ ಹಾಕಿಸಿದ
ತಂದೆಯ ಶಿವಪಾದ ಸೇರಿಸಿದ

ತಂದೆಯು ಶಿವಪಾದ ಸೇರಿದ ಗಳಿಗೇಲಿ

ಜಿನಕೆ ಬಾ ಅಂದರೆ ಜಾಮಕೆ ಬರುವೋನು
ಮೂರು ವರ್ಷದ ಮಗುವು ರಾಮಯ್ಯ

ಮೂರು ವರ್ಷದ ಮಗುವು ರಾಮಯ್ಯನಾದರೆ
ಆರು ವರ್ಷದೊನಾಗಿ ಕಾಣುವನು

ಇರುಳೆಯು ಗೋಲಿಯು ಲಗ್ಗೆಯ ಚಂಡಿನಲಿ
ಎಲ್ಲರನು ಸೋಲಿಸಿ ಬರುವೋನು

ಮೈದಾಳು ರಾಮನ ಪುಕಾರು ಮಕ್ಕಳಿಂದ ಮಹದೇವಮ್ಮನವರಿಗೆ ಬಂದಿತು. ಸೋಮಯ್ಯನೋರನ್ನು ಕರೆದು ನಮಗೆ ಸಕಲ ಸಂಪತ್ತು ಪರಮೇಶ್ವರ ಕೊಟ್ಟಿದ್ದರೂ ವಿದ್ಯವೊಂದೆ ಸಕಲ ಸಂಪತ್ತು ಎಂದು ಮಹದೇವಮ್ಮ ಹೇಳಿ.

ಸತಿ ಪತಿಯರು ಕೂಡಿ ಸ್ನಾನವ ಮಾಡಿಸಿ
ಎಂಬತ್ತು ವರದ ಹರಿವಾಣ
ಎಂಬತ್ತು ವರದ ಹರಿವಾಣದಲಿ ಅವರೀಗ
ಕಾಣಿಕೆ ತಕ್ಕೊಂಡು ಹೊಂಟರು

ಇಗ್ಗುನೇಶ್ವರನ ಪೂಜೆಗೆ ಅವರಾಗ
ಹಣ್ಣು ಕಾಯಿಯ ತಕ್ಕೊಂಡು
ಹಣ್ಣು ಕಾಯಿಯು ಅಕ್ಷತೆ ತಕ್ಕೊಂಡು
ಗಂಧ ಚಂದ್ರ ಕುಂಕುಮವು ಸಯಿವಾಗಿ
ಓದುವ ಮಠಕೆ ಬರುತಾರೆ

ಓದುವ ಮಠಕ್ಕೆ ಬಂದು ಮಹದೇವಿ ಸೋಮಯ್ಯ ಅವರು ಮಗನಿಗೆ ವಿದ್ಯೆ ಬುದ್ಧಿ ಕಲಿಸಿರೆಂದು ಎತ್ತಿ ಕರಗಳನ್ನು ನಮಿಸಿದರು.

ಸ್ವಾಮಿ ಉಪಾದ್ಯಾಯರೆ ಇರುಳೆ ಗೋಲಿ ಲಗ್ಗೆ ಚಂಡಿನಲ್ಲಿ ಬಹಳ ಕೇಡುಗನಾಗಿದ್ದಾನೆ. ನಮ್ಮ ಮಗನನ್ನು ಹಬ್ಬ ಅಂದರೂ ಮನೆಗೆ ಕಳಿಸಬೇಡಿ. ತಿಂಗಳಿಗಾಗುವ ಭತ್ಯ ಕೊಟ್ಟುಬಿಡುತ್ತೇವೆ. ತಮ್ಮಲ್ಲೆ ಊಟ ಮಾಡಬೇಕು; ತಮ್ಮಲ್ಲೆ ಓದಬೇಕು ಇದ್ಯ ಕಲಿತ ಮೇಲೆ ಗುರು ಕಾಣಿಕೆ ಒಪ್ಪಿಸಬೇಕು. ನಾವು ಮೊದಲೆ ಕೊಡುತ್ತೇನೆ.

ಎಂಬತ್ತು ವರದ ಗುಂಡಿ ಹರಿವಾಣದಲಿ
ಕಾಣಿಕೆಯ ಮಡಗಿ ಕೊಡುತಾರೆ

ಇಗ್ಗುನೇಶ್ವರನ ಪೂಜೆಯ ಮಾಡಿ ಬಿಟ್ಟು
ಮಕ್ಕಳಿಗೆ ಸಕ್ಕರೆಯ ನೀಡುತಾರೆ

ಸತ್ಯದ ನುಡಿಯ ನುಡಿದನು.

ಒಡಹುಟ್ಟು ಇಲ್ಲದ ತಬ್ಬಲಿ ಮಗನೀನು
ಅಕ್ಕ ಭಾವಾಜಿ ನಿನಗಿಲ್ಲ – ಎಲೆ ರಾಮ
ಹಬ್ಬ ಅಂದರೆ ನಿನಗೆಲ್ಲಿ

ಅಕ್ಕ ಭಾವಾಜಿ ಇಲ್ಲವೊ ಎಲೆರಾಮ
ಎನ್ನುತ ಈಂಕಾರ ಮಾಡುತಾರೆ

ಮಕ್ಕಳಮಾತನೆ ಕೇಳಿದನು ರಾಮಯ್ಯ
ದುಃಖ ಮಾಡಿಕೊಂಡು ಒರಗಿದನು

ಸುವ್ವಾ ಬಾ ಚನ್ನಬಸವಯ್ಯ

ರಾಮಯ್ಯನ ದುಃಖವನ್ನು ನೋಡಿ ಉಪಾಧ್ಯಾಯರಿಗೆ ಹೊಟ್ಟೆ ಉರಿಯಿತು. ರಾಮಯ್ಯನ ಹತ್ತಿರ ಬಂದು ತಲೆಯನ್ನು ಸವರಿ ಕಣ್ಣೀರ ತೊಡೆದು.

ಅಕ್ಕನ ಹೆಸರೇನು ಭಾವಾಜಿ ಹೆಸರೇನು
ನಿಮ್ಮ ಅಕ್ಕ ಭಾವಾಜಿ ಊರ ಹೆಸರೇನು

ನಿಮ್ಮ ಅಕ್ಕ ಭಾವಾಜಿಯ ಕರೆತರಲು ರಾಮಯ್ಯ
ಮನೆಗಾದರೆ ನಿನ್ನ ಕಳಿಸುವೆ – ರಾಮಯ್ಯ
ನಿನ್ನ ಅಕ್ಕ ಭಾವರ ಹೆಸರೇಳು

ಅಕ್ಷರದ ರೂಢೀಲಿ ಮರೆತೇನು ಹೆಸರನ್ನು
ಅಮ್ಮನ ಕೇಳಿ ಬರುತೀನಿ – ಎನ್ನುತ
ಚಮಕಿನ ಮಾತ ಆಡುತಾನೆ

ಹಲಗೆ ಬಳಪವ ಕಂಕುಳಲ್ಲಿ ಹಿರುಕಿದನು
ಓದಿಸೋ ಗುರುವಿಗೆ ಶರಣೆಂದು – ರಾಮಯ್ಯ
ಮಂದಿರರಾಗಿ ನಡೆದಾನು

ಮಂದಿರಕಾಗಿ ನಡೆದು ಬರುವಂಥ
ಮಗನನ್ನ ಮಾಹದೇವಿ ನೋಡಿದಳು

ಸ್ವಾಮಿ ಕೊಟ್ಟಿದ್ದಂಥ ಭಾಗ್ಯವು – ಎಲ್ಲಾವು
ಮಾಯವಾದರೆ ಆಯಿತಲ್ಲ

ತಾಂಬ್ರವ ಚೊಂಬ ತಕ್ಕೊಂಡು ಮಾದೇವಿ
ಮನೆ ಮನೆಗೆ ಹೋಗಿ ವರಧ್ಯಾನ – ತಗತಂದು
ಮಗನನ್ನಾದರೆ ಸಾಕುತಾಳೆ
ಲಕ್ಕೀಯ ಸೊಪ್ಪಿನ ನೆರಕಿಯು ಅವರೀಗೆ
ಮುತ್ತುಗದ ಹಾಳೆಯ ಕದವಯ್ಯ – ಆವಾಗ
ಇಟ್ಟುಂಟು ಅವರಿಗೆ ಬಡಸ್ತನ

ಅವರಿಗೆ ಗೋರ ಗರೀಬ ತನ ಬಂದು ಬಿಡ್ತು. ತಾಯಿಯಾದ ಮಹಾದೇವಿಯು ಮಗನಾದ ಮೈದಾಳ ರಾಮಯ್ಯನಿಗೆ "ಬಡಸ್ತನ ಇನ್ನೂ ಕೊಟ್ಟಟ್ಟು ಕೊಡಲಿ ನೀನು ಇದ್ಯ ಮಾತ್ರ ಬಿಡಬೇಡ. ಭಿಕ್ಷಮಾಡಿ ನಿನಗೆ ಹಿಟ್ಟಾಕುತೀನಿ. ನಾನು ಸ್ವಲ್ಪ ತಿಂತೀನಿ. ಮಠದಲ್ಲಿ ಓದಿಕೊಂಡು ಇರೋಗು" ಎಂದು ಮಗನನ್ನು ಕಳಿಸಿದಳು.
ಮಠಕೆ ಬಂದನು ಮೈದಾಳ ರಾಮಯ್ಯ
ನಾಕು ವೇದವನು ಕಲಿತಾನು
ಆರು ಶಾಸ್ತವು ಹದಿನೆಂಟು ಪುರಾಣ
ಆರು ವರ್ಷಕೆ ಮುಗಿಸಿದ

ಆ ಪಟ್ಟಣದಲ್ಲಿ ದೀಪಾವಳಿ ಹಬ್ಬ ಬಂತು. ಅಮಾಸೆ ತುಂಬಿ ಸಮದಿನವಾಯಿತು. ಮನೆಗೆ ಅಕ್ಕಭಾವ ಬರಲಿಲ್ಲ ಅನ್ನುತ ಚಿಕ್ಕಮಕ್ಕಳೆಲ್ಲ ನುಡಿದರು. ಗುರುಗಳು ರಾಮನ ಬುದ್ಧಿ ನಿಮಗೆ ಇಲ್ಲವೆ ಅಂದು ಅವರ ಕೈಯಲ್ಲಿ ಕಿವಿ ಹಿಡಿಸುವುದು, ಕುರುಚಿ ಕುಂಡ್ರಿಸುವುದು, ಕೋದಂಡ ಹಾಕಿಸುವುದು ಈ ರೀತಿ ಮಾಡುತ ಇದ್ದಾರಲ್ಲ. ಎಷ್ಟೇ ಆಗಲಿ ಶಿವ ಬ್ರಾಹ್ಮಣರ ಮನೇಲಿ ಇದ್ಯೆ ಕಲಿತು ಮುಂದುವರಿದಬಿಟ್ಟ ಎಂದು ಮಕ್ಕಳೆಲ್ಲ ಶತ್ರುಗಳಾದರು. ದೀಪಾವಳಿ ಹಬ್ಬಕ್ಕೆ ಅಕ್ಕನನ್ನು ಕರೆಸುತೀವಿ ಅಂತ ಮಕ್ಕಳೆಲ್ಲ ಮಾತಾಡಿಕೊಂಡರು. ಅವರ ಮಾತುಗಳನ್ನು ಕೇಳಿಕೊಂಡು ರಾಮಯ್ಯ.

ಅಕ್ಕನ ಸುದ್ದೀಯ ಕೇಳಿಕೊಂಡ ಆಗಲೆ
ಸಕ್ಕರೆ ತಿಂದಂತೆ ಆಯಿತು.

ಅಕ್ಕನು ನನಗುಂಟು ಭಾವನು ನನಗುಂಟು
ಸರ್ವಭಾಗ್ಯವು ನನಗುಂಟು

ಅಕ್ಕ ಭಾವನ ಕರೆತಂದು ನಿಮ್ಮಂತೆ
ಹಬ್ಬವ ನಾನು ಮಾಡುತೀನಿ – ಎಂಬುತ

ಕಂದ ಪೂರ್ವದ ಫಲಗಳನು

ಪೂರ್ವದ ಪುಣ್ಯದ ಫಲದಿಂದ ನೀ ಮಗನೆ
ಹುಟ್ಟಿಬಂದೆ ನನ್ನ ಹೊಟ್ಟೆಯಲ್ಲಿ – ರಾಮಯ್ಯ
ಹೊಂದಿಗುಟ್ಟಿದ ಅಕ್ಕ ಮೊದಲಿಲ್ಲ

ಮಕ್ಕಳಿಲ್ಲದೆ ನಾವು ದುಃಖವನ್ನೆ ಮಾಡುವಾಗ
ಮುಕ್ಕಣ್ಣ ಶಿವನ ವರದಿಂದ – ಕಂದಣ್ಣ
ಹುಟ್ಟಿದವನೆ ಒಬ್ಬ ಮಗರಾಮ

ತಂದೆ ಇಲ್ಲದ ಮಗನೆಂದು ನಿನಗಂದವರು ಯಾರು
ಎನ್ನುತ ಮಹದೇವಿ ಆವಾಗ – ರಾಮಯ್ನ
ಕಣ್ಣೀರ ತಾನು ಒರೆಸ್ಯಾಳು

ಒಡಹುಟ್ಟಿಲ್ಲದ ಮೇಲೆ ಬಾಳ ಬಾರದು ತಾಯೆ
ಭೀಮಾವತಿಯಲ್ಲಿ ನಾವು ಇರಬಾರದು

ಇದು ನಾವು ತಂದ ಕರ್ಮದ ಫಲವಮ್ಮ
ಹಿಂದಲ ಜನ್ಮದ ಕರ್ಮವು

ತಾಯಿ ಬೋದೆನೇನೋ ತಂದೆ ಕಾಲಲಿ ಒದ್ದೆನೊ
ತೆಂಗಿನ ಮರವ ಕಡಿದೇನೊ – ಕಾಣರಣದಿಂದ
ಒಂದಿಗುಟ್ಟಿದ ಅಕ್ಕ ಮೊದಲಿಲ್ಲ

ಹರಿಶರಣ ವ್ರತವ ನಿಂದಿಸಿದೆನೊ ನನತಾಯೆ
ಅಕ್ಕಯ್ಯನ ನಾನು ಹಳಿದೇನೊ

ಗುರು ಹಿರಿಯರ ವ್ರತವ ಹೊಡೆದೆನೊ ನನ ತಾಯೆ
ಅಕ್ಕ ತಂಗೆರ ಫಲ ನನಗಿಲ್ಲ

ಒಡ ಹುಟ್ಟಿಲ್ಲದ ಮೇಲೆ ಮಡಗೋದಿಲ್ಲ ಪ್ರಾಣವ
ಬಿಡುವೆನು ನನ್ನ ಹರಣವ
ಮಗನು ಆಡಿದ ಮಾತ ಮಾದೇವಿ ಕೇಳಿದಳು
ಗೋಳೆಂದು ದುಃಖ ಮಾಡುತಾಳೆ

ಅಮ್ಮಯ್ಯ ಅಳಬೇಡ ಸುಮ್ಮನೆ ಇರುತಾಯೆ

ನಡು ಬೀದಿಯಲ್ಲಿ ನಡೆದು ಬರುವಂಥ
ಮಗನ ದಾರಿಯ ನೋಡಿದಳು
ಗುಡು ಗುಡನೆ ಬಂದು ಮಗನ ಎತ್ತಿಕೊಂಡು
ತನ್ನ ಮನೆಗೆ ಕೊಂಡೋಗಿ ಬಿಡುತಾಳೆ

ತಂದೆ ಇಲ್ಲದ ಮಗನ ನಿಂದಿಸಿದವರ್‍ಯಾರಪ್ಪ
ಎನ್ನುತ ಮಗನ ಮುದ್ದಾಡಿ – ಮಹಾದೇವಿ
ಕಂದನ ಕಣ್ಣೀರ ಒರೆಸ್ಯಾಳೆ

ಯಾರಯ್ಯ ಹೊಡೆದವರು ಯಾರಯ್ಯ ಬೈದವರು
ಲೋಲ ರಾಮಯ್ಯ ಉಸುರಯ್ಯ

ಓದುವ ಮಠದಲ್ಲಿ ಆದಂತ ಕರ್ಮಗಳ
ಏನ ಹೇಳಲಿ ಹಡೆದವ್ವ

ಅಕ್ಕನಿಲ್ಲ ಎಂದು ಆಡಿ ಜರಿದರು ನನ್ನ
ಹೆತ್ತಮ್ಮ ಹೇಳು ನಿಜವಾಗಿ

ಭಾವನಿಲ್ಲವೆಂದು ಒಳಗೆಲ್ಲ ಜರುದಾರೆ
ಭಾವ ಸೋದ್ರಾವು ನನಗುಂಟೆ

ಅಕ್ಕನಿಲ್ಲ ಎಂದು ಆಡಿ ಜರಿದರು ನನ್ನ
ಹೆತ್ತಮ್ಮ ಹೇಳು ನಿಜವಾಗಿ

ಭಾವನಿಲ್ಲವೆಂದು ಒಳಗೆಲ್ಲ ಜರುದಾರೆ
ಭಾವ ಸೋದ್ರಾವು ನನಗುಂಟೆ

ಅಕ್ಕ ಭಾವರ ನೀನೀಗ ತೋರಬೇಕು
ನಾ ಹೋಗಿ ಅವರ ಕರೆತರುವೆ

ಅರಿಯುದ ಮಗನಿಗೆ ಯಾರು ಹೇಳಿದರೆಂದು
ಮಹಾದೇವಿ ಮರಗಿ ಅತ್ತಾಳು

ಹೀಗೆ ಅನೇಕವಾಗಿ ದುಃಖ ಮಾಡುತ್ತಾ

ಕಂದ ಕೇಳೋ ರಾಮಯ್ಯ ಮುಂದೆ ಹೇಳುವ ವಾರ್ತೆ

ಶರಣ ಪರಿವಾರ / ೨೯೬

ನಿನ್ನ ಪಾಲಿನ ಋಣ ತೀರಿತು – ಎನುತೇಳಿ
ತಾಯಿ ಪಾದಕ್ಕೆ ಶರಣೆಂದು

ಎದ್ದನಲ್ಲೇ ರಾಮಯ್ಯ ತೆಗೆದನು ಚಂದ್ರಾಯುಧವ
ಹರನೆ ಜಗದೀಶ ಗತಿಯೆಂದು

ಹರನೆ ಜಗದೀಶನ ಶ್ರೀಪಾದವ ನೆನೆಯುತ
ಎತ್ತಿ ಸಿರಸಿಗೆ ಕೈಯ ಮಡಗಿದ

ಮಗನ ಕಾರ್ಯವ ನೋಡಿದಳು ಮಹಾದೇವಿ
ಮಗನ ಮುಂಗೈಯ ಬಿಗಿದಬ್ಬಿ – ಮಹಾದೇವಿ
ಮಗನಿಗೆ ಏನಂದು ಹೇಳುತಾಳೆ

ಮಗನೆ ಅಕ್ಕನು ಇದ್ದಾರೆ ಭಾವನು ಇದ್ದಾರೆ
ಮಿಕ್ಕ ಬಾಂಧವರು ಇದ್ದಾರೆ – ಕಂದಯ್ಯ
ಕತ್ತೀಯ ಬಿಟ್ಟು ಮಾತಾಡೋ

ಮೊದಲೆ ಈ ಮಾತ ಯಾಕಮ್ಮ ಹೇಳಲಿಲ್ಲ
ಅಕ್ಕ ಎಲ್ಲಿರುವಳು ತೋರಮ್ಮ

"ನಿಮ್ಮ ಅಕ್ಕಯ್ಯನವರನ್ನು ಕೊಟ್ಟಿರುವುದು ಬಹಳ ದೂರ. ಹುಲಿ ಕರಡಿ ಭಯಂಕರ ಜಾಸ್ತಿ. ನೀನು ಬಾಲಕ ಹೋಗಲಾರೆ ಎಂದು ಸುಳ್ಳು ಹೇಳಿದೆ. ನೀನು ಕತ್ತಿ ತಕ್ಕಂಡು ಕಡಾಖಂಡಿತ ನಿಂತುಕಂಡ ಮೇಲೆ ನಾನ್ಯಾಕಪ್ಪ ಸುಳ್ಳು ಹೇಳಬೇಕು ನಿಜವನ್ನು ಹೇಳುತ್ತೇನೆ ಕೇಳು". ಅಮ್ಮ ಹಾಗಿದ್ದ ಮೇಲೆ ನಮ್ಮ ಅಕ್ಕನ ಹೆಸರೇನು

ಶ್ರೀ ಗೌರಿ ಅಕ್ಕಯ್ಯ ಇರುತಾಳೆ ಕಂದಣ್ಣ
ರಂಭೆ ಊರ್ವಸಿಗಿಂತ ಕಡು ಚಲುವೆ – ಕಂದಣ್ಣ
ಪ್ರಿಯದ ಅಕ್ಕಯ್ಯ ಸಿರಿಗೌರಿ

ಅಕ್ಕಯ್ಯನ ಹೆಸರು ಗೌರಮ್ಮ ಆದ ಮೇಲೆ
ಭಾವಾಜಿ ಹೆಸರ ಹೇಳಮ್ಮ

ಲೋಕಕೆ ದೊಡ್ಡೋರ ಹೆಸರ ಹೇಗೆ ಹೇಳಲಿ
ಎನ್ನುತ ಮಹದೇವಿ ಮನದಲ್ಲಿ – ಆಗಲೆ
ಮರುಗಿ ಅವಳಾದರೆ ಅಳುತಾಳೆ

ಅಲ್ಲಿ ಇಲ್ಲಿಗೆ ವಾಸ ಕಲ್ಯಾಣಕೆ ಬಸವೇಶ
ಮಲ್ಲಯ್ಯ ಇರುವೋದು ಮುಂದಕೆ – ಕೈಲಾಸ
ಶ್ರೀಶೈಲ ಪರ್ವತವು ತಿಳಿಯಪ್ಪ

ಮಲ್ಲಯ್ಯ ಇರುವೋದು ಶ್ರೀಶೈಲ ಪರ್ವತವು
ಅದು ಒಂದು ನೆಲೆ ಅವರೀಗೆ

ಅಕ್ಕಯ್ಯನ ಊರು ಹೇಳಿದಲ್ಲ ಅಮ್ಮಯ್ಯ ದೀಪಾವಳಿ ಹಬ್ಬಕ್ಕೆ
ಅವರನ್ನು ಕರೆತರಬೇಕು ಎಂದು ರಾಮಯ್ಯ ತಾಯಿಗೆ ಹೇಳುತಾನೆ

ಬುತ್ತಿಯ ಕಟ್ಟಮ್ಮ ಶೀಘ್ರದಲಿ ನನ ತಾಯಿ
ಇಂದೋಗಿ ನಾಳೆ ಅಕ್ಕಯ್ನ – ಕರೆತರುವೆ
ಕಟ್ಟಮ್ಮ ಬುತ್ತಿ ಶೀಘ್ರದಲಿ

ಹಾಲು ಅನ್ನದ ಬುತ್ತಿ ಬೇಗನೆ ಕಟ್ಟಮ್ಮ
ಭಾವ ಮಲ್ಲಯ್ಯನ ಕರೆತರುವೆ

ಪರ್ವತ ಅಂದರೆ ಅರವತ್ತು ಗಾವುದ
ಹೇಗೆ ಹೋದೀಯೊ ಮಗರಾಮ

ನೇತ್ರ ಕರುಡಾದರೆ ಲೋಕ ಕಾಣೋದಿಲ್ಲ
ನಾಲಗೆ ಕುರುಡೆ ಮಹಾದೇವಿ

ಹಾಲು ಅನ್ನದ ಬುತ್ತಿ ಬೇಗನೆ ಕಟ್ಟಮ್ಮ
ಭಾವ ಮಲಯ್ಯನ ಕರೆತರುವೆ

ಬಡವರು ನಾವಲ್ಲೊ ಬಲ್ಲಿದರು ನಿಮ್ಮ ಭಾವ
ಬಡವರ ಮನೆಗೆ ಬಂದಾರೆ – ನನ ಮಗನೆ
ಏನುಂಟು ನಮ್ಮ ಮನೆಯಲ್ಲಿ

ಲಕ್ಕಿ ಸೊಪ್ಪಿನ ನೆರಿಕೆ ಮುತ್ತುಗದ ಹಾಳೆಲೆ ಕದವು
ಇಷ್ಟುಂಟು ನಮಗೆ ಬಡಸ್ತನ

ನಿಮ್ಮ ಅಕ್ಕಯ್ಯನವರು ಬಂದರೆ ಸಾಮಾನ್ಯವಾಗಿ ಬಂದಾರೆ ! ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣ ಮಹಾತ್ಮರು ಕೈಲಾಸದಿಂದ ಬರುತ್ತಾರೆ. ಅರವತ್ತಾರು ಕೋಟಿ ಪುರಾತಮರು ಬರುತ್ತಾರೆ. ನೂರೊಂದು ಜನ ಮುತ್ತೈದೆರು

ಬರುತ್ತಾರೆ.

ದೇವತಾ ಸ್ತ್ರೀಯರು ದೇವಲೋಕದಿಂದ
ಬರುತಾರೆ ಕೇಳಪ್ಪ ನನ ಮಗನೆ – ರಾಮಯ್ಯ
ಏನುಂಟೊ ನಮ್ಮ ಮಠದಲ್ಲಿ

"ಅಮ್ಮಯ್ಯ ಏನಮ್ಮ ಹುಟುಗಾಟದ ಮಾತನಾಡಿ"

ಅರಮಲ್ಲಿ ಅಕ್ಕಿ ಅದೆ ಕಿರುಮಲ್ಲಿ ಬೇಳೆ ಅದೆ
ಮಿಕ್ಕಿ ಸಾಂಬಾರ ಮೊದಲದೆ – ತುಂಬ್ಯದೆ
ಅಟ್ಟಕ್ಕೆ ನಾನು ಬಡವನೆ

ನಾನು ಬಡವನಾದರೆ ನಮಸ್ವಾಮಿ ಬಡವೆನ ತಾಯಿ
ಅವರೆ ಇಲ್ಲಿಗೆ ತರುತಾರೆ

ಹೆಣ್ಣುಮಗಳು ತಾಯ ಬಣ್ಣೀಸಿ ಪಾಡಿದಳು
ಅಣ್ಣನ ಕುಲವ ಹೊಗಳಿದಳು – ತಾಯಿಗೆ
ಪುಣ್ಯಕ್ಕೆ ಒಬ್ಬ ಮಗಳು ಬರುತಾಳೆ

ಹೆಣ್ಣೆಲ್ಲದವರಿಗೆ ಪುಣ್ಯವೆ ಮೊದಲಿಲ್ಲ
ಎರಡು ಕಣ್ಣಿಲ್ಲದವರ ತೆರದಂತೆ – ಅಮ್ಮಯ್ಯ
ನಮ್ಮಕ್ಕ ಭಾಗ್ಯಶಾಲಿಯ ಕರೆತರುವೆ

ಹಗೆಯೋರ ಮುಂದೆ ಹಬ್ಬ ಮಾಡುವೆನೆಂದು
ತಟ್ಟಿ ಕೊಂಡಿದ್ದೆ ಎದೆ ಭುಜವ

ಕಟ್ಟು ಬಾರದ ತೆರವ ಕಟ್ಟವರೆ ಜಗದೀಶ
ತಿಳುವುದುಂಟೇನೊ ನಾರಿಯ

"ಕಟ್ಟು ಬಾರದ ತೆರ ಅಂದರೆ ಎಷ್ಟು ಕಟ್ಟಿದರಮ್ಮ ? ಬನ್ನಿ ಭಾವಾಜಿ ಅಂತ ಸ್ವಾಮಿಯ ಪಾದವ ಹಿಡಿಯುವೆ. ಅಹಂಕಾರದ ಮಾತನ್ನು ಆಡಿ ನಮ್ಮ ಅಕ್ಕನ್ನ ಕಳಿಸದೆ ಹೋದರೆ ಅವ ಕೊಟ್ಟಿರುವ ತೆರವ ಹಿಂದಕೆ ವಾಪಸ್ಸು ಕೊಡುತೀನಿ".

ಸ್ವಾಮಿ ಕೊಟ್ಟ ತೆರವ ಹ್ಯಾಗೆ ಕೊಟ್ಟಿಯೊ ಕಂದ

ಬೇಡಿ ಕೊಂಬೆನು ಮಗರಾಮ

ಸ್ವಾಮಿ ಕೊಟ್ಟ ತೆರವು ಏನೇನು ಅಂದರೆ
ಬಂಗಾರದ ಹಣವ ಕೊಟ್ಟರು – ಅವರಾದರೆ
ಐದಾನೆ ಮೇಲೆ ಬಂದೀತು

ಅಪರಂಜಿ ಕೊಳಗ ಕೊಟ್ಟರು ಅವರಯ್ಯ
ಅಕ್ಕಯ್ಯನ ಉದ್ದ ಸುರಕೊಂಡೊ – ಕಂದಯ್ಯ
ಅಕ್ಕಯ್ಯನ ಉದ್ದ ಅಳಕೊಂಡೊ

ಹೆಣ್ಣು ನಮ್ಮದು ಎಂದು ಹೊನ್ನು ನಿಮ್ಮದು ಎಂದು
ಒಪ್ಪಮಾತ ಮಾಡಿಕೊಂಡೋದರು

ಶ್ರೀಗೌರಿಯಾದರೆ ಭವಿಯ ಹೊಟ್ಟೀಲಿ ಹುಟ್ಟಿ
ಗೌರಿಯ ಕರಕೊಂಡು ಹೋಗುವಾಗ – ಮಲ್ಲಯ್ಯ
ಏನಂದು ನುಡಿದು ಹೋದನು

ತೀರ್ಥ ಪ್ರಸಾದವ ಗೌರಿಗೆ ನಾವು ಕೊಟ್ಟು
ಗುರಪೀಠಕೆ ಒಳಗು ಮಾಡುತೀವಿ – ಮಹಾದೇವಿ
ಕೈಲಾಸಕೆ ನೀವು ಬರಬಾರದು

ಕೈಲಾಸಕೆ ನೀವು ಬರಬಾರದು ಮಹದೇವಿ
ಈ ಹೊನ್ನ ನೀವು ಇಟ್ಟುಗಳಿ

ಆ ಹೊನ್ನು ನಿಮ್ಮದು ಈ ಹೆಣ್ಣು ನಮ್ಮದು
ಎಂದು ಮಾತಾಡಿ ಹೋದರಯ್ಯ

ಇಂಥ ಮಾತಾಡಿ ಅಕ್ಕಯ್ಯನ ಕೊಡುವುದಕೆ
ಹೆಣ್ಣು ಹೆತ್ತವರು ಯಾರು ಇರಲಿಲ್ಲವೆ

ಕೊಟ್ಟಿರುವ ತೆರವನ್ನು ಹಿಂದಕೆ ಕೊಡುತೀವಿ
ಅಕ್ಕ ಗೌರಮ್ನ ಕರತರುವೆ

"ನಮಗೆ ಬಡತನ ಇದೆ ನೀನು ಹೇಗೆ ಕೊಡುವೆ ಮಗನೆ ಅವರು ಆನೆ ಮೇಲೆ ತಂದುರು" ಎಂದು ನುಡಿದ ತಾಯಿಗೆ –

ಈರೆಂಭತ್ತೇಳು ಕೋಟಿಗೆ ಕೇಳಮ್ಮ
ಪಡಿಯ ಅಳಕೊಂಡು ಹೋಗುವಂತ ಜಗದೀಶಗೆ
ಅಕ್ಕಯ್ಯನಾರತಿ ಬೆಳಗಿಲ್ಲವೆ

ಆರತಿಯ ಬೆಳಗಿದ್ದಕ್ಕೆ ಒಂದು ಸಂಖ್ಯೆ ವಜಮಾಡು

ಆರತಿ ಮಾಡಿಸಿಕೊಂಡು ಬಂದು ಕೂತುಕೊಂಡ
ಜಗದೀಶ್ವರನಿಗೆ ಅಕ್ಕ ಶ್ರೀಗೌರಿ – ಆದರೆ
ಅಡುಗೆಯ ಮಾಡಿ ಬಡಿಸಿಲ್ಲವೆ

ಅಡುಗೆಯ ಮಾಡಿ ಬಡಿಸಿದಳು ಶ್ರೀಗೌರಿ
ಅದಕೊಂದು ಸಂಖ್ಯೆ ವಜವಮ್ಮ

ಊಟವ ಮಾಡಿಕೊಂಡು ಕೂತಂತ ಜಗದೀಶ್ವರನಿಗೆ
ತಾಂಬೂಲ ಕೊಂಡೋಗಿ ಮಡಗಿಲ್ಲವೆ – ಅಕ್ಕಯ್ಯ
ಅದಕೊಂಡು ಸಂಖ್ಯೆ ವಜವಮ್ಮ

"ಚಿನ್ನ ಬೆಳ್ಳಿ ತಟ್ಟೇಲಿ ತಾಂಬೂಲವ ಮಡಗಿಲ್ಲವೇ? ಹನ್ನೆರಡು ವರ್ಷದಿಂದ ನಮ್ಮ
ಅಕ್ಕ ಗೌರಮ್ಮನವರು ಸ್ವಾಮಿ ಮಂಚದಲಿ ಇರಲಿಲ್ಲವೆ?"
ಒಟ್ಟು ತೆರವು ಅಲ್ಲಿಗೆ ವಜವಮ್ಮ ನೀ ಕೇಳು
ಕಟ್ಟಮ್ಮ ಬುತ್ತಿಯ ಶೀಘ್ರದಲಿ

ಸ್ವಾಮಿಯ ಕರಕೊಂಡು ಬಂದರೆ ರಾಮಯ್ಯ
ನಮ್ಮನೆಯ ಅನ್ನವ ಅವರಾದರೆ – ಕಂದಯ್ಯ
ಸೇವನೆಯ ಅವರು ಮಾಡೋಲ್ಲ

ನಮ್ಮನೆಯ ಅನ್ನವು ಬೇಡದಿದ್ದರವನಿಗೆ
ನಮ್ಮ ಹೆಣ್ಣೇಕೆ ಬೇಕಮ್ಮ ನಮತಾಯೆ – ಮಹಾದೇವಿ
ಅಷ್ಟು ಬಲ್ಲಿದನೆ ನಿನ್ನ ಅಳಿಯನು

ಸ್ವಾಮಿಯಾದರೆ ಏನು ಕೈಲಾಸಕೆ ದೊಡ್ಡೋನು
ಭಾವಮ್ಮೈದನಿಗೆ ದೊಡ್ಡೋನೆ

ಸ್ವಾಮಿ ಬಾಣದಿಂದ ನನ್ನ ಪ್ರಾಣ ಹೋದರೆ ಸರಿಯೆ
ಬಿಟ್ಟು ಬರುವಂಥ ಮರಿಯಲ್ಲ

ಬನ್ನಿ ಭಾವಾಜಿ ಎಂದು ನಾನು ಹೋಗಿ ಬೇಡುತೀನಿ
ಭೀಮಾವತಿ ಪಟ್ಟಣಕೆ ಕರೆತರುವೆ

ಪಟ್ಟಣದ ಅಂಕದಲಿ ಇರುವಂಥ ಚಾವಡಿಗೆ
ಕರೆತಂದು ನಿನ್ನ ಅಳಿಯನ – ನನತಾಯೆ
ನೂಲಗ್ಗದಲಿ ನಾನು ಬಿಗುಸುವೆ

ಕುಲದವರ ಕೈಯಲ್ಲಿ ಒಂದೊಂದು ಏಟನ್ನೆ
ಹೊಡೆಸದೆ ನಾನು ಹೋದರೆ – ನನತಾಯೆ
ನಾನು ಭೀಮಾವತಿಯ ರಾಮನೆ

ರಾಮನಾಡಿದ ಮಾತ ಕೇಳಿತು ಕೈಲಾಸ
ಸ್ವಾಮಿ ಎದ್ದರು ಕಡು ಕ್ವಾಪದಲಿ

ನೋಡಿದ ಪಾರ್ವತಿ ರಾಮನಾಡಿದ ಮಾತ
ಭೀಮಾವತಿ ಪಟ್ಟಣ ಸುಡುತೀನಿ
ಸ್ವಾಮಿಯ ಕಣ್ಣಿನಲಿ ಬೆಂಕಿಯ ಕಿಡಯುದರಿ
ಉಗ್ರ ಕೋಪವ ತಾಳಿದನು

ಮೂರು ಘಳಿಗೆಯ ಮೇಲೆ ಶಾಂತನಾದನು ಸ್ವಾಮಿ
ಗೌರಮ್ಮ ಎದುರೀಗೆ ಬರುತಾಳೆ

ಅರಿಯದ ಕಂದಯ್ಯ ಆಡಿದನು ಜಗದೀಶ
ಆ ಬಡವ ಕಂದಯ್ನ ಕಾಪಾಡು

"ನ್ಯಾಯವಾಗಿ ಆ ಮೈದಾಳ ರಾಮಯ್ಯನಿಗೆ ನಾನು ಅಕ್ಕ ನಾಗಬೇಕು; ನೀನು ಭಾವನಾಗಬೇಕು. ಒಂದಾನೊಂದು ದಿನ ನಾವಿಬ್ಬರೂ ಪಂಥನಾಡುವಾಗ ಪಂಥ ಮುಗಿಯದೆ ಕುಳಿತಿರುವಾಗ ಕಡೇಬಾಗಿಲ ಗಿಣಿಯನ್ನು ಹತ್ತಿರಕ್ಕೆ ಕರೆದೆವು. ಆಗ ಗಿಣಿ ಸ್ವಾಮಿ ನೀವು ಭೂತಾಳ ಲೋಕಕ್ಕೆ ದೊಡ್ಡವರು; ಆದರೇನು ನಿಮ್ಮ ಕಳೆಯ ಹದಿನಾರರಷ್ಟು ಕಳೆ ಅಕ್ಕಯ್ಯನವರದು ಎಂದು ತಿರುಗು ಮುರುಗು ಮಾಡಿ ಹೇಳಿತು ಅಕ್ಕಯ್ಯನ ಮೇಲಿನ ಪ್ರೀತಿಗೆ ಅನ್ನದ ಆಸೆಗೆ

ಎಲೋ ಗಿಣಿಯೆ ನಮ್ಮ ಕೈಹಿಡಿದ ಹೆಂಡತಿಯ ಮುಂದೆ ನಮ್ಮನ್ನು ಜರಿದು ಮಾತಾಡಿದೆಯ ಎಂದು ಪ್ರಾಣಕೊಲ್ಲಲು ಹೋದಿರಿ ನೀವು ! ಭೊಲೋಕದಲ್ಲಿ ನರಮಾನವನಾಗಿ ಹುಟ್ಟು ಎಂದು ಶಾಪಕೊಟ್ಟರಿ. ಆಗ ಆ ಗಿಣಿ ಸ್ವಾಮಿ ನನ್ನದು ತಪ್ಪಾಯಿತು; ನಿಮ್ಮ ಮಾತಿನಂತೆ ನಾನು ಭೂಲೋಕದಲ್ಲಿ ಹುಟ್ಟುತ್ತೇನೆ. ಎಲ್ಲಿ ಹುಟಟಬೇಕು? ನನಗೆ ಮೋಕ್ಷ ಯಾವಾಗ? ತಾವು ತಿಳಿಸಬೆಕು ಎಂದು ಬೇಡಿಕೊಂಡಿತು. ಎಲ್ಯೆ

ಗಿಣಿಯೆ ಭೂಲೋಕದಲ್ಲಿರುವಂಥ ಭೀಮಾವತಿ ಪಟ್ಟಣದಲ್ಲಿ ಮಹಾದೇವಿ ಗರ್ಭದಲ್ಲಿ ನೀನು ಹೋಗಿ ಮೈದಾಳ ರಾಮನಾಗಿ ಹುಟ್ಟು. ಹುಟ್ಟಿದ ಏಳು ವರ್ಷಕ್ಕೆ ಕೈಲಾಸವನ್ನು ಕಾಣು ಎಂದು ಇದೇರೀತಿ ವರವನ್ನು ಕೊಟ್ಟರಲ್ಲವೆ ಸ್ವಾಮಿ ತಾವು! ಗಿಣಿಯ ರೂಪಾಂತರದಲ್ಲಿದ್ದಾಗ ನಮ್ಮನ್ನು ಅಕ್ಕಯ್ಯ ಅನ್ನುತಿತ್ತು; ನಿಮ್ಮನ್ನು ಭಾವಾಜಿ ಅನ್ನುತಿತ್ತು. ಇದು ನರಲೋಕದಲ್ಲಿ ಮೈದಾಳ ರಾಮಯ್ಯನಾಗಿ ಹುಟ್ಟಿ ಈಗ ನಮ್ಮನ್ನು ಅಕ್ಕಯ್ಯ ಭಾವಾಜಿ ಎನ್ನುತ್ತಾನೆ. ಬಿನ್ನ ಭೇದವಿಲ್ಲದೆ ನಾನು ಅಕ್ಕ ನೀವು ಭಾವ.

ಮಾಗೌರಿಯ ಮಾತ ಕೇಳಿದ ಜಗದೀಶ
ಸ್ವಾಮಿಯ ಕೋಪ ಶಾಂತವಾಯಿತು

ಕೈಲಾಸವನೆ ಹುಲ್ಲಾಗಿ ಜರಿದವನೆ
ಅವನು ಗೆಲ್ಲೊ ಪರಿಯ ನಾನು ನೋಡುತೀನಿ

ಸ್ವಾಮಿ ಮಚ್ಚರವಿಟ್ಟು ಮೌನವಾದರು ಆಗ
ಮೈದಾಳು ರಾಮ ಹೊರಟನು

ಹೊರಟಂಥ ರಾಮಯ್ಯ ಏನೆಂದು ಹೇಳುತಾನೆ
ಕೇಳು ಕೇಳಮ್ಮ ನನ ತಾಯೆ

ಅಕ್ಕಯ್ಯನವರಿಗೆ ಅಂದಲವ ನಾ ಕೊಡುವೆ
ಭಾವಜಿಗೆ ತೇಜಿಯ ನಾ ಕೊಡುವೆ

ಮಿಕ್ಕ ಜನರಿಗೆ ಗಾಡಿ ಸಾರೋಟನ್ನೆ
ಕಟ್ಟಿಸಿ ನಾನು ಕೊಡುತ್ತೀನಿ

ಅಪ್ಪನ ಮನೆಯ ತೌರೂರಿಗಾದರೆ
ಹಬ್ಬಕಕ್ಕಯ್ಯ ಬರುತಾಳೆ

ಭಾವಾಜಿಯೊಂದಿಗೆ ಬರುವ ಸತ್ಯುಳ್ಳ ಶರಣೆರಿಗೆ
ಶಾಲು ಜೋಡಿಯ ನಾನು ಕೊಡುತೀನಿ

ಅಕ್ಕಯ್ಯನವರೊಂದಿಗೆ ಕೈಲಸದಿಂದ ಬರುವಂಥ
ನಾರಿ ಮುತ್ತೈದಿರಿಗೆ ಕೇಳಮ್ಮ – ನನತಾಯೆ
ಮುತ್ತೈದೆ ಪೂಜೆ ಮಾಡುತೀನಿ

ಅಕ್ಷತೆ ಹೊಂಗನೂಲುಗಂಧ ಚಂದ್ರ ಕುಂಕುಮ

ಎಲ್ಲವನು ಕೊಟ್ಟು ಅವರಿಗೆ – ನನತಾಯೆ
ಮುತ್ತೈದೆ ಪೂಜೆ ಮಾಡುತೀನಿ

ಕಜ್ಜುರದ ಹಣ್ಣು ಗೊನೆಯ ಬಾಳೆಹಣ್ಣು
ಇನಿಯ ಬಾಳೆಯ ಹಣ್ಣು – ನನತಾಯೆ ಕೇಳಮ್ಮ
ಫಲದ ದಾನವ ನಾನು ಮಾಡಬೇಕು

ಲಕ್ಷ ಗಾಡಿಲಿ ನೀನು ಗಂಧದೆಣ್ಣೆ ತರಿಸಮ್ಮ
ಅರಮನೆ ಗ್ವಾಡಿಗೆಲ್ಲ ನೇವುಣುಸಮ್ಮ

ಮೈದಾಳ ರಾಮನ ಕಣ್ಣಿಗೆ ಭಾಗ್ಯ ಕಾಣತಾ ಅದೆ. ಅವಳ ಕಣ್ಣಿಗಾದರೆ ಬಡತನ ಕಾಣತಾ ಇದೆ.

ಲಕ್ಷ ಗಾಡಿಯ ನೀನು ಸಣ್ಣಕ್ಕಿ ತರಿಸಮ್ಮ
ಕಜ್ಜಾಯ ಸುಟ್ಟು ಮಡಗಮ್ಮ

ಲಕ್ಷ ಕೋಟಿಯ ವರಕೆ ಅಪರಂಜಿ ಚಿನ್ನವ
ನೀನಾದರೆ ತರಿಸೆ ನನತಾಯೆ – ಕೇಳಮ್ಮ
ಉಂಗುರುವ ಮಾಡಿ ಇರಿಸಮ್ಮ

ಅಕ್ಕಯ್ಯನೋರೊಂದಿಗೆ ನಾನು ಬಂದಾಗ ಕೇಳು
ಪುಷ್ಪದಾನವ ಕೊಡಬೇಕು – ಅಕ್ಕಯ್ಯನಿಗೆ
ಪುಣ್ಯಕೋಟಿ ಎಂಬ ಹಸುವ ಕೊಡಬೇಕು

ಪುಣ್ಯಕೋಟಿ ಎಂಬ ಹಸವನ್ನೆ ಆದರೆ
ಅಕ್ಕಯ್ಯನಿಗೆ ಅಡುಕೂಳಿ ಹೊಡಿಬೇಕು

ಹೊಡೆದ ತೆಂಗಿನಕಾಯಿ ಎಡೆದ ಬಾಳೆಹಣ್ಣು
ಇನಿಯದಲಿ ಪೂಜೆ ಮಾಡಬೇಕು –ಅಮ್ಮಯ್ಯ
ನೀನು ಕಟ್ಟಮ್ಮ ಬುತ್ತೀಯ

ಕಂಕಣ ಇಲ್ಲದೋರಿಗೆ ಕೈಲಾಸ ಸಾಧ್ಯವಿಲ್ಲ
ಹ್ಯಾಗೆ ಹೋದೀಯೊ ಮಗರಾಮ

ಹತ್ತು ಮಂದಿ ಬ್ರಾಹ್ಮಣರ ಕರೆಸಿದಳು ಮಹಾದೇವಿ
ಗುರು ಕಂಕಣ ಧಾರೆ ಮಾಡಿಸಿದಳು

ಅಡುಗೆ ಅರಮನೆಗೆ ಹೋದಾಳು ಮಹಾದೇವಿ
ಹಾಲು ಅನ್ನದ ಬುತ್ತಿ ಕಟ್ಟಿದಳು

ಹಾಲು ಅನ್ನದ ಬುತ್ತಿ ಬೇಗನೆ ಕಟ್ಟಿದಳು
ಬರೆದಳು ವಾಲೆ ಶೀಘ್ರದಲಿ

ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಶರಣ ಮಹಾತ್ಮರು ಬರಬೇಕು – ಅನುತೇಳಿ
ಅಳಿಯನಿಗೆ ವಾಲೆ ಬರೆದಳು

ನೂರೊಂದು ಜನ ಮುತ್ತೈದೆರು ಸಯಿವಾಗಿ
ಮಗಳು ಗೌರಮ್ಮ ಬರಬೇಕು – ಅನುತೇಳಿ
ಮಗಳಿಗೆ ವಾಲೆ ಬರೆದಳು

ಮುತ್ತೈದೆ ಸಾಮಗ್ರಿ ಬುತ್ತೀ ಕಟ್ಟಿದಳು
ಹೂವು ಪುಷ್ಪದ ಬುತ್ತಿಯನು – ಮಾದೇವಿ
ಕಟ್ಟಿ ಮಗನನ್ನೆ ಹರಸಿದಳು

ಕೈಲಾಸವಾದರೆ ಸಾಧ್ಯವಾಗಲಿ ಮಗನೆ
ಶ್ರೀ ಗೌರಿ ಪ್ರತ್ಯಕ್ಷವಾಗಲಿ – ಪರಮೇಶ್ವರನ
ದರುಶನವಾದರೆ ಲಭಿಸಲಿ

ದರುಶನವಾದರೆ ಲಭಿಸಲಿ ಅನುತೇಳಿ
ಮಾದೇವಿ ಮಗನ ಹರಸಿದಳು

ಬೆಂದ ಅನ್ನವ ನೆತ್ತಿಯ ಮ್ಯಾಲೆ ಹೊತ್ತರೆ
ದಾರಿ ಸಾಗದು ಅನುತೇಳಿ – ರಾಮಯ್ಯ
ಬುತ್ತಿಯ ಬೆನ್ನಿಗೆ ಬಿಗಿದನು

ಬುತ್ತಿಯ ಕಟ್ಟಿದನು ಬೆನ್ನಿಗೆ ಬಿಗಿದನು
ಅಲ್ಲಿಂದ ಮುಂದಕೆ ಕಡೆದನು

ಕೈಲಾಸದ ಹಾದೀಲಿ ಕಡೆದನು ರಾಮಯ್ಯ
ಕೈಲಾಸದ ಕಡೆಯ ಬಾಗಿಲಲ್ಲಿ – ಆವಗ
ನಾಲಿಗಿಲ್ಲದ ಗಂಟಿ ಢಣಿರಂದೊ

ನಾಲಿಗಿಲ್ಲದ ಗಂಟಿ ಬಾಲಗೆ ಸಪ್ಪಳವಾಗಲು
ರಾಮ ಹೊರಟನೆ ಕೈಲಾಸಕೆ

ಒಂದಂಬೊ ಯೋಜಣ ಎರಡಂಬೊ ಯೋಜಣ
ಐದು ಯೋಜಣ ಬರುತಾನೆ

ಹೊತ್ತು ಬಿಡುತದೆ ತಾಯೆ ಕತ್ತಲೆ ಆಗುತದೆ
ಅಕ್ಕನ ಗಿರಿಯಲ್ಲಿ ಹೋಗಿ ತಳಗುವೆ

ಒಂದು ಜಿನ ಎರಡು ಜಿನ ಮೀರಿದರೆ ಹನ್ನೊಂದು
ಹನ್ನೊಂದು ಜಿನಕೆ ಕೇಳಮ್ಮ

ಭೀಮಾವತಿ ಒಳಗೆ ನನಗಾದರೆ
ಭೀಮಾವತಿ ಒಳಗೆ ನನಗಾದರೆ – ತಯಮ್ಮಾ
ತಿಥಿ ಪುರತ್ತವ ಮಾಡಮ್ಮ

ಹಾಗಂದು ತಾಯಿಗೆ ಹೇಳಿ ಬಂದನು ರಾಮಯ್ಯ
ಮುಂದಕ್ಕಾದರೆ ಹೊರಟನು

ಗುರುವು ಹಿರಿಯರ ಚಾಕರಿಯ ಮಾಡಿದರೆ
ಸ್ವರ್ಗ ಉಂಟೆಂದು ಹೇಳಿದಳು – ಮಹಾದೇವಿ
ಹರಸಿ ಹಿಂದಕೆ ಬಂದಳು

ಮೈದಾಳ ರಾಮಯ್ಯ ಕೈಲಾಸದ ಮಾರ್ಗದ ಕಡೆಗೆ ತಿರುಗಿದನು

ಕಲ್ಲತ್ತಿ ಕಲ್ಲನೆ ಇಳಿವೂತ ರಾಮಯ್ಯ
ಗೌರಿ ಶಂಕರನ ಹೊಗಳುತ – ರಾಮಯ್ಯ
ಮಂದಲ ಗಿರಿಯ ಕಣಿವೇಲಿ

ಮಂದಲ ಗಿರಿಯ ಕಣಿವೇಲಿ ಬರುವಾಗ
ಕಲತ್ತಿ ಕಲ್ಲ ಇಳಿದಾನು

ಹಗಲೆ ರಾತ್ರಿಯು ರಾತ್ರಿಯೆ ಹಗಲಯ್ಯ
ಅನ್ನ ನೀರಿನ ಯೋಚನೆಯೆ – ಇಲ್ಲದೆ
ಕೈಲಾಸದ ದಾರೀಲಿ ಹೊರಟನೆ

ಅಕ್ಕಯ್ಯ ಎನುತಾಗಿ ಹರಳೆದ್ದು ಕೂಗುತಾನೆ
ಆ ಬೆಟ್ಟ ತಲ್ಲಣಿಸಿ ಮೊಳಗುತದೆ
ಅಲ್ಲವರೆ ಅಕ್ಕಯ್ಯ ಇಲ್ಲವರೆ ಭಾವಯ್ಯ
ಮಲ್ಲಯ್ಯ ಇರುವ ಸಿರಿಗಿರಿಯ – ರಾಮಯ್ಯ
ಶ್ರೀ ಶೈಲ ಪರ್ವತವ ಸುತ್ತಿದರೆ

ಶ್ರೀಶೈಲ ಪರ್ವತವ ಸುತ್ತಿದರೆ ರಾಮಯ್ಯ
ಅಕ್ಕ ಭಾವಾಜಿ ಸುಳಿವಿಲ್ಲ

ಕರೆಯಕೆ ನಾ ಬಂದು ಹಿಂತಿರುಗಿ ಹೋಗೋಲ್ಲ
ಗಿರಿಯಲ್ಲಿ ಪ್ರಾಣ ಬಿಡುತೀನಿ – ಜಗದೀಶ
ಭಾವನಾದರೆ ಬಂದು ಮೊಕ ತೋರು

ರಾಮನ ಕೂಗನ್ನು ಕೇಳಿದನು ಜಗದೀಶ
ಕೈಲಾಸದಿಂದ ಬರುತಾನೆ

ಜಂಗಮನ ರೂಪನ್ನೆ ಧರಿಸಿದ ಜಗದೀಶ
ಮೈದಾಳ ರಾಮನ ಎದುರಿಗೆ – ನಿಂತುಕಂಡು
ಯಾವ ಲೋಕದ ಬಾಲಕನು

ಯಾವ ಲೋಕದ ಕಂದ ಚಿಕ್ಕುಡಗ ಬಾಲಕ
ಅಡವಿಗೆ ಬಂದ ಬಗೆ ಹೇಗೆ

ಮಹಾಋಷಿಗಳು ಇರುವಂಥ ಸ್ಥಳ. ಹುಲಿ ಕರಡಿ ಇರುವಂಥ
ಗೋರಾರಣ್ಯ.

ಈ ಪರ್ವತಕೆ ನೀ ಬಂದ ಬಗೆ ಏನು
ಯಾರು ಅಂದರೆ ನಾನು ಏನ ಹೇಳಿಲಿ ಜಂಗಮರೆ
ನಾನೊಬ್ಬ ಕಾಡು ಪರದೇಶಿ

ನಾನು ಬಂದ ತೆರವ ಹೇಳುತೀನಿ ಜಂಗಮರೆ
ನೀನು ಬಂದ ತೆರವ ಹೇಳಯ್ಯ

ದಕ್ಷಿಣ ಕಾಶಿಯ ಒಳಗೆ ಒಂದು ಲಿಂಗವಿತ್ತು ಕಂದಣ್ಣ
ಲಿಂಗಕ್ಕೆ ನಾನು ಪೂಜಾರಿ
ಜಂಗಮನಾಡಿದ ಮಾತ ಕೇಳಿದನು ರಾಮಯ್ಯ

ತಾ ಬಂದ ತೆರವ ಹೇಳುತಾನೆ

ಪಾರ್ವತಿಯ ದರುಶನವ ಮಾಡಿ ಬರುತೀನಂದು
ಏಳು ವರ್ಷದ ಬಾಲ ನಾ ಬಂದೆ

ಪಟಟ್ಣವ ನಾ ಬಿಟ್ಟು ಕಾಡಿಗಾದರು ಬಂದೆ
ಮೂರು ತಿಂಗಳು ತುಂಬಿತಯ್ಯ

ನಮ್ಮೂರ ಬಿಡುವಾಗ ಏಳುವರ್ಷವು ನನಗೆ
ಈಗ ಕಣ್ಣು ಕಾಣೋದಿಲ್ಲ ಕೇಳು ನನಗೆ – ಜಂಗಮರೆ
ಕಿವಿಯು ಕೇಳುವುದಿಲ್ಲ ನನಗೆ

ಕೂತರೆ ಏಳಲಾರೆ ಎದ್ದರೆ ಕೂರಲಾರೆ
ಹಿಂದಕಾದರು ನಾನು ಹೋಗಲಾರೆ

ನನ್ನ ಕರ್ಮಕ್ಕೆ ಪಾರ್ವತಿ ದರ್ಶನ ಇದುವರೆವಿಗೂ ಆಗಲಿಲ್ಲ ವೃಥಾ ಕಾಲಹರಣವಾಯಿತು.

ನಾ ಬಂದ ಕಾರಣವ ಕೇಳಿರಿ

ಭೀಮಾವತಿ ಎಂಬ ಪಟ್ಟಣದ ಒಳಗೊಬ್ಬ
ಬ್ರಾಹ್ಮಣರ ಕುಲದ ಶಿವಭಕ್ತ – ಸೋಮಯ್ಯ
ಪ್ರಿಯದ ಸತಿಯು ಮಹಾದೇವಿ

ಅರಸಿ ಮಹಾದೇವಿಯ ಹೊಟ್ಟೇಲಿ ಹುಟ್ಟಿದವನು
ನಾನು ಸರಸ ಭಾವಮೈದ ಶಿವನಿಗೆ

"ಪರಮೇಶ್ವರ ಏನಾಗಬೆಕು " "ಭಾವನಾಗಬೇಕು" " ಏನು ಹುಚ್ಚು
ಮಾತನಾಡುವೆ ಬಾಯಿ ಮುಚ್ಚು. ಪಾರ್ವತಿ ನಿನಗೆ ಅಕ್ಕನಾಗುವುದು
ನಿಜವೆ?"

ನರರ ಮನೆ ಪರಿಸಕ್ಕೆ ಸಿರಿಗೌರಿ ಬಂದಾಳೆ
ಹೋಗಲ ರಾಮ ಹಿಂದಕ್ಕೆ
ಹೆತ್ತವ್ವ ನನ್ನೊಂದಿಗೆ ಸುಳ್ಳುಮಾತ ಹೇಳುವಳೆ
ಹೋಗಯ್ಯ ಪೇತ ಜಂಗಮನೆ

"ನಿಮ್ಮ ತಾಯಿ ಏನಂದು ಹೇಳಿದಳು " "ನಾನು ಗುರು ಮಠದಲ್ಲಿ ಓದುತ್ತಿದ್ದೆ ಎಲ್ಲ ಮಕ್ಕಳು ದೀಪಾವಳಿ ಹಬ್ಬಕ್ಕೆ ಅಕ್ಕ ಭಾವನನ್ನು ಕರೆತರುತ್ತೇವೆಂದು ಹೋದರು. ನಾನೂ ಬಂದು ತಾಯಿಯನ್ನು ಕೇಳಿದೆ. ಆಗ ನನ್ನ ತಾಯಿ ಶ್ರೀಗೌರಿಯೇ ನಿನ್ನ ಅಕ್ಕ, ಮಲ್ಲಯ್ಯನೇ ನಿನ್ನ ಭಾವ ಎಂದು ಹೇಳಿದಳು. ಅವರನ್ನು ಹಬ್ಬಕ್ಕೆ ಕರೆದುಕೊಂಡು ಹೋಗಲು ಬಂದಿದ್ದೇನೆ".
"ಸುಳ್ಳುಮಾತು ನಿಜಮಾಡಿಕೊಂಡು ಬಂದಿದ್ದೀಯ"
ಹೋಗಲಾ ರಾಮ ಹಿಂದಕ್ಕೆ
ಗಂಗೆಗೆ ಕಟ್ಟಿಲ್ಲ ಲಿಂಗಕೆ ಸೂತಕಿಲ್ಲ
ನಿಮ್ಮ ಜಂಗಮರ ಮಾತು ನೆಲೆಯಿಲ್ಲ
"ನಿಮ್ಮದು ಕೊಟ್ಟರೆ ಶಾಪ ಇಟ್ಟರೆ ವರ. ನಿಮ್ಮ ಮಾತು ನೆಲೆ ಇಲ್ಲ"

ಚಿಕ್ಕಹುಡುಗನ ಮಾತ ಕೇಳಿದನು ಜಗದೀಶ
ಹರನು ಮಲ್ಲಯ್ಯ ನಗುತಾನೆ

"ಕೈಲಾಸಕ್ಕೆ ಹೋಗಬೇಕ ನೀನು?" "ಹೌದು" "ಇಲ್ಲದಿದ್ದರೆ? "ಇಲ್ಲದಿದರೆ ಪ್ರಾಣಬಿಡುವೆ" "ಅದಕ್ಕಾಗಿ ಪ್ರಾಣ ಬಿಡುವರೆ ! "ಹಬ್ಬಕ್ಕೆ ಏನೇನು ಅಡುಗೆ ಮಾಡಿಸುವೆ?" ಲಕ್ಷ ಕಂಡುಗ ಉದ್ದಿನಬೇಳೆ ಹಪ್ಪಳ ಹಾಕಿಸಿ ಮಿಕ್ಕ ಸಾಂಬರೆಷ್ಟೋ ಮಾಡಿಸುವೆ "ಹಾಗಿದ್ದ ಮೇಲೆ ದೊಡ್ಡ ಹಬ್ಬ ! ನಾವು ಬಂದರೆ ನಮಗೂ ಇಷ್ಟು ಬಡಿಸುವೆಯ? "ಇದೇ ಮಾರ್ಗವಾಗಿ ಹೋಗಿ ನಮ್ಮ ಮನೆ ಕಡೆಚೋರಿಲಿದೆ. ಮಹಾದೇವಮ್ಮ ಎಂದು ಕೂಗಿ ಕರೆದರೆ ನಮ್ಮತಾಯಿ ನಿಮಗೂ ಇಷ್ಟು ಬಡಿಸುತಾಳೆ" "ನಿನ್ನ ಬುತ್ತಿ ಏನು? ಅನ್ನವೆ?"

ಬೆನ್ನಲ್ಲಿ ಕಟ್ಟಿರುವ ಪರಸಾದವಾದರೆ
ನಮಗಿಟ್ಟು ಕೊಟ್ಟರೆ ಕೇಳಯ್ಯ – ಬಾಲನೆ
ನಿನಗೆ ಕೈಲಾಸ ಸಾಧ್ಯವು

ನಿನ್ನ ಬುತ್ತಿಯ ಬಿಚ್ಚಿ ನನಗೆ ಕೊಟ್ಟರೆ ಈಗ
ಗಂಗೆ ಪಾರ್ವತಿ ದೇವರುಗಳು – ಬಾಲನೆ
ನಿನಗೆ ದೊರೆವರು ಕೇಳೋ ನನಮಾತ

"ಇಷ್ಟು ಅನ್ನ ಕೊಡಪ್ಪ ಬಾಲಕ" "ಸ್ವಾಮಿ ಯಾವ ಮಾತು ಹೇಳಿದರೂ ಕೇಳುವೆನು ಅನ್ನದ ಸುದ್ದಿ ಎತ್ತಬೇಡಿ" "ಅಯ್ಯೊ ಹುಚ್ಚ, ಹಸಿದವನಿಗೆ ಅನ್ನ ಕೊಟ್ಟರೆ ಪಾಪವೆ?" "ಆ ಮಾತು ಎತ್ತಬೇಡಿ. ಇದು ಕೈಲಾಸಕ್ಕೆ ಹೋಗಬೇಕಾದ ಬುತ್ತಿ".

ಅಕ್ಕ ಭಾವನರ ಪಾದದ ಬಳಿ ಇದನು
ಸಂಬ್ರಾಣಿ ಬೆಳಗಿ ಬಿಚ್ಚಬೇಕು

"ನೀನು ಗುರುಹಿರಿಯರ ಸೇವೆ ಮಾಡಬೇಕಾದರೆ ಸ್ವಲ್ಪ ಬೆನ್ನು ಮಾಲೀಶಮಾಡು". ಕಪಿನಿಯನ್ನು ಮೇಲಕ್ಕೆತ್ತಿದರೆ ಬೆನ್ನಲ್ಲಿ ಕಜ್ಜಿ ಕುರು. ಮೈದಾಳ ರಾಮಯ್ಯ ಹಸ್ತ ತೆಗೆದು ಸ್ವಾಮಿಯ ಬೆನ್ನಮೇಲೆ ಮಡಗಿದ. ಪಠಾರನೆ ಕಜ್ಜಿ ಕುರುಗಳು ಒಡೆದವು. ಕೀವು ರಕ್ತ ಎನ್ನುವುದು ಮೊಳಸಂದಿಗಂಟ ಹರಿಯುತ್ತಿದೆ. ಜಗದೀಶನ ಮೇಲೆ ಯಾವಾಗ ನರಮಾನವ ಕೈಯಿಟ್ಟನೋ ಸ್ವಾಮಿಯ ಉರಿ ಇವನಿಗೆ ತುಂಬಿ ಇವನ ತನುವನ್ನೆಲ್ಲಾ ಎಳೆದುಕೊಂಡಿತು. "ಸ್ವಾಮಿ ನನಗೆ ಬೆಂಕಿ ಜ್ವಾಲೆಯಾಗುತ್ತಿದೆ. ಸ್ನಾನಮಾಡಬೇಕು. ನೀರು ಕುಡಿಯಬೇಕು" ಎಂದು ಕೇಳುತ್ತಾನೆ ರಾಮಯ್ಯ.

ಜಲ್ ಎಂದು ಗುರ್ಗದಲಿ ಹರಿವ ಪಾತಾಳಗಂಗೆ
ಚನ್ನಮಲ್ಲಯ್ಯ ಇರುವಂಥ – ಸಿರಿಶೈಲ
ಗಿರಿಯೊಳಗೆ ನೀರ ಕುಡಿ ಎಂದ

ಮಾಯದ ಕೊಳವೊಂದ ಮಲ್ಲಯ್ಯ ತೋರಿದನು
ನೀವೋಗಿ ನೀರ ಕುಡಿ ಎಂದ

ಹಂತಗಳ ಇಳಿದು ಹೋದನು ರಾಮಯ್ಯ
ಕೀವು ರಕ್ತದ ಕೈಲಿ ಬೊಗಸೆ ನೀರು – ತಕ್ಕೊಂಡು
ಅವನು ಸೇವನೆಯ ಮಾಡುತಾನೆ

ಮೈದಾಳು ರಾಮನ ಭಕ್ತಿಯನು ಕಂಡರು
ಕೈಲಾಸಕೆ ಬರುವ ರಾಮ ಇವನು – ಮಾನವನು
ದುರುಶನವ ಈಗಲೆಯೆ ಕೊಡಬಹುದೆ

ತಯಿಯೊಂದಿಗೆ ಇವನು ಸಲ್ಲದ ನುಡಿ ಆಡಿ
ಇಲ್ಲಿ ಶ್ರೀಶೈಲಕೆ ಬಂದಿರುವನು – ರಾಮಯ್ಯ
ಇನ್ನು ಕಷ್ಟವನೆ ಬೀಳಬೇಕು

ಇನ್ನು ಕಷ್ಟವನೆ ಬೀಳಲಿ ಅನುತೇಳಿ
ಹರನು ಮಲ್ಲಯ್ಯ ಮಾಯವಾದ

ನೀರನಾದರೆ ಕುಡಿದು ಹಿಂತಿರುಗಿ ನೋಡಿದನು
ಹರನು ಮಲ್ಲಯ್ಯ ಇರಲಿಲ್ಲ

ಎಂಥ ಚಾಂಡಾಳ ಜನ್ಮವಿದು ಜಂಗಮ ಎಂಬುದಾಗಿ ಅಹಂಕಾರ ಪಟ್ಟೆ

ಜಂಗಮನು ಅಲ್ಲವಲ್ಲ ಮಾಯದ ಮಲ್ಲಯ್ಯ

ಸ್ವಾಮಿಯೆ ಇಲ್ಲಿಗೆ ಬಂದಿದ್ದನು

ಸ್ವಾಮಿಯೆ ಇಲ್ಲಿಗೆ ಬಂದಿದ್ದ ಮಲ್ಲಯ್ಯ
ಪಾದ ಪಿಡಿಯದೆ ನಾನು ಕಟ್ಟೆನಲ್ಲೊ

ಕಣಿವೆಯನ್ನು ಇನ್ನು ಎಷ್ಟು ಹತ್ತಬೇಕೋ ಎಷ್ಟು ಇಳಿಯ
ಬೇಕೋ ಎಂದು ದುಃಖಮಾಡುತ್ತಾ ಬರುತ್ತಾನೆ.

ಅಡವಿಯ ಸೊಪ್ಪತಿಂದು ಮಡುವಿನ ನೀರಕುಡಿದು
ಒಡಹುಟ್ಟಿಗೊಬ್ಬ ತಮ್ಮನಾಗಿ – ಬರುತೀನಿ
ಭಾವನಾದರೆ ಬಂದು ಮುಖ ತೋರೋ

ಕಲ್ಲತ್ತಿ ಕಲ್ಲೆ ಇಳಿವುತ್ತ ರಾಮಯ್ಯ
ಗಂಗೆ ಪಾರ್ವತಿಯ ಹೊಗಳೂತ – ಅವನಾಗ
ಮಂದರ ಗಿರಿಯ ಕಣಿವೇಲಿ

ಮಂದರ ಗಿರಯ ಕಣಿವೇಲಿ ರಾಮಯ್ಯ
ದುಃಖವ ಮಾಡಿ ಬರುತಾನೆ

ಬರುವಂಥ ರಾಮನ ಹೆದರಿಸಿ ಹಿಂದಕ್ಕೆ
ಕಳಿಸಬೇಕು ಎಂದು ಜಗದೀಶ – ಆವಾಗ
ಮದ್ದಾನೆ ಹಿಂಡ ಕಳುವಿದನು
ಸೊಂಡಲ ತೂಗುತ್ತ ಹೆಜ್ಜೆಯ ಮಡಗುತ್ತ
ಹಿಂಡು ಹಿಂಡಾಗಿ ಆನೆ ಬರುತಾವೆ

ಬರುವಂಥ ಮದ್ದಾನೆ ಕಂಡನು ರಾಮಯ್ಯ
ತೌರು ತಪ್ಪಿತೆ ಅಕ್ಕ ಸಿರಿಗೌರಿ

ಮೂಗು ದಪ್ಪಿನವನೆ ಮೊರದಗಲ ಕಿವಿಯವನೆ
ಕಾಡು ಮುರುಗಕೆ ಎಲ್ಲ ದೊರೆರಾಯ – ಗಜಪತಿಯೆ
ಭಾವ ಮಲ್ಲಯ್ಯನ ಮಠವೆಲ್ಲಿ

ಮಲ್ಲಯ್ಯನ ಹೆಸರ ಹೇಳುತಲೆ ಮದ್ದಾನೆ
ಗಡಗಡನೆ ಒದರಿ ನಿಲುತಾವೆ

ಸ್ವಾಮಿಯ ಮೈದುನನು ಆದಮೇಲೆ ಇವನಿನ್ನು

ಶರಣು ಮಾತ್ಮನು ನಿಜವು ಎನುತೇಳಿ – ಆನೆಗಳು
ರಾಮನಿಗೆ ಶರಣ ಮಾಡುತವೆ

ಬಾಗಿ ಪಾದಕೆ ಶರಣೆಂದು ಮದ್ದಾನೆ
ಸೊಂಡಿಲನೆ ಚಾಚಿ ಮುಂದಕ್ಕೆ ರಾಮಯ್ನ
ಎತ್ತಿ ಕೂರಿಸಿಕೊಂಡೊ ಬೆನ್ನಿನಲಿ

ಎತ್ತಿ ಕೂರಿಸಿಕೊಂಡು ಸೊಂಡಿಲಲಿ ಮದ್ದಾನೆ
ಒಂದು ಯೋಜನ ಮುಂದೆ ಕಳಿಸ್ಯಾವೆ

ಮದ್ದಾನೆಯ ಈಗ ಮೀರಿ ಬರುತಾನೆಂದು
ಯಾಗ್ರವನೆ ಮಲ್ಲಯ್ಯ ಕಳಿಸುತಾನೆ

ತಲೆಯನ್ನು ತೂಗುತ್ತ ಹೆಜ್ಜೆಯ ಮಡಗುತ್ತ
ಹಿಂಡು ಹಿಂಡಾಗಿ ಹುಲಿಯೆ ಬರುತಾವೆ

ದುಟ್ಟು ಮುರುಗವು ಇವು ನೆಚ್ಚಬಾರದು ಎಂದು
ಒಂದು ಕೋತಿಯ ಯಾಸ ತಾಳಿದರು – ಜಗದೀಶ
ಆಲದ ಮರವ ಹತ್ತಿದರು
ಆಲದ ಮರವ ಹತ್ತಿನ್ನು ಜಗದೀಶ
ರಾಮನುಸ್ತವಾರಿ ನೋಡುತಾರೆ

ಬರುವಂಥ ಹುಲಿಗಳ ಕಂಡನು ರಾಮಯ್ಯ
ನಿನಗೆ ತೌರು ತಪ್ಪಿಕೆ ಅಕ್ಕ ಸಿರಿಗೌರಿ

ಕಣ್ಣು ದಪ್ಪಿನವನೆ ಹೊನ್ನ ಬಣ್ಣದ ಹುಲಿಯೆ
ಭಾವ ಮಲ್ಲಯ್ಯ ಇರುವ ಮಠವೆಲ್ಲಿ

ಸ್ವಾಮಿ ಹೆಸರನ್ನೆ ಕೇಳಿದವು ಯಾಗ್ರಗಳು
ಬಾಗಿ ಪಾದಕ್ಕೆ ಶರಣಂದೊ

ರಾಮಯ್ನ ಪಾದಕ್ಕೆ ಶರಣು ಮಾಡಿದ ಯಾಗ್ರ
ಒಂದು ಯೋಜಣ ಮುಂದೆ ಕಳುವ್ಯಾವು
ಮೈದಾಳು ರಾಮನು ಬರುವ ದಾರಿಯ ಒಳಗೆ
ಕೋತಿಯ ರೂಪದಲಿ ಜಗದೀಶ

ಕೋತಿಯ ರೂಪನಲಿ ಮರವೇರಿ ಜಗದೀಶ
ಹಣ್ಣನಾದರೆ ಇವನು ತಿನ್ನಲೆಂದು

ಒಂದು ಆಲದ ಹಣ್ಣ ಕಿತ್ತು ಎಸೆದನು ನೋಡು
ಕತ್ತೆತ್ತಿ ನೋಡಿದನು ಬಲರಾಮ

ಕೆಂಪಿನ ಮುಖದವನೆ ಹೊಳೆವ ಕಂಗಳ ಜಾಣ
ಕೊಂಬೆಯ ಏರಿ ಹಣ್ಣ ಕುಯ್ಯುವವನೆ – ಕಪಿರಾಜ
ಭಾವ ಮಲ್ಲಯ್ಯನ ಮಠವೆಲ್ಲೋ

ಸ್ವಾಮಿ ಅವರ ಹೆಸರ ಕರೆದದ್ದಕ್ಕೆ ಅಲ್ಲಿಂದ ಮಾಯವಾಗಿ
ಹೋಗುತಾರೆ ಕಾಡಿನಲ್ಲಿ ಗರುಡಾಳ ಪಕ್ಷಿಯನ್ನು ರಾಮಯ್ಯ ನೋಡುತಾನೆ.

ಸಕಲಾತಿ ಮೈಯವನೆ ಮಕರಂಭೆ ಬಾಯವನೆ
ಆದಿ ಶಕುನಕೆ ನೀನು ದೊರೆರಾಯ – ಗರುಡಾಳ
ನಮ್ಮ ಗಂಗೆ ಪಾರುವತಿ ಮಠವೆಲ್ಲಿ
ಅಕ್ಕಯ್ಯನವರು ಗೌರಮ್ಮನವರಂತೆ ಸ್ವಾಮಿ ಭಾವನಂತೆ ಎಂದು ಗರುಡ ಪಾದಕೆ
ಬಂದು ಶರಣಂತು.

ಹನ್ನೆರಡು ಸಾವಿರ ಗಿಣಿ ಹಿಂಡು ನೋಡಯ್ಯ
ಹಾರಿ ಬಂದವು ಅಲ್ಲಿಗಾಗ

ಪಚ್ಚೆಯ ಮೈಯವನೆ ಪವಳದ ಬಾಯವನೆ
ಮಕ್ಕಳಿಲ್ಲದವರಿಗೆ ಅತಿಮುದ್ದೆ – ಗಿಣಿರಾಮ
ನಮ್ಮ ಅಕ್ಕ ಗೌರಮ್ಮ ಇರುವ ಮಠವೆಲ್ಲಿ

ಕಾಡು ಕೋಳಿಯ ಹಿಂಡೆ ನವಿಲು ಹಂಸದ ಪಕ್ಷಿ
ಓಡಾಡುವಂಥ ಹುಲ್ಲೇಕರು ಹಿಂಡೆ – ಉರುಗನೆಬ್ಬಾವೆ
ಭಾವ ಮಲ್ಲಯ್ನ ಮಠವೆಲ್ಲಿ

ಕೈಲಾಸ ಮಾರ್ಗದಲ್ಲಿ ಬರುವ ಮೃಗಗಳಿಗೆಲ್ಲವಕ್ಕೂ ಹೆಸರ ಕಟ್ಟುತ್ತಾನೆ

ಉದ್ದನೆ ಮುಖದವನೆ ಕಪ್ಪಿನ ಮೈನವನೆ
ಈ ಭೂಮಿಗೇಳು ದಿನಕೆ ಹಿರಿಯವನೆ – ಜಾಂಬನೆ
ನಮ್ಮ ಪಾರ್ವತಿ ಇರುವ ಮಠವೆಲ್ಲಿ

ಪಾರ್ವತಿಯ ಸುದ್ದಿ ಕೇಳಿದರು ಜಾಂಬವರು
ಬಾಗಿ ಪಾದಕೆ ಬಂದು ಶರಣಂತು

ಕಲ್ಲೆಲ್ಲಲಿಂಗ ಹುಲ್ಲು ರಾಜಣವೆಲ್ಲ
ಗುಳ್ಳದಾಸುಂಡೆ ಪವಡೆ ಮುತ್ತು – ಅದುವಲ್ಲೊ
ಮಲ್ಲಯ್ಯ ಇರುವ ಗಿರಿಯಲ್ಲಿ

ಸ್ವಾಮಿ ಸೂಜಿ ಹಾಕಲು ಎಡೆ ಇಲ್ಲದಂತೆ ಪರ್ವತವೆಲ್ಲಾ ಲಿಂಗವಾಯಿತು. ತುಳಿದು ಬರಲಾರ ಎಂದು ಹಾಗೆ ಮಡಿದ್ದಾನೆ ಸ್ವಾಮಿ

ಲಿಂಗದ ಮೈಮೆಯನು ಕಂಡನು ರಾಮಯ್ಯ
ಅತ್ತತ್ತು ದುಃಖ ಮಾಡುತಾನೆ
ಅಕ್ಕ ಭಾವರುಗಳನು ಕರೆಯಲು ನಾ ಬಂದು
ಹಿಂದಕ್ಕಾದರು ಇನ್ನು ಹೋಗಲಾರೆ – ಈ ಗಿರಿಯಲ್ಲಿ
ಪ್ರಾಣವನೆ ನಾನು ಬಿಡುತೀನಿ

ಆಗಲೀಗ

ನಡೆದ ಪಾದದ ಹೆಜ್ಜೆ ಗಲಿರು ಗಲಿರು ಅನುತ
ಲಿಂಗವ ತುಳಿದು ಬರುತಾನೆ

ಸ್ವಾಮಿ ಲಿಂಗದ ಮೇಲೆ ಪಾದವನೆ ಮಡಗಿದನು
ರಕ್ತದ ಜ್ವಾಲೆಯೆ ತಾನಾಗಿ ರಾಮಯ್ನ
ಪಾದದಲಿ ಆಗ ಸುರಿದೀತು

ಮಿಣಿಕೆ ಹಣ್ಣಿನ ತೆರದಿ ಬಾಯ ಬಿಟ್ಟಿತು ಪಾದ
ಮುಂದ ಮುಂದಕೆ ರಾಮ ನಡೆಯುತಾನೆ
ಪಾದ ಹೋದರು ಏನು ಮಂಡಿಯಲಿ ತೆವೆಯುವೆನು
ಮಂಡಿಯಲಿ ಯೋಜಣವ ತೆವೆದನಲ್ಲ – ರಾಮಯ್ಯ
ನೆತ್ತರವೆ ಹರಿದೀತು ಧರಣಿಯಲ್ಲಿ

ಮಂಡಿ ಹೋದರೆ ಏನು ಮೊಳಕೈಲಿ ತೆವೆಯುವೆನು
ಎಂದು ಯೋಜಣವ ಮತ್ತೆ ತೆವೆದನಲ್ಲ

ಲಿಂಗದ ಮೇಲೆಲ್ಲ ರಕ್ತವೆ ಚಲ್ಲಾಡಿ
ಬಾಲರಮನ ಸ್ಥಿತಿಯು ಇಷ್ಟಾಯಿತು

ಆಗಲೀಗ ಮಕ್ಕಳು ಈಜುವ ಹಾಗೆ ಎದೆಯನ್ನು ಹಾಕಿ ಈಜುತ್ತಿದ್ದಾನೆ.

ಗುಂಡನೆ ಹತ್ತಿದನು ಗುಂಡನೆ ಇಳಿದನು
ಗುಂಡಿಗೆ ಒಡೆದು ರಕ್ತ ಸುರಿದು

ಗುಂಡಿಗೇಲಿ ಒಂದು ಯೋಜಣವ ತೆವೆಯಲು
ರಕ್ತ ಚಲ್ಲಿತು ಆಗ ಧರಣಿ ಮ್ಯಾಲೆ
ಕಲ್ಲೆಲ್ಲ ಕಾವಿಯ ಕಲ್ಲಾಯಿತಾವಾಗ
ಜಂಗಮರು ಹಚ್ಚಿಕೊಳ್ಳುವ ಕಾವಿ ಕಲ್ಲು

ಆಗ ಮೈದಾಳ ರಾಮಣ್ಣ

ಕರೆಯಕೆ ನಾ ಬಂದು ಹಿಂತಿರುಗಿ ಹೋಗುವೆನೆ
ಈ ಗಿರಿಯಲ್ಲಿ ಪ್ರಾಣ ಬಿಡುತೀನಿ – ಜಗದೀಶ
ನನಗೆ ಭಾವನಾದರೆ ಬಂದು ಮಕತೋರು

ಮೈದಾಳು ರಾಮ ಪರ್ವತದ ಮೇಲೆ ಹತ್ತಿ ಕೆಳಗೆ ಕೈಬಿಟ್ಟಂತ ಸಮಯದಲ್ಲಿ

ಕೆಳಗೆ ಮುತ್ತಿನ ಚಂಡ ಇಳಿದಾಗೆ ರಾಮಯ್ನ
ಅಂಗೈಯ ಮ್ಯಾಲೆ ತರುತಾರೆ

ಚಂಡು ಬಂದ ಹಾಗೆ ಆತುಕೊಂಡರು. ಸ್ವಾಮಿಯ ಹಸ್ತಕ್ಕೆ
ಬಿದ್ದಾಗ ಅವನ ನೋವೆಲ್ಲಾ ಕಳೆಯಿತು. ಸ್ವಾಮಿ ಹಸ್ತ ಎಂಬುದು ಗೊತ್ತಿಲ್ಲ
ಮೂರ್ಚೆ ಹೋಗಿದಾನೆ, ಸ್ವಾಮಿ ಅವನನ್ನು ಮಾಯದಿಂದ ಕರೆದುಕೊಂಡು ಹೋಗಿ
ಋಷಿಯಾಶ್ರಮದಲ್ಲಿ ಬಿಟ್ಟ ಋಷಿಯಾಸದಲ್ಲಿ ಬಂದರು

ಕಣ್ಣು ರೆಪ್ಪೆಯ ಒಳಗೆ ಕಣಜ ಮೂಡಿದ ಶರಣರು
ಮೂಗಿನಲಿ ಜೇನಿಕ್ಕಿದ ಮುನಿಗಳು – ಪಶುಪತಿಗಳು
ಅವರು ಲಕ್ಷಾದಿಲಕ್ಷ ನವಕೋಟಿ

ಬೆಟ್ಟುಗುರು ಧರೆಗಿಳಿದವರು ಬೆಟ್ಟವನು ಹೊತ್ತವರು
ಗಟ್ಟವನು ಹತ್ತ ಶರಣರು

ಎಕ್ಕತ್ತಿನ ಮೇಲೆ ಮತ್ತಿ ಮರ ಹುಟ್ಟಿರುವ
ನವಕೋಟಿ ಶರಣರು ಇರುವರಲ್ಲಿ

ಅನ್ನದಾನವನು ಕನ್ಯಾದಾನವನು
ಮಾಡಿರುವ ಮಾನ್ಯರಿಗೆ ನೋಡು – ಲೋಕದಲಿ
ಸಿಕ್ಕುವುದು ಇಂಥ ದರುಶನವು

ತಲೆಯ ಕೆಳಕು ಮಾಡಿ ಪಾದ ಮೇಲಕು ಮಾಡಿ
ಆಶ್ರಮದಲ್ಲಿ ಅವರು ಇರುವರಲ್ಲ

ಸ್ವಾಮಿಯವರು ಅಲ್ಲಿಗೆ ಬಂದು ಆ ಬಾಲಕನನ್ನು ಕೇಳುತ್ತಾರೆ

ಯಾರು ಯಾರಲೊ ನೀನು ಚಿಕ್ಕಡಗ ಬಾಲಕನೆ
ಆಶ್ರಮಕೆ ಬಂದ ಬಗೆ ಹೇಳು

"ಋಷಿಗಳು ಯಾರಾದರು ಕಣ್ಣು ಬಿಟ್ಟು ನೋಡಿದರೆ ಬಸ್ಮವಾಗಿ ಹೋಗೀಯ ಹುಚ್ಚ. ಈ ಋಷಿ ಆಶ್ರಮಕ್ಕೆ ಬರಬಹುದೆ ನೀನು". "ಯಾರು ಸ್ವಾಮಿ ಋಷಿಗಳು ನನ್ನ ತಪಸು ತೀರಿತು ಮುಂದೆ ಹೋಗುವೆ" ಎಂದು ಬಾಲ ರಾಮಯ್ಯ ನುಡಿದನು. ಋಷಿಗಳು ತಮ್ಮ ಜಡೆಯನ್ನು ತೋರಿದರು. "ಇದು ಜಡೆಯೇ? ತನ್ನ ಜಡೆಯನ್ನು ಅವರಿಗೆ ಹೋಲಿಸಿ. ನಾನು ಕೈಲಾಸಕ್ಕೆ ಹೋಗುತ್ತೇನೆ ಎನ್ನುತ್ತಾನೆ ರಾಮ.

"ಕೈಲಾಸದಲ್ಲಿ ಕೊತ್ತಿಗೆ ಲಿಂಗ, ಕೋಳಿಗೆ ಲಿಂಗ, ನಾಯಿಗೆ ಲಿಂಗ, ನರಿಗೆ ಲಿಂಗ, ಈರೆಂಭತ್ತೇಳು ಕೋಟಿಗೂ ಲಿಂಗ, ಲಿಂಗವಿಲ್ಲದ ಭವಿ ನೀನು, ನಿನ್ನ ಕೈಲಾಸಕ್ಕೆ ಬಿಡೋದಿಲ್ಲ ಹೋಗು" ಅಂದರು.

"ಸರಿ ಜಂಗಮರೆ ನಿಮಗೆ ಲಿಂಗವಿದೆಯೆ"
"ನೋಡು" ಎಂದು ತಮ್ಮ ರುದ್ರಾಕ್ಷಿ ತೆಗೆದು ತೋರಿದರು
"ಇವು ಮುಂದೆ ಪರ್ವತದಲ್ಲಿ ಬೇಕಾದಷ್ಟು ಸುರಿದಿದ್ದವು. ಇವು ರುದ್ರಮಣಿಕಾಯಿ ಲಿಂಗವಲ್ಲ". "ಕಾಯಕ ಲಿಂಗ ನೋಡು" ಎಂದು ಕರಡಿಗೆ ಒಳಗಲ ಪಂಚಲಿಂಗ ತೆಗೆದು ತೋರಿಸಿದರು.
"ಸ್ವಾಮಿ ಇದು ಬಳಪದಕಲ್ಲಲ್ಲವೆ ಬುದ್ದಿ !" "ಅಯ್ಯ ನಮ್ಮ ರುದ್ರಾಕ್ಷಿ ರುದ್ರಮಣಿಕಾಯಿ. ಪಂಚಲಿಂಗ ಬಳಪಿನ ಕಲ್ಲು. ನಿನ್ನ ಲಿಂಗವೆಲ್ಲ?"

"ನನ್ನ ಆತ್ಮದಲ್ಲಿದೆ"
"ನೋಡಬೇಕಲ್ಲ "
"ಬೇಕಾದರೆ ತೋರಿಸುತ್ತೇನೆ"

ಚಂದ್ರಾಯುಧವನ್ನೆ ತೆಗೆದನು ರಾಮಯ್ಯ

ಕೈಲಾಸದ ಕಡೆಯ ಬಾಗುಲಲಿ
ಕುತ್ತಿಗೆಯ ತಾವು ಕತ್ತಿಯನು ನಾಟಿಸಿದ
ತನ್ನ ಮೈಯನೆ ಎರಡು ಭಾಗ ಮಾಡಿ

"ನೋಡಿ ಸ್ವಾಮಿ ನರಲಿಂಗವ" ಎಂದು ಬಿಟ್ಟ. ಎರಡು ದೊಕ್ಕೆಯನ್ನು ಹಿಗ್ಗಲಿಸಿ ತೋರಿಬಿಟ್ಟ.
ಪಂಚಲಿಂಗದ ಮೇಲೆ ಪರಂಜ್ಯೋತಿ ಉರಿಯುತದೆ
ನೂರೊಂದು ಲಿಂಗ ಇರುವುದಲ್ಲ

ಒಂದು ಈಬೂತಿಗಟ್ಟಿ ಒಂದು ಬಿಲ್ವ ಪತ್ರೆ, ಒಂದು ಕಾವಿದಾಳ, ಒಂದು ದೀಪ ಆಗ ಎದೆಯ ಕಾಯದ ಲಿಂಗದ ಸುತ್ತಲೂ ಇದ್ದವು. ಆ ಲಿಂಗಕ್ಕೆ ಈಗ ಶರಣಂದ್ರು

ಮೈದಾಳು ರಾಮನು ಲಿಂಗದ ಪವಾಡ ಮಾಡಲು ಕೈಲಾಸದ ದ್ವಾರದಲ್ಲಿದ್ದಂಥ ನಾಲಿಗಿಲ್ಲದ ಗಂಟೆ ಢಣಿರೆಂದೊ

ನಾಲಿಗಿಲ್ಲದ ಗಂಟಿನಾದ ಸಪ್ತವ ಮಾಡೆ
ಕೈಲಾಸಕೆ ರಾಮ ಬರುತಾನೆ – ಅನುತೇಳಿ
ಶಿವದಂಡು ನದರು ತರುತಾರೆ

ಎದ್ದೇಳೊ ರಾಮ ಜಯ ಜಯ
ಎದ್ದೇಳೋ ರಾಮ ಜಯ ಜಯ

ಎಂದು ಜಗದೀಶ ಮೂರು ಈಭೂತಿಗಟ್ಟಿ ಹೊಟ್ಟೆಯ ಮೇಲೆ ಬರೆದು
ಶರೀರವನ್ನು ಕೂಡಿಸಿ ಬೆನ್ನು ತಟ್ಟಿ ಮೇಲೆ ಎಳಿಸಿದರು.

ನಿಜವರಿತು ಲಿಂಗವನು ಪೂಜೆ ಮಾಡುವರ್ಯಾರು
ಅದರ ನೀಜವೇನು ಖಂಡಿತವ ತಿಳಿದವರ ತೋರಿ

ಆತ್ಮ ಎಂಬುದರ ಒಳಗೆ ಅಮೃತ ಚಿಲಮೆಯ ತೆಗೆದು
ನೀತಿ ಮಾರ್ಗವ ತಿಳಿದು ಕೊಡನ ಮಾಡಿ

ಕಾಮ ಕ್ರೋಧವ ಕಳೆದು ಕಣ್ಣಿಯ ಮಾಡಿ
ಭಕ್ತಯಿಂದಲಿ ಯಜ್ಞಕ್ಕೆ ಅಗ್ನಿ ತಂದವನ ತೋರಿ

ಪಂಚತತ್ವದ ಜ್ಞಾನದಲಿ ಭಾಮಬಾಮಿಣಿ ತಿಳಿದು
ಪಂಚಾಕ್ಷರಿ ಎನುವಂತ ಜಗಲಿ ಏರಿ

ಪರಂಜ್ಯೋತಿಯವನ ಬೆಳಕ ಕಂಡು ಪೂಜಿಸುವನ ತೋರಿ

ನಿಜವರಿತು ಲಿಂಗವನು ಪೂಜೆ ಮಾಡುವರ್‍ಯಾರು
ಅದರ ನಿಜ ನೇಮ ಖಂಡಿತವ ತಿಳಿದವನ ತೋರಿ

ಸ್ವಾಮಿ ಮಲ್ಲಯ್ಯನವರ ದಂಡು ಬಂದು "ಏನು ಕಾರಣ ಬಂದೆ?" ಎಂದು ಕೇಳಿತು. "ಅಕ್ಕಾಜಿ ಗೌರಮ್ಮ ಭಾವಾಜಿ ಮಲ್ಲಯ್ಯ. ಇವರ ಕೈಲಾಸಕೆ ನಾನು ಹೋಗುತೀನಿ, ನನಗೆ ದಾರಿ ತೋರಿ" ಎಂದನು. ಮೂಡಲಾಗಿ ಅವರು ಮಾರ್ಗ ತೋರಿದರು. ಮೂರು ಯೋಜನ ದೂರದಲ್ಲಿ ನಂದಿ ಕಳಸ ದಗದನೆ ಉರಿಯುತ್ತದೆಯಲ್ಲ ಅದೆ ನಿಮ್ಮ ಅಕ್ಕಯ್ಯನವರ ಅರಮನೆ,

ಅತ್ತಾರು ಗಾವುದ ಇತ್ತಾರು ಗಾವುದ
ಅತ್ತೆ ಮಾವನ ಭಕ್ತಿಯಿಂದ –ಕರಕೊಂಡು
ಹೋದಳು ಸೊಸೆ ಹೇಮರೆಡ್ಡಿ ಮಲ್ಲವನ

ಅಂತ ಹೇಮರೆಡ್ಡಿ ಸೊಸೆ ಮಲ್ಲವ ಆರತಿ ತರುತ್ತಿದ್ದಾಳೆ, ಕೈಲಾಸ
ಮಾರ್ಗದಲ್ಲಿ ಹವಳದ ತೋರಣ ಮುತ್ತಿನ ತೋರಣ ಕಟ್ಟಿದೆ.

ಕಜ್ಜುರದ ವನವಯ್ಯ ದೀಪಾಕ್ಷಿ ವನವಯ್ಯ
ಹರನು ಮಲ್ಲಯ್ಯ ಗಿರಿಯಲ್ಲಿ.

ಅವನಿಗೆ ಸೆಕೆ ಬೀಸೋರು ಲೆಕ್ಕವಿಲ್ಲ; ಪಾನಕ ಪನ್ನೀರು ಕೊಡತಕ್ಕವರು ಲೆಕ್ಕವಿಲ. ಅವನಿಗೆ ಏನೂ ಬೇಡ; ಅಕ್ಕನ ದರ್ಶನವೊಂದು ಸಾಕು ಅಂದುಕೊಂಡು ಕಡೆಯ ದ್ವಾರಕೆ ಬರುತಾನೆ.

ಅಷ್ಟೊತ್ತಿಗೆ ಹೂವಿನ ರಥದ ಮೇಲೆ

ಕಾವಲಲ್ಲಿ ಕಲಿಭೀರ ಬಾಗಿಲಲ್ಲಿ ಭೈರುವ
ಶಣುಮುಖದೇವ ಎಲ್ಲಾರು – ಅವಾಗ
ಹೂವಿನ ರಥವ ತರುತಾರೆ
ಹೂವಿನ ರಥದ ಮೇಲೆ ಕೂರಿಸಿ ಕೈಲಾಸಕೆ
ಕರಕೊಂಡು ಈಗ ಹೋಗುತಾರೆ

ನವರತ್ನ ಖಚಿತದ ಮಂಚದ ಮೇಲಾದರೆ
ಕುಂತಿದ್ದ ಗೌರಮ್ಮನ ನೋಡುತಾನೆ

ರಥವನ್ನು ಇಳಿದನು ದಿಗ ದಿಗನೆ ಓಡಿದನು
ಹೋಗಿ ಶರಣೆಂದ ಪಾರ್ವತಿಗೆ

ದಿಗ ದಿಗನೆ ಓಡಿ ಬಂದಂಥ ತಮ್ಮನನು
ನೋಡಿ ಪಾರ್ವತಿಯು ಏನ ನುಡಿದಾಳು

ಅಕ್ಕರೆಯ ತಮ್ಮನೆ ಚಿಕ್ಕವನೆ ರಾಮಯ್ಯ
ನಮ್ಮ ಹೆತ್ತಮ್ಮ ಚಂದಾಗಿ ಇರುವಳೇನೊ

ಮಾದೇವಿ ಚಂದವೆ ಮಠ ಚಂದವೆ ಕಂದಣ್ಣ
ಮಾನ್ಯವರು ಚಂದಾಗಿ ಇರುವರೇನೊ

"ನಿಮ್ಮ ಪಾದ ದಯದಿಂದ ಎಲ್ಲವೂ ಕ್ಷೇಮ"

"ಅನ್ನ ಉಣ್ಣದೆ ನೀರು ಕುಡಿಯದೆ ಗೋರಾರಣ್ಯದಲ್ಲಿ ಕಲ್ಲು ಮುಳ್ಳು ತುಳಿದುಕೊಂಡು ಯಾವ ರೀತಿಯಲ್ಲಿ ಬಂದೆಯಪ್ಪ ತಮ್ಮ! ಒಂದು ಒಡಹುಟ್ಟಿಗಾಗಿ ಇಷ್ಟುದೂರ ಬಂದೆಯಲ್ಲೋ ಎಂದು ಮುತ್ತಿಕ್ಕಿ ಮುದ್ದಾಡುತಾಳೆ. ಆಗ ಶಿವರಾಯ ಮೈದಾಳು ರಾಮಯ್ಯನನ್ನು ನೋಡಿ–

ಅಕ್ಕರೆಯ ಭಾಮೈದ ಚಿಕ್ಕವನೆ ರಾಮಯ್ಯ
ನಮ್ಮ ಅತ್ಯಮ್ಮ ಚಂದಾಗಿ ಇರುವಳೇನೊ

ಮಹದೇವಿ ಚಂದವೆ ಮಠ ಚಂದವೆ ಕಂದ
ಮಾನ್ಯವರು ಚಂದಾಗಿ ಇರುವರೇನೊ

"ಭೀಮಾವತಿ ಪಟ್ಟಣದಲ್ಲಿ ಎಲ್ಲರೂ ಕ್ಷೇಮವೇ? ಯಾರ ಕೈಲಾದರೂ ಸುದ್ದಿ ಹೇಳಿ ಕಳಿಸಿದ್ದರೆ ಬುರತ್ತಿದ್ದೆವಲ್ಲ. ಯಾರ ಕೈಲಾದರು ಓಲೆ ಕಳಿಸಿದ್ದರೆ ಸಾಕಾಗಿತ್ತು" ಹಾಗಂದು ಮೈದಾಳ ರಾಮನ ಕಣ್ಣೀರು ಒರಸಿ ಮಂಡೆ ಸವರಿ ಮುದ್ದಾಡುತವರೆ ಜಗದೀಶ. ತಾನು ಬಂದ ಕಾರಣವೇನು ಎಂದು ತಿಳಿಸುತ್ತಾನೆ. ಮೈದಾಳ ರಾಮಣ್ಣ ಆ ಮಾತನ್ನು ಕೇಳಿ ಜಗದೀಶನು–

ನಿನ್ನ ಕಣ್ಣಲ್ಲಿ ಕಂಬನಿಯು ಬಿದ್ದರೆ
ಭಸ್ಮವಾಗುತದೆ ನಮ್ಮ ಕೈಲಾಸ

ನಾವು ಬರುತೀವಿ ಮನೆಯಲ್ಲಿ ಏನುಂಟು
ಏನೇನು ಇದೆಯೋ ನೀ ತಿಳಿಸೊ

ಲಕ್ಷ ಕಂಡುಗ ಉದ್ದೀನ ಬೇಳೆಯ
ಹಪ್ಪಳವ ನಾನು ಇಕ್ಕಿಸಿರುವೆ –ಭಾವಜಿ
ಮಿಕ್ಕ ಸಾಮಾನ ನೋಡಯ್ಯ

"ಅಷ್ಟು ಸಂಭ್ರಮವೆ ನಮ್ಮ ಕೈಲಾಸದರಮನೆಯ ಬೀಗ ತೆಗೆಯುವೆ ನಮ್ಮ ಭಾಗ್ಯವ ನೋಡು ಬಾ"
ಹನ್ನೆರಡು ಸಾವಿರ ಗಾರೆ ತೊಟ್ಟಿಯ ತುಂಬ
ನವರತ್ನ ಸರಿ ಬೆರಸಿ ತುಂಬ್ಯದೆ – ರಾಮಯ್ಯ
ಏನುಂಟು ನಿನ್ನ ಪಟ್ಟಣದಿ

ಏನು ಮಾತನು ನೀವು ಆಡುವಿರಿ ಭಾವಾಜಿ
ನಿಮ್ಮ ರತ್ನವ ಯಾರು ಕೇಳುತಾರೆ _ ನನ್ನ ಬಳಿ
ಜೀವ ರತ್ನವೆ ತಾವು ಇರುವುದಲ್ಲ

ಹುಳ್ಳಿ ರತ್ನವು ರಾಗಿ ಜೋಳವು ಇದೆಯಲ್ಲ
ಸಾಯುವನ ಬಾಯಿಗೆ ಇವು ಹೆಚ್ಚು ಕೇಳು

ಕಿರಿಯ ರಾಮಯ್ಯನ ಮಾತ ಕೇಳಿದ ಶಿವನು
ಸಿವದಂಡ ಹೊರಡಿಸಲು ಬೇಕು ಎಂದು

ರಣಗಾಳೆ ಹಿಡಿಸಿದರು ಶಿವದಂಡ ಬರಮಾಡಿ
ಭೀಮಾವತಿಗೀಗ ಹೊರಡಬೇಕು
ಮೈದಾಳು ರಾಮಯ್ಯ ತಕ್ಕೊಂಡು ಹೋಗಿದ್ದ
ಬುತ್ತಿಯನಾದರೆ ಬಿಚ್ಚುತಾನೆ

ಬುತ್ತಿಯ ಬಿಚ್ಚಿದನು ಊಟಕ್ಕೆ ಬಡಿಸಿದನು
ಅಕ್ಕ ಭಾವಯ್ಯ ಇಬ್ಬರಿಗು

ಎಲ್ಲರೂ ಹಸ್ತ ತೊಳೆದು ಮೈದಾಳು ರಾಮ ನರಲೋಕದಲ್ಲಿ ತಾಯಿಯ ಜೊತೆಯಲ್ಲಿ ಏನು ಹೇಳಿದ್ದನೋ ಅದೇ ರೀತಿಯಲ್ಲಿ ಶರಣು ಮಹಾತ್ಮರಿಗೆ ಕಾಡಿಕಟ್ಟಿಸಿದ್ದಾನೆ. ಕೈಲಾಸದ ಸಾರೋಟನೆಲ್ಲ ಕಟ್ಟಿಸಿ, ಅಕ್ಕನಿಗೆ ಅಂದಣ ಕೊಟ್ಟು ಭಾವಜಿಗೆ ಸೇರು ಕೊಟ್ಟು, ಅಪ್ಪನ ಮನೆಯ ತವರಿಗೆ ಪರಿವಾರ ಸಮೇತ ಎಲ್ಲರನ್ನೂ ಹೊರಡಿಸಿದ್ದಾನೆ.

ಬಲದಲ್ಲಿ ಬ್ರಹ್ಮನು ಎಡದಲ್ಲಿ ನಾರಾಯಣ
ಮಧ್ಯದ ಒಳಗೆ ಜಗದೀಶ – ಸೇರಿಕೊಂಡು
ತ್ರೀಮೂರ್ತಿ ಸಮನಾಗಿ ಬರುತಾರೆ

ಬಲದಲ್ಲಿ ಬಸವನ ದಾಳ ಎಡದಲ್ಲಿ ನಂದಿಕಂಬ
ಮಲ್ಲಯ್ಯನ ಕೊರಳಲ್ಲಿ ನಾಗೇಂದ್ರ
ತಾಂಬ್ರಾದ ಪಂಜ್ರದಲಿ ಗಿಣಿರಾಮ ಸಯಿವಾಗಿ
ಪಾರ್ವತಿ ಹೊರಟಾಳು ತವರೀಗೆ

ತವರಿಗೆ ಹೊರಟು ಬರುವ ಯಾಳ್ಯದ ಒಳಗೆ
ಡಂಕಣ ಚಾರಿಯ ಕರಸ್ಯವರೆ

ಮೈದಾಳು ರಾಮನ ಅರಮನೆಗೆ ಆಗಲೆ
ಮುತ್ತಿನ ಮಳೆಯ ಕರಸ್ಯವರೆ

ಮೈದಾಳು ರಾಮನ ಅರಮನೆ ಆದರೆ
ಮುತ್ತಿನರಮನೆಯ ಕಡೆಸ್ಯಾರೆ

ಒಂಬತ್ತು ಜನ ಲಕ್ಷ್ಮೀದೇವಿಯರು ಕೈಲಾಸದಿಂದ ನರಲೋಕಕ್ಕೆ ಹೋಗಿ ಸೇರಿದ್ದಾರೆ. ಕೈಲಾಸದಿಂದ ನರಲೋಕಕ್ಕೆ ರಸ್ತೆ ಗೇದಿದ್ದಾರೆ. ಆಳು ಮದ್ದಾನೆ ಮುಂದೆ ಬಂದವು. ಅದೇ ದಾರಿಯ ಒಳಗೆ ಅರವಂಟಿಗೆ ಮಾಡಿಸಿದ್ದಾರೆ ಬಾಗಿಲಲ್ಲಿ. ಮೈದಾಳು ರಾಮ ನಿಂತುಕಂಡು ಶಿವ ದಂಡಿಗೆ ಊಟ ಮಾಡಿಸಿ ದಂಡು ಮುಂದೆ ಹೋಗುತ್ತಿವೆ.

ಒಂದೆಂಬೊ ಯೋಜಣ ಎರಡೆಂಬ ಯೋಜುಣ
ಅರವತ್ತು ಯೋಜುಣ ಬರುತ್ತಾರೆ

ಅಳಿಯಗುಳಿಗೆ ಹೋಗೊ ಅಳಿಯ ಪರಮೇಶ್ವರನೆ
ಏರುವುದು ಒಂದು ಮುದಿ ಎತ್ತು

ಹಾಗೆಂಬುದಾಗಿ ಮೈದಾಳು ರಾಮ ಸರಸಕ್ಕೆ ನುಡಿಯುತ್ತಾನೆ. ಬಲಭಾಗದಲ್ಲಿ ಪಾರ್ವತಿ ಬರುತ್ತಿದ್ದಾಳೆ.

ಎತ್ತು ಎನ್ನಬಹುದೆ ಬಲಗೋಲು ಬಸವನ
ಸುತ್ತಾರೆ ಏಳು ಲೋಕ ಸಲವೋನ ನಂದಿಬಸವನ

ನೀನು ಮುದಿ ಎತ್ತು ಎಂದು ಕರಿಬೌದೆ ಎಂದು ಪರಮೇಶ್ವರನು ನುಡಿಯುತ್ತಾನೆ. ಆಗ ಪಾರ್ವತಾದೇವಿ

ಅರಿವ ತಿಳಿಯದ ಮಗನು ಆಡಿದರೆ ಜಗದೀಶ
ಬಡವ ಕಂದನ ಮ್ಯಾಲೆ ಕೋಪವ್ಯಾಕೆ

ಹೀಗೆ ಮಾತಾಡಿಕೊಂಡು ಸ್ವಾಮಿಯವರು ನರಲೋಕಕ್ಕೆ ಬಂದರು. ಅವನ ಜೊತೆ ಇದ್ದ ಹುಡುಗರೆಲ್ಲ ಸೋಜಿಗಪಟ್ಟರು. ಆ ಪುಣ್ಯಾತ್ಮನ ಪಾದದಯದಿಂದ ಜನ ನದರು ಒಪ್ಪಿಸಲು ಬರುತ್ತಿದ್ದರು.

ಭೀಮಾವತಿ ಪಟ್ಟಣಕೆ ಬಂದರು ಜಗದೀಶ
ರಥವನ್ನೆ ಇಳಿದು ಬರುವೋರು

ಆರತಿ ನೈವೇದ್ಯ ಆಯಿತು ಅವರೀಗೆ
ತಾಯಿ ಗೌರಮ್ಮ ಜಗನ್ಮಾತೆ – ಹೋಗಿನ್ನು
ಮಂಚದ ಮೇಲೆ ಕುಳಿತಳು.

ಶಿವನು ಗೌರಮ್ಮನು ಮಂಚದ ಮೇಲಿನ್ನು
ಕುಳಿತು ನೈವೇದ್ಯವನೆ ಪಡೆದರಲ್ಲ

ಶಿವದಂಡೆಲ್ಲಾ ಅವರವರ ಬಿಡಾರದಲ್ಲಿ ಕೂತುಕೊಂಡಿತು. ಅನ್ನ ಊಟ ಮಾಡೋರಿಗೆ ಅನ್ನ, ಅನ್ನ ಊಟ ಮಾಡದವರಿಗೆ ಫಲಾಹಾರ. ನೂರೊಂದು ಬಗೆಯ ಅಡಿಗೆ ಮಾಡ್ಯವರೆ. ಪಾರ್ವತಿ ಅಮ್ಮನವರಿಗೆ ಸಾಂಬ್ರಾಣಿ ಬೆಳಗಿ ನಮಸ್ಕಾರ ಮಾಡಿದ್ದಾರೆ. ಎಲ್ಲರೂ ಊಟ ಮಾಡಿದರು. ಈಳ್ಯವನ್ನು ಸಲ್ಲಿಸಿದರು, ಗೌರಮ್ಮನವರು ಜಗದೀಶನ ಜೊತೆಯಲ್ಲಿ ಬಂದು ಮಂಚದಲ್ಲಿ ಕುಳಿತರು. ಮೈದಾಳು ರಾಮಯ್ಯ ಉಂಗುರವನ್ನು ತಂದು ಸ್ವಾಮಿ ಪಾದದಲ್ಲಿ ಇರಿಸಿದ. ಅನ್ನ ದಾನಕ್ಕೆ ಅನ್ನದಾನ ಮಾಡಿ, ದಾನವನ್ನೆ ಮಾಡಿಸಿ, ಶಿವದಂಡಿಗೆಲ್ಲ ಶಿವದಂಡೆ ನಿಂತುಕಂಡು, ಎಲ್ಲವನ್ನೂ ಮಾಡಿತು. ಹೊಡೆದ ತೆಂಗಿನಕಾಯಿ ಇನಿಯ ಬಾಳೆಹಣ್ಣಿನಿಂದ ಪೂಜೆಮಾಡುತ್ತಾರೆ ಒಬ್ಬಟ್ಟು, ಹೋಳಿಗೆ, ಕಡುಬು, ಕಾಯಾಲು ಸಿಕ್ಕಿಮಂಡೆ, ಗಣೇಶನಿಗೆ ಬಡಿಸುತ್ತಾರೆ. ಸಾಂಬ್ರಾಣಿ ಬೆಳಗಿ ನಮಸ್ಕಾರ ಮಾಡಿದರು.

ಒಂದು ಜಿನ ತುಂಬಿತು ಎರಡೆಂಬೊ ಜಿನ ತುಂಬಿ
ಮೂರು ಜಿನ ತುಂಬಿ ಬಟುವಾಯ್ತು

ಆಗ ಸ್ವಾಮಿಯವರು ಈಗ ನಮ್ಮನ್ನು ಕಳುಹಿಸಿಕೊಡು ಎಂದು ಕೇಳಿದರು. ಆಗ ಮೈದಾಳು ರಾಮನು ಹನ್ನೆರಡು ವರ್ಷ ಇಲ್ಲೂ ಇರಲಿ ಅಂದನು. ಪಾರ್ವತ ದೇವಿಯು "ಸ್ವಾಮಿ ಮ್ಯಾದಾಳು ರಾಮ ಸತ್ಯಾತ್ಮ ಆಡಿದ ಮಾತು ಹುಸಿಯಲ್ಲ. ಹನ್ನೊಂದು ವರ್ಷಕೆ ಹನ್ನೊಂದು ಜಿನ ಮಾಡಿಕೊಳ್ಳಿ: ನಾನು ಬಂದು ಹೋಗುತ್ತೇನೆ". "ಗೌರಿ ಹಬ್ಬದಲ್ಲಿ ಅಪ್ಪನ ಮನೆಗೆ ಹೆಣ್ಣುಮಕ್ಕಳು ಹೋಗಲೇಬೇಕು" ಎಂದು ಶಿವನ ಅಪ್ಪಣೆಯಾಯಿತು.

ಹನ್ನೊಂದು ದಿನ ತುಂಬಿತು. ಎಲ್ಲರೂ ಕೈಲಾಸಕ್ಕೆ ಹೊರಟರು. ರಥಕ್ಕೆ ಎಲ್ಲವನ್ನೂ ತುಂಬಿಕೊಂಡರು. ಗೌರಾಯಿಗೆ ತಲೆ ಕರೆದು ಹಣೆಯಲ್ಲಿ ಚಿಲಕ ಬಟ್ಟಿಟ್ಟು ಮಹಾದೇವಮ್ಮ ತನ್ನ ಭಕ್ತಿಯನ್ನು ತೋರಿದಳು. "ನೀನು ನರಲೋಕದಲ್ಲಿದ್ದರೆ ಮಾನವರೆಲ್ಲ

ನಿನ್ನ ಭಕ್ತಿ ಕಲಿತು ಬಿಡುತ್ತಾರೆ" ಹಾಗೆಂದು ಮೈದಾಳು ರಾಮನನ್ನು ಮಹದೇವನನ್ನು ಕರೆದುಕೊಂಡು ರಥವನ್ನು ಹತ್ತಿ ಕೈಲಾಸಕ್ಕೆ ಬರುತ್ತಾರೆ. ಕೈಲಾಸದ ರಾಜ ಬೀದಿ ಒಳಗೆ ಮಹಾದೇವಮ್ಮನಿಗೆ ಮೆರವಣಿಗೆ ಮಾಡಿ ಬರುವಾಗ ಗಂಗಮ್ಮ ಆರತಿಯನ್ನು ತಂದು ಬೆಳಗಿದಳು. ಶಿವಲೋಕಕ್ಕೆ ಬಂದು ಸ್ವಾಮಿಯವರು ಹೋಗಿ ಮಂಚದಲ್ಲಿ ಕುಳಿತರು.

ಮೈದಾಳು ರಾಮನ ವಚನವನಾದರೆ
ಭಕ್ತಿಯಿಂದಲಿ ಹೇಳಿದಂಥ – ಪುಣ್ಯಾತ್ಮರಿಗೆ
ಇದ್ದಲ್ಲೆ ಪಾಪ ಪರಿಹಾರ

ಮೈದಾಳು ರಾಮನ ವಚನವನ್ನಾದರೆ
ಭಕ್ತಿಯಿಂದಲಿ ಕೇಳಿದಂಥ ಮಹಾತ್ಮರಿಗೆ
ಇದ್ದೋಟು ಪಾಪ ಪರಿಹಾರ

ಇಲ್ಲೀಗೆ ಹರಹರ ಇಲ್ಲೀಗೆ ಶಿವಶಿವ
ಇಲ್ಲೀಗೆ ಗುರುವಚನ ಮಗುದೀತು

ಭೀಮಾವತಿ ಪಟ್ಟಣಕ್ಕೆ ಶಿವನು ಪಾರ್ವತಿಯನ್ನು
ತಂದ ಮಹಾತ್ಮರ ಕಥೆ ಇದು

ಕಥೆ ಕೇಳಿದಂಥ ಪುಣ್ಯವಂತರಿಗೆ ನೋಡು
ಬೆಳ್ಳಿ ತೊಳೆದಂತೆ ಪಾಪ ಪರಿಹಾರ – ಈ ಕಥೆ
ಇಲ್ಲಿಗೆ ಮುದ್ರೆ ಶರಣು ಶರಣಾರ್ಥಿ.

– ಕೃತಿ: ಕನ್ನಡ ವೃತ್ತಿಗಾಯಕ ಕಾವ್ಯಗಳು

***

೧೮. ಮೋಳಗೆ ಮಾರಯ್ಯ

ಮೋಳಗಿಯ ಮಾರಯ್ಯ ಭಕ್ತಾ । ಬಸವೇಶನ್ನ ಸೋಲಿಸಿದಾತಾ ‖ ಪ ‖

ನಿತ್ಯ ಅರಣ್ಯಕ್ಕೆ ಹೋಗತಿದ್ದ । ಕಟ್ಟಿಗಿ ತರತಿದ್ದ ।
ಶಿವಶರಣರಿಗೊಯ್ದು ಮಾರುತಿದ್ದ । ಸ್ವಂತ ಬಂದ ಹಣದಿಂದ ಧಾನ್ಯ ತರವೋತ
‖ ೧ ‖

ಅಂಬಲಿ ಕಾಸಿ ಆಗ ತುತ್ತಾನ್ನ । ಜಂಗಮರಿಗೆ ಉಣಸುವ ನಿಂತಾ ।
ಬಸವೇಶನ ದಾಸೋಗದೊಳಗಿಂದ । ಮೃಷ್ಟಾನ್ನ ಉಂಡ ಬಂದ ।
ಅಂಬಲಿ ಕುಡಕುಡದು ಹೋಗುವರು ಖಚಿತಾ । ಅಮೃತಕಿಂತ ರುಚಿ ಅಂತಾ
‖ ೨ ‖

ಬಸವಣ್ಣಗ ತಿಳದೀತ ಈ ಮಾತ । ವೇಷ ಬದಲಿಸ್ಯಾನ ಬೇಕಂತ ।
ಅಯ್ಯನವರು ರೂಪವನು ಧರಿಸಿ । ಹೋದ ಧಾವಿಸಿ
ಭಕ್ತಿ ಪರೀಕ್ಷಿಸಿ ನೋಡಬೇಕಂತಾ । ಹಸಿವ್ಯಾಗೇದ ಊಟಕ ಹಾಕಿರೆಂತಾ ‖ ೩ ‖

ಮಾರಯ್ಯನ ಹೆಂಡತಿ ಪತಿವ್ರತಾ । ಕರಕೊಂಡ ಹೋದ್ಲ ಮಾಡಿ ಮಮತಾ
ಒಳಗ ಉಚಿತ ಆಸನ ಹಾಸೀ । ಲಿಂಗಾರ್ಚನೆ ಮಾಡಿಸಿ ।
ಇದ್ದದ್ದ ಉಣಬಡಿಸಿ ತೃಪ್ತಿ ಪಡಿಸೂತಾ । ಸಂತೋಷ ದಿಟವಾಯ್ತು ಸಿಸ್ತಾ ‖ ೪ ‖

ಹೊರಗ ಬರುವಾಗ ತಗದಾನು ಬೇತಾ । ಚರಗಿ ಹತ್ತರ ಮಾಡಿ ಮಸಲತ್ತಾ ।
ಎರಡು ಸಾವಿರ ವರಹ ತುಂಬಿದ । ಎರಡು ಚೀಲ ತೆಗದ ।
ಮರೆಗೆ ಇಟ್ಟು ನಡದ ಶರಣು ಶರಣಂತಾ । ಮಾರಯ್ಯನ ಮಡದಿಗೆ
ತಿಳಿಯದಂತಾ ‖ ೫ ‖

ಮಾರಯ್ಯನು ಹೊರಗಿಂದ ಬರುತಾ । ಸ್ನಾನಮಾಡಿ ಪೂಜೆಗೆ ಕೂಡ್ರುತಾ
ನೀರಿನ ಪಾತ್ರೆಯ ಬದಿಲಿದ್ದ । ವರಹದ ಚೀಲ ತಗದು ।
ಮರಮರ ಮರುಗಿದ ಯಾರ ಇಟ್ಟಾರಂತ । ಸತಿಯಳನ ಕೇಳಾನ ಏಕಾಂತ ‖೬ ‖

ಶರಣೊಬ್ಬ ಬಂದಿದ್ದ ಈ ಹೊತ್ತಾ । ಗರತಿ ಹೇಳ್ಯಾಳ ಗುರ್ತಹತ್ತಲಿಲ್ಲಂತಾ।
ಹಣದ ಚೀಲ ತಾನೆ ಹೊರಗಿಟ್ಟ । ದಾನ ಕೊಟ್ಟಬಿಟ್ಟ
ಜಾಣತನವೆಷ್ಟು ಜ್ಞಾನಿಗಿಲ್ಲ ಸ್ವಾರ್ಥ । ಕಾಯಕವೆ ಕೈಲಾಸವೆನುತ । ॥ ೭ ॥

ಗುರುಗಳ ಪಾದೋದಕ ತೀರ್ಥಾ । ಹೋರಿ ಮೇಲೆ ಓದ ಚಿಮಕಿಸುತ ।
ಬಂಗಾರಾತ ತುಣಕ ಮಾಡಿ ಮಾಡಿ । ಜಂಗಮರಿಗೆ ನೀಡಿ ।
ಮಂಗಳಾರತಿ ಹಾಡಿ । ಹರುಷವಾಗಿರುತ ಬಸವರಸನ್ನ ಕರಿಕಳಿಸುತ್ತಾ ॥ ೮ ॥

ಭಕ್ತಿ ಭಾಂಡಾರಿಗಾದಿತ ಗೊತ್ತ । ಮುಕ್ತಿ ಬೇಡಿಕೊಂಡ ಮುಂದ ಬಂದ ನಿಂತಾ ।
ಮಾಚಿದೇವನ ಮೊಮ್ಮಗ ಹಂಗಿಸಿದ । ವೃಷಭೇರ ನಿನ್ನಿಂದ
ಬಡತನ್ಹೋತಂದ । ಅಂದ ನಗನಗುತಾ । ಹುಲಕುಂದ ಭೀಮಕವಿ
ಯಮತಾ ॥ ೯ ॥

– ಕವಿ: ಹುಲಕುಂದ ಭೀಮಕವಿ

***

೧೯. ಲದ್ದೆ ಸೋಮಣ್ಣ

ಮಲ್ಲಿಗೆ ಹೂವ

ಮಲ್ಲಿಗಿ ಹೂವ ಅಲ್ಲಿ ಚಲ್ಲಿ ಇಲ್ಲಿ ಚಲ್ಲಿ
ಕಲ್ಲಾಗ ಚಲ್ಲಿ ಸಸಿ ನಾಟಿ ಶಿವ
ಕಲ್ಲಾಗ ಚಲ್ಲಿ ಸಸಿ ನಾಟಿ ಸೋಮನಿಂಗಪ್ಪ
ಎಲ್ಲಿದ್ದರೇನೆ ದಸಿವಂತ ಶಿವ ॥ ೧ ॥

ಸೇವಂತಿ ಹೂವ ಅಲ್ಲಿ ಚಲ್ಲಿ ಇಲ್ಲಿ ಚಲ್ಲಿ
ಕಲ್ಲಾಗ ಚಲ್ಲಿ ಸಸಿ ನಾಟಿ ಶಿವ
ಕಲ್ಲಾಗ ಚಲ್ಲಿ ಸಸಿ ನಾಟಿ ಸೋಮನಿಂಪ್ಪ
ಎಲ್ಲಿದ್ದರೇನೆ ದಸಿವಂತ ಶಿವ ॥ ೨ ॥

ಕಂಬಳದ ಹೂವ ಅಲ್ಲಿ ಚಲ್ಲಿ ಇಲ್ಲಿ ಚಲ್ಲಿ
ಕಲ್ಲಾಗ ಚಲ್ಲಿ ಸಸಿ ನಾಟಿ ಶಿವ
ಕಲ್ಲಾಗ ಚಲ್ಲಿ ಸಸಿ ನಾಟಿ ಸೋಮಲಿಂಗಪ್ಪ
ಎಲ್ಲಿದ್ದರೇನೆ ದಸಿವಂತ ಶಿವ ॥ ೩ ॥

ಗುಲಾಬಿ ಹೂವ ಅಲ್ಲಿ ಚಲ್ಲಿ ಇಲ್ಲಿ ಚಲ್ಲಿ
ಕಲ್ಲಾಗ ಚಲ್ಲಿ ಸಸಿ ನಾಟಿ ಶಿವ
ಕಲ್ಲಾಗ ಚಲ್ಲಿ ಸಸಿ ನಾಟಿ ಸೋಮಲಿಂಗಪ್ಪ
ಎಲ್ಲಿದ್ದರೇನೆ ದಸಿವಂತ ಶಿವ ॥ ೪ ॥

ಮುಳಜಾಜಿ ಹೂವ ಅಲ್ಲಿ ಚಲ್ಲಿ ಇಲ್ಲಿ ಚಲ್ಲಿ
ಕಲ್ಲಾಗ ಚಲ್ಲಿ ಸಸಿ ನಾಟಿ ಶಿವ
ಕಲ್ಲಾಗ ಚಲ್ಲಿ ಸಸಿ ನಾಟಿ ಸೋಮಲಿಂಗಪ್ಪ
ಎಲ್ಲಿದ್ದರೇನೆ ದಸಿವಂತ ಶಿವ ॥ ೫ ॥

ಇಪ್ಪಿಯ ಹೂವ ಅಲ್ಲಿ ಚಲ್ಲಿ ಇಲ್ಲಿ ಚಲ್ಲಿ
ಕಲ್ಲಾಗ ಚಲ್ಲಿ ಸಸಿ ನಾಟಿ ಶಿವ
ಕಲ್ಲಾಗ ಚಲ್ಲಿ ಸಸಿ ನಾಟಿ ಸೋಮಲಿಂಗಪ್ಪ
ಎಲ್ಲಿದ್ದರೇನೆ ದಸಿವಂತ ಶಿವ ॥ ೬ ॥

– ಶ್ರೀಮತಿ ನೀಲಮ್ಮ ಲಾಧಾ

***

ಲದ್ದಿ ಸೋಮಣ್ಣ

ಲದ್ದಿ ಊರ ಲದ್ದಿ ಸೋಮಯ್ಯ
ಹುಲಸೂರ ಊರ ಸಂತಿದಾಗ
ಹುಲ್ಲ ಮಾರಿ ಹೆಸರ ಪಡೆದ್ಯೆ
ಲದ್ದಿಯ ಸೋಮ ಹುಲ್ಲ ಮಾರಿ ಹೆಸರ ಪಡೆದ್ಯೆ ॥ ೧ ॥

ಒಂದಿನ ಹುಲ್ಲಿನ ಗಂಟ ಎತ್ತಲು
ಹೊರೆಯು ಭಾರ ಎಂದು ತಿಳಿದು
ಶಿವನು ಮಾಡಿದ ಆಟಯೆಂದು
ಲದ್ದಿಯ ಸೋಮ ತಿಳಿದೆ ನೀನು ಹೀಂಗ ಎಂದು ॥ ೨ ॥

ಹೊರೆಯು ಎತ್ತಿ ತಿಳಿದು ನೋಡಿ
ಕಳ್ಳಿ ನೀನು ಮಾಡಿದೆಂದು
ಉಂಗುಟಲ್ಲಿ ಎತ್ತಿ ಹೊಡೆದ್ಯೆ
ಲದ್ದಿಯ ಸೋಮ ಉಂಗುಟಲ್ಲಿ ಎತ್ತಿ ಹೊಡೆದ್ಯೆ ॥ ೩ ॥

ಅಂದಿನಿಂದ ಗಂಡ ಹೆಂಡತಿ
ಶಿವನಿಗೆ ಕರಿತಾರ ಕಳ್ಳಿಯೆಂದು
ಶಿವನಿಗೆ ಆಗ್ಯಾದ ಅದಕ ಚಿಂತಿ
ಶಿವನು ಚಿಂತೆ ಮಾಡಿದನ್ಯೆ ॥ ೪ ॥

ಸೋಮನ ಮಡದಿ ಮಂಗಮ್ಮನಿಗೆ
ತಂದು ಒಡ್ಡ್ಯಾನ ಶಿವ ಮಾರೋಗ
ವೇಷ ಮರೆಮಾಚಿ ಮನಿಗೆ ಬಂದು
ಶಿವನಾಮ ಜಪಿಸಲು ಹೇಳಿದನ್ಯೆ ॥ ೫ ॥

ಒಲ್ಲೆನೆಂದು ಅನತಾಳ ಮಂಗಮ್ಮ
ಮನದಾಗರ ಶಿವನಾಮ ನುಡಿಯೆ
ಬ್ಯಾನಿ ತಾಳಲಾರದಕ್ಕೆ ಮಂಗಮ್ಮ
ಮನದಾಗ ನುಡಿದಾಳ ಶಿವನಾಮ
ರೋಗ ಆಗ್ಯಾದ ಗುಣಮುಖನ್ಯೆ ॥ ೬ ॥

ಮನಿಗೆ ಬಂದ ಲದ್ದಿ ಸೋಮ
ಬ್ಯಾನಿ ಹ್ಯಾಂಗ ಕಳಿತುಯೆಂದು
ನಡಿದ ಘಟನೆ ತಿಳಿಸುತಾಳೆ
ಸಿಟ್ಟಿಗೆದ್ದ ಲದ್ದಿ ಸೋಮ ॥ ೭ ॥

ಹುಲ್ಲ ಕೊಯ್ಯವ ಆಯುಧದಿಂದ
ಹೆಂಡತಿಯ ಮೂಗ ಕೊಯ್ಯಿದ
ಶಿವನು ಆಗ ಎದುರು ಬಂದ
ಹೆಂಡತಿಗೆ ಪ್ರಾಣ ಕೊಟ್ಟ ॥ ೮ ॥

– ಶ್ರೀಮತಿ ಕಾಡಾದಿ ನಾಗವ್ವಾ

***

ಸುತ್ತೇಳಗ ಒಡ್ಡರಗಿ ಪತ್ರರ ಕಳವ್ಯಾರೇ

ಸುತ್ತೇಳಗ ಒಡ್ಡರಗಿ ಪತ್ರರ ಕಳವ್ಯಾರೇ
ಸುತ್ತಿನ ಕಲ್ಲಾ ಬರಬೇಕೇ ಶಿವಲಿಂಗ ಬನ್ನಿರೀ ।
ಸುತ್ತವಿನ ಕಲ್ಲಾ ಬರಬೇಕಾ ಸೋಮಲಿಂಗಪ್ಪ
ಗುಡಿಯನ ಕಟ್ಟಿ ಮುಗಿಬೇಕಾ । ಶಿವಲಿಂಗವೇ ಬನ್ನಿರೀ ॥ ॥ ೧ ॥

ಸುತ್ತೇಳ ಒಡ್ಡರಗಿ ಪತ್ರರ ಕಳವ್ಯಾರೇ
ನಾಡಿನ ಕಲ್ಲಾ ಬರಬೇಕಾ । ಶಿವಲಿಂಗ ಬನ್ನಿರೀ ॥
ನಾಡಿನ ಕಲ್ಲಾ ಬರಬೇಕಾ ಸೋಮಲಿಂಗಪ್ಪ
ಕಟ್ಟ್ಯಾವ ಕಟ್ಟಿ ಮುಗಿಬೇಕ । ಶಿವಲಿಂಗವೇ ಬನ್ನಿರೀ ॥ ॥ ೨ ॥

ಸುತ್ತೇಳ ಒಡ್ಡರಗಿ ಪತ್ರರ ಕಳವ್ಯಾರೇ
ಸುತ್ತಿನ ಕಲ್ಲಾ ಬರಬೇಕ ಶಿವಲಿಂಗ ಬನ್ನಿರೀ
ಸುತ್ತವಿನ ಕಲ್ಲಾ ಬರಬೇಕಾ ಸೋಮಲಿಂಗಪ್ಪ
ಕಳಸಾವ ಕಟ್ಟಿ ಮುಗಿಬೇಕಾ । ಶಿವಲಿಂಗ ಬನ್ನಿರೀ ॥ ॥ ೩ ॥

ಸುತ್ತೇಳ ಒಡ್ಡರಗಿ ಪತ್ರರ ಕಳವ್ಯಾರೇ
ನಾಡಿನ ಕಲ್ಲ ಬರಬೇಕ ಶಿವಲಿಂಗ ಬನ್ನಿ
ನಾಡಿನ ಕಲ್ಲ ಬರಬೇಕಾ ಸೋಮಲಿಂಗಪ್ಪ
ಮಾಲಗಂಭ ಕಟ್ಟಿ ಮುಗಿಬೇಕಾ । ಶಿವಲಿಂಗ ಬನ್ನಿರೀ ॥ ॥ ೪ ॥

– ಶ್ರೀಮತಿ ನೀಲಮ್ಮ ಲಾಧಾ

***

ಹಬ್ಬ ದಿನ ನಂದಿಕೋಲ

ಹಬ್ಬದಿನ ನಂದಿಕೋಲ ಮೆರಿಯಾಗ
ನಿಮದೇ ಪಲಕಿ ಮೆರದಾವೇಳಯ್ಯ ।
ಅಪ್ಪ ಸೋಮಲಿಂಗಪ್ಪ ನಿಮ್ಮ ಪಾಲಕಿ ಮೆರದಾವೇಳಯ್ಯ
ಅಪ್ಪ ಸೋಮಲಿಂಗಪ್ಪ
ನಂದಿಕೋಲ ಮೆರದಾಮೇಳಯ್ಯ ।

– ಶ್ರೀಮತಿ ನೀಲಮ್ಮ ಲಾಧಾ

***

ಅಂದಲಾಲದ ಗುಡಿಯೇ

ಅಂದಲಾಲದ ಗುಡಿಯೇ ಚಂದುಲಾಲದ ಗುಡಿಯೇ
ಯಾರು ಕಟಸ್ಯಾರೇ ಹೊಸ ಗೂಡ್ಯಾಂತಾರ ಭಾದ್ದೂರ ಹಣಮಾನಂತಾರ ॥ ಪ ॥

ಯಾರನೇ ಕಟಸ್ಯಾರೇ ಹೊಸ ಗುಡಿ ಸೋಮನಿಂಗಪ್ಪ
ಮಾನುಳ್ಳವರಂತರ ಮಠದವರಂತರ ಭಾದ್ದೂರ ಹಣಮಾನಂತಾರ ॥ ೧ ॥

ಯಾರನೇ ಕಟಸ್ಯಾರೇ ಹೊಸ ಗುಡಿ ಸೋಮನಿಂಗಪ್ಪ
ಮಾನುಳ್ಳವರಂತರ ಮಠಪತಿರಂತರ ಭಾದ್ದೂರ ಹಣಮಾನಂತಾರ ॥ ೨ ॥

ಯಾರನೇ ಕಟಸ್ಯಾರೇ ಹೊಸ ಗುಡಿ ಸೋಮನಿಂಗಪ್ಪ
ಮಾನುಳ್ಳವರಂತರ ಕುಲಕರ್ಣಿಂತರ ಭಾದ್ದೂರ ಹಣಮಾನಂತರ ॥ ೩ ॥

ಯಾರನೇ ಕಟಸ್ಯಾರೇ ಹೊಸ ಗುಡಿ ಸೋಮನಿಂಗಪ್ಪ
ಮಾನುಳ್ಳವರಂತರ ಗೌಡಾರಂತರ ಭಾದ್ದೂರ ಹಣಮಾನಂತಾರ ॥ ೪ ॥

ಯಾರನೇ ಕಟಸ್ಯಾರೋ ಹೊಸ ಗುಡಿ ಸೋಮನಿಂಗಪ್ಪ
ಮಾನುಳ್ಳವರಂತರ ರೈತರಂತರ ಭಾದ್ದೂರ ಹಣಮಾನಂತರ ॥ ೫ ॥

– ಶ್ರೀಮತಿ ಲಲಿತಾಬಾಯಿ ಲಾಧಾ

***

ಲದ್ದಿಯ ಸೋಮಣ್ಣನ

ಲದ್ದಿದಾವ ಲದ್ದಿ ಸೊಮ । ಹುಲಸೂರಿನಲಿ ನಿತ್ತೆ ನೇಮ ।
ಹುಲ್ಲ ಮಾರಿ ಹೆಸರ ಪಡೆದಯ್ಯ । ಲದ್ದಿಯ ಸೊಮಣ್ಣ ।
ಹುಲ್ಲ ಮಾರಿ ಹೆಸರ ಪಡೆದಯ್ಯ ॥ ॥ ೧ ॥

ನಾನು ಹುಟ್ಟಿಸಿದಾಗ ಹುಟ್ಟಿ । ನಾನು ಬೆಳಸಿದಾಗ ಬೆಳೆದೆ
ನನ್ನ ನಾಮ ನುಡಿಯಲ್ಲಿಲ್ಲಯ್ಯ । ಲದ್ದಿಯ ಸೋಮಣ್ಣ ।
ನನ್ನ ನಾಮ ನುಡಿಯಲ್ಲಿಲ್ಲಯ್ಯ ॥ ॥ ೨ ॥

ಮಾಯದಿಂದೆ ಶಿವನು ಬಂದು । ಏಳು ಗಜದ ಕಲ್ಲ ತಂದು
ಹೊರಿದಾಗ್ಹಾಕಿ ಕಟ್ಟಿದರಯ್ಯ । ಮಹಾದೇವ
ಹೊರಿದಾಗ್ಹಾಕಿ ಕಟ್ಟಿದರಯ್ಯ ॥ ॥ ೩ ॥

ಕೈ ಎತ್ತಿ ತಿಳಿದು ನೋಡಿ ಕಳ್ಳ ನಿನ್ನಾಟ ಮಾಡಿದೆಂದು ।
ಉಂಗುಷ್ಟಿಯಲ್ಲಿ ಎತ್ತಿ ಹೊಡೆದಯ್ಯ । ಲದ್ದಿಯ ಸೋಮಣ್ಣ
ಉಂಗುಷ್ಟಿಯಲ್ಲಿ ಎತ್ತಿ ಹೊಡೆದಯ್ಯ ॥ ॥ ೪ ॥

ಉಂಗುಷ್ಟಿಯಲ್ಲಿ ಎತ್ತಿ ಹೊಡೆದು । ಹುಲಸೂರ ಸಂತೆಯೊಳು ಬಿದ್ದು ।
ಹುಲ್ಲ ಮಾರಿ ಸೌದೆ ತಂದಯ್ಯ । ಲದ್ದಿಯ ಸೋಮಣ್ಣ ।
ಹುಲ್ಲ ಮಾರಿ ಸೌದೆ ತಂದಯ್ಯಾ ॥ ॥ ೫ ॥

ಹುಲಮಾರಿ ಸೌದೆ ತಂದು । ಮಡಿಯಲಿಂದೆ ಅಡಿಗೆ ಮಾಡಿ ।
ಪರಮಾತ್ಮಗಾ ಸಲ್ಲಿಸಿದೇಳಯ್ಯ । ಲದ್ದಿಯ ಸೋಮಣ್ಣ ।
ಪರಮಾತ್ಮಗಾ ಸಲ್ಲಿಸಿದೇಳಯ್ಯ ॥ ॥ ೬ ॥

ದೇವ ಭಕ್ತ ಇಬ್ರೂ ಕೂಡಿ । ಊಟವನ್ನೂ ಮಾಡಿದಾರು ।
ಏನು ಬೇಡುತಿ ಹೇಳು ನೀ ಶರಣ । ಬೇಡಿದ್ದು ಕೊಡುವೆ ನಾ ।
ಏನು ಬೇಡುತಿ ಬೇಡು ನೀ ಶರಣ ॥ ॥ ೭ ॥

ನಾನಾನು ಏನು ಬೇಡದಿಲ್ಲ । ಬೇಡಿ ನಾನು ಕಾಡದಿಲ್ಲ ।
ಎನ್ನ ಮುಂದೆ ಕುಂತೆ ಬಿಡರಯ್ಯ । ಮಹಾದೇವ ।
ಎನ್ನ ಮುಂದೆ ಕುಂತೆ ಬಿಡರಯ್ಯ । ॥ ೮ ॥

ನಿನ್ನ ಭಾವಕೆ ಮೆಚ್ಚಿದೇನು । ನೀನೆ ಹೇಳಿದ್ದಾಂಗ ಕೇಳಿ ।
ನಿನ್ನ ಮುಂದೆ ಕುಂತಿದೇನಯ್ಯ । ಲದ್ದಿಯ ಸೋಮಣ್ಣ ।
ನಿನ್ನ ಮುಂದೆ ಕುಂತಿದೇನಯ್ಯ ॥ ॥ ೯ ॥

ಲದ್ದಿ ಗ್ರಾಮವು ಚೆಂದ । ಗುಡಿಯ ಮುಂದ ಗಿಡವು ಚೆಂದ ।
ಗುಡಿಯ ಬಾಗಿಲಿಗೆ ಬಸವಣ್ಣ ಚಂದ । ಮಹಾದೇವನ ।
ಬಾಗಿಲ ಮುಂದೆ ಬಸವಣ್ಣ ಚಂದ ॥ ॥ ೧೦ ॥

ಬಾಗಿಲಿಗೆ ಬಸವಣ್ಣ ಚಂದ । ಗುಡಿಯ ಒಳಗೆ ನೀನು ಚಂದ ।
ಮಹಾದೇವ ಚಂದ ನಿನ್ನ ಮುಂದಯ್ಯ । ಲದ್ದಿಯ ಸೋಮಣ್ಣ ।
ಮಹಾದೇವ ಚಂದ ನಿನ್ನ ಮುಂದಯ್ಯ ॥ ॥ ೧೧ ॥

ವರುಷಕೊಮ್ಮೆ ಶಿವರಾತ್ರಿ ಲದ್ದಿಯ ಸೋಮಣ್ಣನ ಜಾತ್ರಿ ।
ಲದ್ದಿಗ್ರಾಮದಲ್ಲಿ ಮೆರೆಯುತಾರಯ್ಯ ! ಲದ್ದಿಯ ಸೋಮಣ್ಣ ।
ಲದ್ದಿಯಲ್ಲಿ ಮೆರೆಯುತಾರಯ್ಯ ॥ ॥ ೧೨ ॥

***

ಲದ್ದಿ ಸೋಮಣ್ಣ

ಲಗು ಬಾ ತಂದೆ ಶಿವಶರಣ ಲದ್ದಿಯ ಸೋಮಣ್ಣಾ ।
ಕಲ್ಯಾಣ ನಾಡು ಕಟ್ಟಿ ಕಾಪಾಡ ಬಾರಣ್ಣಾ ॥ ಪ ॥

ನಿನ್ನಂಥ ಶಿವಶರಣರು ಹುಟ್ಟಿದ್ದು ಲದ್ದಿ ಗ್ರಾಮ ಪಾವನಾಯಿತಣ್ಣಾ ॥
ಧರ್ಮವೃದ್ಧಿಯಾಗಿ ಶಿವಶರಣರು ಬಾಳಿ ಬೆಳಗಿನ ಊರ ನೋಡಣ್ಣಾ॥
ಕರ್ಮಯೋಗಿಯಾಗಿ ಭವ ಗೆದ್ದ ಮಹಾನ ದೀರ ನೀನಣ್ಣಾ ॥ ೧ ॥

ಹಿಂದೆ ವೈಭವದಿಂದ ಮೆರೆದ ಲದ್ದಿ ಗ್ರಾಮವಿದು ।
ನಿನ್ನ ಕರುಣೆಯಿಂದ ಆದ ಪಾವನ ಪುಣ್ಯ ಕ್ಷೇತ್ರವಿದು ॥
ಅನ್ನದಾಸೋಹದಿಂದ ಶಿವ ತೃಪ್ತನಾದ ಭೂಮಿವಿದು ॥ ೨ ॥

ನಿನ್ನ ಪಾದಸ್ಪರ್ಶದಿಂದ ಪಾವನರಾದವರೇಷ್ಟೋ ಜನ ।
ನಿನ್ನ ಕೃಪಾ ಶಕ್ತಿಯಿಂದ ಸಂತುಷ್ಟರಾದವರೇಷ್ಟೋ ಜನ ॥
ನಿನ್ನ ದಿವ್ಯ ದೃಷ್ಟಿಯಿಂದ ಮುಕ್ತಿ ಹೊಂದಿ ಪುನಿತರಾದವರೇಷ್ಟೋ ಜನ
॥ ೩ ॥

ದೀಪ ಉರಿದು ಜಗಕ್ಕೆ ಬೆಳಕು ಕೊಡುವಂತೆ ।
ಕಬ್ಬು ಹಿಂಡಿದಷ್ಟು ರಸ ಸಿಹಿಯಾಗಿ ಬರುವಂತೆ ॥
ದೇಹದ ವ್ಯಾಮೋಹ ತೊರೆದು ದಿವ್ಯ ಜ್ಞಾನ ತೋರುವಂತೆ ॥ ೪ ॥

ಸೂರ್ಯಚಂದ್ರಾದಿಗಳು ಇರುವವರೆಗೆ ನೀನು ಇರುವೆ ಅಮರನಾಗಿ ।
ಸಕಲ ಭಕ್ತರ ಹೃದಯ ಮಂದಿರದಲ್ಲಿರುವೆ ದಿವ್ಯ ಚೇತನವಾಗಿ ॥
ಸಕಲ ಭಕ್ತರ ಉಸಿರಿನಲ್ಲಿರುವೆ ಸದಾ ಎಲ್ಲರ ಉಸಿರಾಗಿ ॥ ೫ ॥

ಕೊನೆಯದಾಗಿ ಬೇಡುವೆ ನಿನ್ನ ಪ್ರಣವ ಚೇತನಕ್ಕೆ ಶಿರಬಾಗಿ ।
ಸಕಲ ಭಕ್ತರು ಹಾತೊರೆಯುತಿಹರು ನಿನ್ನ ದಿವ್ಯ ದುರುಶನಕ್ಕಾಗಿ ॥
ಮಾಣಿಕದಾಸರು ಹೃತಪೂರ್ವಕ ಸ್ತುತಿಸುವರು ಶಿವಶರಣಸೋಮಣ್ಣನಿಗಾಗಿ
॥ ೬ ॥

ಸೂಚನೆ : ಲಾಧಾ ಗ್ರಾಮದ ನಾಗರಿಕರು ದಿ. ೨೦-೩-೨೦೧೦ ರಂದು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಆಡಳಿತಗಾರರಿಗೆ ಒಪ್ಪಿಸಿದ ಒಂದು ಮನವಿ ಪತ್ರದ ಜೊತೆಗೆ ಈ ಮೇಲಿನ ಎರಡು ಹಾಡುಗಳನ್ನು ಲಗತ್ತಿಸಿದ್ದಾರೆ. ಮು ॥ ಲಾಧಾ, ತಾ॥ ಭಾಲ್ಕಿ, ಜಿ॥ ಬೀದರ.

ಸೂಚನೆ : ಮೊದಲನೇ ಹಾಡಿನ ಒಂದು ಪಾಠ 'ಲದ್ದೆಯ ಸೋಮಣ್ಣ' ಎಂಬ ಕೃತಿಯಲ್ಲಿ ಪ್ರಕಟವಾಗಿದೆ.

***

೨೦. ಸಿದ್ಧರಾಮನ ಹಾಡುಗಳು

೧

ಮಾಡೊ ಮಾಡೋ ನೀ ಶಿವಧ್ಯಾನ
ಮಾಡೊ ಮಾಡೋ ನೀ ಗುರುಭಜನ ॥ ಪ ॥

ಸಿದ್ಧರಾಮ ಜನಿಸಿ ಬಂದಾರ
ಮಾಡುತಾರೊ ಮಲ್ಲಯ್ಯನ ಧ್ಯಾನ
ಒಂಬತ್ತು ವರುಷ ಕಾಯದ ಒಳಗೆ
ಮಲ್ಲಯ್ಯ ದೇವರು ಭೆಟಿ ಆಗ್ಯಾರ ॥ ೧ ॥

ಅನ್ನ ಮೊಸರ ಬುತ್ತಿ ಬೇಡ್ಯಾರ
ತರುವೆನಂದರ ಒಳಗ್ಹೋಗ್ಯಾರ
ಅನ್ನ ಮೊಸರ ಬುತ್ತಿ ತರುವದರೊಳಗೆ
ಮಲ್ಲಯ್ಯ ದೇವರು ಮಾಯವಾಗ್ಯಾರಾ ॥ ೨ ॥

ದ್ಧರಾಮ ತಿರಗಿ ಹೈರಾಣ
ರ ತಿರಗಿ ಬ್ಯಾಸರ ಬಂದು
ಸರ ಬಂದು ಕೊಳದ ಮೇಲೆ
ಳುವೇನಂದರ ಮಲ್ಲಯ್ಯ ದೇವರು ॥ ೩ ॥

ಓ ದಕೆ ಮೂರ್ ಮಳ ಸರುದಾರ
ಮ ಯ್ಯ ಮಲ್ಲಯ್ಯನಂತೆ ಕೂಗ್ತಾರ
ಸಿ ಗೆ ಬಂದು ಕೊಳ್ಳ ಹಾರವಾಗ
ಮ ಯ್ಯ ದೇವರು ಕೈ ಹಿಡಿದಾರಾ ॥ ೪ ॥

– ಶ್ರೀಮತಿ ರೇಖಾ ರಾಮಶೆಟ್ಟಿ ಕಾಡಾದಿ

***

೨

ಶಿವನ ಕಂದ ಭೂಮಿಗೆ ಬಂದ
ಶಿವನೆ ಬಂದ ಶ್ರೀಶೈಲದಿಂದ ॥ ಪ ॥

ಕಲ್ಲನು ಒಡಿಸಿ ಗುಡಿಯನು ಕಟ್ಟಿಸಿ
ಮಲ್ಲಿಕಾರ್ಜುನನ ಮನದೊಳು ಭಜಿಸಿ ॥ ೧ ॥

ಭೋಗವ ತ್ಯಜಿಸಿ ಪ್ರಭುವಿನ ಸ್ಮರಿಸಿ
ಸಿದ್ಧರಾಮನ ಮನದೊಳು ಭಜಿಸಿ ॥ ೨ ॥

ಮಹಿಪೂರ್ಣ ಮಂಗಲಾಂಗ
ಮಲ್ಲಿಕಾರ್ಜುನನ ಪ್ರೇಮದ ಕಂದ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

೩

ಸಂತಿಚಂದ ಸೊಲ್ಲಾಪುರ
ಗಂಗ್ಯಾಗ ಹರ ಸಿದ್ಧರಾಮ
ಸ್ವಾಮಾರ ದಿನದಲಿ ಅವರ ಜುಮ್ಮಾರ
ಕಾಯಿ ಕರ್ಪೂರ ಏರ್‍ಯಾರ ಜೋರ ॥ ೧ ॥

ನಿತ್ಯ ಬರತಾವ ಹೂವಿನ ಹಾರ
ಸುತ್ತ ಹರದಾವ ಟೆಂಗಿನ ನೀರ
ಸತ್ಯ ಶರಣ ಸಿದ್ಧರ ನಾಮ
ನಿತ್ಯ ನಿತ್ಯ ನುಡಿತಾರ ಜಮ್ಮ ॥ ೨ ॥

ಭಕುತಿ ಮಾಡಾಕ ಸಿದ್ಧಗ ಹೋಗಬೇಕ
ಬಾಗಿ ಬಾಗಿ ಸಾಷ್ಟಾಂಗ ಹಾಕಬೇಕ
ಯೋಗಿ ಆಗ ಒಲತಾನ ನಮಗ
ನಮ್ಮ ಜೀವನ ಧನ್ಯ ಆವಾಗ ॥ ೩ ॥

– ಶ್ರೀಮತಿ ಗೌರವ್ವ ಕಾಡಾದಿ
– ಶ್ರೀಮತಿ ಜ್ಯೋತಿ ಕಾಡಾದಿ

***

೪

ಏಳಯ್ಯ ಏಳು ಏಳಯ್ಯ ಏಳು ಏಳಯ್ಯ ಸಿದ್ಧರಾಮ
ಬೆಳ್ಳಾನೆ ಬೆಳಗಾತು ಏಳಯ್ಯ ನೀ ಬೇಗ
ಏಳಯ್ಯ ಸಿದ್ಧರಾಮ ॥ ಪ ॥

ದಿಟ ಹಸ್ತವೇ ತಾಯಿ ದೃಷ್ಟಿಯು ತಂದೆಯಾಗಿ
ಹುಟ್ಟಿರುವೆ ನಿನ್ನಲ್ಲಿ ನೆಟ್ಟನೆ ಇಹುದಕೆ
ಏಳಯ್ಯ ನೀ ಬೇಗ ಸಿದ್ಧರಾಮ ॥ ೧ ॥

ಲಿಂಗದ ಗುಣತಂದು ಲಿಂಗಕೆ ಎಡೆಮಾಡಿ
ಹಂಬಲಿಸಿ ಬಂದಿಹರು ಸಂಗರಹಿತ ಶಿವ
ಏಳಯ್ಯ ನೀ ಬೇಗ ಸಿದ್ಧರಾಮ ॥ ೨ ॥

ಜಗದಗಲ ನಿನ ಕಣ್ಣು ಮುಗಿಲಗಲ ನಿನ್ನನೋಟ
ಮಿಗಿಯಗಲ ನಿನ್ನ ರೂಢ ಯೋಗಿಗಳ ಕುಲತಿಲಕ
ಏಳಯ್ಯ ನೀ ಬೇಗ ಸಿದ್ಧರಾಮ ॥ ೩ ॥

ಜಯಸತ್ಯ ಶೀಲನ ಜನ ನಿತ್ಯನಿರ್ಮಲ
ಜಯ ಸಿದ್ಧರಾಮನೇ ಮಾಯೆಯ ಗೆಲಿದವನೆ
ಏಳಯ್ಯ ನೀ ಬೇಗ ಸಿದ್ಧರಾಮ ॥ ೪ ॥

ಹೊಳೆಯುತ ಥಳ ಥಳ ಬೆಳಗುತ ಬಟ್ಟಲೊಳು
ಬೆಳಕಾಗಿ ಬಂದಿಹರು ಸೆಳೆಯುತ ಸಕಲರನು
ಏಳಯ್ಯ ನೀ ಬೇಗ ಸಿದ್ದರಾಮ ॥ ೫ ॥

– ಶ್ರೀಮತಿ ಶಶಿಕಲಾ ಶರಣಪ್ಪ ಗಿರಿ ಹಾಗೂ
ಪಾರ್ವತಿ ಜೆಮಶೆಟ್ಟಿ, ಶೀಲಾ ಕೋಣೇನ,
ಮಹಾದೇವಿ ಕುಂಬಾರ

***

೫

ಎಷ್ಟು ಧ್ಯಾನಾ ಮಾಡಲಿ ಸಿದ್ಧರಾಮ ನಿಮಗೆ ॥ ಪ ॥

ಗುಡಿಯಾಗ ಕುಂತಿದಿ ಏನು ಶಿಖರದಾಗ ನಿಂತಿದಿ ಏನು
ಗುಡಿ ಶಿಖರವನು ಸೇರಿ ಕಟಾಕ್ಷರೆ ನೋಡಲೇನು ॥ ೧ ॥

ಬಜನ್ಯಾಗ ಕುಂತಿದೇನು ಕೀರ್ತನದಾಗ ನಿಂತಿದೇನು
ಭಜನಿ ಕೀರ್ತನ ಸೇರಿ ಕೇಳ್ಯಾರ ನೋಡಲೇನು ॥ ೨ ॥

ಪತ್ರ್ಯಾಗ ಕುಂತದೇನು ಹೂವಿನಾಗ ನಿಂತಿದೇನು
ಹೂವ ಪತ್ರಿನಾರ ಸೇರಿ ಸರಸ್ಯಾರ ನೋಡಲೇನು ॥ ೩ ॥

ಘಂಟ್ಯಾಗ ಕುಂತಿದೇನು ನಗರ್‍ಯಾಗ ನಿಂತಿದೇನು
ಘಂಟಿ ನಗಾರಿ ಸೇರಿ ಬಾರಸೇರ ನೋಡಲೇನು ॥ ೪ ॥

ಬೆಳ್ಳ್ಯಾಗ ನಿಂತಿದ್ದೇನು ಬಂಗಾರದಾಗ ನಿಂತಿದೇನು
ಬೆಳ್ಳಿ ಬಂಗಾರ ಸೇರಿ ಸೋಸೇರ ನೋಡಲೇನು ॥ ೫ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

೬

ಆಲದ ಮರನೇರಿ ಹಾಲದ ಪ್ರಭು ತಾನೇ ಬಂದ
ಪದುಮದ ಪಾದ ತಂದಾರೇಳಯ್ಯ । ಸಿದ್ಧರಾಮ
ಪದುಮದ ಪಾದ ತಂದಾರೇಳಯ್ಯ ॥ ಪ ॥

ಅತ್ತಿಯ ಮರವನೇರಿ ಸತ್ಯ ಶರಣೆ ನಾನೆ ಬಂದೆ
ಮುತ್ತಿನ ವಸ್ತ್ರ ತಂದಾರೇಳಯ್ಯ । ಸಿದ್ಧರಾಮ
ಪದುಮದ ಪಾದ ತಂದಾರೇಳಯ್ಯ ॥ ೧ ॥

ಬಾಜು ಭಾಜಂತರಿ ಬಾಳೆಬನದಾ ಹಲಗಿ ಸಿಂಗಾರ
ಭೋರಗೆಜ್ಜೆ ಗಿಲ್ಲಂದಾವ । ಸಿದ್ಧರಾಮಯ್ಯ
ಭೋರಗೆಜ್ಜೆ ಗಿಲ್ಲಂದಾವ ಏಳಯ್ಯ ॥ ೨ ॥

ತಣ್ಣೀರ ಬಿಸಿನೀರ ಹಾಲುಸಕ್ಕರಿ ಬಾಳೇಹಣ್ಣ
ನಿಮಗ ಅಭಿಷೇಕ ಮಾಡ್ಯಾರ ಏಳಯ್ಯ । ಸಿದ್ಧರಾಮ
ನಿಮಗ ಅಭಿಷೇಕ ಮಾಡ್ಯಾರ ಏಳಯ್ಯಾ ॥ ೩ ॥

ಅಕ್ಕಿಪೂಜೆ ಬ್ಯಾಳಿಪೂಜೆ ನಿಮಗ ಗಟ್ಟಿ ಎಲಿಯ ಪೂಜೆ
ನಿಮಗ ಪೂಜೆ ಗಟ್ಟಾಸ್ಯಾರ ಏಳಯ್ಯ । ಸಿದ್ಧರಾಮ
ನಿಮಗ ಪೂಜೆ ಗಟಸ್ಯಾರ ಏಳಯ್ಯ ॥ ೪ ॥

ಅಚ್ಚು ಅಚ್ಚು ಬೆಲ್ಲದ ಅಚ್ಚು ಮ್ಯಾಲ ಎಳ್ಳ ಚಿಗುಳಿ ಎಚ್ಚು
ನಿಮಗ ನೈವೇದ್ಯ ಮಾಡ್ಯಾರ ಏಳಯ್ಯ । ಸಿದ್ಧರಾಮ
ನಿಮಗ ನೈವೇದ್ಯ ಮಾಡ್ಯಾರ ಏಳಯ್ಯ ॥ ೫ ॥

ಜಾಜಿ ಮಲ್ಲಿಗಿ ಜೂಜಿ ಮಲ್ಲಿಗಿ ಕೆಂಪ ಮಲ್ಲಿಗಿ ದುಂಡ ಮಲ್ಲಿಗಿ
ನಿಮಗ ಹೂವ ಮುಡಿಸ್ಯಾರ ಏಳಯ್ಯ । ಸಿದ್ಧರಾಮ
ಅಕ್ಕಿಕಾಳು ಬಿದ್ದಾವೇಳಯ್ಯ ॥ ೬ ॥

ಸಂಕ್ರಾಂತಿಯ ದಿನ ಸುಮತಿ ಹೂವ ಮೆರೆವ ದಿನಾ
ಅಕ್ಕಿಕಾಳ ಬಿದ್ದಾವೇಳಯ್ಯಾ । ಸಿದ್ಧರಾಮ
ಅಕ್ಕಿಕಾಳ ಬಿದ್ದಾವೇಳಯ್ಯ ॥ ೭ ॥

ಸಂಕ್ರಾಂತಿ ಕರಿಯ ದಿನ ನಂದೀಕೋಲ ಮೆರೆವ ದಿನ
ಆಕಾಶ ಬಾಣ ಬಿಡುತ್ತಾರೇಳಯ್ಯ । ಸಿದ್ಧರಾಮ
ಆಕಾಶ ಬಾಣ ಬಿಡುತ್ತಾರೇಳಯ್ಯ ॥ ೮ ॥

ಬಾಗಿಲ ಮ್ಯಾಲಿನ ಕೋಗಿಲ ಕೂಗಿ ಕೂಗಿ ಮರವನೇರಿ
ನಾಗರ ಹೆಡಿಯಾ ಆಡ್ಯಾವ ಏಳಯ್ಯ । ಸಿದ್ಧರಾಮ
ನಾಗರಹೆಡಿಯಾ ಆಡ್ಯಾವ ಏಳಯ್ಯ ॥ ೯ ॥

ಗಂಗಿಯೊಳಗ ಸ್ನಾನ ಮಾಡಿ ನಿನ್ನ ಗುಡಿಯ ಸುತ್ತಿ ಸುತ್ತಿ
ಹರದೆಯರು ಫಲವ ಬೇಡ್ಯಾರೇಳಯ್ಯ । ಸಿದ್ಧರಾಮ
ಹರದೇರ ಫಲವ ಬೇಡ್ಯಾರೇಳಯ್ಯ ॥ ೧೦ ॥

– ಶ್ರೀಮತಿ ಗೌರವ್ವ ಕಾಡಾದಿ ಹಾಗೂ
ಶ್ರೀಮತಿ ನೀಲಾಂಬಿಕಾ ಶೇರಿಕಾರ

***

ಕರಿಕಣ್ಣಿನ ಟೆಂಗಿನಕಾಯಿ ಕರಪೂರ ಲಾಬಾನ
ಗಣಪಣ್ಣಗ ವರವ ಪಡಕೋರೊ । ಮ್ಯಾಲಿರುವ
ಆದಿಶೇಷಪ್ಪಗ ನೆನಕೋರೊ ॥ ೧ ॥

ಎಳೇಲೋ ಮಲ್ಲಯ್ಯ ಎಷ್ಟೊತ್ತು ಮನಗಿದಿ
ಸೀತಳ ಬಂದಾವ ನಿನಗಾಗ್ಯೊ । ಮಲ್ಲಯ್ಯ
ಭಕ್ತರು ಬಂದಾರ ದರುಶಕೊ ॥ ೨ ॥

ಮಲ್ಲಯ್ಯನ ಪೂಜಾಕ ಏನ ಸಾಗಿಸಬೇಕೊ
ಕಾಯಿ ಕರ್ಪೂರ ತಿಳಿನೀರೊ । ಮಲ್ಲಯ್ಯ
ಈಬತ್ತಿ ಬೇಕೊ ದರಸಾಂದಕೊ ॥ ೩ ॥

ಈಬತ್ತಿ ದರಸ್ಯಾರ ಮನಿಮ್ಯಾಗ ಕುಂತಾರ
ಊದಿನ ಹೊಗಿಯ ದುಂದಕಾರೊ । ಮಲ್ಲಯ್ಯ
ಪೂಜಾ ನಡದಾವ ಎರಡ್ಹೊತ್ತೊ ॥ ೪ ॥

ಕಡಗಂಚಿ ಊರಾಗ ಮೇಲಗಂಬದ ಮ್ಯಾಗ
ಮೇಲ್ಯಾಡಿ ದೀಪ ಉರದಾವೊ । ಮಲ್ಲಯ್ಯ
ಭಕ್ತರಚ್ಯಾರ ಸರದೀಪೊ ॥ ೫ ॥

ಊದುಸ್ತ ಬಾರುಸ್ತ ಗುಡಿಯಾಗ ಬಿದ್ದಾನ
ಊರಾಗ ಪೇರಿ ಹೊಡದಾನೊ । ಮಲ್ಲಯ್ಯ
ಊರ್ಹೊರಗ ಹೋಗಿ ನಿಂತಾನೊ ॥ ೬ ॥

ಪರವೊತ ಹೋಗಲಾಕ ಏನ ಸಾಗಿಸಬೇಕೊ
ಕಾವಡಿ ಬೇಕೊ ಕೈಯಾಗ । ಮಲ್ಲಯ್ಯನ
ಜೋಳಿಗಿ ಬೇಕೊ ಬಗಲಿಗ್ಯೊ ॥ ೭ ॥

ಮಲ್ಲಯ್ಯ ದೇವರಿಗಿ ಮಕಮಲ ಟೊಪ್ಪಿಗಿ
ಮುತ್ತ ಹೊಯ್ದಂಗ ಬಿಳಿ ಎರಕೊ । ಮಲ್ಲಯ್ಯ
ಚವರಾದ ಸುತ್ತ ಬಿಳಿಮುತ್ತೊ ॥ ೮ ॥

ಮುಂಜಾನೆ ಎದ್ದಾನ ಜಳಕವ ಮಾಡ್ಯಾನ
ಈಬತ್ತಿ ಪಟ್ಟಾ ದರಶ್ಯಾನೊ । ಸಿದ್ರಾಮ
ಮುತ್ತಿನ ಟೆಪ್ಪಿಗಿ ತಲಿಮ್ಯಾಲೊ ॥ ೯ ॥

ಸಿದ್ರಮ ಬಂದಾನ ದನಗೋಳು ಬಿಟ್ಟಾನ
ಹೊಲದೊಳ್ಗ ದನಗೋಳ ತಂದಾನೊ । ಸಿದ್ರಾಮ
ಆಡುತ ಅಲ್ಲಿ ಕುಂತಾನೊ ॥ ೧೦ ॥

ಮಲ್ಲಯ್ಯ ನೋಡ್ಯಾನೊ ಸಿದ್ರಾಮನ ಬಲ್ಲಿ ಬಂದು
ಸಿದ್ರಾಮನ ಮುಂದ ನಿಂತು ನೋಡ್ಯಾನೊ । ಮಲ್ಲಯ್ಯ
ಹರಕಿ ಕೊಟ್ಟಾನ ಸಿದ್ರಾಮಗೊ ॥ ೧೧ ॥

ಇಬ್ಬರು ಕೂಡ್ಯಾರೊ ಕೈ ಕೈ ಹಿಡದಾರೊ
ಮಾವಿನ ತಂಪ ಹಿಡದಾರೊ । ಇಬ್ಬರು
ಶಿವ ಶಿವನೆಂದು ಕುಂತಿದಾರೊ ॥ ೧೨ ॥

ಸಿದ್ರಾಮ ಎದ್ದಾನೊ ಲಗಬಿಗಿ ಮಾಡ್ಯಾನೊ
ಕುಳ್ಳ ಕಟಿಗಿ ತಂದಿದಾನೊ । ಸಿದ್ರಾಮ
ಒಲಿಯಾಗಿ ಕಿಚ್ಚಾ ಹಾಕ್ಯಾನೊ ॥ ೧೩ ॥

ಲಗಬಿಗಿ ಮಾಡ್ಯಾನೊ ಸಿದ್ಧರಾಮ ಎದ್ದಾನೊ
ಕುಳ್ಳಕಟಿಗಿ ತಂದಿದಾನೊ । ಸಿದ್ದರಾಮ
ಒಲಿಯಾಗ ಕಿಚ್ಚಾ ಮಾಡ್ಯಾನೊ ॥ ೧೪ ॥

ಕಿಚ್ಚಾವ ಮಾಡ್ಯಾರ ಕಿಚ್ಚಾವ ಮುಚ್ಯಾರ
ಹೊಲದೊಳಗ ಸಿದ್ಧರಾಮ ಹೋಗ್ಯಾನೊ । ಹುಡುಕ್ಯಾನೊ
ಎಳಿ ಎಳಿ ತೆನಿಯ ತಂದಾನೊ ॥ ೧೫ ॥

ತೆನಿಯಾದರ ತಂದಾನ ಒಲಿಮುಂದ ಇಟ್ಟಾನ
ಕಂಬಳಿ ಗದ್ದಿಗಿ ಹಾಕಿದಾನೊ । ಮಲ್ಲಯ್ಯಾಗ
ಕರದು ಗದ್ದಿಗಿ ತಂದಾನೊ ॥ ೧೬ ॥

ಸೀತನಿ ತಿಂದಾರ ಒಲಿಮುಂದ ಕುಂತಾರ
ಇಬ್ಬರು ಕೂಡಿ ಮಾತಾಡುತ । ಕುಂತಾರೊ
ಏನೇನ್ನಂಚಿಕಿ ತಗದಾರೊ ॥ ೧೭ ॥

ಮಲ್ಲಯ್ಯ ಎದ್ದಾನ ಸಿದ್ರಾಮಗ ಪೇಳ್ತಾನೊ
ಹಸುವಾಗೇದ ಸಿದ್ರಾಮಾ ಇಂದ । ನನಗೊ
ಲಗುನ ಬುತ್ತಿ ತಾನೆಂದಾನೊ ॥ ೧೮ ॥

ಲಗುಬಿಗಿ ಮಾಡ್ಯಾನೊ ಮನಿಗಿ ಓಡ್ಯಾನೊ
ತಾಯಿಗೆ ಕರದು ಹೇಳ್ಯಾನೊ । ಸಿದ್ರಾಮ
ಬುತ್ತಿ ಕಟ್ಟಿಕುಡು ಎಂದೊ ॥ ೧೯ ॥

ಲಗಬಿಗಿ ಮಾಡ್ಯಾಳ ಬುತ್ತಿಯ ಕಟ್ಯಾಳ
ಸಿದ್ರಾಮಗ ಕರದು ಕೊಟ್ಟಾಳೊ । ತಾಯಮ್ಮ
ಓಡುತ ಹೊಲಕ ಬಂದಾನೊ ॥ ೨೦ ॥

ಸಿದ್ದರಾಮ ಬಂದಾನ ಹೊಲದೊಳಗ ನಿಂತಾನ
ಮಲ್ಲಯ್ಯನೆಂದು ಕೂಗ್ಯಾನೊ । ಸಿದ್ದರಾಮ
ಮಾಯಾಗ್ಯಾನ ಮಲ್ಲಯ್ಯಾ ॥ ೨೧ ॥

ಸಿದ್ದರಾಮ ಬಂದಾನ ಬುತ್ತಿಯ ಹಿಡದಾನ ।
ಮಲ್ಲಯ್ಯನೆಂದು ಕೂಗ್ಯಾನೊ । ಸಿದ್ದರಾಮ
ಮಾಯಾಗ್ಯಾನ ಗಳಿಗ್ಯಾಗೊ ॥ ೨೨ ॥

ಹಾದಿಹೋಗೊ ಅಣ್ಣದೇರ್ಯಾ ಹಾದಿಗ್ಹೋಗಾ ತಮ್ಮದೇರಾ
ಮಲ್ಲಯ್ಯಗ ನೀವು ನೋಡಿರೇನೊ । ಅಣದೇರಾ
ಮಲ್ಲಯ್ಯ ಎಲ್ಲಿ ಇರತಿದ್ದಾನೊ ॥ ೨೩ ॥

ಹೆಂತಾ ಹುಚ್ಚ ಸಿದ್ದರಾಮ ಎಂತಾ ದಡ್ಡೊ ಸಿದ್ದರಾಮ
ಮಲ್ಲಯ್ಯ ಇಲ್ಲಿ ಇರತಾನೊ । ಸಿದ್ದರಾಮ
ಸಿರಸೈಲದೊಳಗ ಇರತಾನೊ ॥ ೨೪ ॥

ನಾನೂ ಬರತೀನಣ್ಣಾ ನಾನೂ ಬರತೀನಿ ತಮ್ಮಾ
ಮಲ್ಲಯ್ಯನ ನನಗ ತೋರ್ಸಬೇಕು । ಅಣದೇರಾ
ಸಿರಸೈಲಕ ಬರತೇನಂದಾನೋ ॥ ೨೫ ॥

ಊರು ಮಂದಿ ಕೂಡ್ಯಾರ ಸಿರಿಶೈಲಕ ಹೊಂಟಾರ
ಸಿರಿಶೈಲದೊಳಗ ನಿಂತಾರೊ । ಮಾತಾಡತಾರ
ಸಿರಿಶೈಲ ಬಾಗಲ ಇದೆ ಅಂದಾರೊ ॥ ೨೬ ॥

ಸಿದ್ದರಾಮ ಹೋಗ್ಯಾನ ಗುಡಿಯೊಳಗ ನಿಂತಾನ
ಮಲ್ಲಯ್ಯನೆಂದು ಕೂಗಿದನೊ । ಸಿದ್ದರಾಮ
ಲಿಂಗಮೂರತಿ ಅಂದು ಅಂದಾನೊ ॥ ೨೭ ॥

ಗಾಬರಿಯಾಗ್ಯಾನೊ ಸಿದ್ದರಾಮ ಓಡ್ಯಾನೊ
ಗುಡ್ಡಗಂವರಾ ತಿರುಗ್ಯಾನೊ । ಸಿದ್ದರಾಮ
ಕಮರಿ ಮಡವು ಏರದನೋ ॥ ೨೮ ॥

ಕಮರಿಮಡವು ಏರಿ ಮ್ಯಾಲ ನಿಂತಾನೊ
ಮಲ್ಲಯ್ಯನೆಂದು ಹಾರಿದನೊ । ಸಿದ್ಧರಾಮ
ಮಲ್ಲಯ್ಯ ಬಂದು ಹಿಡದಿದನೊ ॥ ೨೯ ॥

ಶಿವ ಶಿವ ಭಗವಂತ ಹೆಂತಾ ವ್ಯಾಳ್ಯಾವು ಬಂತು
ಏನ ಅವಸರ ಬಂದಿತು ನಿನಗ । ಸಿದ್ದರಾಮ
ಕಮರಿ ಹಾರುದಕ ನಿಂತಿದಯೊ ॥ ೩೦ ॥

ಮಲ್ಲಯ್ಯ ಬಂದಾನೊ ಸಿದರಾಮಗ ಹಿಡದಾನೊ
ನಿನ್ನ ಭಕ್ತಿಗಿ ಸಿದ್ದರಾಮ । ಮೆಚ್ಚಿದೆನೊ
ಏನ ಬೇಡತಿ ಬೇಡಂದನೊ ॥ ೩೧ ॥

ಧನದವಲತವೊಲ್ಲ ಮುತ್ತ ಮಾಣಿಕವಲ್ಲ
ಬುತ್ತಿ ತಂದಿದ ಮೊದಲಾಗಿ । ಮಲ್ಲಯ್ಯಸ್ವಾಮಿ
ಊಟಾ ಮಾಡಬೇಕೊ ನೀ ಬೇಗೊ ॥ ೩೨ ॥

ಇಬ್ಬರು ಕೂಡ್ಯಾರ ಸಿಸ್ತಾಗಿ ಕುಂತಾರ
ಊಟ ಮಾಡ್ಯಾರೊ ಇಬ್ಬರೂ । ಮಲ್ಲಯ್ಯ
ಆಶೀರ್ವಾದ ಕೊಟ್ಟಾನೊ ಸಿದ್ದರಾಮಗೊ ॥ ೩೩ ॥

– ಕೃತಿ: ಉತ್ತರ ಕರ್ನಾಟಕದ ಹಂತಿಯ ಹಾಡುಗಳು

***

ಸೊಲ್ಲಾಪುರದ ಸಿದ್ದರಾಮೇಶ್ವರ ಸ್ತೋತ್ರ

ಬಾಗಿಲದಾಗಿನ ಕೋಗಿಲ ಕೂಗಿ ಕೂಗಿ ಮರನೇರಿ
ನಾಗರ್ಥಡಿಯಂಗಾಡ್ಯಾವೇಳಯ್ಯಾ । ಸಿದ್ದರಾಮಾ
ನಾಗರ್ಥಡಿಯಂಗಾಡ್ಯಾವೇಳಯ್ಯಾ ॥ ೧ ॥

ಅತ್ತಿಯ ಮರನೇರಿ ಸತ್ತು ಸೊರಗಿ ನಾನೆ ಬಂದ
ಮುತ್ತಿನೊಸ್ತಾ ತೋರ್ಶ್ಯಾರೇಳಯ್ಯಾ । ಸಿದ್ಧರಾಮಾ
ಮುತ್ತಿನೊಸ್ತಾ ತೋರ್ಶ್ಯಾರೇಳಯ್ಯಾ ॥ ೨ ॥

ಆಲದ ಮರನೇರಿ ಆಲಪರದು ನಾನೆ ಬಂದ
ನೀಲದೊಸ್ತಾ ತೋರ್ಯಾರೇಳಯ್ಯಾ । ಸಿದ್ದರಾಮಾ
ನೀಲದೊಸ್ತಾ ತೋರ್ಯಾರೇಳಯ್ಯಾ ॥ ೩ ॥

ಅಕ್ಕಿ ಪೂಜಿ ಬ್ಯಾಳಿ ಪೂಜಿ ಮ್ಯಾಲ ಎಲಿಯ ಘಟ್ಟ ಪೂಜಿ
ನಿತ್ಯ ಪೂಜಿ ಕಟ್ಟ್ಯಾರೇಳಯ್ಯಾ । ಸಿದ್ದರಾಮಾ
ನಿತ್ಯ ಪೂಜಿ ಕಟ್ಟ್ಯಾರೇಳಯ್ಯಾ ॥ ೪ ॥

ಕೆಂಪಗಂಧ ಬಿಳಿಯ ಗಂಧ ಅಷ್ಟಗಂಧ ಸಿರಿಯ ಗಂಧ
ಛೆಂದದಿಂದ ಏರ್ಯಾವೇಳಯ್ಯಾ । ಸಿದ್ಧರಾಮ
ಛೆಂದದಿಂದ ಏರ್ಯಾವೇಳಯ್ಯಾ ॥ ೫ ॥

ಜಾಜ ಮಲ್ಲಿಗೆ ಜೂಜ ಮಲ್ಲಿಗೆ ಅರಳ ಮಲ್ಲಿಗೆ ಶಾವಂತಿಗ್ಹೂವ
ನಿಮ್ಮ ಪೂಜಿ ಬಂದಾವೇಳಯ್ಯಾ । ಸಿದ್ಧರಾಮ
ನಿಮಗ ಪೂಜಿ ಮಾಡ್ಯಾರೇಳಯ್ಯಾ ॥ ೬ ॥

ಅಚ್ಚದಚ್ಚ ಬೆಲ್ಲದಚ್ಚ ಮ್ಯಾಗ ಎಳ್ಳ ಚಿಗಳಿನಚ್ಚ
ನಿಮಗ ನೇವುದಿ ಬಂದಾವೇಳಯ್ಯಾ । ಸಿದ್ಧರಾಮ
ನಿಮಗ ನೇವುದಿ ತೋರ್ಯಾರೇಳಯ್ಯಾ ॥ ೭ ॥

ಬಾಜಿ ಬಾಜಿ ಬಾಜಿಯಂತರಿ ಬಾಳಿ ಬನದಾಗ ಹಲಗಿ ಖೊಂಬಾ
ಭೋರಗೆಜ್ಜಿ ಘಿಲ್ಲಂದಾವೇಳಯ್ಯಾ । ಸಿದ್ಧರಾಮಾ
ಭೋರಗೆಜ್ಜಿ ಘಿಲ್ಲಂದಾವೇಳಯ್ಯಾ ॥ ೮ ॥

ಗಂಗಿಯೊಳಗ ಸ್ನಾನಮಾಡಿ ಶಿವನ ಶಿಕರ ಸುತ್ತಿಬಂದು
ಹರದ್ಯೇರು ಫಲವ ಬೇಡ್ಯಾರೇಳಯ್ಯಾ । ಸಿದ್ಧರಾಮ
ಹರದ್ಯೇರು ಫಲವ ಬೇಡ್ಯಾರೇಳಯ್ಯಾ ॥ ೯ ॥

ಸಂಕರಾತರಿ ಕರಿಯ ದಿನಾ ಮಿತ್ರೆರೆಲ್ಲಾ ಮಡಿಗಳುಟ್ಟು
ಮುತ್ತಿನಾರತಿ ಎತ್ತ್ಯಾರೇಳಯ್ಯಾ । ಸಿದ್ಧರಾಮ
ಮುತ್ತಿನಾರತಿ ಎತ್ತ್ಯಾರೇಳಯ್ಯಾ ॥ ೧೦ ॥

ಸಿಂಗರಾದ ಸೊಲ್ಲಾಪುರ ಭಂಗರಾದ ಸಿದ್ಧರಾಮ
ಸಿಕರ ಕಟ್ಟ್ಯಾರು ರೈತರೆಲ್ಲರೂ । ಸಿದ್ಧರಾಮ
ಸಿಕರ ಕಟ್ಟ್ಯಾರು ರೈತರೆಲ್ಲಾರು ॥ ೧೧ ॥

ಕಮರ ತಳಿ ರೇವಣಸಿದ್ದಾ ಗಂಗಿಯೊಳಗ ಸಿದ್ಧರಾಮ
ನಡುವ ಕುಂತಾರ ಮಲ್ಲಿಕಾರ್ಜುನ । ಸಿದ್ಧರಾಮ
ಊರಿಗ್ಹಾರ ಮಲ್ಲಿಕಾರ್ಜುನ ॥ ೧೨ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾಕೋಣಿನ, ಮಹಾದೇವಿ ಕುಂಬಾರ
ಕೃತಿ: ಬಣ್ಣವಾಡು

***

ಸಿದ್ಧರಾಮನ ಪದ

ಕುಂಭಿನೊಳಗ ಜಗದಂಬ ಸಾಂಭಶಿವ ಸಿದ್ಧರಾಮನ
ಜಾತುರಿ ವರುಷಕೆ ಬರುವ ಸಂಕರಾತರಿ ॥ ಪ ॥

ಧರಣಿ ಮ್ಯಾಲ ಸುವರ್ಣಪೂರ ಶಾರ ಸೊನ್ನಲಪುರ
ದೊಡ್ಡ ಕ್ಷೇತ್ರ ಐವತ್ತಾರು ದೇಶಕ್ಕೆ ಹೆಸರಾ ॥ ಅ ಪ ॥

ಮೊದಲ ಕತಿ ಮುದ್ದಗೌಡ ಸುಗ್ಗಲದೇವಿ ಸತಿ ಪತಿ ಅತಿ ಸುಂದರಾ
ಪತಿವೃತಾ ಧರ್ಮದಲ್ಲಿ ಅವರು ಪೂರಾ
ಕೊಲ್ಲಿಪಾಕಿನಲ್ಲಿ ಸೋಮನಾಥನ ವರದಿಂದ ಈಶ್ವರಾ
ಹುಟ್ಯಾನ ರೇವಣಸಿದ್ಧ ದೇವರಾ
ಜೈನಮತ ಆ ಕ್ಷಣಕ ಅಳಿದನು ಮುರಿದ ಗರ್ವ ಅಹಂಕಾರ
ಶಿವಮತ ಮಾಡಿದ ಕುಲ ಉದ್ಧಾರ ।

ಜನರ ಭಕ್ತಿ ಭಾವಾ ನೋಡುತ ಹೊಂಟಾನ ದೇಶಾ ದೇಶಾ ಚರಿಸುತ
ಬಡವರಿಗೆ ರಕ್ಷಣ ಮಾಡುತ ಅರಳಗುಂಡಗಿ ಸಿದ್ಧನ ನೆನೆಯುತ
ಜಟ್ಟಣ ಪಟ್ಟಣೆಲ್ಲಾ ತಿರಗುತ ರಕ್ಷಕ ಭಿಕ್ಷುಕ ಅಂಬಲಿ ಬೇಡುತ
ಅಂಬಲಿ ಉಂಡು ಆಳಾಗಿ ದುಡಿಯುತ
ಅಕ್ಷಯ ಗುಂಡನ ಮನಿಗಿ ತೆರಳುತ ।

ನಂಬಿಗಿಟ್ಟವರಿಗೆಲ್ಲಾ ಒಲಿಯುತ, ಸಾಧು ಸಜ್ಜನರೀಗಿ ಸಲಹೂತ,
ಅಲ್ಲಿಂದ ಕಲ್ಯಾಣಕ್ಕೆ ಬರವೂತ ಪಟ್ಟಣ ವಿಸ್ತಾರೆಲ್ಲಾ ನೋಡುತ
ಮಹಾದೇವನ ಮನಿಯಾಗ ಹೊನ್ನ ಸುರಿಸುತ
ಕಲಶೆಟ್ಟಿ ಮನಿಯಾಗ ಗಾಣ ಹೂಡುತ, ।

ಅಲ್ಲಿ ಪವಾಡ ಮೆರೆಸಿ ಗೆಲ್ಲುವ ಬಸವ ಮುದ್ರೆಗಳ ಹೊನ್ನ ತೆಗಿಸುವಾ
ಶಿಸುವಿಗೆ ಹಾಲ್ಬೆಣ್ಣೆ ಕೊಟ್ಟು ಸಲಹುವಾ
ಮಂಗಳವೇಡ ಗ್ರಾಮಕ್ಕೆ ಬರುವಾ ಬಲ್ಲಿದ ಬಿಜ್ಜಳರಾಯನ ಗರ್ವ
ಹಿಡಿಸಿದ ದೇವಾ ಮುರಿಸಿದ ಗರ್ವಾ
ಮಾಸನೂರು ಮಹಾಕ್ಷೇತ್ರವೆನಿಸುವ ಸುರಗಿ ತಗೆಸುತ ಸೆರೆ ಬಿಡಿಸುವಾ
ಅರಿತು ಏಳನೂರು ವರುಷವ ।

ಚರಿಸಿ ಮಾಯಿಗೆ ಒಲಿತು ಮಣ್ಣವ ಹೊರಿಸಿ
ಬಡವರಿಗೆ ಭಾಷಿ ಕೊಟ್ಟು ರಕ್ಷಿಸಿ
ಸಾಕ್ಷಾತ್ ರೇವಣಸಿದ್ಧರಾಮನ ಕಥೆಯ ಕುಂತು ಕೇಳಿರಿ
ವರಷಕೆ ಬರುವ ಸಂಕರಾತುರಿ ॥ ಚೌಕ ೧ ॥

ರೇವಣಸಿದ್ಧೇಶ್ವರನ ಮಹಿಮೆ ಠಳಕ ಠಳಕ ಹೇಳುತ
ಮುಂದಿನ ಕಥೆಯು ಬಹಳ ಉಳಿಯುತ
ಐವತ್ತಾರು ದೇಶವ ಚರಿಸಿ ಸೊನ್ನಲಪುರಕೆ
ಬರುವುತ ಸುಗ್ಗಾದೇವಿಗಿ ವರವ ಕೊಡುವುತ
ಬುದ್ಧಿಗೊಂಡು ಮನ ಭಾವಕೆ ಮೆಚ್ಚಿ ಮಾತ ಅವರಿಗೆ ಹೇಳುತ
ಮುಂದಿನ ವೈಕವೆಲ್ಲ ತಿಳಿಸುತ
ಶಿವನ ಕೃಪಾ ಸುಗ್ಗಾದೇವಿ ಗರ್ಭದಲ್ಲಿ ಸಿದ್ಧರಾಮ ಜನಿಸುತ
ನಿಮ್ಮ ಜನ್ಮ ಉದ್ಧಾರಾಗತ । ಹೀಂಗ ಹೇಳಿ ಹೋದ ಗುರುನಾಥ ।

ನವಮಾಸ ತುಂಬಿ ತಾಯಿ ಹಡೆಯೂತ
ಶಿವನ ವರಪುತ್ರ ಮಗ ಹುಟ್ಟಿ ಏಳು ವರುಷ ಬೆಳೆಯುತ
ಹಸು ಮಕ್ಕಳ ಗೂಡ ಆಡುತ ಬಸವಲಿಂಗನ ಭಜನಿ ಮಾಡುತ
ಹಸು ತೃಷಿ ನಿದ್ರಿಗಳಿಯೂತ ನಿತ್ಯ ಲಿಂಗದ ಪೂಜಿ ಮಾಡುತ
ನವಣಿ ಹೊಲದಾಗ ಕರಗಳು ಕಾಯುತ
ಮಹಾದೇವ ಬಂದಾನ ಭಾವಾ ನೋಡುತ
ಶಿವ ಶಿವ ಸಿದ್ಧರಾಮ ಅಂದನು ಕಪಿಲಸಿದ್ಧಮಲ್ಲಿನಾಥ ।

ಬಂದನು ಬಸವ ಭಕ್ತಿ ಮಾತೊಂದು ಕೇಳೇನು
ಹಸ್ತ ಹೊಟ್ಟಿ ಬಹಳ ಹೈರಾಣಂದನು
ಹಸಿಯ ನವಣಿಯ ಸೀತನಿ ತಿಂದನು
ಮಸರ ಬುತ್ತಿ ಆ ಕ್ಷಣಕ ಬೇಡ್ಯಾನು
ಭರದಿ ಸಿದ್ಧರಾಮ ಮನೆಗೆ ಬಂದನು
ಕಿಡಿಗೇಡಿ ಶಿವ ಮಾಯವಾದನು
ಯಾವ ಕಡಿ ತಾ ಹೋದನು

ಹುಡುಕುತ ಅವನಿಗೆ ಮೆಡಕುತ ಹೊಂಟನು
ಕಿಡಗೇಡಿ ಶಿವ ಕುಟಿಲದ ತಿಳಿಯದೆ
ಕೂಸಿನ ನಿಜರೂಪ ತೋರಿದಾ
ವರುಷಕೆ ಬರುವಾ ಸಂಕರಾತುರಿ ॥ ಚೌಕ ೨ ॥

ಛಾಯಾ ತೋರಿ ಮಾಯಾಗಿ ಹೋದನು ಮಲ್ಲಿನಾಥ ದೇವರ
ಸಿದ್ರಾಮೇಶ್ವರ ದಿಲ್ಗೀರಾ
ಹಸ್ತ ಜಂಗಮ ಉಳ್ಳಿಲ್ಲ ಶಿವನೆ ಇದು ಎಂಥಾ ಹಣೆಬಾರ
ಹೀಂಗ ಅನ್ನುತ ಸಿದ್ರಾಮೇಶ್ವರ
ತಂದೆ ತಾಯಿ ಬಂಧುಬಳಗ ಬಿಟ್ಟನು ಸೊನ್ನಾಲಾಪುರ ಹುಡುಕುತ
ಹೊಂಟನು
ಅರಣ್ಯದಾಸರಾ ಕಪಿಲಸಿದ್ಧ ಮಲ್ಲಯ್ಯನ ಧ್ಯಾನಾ
ಮನದಲ್ಲಿ ಇಟ್ಟನು ಪೂರಾ ಸೃಷ್ಟಿ ಆದಿಪತಿ ಸಿದ್ರಾಮೇಶ್ವರ ।

ಶುದ್ಧ ಕಾಯಾ ಭಾವಾ ಸವಚಿತ್ತ
ಕಾಕು ಬುದ್ದಿನೆಲ್ಲಾ ಆಳಿಯುತಾ
ಲೋಕನಾಥಾನೆಂದು ಕೂಗುತ । ಗುಡ್ಡ ಗಂವ್ಹಾರ ಶೋಧನ ಮಾಡುತ
ಗಿಡಮೂಲಿ ಮಂಜವ ಹುಡುಕುತ
ವಾಲ್ಗಾದಾಡೀಗೆ ನೆನೆಸುತ ದೊಡ್ಡ ಶರಣರಿಗಿ ಶಿರವು ಬಾಗೂತಾ
ಕಂಡಿರೇನ ರುಂಡಮಾಲಿಪ ಶಿವನ ಪ್ರಚಂಡ
ಅಡ್ಡ ನೂರೆಂಟು ಪರಶಿ ಬರುವುತ ।

ಘರಶಿ ಜನರು ಕಂಡು ಕೇಳುತ ಪರ ದಂಡನಾಯಕನ
ಜನನ ರಹಿತನ ಜಗದೀಶ್ವರನ ಮರಣ ರಹಿತನ
ಮನ್ಮಥ ಸುಟ್ಟವನ ದೋಷ ರಹಿತನ ಕರುಣ ಸಾಗಾರನ
ಸಾಂಭ ಶಿವನೆ ಪಲ್ಲಂಗಧರನೆ । ತ್ರಿನೇತ್ರ ಉಳ್ಳವನೆ
ತ್ರಿಪುರ ಸಂಹಾರನೆ । ಗಜ ಚರ್ಮಾಂಬರ ।

ಕಪ್ಪು ಕೊರಳನೆ ನಂದ ಧೀರನೆ ಚಂದ್ರಶೇಖರನೆ
ಗಂಗಾಧರನೆ ಗಿರಿಜ ವಲ್ಲಭನೆ ಪರಮ ಮನ
ಧನನ ಧರಣಿಪಾಲಿಪನೆ ಕರುಣ ಸಾಗರನೆ
ಶ್ರೀಶೈಲ ಮೇಲ ಮಹಾ ಪರವುತ ಮಲ್ಲಯ್ಯನ
ಕಂಡಿರಿ ವರುಷಕೆ ಬರುವ ಸಂಕರಾತುರಿ ॥ ಚೌಕ ೩ ॥

ಅರುಹದಿಂದ ಶ್ರೀ ಗುರುವಿನ ಧ್ಯಾನಕ ಸಿದ್ಧರಾಮ
ಬಳಲುತ ಪರವುತವಾನೆಲ್ಲ ಹುಡುಕುತ

ಬ್ಯಾಸಗಿ ದಿವಸ ಫಾಲ್ಗುಣ ಮಾಸ ಭೂಮಿ ಕಾವು ಏರುತ
ಪಾದಾ ಸುಟ್ಟು ಚರ್ಮ ಉಚ್ಚುತ ।
ಫರಸಿ ಜನರು ಶಿಶುವಿನ ಕಂಡು ಶೋಕ ಮಾಡಿ ಕೇಳುತ
ಬಾಲಾ ಬ್ರಮೆಗೊಂಡು ನೋಡುತ
ಸಣ್ಣ ಕಂದ ಸಿದ್ಧರಾಮನ ಪಾದಕ ವಂದನೆ ಕೇಳುತ ।

ಪರವುತ ಗಿರಿಯನೆಲ್ಲ ಹುಡುಕುತ । ಪರಸಿ ಜನರು ಎಲ್ಲ ಕೇಳುತ
ಅವರ ಸಂಗತಿ ಹಿಡಿದು ಹೋಗುತ । ಕಡೆಯ ಬಾಗಿಲೆಲ್ಲಾ ಕಾಣುತ
ಕರವೀರಭದ್ರಗ ಶಿರವು ಬಾಗುತ । ಪರವುತ ಗಿರಿಯ ಮೇಲೆ ಏರುತ
ಪಂಚ ಪಲ್ಲಾದಾರಿ ಹಿಡಿಯುತ । ಅಡಕೇಶ್ವರಗ ಶರಣು ಮಾಡುತ
ಶಿಖರೇಶ್ವರಗ ಹರಕಿ ಬೇಡುತ । ಮುಕ್ಕಣ್ಣ ಬೃಂಗೇಶ್ವರಗ ನೋಡುತ
ಗುಡಿಯೊಳಗೆ ಮಹಾದೇವಗೆ ಹುಡುಕುತ ।

ಕಲ್ಲ ಶಿಲಾಯಿ ಇಲ್ಲೇನೆಂದಾ । ಬೆನ್ನಿಲೆ ಭೌರಮ್ಮನಮನ ಒಲಿಸಿದ್ದಾ
ಮುನ್ನೂರ ಅರವತ್ತು ಮಂಟಪ ಹುಡುಕಿದಾ
ಪಾತಾಳ ಗಂಗಿ ಸ್ನಾನ ಮಾಡಿದಾ ಜ್ಯೋತಿರ್ಲಿಂಗನ ಪಾದವ ಹಿಡಿದಾ
ಭೀಮನಕೊಳ್ಳಿಗ ಸಾಗಿ ಬಂದನು ಮಲ್ಲಯ್ಯ ಮಲ್ಲಯ್ಯ ಅಂತ ಕೂಗಿದಾ
ದುಃಖ ಮಾಡಿ ನೀರ ಕಣ್ಣಲಿ ತಂದಾ ।

ನೈನಗುಂಡ ಕ್ರೂರ ಇಟ್ಟಿದಾ ತನ್ನ ಜೀವ ತಾ ತ್ಯಾಗ ಮಾಡಿದಾ
ತಡವಾಯಿತೆಂದು ಕಮರಿ ಹಾರಿದ ।
ಆ ಕ್ಷಣ ಬಂದು ನಿಜ ಶರಣೆಂದು ಕೈ ಹಿಡಿದು ಎತ್ತಿ ಮುದ್ದನಾಡಿದಾ ।
ಸಿದ್ಧರಾಮ ನಿನ್ನ ಧೃಡ ಎಂಥದೋ
ಶಿವ ತನ್ನ ನಿಜರೂಪ ತೋರಿದಾ
ವರುಷಕೆ ಬರುವ ಸಂಕರಾತುರಿ ॥ ಚೌಕ ೪ ॥

ಉರಗ ಭೂಷಣ ತೊಡೆಯಲಿ ಪಾರ್ವತಿ
ಜಡೆಯಲಿ ಗಂಗೆಯನ್ನಿಟ್ಟಿದಾ ಕೊರಳಲಿ ರುಂಡಮಾಲೆ ಧರಿಸಿದಾ ।
ಕಾವಿ ಕಾಂತಾರ ಹುಲಿಯ ಚರ್ಮವ ಹೊತ್ತು ಆನೆದೊಗಲ ಉಟ್ಟಿದಾ
ರವಿ ಕೋಟಿ ತೇಜರೂಪ ತಾಳಿದಾ
ಪಂಚಮುಖ ದಶಭುಜ ಸರ್ವಾಂಗಕ್ಕೆ ಭಸ್ಮಧಾರಣ ಮಾಡಿದಾ
ಶಂಖಚಕ್ರ ತ್ರಿಶೂಲ ಬಿಳಿಯ ನಂದಿಗೇರಿದಾ ।

ಭಕ್ತರಿಗೆ ಇಂಥ ರೂಪ ತೋರಿದಾ । ಸಿದ್ಧರಾಮ ಕಣ್ಣೀಲಿ ಕಂಡಿದಾ
ಸಾಂಭನ ಪಾದಕ್ಕೆ ಹೋಗಿ ಎರಗಿದಾ
ಮರುಳಾಗಿ ಅವನಿಗೆ ಪ್ರಸನ್ನಾದಾ

ಬೇಡಿದ ವರವ ಕೊಡುತೀನಿ ಹಿಡಿಯೆಂದಾ
ಕರೆದಲ್ಲಿ ಬರುತೀನಿ ನಡಿ ಸಾಗಂದ
ಬರುವ ದಿನ ನೇಮ ಹೇಳದಾ ಆ ಕ್ಷಣಕೆ ಬಯಲಾಗ ಬಯಲಾದಾ ।

ಸಿದ್ಧರಾಮನು ಸಂತೋಷವಾದನು
ಸೊನ್ನಲಪುರಕೆ ಸಾಗಿ ಬಂದನು ।
ಮಲ್ಲಯ್ಯ ಬರುವ ದಿನಮಾನ ನೋಡಿ ಸರ್ವ ಜನರಿಗೆ ಹೇಳ್ಯಾನ
ಕೂಗ್ಯಾಡಿ ಗುಡಿಯ ಗುಂಡಾರವ ಹಸನ ಮಾಡಿ ।
ಕಾಮ ಕ್ರೋಧ ಸದ್ಗುಣಾ ಈಡಾಡಿ ಅಷ್ಟಮದ
ಸುಟ್ಟು ಭಸ್ಮವ ಮಾಡಿ ಹೋಮವ ಇಟ್ಟು ನೇಮವ
ಮಾಡಿ ಸಾವಿರ ಲಿಂಗನ ಸ್ಥಾಪನೆ ಮಾಡಿ
ನಿತ್ಯ ಮೂರು ವೇಳೆ ಕೈಲಾಸಕೆ ಹೋಗಿ ।

ಭಕ್ತವಚನ ಬಿರುದು ಕೊಂಡಾಡಿ ನೋಡಬೇಕು ಇವರ
ಪೂರಕ ಕಲ್ಯಾಣ ಚೆನ್ನಬಸವೇಶ್ವರನ ನಿಷ್ಠಾವರ್ಣ
ಮಾತು ಕೇಳಿರಿ ಲಿಂಗ ಧಾರಣ ಗಂಗಿ ಸ್ಥಳದಲ್ಲಿ
ಲಿಂಗ ಐಕ್ಯವಾದರು ಶಿವಭಕ್ತರು ಕೇಳೀರಿ
ವರುಷಕೆ ಬರುವ ಸಂಕರಾತುರಿ ॥ ಚೌಕ ೫ ॥

ಕ್ರೂರ ಇಟ್ಟು ಮರೆಯಾಗಿ ಹೋದರು ಬಯಲೀಗಿ
ಬಯಲಾಗಿತ್ತು ಕಾಲಾಗ್ನಿ ಸೂಚನೆಲ್ಲ ತಿಳಿದಿತು
ಮರ್ತ್ಯದೊಳಗೆ ದೊಡ್ಡ ಕ್ಷೇತ್ರಾ ಸೊನ್ನಲಾಪೂರೆನಿಸಿತು
ಪೃಥ್ವಿಮ್ಯಾಲ ಅರ್ಧಪರವೂತ
ಸಂಕರಾತುರಿ ನೇಮ ಚಾತುರಿ ಹೋಮ ನಲಿಯ
ದಾಡುತ ನಾಲ್ಕು ದೇಶದ ಮಂದಿ ಬರುವುತ । ದೇಸಾಯಿ
ದೇಶಮುಖ ಮಹಾಜನಶೆಟ್ಟಿ ಮಹಾದೈವ
ಕೂಡುತ । ಬರತಾವ ನಂದಿಕೋಲ ಮರೆಸುತ
ಕರಡಿ ಸಂಬಾಳ ಬಾಜ ಬಜಂತ್ರಿ ಊದುತ ।

ಬರುವನೇ ಫೇರಿ ಬರತಾವ ನಗಾರಿ ನೌಬತ್ತು
ತಾಮಟಗಿತಿ । ಬೆಳ್ಳಿ ಪಲ್ಲಕ್ಕಿ ಆಫ್ತಾಗಿರಿ ಛತ್ರಿ ಚಾಮರ
ಹಾಕುತ ಆಡುವ ಪುರವಂತರು ಹಾರಿ ಕುಣಿವುತ
ಚಲುವಾಗಿ ಮುಂದ ಇರುವುತ ಸಾರಿ ಡೆಂಕೆಣಿ ನಿಶಾನಿ
ಹಚ್ಚುತ ಕುಲ ಹದಿನೆಂಟು ಜನ ಜಾತುರಿ ಹೋಮಕ
ಬರತಾರಿನ್ನ ಐಸಿರಿ । ಕಾಯಿ ಕರ್ಪೂರ ಊದ

ಸಕ್ಕರಿ ಬಾಜಿ ಮಾಡಿ ತರತಾರ ನಾನಾ ಪರಿ ।
ಸಂಪಿಗಿ ಗೋದಿ ಹೇಳ್ಯಾರ ಏನ ಸಾರಿ ಹೋಮಕ
ಬೆಂಕಿ ಹಚ್ಚರಿ ಬೇಗಮಾಡಿ ।

ಸುತ್ತ ಕಟ್ಯಾರ ತಳಿರು ತೋರಣ ನಿಂಬಿ ಕಾಯಿ ಟೆಂಗ ಬಾಳಿಹಣ್ಣು
ಖಾರಿಕ ಕೊಬ್ಬರಿ ಅಡಕಿ ಅರಷಿಣ । ಹೋಮದೊಳಗ
ಈಡ್ಯಾಡುವರಣ್ಣ । ಶಿವನ ಸದರ ತಗಲುಪ ಅಣ್ಣ
ಸ್ವರ್ಗ ಲೋಕವು ನಡುಗಿತಣ್ಣ ಭುವನದೊಳು
ಸಾರಿ ಹೇಳುವರಣ್ಣ ಪೊಡವಿಯೋಳು ಒಳಸಂಗ
ಪಟ್ಟಣ ಒಡೆಯ ಶಂಕರಲಿಂಗನ ಧ್ಯಾನವ ಮಾಡಿ
ಮಹಾ ಪ್ರಸನ್ನವಾದ ಅಕ್ಷರ ಶುದ್ಧ ಮನದಲ್ಲಿ ತಿಳಿದು
ಬಂದು ಸಕಲ ಜನಕೆ ತೋರಿದಾ
ಕಟ್ಟಿಮನಿ ಕೈವಸ್ತ್ರ ದೈವ ತೊದಲು ನುಡಿಗಳು
ಕೇಳಿರಿ ವರುಷಕೆ ಬರುವ ಸಂಕುರಾತುರಿ ॥ ಚೌಕ ೬ ॥

–ಶ್ರೀಮತಿ ಪಾರ್ವತಿ ಜೇಮಶೆಟ್ಟಿ
ಹಾಗೂ ಅನ್ನಪೂರ್ಣ ದೇವಣಿ, ಸರ್ವಮಂಗಳಾ ಜೋಗೂರ

***

ಸಿದ್ಧರಾಮನ ಜೀವನ ಚರಿತ್ರೆ

ಎಲ್ಲ ನಗರದಲ್ಲಿ ಬಲ್ಲಿದ ಅನಿಸಿತು ಸೊಲ್ಲಾಪುರ ಗ್ರಾಮ
ಮಲ್ಲೇಶನ ಅವತಾರ ತಾಳಿ ಬಂದಾನ ಸಿದ್ಧರಾಮ ॥ ಪ ॥

ತಂದಿ – ತಾಯಿಗಿ ಒಂದಿನ ಮಾತಿಲ್ಲ ಕಂದ ಸಿದ್ಧರಾಮ
ನಂದಿ ವಾಹನನ ದೇವಾಲಯಕ್ಕೆ ಹೋಗುವದೆ ನಿತ್ಯನೇಮ
ಸುಂದರಾಂಗ ಚಂದ್ರಧರನ ಕೀರ್ತನದ ಮ್ಯಾಲೆ ಪ್ರೇಮ
ಒಂದಿನ ತಪ್ಪದೆ ವಂದಿಸಿ ಲಿಂಗಕ ತೀರಿಸಿ ಮನಕಾಮ ॥ ೧ ॥

ಆರನೆಯ ವರ್ಷಕ್ಕೆ ಗೋರಕ್ಷಣೆಗಾಗಿ ಬಿಡಿಸಿದರು ಗ್ರಾಮ
ದಾರಿ ನಡಿಯುವಾಗ ನೆರಳು ಬೀಳುತಿದ್ದಿಲ್ಲ ಸೂರ್ಯನಕಾಯ
ಊರ ದನ ತನ್ನ ಹೊಲದೊಳು ಹೊಕ್ಕರೆ ಕೂಡುತಿದ್ದ ಸುಮ್ಮ
ಪೂರಾ ಬೆಳಿ ಮೈದು ಊರದನ ಸೊಕ್ಕಿ ಆಗ್ಯಾವ ಸಾಮದಾಮ ॥ ೨ ॥

ಬಾಲ ಲೀಲೆಯನು ಪರೀಕ್ಷೆಗಾಗಿ ಶ್ರೀಶೈಲ ಪರಬ್ರಹ್ಮ
ಕಾಲೋಳು ಕಟ್ಟಿಗೆ ಆವುಗೆ ಹಾಕಿ ರೂಪತಾಳಿದ ಜಂಗಮ
ಶೀಲ ಸುಗುಣನ ಹೊಲದೊಳು ಮಲ್ಲಯ್ಯ ಇಳದಾನ ಸ್ವಯಮ
ಶೂಲಪಾಣಿ ಚಕ್ರೇಶ್ವರನೆಂದು ಕಾಲಿಗೆರಗಿ ಸಿದ್ಧರಾಮ ॥ ೩ ॥

ಶುದ್ಧ ಮನಸಿನವ ಸಿದ್ಧರಾಮ ಸ್ವಾಮಿ ಹೆಸರ ಕೇಳಿಧರ್ಮ
ಮುದ್ದು ಮಗು ನಿನ್ನ ಮಲ್ಲಯ್ಯ ಖಿದ್ದಾನೆ ತೋರಿಸೋ ತಮ್ಮ
ಖಿದ್ದ ನಿನ್ನ ಹೊಲದೊಳಗಿನ ಹಸಿ ಸೀತನಿ ಮ್ಯಾಲೆ ಪ್ರೇಮ
ಬುದ್ಧಿವಂತ ತಡ ಮಾಡದೆ ಸುಟ್ಟು ತಿನಿಸೊ ಎನಗ ನಿಜಧಾಮ ॥ ೪ ॥

ಚಿಕ್ಕ ಹುಡುಗ ಅಕ್ಕರದಿ ಎದ್ದು ಲಕ್ಕಿ ಕಟಗಿ ತಂದ ಶ್ಯಾಮ
ಬೆಂಕಿ ಇಲ್ಲದೆ ಉರಿಹಚ್ಚಿದರು ಎಂಥ ನಿಷ್ಠೆ ನೇಮ
ಹೊಕ್ಕು ಹೊಲದೊಳಗಿನ ನವಣಿತೆನಿ ಕಡದು ತಂದ ಸಿದ್ಧರಾಮ
ಪಕ್ಕಾ ಸುಟ್ಟು ಮುಂದಿಟ್ಟು ಸ್ವಾಮಿ ತಿನಿರೆಂತಾನ ಪರಮಾತ್ಮ ॥ ೫ ॥

ಬಿಸಿ ಸೀತನಿ ತಿಂದು ಗಸಾನೆ ಎದ್ದು ನೆಲಕುರಿಳಿದ ಜಂಗಮ
ಹಸಿ ಬಿಸಿ ಸೀತನಿ ಹೊಟ್ಟ್ಯಾಗ ಬೆಂಕಿ ಚೆಲ್ಲಿದಿ ನೀಚಾತ್ಮ
ಮೊಸರ ಬೋನಾ ತಂದು ಉಣಿಸಿದರೆ ನಾ ಉಳಿಯುವೇನು ತಮ್ಮಾ
ತುಸು ತಡ ಮಾಡಿದರೆ ಸತ್ತು ಹೋಗತಿನಿ ತಿಳಕೊ ಕಾಯಮ ॥ ೬ ॥

ದೋಷ ಬರುವದೆಂದು ಧಾವಿಸಿ ಮೆನೆಗ್ಹೋಡಿ ಹೋದನು ಮುದ್ದಾಮ
ಈಶ ಸಾಯತಾನ ಮೊಸರ ಬೋನ ಬೇಗನೆ ಕೊಡು ತಾಯಮ್ಮ
ಕೂಸ ಇಂದು ಮಾತಾಡಿದನೆಂದು ಕಟ್ಟಿದಳು ಕಾಮಕಾಮ
ದೋಷರಹಿತ ಹೊಲಕ ಹೋಗದರೋಳು ಮಾಯಾಗಿದ್ದ ಪರಬ್ರಹ್ಮ ॥೭ ॥

ಹೊಲದೊಳು ಬಂದು ನೋಡುತನ ಅಲ್ಲಿದ್ದಿದಿಲ್ಲ ಜಂಗಮ
ಮಲ್ಲಯ್ಯ ಎಲ್ಲಿ ಹೋದ ಶಿವನೆ ನನ್ನದೆಂಥ ಪಾಪಕರ್ಮ
ಹೋಲಾ ಎಲ್ಲ ಹುಡುಕಾಡಿ ನೋಡಿದರ ಸಿಗಲಿಲ್ಲ ಸಂಗಮ
ಕಲ್ಲ ಮುಳ್ಳಿನ ಕಬರಿಲ್ಲದೆ ಹುಡುಕುತ ನಡದ ಸಿದ್ಧರಾಮ ॥ ೮ ॥

ಮುಂದೆ ಬಂದು ಹಾದಿಲಿ ಜನ ನುಡಿಯುತ ಮಲ್ಲಯ್ಯನ ನಾಮ
ಕಂದ ಓಡಿ ಹೋಗಿ ಮುಂದನಿಂತು ಎಲ್ಲಿಗಿ ಹೋಗತೀರೆಂದ ಸೋಮ
ಮಂದಿ ಹೇಳತಾರ ಮಲ್ಲಯ್ಯನ ಜಾತ್ರೆಗೆ ಹೋಗುತೇವು ತಮ್ಮಾ
ಬಂದರೆ ನಿನಗನು ಕರದೊಯಿದು ತೋರಿಸುವೆವು ಸ್ವಯಮ ॥ ೯ ॥

ಮೊಸರ ಬೋನ ಕೈಯಲ್ಲಿ ಹಿಡಿದು ನುಡಿಯುತ್ತ ಮಲ್ಲಯ್ಯನ ನಾಮ
ಹಸುಮಗ ಹಾದಿ ನಡದರ ಹೆಜ್ಜಿ ಬಿದ್ದಿಲ ಒಮ್ಮೊಮ್ಮ
ಕೂಸ ಶ್ರೀಶೈಲಕ ನಡಯುತ ಹೋಗ್ಯಾನ ಎಂಥ ನಿಗಮ
ಧ್ಯಾನಿಸಿ ಲಿಂಗ ಪೀಠ ನೋಡಿ ಮಲ್ಲಯ್ಯ ಇವ ಅಲ್ಲಂದ ಸತ್ಯಧರ್ಮ॥೧೦॥

ಸಾಂಬ ಎಲ್ಲಿ ಸಿಕ್ಕಾನಂದು ಅಳುತ ನಡದ ಸಿದ್ಧರಾಮ
ಕಮರಿ ವನದ ಗಿರಿಯೇರಿ ಅಂತಾನ ಎಲ್ಲಿದಿ ಬಾ ಪರಮಾತ್ಮ
ಸಾಂಬ ಶಿವನೆ ಪ್ರತಿಬಿಂಬ ತೋರಿದರೆ ಉಳಿಯುವೇನು ನಾನ
ಹಿಂಬಾಲಿಸದಿದ್ದರೆ ಗಿರಿಯ ಹಾರಿ ತೇಜಿಸುವೆನು ಜೀವಾತ್ಮ ॥ ೧೧ ॥

ಪಾಪಿ ಶರೀರಕ ತಾಪ ಪಡದೆ ಹ್ಯಾಂಗ ಸಿಗುವನು ಪರಮಾತ್ಮ
ಕೋಪತಾಳಿ ಭೂಪಾಲಕ ಬಾಯಂದು ಹಾರಿ ಸಿದ್ಧರಾಮ
ರೂಪತಾಳಿ ಅಂತರಲೆ ಕಂದ ಎತ್ತಿಕೊಂಡ ಓಂ ಸೋಮ
ಭಾಪು ಭಕ್ತಿವಾನ ಏನುವರವುಬೇಕು ಬೇಡೊ ಸಿದ್ಧರಾಮ ॥ ೧೨ ॥

ಸತ್ಯ ಸುಂದರನೆ ಊಟಮಾಡಿ ತೀರಿಸು ನನ್ನ ನೇಮ
ಸುತನ ಕರೆದುಕೊಂಡು ಮೊಸರ ಬೋನ ಊಟ ಮಾಡ್ಯಾರ ಸಪ್ರೇಮ
ಸುತ್ತ ಕೆರಿ ನಡು ಮಧ್ಯ ಗುಡಿ ಆಗುವದು ಸಿದ್ಧರಾಮ
ಸತ್ಯ ವಚನವಿದು ಮಿಥ್ಯ ಇಲ್ಲ ನೀ ಆಗುವಿ ಪರಬ್ರಹ್ಮ ॥ ೧೩ ॥

ಮಲ್ಲೇಶನ ಆಶಿರ್ವಾದ ಪಡಕೊಂಡು ಸೇರಿ ತನ್ನ ಗ್ರಾಮ
ಬಿಲ್ಲೇಶ ಬೊಮ್ಮಯ್ಯಗ ಯಮಗುಂಡ ದಾಟಿಸಿ ಸ್ವಾಯಮ
ಇಲ್ಲದ ಪವಾಡ ಅಲ್ಲಿ ಮುಗಿಸಿ ನಿಲ್ಲಿಸಿದ ಬೌದ್ಧಧರ್ಮ
ಮಲ್ಲೇಶನೊಳು ಐಕ್ಯ ಆಗಿದರು ಕಲಿಯುಗದ ಮಹತ್ಮ ॥ ೧೪ ॥

ದರ ವರ್ಷಿಗೆ ಮಕರ ಸಂಕ್ರಾಂತಿಯ ದಿವಸ ಅವರ ಹೋಮ
ದೂರ ದೂರದಿಂದ ಜನರು ಬಂದು ಉಪವಾಸದಿ ನೇಮ
ಕಮಲ ನಗರದ ಹರ ಭಕ್ತರೆಲ್ಲ ನುಡಿದು ಆತನ ನಾಮ
ಘೋರ ಸಂಸಾರದೊಳು ಪಾರಗಾಣಿಸೊ ಗುರುಸಿದ್ಧರಾಮ ॥ ೧೫ ॥

– ಶಿವರುದ್ರಪ್ಪ ಶರಣಪ್ಪ ಬಿರಾದಾರ

***

ಸಿದ್ಧರಾಮನ ಹಾಡು

ಮಡ್ಡಿ ಮೇಲೆ ಸಿದ್ಧರಾಮ ದನಕಾಯಲಾಕ ಹೋಗ್ಯಾರ
ಸಿದ್ಧರಾಮನ ಭಾವಕ ಮಲ್ಲಿಕಾರ್ಜುನ ಬಂದಾ ॥ ಪ ॥

ಓಡೋಡಿ ಸಿದ್ಧರಾಮ ಮನಿಗಾದರ ಹೋದಾನ
ದಟ್ಟಿಯ ಹರದು ಮೊಸರಬುತ್ತಿ ಕಟ್ಟಂದಾನ ॥ ೧ ॥

ದಟ್ಟಿ ಹರಿದು ಯಾತಕಪ್ಪ ಮೊಸರ ಬುತ್ತಿ ಯಾತಕಪ್ಪ
ಅಡಿಗಿ ಮಾಡಿನಿ ಇಲ್ಲೆ ಉಂಡೋಗ ಸಿದ್ಧರಾಮ ॥ ೨ ॥

ಅಡಿಗಿ ಮಾಡಿದರ ಜಲ್ದಿ ಕಟ್ಟಿ ಕೊಡವ್ವ
ಮಲ್ಲಿಕಾರ್ಜುನಗ ಉಣಸಿ ಬರತೀನವ್ವ ॥ ೩ ॥

ಮೊಸರ ಬುತ್ತಿ ತೊಗಂಡಾನ ಮಡ್ಡಿಮ್ಯಾಲ ಹೋಯ್ದಾನ
ಸಿದ್ಧರಾಮನ ಭಾವಕ ಮಲ್ಲಿಕಾರ್ಜುನ ಗೈಪಾಗ್ಯಾನ ॥ ೪ ॥

ನೀರು ತರುವ ಅವ್ವರೇರು ನೀರುತರುವ ಅಕ್ಕದೇರು
ಮಲ್ಲಿಕಾರ್ಜುನ ನೋಡಿರೇವ್ವ ಜಗದೊಳು ॥ ೫ ॥

ಸಣ್ಣವಿದ್ದ ಸಿದ್ಧರಾಮ ಕಾಲ ಭಾಳ ಸುಡತಾವಂದ
ಸುಟ್ಟಿದ್ದು ಚಿಂತಿಲ್ಲ ಹರದುದ್ದು ನೋಡವಲ್ಲ ॥ ೬ ॥

ದನಕಾಯುವ ಅಣ್ಣದೇರು ಕುರಿಕಾಯುವ ತಮ್ಮದೇರು
ಮಲ್ಲಿಕಾರ್ಜುನ ನೋಡಿರೇನಪ್ಪ ಜಗದೊಳು ॥ ೭ ॥

ಸಣ್ಣವಿದ್ದ ಸಿದ್ಧರಾಮ ಕಾಲ ಭಾಳ ಸುಡುತಾವಪ್ಪ
ಕಾಲ ಸುಟ್ಟದ್ದು ಚಿಂತೆಯಿಲ್ಲ ಹರಣ ಹೋದರು ಪರವೆಯಿಲ್ಲ ॥ ೮ ॥

ಮಲ್ಲಿಕಾರ್ಜುನ ಸಿಗುವ ತನಕ ನನ್ನ ಜೀವಸಮದಾನಿಲ್ಲ
ತಿರುಗೊಂತ ನಡದಾನ ಈ ಜಗದ ತುಂಬಾ ॥ ೯ ॥

– ಶ್ರೀಮತಿ ದೇವಮ್ಮ ಕಲಬುರ್ಗಿ
– ಶ್ರೀಮತಿ ಮಹಾದೇವಿ ಹಿರೇಮಠ
– ಶ್ರೀಮತಿ ಜಗದೇವಿ ತೋಳೆ
– ಶ್ರೀ ಪ್ರಭು ಮೈಲಾರ

***

ಸಿದ್ಧರಾಮನ ಹಾಡು

ಒಂದು ಮಾತ ಹೇಳ್ತಿನಿ ಕೇಳ್ರಿ ಸಿದ್ಧರಾಮನ ಕತಿ ಒಂದು
ಸಿದ್ಧರಾಮನ ಕತಿ ಒಂದು । ಸೋಬಾನ ॥ ಪ ॥

ಸಿದ್ಧರಾಮ ಹೊಲದಾಗಿದ್ದ ಸೀತನಿ ಒಲಿ ಹೊಡಿತಿದ್ದ
ಶಿವಶಿವನೆಂದು ನುಡಿತಿದ್ದ । ಸೋಬಾನ ॥ ೧ ॥

ಏ ತಮ್ಮ ಸಿದ್ಧರಾಮ ಹಸಿವ ಆಗ್ಯಾವ ಓಮ
ಉಣುಸೊ ಈಗ ನಮ್ಮಗೊಮ್ಮ । ಸೋಬಾನ ॥ ೨ ॥

ಏ ತಂದಿ ಹಡದಪ್ಪ ಸೊಲುಪ ನಿಂದರವಪ್ಪ
ಸೀತನಿ ಸುಡತೀನಪ್ಪ ರೂಪ । ಸೋಬಾನ ॥ ೩ ॥

ಹೊಟ್ಟಿತುಂಬ ಸೀತನಿ ತಿಂದು ಮನಸಿಗೆ ಆನಂದ
ಸಿದ್ಧರಾಮನ ಭಕ್ತಿ ಹವದೆಂದು । ಸೋಬಾನ ॥ ೪ ॥

ಏತಮ್ಮ ಸಿದ್ಧರಾಮ ಹೊಟ್ಯಾಗಾಗ್ಯಾವ ಓಮ
ಸಾಯ್ತಿನಿ ನಾನು ಇರುವೊದಿಲ್ಲ । ಸೋಬಾನ ॥ ೫ ॥

ಅಲ್ಲಿಂದ ಸಿದ್ಧರಾಮ ಓಡಿ ಮನಿಗೆ ಬಂದು
ಮಸರ ಬುತ್ತಿ ಕಟ್ಟಿಕೊಂಡು । ಸೋಬಾನ ॥ ೬ ॥

ಮಸರ ಬುತ್ತಿ ಕಟ್ಟಿಕೊಂಡು ನೆತ್ತಿಮ್ಯಾಲ ಇಟ್ಟುಕೊಂಡು
ಮಲ್ಲಯ್ಯನಂದು ಝೋ ಹೊಡದು । ಸೋಬಾನ ॥ ೭ ॥

ಸಿದ್ಧರಾಮ ಬರುವುತನ ಮಲ್ಲಯ್ಯ ಮಾಯ ಆದ
ಸಿದ್ಧರಾಮ ಗಾಬುರ್ಯಾದ । ಸೋಬಾನ ॥ ೮ ॥

ಕೆಲವು ಜನರು ಓಡಿ ಬಂದು ಮಲ್ಲಯ್ಯ ಇಲ್ಲಿ ಮನಗ್ಯಾರ
ಮಲ್ಲಯ್ಯ ಎಲ್ಲಿ ಮನಗ್ಯಾರ । ಸೋಬಾನ ॥ ೯ ॥

ಇವರ್‍ಯಾಕ ಮಲ್ಲಯ್ಯ ಹಾರ ಕಲ್ಲಿಂದಾವ ಛಾಯ
ಕಲ್ಲಿಂದಾವ ಇವ ಛಾಯ । ಸೋಬಾನ ॥ ೧೦ ॥

ಸಿಟ್ಟಿಗೇರಿ ಸಿದ್ಧರಾಮ ಕಮರಿಮಟ ಏರಿ ನಿಂತ

ಜಿಗದ ಜೀವನ ಖಬರಿಲ್ಲದ । ಸೋಬಾನ ॥ ೧೧ ॥

ಸಿದ್ಧರಾಮ ಜಿಗುವತಾನ ಅಂತರಂಗ ಬಂದಿಳುದಾನ
ಏನು ಬೇಡತಿ ಬೇಡು ತಮ್ಮ । ಸೋಬಾನ ॥ ೧೨ ॥

ಏನು ನನಗ ಕಡಿಮಿಲ್ಲ ಎನುನನಗ ಬೇಕಾಗಿಲ್ಲ
ಬುತ್ತಿ ತಂದಿನುಣಬಾರೊ । ಸೋಬಾನ ॥ ೧೩ ॥

ಇಬ್ಬರು ಕೂಡ್ಯಾರ ಸಂವಚಿತ್ತ ಉಂಡಾರ
ಏಕೊಚಿತ್ತ ಮಾತಾಡ್ಯಾರ । ಸೋಬಾನ ॥ ೧೪ ॥

ಜಾತುರಿಗಿ ಜನನೆರಿಲಿ ರಾತುರಿಗಿ ಮದ್ದ ಸುಡಲಿ
ಕೇರಿ ಒಳಗ ನಿನ್ನ ಕೀರುತಿ ಮೆರಿಲಿ । ಸೋಬಾನ ॥ ೧೫ ॥

ಜಾತುರಿಗಿ ಜನನೆರಲಿ ರಾತುರಿಗಿ ಮದ್ದ ಸುಡಲೀ
ಮಲ್ಲಯಂದು ಝೋ ಹೊಡಿಲಿ । ಸೋಬಾನ ॥ ೧೬ ॥

***

ಸಿದ್ಧರಾಮನಾ ಕತೆಯೊಂದು

ಮಾತೊಂದು ಹೇಳತ್ತಿನಿ ಕೇಳರಿ ಮನಸ್ಸಿಗೆ ತಂದು
ಸಿದ್ಧರಾಮನಾ ಕತೆಯೊಂದು ಸೋಬಾನವೆ ॥ ೧ ॥

ಸಿದ್ಧರಾಮ ಹೊಲದಾಗಿದ್ದ ಸೀತನಿ ಒಲಿ ಹೊಡಿತಿದ್ದ
ಶಿವಶಿವಾಯೆಂದು ನುಡಿತಿದ್ದ ಸೋಬಾನವೆ ॥ ೨ ॥

ಶಿವನು ಶಿಖರವು ಬಿಟ್ಟು ಮಲ್ಲಯ್ಯ ಹೊಂಟಾನೆ
ಸಿದ್ಧರಾಮನ ಭಕುತಿ ನೋಡುವುದಕೆ ಸೋಬಾನವೆ ॥ ೩ ॥

ಏನೋ ತಮ್ಮ ಸಿದ್ಧರಾಮ ಹಸು ಭಾಳ ಆಗ್ಯಾವ ನಮಗ
ತಿನಸು ನನಗ ಇದು ಒಮ್ಮ ಸೋಬಾನವೆ ॥ ೪ ॥

ಬಾರೋ ನನ್ನ ಹಡದಪ್ಪ ಸೀತನಿ ಸುಡತಿನಿ ತಡಿರಪ್ಪ
ಸಿದ್ಧರಾಮ ತೆಗೆದ ಬಾಯಿ ಅಪರೂಪ ಸೋಬಾನವೆ ॥ ೫ ॥

ಸೀತನಿ ತಿಂದಾರ ಮನಸ್ಸಿಗಾಯಿತು ಆನಂದ

ಸಿದ್ಧರಾಮನ ಭಕುತಿ ಹೌದೆಂದು ಸೋಬಾನವೆ ॥ ೬ ॥

ಇನ್ನು ನೋಡಬೇಕ ಇವನ ಭಕುತಿ
ಮಾಡಬೇಕ ಇವನ ಮಸಲತಿ ಸೋಬಾನವೆ ॥ ೭ ॥

ಏನೋ ತಮ್ಮ ಸಿದ್ಧರಾಮ ಹೊಟ್ಟ್ಯಾಗ ಬಿದ್ದಾದ ಬೆಂಕಿಯಪ್ಪ
ಸಾಯತೀನಿ ತಮ್ಮ ಉಳಿಯಕಿಲ್ಲ ಸೋಬಾನವೆ ॥ ೮ ॥

ತಡಿಯೋ ಹಡದಪ್ಪ ಮನಿಗ್ಹೋಗಿ ಮುರಿದ ಹೆಪ್ಪ
ಬುತ್ತಿ ತರುತೀನಿ ತನುದಿಂದಾ ಸೋಬಾನವೆ ॥ ೯ ॥

ಸಿದ್ಧರಾಮ ಬುತ್ತಿ ರತೋಟಗೆ ಮಲ್ಲಯ್ಯ ಮಾಯಾದ
ಸಿದ್ಧರಾಮ ಗಾಬರ್‍ಯಾದ ಸೋಬಾನವೆ ॥ ೧೦ ॥

ಎಡಗೈ ಬುತ್ತಿ ಹಿಡಿದು ಮಲ್ಲಯ್ಯಂತ ನಾಮ ಪಿಡಿದು
ಶ್ರೀಶೈಲ ಶಿಖರ ಏರುತಾನೋ ಸೋಬಾನವೆ ॥ ೧೧ ॥

ಕೆಲವು ಜನರು ನಿಂತಾರಲ್ಲಿ ಹೋಗಿ ಕೇಳತಾನ ಅವರ ಬಲ್ಲಿ
ಮಲ್ಲಯ್ಯ ಎಲ್ಲಿ ಮಲಗ್ಯಾರೆ ಸೋಬಾನವೆ ॥ ೧೨ ॥

ಇವನೇ ನೋಡು ಮಲ್ಲಯ್ಯ ಪಾದಕ್ಕೊಂದು ನಿನ್ನ ಖಾಯಾ
ಪಾತಾಳ ಗಂಗ್ಯಾಗ ನೆನದಾರ ಸೋಬಾನವೆ ॥ ೧೩ ॥

ಇಂವ ಯಾಕಾದ ಮಲ್ಲಯ್ಯ ಕಲ್ಲಿಂದದ ಇದು ಖಾಯಾ
ಮಲ್ಲಯ್ಯಂತ ಮನುಷ್ಯ ಹರಾ ಸೋಬಾನವೆ ॥ ೧೪ ॥

ಸಿಟ್ಟಿಗೇರಿ ಸಿದ್ಧರಾಮ ಕಮರಿಮಠ ಏರಿದಾರ
ಜಿಗಿದ ಜೀವ ಖಬರಿಲ್ಲದೆ ಸೋಬಾನವೆ ॥ ೧೫ ॥

ಸಾಯಿತಾನೋ ಸಿದ್ಧರಾಮ ಅಂತಾನ ಮಲ್ಲಯ್ಯ
ಅಂತರಲೆ ಬಂದು ಹಿಡಿದಾ ಸೋಬಾನವೆ ॥ ೧೬ ॥

ಏನೋ ತಮ್ಮಾ ಸಿದ್ಧರಾಮ ಏನು ಬೇಡುತಿ ಬೇಡು
ಬೇಡಿದ್ದು ಕೊಡುವೆ ನಾನು ನಿಮ್ಮ ಸೋಬಾನವೆ ॥ ೧೭ ॥

ಬೇಡಲಿಕ್ಕೆ ನಾನು ಬಂದಿಲ್ಲ ನನಗೇನು ಕಡಿಮೆಯಿಲ್ಲ

ಬುತ್ತಿ ತಂದಿನೀ ಉಣಬಾರೋ ಸೋಬಾನವೆ ॥ ೧೮ ॥

ಸಿದ್ಧರಾಮ ಮಲ್ಲಯ್ಯ ಕೂಡಿ ಊಟ ಮಾಡ್ಯಾರ ಸಮಚಿತ್ತಲ್ಲಿ
ಆತ್ಮದ ಪ್ರೀತಿ ಪ್ರೇಮಲಿಂದ ಸೋಬಾನವೆ ॥ ೧೯ ॥

ಏನೋ ತಮ್ಮ ಸಿದ್ಧರಾಮ ನಾನು ಬರುತೀನಿ ನಿನಗೂಡ
ಜಾಗಕೊಡು ನನಗ ಖಾಯಮ ಸೋಬಾನವೆ ॥ ೨೦ ॥

ನಿನ್ನ ಗುಡಿ ಊರಾಗಿರಲಿ ನನ್ನ ಗುಡಿ ಹೊರಗಿರಲಿ
ನಿನ್ನ ಪೂಜಾ ನೀರ ನನಗ ಬರಲಿ ಸೋಬಾನವೆ ॥ ೨೧ ॥

ಜಾತ್ರಿಗಿ ಜನಬರಲಿ ರಾತ್ರಿಗಿ ಮದ್ದ ಸುಡಲಿ
ನಾಡಾಗ ನಿನ್ನ ಕೀರ್ತಿ ಮರೆಯಲಿ ಸೋಬಾನವೆ ॥ ೨೨ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಸಿದ್ಧರಾಮನ ಹಾಡು

ಸುದ್ದ ಮುದ್ದಲ ಗೌಡ ಇದ್ದರು ಸೊನ್ನಲಪುರ
ರೇವಣಸಿದ್ದ ವರವಾಗಿ ॥ ಜೋ ಜೋ ॥
ರೇವಣಸಿದ್ದ ವರವಾಗಿ ಸುಗ್ಗಲದೇವಿ
ಅವರವತ್ತು ವರುಷಕ್ಕ ಹಡದಾಳ ॥ ಜೋ ಜೋ ॥ ೧ ॥

ಮಾಸಿಲ್ಲ ಮೈಲಿಲ್ಲ ಹೇಸಿಕಿ ಮೊದಲಿಲ್ಲ
ಕೂಸಿನ ಹೆಸರೊಂದೇನಿಡಬೇಕು ॥ ಜೋ ಜೋ ॥
ಹರ ಸಿದ್ದರಾಮಯ್ಯ ಗುರು ಸಿದ್ದರಾಮಯ್ಯ
ಸಿದ್ದರಾಮಂತ ಹೆಸರಿಟ್ಟ ॥ ಜೋ ಜೋ ॥ ೨ ॥

ಸಿದ್ದರಾಮನಂತ ಹೆಸರಿಟ್ಟು ಮಾವುಲಿ ಕೈಯಲ್ಲಿ
ತೊಟ್ಟಿಲ ಮಾಡಿ ಮಲಗೂಸೆ ॥ ಜೋ ಜೋ ॥
ಕೈಯಲ್ಲಿ ತೊಟ್ಟಿಲ ಮಾಡಿ ಮಲಗೂಸಿ ಮಾವುಲಿ
ಪರಸಿದ್ದನಾಗೆಂದು ಹರಸ್ಯಾಳ ॥ ಜೋ ಜೋ ॥ ೩ ॥

ಪರಸಿದ್ದನಾದ ಹರ ಸಿದ್ದರಾಮಾ

ಪರಬುದ್ಧನಾದ ಗುರು ಸಿದ್ಧರಾಮಾ ॥ ಜೋ ಜೋ
ನವಣಿಯ ಹೊಲದಾಗ ಕರವು ಕಾಯುತಿದ್ದ
ಗುರುವು ಮಲ್ಲಯ್ಯ ಶಿವ ಬಂದ ॥ ಜೋ ಜೋ ॥ ೪ ॥

ಗುರುವು ಮಲ್ಲಯ್ಯ ಶಿವ ಬಂದು ಕೇಳ್ಯಾನ
ರೆಬ್ಬುಳಗಿ ಶಿವದಾನ ತನಗಂದ ॥ ಜೋ ಜೋ ॥
ರೆಬ್ಬುಳಗಿ ಶಿವದಾನ ಉಬ್ಬಲೆ ತಕ್ಕೊಂಡು
ಹೋದರು ಸಿದ್ಧರಾಮ ಗುರು ಬೆಟ್ಟಿಗೆ ॥ ಜೋ ಜೋ ॥ ೫ ॥

ಗುರುವು ಮಲ್ಲಯ್ಯ ಕಾಣದಾದ
ಹರನೆ ಮಲ್ಲಯ್ಯ ಮಾಯಾವಾದ ॥ ಜೋ ಜೋ ॥
ಗುರುವಿನ ಹುಡುಕುತ ಹವ್ಹಾರಿ ತಾ ಹೊಂಟ
ಗುರು ತನಗೆಲ್ಲ ದೊರತಾನಂದ ॥ ಜೋ ಜೋ ॥ ೬ ॥

ಗುರುವು ತನಗೆಲ್ಲಿ ದೊರಿತಾನ ಗುರುವಿನ
ಪಾದ ತನಗೆಲ್ಲಿ ಸಿಗತಾವಂದ ॥ ಜೋ ಜೋ ॥
ಅಡೆಕೇಶ್ವರಕ್ಹೋಗಿ ಸಿಕರೇಸೂರಕ್ಹೋಗಿ
ಮಲ್ಲಯ್ಯ ಮಲ್ಲಯ್ಯನಂತ ಕೂಗುತಾನ ॥ ಜೋ ಜೋ ॥ ೭ ॥

ಮಲ್ಲಯ್ಯ ಮಲ್ಲಯ್ಯನಂತ ಕೂಗುದು ತಾ ಕೇಳಿ
ನೋಡತಾರ ಸಿದ್ಧರಾಮನ ಭಕ್ತಿ ॥ ಜೋ ಜೋ ॥
ಭಕ್ತಿಲೆ ಸಿದ್ಧರಾಮ ಯುಕ್ತಿಲೆ ನಿಂತಾರ
ಹಾರತಾರ ಕಮರಿ ಕಾಂತಾರ ॥ ಜೋ ಜೋ ॥ ೮ ॥

ಕಮರಿ ಹಾರದು ಕಂಡು ಕೈ ಹಿಡಿದು ಕೇಳ್ಯಾರ
ಏನ ಬೇಡತಿ ಬೇಡು ಸಿದ್ಧರಾಮ ॥ ಜೋ ಜೋ ॥
ಶಿರಬಾಗಿ ನಿಂತಾನ ಕರ ಮುಗಿದು ಕೇಳ್ಯಾನ
ಸೊನ್ನಲ ಪುರದಾಗ್ಹೋಗಿ ನೆಲೆಸಂದಾನ ॥ ಜೋ ಜೋ ॥ ೯ ॥

ಸಿದ್ಧರಾಮನ ಹಾಡು ಅಮರುತ ಅಮರುತ
ಕೇಳಿದವರೀಗಿ ಮಾನ ನಿಜವುಂಟಾ ॥ ಜೋ ಜೋ ॥ ೧೦ ॥

– ಶ್ರೀಮತಿ ಪಾರ್ವತಿ ಜೇಮಶೆಟ್ಟಿ ಹಾಗೂ
ಅನ್ನಪೂರ್ಣ ದೇವಣಿ,
–ಶ್ರೀಮತಿ ಗಂಗಮ್ಮ ಚಂದ್ರಪ್ಪ

***

ಸಿದ್ದರಮನ ಜೋಗುಳ ಪದ

ಶ್ರೀ ಸಿದ್ಧರಾಮನ ಧ್ಯಾನವ ಮಾಡಲು
ಏಸೋ ಜನ್ಮದ ಪಾಪ ಪರಿಹರಿಸುವದು ಜೋ ಜೋ ॥ ಪ ॥

ಮುದ್ದುಗೌಡನು ಮತ್ತೆ ಸುದತಿ ಸುಗ್ಗಲದೇವಿ
ಉದರದಿ ಉದಿಸಿದ ಸೊನ್ನಲಿಗೆಯೊಳು ಜೋ ಜೋ ॥ ೧ ॥

ಮಾಸಿಲ್ಲ ಮಲವಿಲ್ಲ ಹೆಸಕಿ ಮೊದಲಿಲ್ಲ
ನಾಶವಾಗುವ ದೇಹ ದಾರಿಯಲ್ಲ । ಜೋ ಜೋ ॥ ೨ ॥

ಬುತ್ತಿ ಬೇಡಿದಯ್ಯ ಉತ್ತಹೋದನೆಂದು
ಅತ್ತು ಕರೆದು ಕಮರಿಕೊಳ್ಳ ಹಾರಲು ಜೋ ಜೋ ॥ ૩ ॥

ದಾಸೋಹಿ ಎನಿಸಿದ ದಾಸ ಭಕ್ತ ಜನ
ಭಾಷೆ ಪರಿದು ಪರಿಪರಿ ಹರಿಸಿದನು ಜೋ ಜೋ ॥ ೪ ॥

ಶಿವನೇ ಸಿದ್ದನೆಂದು ಭುವಿಗವತರಿಸಿದ
ಶಿವಭಕ್ತ ಮರ್ಮವ ಜಗಕಾರಹಲೆಂದೂ ಜೋ ಜೋ ॥ ೫ ॥

ಬಿದ್ದ ನರಕದಿ ಬೊಮ್ಮ ಸಿದ್ದನ ನೆನೆಯಲು
ಅಲ್ಲಿದ್ದವರನು ತೆಗದ ನರಕದಿಂದ ಜೋ ಜೋ ॥ ೬ ॥

ಕರ್ಮಯೋಗಿ ಸಿದ್ಧರಾಮ ಧರ್ಮಯೋಗಿ ಸಿದ್ಧ
ಅಲ್ಲಮನ ಸಂಗದಿ ಶಿವಯೋಗಿಯಾದ ಜೋ ಜೋ ॥ ೭ ॥

ಸಿದ್ದನ ಜೋಗುಳ ಹಾಡಿದ ವಿರುಪಾಕ್ಷ
ಶುದ್ಧ ಭಾವದಿ ಬಸವ ಕಲ್ಯಾಣದಲ್ಲಿ ಜೋ ಜೋ ॥ ೮ ॥

– ಶ್ರೀಮತಿ ಶಶಿಕಲಾ ಶರಣಪ್ಪ ಗಿರಿ ಹಾಗೂ
ಪಾರ್ವತಿ ಜೆಮಶೆಟ್ಟಿ,,ಶೀಲಾ ಕೋಣೀನ, ಮಹಾದೇವಿ ಕುಂಬಾರ,
–ನೀಲಮ್ಮ ಲಾಧಾ

***

ಜೋಗುಳ ಪದ

ಸಂಬ ರೇವಣಸಿದ್ಧ ವರವಾದ ಜೋ ಜೋ ॥ ಪ ॥

ಸುಗ್ಗಲಿಗಿ ಮುದುವಾಡ ವಿದ್ದಲಿ ಸೊನ್ನಲಿಪೂರ
ರೇವಣ್ಣಸಿದ್ಧ ವರವಾದ ಜೋ ಜೋ ॥ ೧ ॥

ರೇವಣಸಿದ್ಧ ವರವಾದ ಸುಗ್ಗಲದೇವಿ
ವರ್ಷಕ್ಕೆ ಹೆರಗೇಯ ಜೋ ಜೋ ॥ ೨ ॥

ಅಸಕಲ ಮಿಸಕಲ ಕಣ್ಣವು ತೆರೆವಲ್ಲ
ಏನು ಹೇಳಲಿ ಕಂದನ ಕವತೂಕು ಜೋ ಜೋ ॥ ೩ ॥

ಮಾಸಿಲ್ಲ ಮಾಸಿಲ್ಲ ಹೆಸಕಿ ಯಾರಲಿಲ್ಲ
ಕೂಸಿನ ಹೆಸರೊಂದು ಏನಿಡಬೇಕ ಜೋ ಜೋ ॥ ೪ ॥

ಹುಟ್ಟಿದ ಹನ್ನೆರಡು ವರ್ಷ ಅನಿವಾರ್ಯ ಗಳಿದಾರ
ದನಕಾಯಲು ಹೋಗ್ಯಾರ ಸಿದ್ದರಾಮ ಜೋ ಜೋ ॥ ೫ ॥

ನವಣಿಯ ಹೊಲದಾಗ ದನವು ಕಾಯುವಾಗ
ಗುರುಮಲ್ಲನೆಂಬ ಶಿವಬಂದು ಕೇಳ್ಯಾರ
ರಬ್ಬುಳಿ ಶಿವದಾನ ಕೊಡರಿ ನಮಗ ಜೋ ಜೋ ॥ ೬ ॥

ರಬ್ಬುಳಿ ಶಿವದಾನ ಓಗ್ಗುಲಿ ತಕ್ಕೊಂಡು
ಹೊಂಟರ ಸಿದ್ಧಾರಾಮ ಗುರುಬೆಟ್ಟಿಗೆ ಜೋ ಜೋ ॥ ೭ ॥

ಗುರು ಬೆಟ್ಟಿಗೆ ಬಂದು ಗುರುವೇ ಗುರುವೇನೆಂದು
ಕೂಗುತ ನಡೆದರ ಶ್ರೀಶೈಲಕ್ಕೆ ಜೋ ಜೋ ॥ ೮ ॥

ಕೂಗಿದರೆ ನಾವು ಸಾರಿ ಬರುವದಕೆಲ್ಲ
ನೋಡತೇವು ಸಿದ್ದರಾಮನ ಭಕುತಿ ಜೋ ಜೋ ॥ ೯ ॥

ಭಕುತಿಲೇ ಸಿದ್ದರಾಮಾ ಯುಕುತಿಲೇ ಹೊರಟಾರ
ಹಾರುತ ಕಾಂತರ ಕಮರಿಯ ಜೋ ಜೋ ॥ ೧೦ ॥

ಕಮರಿ ಹಾರದು ಕಂಡು ಕಮರಿ ಬಿಳದು ಕಂಡು

ಏನು ಬೇಡುತಿ ಬೇಡು ಶಿವನ ಸಿದ್ದಾರಾಮ ಜೋ ಜೋ ‖ ೧೧ ‖

ಲಕ್ಕಟ್ಟು ಹಾಡುವನು ಚಿತ್ತಿಟ್ಟು ಕೇಳುವದು
ಮುಕ್ತಿಯ ಕೊಡರಿ ಶಿವಸಿದ್ಧರಾಮ ಜೋ ಜೋ ‖ ೧೨ ‖

–ಶ್ರೀಮತಿ ನಾಗಮ್ಮ ಹದರಿ, ಕಡಣಿ

***

ಸಿದ್ಧರಾಮೇಶ್ವರ ಜೋಗಳ ಹಾಡು

ಜೋ ಜೋ ಗುರುಲಿಂಗ ಜಂಗಮಗೆ ಜೋ ಜೋ
ಕಾರುಣ್ಯ ನಿಧಿಗೆ ಜೋ ಜೋ
ಗುರು ಶಂಬೊ ಶಂಕರಗೆ ಪಾಡಿ ಜೋ ಜೋ ‖ ಪ ‖

ಭೂಲೋಕದೊಳಗಿರುವ ಸೊನ್ನಲಿಗಿಯಲ್ಲಿ
ಮಲಹಾರ ಶಿವಶಿವರಾಮಯ್ಯನ
ಕುಲಕ ರತನ ಜನಸಿದವನು ಹೇಳಲಿಲ್ಲ ಒಂದೇ
ಸಲವಲು ಮರುತ್ಯಾ ಲೋಕದಲ್ಲಿ ಜೋ ಜೋ ‖ ೧ ‖

ಸೊನ್ನಲಗಿ ಪುರದೊಳು ಮೊರಡಿ ಮುದ್ದವನು
ವನಿತೆ ಸುಗ್ಗಲದೇವಿ ಸುಖದಿ ವಿರತಿಹನು
ಘನ ಮಹಾನು ರೇವಣಸಿದ್ದ ಬಂದಾನೂಇನ್ನು
ಮನುಗೆ ಹೇಳಿದ ಮುಂದಿನ ಸೂಚವನ್ನು ಜೋ ಜೋ ‖ ೨ ‖

ಉರಗ ಮುಟ್ಟಿಸಿ ನಮಿಸಿ ಸ್ಥವನ ಮಾಡಿದನು
ಗದಗದಾ ನಡಗುತ ಮೊರಡಿ ಮುದ್ದಾವನು
ರೇವಣಸಿದ್ದ ಹಿಂಗೆ ಹೇಳಿದನು
ದೇವ ಐಶ್ವರ್ಯದ ಮಾತು ಆಡಿ ಹೋದನು ಜೋ ಜೋ ‖ ೩ ‖

ಇದೇನು ಹುಸಿಮಾತು ಎಂದು ಆಡಿದನು
ಮುದಿತನ ನಮಗ ಬಂತು ಎಂದನು
ಉದಾಗಿ ಮನದೊಳು ಚಿಂತಿ ಮಾಡಿದನು
ಇದರ ಶೋಕ ಕುಳಿ ಲೋಕ ನಗದದೇನಾನು ಜೋ ಜೋ ‖ ೪ ‖

ರೇವಣಸಿದ್ದ ಆಡಿದ ಮಾತು ಎಂದಿಗೂ ಹುಸಿಎಂದಿಲ್ಲದಿತ್ತು

ಶಿವಯೋಗಿ ಯಾವತ್ತು ನಡೆದು ಬಂದಿತು
ಅವಳ ಸರಸ ಮಾತ್ರದಲಿ ಗರ್ಭವಾದಿತು ಜೋ ಜೋ ॥ ೫ ॥

ದೇವಲೋಕದೊಳು ಪರಶಿವನು ತಾನು
ಶಿವ ತತ್ವವೆಂದೂ ಪುತ್ತಳಿ ಮಾಡಿದನು
ಭವ ಭಾದೆಯಿಂದಲಿ ಯಮರ ಕಾಯವನು
ಅವರ ಸುಗ್ಗಲೆ ವರವಾದಿವಿಟ್ಟು ಪೋದಾನು ಜೋ ಜೋ ॥ ೬ ॥

ಮಾಸು ಮಾಸಿಗೆ ಚಿನ್ನ ಪಲಿತವಾಯಿತು
ಹಸನಗಿ ಶಶಿಪೂರ್ಣ ಖಳಿಯಏರಿತು
ವಶಗಿ ಕುಚದೊಳೆನ್ನ ಕಪ್ಪದೂರಿತು
ಕುಶಲದಿಂದಲಿ ನವಮಾಸ ಪೂರ್ಣವಾದಿತು ಜೋ ಜೋ ॥ ೭ ॥

ನಿಶತರುತ್ರಯೋಳು ಸುಗ್ಗವಿಯನ್ನು
ವಸದಿ ನಿದ್ರಿಯಳು ಗೈಯುತಲಿನ್ನು
ವರದೇಶ ಮಾಡಿದ ಕಾತುರವನ್ನು
ವೆಸೆದು ಶಿವಯೋಗಿ ಜನಸಿದ ಉದ್ದಾರಕನು ಜೋ ಜೋ ॥ ೮ ॥

ಚಂದನ ಗಿರಿಜಾದೇವಿ ಬಂದಾಳು ಬೇಗನೆ
ಕಂದಯ್ಯಗ ಮಲಿಯ ಉಣಸಿದಳು
ದುಂಧುಮ ಧ್ವನಿಗಳು ಬೇಗೆ ಮಾಡಿದರು
ಆಗದೇವ ಸ್ತ್ರೀಯರೇ ಬಾಗಿನಕೆ ಹೋದರು ಜೋ ಜೋ ॥ ೯ ॥

ಆಗಲೆ ದೇವ ಸ್ತ್ರೀಯರೆಲ್ಲರು ಬಂದಾರು
ಬೇಗನೆ ತೊಟ್ಟಿಲವನ್ನು ಪಾಡಿದರೂ
ಜೋಗಳ ಜೋ ಎಂದು ಪಾಡಿದರೂ
ಈಗ ಸಿದ್ಧರಾಮಯಗೇ ಹೆಸರಿಟ್ಟಾರ ಜೋ ಜೋ ॥ ೧೦ ॥

ಧರಿಯಾಳ ಮಿಗಿ ಮದರಾಸ ಪುರದಿ
ಗುರುಲಿಂಗೇಶ್ವರ ಅಂತಃಕರುಣ
ಆದಿಸಿದ್ದನ ಮೂರ್ತಿ ವರಿದು ಪೇಳಿರಿ
ಗುರುಭಕ್ತರ ಕೇಳಿರಿ ಹರುಸಮನಮದರಿ ಜೋ ಜೋ ॥ ೧೧ ॥

– ಶ್ರೀಮತಿ ಶಶಿಕಲಾ ಮಾಲಿಪಾಟೀಲ

***

ಸಿದ್ಧರಾಮೇಶ್ವರ

ಹೇ ಭಕ್ತಿ ತನ್ನಲ್ಲಿ ಪೂರ್ಣವಿದ್ದರ ಮುಕ್ತಿ ಸ್ಥಾನವೇನ ದೂರವಿಲ್ಲಾ
ಸಾಂಬನ ಒಲಿಸುವುದು ತಮ್ಮ ನಂಬಿಗಿ ಕಾರಣ
ಡಂಭಾಚಾರ ನಡಿಯುವರಿಗೆ ತಪ್ಪಿಲ್ಲ ಜನನ ಮರಣ
ಈ ಕುಂಭಿನಿಯೋಳು ಕಾಣಲಾರೆ ದಿವ್ಯ ಚರಣ
ಪ್ರಾಣದಾಸೆ ಬಿಟ್ಟಿವರೀಗೆ ಪರಮೇಶ್ವರ ಸಿಗತಾನ ಖರೆ
ಆಸೆ ನೀಗಿ ಉದಿಸಿಕೊಂಡ್ರು ಸತ್ಯ ಶರಣ
ಶುದ್ಧ ಭಾವದಿಂದ ಕೇಳ್ರಿ ಸಿದ್ಧರಾಮನ ಪುರಾಣ
ಈ ಕುಂಭಿನಿಯೊಳು ಕಾಣಲಾರೆ ದಿವ್ಯ ಚರಣ ॥ ಜೀ ಜೀ ॥ ॥ ಪ ॥

ಹೇ ಸಿದ್ಧರಾಮನ ತಾಯಿ ತಂದಿ ಸುಗ್ಗಾದೇವಿ ಮುದ್ದನಗೌಡ
ಸೊನ್ನಲಾಪೂರದಲ್ಲಿ ಅವರ ಮನಿತಾನ
ಭಾವ ಭಗುತಿಯಲ್ಲಿ ಸಿರಿಯಾಳರಾಜ ಚಾಂಗುಣಿ ಸಮಾನ
ನಿತ್ಯ ಕಾಲದಲ್ಲಿ ಮಾಡತಿದ್ರೂ ಜಂಗಮರು ಭೋಜನಾ
ಗುರು ಲಿಂಗ ಜಂಗಮರ ಕಂಡರ ಮಾತ್ರ ಬಂಗಾರ ಕಂಡಂಗ ಮಾಡತಿದ್ರು
ಗಂಗಾಧರ ಸ್ಮರಣಿಯಲ್ಲಿ ಬೇಗ ಬೆಳಗಾನ
ನಿತ್ಯ ಕೊಡುತಿದ್ರು ಅನ್ನ ಅರಬಿ ವಸ್ತ್ರ ದಾನ ॥ ಜೀ ಜೀ ॥ ॥ ೧ ॥

ಹೇ ಭಾವ ಭಕ್ತಿಲಿಂದ ದೇವರ ಸೇವೆ ಮಾಡುದು ಕಂಡು
ಶಿವ ಕೊಟ್ಟ ಮರತಿದ್ದನರೀ ಸಿರಿವಂತತನ
ಹುಟ್ಟು ಬಂಜಿ ಇದ್ರು ಅವರ ಹೊಟ್ಟಿಯಲಿ ಇದ್ದಿದ್ದಿಲ್ಲ ಸಂತಾನ ।
ನೋಡಿ ಅಂತಕ್ಕರುಣ ಹುಟ್ಟಿತಲ್ಲರಿ ಭಗವಾನ
ಎಪ್ಪತ್ತು ವರ್ಷ ಮುಪ್ಪಿನವರಿಗೆ ಮಕ್ಕಳ ಕೊಡುವದ್ಕೋಸ್ಕರಕಾಗಿ
ಕಪ್ಪು ಕೊರಳ ಅಪ್ಪಿಕೊಂಡು ಬಂದು ನಿಂತಾನ
ಅವರ ಬಾಗಿಲಿಗ್ಹೋಗಿ ಭಿಕ್ಷಾ ನೀಡ್ರಿ ತಾಯಿ ಅಂತಾನ ॥ ಜೀ ಜೀ ॥ ॥ ೨ ॥

ಹೇ ಇಷ್ಟ ಹೇಳಿ ಸುಗ್ಗಾದೇವಿ ದಿಗ್ಗನೆ ಎದ್ದು ಬಂದು ಭಿಕ್ಷಾ ನೀಡಿ
ಸಾಷ್ಟಾಂಗ ನಮಸ್ಕಾರ ಮಾಡ್ಯಾಳ ಬಂದು ಸಾಂಭಶಿವನಾ
'ಒಂದು ಶಿವಪುತ್ರ ಮಗನ ಹಡಿ'ಯಂತ ನುಡಿದಾನ ಭಗವಾನ
ಕೇಳಿ ಮುದ್ದಗೌಡ ಅಂತಾನ ನಿಮದು ಎಂಥಾ ವಚನ
ಮುಪ್ಪಾನ ಮುದಕರು ನಾವು ಮಕ್ಕಳ ಕಾಣು ಬಿಗಿ ಹ್ಯಾಂಗ
ಮೈಯೊಳಗ ನಮಗೇನು ಇಲ್ಲ ಚೈತಾನ
ದೊಡ್ಡ ಶರಣರು ಕಾಣಸ್ತೀರಿ ಸುಳ್ಳ ಆಡುದೇನ ಕಾರಣ ॥ ಜೀ ಜೀ ॥ ॥೩॥

ಇಳವು :

ಇಷ್ಟ ಕೇಳಿ ಅಂದ ಶಂಕರ ಕೇಳೋ ಸಾಹುಕಾರ ದಂಪತಿಗಳು
ಇಬ್ಬರು ಕೂಡಿ ಮಾಡ್ರಿ ಸ್ನಾನ
ಆ ಮ್ಯಾಲ ತಿಳದೀತರಿ ನಮ್ಮ ಖೂನ ॥ ಜೀ ಜೀ ॥
ಒಂದು ತೀರ್ಥ ಗುಂಡ ತಯ್ಯಾರ ಮಾಡಿದ ಈಶ್ವರ ಇಬ್ಬರು
ಮುಳಗ್ಯಾರ ಹೋಗಿ ಆ ದಿನಾ
ಬದಲಾಯ್ತೊ ಮಾರಿಯ ಚಿಹ್ನ ॥ ಜೀ ಜೀ ॥

ನಾಲ್ವತ್ತು ವರ್ಷದವರಂಗ ಆಗಿ ನಿಂತಾರ ಶಿವನ ತಂತರಾ
ಯಾತರ ಅನುಮಾನ
ಗಾಭರಾಗೀತರಿ ಊರಾನ ಜನ ॥ ಜೀ ಜೀ ॥

ಏರು :
ಹೇ ಸತಿ ಪತಿ ಇಬ್ಬರು ಕೂಡಿ ಸೋಮವಾರ ಸಂಜಿ ಮಾಡಿ
ಮಲಗಿಕೊಂಡ್ರೊ ಕಂಡೇವಂತ ಶಿವನ ಚರಣ
ಶುಭ ಮೂರ್ತದಲ್ಲಿ ಗರ್ಭ ಮೂಡಿತರಿ ಸತ್ಯ ಶರಣ
ಗರ್ಭ ಮೂಡಿದ ಕೂಡಲೆ ತಾಯಿ ಮುಖ ಚಂದ್ರಕಿರಣ
ಪ್ರಾಣದಾಸೆ ಬಿಟ್ಟವರೀಗೆ ಪರಮೇಶ್ವರ ಸಿಗತಾನ ಖರೇ
ಆಸೆ ನೀಗಿ ಎನಿಸಿಕೊಂಡ್ರು ಸತ್ಯ ಶರಣ
ಶುದ್ಧ ಭಾವದಿಂದ ಕೇಳ್ರಿ ಸಿದ್ಧರಾಮನ ಪುರಾಣ
ಈ ಕುಂಭಿನಿಯೋಳು ಕಾಣಲಾರೆ ದಿವ್ಯ ಚರಣ
॥ ಜೀ ಜೀ ॥ ಕೂಡಪಲ್ಲ ॥ ॥ ಚೌಕ ೧ ॥

ಹೇ ಮುಂದ ಕೇಳ್ರಿ ಒಂದ ದಿವಸ ತಾಯಿಯಾದ ಸುಗ್ಗಾದೇವಿ
ನಿದ್ರಿ ಹತ್ತಿ ಮನಗಿಕೊಂಡ್ಲು ಮಂಚದ ಮ್ಯಾಗ
ಶರಣ ಹುಟ್ಟುವ ಸುದ್ದಿ ಹೋಯ್ತರಿ ಸ್ವರ್ಗದ ಮ್ಯಾಗ
ಪೂರ್ಣ ನೌಮಾಸ ತುಂಬಿದಾವರಿ ಅಷ್ಟರೊಳಗ
ಸರಸ್ವತಿ ಪಾರ್ವತಿ ಲಕ್ಷ್ಮಿ ಮೂವರು ಕೂಡಿ ಪ್ರತ್ಯಕ್ಷ ನೋಡಲಿಕ್ಕೆ
ಬಂದಾರ ತೆಳಗ ।
ಸಿದ್ಧರಾಮನೆಂದು ನಿಂತು ಕೂಗ್ಯಾರ ಅವರ ಮನಿಯೊಳಗ
ಮಧ್ಯರಾತ್ರಿ ತಾಯಿಗಿ ನಿದ್ರಿ ಹತ್ತಿದ ಸಮಯದೊಳಗ
ಸಿದ್ಧರಾಮ ಗರ್ಭದಿಂದ ಬಂದಾನ್ರಿ ಹೊರಗ ॥ ಜೀ ಜೀ ॥ ॥ ೧ ॥

ಹಿಂಗ ಸುಗ್ಗಾದೇವಿ ನಿದ್ರಿಹತ್ತಿ ಮನಗಿದ್ಲಾವಗ ಸರಸ್ವತಿ ಪಾರ್ವತಿ
ಲಕ್ಷ್ಮಿ ಮೂವರು ಕೂಡಿ ತಗೊಂಡ್ರು ಕಯ್ಯಾಗ
ನಾವು ಏನಂತ ನಾಮಕರಣ ಇಡಬೇಕ್ರಿ ಈತಗ
ಹುಟ್ಟಿದ ವ್ಯಾಳೆ ನಕ್ಷತ್ರ ತಗದು ಆಗ ।
ಸಿದ್ಧರಾಮಂತ ಖಾಯಮ್ ಮಾಡಿ ತೊಟ್ಟಿಲದಾಗ ಹಾಕ್ಯಾರ ಆತಗ

ಅವರು ಮೂವರು ಕೂಡಿ ಜೋಗುಳ ಪದ ಹಾಡ್ಯಾರ ಆವಾಗ
॥ ಜೀ ಜೀ ॥ ॥೨॥

ಇಳವು :
ಏ ಸೊನ್ನಲಾಪುರದ ಶಿವಯೋಗಿ ।
ಶ್ರೀಮಂತನಿಗೆ ಜೋ ಜೋ
ಮಹಾಂತನಿಗೆ ಜೋ ಜೋ ।
ರೇವಣ ಸಿದ್ದೇಶ್ವರನಿಗೆ ಜೋ ಜೋ
ಸಿದ್ಧರಾಮನಿಗೆ ಜೋ ಜೋ

ಹಿಂದಿನ ಸುಕ್ರುತ ಮಂದಲ ಗಿರಿವರ
ಜನಿಸಿ ಬಂದವಗೆ ಜೋ ಜೋ
ಸಿದ್ಧರಾಮನಿಗೆ ಜೋ ಜೋ !

ಏರು :
ಹೇ ಹರ್ಷದಿಂದ ನಾಮ ಇಟ್ಟು ಕೈಲಾಸಕ್ಕೆ ಹ್ವಾದರು ಹೊಂಟು
ಯಾರು ನೋಡಲಿಲ್ಲ ಕೇಳ್ರಿ ಹೊತ್ತು ಹೊಂಡುತಾನ
ಮುಂಜಾನೆ ಬೃಂಗಿ ಎಂಬ ಜಂಗಮ ಅವರ ಮನಿಗೆ ಬಂದಾನ ।
ಅವರ ಮನಿಗೆ ಬರತಿದ್ದ ನೋಡ್ರಿ ಬೇಗ ಬೆಳತಾನ
ಪ್ರಾಣದಾಸೆ ಬಿಟ್ಟವರೀಗೆ ಪರಮೇಶ್ವರ ಸಿಗತಾನ ಖರೆ
ಆಸೆ ನೀಗಿ ಎನಿಸಿಕೊಂಡ್ರು ಸತ್ಯ ಶರಣ ।
ಶುದ್ಧ ಭಾವದಿಂದ ಕೇಳ್ರಿ ಸಿದ್ಧರಾಮನ ಪುರಾಣ
ಈ ಕುಂಭಿನಿಯೊಳು ಕಾಣಲಾರೆ ದಿವ್ಯ ಚರಣ ॥ ಜೀ ಜೀ ॥ ॥ ಚೌಕ ೨ ॥

ಹೇ ಕೂಸಿನ ಮುಖ ನೋಡಿ ಹರ್ಷದಿಂದ ಕುಣಿದಾಡಿ
ಕೂಗಿ ಕೂಗಿ ಎಬ್ಬಿಸತಾನ್ರಿ ಮನಿ ಮಂದಿಗಿ
ಈ ಸಪ್ಪಳ ಕೇಳಿ ಎಚ್ಚರಾಯ್ತರಿ ಸುಗ್ಗಾದೇವಿಗಿ ।
ಮೈ ಹಗುರಾದ ಕಾರಣೇನು ಅಂತಾಳ ಗಾಭರ್ಯಾಗಿ ।
ಆಸುರು ಕಂಡು ಕೂಸಿನ ನೋಡಿ ಈಶಾನ ನಾಮಕರಣ ಕೊಂಡಾಡಿ
ಅದೇ ನಾಮಕರಣ ಬಂತು ಅವರ ಬಾಯಿಗಿ ।
ಬಹಳ ಆನಂದಾಯಿತ್ರಿ ಅವರ ತಂದಿ ತಾಯಿಗಿ ॥ ಜೀ ಜೀ ॥ ॥ ೧ ॥

ಹೇ ಬಡವರ ಮನಿಗೆ ಭಾಗ್ಯ ತಾನು ಸಾಗಿ ಬಂದಂತಾಗಿ
ಹಿಡಿಸಲಾರದಷ್ಟು ಸಂತೋಷ ಅವರ ತಾಯಿ ತಂದಿಗಿ ।
ಬಂಡಿ ಹೇರಿ ಸಕ್ಕರಿ ಹಂಚ್ಯಾರ ಸಂದಿ ಸಂದಿಗಿ ।
ಅವರು ಬೇಡಿದಷ್ಟು ದಾನ ಕೊಟ್ಟಾರ ಬಂದ ಮಂದಿಗಿ

ದೇಶ ಎಲ್ಲಾ ಅಳುವಂತ ಈಶನ ನಾಮಕರಣದಿಂದ
ಏಸು ಕಾಲ ಆದರು ನಾವು ಮರಿಬಾರದು ಎಂದಿಗಿ
ಹೋಗು ಕಾಲಕ್ಕ ಕೊಟ್ರು ನಮ್ಮ ಕಯ್ಯಾಗ ಹೊನ್ನಿನ ಬಿಂದಿಗಿ
॥ ಜೀ ಜೀ ॥ ॥೨॥

ಹೇ, ಎಳಿಬಾಳಿ ಸುಳಿಯೆಂಥ ಖಳಿಯುಳ್ಳ ಸಿದ್ಧರಾಮ
ದಿನದಿನಕ ಬೆಳಿತಿದ್ದ ಇಂಥ ಪರಿಯಾಗಿ
ಅವರು ತಂದಿ ಪುಣ್ಯಾ ನೋಡರಣ್ಣ ಮಂದಲಗಿರಿಯಾಗಿ
ಓಂ ಶಿವಾ ಎಂಬು ಶಬುದ ಬಂತೋ ಮೊದಲ ಬಾಯಿಗಿ
ಆರು ವರುಷತಾನ ಹುಡುಗ ಯಾರ ಕೂಡ ಮಾತಾಡಲಿಲ್ಲ
ಆಕಳ ತಗೊಂಡು ಹೊಲಕ ಹ್ವಾದ ಮೊದಲ ಸುರವಿಗಿ
ಎಂದ ಕಂಡೇನಂದ ಮುಕ್ತಿ ಕೊಡುವ ಗುರುವಿಗಿ ॥ ಜೀ ಜೀ ॥ ॥ ೩ ॥

ಏ ಆಕಳ ಒಯ್ದು ಹೊಲದಾಗ ಬಿಟ್ಟು ಅಡ್ಯಾಡಿಕೊಂತ ತಿರಗಾಡ್ತಿದ್ದ
ಒಂದ ದಿವಸ ಬಂದ ನಿಂತ ಹೊಲ್ದ ಸೀಮಿಗಿ
ಇಷ್ಟಲಿಂಗ ಮತ್ತೊಂದು ಬಿದ್ದೀತಲ್ಲರಿ ಅವನ ನೆದರೀಗಿ
ಪೂರ್ಣ ಆತನ ಮ್ಯಾಲ ಇಟ್ಟಿದ್ದಾನ್ರಿ ತನ್ನ ನೆಂಬಿಗಿ
ಮನ್ಯಾಗ ಕಟ್ಟಿದ ಬುತ್ತಿರೊಟ್ಟಿ ದೇವರಿಗೆ ನೆವದೆ ಮಾಡಿ
ಅದೇ ಬುತ್ತಿ ಊಟ ಮಾಡತಿದ್ದ ಆರು ತಾಸೀಗಿ
ಇಂಥ ಶಾಂತಗುಣ ಆರು ವರುಷಿನ ಸಣ್ಣ ಕೂಸಿಗಿ ॥ ಜೀ ಜೀ ॥ ॥ ೪ ॥

ಇಳವು :
ಮಲ್ಲಿಕಾರ್ಜುನ ಅವತಾರ ತೊಟ್ಟು ಶಿವ ಸಂಜೀವ ನೋಡಲಾಕ
ಭಕ್ತಿ ಬಂದಾನರಿ ಅವರ ಹೊಲಕ
ಮಡದಿನ್ನ ಕರಕೊಂಡು ಬಂದಾನ್ರಿ ಅವರ ಸ್ಥಳಕ್ಕ ॥ ಜೀ ಜೀ ॥

ಸಿದ್ಧರಾಮಗ ಹುಟ್ಟಿತು ನೋಡ್ರಿ ಅವರು ಇವನೆ ನಮ್ಮ ಗುರುವ
ಮುಗಿದ ನಿಂತ ಕರವ ಬಿದ್ದ ಪಾದಕ ।
ಯಾವುರವರು ಬಂದೀರಿ ಇಲ್ಲಗ್ಯಾಕ ॥ ಜೀ ಜೀ ॥

ನಿಮ್ಮ ನಾಮಕರಣ ಹೇಳೋ ದೇವ ಆಗೇದೇನೋ ಹಸುವ
ಮಾಡುವೆನು ನಿಮ್ಮ ಸೇವಾ ಕೇಳತಾನ್ರಿ ಮೆಲ್ಲಕ ।
ಕಬ್ಬು ಸೀತನಿ ತರತೀನರಿ ತಿಲ್ಲಾಕ ॥ ಜೀ ಜೀ ॥

ಏರು :

ಹೇ, ಇಷ್ಟು ಕೇಳಿ ಮಲ್ಲಯ್ಯನವರು ಇಷ್ಟು ದಯಾಳು
ಗುಣವಂತ ಹುಡುಗ
ಸೃಷ್ಟಿಯೊಳು ಕಾಣಲಾರೆ ಇಂಥ ತರುಳನ
ಪೂರ್ಣ ವಿಚಾರ ನೋಡಬೇಕಂತಾನ ಆತನ ಗುಣ
ಕುಂಭಿನಿಯೊಳು ಕಾಣಲಾರೆ ದಿವ್ಯ ಚರಣ
ಪ್ರಾಣದಾಸೆ ಬಿಟ್ಟವರಿಗೆ ಪರಮೇಶ್ವರ ಸಿಗತಾನ ಖರೆ
ಆಸೆ ನೀಗಿ ಎನಿಸಿಕೊಂಡ್ರು ಸತ್ಯ ಶರಣ
ಶುದ್ಧ ಭಾವದಿಂದ ಕೇಳ್ರಿ ಸಿದ್ಧರಾಮನ ಪುರಾಣ
ಈ ಕುಂಭಿನಿಯೊಳು ಕಾಣಲಾರೆ ದಿವ್ಯ ಚರಣ ॥ ಜೀ ಜೀ ॥ ॥ ಚೌಕ ೩॥

ಏನು ತಮ್ಮ ನಿನ್ನ ಹೆಸರು ಮಲ್ಲಯ್ಯನವರು ಜಾತಿಯಲ್ಲಿ ಜಂಗಮರು
ಮಡದಿ ಹೆಸರು ಗಂಗಾದೇವಿ ಅಂತ ನುಡದಾನೋ
ಕೇಳಿ ಸಿದ್ಧರಾಮ ಮತ್ತು ಅವರ ಪಾದ ಹಿಡದಾನೋ
ಅವುರ ಕಡೆಯಿಂದ ಆಶೀರ್ವಾದ ಪುನಾ ಪಡದಾನೋ ।
ಕಬ್ಬು ಸೀತನಿ ಸುಲಗಾಯಿ ತಂದು ಮುಂದ ಇಟ್ಟ ಸಿದ್ಧರಾಮ
ಮಡದಿನ್ನ ಕರಕೊಂಡು ಮಲ್ಲಯ್ಯ ತಿಂದಾನೋ ।
ಕೇವಲ ಶಿಷ್ಯ ತಂದ ಪದಾರ್ಥ ಬಹಳ ಸೇವಿ ಅಂದಾನೋ
॥ ಜೀ ಜೀ ॥ ॥೧ ॥

ಹೇ ತಿನ್ನುದೆಲ್ಲಾ ಆದಮ್ಯಾಲೆ ಟೆಂಗಿನ ನೀರು ತಂದಕೊಟ್ಟ ಸಿದ್ಧರಾಮ
ಕುಡದ ಕೂಡ್ಲೆ ಮಲ್ಲಯ್ಯನವರು ನೆಲಕ ಬಿದ್ದಾನು ।
ಹೊಟ್ಯಾಗ ಉರುಪ ಎದ್ದಾದಂತ ಅಲ್ಲೆ ಹೊರಳಾಡತಿದ್ದನೋ
ಮಡದಿ ಗಂಗಾದೇವಿ ದುಃಖ ಅಂತೂ ಹೇಳಲಾರೆನು
ಗಾಭರಿಯಾಗಿ ಸಿದ್ಧರಾಮ ಹೌಹಾರಿ ಕೇಳತಾನ
ಏನು ಬೇಕ್ರಿ ಸ್ವಾಮಿ ನಿಮಗ ತಂದು ಕೊಡುವೆನು
ನೀವು ಹೇಳದಿದ್ರ ಪ್ರಾಣ ನಾನು ಇಲ್ಲೆ ಬಿಡುವೆನು ॥ ಜೀ ಜೀ ॥ ॥ ೨ ॥

ಹೇ ಬಾಲ ಸಿದ್ಧರಾಮ ಆಡು ಮಾತ ಕೇಳಿ ಮಲ್ಲಯ್ಯನವರು
ಕೈ ಸೊನ್ನಿ ಮಾಡಿ ಹುಡುಗನ ಮುಂದಕ್ಕ ಕರದಾನೂ
ಏನ ಹೇಳಲಿ ಸಿದ್ಧರಾಮ ತಾಳಲಾರೆನೂ
ಹೊಟ್ಯಾಗ ಉರುಪ ಎದ್ದು ಬೆಂಕಿ ಬಿದ್ದಾದ ಹೇಳಲಾರೆನು
ಅರ್ಧ ತಾಸಿನೊಳಗ ನೀನು ಅನ್ನ ಮೊಸರು ತಂದು ಕೊಟ್ರ
ಆತುಮ ಸಂತೋಷಾಗಿ ನಾನು ತಿಂದ ಏಳುವೆನೂ
ನೀನು ತರಲ್ದೆ ಹ್ವಾದರೆ ಪ್ರಾಣ ನಾನು ಇಲ್ಲೆ ಬಿಡುವೆನು ॥ ಜೀ ಜೀ ॥ ॥೩॥

ಏ ಇಷ್ಟ ಕೇಳಿ ಸಿದ್ಧರಾಮ ಓಡಿಕೊಂತ ಮನಿಗೆ ಹ್ವಾದ

ಅನ್ನ ಮೊಸರು ಬುತ್ತಿ ಮಾಡಂತ ತಾಯಿಗೆ ಹೇಳ್ಯಾನು
ಬುತ್ತಿ ಕಟ್ಟಿಸಿಕೊಂಡು ಓಡಿಕೊಂತ ಹೊಲಕ ಬಂದಾನು
ಬರುದರಾಗ ಮಲ್ಲಯ್ಯಸ್ವಾಮಿ ಮಾಯವಾಗಿದ್ದನು
ಹೊಲ ಎಲ್ಲಾ ತಿರುಗಾಡಿ ಮೊದಲ ಕುಂತ ಜಾಗ ನೋಡಿ
ಸಣ್ಣ ಹುಡುಗ ಕಣ್ಣ ತುಂಬ ನೀರ ತಂದಾನೂ
ಮಗನೆ ಮಗನೆ ಅಂತ ಜಂಗಮ ತನ್ನ ಪ್ರಾಣ ಕೊಂದಾನು ॥ ಜೀ ಜೀ ॥
॥ ೪ ॥

ಹೇ ಗಾಭರಿಯಾಗಿ ಸಿದ್ಧರಾಮ ನೆರಿ ಹೊಲದವರಿಗ್ಹೋಗಿ ಕೇಳತಾನ
ಮಲ್ಲಯ್ಯ ಅನ್ನು ಜಂಗಮ ಇಲ್ಲಿಗೆ ಬಂದಾನೇನೊ
ನನಗ ಏನೇರೆ ಹೇಳಂತ ಅಂದಾನೇನೂ
ಈ ಹಾದಿ ಹಿಡದ ಮಲ್ಲಯ್ಯಸ್ವಾಮಿ ಹ್ವಾದನೇನೂ
ದಿಡಗಮಾಡಿ ನೆರಿ ಹೊಲದವರು ಸಿದ್ಧರಾಮಗ ಕರದು ಹೇಳತಾರ
ಇಲ್ಲೇ ದಾರ್‍ಯಾಗ ಕುಂದ್ರೋ ಬಂದ್ರ ಅವನೀಗೆ ತಪಾಸ ಮಾಡೂನು ।
ಅಂವ ಬರಲ್ದಿರೆ ನಾವು ನಮ್ಮ ಮನಿಕಡಿಗ್ಹೋಗೂನು ॥ ಜೀ ಜೀ ॥ ॥ ೫ ॥

ಇಳುವು :
ಸಿದ್ಧರಾಮ ಹಿಡದ ಒಂದ ಹಟ ಮಲ್ಲಯ್ಯನ ಮುಕುಟ
ನೋಡುತನಕ ಊಟ ಮಾಡುವದಿಲ್ಲಾ
ಪ್ರಾಣ ಹ್ವಾದರು ಸಹಿತ ಬಿಡುದಿಲ್ಲಾ ॥ ಜೀ ಜೀ ॥

ಕಾಂತರವನ ಸೇರಿ ಕೆಟ್ಟ ಶರೀರದಾಸೆ ಬಿಟ್ಟನಲ್ಲ ಬ್ಯಾಸಗ್ಯಾಗ
ಸುಟ್ಟ ಉರುದಾವರಿ ಅಂಗಾಲಾ
ಮೂರು ದಿವಸ ಕಣ್ಣಿಗಿ ನಿದ್ರಿ ಇಲ್ಲಾ ॥ ಜೀ ಜೀ ॥

ಏರು :
ಹೇ ತಾಯಿ ತಂದಿ ಆಯಿ ಮುತ್ತ್ಯಾ ಅಣ್ಣ ತಮ್ಮರ ಆಸೆ ಅವನೀಗಿ
ಇಲ್ಲಾ ಅವರೀಗೆ ಬಿಟ್ಟ ಸೇರಿಕೊಂಡ ಅಡವಿ ಆರ್‍ಯಾಣ
ಸಣ್ಣ ಹುಡುಗ ಓಡಿ ಓಡಿ ಹಸ್ತು ಆದ ಹೈರಾಣ
ಈ ಕುಂಭಿನಿಯೊಳು ಕಾಣಲಾರ ದೇವರ ಚರಣ
ಪ್ರಾಣದಾಸೆ ಬಿಟ್ಟವರೀಗೆ ಪರಮೇಶ್ವರ ಸಿಗತಾನ ಖರೆ
ಆಸೆ ನೀಗಿ ಎನಿಸಿಕೊಂಡ್ರು ಸತ್ಯ ಶರಣಾ
ಶುದ್ಧ ಭಾವಿದಿಂದ ಕೇಳ್ರಿ ಸಿದ್ಧರಾಮನ ಪುರಾಣ
ಈ ಕುಂಭನಿಯೊಳು ಕಾಣಲಾರೆ ದಿವ್ಯ ಚರಣ
॥ ಜೀ ಜೀ ॥ ॥ ಕೂಡಪಲ್ಲ ॥ ॥ ಚೌಕ ೪ ॥

ಹೇ ಆರೇಳು ಮಂದಿ ಜಂಗಮರು ಹೆಗಲ ಮ್ಯಾಲ ಕವಡಿ ಹೊತ್ತು

ಹಾದಿ ಹಿಡದ ಹೊಂಟಿದ್ದಾರಿ ಅದೇ ಯಾಳೇಕ
ಶ್ರೀ ಮಲ್ಲಯ್ಯ ಮಲ್ಲಯ್ಯ ಅನ್ನಕೋತ ಬಂದಾರ ಪಳ್ಳಕ
ಆಗ ಸಿದ್ಧರಾಮ ಓಡಿಹ್ವಾದ ಅವರಿಗೆ ಕೇಳುದಕ
ಮಲ್ಲಯ್ಯನ ಹೆಸರು ನೀವು ಉಸರುವ ಕಾರಣವೇನೂ
ಹೇಳಿಕೊಡ್ರಿ ಮಲ್ಲಯ್ಯ ಇರತಾನ ಯಾವ ಸ್ಥಾನಕ
ನೀವ ಹೇಳಿಕೊಟ್ರ ಕೋಟಿ ಪುಣ್ಯ ನಿಮ್ಮ ಪಾಲಿಕ ॥ ಜೀ ಜೀ ॥ ॥ ೧ ॥

ಹೇ ಆರೇಳಮಂದಿ ಜಂಗಮರು ಹುಡುಗನ ಕರದು ದಿಡಗ ಮಾಡಿ
ಹೇಳತಾರ ಸಧ್ಯ ನಾವು ಹೋಗತೀವೋ ಶ್ರೀಶೈಲಕ
ಆ ಮಹಾತ್ಮನಾದ ಮಲ್ಲಿಕಾರ್ಜುನ ದರ್ಶನಾಗುದಕ
ನಮ್ಮ ಸಂಸಾರದಲ್ಲಿ ಸುಖ ನೀಡಂತ ಸುಖ ಬೇಡುವಕ
ಸಿದ್ಧರಾಮ ಅಂತಾನ ಸ್ವಾಮಿ ಸಂಸಾರ ಸುಖ ನನಗಿಲ್ಲ
ಸಧ್ಯ ನಾನು ಬರ್ತೀನಿ ನಡ್ರಿ ಅವುನ ನೋಡುದಕ
ಅವರು ಬ್ಯಾಡಂದ್ರು ಸುರುಮಾಡಿದ ಹಿಂದ ಹಿಂದ ಓಡುದಕ ॥ ಜೀ ಜೀ॥
॥೨॥

ಹೇ ತಿಂಗಳ ದಿನ ಅವುರ ಹಿಂದ ತಿರಗ್ಯಾಡಿ ತಂಗಳ ರೊಟ್ಟಿ ಒಪ್ಪತ್ತ
ತಿಂದು ಬಂದು ನಿಂತಾರ ಉಗಾದಿ ಪಾಡ್ಯಕ್ಕ ನೌದ್ವಾರಕ
ಅದು ಕಲಿಯುಗದಲ್ಲಿ ದೊಡ್ಡ ಕ್ಷೇತ್ರ ಕಡಿ ಬಾಗಿಲಕ
ಆತನ ಶಿಖರ ಕಂಡ್ರೆ ನಮ್ಮ ಜಲ್ಮ ಆಗುದು ಸಾರ್ಥಕ
ಗರ್ಭ ಗುಡಿಯ ಮುಂದ ಕುಳಿತು ಸಿದ್ಧರಾಮಗ ಕರದು ಹೇಳತಾರ
ಜಲ್ದಿ ಮಾಡಿ ಬೀಳು ಹೋಗೋ ಮಲ್ಲಯ್ಯನ ಪಾದಕ
ಅಲ್ಲಿ ಪವಿತ್ರ ನೋಡೋ ಪಾತಾಳಗಂಗಾ ಹರಿಯುದಕ ॥ ಜೀ ಜೀ ॥ ॥೩॥

ಇಳುವು :
ಸಿದ್ಧರಾಮ ನೋಡಿ ಆದ ದಂಗಾ ಜಂಗಮರೆಂತಾ ಮಂಗಾ
ಮಾಡಬಾರದು ಸಂಗ ವಿಶ್ವಾಸವಿಡೂದಿಲ್ಲಾ
ಇವರ ಮಾತು ಕೇಳಿ ನಾನು ಬಂದದ್ದಲ್ಲಾ ॥ ಜೀ ಜೀ ॥

ಮಲ್ಲಯ್ಯಗ ತೋರಸ್ತೀವಿ ಅಂದ್ರಲ್ಲಾ ಅಡವ್ಯಾಗ ತಂದ್ರಲ್ಲಾ
ಗಿರಿಯೇರಿ ನೋಡತಾನ ಗುಡಿಯೆಲ್ಲಾ
ಇದು ದೇವರಲ್ಲರಿ ಥೇಟ ಕರಿಕಲ್ಲಾ ॥ ಜೀ ಜೀ ॥

ಮಲ್ಲಯ್ಯ ಇದ್ದ ನನ್ನಂಗ ಕಣ್ಣು ಕಾಲ ಮೂಗ ಶರೀರ ಇತ್ತು
ಅವಗ ಕನ್ನಡ ಭಾಷೆದೊಳಗ ಬಹಳ ಹಸನಲ್ಲಾ
ಐದು ದೂಪರ್ತಿ ಹಚ್ಚಿದಂಗ ಬಿಸಿಲಾ ॥ ಜೀ ಜೀ ॥

ಏರು :
ಹೇ ತಾಯಿ ತಂದಿ ಆಯಿ ಮುತ್ಯ ಅಣ್ಣ ತಮ್ಮರ ಆಸೆ ಅವನೀಗಿ ಇಲ್ಲಾ
ಅವರಿಗೆ ಬಿಟ್ಟು ಸೇರಿಕೊಂಡ ಅಡವಿ ಅರ್ರ್ಯಾಣ
ಸಣ್ಣ ಹುಡುಗ ಓಡಿ ಓಡಿ ಹಸ್ತು ಆದ ಹೈರಾಣ
ಈ ಕುಂಭಿನಿಯೋಳು ಕಾಣಲಾರೆ ದಿವ್ಯ ಚರಣ
ಪ್ರಾಣದಾಸೆ ಬಿಟ್ಟವಂಗೆ ಪರಮೇಶ್ವರ ಸಿಗತಾನ ಖರೇ
ಆಸೆ ನೀಗಿ ಎನಿಸಿಕೊಂಡ್ರು ಸತ್ಯ ಶರಣಾ
ಶುದ್ಧ ಭಾವದಿಂದ ಕೇಳ್ರಿ ಸಿದ್ಧರಾಮನ ಪುರಾಣ
ಈ ಕುಂಭಿನಿಯೋಳು ಕಾಣಲಾರೆ ದಿವ್ಯ ಚರಣ
॥ ಜೀ ಜೀ ॥ ಕೂಡಪಲ್ಲ ॥ ॥ ಚೌಕ ೫ ॥

ಹೇ ಇದರಂತೆ ಏಳು ದಿವಸ ನೀರ ಸಹಿತ ಕುಡಿಲಾರದೆ
ಗಿರಿ ಏರಿ ಶಿಖರದ ಮೇಲಿಂದ ನೋಡ್ಯಾನ್ರಿ ಕೆಳಗ
ಒಂದು ಕಲ್ಲು ತಗೊಂಡು ಒಗದಿದ್ದಾನ್ರಿ ಕಮರಿ ಮಠದಾಗ
ಒಂದು ತಾಸಿನ ಮ್ಯಾಗ ಕಲ್ಲ ಹೋಗಿ ಮುಟ್ಟಿತರಿ ತೆಳಗ
ಕಂದಗೊರಳ ಸಿಗುವುದಿಲ್ಲ ಬಂಧನ ಬಿಟ್ಟು ಸುಖವಿಲ್ಲಾ
ಹಿಂದ ಮುಂದ ನೋಡಬಾರದು ನಾನು ಇದರಾಗ
ಹಿಂದಕ ಮೂರ ಮಾರ ಹೋಗಿ ಬಂದು ಹಾರ್‍ಯಾನ ಅದರಾಗ
॥ ಜೀ ಜೀ ॥ ॥೧॥

ಹೇ ಕಲ್ಲ ಮ್ಯಾಗ ಹಾರುದರೊಳಗ ಮಲ್ಲಯ್ಯನವರು ಅಲ್ಲೆ ಇದ್ರೂ
ಜಲ್ದಿ ಮಾಡಿ ಹಿಡಕೊಂಡ್ರು ತಮ್ಮ ತೆಕ್ಕ್ಯಾಗ
ಏನ ಘಾತ ಮಾಡತಿದ್ದೋ ಸಿದ್ಧರಾಮ ಅಪವಾದ ಭವದಾಗ
ನೀ ಏನ ಬೇಡತಿ ಬೇಡು ವರುವ ಕೊಡತೀನಿ ಈ ಕ್ಷಣದಾಗ
ಸಿದ್ಧರಾಮ ಅಂತಾನ ಸ್ವಾಮಿ ಸಾಕು ನಿಮ್ಮ ಸಾದುರ ಸಂಗಾ
ಸುಳ್ಳ ಜಂಗಮ ಏನ ಕೊಡತ್ಯೋ ನೀ ನನಗ
ಮೊದಲ ಅನ್ನ ಮೊಸರ ಊಟ ಮಾಡೋ ಬಿಡತೀನಿ ನಿನಗ
॥ ಜೀ ಜೀ ॥ ॥೨॥

ಏ ಸತ್ಯ ಸೇವಕ ಹೌದೆಂದೊ ಬುತ್ತಿ ಬಿಚ್ಚಿ ಮಲ್ಲಯ್ಯನವರು
ಹುಡುಗನ ಕರಕೊಂಡು ಊಟ ಮಾಡ್ಯಾರ ತನ್ನ ಅಗಲಾಗ
ಮುಖಕ ಮುಖ ಹಚ್ಚಿ ಮುದ್ದಾಡತಾನೋ ತನ್ನ ಬಗಲಾಗ
ನಿನ್ನ ತಾಯಿ ತಂದಿ ಅಳಕೋಂತ ಕುಂತಾರೋ ನಿನ್ನ ಊರಾಗ
ಸೊನ್ನಲಾಪೂರ ಹೋಗಿ ಸೊಲ್ಲಾಪುರ ಶಹರವಾಗಲಿ
ಸದಾ ಲಕ್ಷ್ಮಿವಾಸ ಇರಲೋ ನಿನ್ನ ಊರಾಗ
ಸುತ್ತ ಗಂಗಾ ಆಗಿ ಗುಡಿ ಹುಟ್ಲೋ ನಡು ನೀರಾಗ ॥ ಜೀ ಜೀ ॥ ॥ ೩ ॥

ಇಳವು :
ದೇವರ ಒಲಿಸಬೇಕಾದರ ಇಡಬೇಕ್ರಿ ನಾವು ಭಕ್ತಿ
ಭಕ್ತಿ ಇಟ್ಟರ ಸಿಗತಾದ ಮುಕ್ತಿ
ಕಷ್ಟ ಬಂದ ಕಾಲಕ ಮ್ಯಾಲ ಶಿವ ಶಿವ ಅಂತಿ ॥ ಜೀ ಜೀ ॥

ಸುಖ ಇದ್ದಾಗ ಶಿವಗ್ಯಾಕ ಮರೀತಿ
ಮರವೀನ ಸಂಸಾರ ಮೂರೇ ದಿಂದು ಇದು ಸಂತಿ
ಮರವಿನೊಳಗ ಎಲ್ಲಾ ಮರತ ಕುಂತಿ ॥ ಜೀ ಜೀ ॥

ಸುತ್ತ ದೇಶದೊಳಗ ಇಂಗಳಗಿ ಊರ ಒಳ್ಳೇ ಪಂಥಾ
ಹಾ ಲಾಳೇಶನ ಕವಿಗಳು ಸ್ವಂಥಾ ॥ ಜೀ ಜೀ ॥

ಏರು :
ಹೇ ಖಾಸ ಇಂಗಳಗಿ ಊರಾಗ ಇರುವಂಥ ಈಶನಾಮ ಕರುಣದಿಂದ
ಕೂಸ ಲಾಳೇಶ ತಿಳಿಸತಿದ್ದ ಇಂಥ ಕೀರ್ತನಾ
ಇದು ಕೇಳಿದವರಿಗೆ ದೂರ ಆಗುವದು ಜನನ ಮರಣಾ
ಈ ಕುಂಭನಿಯೋಳು ಕಾಣಲಾರೆ ದಿವ್ಯ ಚರಣಾ
ಪ್ರಾಣದಾಸೆ ಬಿಟ್ಟವರೀಗೆ ಪರಮೇಶ್ವರ ಸಿಗತಾನ ಖರೇ
ಆಸೆ ನೀಗಿ ಎನಿಸಿಕೊಂಡ್ರೋ ಸತ್ಯ ಶರಣಾ
ಶುದ್ಧ ಭಾವದಿಂದ ಕೇಳ್ರಿ ಸಿದ್ಧರಾಮನ ಪುರಾಣ
ಈ ಕುಂಭಿನಿಯೋಳು ಕಾಣಲಾರೆ ದಿವ್ಯ ಚರಣ ॥ ಜೀ ಜೀ ॥

–ಕೃತಿ : ಹರದೇಶಿ ನಾಗೇಶಿ

***

ಸಿದ್ಧರಾಮನ ವೃತ್ತಾಂತ

ಮೂಕ ಮಗನ ಕೊಟ್ಟನೆ ಸಿದ್ಧರಾಮನಂದಾರ

ಶಿವನೆ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಯಿ ದ್ಯಾವರ ಬಂದಾರೆ ಬನ್ನೀರೆ
ದೇವಿಯ ಮೊದಲ ದೇವರು ಮೊದಲ ದೇವಿಂದರಾಯನೆ ಮೊದಲಯ್ಯ
ತಾಯಿನಂದರ ಯಾರು ಮರ್ತ್ಯಕ ತಂದಿನಂದರ ಯಾರಯ್ಯ
ತಾಯೇಳ ಪಾರವತಿದೇವಿ ನಮ್ಮ ದೇವರು ಪರಮೇಸೂರನ
ಇವರ ಇಬ್ಬರ ಹೊರತ ಧರ್ಮರ್ಯಾ ಮಾರುತ್ಯಾಕ್ಯಾರ್ಯಾರಿಲ್ಲಯ್ಯ
ದೇವಿಧರ್ಮರ ಹಾಡೇನೆ ಎಲ್ಲಿಗ ಬರುತಾವೇನಯ್ಯ

ಸತ್ಯಧರ್ಮುರ ಹಾಡೇನೆ ಜತ್ತುನಾರ್ಯ್ಯಾಣಪುರದಾಗ
ಗ್ರಾಮನೇಳು ಹುಲಿಜಂತ್ಯಾಗೆ ದಿಂಡಗದ್ದುಗಿ ಹಾಕ್ಯಾನ
ದಿಂಡಗದ್ದುಗಿ ಹಾಕ್ಯಾನ ಮಾಳಪ್ಪ ಮಂಡಿಲಿ ಶಾಯವ ಮಾಡ್ಯಾನ
ಊಟಕ ಹುಲಿಗಿಣ್ಣವ ಕೊಟ್ಟಾನ ಆಟಕ ಹುಲಿಮರಿಯೇನ
ನಂದನ ಬನದಾಗ ಲಿಂಗ ಬಾ ನನ್ನ ರುದ್ದರ ಮಾಯವ್ವನ ತಮ್ಮನ

ಮಾರಗ ಮಾರಗಂದಾರೆ ಯಾವಲಿ ಇರುತಾವೇನ
ಸತ್ಯ ಧರ್ಮುರ ಹಾಡೇನೆ ಯಾವ ಠಾಣೆದ ಮ್ಯಾಲೇನ
ಯಾವ ಠಾಣೆದ ಮ್ಯಾಲೇನ ಸೊನ್ನಲಗಿರಿಯ ಒಳಗೇನ
ಸೊನ್ನಲಗಿರಿಯ ಒಳಗೇನ ತಂದೇಳ ಮದ್ದುಗೌಡನ
ತಂದೇಳ ಮುದ್ದುಗೌಡನೇ ತಾಯೇಳ ಸುಗಲವ್ವನ
ಗೌಡಕಿ ಯಾರಿಗಿದ್ದಾವೆ ರಾಜಕಿ ಯಾರಿಗಿದ್ದಾವ
ದೇಶಿಕಿ ಯಾರಿಗಿದ್ದಾವೆ ಹಕ್ಕು ಯಾರಿಗಿದ್ದಾವ
ಮೂರವರ್ಷನಾದವೆ ಮಕ್ಕಳ ಫಲಗೋಳು ಇಲ್ಲಯ್ಯ
ಟೊಂಕಿಗ ಸೆರಗ ಸುತ್ಯಾರೆ ನಡುವಿಗ ನಡುಕಟ್ಟು ಸುತ್ಯಾರೆ
ನಡುವಿಗ ನಡುಕಟ್ಟು ಸುತ್ಯಾರೆ ಲ್ಯಾವಿ ದಂಡಕೋಲ ಹಿಡದಾರ
ಟೊಂಕಿಗ ಸೆರಗ ಸುತ್ಯಾರೆ ನಡುವಿಗ ನಡಕಟ್ಟು ಸುತ್ಯಾರೆ
ನಡುವಿಗ ನಡುಕಟ್ಟು ಸುತ್ಯಾರೆ ಲ್ಯಾವಿ ದಂಡಕೋಲ ಹಿಡದಾರ
ಟೊಂಕ ಬಾಗುತಾವೇನ ಮುಪ್ಪಿನವರು ಆದರ
ಮುಪ್ಪಿನವರು ಆದರೆ ಗುರುವಿನ ಕರುಣ ಇಲ್ಲೇನ
ಕಪ್ಪನೆ ಕರಿಮಡ್ಯಾಗೆ ನೆಲದ ಭುಂಯಾರದೊಳಗೇನ
ನೆಲದ ಭುಂಯಾರದೊಳಗೇನ ಗುರುವ ರೇವಣಸಿದ್ಧನ
ಗುರುವ ರೇವಣಸಿದ್ಧನ ಕ್ಯಾವಿ ಭಗವಾ ಹಾಕ್ಯಾನ
ಮುಂಗೈಗ ಜೋಳಿಗಿ ಹಾಕ್ಯಾನೆ ರುಂಡಮಾಳಾ ಹಾಕ್ಯಾನ
ರುಂಡಮಾಳಾ ಹಾಕ್ಯಾನೆ ಗುಂಡಮಣಿಗೋಳು ಹಾಕ್ಯಾನ
ರುಂಡಮಾಳಾ ಹಾಕ್ಯಾನೆ ಗುಂಡಮಣಿಗೋಳು ಹಾಕ್ಯಾನ
ಲ್ಯಾವಿದಂಡಕೋಲ ಹಿಡದಾನೆ ಮುಂಗೈಗ ಜೋಳಗಿ ಹಾಕ್ಯಾನ
ಹೊಕ್ಕಳಗಂಟಿ ಕಟ್ಯ್ಯಾನೆ ಮುಳ್ಳ ಆಂವಿಗಿ ಹಾಕ್ಯಾನ
ನೆಲದ ಭುಂಯಾರ ಬಿಟ್ಟಾನೆ ಏಳಗಜದ ಕಲ್ಲೇನ
ಏಳಗಜದ ಕಲ್ಲೇನ ಈಡಬಾಗಲ ಮಾಡ್ಯಾನ
ರಾಯಿಮಾರಗ ಹಿಡದಾನೆ ಎಲ್ಲಿಗ ಬರುತಾನೇನಯ್ಯ
ಅಲ್ಲ್ಯಾನ ಇಲ್ಲ್ಯಾನೇನೆ ಸೊನ್ನಲಗಿರಿಯ ಒಳಗೇನ
ಸೊನ್ನಲಗಿರಿಯ ಒಳಗೇನ ತಂದೇಳ ಮುದ್ದಗೌಡನ
ತಂದೇಳ ಮುದ್ದಗೌಡನ ಮನಿಗಿ ಗುರುವ ರೇವಣಸಿದ್ದನ

ಗುರುವ ರೇವಣಸಿದ್ದನೆ ಮನಿಗಿ ಬರುವುತಾನೇನ
ತಾಯೇಳ ಸುಗಲವ್ವನ ಗುರುವಿಗ ನೋಡುತಾಳೇನ
ಗುರುವಿನ ನೋಡುತಾಳೇನೆ ತುಂಬಿದ ಕೊಡದ ನೀರೇನ
ತುಂಬಿದ ಕೊಡದ ನೀರೇನೆ ಪಾದ ತೊಳಿಯುತಾಳೇನ
ತಂದೇಳ ಮುದ್ದುಗೌಡನೇ ತಾಯೇಳ ಸುಗಲವ್ವನ
ತಾಯೇಳ ಸುಗಲವ್ವನ ಸೀತಾಳ ಮುಗಿಯುತಾಳೇನ
ಗುರುವ ಬಂದಾನಂದಾರೆ ಕುಂದ್ರು ಮನ್ನುಣಿ ಮಾಡ್ಯಾರ
ಕುಂದಲ ಹಚ್ಚಿದ ಮಣಿಯ ಚೌಕಿ ತಾವಂದು ಮನ್ನುಣಿ ಮಾಡ್ಯಾರ
ಗುರುವ ರೇವಣಸಿದ್ದನೆ ತಾವಂದು ಮೂರುತಿ ಆದಾನ
ಗುರುವ ಬಂದನಂದಾನೆ ಅಡಗೀಯ ಸಿಂಗಾರ ಮಾಡ್ಯಾರೆ
ಗುರುವ ರೇವಣಸಿದ್ದನೆ ನುಡದಾನೆ ಮಾತಾಡ್ಯಾನ
ನುಡದಾನೆ ಮಾತಾಡ್ಯಾನೆ ಮಕ್ಕಳಿಲ್ಲದ ಮನಿಯಾಗ
ಮಕ್ಕಳಿಲ್ಲದ ಮನಿಯಾಗೆ ಊಟ ಮಾಡದಿಲ್ಲೇನ
ಜಗವೆಂದು ಮಾತಾನಾಡ್ಯಾರೆ ನೀನೊಂದು ಮಾತನಾಡಿದೆ
ನೀ ಕೊಡದ ಮಕ್ಕಳ ಎಲ್ಲಿಂದ ಬರುತಾವಂದರ
ಪರವನಿಲ್ಲದ ಗುರುವೇನ ವರವನಿಲ್ಲದ ಗುರುವೇನ
ಪರವನಿಲ್ಲದ ಗುರುವಿಗ ಏನಂಗು ಮಾತನಾಡ್ಯಾರ
ಒಳ್ಳೆದು ಒಳ್ಳೆದಂದಾರೆ ಗುರುವ ರೇವಣಸಿದ್ದನ
ಗುರುವ ರೇವಣಸಿದ್ದನೆ ಸೀತಾಳ ಕೊಡುವುತಾನೇನ
ಇಂದಿನ ದಿನಮಾನಿಲ್ಲೇನ ಮುಂದಿನ ದಿನಮಾನಿಲ್ಲೇನ
ಇಂದೇ ಪಾರಗೋಳು ಕೊಟ್ಟೇನೆ ದಿನಮಾನ ಎಣಸಾನೆ ಅಂದಾನ
ನಿದ್ಯಂದ ಮಾತೊಂದು ಆಡ್ಯಾರೆ ಕುಂದ್ಯಾದ ಮಾತೊಂದು ಆಡ್ಯಾರ
ನೀವಂದು ಮಾತನಾಡಿರೆ ಮನಸಿಗ ಬಡದಾವಂದಾನ
ಮನಸಿಗ ಬಡದಿಲ್ಲಂದಾರೆ ಮುಪ್ಪಿನವರಾದೇವ
ಮುಪ್ಪಿನವರ ಆದೇವ ಮಕ್ಕಳು ಹ್ಯಾಂಗ ಆದಾವ
ಟೊಂಕಿಗ ಸೆರಗ ಸುತ್ತಿವೆ ಲ್ಯಾವಿದಂಡಕೋಲ ಹಿಡದೀವೆ
ನಡುವಿಗ ನಡಕಟ್ಟ ಸುತ್ತೀವೆ ಲ್ಯಾವಿದಂಡಕೋಲ ಹಿಡಿದೀವೆ
ಒಳ್ಳೆ ರಾಜನಂದಾರೆ ಒಳ್ಳೆ ಗೌಡನಂದಾರ
ರೈತರಾಣೆರ ಮಕ್ಕಳೆ ಏನಂದಾಡುತ್ತಿದ್ದಾರ
ನಮಗೂ ಮಕ್ಕಳಿಲ್ಲೇಳ ಮಕ್ಕಳ ಕುಡಿಗೋಳು ಇಲ್ಲೇಳ
ಹುಟ್ಟ ಬಂಜಿನಾದೇವ ಎಲ್ಲಿಂದ ಮಕ್ಕಳ ಬರತಾವ
ಗುರುವ ರೇವಣಸಿದ್ದನೆ ನುಡದಾನೆ ಮಾತಾಡ್ಯಾನ
ಇಂದಿನ ದಿನಮಾನಿಲ್ಲೇನೆ ಮುಂದಿನ ದಿನಮಾನಿಲ್ಲೇನ

ಇಂದಿನ ದಿನಮಾನ ಅಲ್ಲ ಸುಗಲವ್ವ ನೀನೆ ಇಳಸಲಿಬೇಕವ್ವ
ಒಂಬತ್ತು ತಿಂಗಳಾದಾವೆ ಒಂಬತ್ತು ದಿನಮಾನಾದವ
ಬಾಣಸ್ತಾನ ಆದಾವೆ ತೊಟ್ಟಲದೊಳಗ ಹಾಕರೆ
ತೊಟ್ಟಿಲದೊಳಗೆ ಹಾಕರೆ ಬಾಣಸ್ತಾನ ಮಾಡರೆ
ನನ್ನ ಧ್ಯಾನ ಮಾಡರೆ ನಾನೇ ಬರತೀನಿ ಅಂದಾನ
ತೊಟ್ಟಿಲದೊಲಗ ಹಾಕಿದರೆ ಹೆಸರ ನಾವೇ ಕರದೇವ
ಹೆಸರ ನಾವೇ ಕರದೇವೆ ಊಟ ನಾವು ಮಾಡೇವ
ತಾಯೇಳ ಸುಗಲವ್ವನ ತಂದೇಳ ಮುದ್ದುಗೌಡಗ
ತಂದೇಳ ಮುದ್ದುಗೌಡಗ ಫಲಗೋಳು ಕೊಟ್ಟು ನಡದಾನ
ಹನ್ನೆರಡು ಹನ್ನೆರಡು ವರ್ಷೇನ ಇಪ್ಪತನಾಲ್ಕು ವರ್ಷನ
ಇಪ್ಪತ್ತನಾಲ್ಕು ವರ್ಷಿನ ವಯಾ ಸುಗಲವ್ವಗ ಕೊಟ್ಟೇನಂದಾನ
ಮೂವತ್ತು ವರ್ಷಿನ ವಯಾ ಮುದ್ದುಗೌಡಗ ಕೊಟ್ಟೇನಂದಾರ
ನಿಮ್ಮ ಮನಕನಲ್ಲೇಳ ಮೂವತ್ತು ವರ್ಷ ವಯಸ್ಸ
ನಿಮ್ಮ ಆತ್ಮಕಲ್ಲೇಳ ಇಪ್ಪತ್ತೈದ ವಯಸ್ಸ
ರೈತರಾಣೆರ ಮಕ್ಕಳಿಗೆ ಮುಪ್ಪಿನವರ ಕಂಡೀರೆ
ಒಳ್ಳೆದು ಒಳ್ಳೇದಂದಾನೆ ಮಂಡಿಲಿ ಹಸ್ತ ಇಟ್ಟಾನ
ಮಂಡಿಲಿ ಹಸ್ತ ಇಟ್ಟಾನೆ ಹೋಗಿ ಬರತೀನಿ ಅಂದಾನ
ಸೊನ್ನಲಗಿರಿಯಾ ಬಿಟ್ಟಾನೆ ರಾಯಿಮಾರಗ ಹಿಡದಾನ
ಇಳದಲ್ಲಿ ಇಳಿಗಾಳೇನ ಸುಳದಲಿ ಸುಳಿಗಾಳೇನ
ಗಾಳಿಕ್ಕಿಂತ ಮುಂದೇನ ಪರಮಾಳದ ಗಾಳಿನಾದನ
ಹೋಗುತ ಹೋಗುತಲ್ಲೇಳ ಕಪ್ಪನೆ ಕರಿಮಡ್ಡಿಗೆ
ಕಪ್ಪನೆ ಕರಿಮಡ್ಯಾಗೆ ನೆಲದ ಭುಂಯಾರದೊಳಗೇನ
ಈಡ ಬಾಗಲ ತೆರದಾನೆ ಗವಿಯ ಒಳಗ ಹೋಗ್ಯಾನ
ಮುದ್ದಪ್ಪ ಸುಗಲವ್ವಗೆ ಏನಂದಾಡುತ್ತಿದ್ದಾನ
ಸೊನ್ನಲಗಿರಿಯ ಒಳಗೇನ ಗೌಡಕಿ ನಮ್ಮದಿದ್ದಾವೆ
ಗೌಡಕಿ ನಮ್ಮದಿದ್ದಾವೇ ರಾಜಕಿ ನಮ್ಮದಿದ್ದಾವೆ
ಟೊಂಕ ಬಾಗಿ ನಡದಾರೆ ಬೆನ್ನ ಬಾಗಿ ನಡದಾರ
ವಯಸ್ಸ ಬದಲನಾದವೆ ದಾರಿ ನಡಿಯುತಾರೇನ
ರೈತರಾಣೆರ ಮಕ್ಕಳೆ ನುಡದಾರೆ ಮಾತಾಡ್ಯಾರ
ನಮ್ಮಗ ನೋಡದಕಲ್ಲೇಳ ಮುಪ್ಪಿನವರ ಕಂಡಾರ
ಲ್ಯಾವಿದಂಡಕೋಲ ಬಿಟ್ಟಾರೆ ನಡವಿಗ ಸೆರಗ ಬಿಟ್ಟಾರ
ನಡಕಟ್ಟ ಬಿಡುವುತಾರೇನೆ ಲ್ಯಾವಿದಂಡಕೋಲ ಬಿಟ್ಟಾರ
ಒಂದಾ ತಿಂಗಳಾದಾವೆ ಎರಡ ತಿಂಗಳಾದಾವ

ಮೂರು ತಿಂಗಳಾದವೇ ತಾಯೇಳ ಸುಗಲವ್ವಗ
ತಾಯೇಳ ಸುಗಲವ್ವನ ಮೊದಲಿನ ಅವುತಾರ ತಾಳ್ಯಾಳ
ಮೈಯ ತುಂಬುತಾವೇನ ಕೈಯ ತುಂಬುತಾವೇನೆ
ಅವುತಾರ ಹೋಗುತಾವೆನ ಹೆಂತಾ ಅವುತಾರ ಬಂದಾವ
ಅತ್ತಿಯ ಮನಿಯ ಸೊಸ್ತೇರಿಗೆ ತೌರಮನಿಯ ಹೆಣ್ಣುಮಕ್ಕಳಿಗೆ
ದೇವರ ಕೊಟ್ಟಾನಂದಾರೆ ಸಂಬಾ ಕೊಟ್ಟಾನಂದಾರ
ರೈತರಾಣ್ಯಾರ ಮಕ್ಕಳೆ ಏನಂದಾಡುತಾರೇನ
ದೇವರು ಕೊಟ್ಟಾನಂದಾರೆ ಮುಪ್ಪಿಗಾದಾವಂದರ
ಮುಪ್ಪಿನ ವಯಸ್ಸುದಾಗೇನ ತಾಯೇಳ ಸುಗಲವ್ವಗ
ಬುತ್ತಿ ತರುವುತಾರೇನ ಬಾನಾ ತರವುತಾರೇನ
ರೈತ ರಾಣೆರ ಮಕ್ಕಳ ತಾಯೇಳ ಸುಗಲವ್ವಗ
ಎಳ್ಳು ಹಚ್ಚಿದ ರೊಟ್ಟೇನ ಎಣ್ಣಿ ಬದನಿಕಾಯೇನ
ಎಣ್ಣಿ ಬದನಿಕಾಯೇನ ಮಸರಬಾನದ ಬುತ್ತೇನ
ಹಪ್ಪಳ ಸಂಡಿಗೆ ತಂದಾರೆ ಉಪ್ಪಿನಕಾಯಿ ತಂದಾರ
ತಾಯೇಳ ಸುಗಲವ್ವನ ಬುತ್ತಿ ಬರುವುತಾರೇನ
ನಾಲ್ಕು ತಿಂಗಳಾದಾವೆ ಒಂಬತ್ತು ತಿಂಗಳಾದವೆ
ಒಂಬತ್ತು ದಿನಾಮಾನಾದಾವ ಒಂಬತ್ತು ತಾಸನಾದವ
ದಿನಮಾನ ಎಣಸುತಾರೇನ ದೇವರು ಕೊಟ್ಟೇದಂದಾರ
ರೈತರಾಣೆರ ಮಕ್ಕಳೆ ಅತ್ತಿಯ ಮನಿಯ ಸೊಸ್ತೇರ
ನೆರಿಬಂದ ಗುರುಹಿರಿಯರ ಸೂಲಗಿತ್ತಿ ಸುಬ್ಬವ್ವ
ನಡುವ ಹಿಡಿಯ ನಾಗವ್ವ ಸುದ್ದಿ ವೈಯ್ಯಾ ಸಿದ್ದವ್ವ
ಮೂರು ಮಂದಿ ಬಂದಾರೆ ಮುಂದ ನಿಂದ್ರುತಾರೇನ
ನೀರ ಕಾಸುತಾರೇನ ತಾಯಿಗ ಹಾಕುತಾರೇನ
ಸುಗಲವ್ವ ತಾಯಿಗಲ್ಲೇಳ ಬಾಣಸ್ತಾನ ನೋಡವ್ವ
ಹಿಂದ ಕುಂದ್ರುತಾರೇನ ಮುಂದ ಕುಂದ್ರುತಾರೇನ
ಸಾಯಿತೇನ ಹಡದವ್ವ ತಾಯಿನ ಕಾಣದವರವ್ವ
ಅಕ್ಕನ ಕಾಣದವರವ್ವ ತಂಗಿನ ಕಾಣದವರವ್ವ
ನಾವೇ ಮುಪ್ಪಿನವರವ್ವ ದೇವರ ಕೊಟ್ಟಾನಂದಾರ
ದೇವರ ಧ್ಯಾನ ಮಾಡ್ಯಾರೆ ತಾಯೇಳ ಸುಗಲವ್ವಗ
ಕೊಡುವದಕ್ಕೆಲ್ಲ ಕೊಟ್ಟೇನೆ ಕಣ್ಣ ತೆರಿಯಲಿಬೇಕಯ್ಯ
ಸಂಬಾ ಕಣ್ಣ ತೆರದಾನೆ ಶಿವನು ಕಣ್ಣು ತೆರದಾನ
ಶಿವನು ಕಣ್ಣ ತೆರದಾನ ತಾಯೇಳ ಸುಗಲವ್ವಗ
ತಾಯೇಳ ಸುಗಲವ್ವನೆ ಗಂಡಸ ಮಗನೆ ಹಡದಾಳ

ಸೊನ್ನಲಗಿರಿಯ ಪಟ್ಟಣಕ ರಾಜಾ ಹುಟ್ಯಾನಂದಾರ
ರಾಜಾ ಹುಟ್ಯಾನಂದಾರ ಗೌಡ ಹುಟ್ಯಾನಂದಾರ
ಗೌಡ ಹುಟ್ಯಾನಂದಾರೆ ದೇಸಾಯಿ ಹುಟ್ಯಾನಂದಾರ
ಹಕ್ಕು ನಿಂದೇನಾದಾವೆ ದಕ್ಕು ನಿಂದೇನಾದವ
ಸೊನ್ನಲಪೂರಕಲ್ಲೇಳ ಅಧಿಪತಿ ಆದಾನಂದಾರ
ದೇವರ ಕೊಟ್ಟನಂದಾರೆ ಜ್ವಾಕಿನಾಗುತಾರೇನ
ರೈತರಾಣ್ಯಾರ ಮಕ್ಕಳ ಬಾಣಸ್ತಾನ ಮಾಡ್ಯಾರ
ಎಂಟು ದಿನಗೋಳು ಆದಾವೆ ಒಂಬತ್ತು ದಿನಗೋಳ ಆದಾವ
ಹನ್ನೊಂದು ದಿನದ ಒಳಗೇನ ಬಣ್ಣದ ತೊಟ್ಟಿಲ ತಂದಾರ
ನಡುಮನಿ ಪಡಸಾಲಿ ಒಳಗೇನ ತೊಟ್ಟಿಲ ಕಟ್ಟುತಾರೇನೆ
ಒಕ್ಕಳ ಹೂರಣಕ ಹಾಕ್ಯಾರ ಊರಿಗೆ ಊಟ ಹೇಳ್ಯಾರ
ತಾಯೇಳ ಸುಗಲವ್ವನೆ ಬಿಂದಗಿ ಕೈಯಾಗ ಹಿಡದಾರ
ವಾರಿಗಿ ನಾರ್ಯಾರಿಗಲ್ಲೇಳ ತಾನೇ ಕರಿಯುತಾಳೇನ
ದೇವರ ನಮಗೆ ಕೊಟ್ಟಾನೆ ಇದೇ ಒಂದ ಅಂದಾಳ
ಎಂದು ಹೋಗಿಲ್ಲಂದಾಳೆ ನಾನೇ ಮಾಡಿಲ್ಲಂದಾಳ
ಮಕ್ಕಳ ಹಡದ ತಾಯಿದೇರ ನಾವೇ ಮರತೀವಿ ಅಂದಾರ
ಕೈಯಾಗ ಬಿಂದಿಗಿ ಹಿಡದಾರ ಕುಂಕುಮ ಚೀಟಿ ತಂದಾರ
ಹಣಿಯಲಿ ಕುಂಕುಮ ತಂದಾರೆ ಹಲ್ಲಿಗಿ ಜಾಚೇಲಿ ತಂದಾರ
ಉತ್ತುತ್ತಿ ಉರಿಗೊಬ್ಬರೆ ಉಡಿಯಕ್ಕಿ ಸಾಮನ ತಂದಾರ
ಅರಬಳ್ಳ ಅರಶಿಣ ತಂದಾರೆ ಕಿರಬಳ್ಳ ಕುಂಕುಮ ತಂದಾರ
ಹರುವ ಕಬ್ಬ ತಂದಾರೆ ಒಡುವ ಟೆಂಗ ತಂದಾರ
ಗುಲಾಬಿ ಹೂಗೋಳು ತಂದಾರೆ ಬಿಳಿಯಾ ಮಲ್ಲಿಗಿ ತಂದಾರ
ನೆನಿಯಕ್ಕಿ ನೆನಿಗಡಲೇನ ಕೊನಿಯೊಂದು ಬಾಳಿ ಹಣ್ಣೇನ
ಕಲ್ಲ ಕಟ್ಟಿದ ಬಾಂಯೇನ ಮಲ್ಲಿಗಿ ಹಚ್ಚಿದ ಸೋಪಾನ
ಮೆಲ್ಲ ಮೆಲ್ಲಕ ಇಳದಾರ ಗಂಗಿ ಪೂಜಿಗೆ ನಿಂತಾರ
ಪಾದಕ ನೀರ ಬಡದಾವೆ ಪೈರಿಗೆ ಬಡಿಯುತಾವೇನ
ಪೈರಿಗ ಹೊಡಿಯುತಾರೇನ ಅರಬಳ್ಳ ಅರಶಿಣ ಹಚ್ಯಾರ
ಅರಬಳ್ಳ ಅರಶಿಣ ಹಚ್ಯಾರೆ ಕಿರಬಳ್ಳ ಕುಂಕುಮ ಹಚ್ಯಾರ
ಉತ್ತುತ್ತಿ ಉರಿಗೊಬ್ಬರೆ ಉಡಿಯಕ್ಕಿ ಸಾಮನಿಟ್ಟಾರ
ಕಡುವ ಕಬ್ಬ ಇಟ್ಟಾರೆ ಒಡುವ ಟೆಂಗ ಇಟ್ಟಾರ
ಉತ್ತುತ್ತಿ ಉರಿಗೊಬ್ಬರೆ ಉಡಿಯಯಕ್ಕಿ ಸಾಮನ ತುಂಬ್ಯಾರ
ನೆನಿಯಕ್ಕಿ ನೆನಿಗಡಲೇನ ಕೊನಿಯೊಂದು ಬಾಳಿ ಹಣ್ಣೇನ
ಕೊನಿಯ ಬಾಳಿ ಹಣ್ಣೇನ ಚಲುವ ಬಾಳಿ ಹಣ್ಣೇನ

ತಾಯೇಳ ಸುಗಲವ್ವನ ಗಂಗಿ ಪೂಜಿ ಮಾಡ್ಯಾಳ
ಗಂಗಿ ಪೂಜಿ ಮಾಡ್ಯಾಳೆ ಗೌರಿ ಪೂಜಿ ಮಾಡ್ಯಾಳ
ಗಂಗಿನ ಮಿನದಾಳೇನಪ್ಪ ಗೌರಿನ ಮಿನದಾಳೇನಯ್ಯ
ಬಿಂದಗಿ ಪೂಜಿ ಮಾಡ್ಯಾಳೆ ಬಾಗಿಸಿ ತುಂಬುತಾಳೇನ
ತಾಯೇಳ ಸುಗಲವ್ವನ ಬಿಂದಗಿ ಹೆಗಲ ಮ್ಯಾಲೇನ
ಮೆಲ್ಲ ಮೆಲ್ಲನ ಏರ್‍ಯಾಳೆ ರಾಯಿಮಾರಗ ಹಿಡದಾಳ
ಅಲ್ಲ್ಯಾಳ ಇಲ್ಲ್ಯಾಳೇನ ಎಲ್ಲಿಗ ಬರುವುತಾಳೇನ
ರಾಯರ ಓಣಿಲಿ ಹಾಯ್ದಳೆ ರಡ್ಡೇರ ಮನಿಯ ಮುಂದೇನ
ಚಂದನ ಚಾವುಡಿಲಿ ಹಾಯ್ದಳೆ ಮಂದನ ಮಳಗೀಯ ಮುಂದೇನ
ರಾಜಾವಾಡದ ಮುಂದೇನ ತಮ್ಮ ಮನಿಗ ಬಂದಾಳ
ತಮ್ಮ ಮನಿಗೆ ಬಂದಾಳೆ ಲ್ಯಾಯದ ಪಡಸಾಲಿ ಒಳಗೇನ
ಲ್ಯಾಯದ ಪಡಸಾಲಿ ಒಳಗೇನ ತೊಟ್ಟಲ ಬುಡಕೆ ಇಳುವ್ಯಾಳೆ
ತೊಟ್ಟಿಲ ಬುಡಕೆ ಇಳುವ್ಯಾಲೆ ತಾಯಿ ಕುಂದ್ರುತಾಳೇನ
ಕುಬಸ ಮಾಡುತಾರೇನ ಮುತ್ತ ಮಾಡುತಾರೇನ
ಮುತ್ತ ಮಾಡುತಾರೇನ ಕುಬಸದ ಗಳಗಿ ಮಾಡ್ಯಾರ
ಒಕ್ಕಳ ಗುಗ್ಗರಿ ಹಾಕ್ಯಾರೆ ಗುಗ್ಗರಿ ಬೀರುತಾರೇನ
ಮುದ್ದವ್ವ ಸುಗಲವ್ವನ ಏನಂದಾಡುತಾರೇನ
ಮುದ್ದಗೊಂಡನಲ್ಲೇಳ ಗುರುವಿನ ಧ್ಯಾನ ಮಾಡ್ಯಾನ
ಕಪ್ಪನ ಕರಿಮಡ್ಡ್ಯಾಗ ಗುರುವ ರೇವಣಸಿದ್ದನ
ಹೊಕ್ಕಳಗಂಟಿ ಕಟ್ಯಾನೆ ಮಳಕಾಲಜಂಗ ಕಟ್ಯಾನ
ಲ್ಯಾವಿದಂಡಕೋಲ ಹಿಡದಾನೆ ಕ್ಯಾವಿಭಗವಾ ಹಾಕ್ಯಾನ
ರುಂಡಮಣಿಗೋಳು ಹಾಕ್ಯಾನ ಗುಂಡಮಣಿಗೋಳು ಹಾಕ್ಯಾನ
ಕೈಯಾಗ ತ್ರೀಸೂಲ ಹಿಡದಾನ ಗುಂಡ ಬುಗರಿ ಹಿಡದಾನ
ಮುಳ್ಳಾವಿಗಿ ಹಾಕ್ಯಾನ ಕೈಯಾಗ ಜೋಳಗಿ ಹಿಡದಾನ
ಹೊನ್ನಹೊಸ್ತುಲ ಧಾಟ್ಯಾನೆ ಏಳ ಗಜದ ಕಲ್ಲೇನ
ಏಳ ಗಜದ ಕಲ್ಲೇನ ಮಾಮುರಿ ಮಾಡುತಾನೇನ
ಇಳದಲ್ಲಿ ಇಳಿಗಾಳೇನ ಸುಳದಲ್ಲಿ ಸುಳಿಗಾಳೇನ
ಗಾಳಿಕ್ಕಿಂತ ಮುಂದೇನ ಪರಮಾಳದ ಗಾಳಿನಾದಾವ
ಅಲ್ಲ್ಯಾನ ಇಲ್ಲ್ಯಾನೇನ ಸೊನ್ನಲಪುರದ ಒಳಗೇನ
ಸೊನ್ನಲಪುರದ ಒಳಗೇನ ರಾಯರ ಓಣಿಲಿ ಬಂದಾನ
ರಡ್ಡೇರ ಮನಿಯ ಮುಂದೇನ ರಾಜಾವಾಡಕ ಬಂದಾನ
ರಾಜಾವಾಡಕ ಬಂದಾನೆ ಲ್ಯಾಯದ ಪಡಸಾಲಿ ಒಳಗೇನ
ಲ್ಯಾಯದ ಪಡಸಾಲಿ ಒಳಗೇನ ಗುರುವಿನಪಾದ ತೊಳದಾರ

ಗುರುವಿನ ಪಾದತೋಳದಾರೆ ಪಾದ ಧೂಳ ಹೊಡದಾರ
ತೊಟ್ಟಿಲ ಬಲ್ಲಿ ಬಂದಾನ ರೈತರಾಣೇರ ಮಕ್ಕಳ
ಸೊನ್ನಲಪುರಕಲ್ಲೇಳ ಅಧಿಪತಿ ಅಂತ ಕೂಗ್ಯಾರ
ಅಧಿಪತಿ ಅಂತ ಕೂಗ್ಯಾರೆ ರಾಜ್ಯಾನಂತ ಕೂಗ್ಯಾರ
ದೇಸಾಯಿನಂತ ಕೂಗ್ಯಾರೆ ಗೌಡನಂತ ಕೂಗ್ಯಾರ
ಮಲ್ಲಿಕಾರ್ಜುನ ಮಾದೇವನಂತ ಹೆಸರ ಕರಿಯುತಾರೇನ
ಸಿದ್ಧರಾಮನಂದಾರೆ ಕಲಿಯ ಯೋಗದೊಳಗೇನ
ಜೋ ಜೋ ಅನುವುತಾರೇನ ಜೋಗಳ ಹಾಡುತಾರೇನ
ಜೋಗುಳ ಹಾಡುತಾರೇನ ಸಿದ್ದರಾಮನಂದಾರ
ಸಿದ್ಧರಾಮನಂದಾರ ಗುಗ್ಗರಿ ಬೀರುತಾರೇನ
ಹೊಕ್ಕಳ ಗುಗ್ಗರಿ ಬೀರ್‍ಯಾರೆ ಊಟ ಹೇಳುತಾರೇನ
ಊಟ ಹೇಳುತಾರೇನ ಬಿನ್ನ ಕೊಡುವುತಾರೇನ
ಬಿನ್ನ ಕೊಡುವುತಾರೇನ ಗುರುವ ರೇವಣಸಿದ್ದನ
ಗುರುವ ರೇವಣಸಿದ್ದನ ಬಿನ್ನ ಹೇಳುತಾನೇನ
ಐವತ್ತೊಂದು ಮಂದಿಗೆ ಬಿನ್ನಾ ಕೊಡಬೇಕಂದಾನ
ತೊಂಬತ್ತೊಂದು ಮಂದಿಗೆ ಬಿನ್ನಾ ಹೇಳುಬೇಕಂದಾನ
ಸರ್ವರೆಲ್ಲ ಕೂಡ್ಯಾರೆ ಊಟ ನಡಸೂತಾರೇನ
ಊಟ ಮಾಡುತಾರೇನ ಹೆಸರ ಕೇಳೂತಾರೇನ
ಹನ್ನೆರಡು ವರ್ಷಿನ ಮಗನೇನ ಮೂಕ ಮಗನ ಕೊಟ್ಟೇನೆ
ಮೂಕ ಮಗನ ಕೊಟ್ಟೇನೆ ಸಿದ್ದರಾಮನಂದಾರ
ಸಿದ್ಧರಾಮನಂದಾರೆ ಊಟ ಮಾಡುತಾರೇನ
ಉಂಡಾರೆ ಭಾಳುಟ್ಟಾರೆ ಬಾಯಿಲಿ ಸೀತಾಳ ಉಗಳ್ಯಾರೆ
ಬಾಯಿಲಿ ಸೀತಾಳ ಉಗಳ್ಯಾರೆ ಊಟ ಮುಗುಸೂತಾರೇನ
ಗುರುವ ರೇವಣಸಿದ್ಧನ ಹೋಗಿ ಬರತೀನಿ ಅಂದಾನ
ತಂದೇಳ ಮುದ್ದುಗೌಡನ ತಾಯೇಳ ಸುಗಲವ್ವನ
ಗುರುವ ರೇವಣಸಿದ್ದಗ ಪಾದಕ ಹೊಂದುತಾರೇನ
ಹೋಗಿ ಬರತೀನಿ ಅಂದಾನೆ ಬೇಗಿ ಬರತೀವಿ ಅಂದಾನ

ಮೂಕ ಮಗನಿಗೆ ಮಾತು ಬರತಾವೆ

ಒಂದಾ ತಿಂಗಳಾದವ ಎರಡ ತಿಂಗಳಾದವ
ಐದ ತಿಂಗಳಾದವೆ ಒಂದು ವರ್ಷನಾದವ
ಮೂರ ವರ್ಷನಾದವ ನಾಲ್ಕು ವರ್ಷನಾದವ

ಐದ ವರ್ಷನಾದವ ಮೂಕ ಮಗನಿದ್ದಾನ
ಮೂಕ ಮಗನಿದ್ದಾನ ಮಾತ ಬರುವುದಿಲ್ಲೇನ
ಐದ ವರ್ಷನಾದಾವೆ ಆರ ವರ್ಷನಾದಾವ
ಎಂಟ ವರ್ಷನಾದಾವ ಏನಂದಾಡುತಾರೇನ
ಸೊನ್ನಲಗಿರಿಯ ಅರಸನ ಸಾಲಿಗ ಹ್ಯಾಂಗ ಕಳಸಲೆ
ಸಾಲಿಗ ಹ್ಯಾಂಗ ಕಳುವಲೆ ಮುದ್ದುಮಗನಿದ್ದಾನ
ಮುದ್ದು ಮಗನ ಇದ್ದಾರ ಸಾಲಿಗ ಹ್ಯಾಂಗ ಹೋದಾನ
ವಾರಿಗ್ಯಾರ ಸಂಗಟ ಎಮ್ಮಿ ಕಾಯಿಲಾಕ ಹೋದನ
ಎಮ್ಮಿ ಕಾಯಲಾಕ ಹೋದನೆ ಎಮ್ಮಿಕಾಯಲಿ ಹೋದಲ್ಲಿ
ವಾರಿಗಿ ಹುಡುಗರಲ್ಲೇಳ ಬೆಂಕಿ ಖೆಂಡ ತಂದಾರ
ಬೆಂಕಿ ಖೆಂಡ ತಂದಾರೆ ತೆಲಗಿ ಇಡುವುತಾರೇನೆ
ಮಾತನಾಡುದಿಲ್ಲೇನೆ ತಾನೇನನುವುದಿಲ್ಲೇನ
ಇಟ್ಟ ಬೆಂಕಿನಲ್ಲೇಳ ತಾಂವೇ ತಗದಾರೇನಯ್ಯ
ಹತ್ತು ವರ್ಷನಾದವ ಹನ್ನೊಂದು ವರ್ಷಿನವನೇನ
ಬಾರೋ ಬಾರೋ ನಮ್ಮಪ್ಪ ನಂದೊಂದು ಮಾತಕೇಳಯ್ಯ
ಬಾರೋ ಬಾರೋ ಸಿದ್ಧರಾಮ ನಿಮ್ಮ ಮನಿಯ ಒಳಗೇನ
ನಿಮ್ಮ ಮನಿಯ ಒಳಗೇನ ಎಳ್ಳು ಕೊಡಬೇಕಂದಾರ
ಎಳ್ಳ ಕೊಡಬೇಕಂದಾರ ನಾವು ಎಳ್ಳು ತಿನ್ನಬೇಕಂದಾರ
ಕೈಯಾಗ ಬಡಗಿ ಹಿಡದಿದ್ದ ಮುಂದನಾಗುತಾನೇನ
ಮುಂದನಾಗುತಾನೇನ ಹಿಂದ ಹೋಗುತಾರೇನ
ಸೊನ್ನಲಗಿರಿಯ ಒಳಗೇನೆ ಸಿದ್ಧರಾಮ ಬಂದಾನ
ಸಿದ್ಧರಾಮನಲ್ಲೇಳ ಒಳಿಯಾಕ ಬರುವುತಾನೇನ
ತಾಯೇಳ ಸುಗಲವ್ವನ ಎಳ್ಳಿನ ಗಡಗಿ ನೆಲಿಮ್ಯಾಲ
ಎಳ್ಳಿನ ಗಡಗಿ ನೆಲಿಮ್ಯಾಲೆ ತುಂಬಿ ಇಡುವುತಾಳೇನ
ತುಂಬಿದ ಗಡಗಿಗ ಸಿದ್ಧರಾಮ ಕ್ಷಣದಾಗ ತೂತ ಹಾಕ್ಯಾನ
ವಾರಿಗಿ ಹುಡುಗರಲ್ಲೇಳ ಅಂಗಿ ಒಡ್ಡುತಾರೇನ
ಮನುಷಗ ಒಂದಾ ಅಂಗೇನ ತುಂಬಿಕೊಂಡು ಬಂದಾರ
ಉಡಿಯಾಗ ಎಳ್ಳ ತುಂಬ್ಯಾರೆ ಓಡಿ ಹೋಗುತಾರೇನ
ವಾರಿಗಿ ಹುಡುಗರ ಸಂಗಟ ಸಿದ್ಧರಾಮ ಹೋಗ್ಯಾನ
ಅಂಗಿಯ ಒಡ್ಡಿನಿಂತಾನ ಉಡಿಯಾಗ ಎಳ್ಳು ಬಿದ್ದಾವ
ಉಡಿಯಾಗ ಎಳ್ಳು ಬಿದ್ದಾವ ಕೈಯಾಗ ಬಡಗಿ ಹಿಡದಾನ
ಕೈಯಾಗ ಬಡಗಿ ಹಿಡದಾನೆ ಗಡಗಿ ತಳಕ ಬಡಸ್ಯಾನ
ಜೆಲ್ಲಿಯಾ ಬಂದನಾಗ್ಯಾವೆ ಎಳ್ಳು ಒಳಗೆ ಉಳದಾವ

ವಾರಿಗಿ ಹುಡುಗರ ಸಂಗಟ ತಾನು ಓಡಿ ಬಂದಾನ
ಕೆರಿಯ ಒಳಗೇ ಬಂದಾರೆ ಎಮ್ಮಿ ಕಾಯುತ್ತಿದ್ದಾರ
ಮಾತ ಬಾರದ ಸಿದ್ಧರಾಮ ಎಳ್ಳ ನಮಗ ತಿನಸ್ಯಾನ
ಎಳ್ಳು ನಮಗೆ ತಿನಸ್ಯಾನೆ ಮಾತ ಇವನಿಗ ಬರತಾವ
ಮಾತ ಇವನಿಗ ಬರತಾವೆಂದು ಎಳ್ಳು ತಿನುವುತಾರೇನ
ಎಳ್ಳು ತಿನವುತಾರೇನ ಹೊತ್ತನೆ ಹೊಡಮುಳ್ಯಾವ
ಮನಿಗಿ ಹೋಗುತಾರೇನ ಎಮ್ಮಿ ಕಟ್ಟುತಾರೇನ
ವಾರಿಗಿ ಹುಡುಗರಲ್ಲಪ್ಪ ತಮ್ಮ ತಮ್ಮ ಮನಿಯಾಗ
ತಮ್ಮ ತಮ್ಮ ಮನಿಯಾಗೆ ತಾಯಿ ತಂದಿಗ ಹೇಳ್ಯಾರ
ಸಿದ್ಧರಾಮಗಲ್ಲೇಳ ನಾವು ಗಮ್ಮತ ಮಾಡಿವಿ ಅಂದಾರ
ಬಾರೋ ಬಾರೋ ಸಿದ್ಧರಾಮ ಎಳ್ಳ ತಿನುವಂಗಾದವ
ಬಡಗಿ ತೊಗೊಂಡಲ್ಲಪ್ಪ ಮುಂದನಾಗುತಾನೇನ
ಮನಿಗಿ ಬರವುತಾನೇನ ನೆಲಿಯ ಮ್ಯಾಲಿನ ಗಡಗೇನ
ನೆಲಿಯ ಮ್ಯಾಲಿನ ಗಡಗೀಗೆಲ್ಲ ತಳದಾಗ ತೂತ ಹಾಕ್ಯಾನ
ಅಂಗಿ ಒಡ್ಡಿ ನಿಂತೇವ ಉಡಿಯಾಗ ಎಳ್ಳ ಬಿದ್ದಾವ
ಉಡಿಯಾ ತುಂಬಿಕೊಂಡೇವೆ ಹೊರಗ ಓಡಿ ಹೋದೇವ
ಹತ್ತೆಂಟು ಮಂದಿ ಹುಡುಗರೆ ಎಳ್ಳ ತಂದಿವಿ ಅಂದಾರ
ಸಿದ್ಧರಾಮನಲ್ಲೇಳ ಅವನು ತರುವುತಾನೇನ
ಎಲ್ಲರೂ ಕೂಡಿವಿ ಅಂದಾರೆ ಎಳ್ಳ ತಿಂದೀವಂದಾರ
ಅಂದಿನ ದಿನಮಾನಲ್ಲೇಳ ನಮ್ಮತಾಯಿ ತಂದಿನ
ಮೂರ ದಿನದ ಮ್ಯಾಲೇನ ಎಮ್ಮಿ ಹೊಡಕೊಂಡು ಬಂದಾರ
ಸಿದ್ಧರಾಮನ ಮನಿಯಾ ಮುಂದ ಎಮ್ಮಿ ಹೊಡಕೊಂಡು ಬಂದಾರ
ತಾಯೇಳ ಸುಗಲವ್ವನ ಹುಡುಗರಿಗ ಹೇಳುತಾಳೇನ
ಸಿದ್ಧರಾಮಗಲ್ಲಪ್ಪ ಬಹಳ ಕರಕೊಂಡು ಕಾಯಿಬೇಕ
ಶಾಣ್ಯಾ ಹಾನೇಳಂದಾರೆ ಇವನಿಗ ಮಾತ ಬರತಾವಂದಾರ
ಹಂತ ಮಾತನಲ್ಲಪ್ಪ ನಿಮ್ಮಗ್ಯಾಂಗೆ ತಿಳದಾವ
ವಾರಿಗಿ ಹುಡುಗರಲಪ್ಪ ಬಾಯನ ಮಾತ ಹೇಳ್ಯಾರ
ಎಳ್ಳು ತಿನುವಂಗಾದಾವೆ ಎಳ್ಳು ಕುಡಬೇಕಂದೇವ
ಬಡಗಿ ತೊಗೊಂಡಲ್ಲವ್ವ ಮನಿಗಿ ಬರುವುತಾನೇನ
ಸಿದ್ದರಾಮನ ಬೆನ್ನ ಹಿಂದ ನಾವೆ ಬಂದೀವಿ ಅಂದಾರ
ನಾವೆ ಮನಿಗಿ ಬಂದೇವೆ ನೀನೆ ಹೊರಗ ಹೋಗಿದ್ದೆ
ಸಿದ್ಧರಾಮ ನೋಡವ್ವ ಎಳ್ಳ ಗಡಗಿ ತಳದಾಗ
ತಳದಾಗ ತೂತ ಹಾಕ್ಯಾನೆ ಎಳ್ಳಾ ತೆಳಗ ಚೆಲ್ಯಾವ

ಅಂಗಿ ನಾವು ಒಡ್ಡೇವೆ ಮನುಷ್ಯಗೊಂದಾ ಉಡಿಯೇನ
ನಮ್ಮ ಉಡಿಯಾ ಒಳಗವ್ವ ಎಳ್ಳ ಕಳವ ಮಾಡೇವ
ಬಾರೋ ಬಾರೋ ಏಯವ್ವ ನೀನೆ ಬೈಯಲಿ ಬ್ಯಾಡಪ್ಪ
ನಿನ್ನ ಮನಿಯ ಒಳಗವ್ವ ಎಳ್ಳ ಕಳವ ಮಾಡೇವ
ಸಿದ್ಧರಾಮನ ಕೈಯದಾಗ ಎಳ್ಳ ವೈಯಿದೀವಿ ಅಂದಾರ
ತಾಯೇಳ ಸುಗಲವ್ವನ ಹಿಗ್ಗಿಲಿ ಮಾತನಾಡ್ಯಾಳ
ಬರಿಯಾ ನನ್ನ ತಮ್ಮದೇರ ಸುಳ್ಳನಾಡಲಿ ಬಾರದ
ಒಬ್ಬರಿದ್ದಾರಲ್ಲೇಳ ಹತ್ತೆಂಟು ಮಂದಿ ಹೇಳ್ಯಾರ
ಹತ್ತೆಂಟು ಮಂದಿ ಹೇಳ್ಯಾರ ಎಮ್ಮಿ ಹೊಡಕೊಂಡು ಹೋದಾರ
ಏನಮ್ಮ ತಾಯಿ ಸುಗಲವ್ವ ಹೊರಳಿ ಮನಿಗೆ ಬಂದಾಳ
ಹೊರಳಿ ಮನಿಗಿ ಬಂದಾಳೆ ಎಳ್ಳ ಗಡಗಿ ನೋಡ್ಯಾಳ
ಎಟ್ಟು ತುಂಬಿದ ಎಳ್ಳೇನ ಅಟ್ಟೇ ಇರುವುತಾವೇನ
ಯಾರಿಗ ನಂಬಲಿ ಅಂದಾಳೆ ಯಾರಿಗ ಕರಿಯಲಿ ಅಂದಾಳ
ಸಿದ್ಧರಾಮನಂದಾರ ಅವರೇ ಮಕ್ಕಳಿದ್ದಾರ
ಮಕ್ಕಳ ಮಾತನಲ್ಲೇಳ ಹ್ಯಾಂಗ ಸುಳ್ಳ ಅನುವಲೇ
ಗುರುವ ರೇವಣ್ಣಸಿದ್ದನೇ ಎಂಥಾ ಮಗನ ಕೊಟ್ಟಿದೆ
ಹನ್ನೆರಡು ವರ್ಷಿನತಾನೇನ ಮೂಕ ಮಗನ ಕೊಟ್ಟೇನ
ಒಳ್ಳೆದು ಒಳ್ಳೆದಂದಾಳೆ ಎಮ್ಮಿ ಬಿಡುವುತಾಳೇನ
ಎಮ್ಮಿ ಬಿಡುವುತಾಳೇನ ಬುತ್ತಿ ಕಟ್ಟುತಾಳೇನ
ವಾರಿಗ ಹುಡುಗರ ಸಂಗಟ ಕೆರಿಯಾಗ ಎಮ್ಮಿ ಬಂದಾವ
ಬಾರಾತಾನ ಕಾಯಿದಾರೆ ಸಿದ್ಧರಾಮಗ ಕರದಾರ
ಬಾರಾ ಬಾರಾ ಸಿದ್ಧರಾಮ ಊಟ ಮಾಡರಿ ಅಂದಾರ
ಊಟ ಮಾಡರಿ ಅಂದಾರ ಹೊರಳಿ ನೋಡುತಾನೇನ
ಕಿಂವಿಯ ಕೇಳುತಾವಂದಾರೋ ಇಂವಗ ಮಾತ ಬರತಾವಂದಾರ
ತಾವೆ ಕರಿಯುತಾರೇನ ಬುತ್ತಿಯ ಗಂಟ ಬಿಚ್ಚ್ಯಾರ
ಬುತ್ತಿಗಂಟ ಬಿಚ್ಚ್ಯಾರೆ ಊಟ ಮಾಡುತಾರೇನ
ಸೀತಾಳ ಮುಗಿಯುತಾರೇನ ಎಮ್ಮಿ ಕಾಯುತಾರೇನ
ಬಾರಾದ ಮ್ಯಾಲ ಎರಡೇನ ಮೂರನಾಗುತಾವೇನ
ಒಂಬತಾಸಿನ ಟೈಮಿಗೆ ಮಲ್ಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವ ನವಣಿ ಹೊಲದಾಗ ಬಂದಾನ
ನವಣಿ ಹೊಲದಾಗ ಬಂದಾನ ಎಮ್ಮಿ ಕಾಯಲಿ ಬಂದಾನ
ಎಮ್ಮಿ ಕಾಯಲಿ ಬಂದಾದರೆ ಸಿದ್ಧರಾಮ ನೋಡ್ಯಾನ
ಸಿದ್ಧರಾಮನಲ್ಲೇಳ ಮಹಾದೇವಗೆ ನೋಡುತಾನೇನ

ಬಡಗಿ ತೆಳಗ ಇಟ್ಟಾನೆ ಪಾದಕ ಹೊಂದುತಾನೇನ
ಪಾದಕ ಹೊಂದುತಾನೇನ ಮಲ್ಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವ ಮಂಡಿಲಿ ಹಸ್ತ ಇಟ್ಟಾನ
ಸಿದ್ಧರಾಮನಂದಾನೆ ಮಲ್ಲಯ್ಯಾ ಕೂಗುತಾನೇನ
ಬಾರೋ ಬಾರೋ ಸಿದ್ದರಾಮ ಮಾರಿಗ ನೀರ ಇಲ್ಲೇನ
ಮೂರ ದಿವಸನಾದಾವೆ ಊಟ ಮಾಡಿಲ್ಲಂದಾನ
ಊಟ ಮಾಡಿಲ್ಲಂದಾನ ಹೊಟ್ಟಿಗ ಹೊಸವನಾದಾವ
ಹ್ಯಾಂಗ ಮಾಡಬೇಕಂದಾನ ಎಲ್ಲಿಗ ಹೋಗಬೇಕಂದಾನ
ಮಲ್ಲಿಕಾರ್ಜುನ ಮಹಾದೇವ ಸಿದ್ದರಾಮನ ಹೇಳ್ಯಾನ
ಬಾರೋ ಬಾರೋ ಸಿದ್ದರಾಮ ಮನಿಗಿ ಹೋಗಲಿಬೇಕಯ್ಯ
ಮನಿಗಿ ಹೋಗಲಿಬೇಕಪ್ಪ ಮಸರ ಬಾನಾದ ಬುತ್ತೇನ
ಮಸರ ಬಾನಾದ ಬುತ್ತೇನ ನೀನೇ ತರಬೇಕಂದಾರ
ಬಾರೋ ಬಾರೋ ಸಿದ್ದರಾಮ ಮನಿಗಿ ಹೋಗಲಿಬೇಕಯ್ಯ
ಮನಿಗಿ ಹೋಗಲಿಬೇಕಪ್ಪ ಮಸರ ಬಾನಾದ ಬುತ್ತೇನ
ಮಸರ ಬಾನಾದ ಬುತ್ತೇನ ನೀನೇ ತರಬೇಕಂದಾರ
ನಾನು ಬರುವತನಕೇನ ಎಮ್ಮಿ ಯಾರು ಕಾಯಿದಾರ
ಎಮ್ಮಿ ಯಾರು ಕಾಯಿದಾರ ನವಣಿ ಹೊಲದಾಗ ಹೋದವ
ಸಿದ್ಧರಾಮಗಲ್ಲೇಳ ಮಹಾದೇವ ಹೇಳುತಾನೇನ
ನೀನು ಬರುತನಕಲ್ಲೇಳ ಎಮ್ಮಿ ಕಾಯಿತೀನಿ ಅಂದಾನ
ಮಸರ ಬಾನಾದ ಬುತ್ತೇನ ನೀನೇ ತರಬೇಕಂದಾನ
ಒಳ್ಳೆದು ಒಳ್ಳೆದಂದಾನ ಸಿದ್ಧರಾಮನಂದಾನ
ಮನಿಗಿ ಹೋಗಿ ಬರತೀನಿ ಬುತ್ತಿ ತರತೀನಿ ಅಂದಾನ
ಬುತ್ತಿ ತರತೀನಿ ಅಂದಾನ ಇಲ್ಲೆ ಇರಬೇಕಂದಾನ
ಸಿದ್ಧರಾಮನಲ್ಲಪ್ಪ ಮನಿಗಿ ಹೋಗುತಾನೇನ
ಮಲ್ಲಿಕಾರ್ಜುನ ಮಹಾದೇವ ಕೆರಿಯಾಗ ಎಮ್ಮಿ ಕಾಯದಾನ
ಸಿದ್ಧರಾಮನ ಧಾರೇನ ಮಹಾದೇವ ನೋಡುತಾನೇನ
ಸಿದ್ಧರಾಮನಲ್ಲೇಳ ಮನಿಗಿ ಹೋಗುತಾನೇನ
ಬಾಗಲ ಬಳಿಗೆ ನಿಂತಾನ ಎವ್ವಾ ಎವ್ವಾನಂತ ಕೂಗ್ಯಾನೆ
ಏ ನನ್ನ ತಾಯಿ ನೀ ಬಾರೋ ಮಸರ ಬಾನಾದ ಬುತ್ತೇನ
ಮಸರ ಬಾನಾದ ಬುತ್ತೇನ ನೀನೇ ಕಟ್ಟಲಿಬೇಕವ್ವ
ಮಾದೇವ ಬರತಾನಂದಾರೆ ಮಲ್ಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವಗ ಬುತ್ತಿ ವೈತೀನಿ ಅಂದಾನ
ತಾಯೇಳ ಸುಗಲವ್ವಗೇ ಮನಸ್ಸು ಆನಂದಾದವ

ಹನ್ನೆರಡು ವರ್ಷದ ಮಗನಿಗೆ ಮಾತ ಬಂದಾವಂದಾಳ
ಹನ್ನೆರಡು ವರ್ಷದಿನಮಾನ ಮೂಕ ಇರುವುತಾನೇನ
ಸಂಬ ಕಣ್ಣಾ ತೆರದಾನೆ ಶಿವನು ಕಣ್ಣ ತೆರದಾನ
ಬಿಳಿಯಾ ಬಟ್ಟಿ ಹರದಾಳೆ ಮಸರ ಬಾನಾದ ಬುತ್ತೇನ
ಮಸರ ಬಾನಾದ ಬುತ್ತೇನ ಕಲಿಸಿ ಕಟ್ಟುತಾಳೇನ
ಸಿದ್ಧಾರಾಮನಪ್ಪ ಬುತ್ತಿ ಕೈಯಾಗ ಹಿಡದಾನ
ಎಡಕಿನ ಕೈಯ ಒಳಗೇನ ಬುತ್ತಿ ಹಿಡಿಯುತಾನೇನ
ಬಲಕಿನ ಕೈಯನಲ್ಲಪ್ಪ ಎತ್ತಿ ಹಿಡಿಯುತಾನೇನ
ಮಲ್ಲಿಕಾರ್ಜುನ ಮಹಾದೇವನ ತಾನೇ ಕರಿಯುತಾನೇನ
ಮಲ್ಲಯ್ಯಂತ ಕೂಗ್ಯಾನೆ ಮಾದೇವಂತ ಕೂಗ್ಯಾನ
ಮಾದೇವಂತ ಕೂಗ್ಯಾನ ಕರಿಯಾಗ ಬರವುತಾನೇನ
ವಾರಿಗಿ ಹುಡುಗರಿಗಲ್ಲೇಳ ತಾನೇ ಕೇಳುತಾನೇನ
ಬರಿಯಾ ನನ್ನ ತಮ್ಮ ದೇರ ಎಮ್ಮಿ ಕಾಯಲಾಕಲ್ಲಪ್ಪ
ಎಮ್ಮಿ ಕಾಯುವದಕಲ್ಲೇಳ ಮಲ್ಲಿಕಾರ್ಜುನ ಮಾದೇವ
ಮನಿಗಿ ಹೋಗಂತೇಳ್ಯಾನ ಬುತ್ತಿ ತರಬೇಕಂದಾನ
ಬುತ್ತಿ ತಂದೀನಿ ಅಂದಾನೆ ಮಲ್ಲಯ್ಯ ಎಲ್ಲಿ ಹಾನಯ್ಯ
ಹುಚ್ಚ ಸೂಳಿ ಮಗನೆ ಹ್ಯಾಂಗ ಬರತಾನಂದಾರ
ಮಲ್ಲಿಕಾರ್ಜುನ ಮಹಾದೇವ ಹ್ಯಾಂಗ ಮಾನುವರ ಕಣ್ಣಿಗ ಬಿದ್ದಾನ
ಮಾನುವರ ಕಣ್ಣಿಗಲ್ಲಪ್ಪ ಹ್ಯಾಂಗ ಬೀಳತಾನಂದರ
ಎಡಗೈ ಎತ್ತಿ ಹಿಡದಾನ ಬಲಗೈ ಎತ್ತಿ ಕೂಗ್ಯಾನ
ಬುತ್ತಿ ಎತ್ತಿ ಹಿಡದಾನ ಬಲಗೈ ಎತ್ತಿ ಕೂಗ್ಯಾನ
ಮಲ್ಲಯ್ಯ ಮಲ್ಲಯ್ಯನಂದಾನೆ ಮಲ್ಲಿಕಾರ್ಜುನಂದಾನ
ಕಾಡಿಗ ಹೋಗುತಾನೇನ ನಾಡಿಗ ಹೋಗುತಾನೇನ
ಹ್ಯಾಂಗ ಮಾಡಲಿ ಅಂದಾನ ಎಲ್ಲಿದೊರಕ್ಯಾನಂದಾನ
ದಾರಿ ಒಳಗ ಬಂದಾರೆ ಮಾನುರ ಕೇಳೂತಾನೇನ
ಮಲ್ಲಿಕಾರ್ಜುನ ಮಹಾದೇವನ ನೀವು ನೋಡಿರೇನಂದಾನ
ಮಲ್ಲಯ್ಯಗ ನೋಡಿರಿ ಅಂದಾನೆ ಮಾದೇವಗ ನೋಡಿರಿ ಅಂದಾನ
ಬಲಗೈ ಎತ್ತಿ ಹಿಡದಾನ ಬಲಗೈ ಬುತ್ತಿ ಹಿಡದಾನ
ಮಲ್ಲಿಕಾರ್ಜುನಂದಾನೆ ಮಾದೇನಂತ ಕೂಗ್ಯಾನ
ಎಡಗೈ ಒಳಗ ಬುತ್ತೇನ ಬಲಗೈ ಎತ್ತಿ ಕೂಗ್ಯಾನ
ಮಲ್ಲಯ್ಯ ಮಲ್ಲಯ್ಯನಂದಾರೆ ಮಲ್ಲಿಕಾರ್ಜುನಂದಾನ
ಮಲ್ಲಿಕಾರ್ಜುನ ಮಾದೇನಂದು ಓ ಎಂಬ ಶಬುದ ಕೂಗ್ಯಾನ
ನಾಡ ನಾಡ ತಿರಗ್ಯಾನೆ ಕಾಡ ಕಾಡ ತಿರಗ್ಯಾನೆ

ಕಾಡ ಕಾಡ ತಿರಗ್ಯಾನೆ ಬೆಟ್ಟಕ ಹೋಗುತಾನೇನ
ಬೆಟ್ಟಕ ಹೋಗುತಾನೇನ ಮಲ್ಲಿಕಾರ್ಜುನ ಮಾದೇವ
ಮಲ್ಲಿಕಾರ್ಜುನ ಮಾದೇವನಂದು ಮಲ್ಲಯ್ಯನೆಂದು ಕೂಗ್ಯಾನ
ಒಂದು ಬೆಟ್ಟ ಏರ್ಯಾನೆ ಎರಡು ಬೆಟ್ಟ ಇಳದಾನ
ಬೆಟ್ಟ ಇಳಿಯುತಾನೇನ ಕೊಳದಾಗ ಹೋಗುತಾನೇನ
ಶ್ರೀಶೈಲ ಬೆಟ್ಟದೊಳಗೇನೆ ಮಲ್ಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವನಂದು ತಾನೇ ಕೂಗೂತಾನೇನ
ದಿಮ್ಮಿ ಕೊಳ್ಳಕ ಹೋಗ್ಯಾನ ಮ್ಯಾಲೆ ಹೋಗಿ ನಿಂತಾನ
ಮಲ್ಲಿಕಾರ್ಜುನ ಮಾದೇವ ಓ ಯೆಂಬ ಶಬುದ ಕೂಗ್ಯಾನ
ಓ ಎಂಬ ಶಬುದ ಕೂಗ್ಯಾನ ನೀವೇ ನೋಡಿರಿ ಅಂದಾನ
ನೀವೇ ನೋಡಿರಿ ಅಂದಾನೆ ಎಲ್ಲಿಗ ಹೋಗ್ಯಾರಂದಾನ
ಹ್ಯಾಂಗ ಮಾಡಲಿ ಅಂದಾನೆ ಬುತ್ತಿ ಯಾರು ಉಂಡಾರ
ಯಾವಾಗ ಉಂಡಿದಿ ಅಂದಾನ ಎಲ್ಲಿಂದ ಬಂದಿದಿ ಅಂದಾನ
ಉಣಸುತಾನಕಲ್ಲೇಳ ನಾನೇ ಬಿಡುದಿಲ್ಲಂದಾನ
ಊಟ ಮಾಡುತಾನಕೇನ ನಾನೇ ಬಿಡವದಿಲ್ಲಯ್ಯ
ಎಡಗೈಯ ಒಳಗ ಬುತ್ತೇನೆ ಬಲಗೈಯ ಎತ್ತಿ ಕೂಗ್ಯಾನ
ಕಮರಿ ಏರಿ ನಿಂತಾನ ತಾನೇ ನೋಡುತಾನೇನ
ಮಲ್ಲಿಕಾರ್ಜುನ ಮಹಾದೇವಂದು ಓ ಯೆಂಬ ಶಬುದ ಕೂಗ್ಯಾನ
ನಿನಗೂ ಸಾಕಾನಾದಾರ ನನಗೂ ಯಾಕಬೇಕಯ್ಯ
ನನ್ನ ಜೀವನಲ್ಲಪ್ಪ ನನಗ ಸಾಕನಾದವ
ಮಲ್ಲಿಕಾರ್ಜುನ ಮಹಾದೇವ ಮಹಾದೇವಂತ ಕೂಗ್ಯಾನ
ಮಹದೇವಂತ ಕೂಗ್ಯಾನೆ ಮಲ್ಲಯ್ಯನಂತ ಕೂಗ್ಯಾನ
ಮಲ್ಲಯ್ಯನಂತ ಕೂಗ್ಯಾನೆ ಕಣ್ಣಿಗ ನೀರ ತಂದಾನ
ಕಣ್ಣಿಗ ನೀರ ತಂದಾನೆ ಹಿಂದ ಮೂರ ಮಾರೇನ
ಹಿಂದಕ ಮೂರ ಮಾರೇನ ಸಿದ್ದರಾಮ ಸರದಾನ
ಸಿದ್ದರಾಮ ಸರದಾನೆ ಕಣ್ಣಿಗ ನೀರ ತಂದಾನ
ಮಲ್ಲಿಕಾರ್ಜುನ ಮಹಾದೇವ ಮಲ್ಲಯ್ಯನಂತ ಕೂಗ್ಯಾನ
ಕಣ್ಣನೀರನಲ್ಲಪ್ಪ ಕೆಳಗ ಬೀಳುತಾವೇನ
ಕೆಳಗ ಬೀಳುತಾವೇನ ಜರಿಯಾ ಗುಂಡನಾದವ
ಮೂರ ಮಾರ ಸರದಾನ ಮುಂದಕ ಹೋಗುತಾನೇನ
ನಿನಗೂ ಸಾಕನಾದಾರ ನನಗೂ ಯಾತಕಬೇಕಯ್ಯ
ನಿನ್ನಗ ಸಾಕನಾದರ ನನ್ನಗ ಯಾತಕಬೇಕಯ್ಯ
ಎಡಗೈ ಒಳಗ ಬುತ್ತೇನ ಬಲಗೈ ಎತ್ತಿ ಕೂಗ್ಯಾನ

ಬಲಗೈ ಎತ್ತಿ ಕೂಗ್ಯಾನೆ ಕಮರಿ ಹಾರುತಾನೇನ
ದಕ್ಷಿಣ ತೆಲಿಯನಾದಾವ ಉತ್ತರ ಕಾಲನಾದಾವ
ಪೂರ್ವ ದಿಕ್ಕಿನಿಂದೇನ ಮಲ್ಲಯ್ಯ ಓಡಿ ಬಂದಾನ
ಮಲ್ಲಯ್ಯ ಓಡಿ ಬಂದಾನ ಟೊಂಕಕ ಕೈಯ ಹಾಕ್ಯಾನ
ಹೆಡಕಿಗ ಒಂದು ಕೈಯೇನ ಟೊಂಕಕ ಒಂದು ಕೈಯೇನ
ಬಾರೋ ಬಾರೋ ಸಿದ್ದರಾಮ ಎಂಥಾ ಘಾತಕ ಇದ್ದಿಗೆ
ಕಣ್ಣು ಮುಚ್ಚುತಾನೇನ ಬಾಯಿ ಮುಚ್ಚುತಾನೇನ
ಬಾಯಿ ಮುಚ್ಚುತಾನೇನ ಸಾವಿಗಂಜಲಿಲ್ಲೇನ
ಮಲ್ಲಿಕಾರ್ಜುನ ಮಹಾದೇವ ಮ್ಯಾಲ ತರವುತಾನೇನ
ಮ್ಯಾಲ ತರುವುತಾನೇನ ಕೈಯಾಗ ಹಿಡಕೊಂಡು ತಂದಾನ
ಬಾರೋ ಬಾರೋ ಸಿದ್ಧಾರಾಮ ಶೆಡವ ಮಾಡಿದೇನಪ್ಪ
ನನ್ನ ಮ್ಯಾಲನಲ್ಲಪ್ಪ ಮುಣಸ ಮಾಡಿದಿ ಅಂದಾನ
ಮುಣಸ ಮಾಡಿದಿ ಅಂದಾನೆ ಶೆಡವ ಮಾಡಿದಿ ಅಂದಾನ
ಸಿದ್ದರಾಮನಂದಾನೆ ತಾನೇ ಕೂಗೂತಾನೇನ
ಸಿದ್ದರಾಮನಂದೇನೆ ಮಲ್ಲಯ್ಯ ಕೂಗೂತಾನೇನ
ಗದ್ದ ಹಿಡದು ಹೇಳ್ಯಾನ ತುಟಿಯ ಹಿಡದು ಕರದಾನ
ತುಟಿಯಾ ಹಿಡದು ಹೇಳ್ಯಾನ ಕಣ್ಣ ತೆರದು ನೋಡ್ಯಾನ
ಕಣ್ಣ ತೆರದು ನೋಡ್ಯಾನೆ ಬಾಯಿ ತೆರದು ನೋಡ್ಯಾನ
ಬಾಯಿ ತೆರಿಯುತಾನೇನ ಕಣ್ಣ ತೆರಿಯುತಾನೇನ
ಹದನಾಲ್ಕು ವರ್ಷನಲ್ಲೇನ ಸಿದ್ದರಾಮನಿದ್ದಾನ
ಕಿರಿಯಾ ಜಡಿಯಾ ಬಿಟ್ಟಾನ ಕಣ್ಣಾ ತೆರದು ನೋಡ್ಯಾನ
ಮಲ್ಲಿಕಾರ್ಜುನ ಮಹಾದೇವ ಮಲ್ಲಯ್ಯಾ ಕೂಗುತಾನೇನ
ಸಿದ್ದರಾಮನಲ್ಲೇಳ ಎದ್ದು ಕುಂದ್ರುತಾನೇನ
ಎದ್ದು ಕುಂದ್ರುತಾನೇನ ಮಲ್ಲಯ್ಯಗ ಹೇಳುತಾನೇನ
ಬುತ್ತಿ ಗಂಟ ಬಿಚ್ಚೇನ ಊಟ ಮಾಡೇಳಂದಾನ
ಊಟ ಮಾಡಲಿಬೇಕಪ್ಪ ಸೀತಾಳ ಮುಗಿಯಲಿಬೇಕಯ್ಯ
ಯಾವಾಗ ಉಂಡಿದಿ ಅಂದಾನೆ ಎಲ್ಲಿ ಬಂದಿದಿ ಅಂದಾನ
ಮಲ್ಲಿಕಾರ್ಜುನ ಮಹಾದೇವ ನುಡದಾನೆ ಮಾತಾಡ್ಯಾನ
ಒಲ್ಲೇನಪ್ಪ ಒಲ್ಲೇನ ನನಗ ಹಸುವನಾಗಿಲ್ಲ
ನಿನಗ ಹಸುವನಾಗಲಿಕ್ಕ ಬುತ್ತಿಯ ಯಾರಿಗಬೇಕಪ್ಪ
ಸಿದ್ದರಾಮನಲ್ಲೇಳ ನನಗ ಹಸುವನಾಗಿಲ್ಲ
ನಿನಗ ಹಸುವನಾಗಲಿಕ್ಕ ಬುತ್ತಿಯಾರಿಗ ಬೇಕಪ್ಪ
ಸಿದ್ಧರಾಮನಲ್ಲೇಳ ತಯ್ಯಾರಾಗುತಾನೇನ

ಮಲ್ಲಿಕಾರ್ಜುನ ಮಹಾದೇವ ಏನಂದಾಡುತ್ತಿದ್ದಾನೇನ
ನೀನು ಉಣುವಲಿಬೇಕಪ್ಪ ನಾನು ಉಣತೀನಿ ಅಂದಾನ
ನಾನೇ ಉಣತೀನಿ ಅಂದಾನೆ ನೀನೇ ಉಣಬೇಕಂದಾನ
ಮೊದಲೆ ನೀನೇ ಉಂಡಾರ ಹಿಂದಿದ ನಾನೇ ಉಂಡೇನ
ನನ್ನಗೂಡ ಸಿದ್ದರಾಮ ಕೂಡಿ ಉಣಬೇಕಂದಾರ
ಒಳ್ಳೇದು ಒಳ್ಳೇದಂದಾರೆ ಉಂಡಾರೆ ಬಾಳುಟ್ಟಾರೆ
ಉಂಡಾರೆ ಭಾಳುಟ್ಟಾರೆ ಬಾಯಿಲಿ ಸೀತಾಳ ಉಗಳ್ಯಾರ
ದೇವಿಧರ್ಮರ ಹಾಡೇನ ಇಲ್ಲಿಗ ಇದು ಒಂದು ಸಂದೇನ
ಕಳಸವಿಟ್ಟಾರ ಕವಿತಾ ಕಟ್ಯಾರ ಹೊನ್ನ ಜಗ್ಗುನಿ ಗೌಡರೋ
ದೇವರ ಬಂದಾರ ಬನ್ನೀರೆ !

ದೇವಿ ಧರ್ಮರ ಹಾಡೇನೆ ಸೊನ್ನಲಾಪುರದ ಒಳಗೇನೆ :

ಶಿವನೆ ನಮ್ಮಯಿ ಧ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ದೇವಿ ಧರ್ಮದ ಹಾಡೇನೆ ಸೊನ್ನಲಪುರದ ಒಳಗೇನ
ಸೊನ್ನಲಪುರದ ಒಳಗೇನೆ ಶ್ರೀಶೈಲಾದ ಒಳಗೇನ
ಶ್ರೀಶೈಲದ ಒಳಗೇನ ಮಹಾನಂದಿಯ ಮ್ಯಾಲೇನ
ಭೀಮನಕೊಳ್ಳದ ಮ್ಯಾಲೇನ ಕಮರಿಕೊಳ್ಳದ ಮ್ಯಾಲೇನ
ಕಮರಿಕೊಳ್ಳದ ಮ್ಯಾಲೇನ ಸಿದ್ಧರಾಮ ಇಳದಾನ
ಮಲ್ಲಿಕಾರ್ಜುನ ಮಹಾದೇವ ಊಟ ಮಾಡಲಂದಾನ
ಉಂಡಾರೆ ಬಾಳುಟ್ಟಾರೆ ಬಾಯಿಲಿ ಸೀತಾಳ ಉಗಳ್ಯಾರ
ಸಿದ್ದರಾಮನಲ್ಲೇಳ ಏನಂದಾಡುತಿದ್ದಾನ
ಮಲ್ಲಿಕಾರ್ಜುನ ಮಹಾದೇವ ತಾನೇನು ಹೇಳುತಾನೇನ
ಬಾರೋ ಬಾರೋ ಸಿದ್ದರಾಮ ಬೇಡಿದ ಕುಡತೀನಿ ಅಂದಾರ
ಸೊನ್ನಲಗಿರಿಯನಿದ್ದಾವೆ ಸೋಲಾಪುರನಾದಾವ
ಸೋಲಾಪುರನಾದಾವೆ ಕೋಲಾಪೂರನಾದಾವ
ಸೋಲಾಪುರದಾಗೇನೆ ದಂಡಸೋಲಾಪೂರೇನ
ದಂಡಸೋಲಾಪುರದಾಗೆ ಅನ್ನ ಅನುವಲಿಬಾರದ
ಅನ್ನ ಅನುವಲಿಬಾರದ ನೀರ ಅನುವಲಿಬಾರದ
ಯಾವ ತರದಿಂದೇನ ಬಡತನ ಇರುವಲಿಬಾರದ
ಮಲ್ಲಿಕಾರ್ಜುನ ಮಹಾದೇವ ಒಳ್ಳೆದು ಒಳ್ಳೇದಂದಾನ
ಒಳ್ಳೆದು ಒಳ್ಳೇದಂದಾನೆ ಕೊಟ್ಟಿನಿ ಕೊಟ್ಟಿನಿ ಅಂದಾನ
ಅನ್ನನೀರನ್ನಲ್ಲಪ್ಪ ನಿನಗೆ ಕೊಟ್ಟಿನಿ ಅಂದಾನ

ಸಿದ್ದರಾಮನಲ್ಲೇಳ ಮಲ್ಲಿಕಾರ್ಜುನ ಮಹಾದೇವಗ
ಮಲ್ಲಿಕಾರ್ಜುನ ಮಹಾದೇವಗ ಗಟ್ಟಿ ಪಾದ ಹಿಡದಾನ
ಮಂಡಿಲಿ ಹಸ್ತ ಇಟ್ಟಾನೆ ಆಶೀರ್ವಾದವ ಮಾಡ್ಯಾನ
ಕೈ ಕೊಟ್ಟ ಶರಣಂದಾನೆ ರಾಯಿಮಾರಗ ಹಿಡದಾನ
ಮಲ್ಲಿಕಾರ್ಜುನ ಮಹಾದೇವ ಬೆಟ್ಟ ಇಳದು ಬಂದಾನ
ಸಿದ್ದರಾಮನಲ್ಲೇಳ ಬೆಟ್ಟ ಇಳಿಯುತಾನೇನ
ಒಂದ ಕೊಳ್ಳ ಇಳದಾನ ಒಂದಾ ಕೊಳ್ಳ ಏರ್ಯಾನ
ಏಳ ಕೊಳ್ಳ ಇಳದಾನೆ ಏಳ ಗುಡ್ಡ ಏರ್ಯಾನ
ಏಳ ಗುಡ್ಡ ಇಳದಾನೆ ಏಳ ಕೊಳ್ಳ ಏರ್ಯಾನ
ಸಿದ್ಧರಾಮನಂದಾರೆ ರಾಯಿಮಾರಗ ಹಿಡದಾನ
ಹಿಡಗಲ್ಲ ಹಿಟ್ಟಾದವೆ ಕಗ್ಗಲ್ಲ ನುಗ್ಗಾದವ
ಕೆಂಧೂಳ ಭರಮಂಡ್ಯಾವೆ ಸೊನ್ನಲಗಿರಿಯ ಒಳಗೇನ
ಸೊನ್ನಲಗಿರಿಯ ಒಳಗೇನೆ ರೈತರೋಣಿಲಿ ಹಾಯ್ದರ
ರಾಜರ ಗಲ್ಲಿಲಿ ಹಾಯ್ದನೆ ರಾಜರ ಬಲ್ಲಿಗ ಬಂದಾನ
ತಂದೇಳ ಮುದ್ದುಗೌಡನೆ ತಾಯೇಳ ಸುಗಲವ್ವನ
ಬಾರ ನನ್ನ ಹಡದಪ್ಪ ಎಲ್ಲಿಗ ಹೋಗಿದಿ ಅಂದಾರ
ಎಲ್ಲಿ ಹೋಗಿದಿ ಅಂದಾರೆ ಯಾವಾಗ ಬಂದೀದಂದಾರ
ಅನ್ನ ಮೊಸರಬುತ್ತೆವ್ವ ನೀನೇ ಕಟ್ಟಿದಿ ಅಂದಾರ
ನೀನೆ ಕಟ್ಟಿದಿ ಅಂದಾನೆ ನಾನೇ ವೈದಿನಿ ಅಂದಾರ
ಮಲ್ಲಿಕಾರ್ಜುನ ಮಹಾದೇವ ಕೆರಿಯಾ ಒಳಗ ಇಲ್ಲವ್ವ
ಕೆರಿಯಾ ಒಳಗ ಇಲ್ಲವ್ವ ನಾಡಿನೊಳಗ ಇಲ್ಲವ್ವ
ನಾಡ ನಾಡ ತಿರಗೇನ ಕಾಡ ಕಾಡ ತಿರಗೇನ
ಕಾಡ ಕಾಡ ತಿರಗೇನೆ ಬೆಟ್ಟಕ ಹೋದೇನಂದಾನ
ಹೆಜ್ಜೆನೆ ಸಿಗುವಲ್ಲವ ಹೋಲಿಕಿ ಹೊಳಿವಲ್ಲವ
ಹೋಲಿಕಿ ಹೊಳಿವಲ್ಲವೆ ಪರ್ವತ ಗುಡ್ಡಕ ಹೋದೇನ
ಏಳ ಗುಡ್ಡ ಏರೇನೆ ಕಮರಿ ಏರಿ ನಿಂತೇನ
ಕಮರಿಯ ಕೊಳದಾಗೇನ ಮಲ್ಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವ ನಮಗೆ ದೊರತಾನಂದಾನ
ನಮಗೂ ದೊರತಾನಂದಿದ್ದ ಕಮರಿ ಮ್ಯಾಲೆ ಬಂದಿದ್ದ
ಕಮರಿ ಮ್ಯಾಲೆ ಬಂದಿದ್ದ ಊಟ ಮಾಡೇಳಂದೇನ
ಉಂಡಾನೆ ಬಾಳುಟ್ಟಾನೆ ಬಾಯಿಲಿ ಸೀತಾಳ ಉಗಳ್ಯಾನ
ಮಲ್ಲಿಕಾರ್ಜುನ ಮಹಾದೇವ ಬೇಡಿದ ಕೊಟ್ಟೇನಂದಾನ
ನನಗ ಬೇಡಿದ ಕೊಟ್ಟಾನೆ ಗಟ್ಟಿ ಪಾದ ಹಿಡದೇನ

ಕೈಕೊಟ್ಟ ಶರಣಂದೇನೆ ಆಶೀರ್ವಾದ ಮಾಡ್ಯಾನ
ಸಿದ್ದರಾಮನೆಲ್ಲೇಳ ತಾಯಿಗ ಹೇಳುತಾನೇನ
ತಾಯಿಗ ಹೇಳುತಾನೇನೆ ತಂದಿಗ ಹೇಳುತಾನೇನ
ಗೌಡಕಿ ಮಾಡತ್ತಿದ್ದಾನೆ ರಾಜಕಿ ಮಾಡೂತಿದ್ದಾನೆ
ಶಿವನಕ್ಕಿಂತನಲ್ಲಪ್ಪ ಶಿವಶರಣರ ಹೆಚ್ಚಿಗೆ
ಶಿವಶರಣರ ಸಂಗಟ ಸಹವಾಸ ಮಾಡುತಾನೇನ
ತಾಯಿತಂದಿನಲ್ಲೇಳ ನುಡದಾರೆ ಮಾತಾಡ್ಯಾರ
ನುಡದಾರೆ ಮಾತಾಡ್ಯಾರೆ ಏನಂದಾಡುತ್ತಿದ್ದಾರ
ಶರಣರ ಸಂಗ ನಿನ್ನಗ ಯಾಕ ಬೇಕೇಳಂದಾರ
ಯಾಕ ಬೇಕೇಳಂದಾರ ದೂರ ಸರದು ಕುಂದ್ರಯ್ಯ
ಹೆಚ್ಚಿನ ಮಾತ ಬ್ಯಾಡಪ್ಪ ನೀನೆ ಭವಿಯ ಇದ್ದೇನ
ನೀನೆ ಭವಿಯಾ ಇದ್ದೇನೆ ಗುರುವಿನ ಕರುಣ ಇಲ್ಲೇನ
ಗುರುವಿನ ಕರುಣ ಇಲ್ಲಪ್ಪ ಸರದ ಕುಂದ್ರಲಿ ಬೇಕಯ್ಯ
ಶಿವನಕಿಂತ ಶರಣರೆ ಹೆಚ್ಚ ಶಿವಶರಣರು ಹೇಳ್ಯಾರ
ಶಿವಶರಣರಂದಾರ ಸಿದ್ದರಾಮ ತಿಳದಾನ
ಸಿದ್ದರಾಮ ತಿಳದಾನ ಹ್ಯಾಂಗ ಮಾಡಲಿ ಅಂದಾನ
ಹ್ಯಾಂಗ ಮಾಡಲಿ ಅಂದಾನೆ ಎಲ್ಲಿಗ ಹೋಗಲಿ ಅಂದಾನ

ಸೊನ್ನಲಗಿರಿಯ ಬಿಟ್ಟಾನೆ ರಾಯಿಮಾರಗ ಹಿಡದಾನ
ರಾಯಿಮಾರಗ ಹಿಡದಾನೆ ಮಲ್ಲಯ್ಯನ ಧ್ಯಾನ ಮಡ್ಯಾನ
ಮಲ್ಲಯ್ಯನ ಧ್ಯಾನ ಮಾಡ್ಯಾನೆ ಮಹಾದೇವನ ಧ್ಯಾನ ಮಾಡ್ಯಾನ
ಮಲ್ಲಿಕಾರ್ಜುನ ಮಹಾದೇವನ ದರ್ಶನಾಗೇಳಂದಾನ
ಅಲ್ಲ್ಯಾನ ಇಲ್ಲ್ಯಾನೇನ ಪರ್ವುತ ಬೆಟ್ಟಕ ಹೋದನ
ಬೆಟ್ಟಕ ಹೋಗುತಾನೇನ ಎಲ್ಲಿಗ ಹೋಗುತಾನೇನ
ಒಂದ ಗುಡ್ಡ ಏರ್ಯಾನೆ ಒಂದಾ ಕೊಳ್ಳ ಇಳದಾನ
ಒಂದಾ ಕೊಳ್ಳ ಇಳದಾನೆ ಎರಡ ಕೊಳ್ಳ ಏರ್ಯಾನ
ಕಾಡ ಇಳಿಯುತಾನೇನ ಗುಡ್ಡ ಏರುತಾನೇನ
ಎಪ್ಪತ್ತೊಂದು ಗಿರಿಯಾಗ ಮಲ್ಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವ ಬೆಟ್ಟದೊಳಗೆ ದೊರತಾನ
ಬೆಟ್ಟದೊಳಗೆ ದೊರತಾನ ಗಟ್ಟಿ ಪಾದಕ ಹೊಂದ್ಯಾನ
ಗಟ್ಟಿ ಪಾದ ಹಿಡದಾನೆ ಏನಂದಾಡುತ್ತಿದ್ದಾನ
ಬಾರೋ ಬಾರೋ ಸಿದ್ದರಾಮ ಬಂದ ಕಾರಣ ಹೇಳಯ್ಯ
ಸಿದ್ದರಾಮನಂದಾನೆ ನುಡದಾನೆ ಮಾತಾಡ್ಯಾನ

ಶಿವನಕಿಂತನಲ್ಲಪ್ಪ ಹೆಚ್ಚಿನ ಶರಣರಂದಾರ
ಶಿವನಕೀನ ಶರಣರ ಹೆಚ್ಚ ಶಿವಶರಣರಂದಾರ
ಶಿವನಕೀನ ಶಿವಶರಣರು ಹೆಚ್ಚ ಹೆಚ್ಚಿನ ಮಾತೊಂದು ಆಡ್ಯಾರ
ಗುರುವಿನ ಕರುಣ ಇಲ್ಲೇನ ಭವಿಯ ಇದ್ದೇಳಂದಾರ
ಭವಿಯಾ ಇದ್ದೇಳಂದಾರ ಸರದು ಕುಂದ್ರು ಅಂದಾರ
ಆತ್ಮಧನವನಲ್ಲಪ್ಪ ನಿನಗೆ ಯಾಕೆ ಬೇಕಪ್ಪ
ಸಿದ್ಧರಾಮನಲ್ಲಪ್ಪ ಸರದು ಕುಂದ್ರು ಅಂದಾನ
ಒಳ್ಳೆದು ಒಳ್ಳೆದಂದೇನ ಇಲ್ಲಿಗ ಬಂದೇನಂದಾನ
ಮಲ್ಲಿಕಾರ್ಜುನ ಮಹಾದೇವ ಏನಂದಾಡುತಾನೇನ
ಚರಗಿ ತುಂಬಿ ಇಟ್ಟಾನ ಸುರಗಿ ತುಂಬುತಾನೇನ
ಸಾಮಾನ ತರುವುತಾನೇನ ತಾಯೇನಂದಾಡ್ಯಾನ
ಸುರಗಿ ಸುತ್ತುತಾನೇನ ಸುರಗಿ ಒಳಗೆ ಕುಂತಾನ
ಮಲ್ಲಿಕಾರ್ಜುನ ಮಹಾದೇವ ಏನ ಹೇಳುತಾನೇನ
ತನುವ ಧನವ ಮನವೇನ ಮೂರು ಬಿಡಬೇಕಂದಾನ
ತನುವ ಬಿಡಬೇಕಂದಿದ್ದ ಮನವ ಬಿಡಬೇಕಂದಿದ್ದ
ಮನವ ಬಿಡಬೇಕಂದಿದ್ದ ತನವ ಬಿಡಬೇಕಂದಿದ್ದ
ಹೆಣ್ಣು ಬಿಡಬೇಕಂದಿದ್ದ ಹೊನ್ನು ಬಿಡಬೇಕಂದಿದ್ದ
ಹೊನ್ನು ಬಿಡಬೇಕಂದಿದ್ದ ಮಣ್ಣು ಬಿಡಬೇಕಂದಿದ್ದ
ಆಶೀರ್ವಾದ ಮಾಡಿದ್ದ ಆಶೀರೋಚನ ಮಾಡ್ಯಾನ
ಆಶೀರೋಚನ ಮಾಡ್ಯಾನೆ ಗಟ್ಟಿ ಪಾದ ಹಿಡದಾನ
ಮಂಡಿಲಿ ಹಸ್ತ ಇಟ್ಟಾನೆ ಮಲ್ಲಿಕಾರ್ಜುನ ಮಾದೇವ
ಮಲ್ಲಿಕಾರ್ಜುನ ಮಹಾದೇವ ಸಿದ್ಧರಾಮಗ ಹೇಳ್ಯಾನ
ಸಿದ್ಧರಾಮಗಲ್ಲಪ್ಪ ನಿನಗೆ ಕೊಟ್ಟಿನಿ ಅಂದಾನ
ಶಿವನಕೀನ ಶರಣರ ಹೆಚ್ಚ ಶಿವಶರಣ ಆದಿಗೆ
ಶಿವಶರಣ ಆದಿಗೆ ಅಂದಾನೆ ನೀನೆ ಹೋಗಲಿಬೇಕಯ್ಯ
ಬಾರೋ ಬಾರೋ ಹಡದಪ್ಪ ನಾನು ಹೋಗದಿಲ್ಲೇನ
ನೀನೇ ಮುಂದ ಇದ್ದಾರ ನಾನೇ ಹಿಂದ ಬಂದೇನ
ನೀನೇ ಹಿಂದನಾದರ ನಾನು ಮುಂದ ಒಲ್ಲೇನ
ಮಲ್ಲಿಕಾರ್ಜುನ ಮಹಾದೇವ ಏನಂದಾಡುತಾನೇನ
ಬ್ಯಾಡೋ ಬ್ಯಾಡೋ ಸಿದ್ಧರಾಮ ಒಬ್ಬಂವ ಹೋಗಲಿಬೇಕಯ್ಯ
ನಾನು ಹೋಗಬೇಕಾದರೆ ಸಂಗಟ ಗುರುವ ಬೇಕಯ್ಯ
ನನಗ ಜೋಡ ಬೇಕಪ್ಪ ನನಗ ಜತಿಯಾ ಬೇಕಪ್ಪ
ನೀನು ಸಂಗಡಿದ್ದರ ಸೊನ್ನಲಗಿರಿಗೆ ಹೋದೇನ

ಸೊನ್ನಲಗಿರಿಯ ಒಳಗೇನ ನಿನ್ನ ಗುಡಿಯಾ ಕಟ್ಟಸೇನ
ಸೊನ್ನಲಗಿರಿಯ ಒಳಗೇನ ನಿನ್ನ ಮಠಗೋಳು ಕಟ್ಟಸೇನ
ಗುರುವ ಶಿಷ್ಯರು ಕೊಡ್ಯಾರೆ ರಾಯಿಮಾರಗ ಹಿಡದಾರ
ರಾಯಿಮಾರಗ ಹಿಡದಾರೆ ರವ್ವಣಿ ಮಾಡುತಾರೇನ
ಇಳದಲ್ಲಿ ಇಳಿಗಾಳೇನ ಸುಳದಲ್ಲಿ ಸುಳಿಗಾಳೇನ
ಸುಳದಲ್ಲಿ ಸುಳಿಗಾಳೇನ ಗಾಳಿಕ್ಕಿಂತ ಮುಂದೇನ
ಗಾಳಿಕ್ಕಿಂತ ಮುಂದೇನ ಸೊನ್ನಲಪುರದ ಒಳಗೇನ
ಸೊನ್ನಲಪುರದ ಒಳಗೇನ ಸೋಲಾಪುರದ ಒಳಗೇನ
ಸೋಲಾಪುರದೊಳಗೇನ ಕುಂಬಾರ ಓಣಿಯ ಮುಂದೇನ
ಕುಂಬಾರ ಓಣಿ ಮುಂದೇನ ಬಾಳಿ ಅಗಸಿ ಹಿಂದೇನ
ಬಾಳಿ ಅಗಸಿ ಹಿಂದೇನ ಮಲ್ಲಿಕಾರ್ಜುನ ಮಹಾದೇವಗ
ಮಲ್ಲಿಕಾರ್ಜುನ ಮಹಾದೇವಗ ಗುಡಿಯ ಕಟ್ಟುತಾನೇನ
ಗದ್ದುಗಿ ಹಾಕುತಾನೇನ ಗುಡಿಯ ಮುಗಸೂತಾನೇನ
ಗಂಟಿ ಮಾಡುತಾನೇನ ಜಾಗುಟಿ ಮಾಡುತಾನೇನ
ಮಲ್ಲಿಕಾರ್ಜುನ ಮಹಾದೇವಗ ನಾಗರ ಹೆಡಿಯಾ ಧೂಪರ್ತೆ
ನಾಗರ ಹೆಡಿಯಾ ಧೂಪರ್ತೆ ಎತ್ತಿ ಬೆಳಗುತಾನೇನ
ಮಲ್ಲಿಕಾರ್ಜುನ ಮಹಾದೇವನ ಗುಡಿಯಾ ಮುಂದೇ ಇರುವುತಾನೇನ
ಗುಡಿಯಾ ಹಿಂದ ಸಿದ್ಧರಾಮನ ಮನಿಯಾ ಇರುವುತಾವೇನ
ಮನಿಯಾ ಇರುವುತಾವೇನ ಸಂಸಾರ ಮಾಡತ್ತಿದ್ದಾನ
ಸಂಸಾರ ಮಾಡತ್ತಿದ್ದಾನ ದಂದಿಗಿ ಮಾಡತ್ತಿದ್ದಾನ
ತಾನೇ ಬರಬೇಕಾದರ ಗುರುವಿನ ಕರಕೊಂಡು ಬಂದಾರ
ಸಂಗಟ ಗುರುವ ಬಂದಾನ ಮಲ್ಲಿಕಾರ್ಜುನ ಮಹಾದೇವ

ಕೆರಿಯಾ ಒಳಗೆ ಹೋಗ್ಯಾನೆ ಏನ ನೋಡುತಾನೇನ
ಕೆರಿಯಾ ಒಳಗನಲ್ಲಪ್ಪ ಸಿದ್ದರಾಮ ಬಂದಾನ
ಸಿದ್ದರಾಮನಲ್ಲೇಳ ಏನಂದಾಡುತ್ತಿದ್ದಾನ
ಬಾರೋ ಬಾರೋ ನನ್ನಪ್ಪ ಒಡ್ಡ ಹಾಕಲಿಬೇಕಯ್ಯ
ಎಷ್ಟು ದುಡದೀರಲ್ಲಪ್ಪ ಅಷ್ಟೇ ದುಡಿಯಲಿಬೇಕಯ್ಯ
ಅಷ್ಟೇ ದುಡದರಲ್ಲಪ್ಪ ನಿಮ್ಮ ಪಗಾರಂದಾನ
ನಿಮ್ಮ ಪಾಗಾರಲ್ಲಪ್ಪ ಮಣ್ಣ ಗುಂಪಿ ಒಳಗೇನ
ಕೆಲಸ ಮಾಡಲಿ ಬೇಕಪ್ಪ ಮಣ್ಣ ತೋಡಲಿಬೇಕಯ್ಯ
ಬುಟ್ಟಿ ತುಂಬಲಿಬೇಕಪ್ಪ ಒಡ್ಡಿಗ ಹಾಕಲಿಬೇಕಯ್ಯ
ಹೊತ್ತ ಹೋದ ಮ್ಯಾಲೇನ ದಂವತಿ ಬಿಟ್ಟ ಮ್ಯಾಲೇನ

ಕೈಕಾಲ ಮಾರಿ ತೊಳದೇನ ಬಟ್ಟಿ ಹಾಕೊಂಡು ಮ್ಯಾಲೇನ
ತಾಯ್ಯಾರಾಗಿ ಬರಬೇಕ ಮಣ್ಣ ಕುಂಪಿ ಕೆದರರೆ
ಮಣ್ಣ ಕುಂಪಿ ಕೆದರಿದರ ನಿಮ್ಮ ಭಕ್ತಿನಂದಾನ
ನೀನಾ ದುಡದಿದ ಪಗಾರ ಅಲ್ಲೇ ಕುಡತಾನಂದಾನ
ಅಲ್ಲೇ ಕುಡತಾನಂದಾರ ಕೆರಿಯಾ ಹಾಕುತಾರೇನ
ದುಡದ ಪಗಾರಲ್ಲೇಳ ಮಣ್ಣ ಕುಂಪಿ ಒಳಗೇನ
ಮಣ್ಣ ಕುಂಪಿ ಒಳಗೇನೆ ಪಗಾರ ಕುಡುವುತಾರೇನ
ಭಕ್ತಿ ಇದ್ದಷ್ಟು ಸಿಕ್ಕಾವೇ ಧಿಡವ ಇದ್ದದು ದೊರತಾವ
ಸಿದ್ದಾರಾಮನಲ್ಲಪ್ಪ ಒಡ್ಡ ಮುಗಸೂತಾನೇನ
ಒಡ್ಡ ಮುಗಸೂತಾನೇನ ಕೆರಿಯಾ ಮುಗುಸೂತಾನೇನ
ಸೊನ್ನಲಗಿರಿಯ ಒಳಗೇನೆ ಸುತ್ತಮುತ್ತ ಒಡ್ಡೇನ
ಸುತ್ತ ಮುತ್ತ ಒಡ್ಡೇನ ನಡುವ ಕೆರಿಯಾ ಒಳಗೇನ
ನಡುವ ಕೆರಿಯಾ ಒಳಗೇನ ಪಾತಾಳ ಪಾಯ ಹೊಡದಾರ
ಪಾತಾಳ ಪಾಯ ಹೊಡದಾನೆ ಗುಡಿಯಾ ಕಟ್ಟುತಾನೇನ
ಗುಡಿಯಾ ಕಟ್ಟುತಾನೇನ ವಾಸ ಮಾಡುತಾನೇನ
ವಾಸ ಮಾಡುತಾನೇನ ಸಿದ್ಧರಾಮ ಕುಂತಾನ
ಸಿದ್ಧರಾಮನಲ್ಲೇಳ ಕೆರಿಯಾ ಒಳಗ ಕುಂತಾನ
ಕೆರಿಯಾ ಒಳಗೆ ಕುಂತಾನ ಪೂಜಿ ಮಾಡುತಾನೇನ
ಹೂವಿನ ಗಿಡಗೋಳಿಗೆ ಹಾಕ್ಯಾರೆ ಪೂಜಿ ಮಾಡುತಾರೇನ
ಪೂಜಿ ಮಾಡುತಾರೇನ ಕಸಗೋಳು ಹೊಡಿಯುತಾರೇನ
ಕಸಗೋಳು ಹೊಡಿಯುತಾರೇನ ಪೂಜಿ ಮಾಡುತಾರೇನ
ದಾಸೋಗ ಇಡುವುತಾರೇನ ಅನ್ನ ಕ್ಷೇತ್ರ ಮಾಡ್ಯಾರ
ಅನ್ನ ಕ್ಷೇತ್ರ ಅಲ್ಲಪ್ಪ ಧರ್ಮ ಮಾಡುತಾರೇನ
ಸೊನ್ನಲಪುರದ ಒಳಗೇನ ಜಾತೂರಿ ಮಾಡುತಾರೇನ
ಜಾತುರಿ ಮಾಡುತಾರೇನ ಹೂವ ಹರಿಯುತಾರೇನ

ಹೂವಿನ ಬಗೀಚದೊಳಗೇನ ಹೆಣ್ಣಮಗಳ ಇದ್ದಾಳ
ಹೆಣ್ಣಮಗಳ ಯಾಮನಗೊಂಬಿ ನೀರ ಹಾಕುತಾಳೇನ
ಚಿಕ್ಕ ವಯಾಸ್ಸದಾಗೇನ ಅಲ್ಲೇ ದುಡಿಯುತಾಳೇನ
ಅಲ್ಲೇ ದುಡಿಯುತಾಳೇನ ಅಲ್ಲೇ ಕುಂದ್ರುತಾಳೇನ
ಧರ್ಮರ ಗುಡಿಯ ಒಳಗೇನೆ ತಾನೇ ಇರುವುತಾಳೇನ
ತಾನೇ ಇರುವುತಾಳೇನ ರಾತುರಿ ಹಗಲ ಇದ್ದಾಳ
ಮನಿಯಾಮಾರ ಬಿಟ್ಟಾಳ ತಾಯಿ ತಂದೀನಿ ಬಿಟ್ಟಾಳ

ಅಣ್ಣ ತಮ್ಮದೇರು ಬಿಟ್ಟಾಳೆ ಏನಂದಾಡುತಾರೇನ
ಹೂವ ಕಾಯುತಾಳೇನ ಮಠವ ಕಾಯುತಾಳೇನ
ಹಗಲ ಹನ್ನೇರಡು ವರ್ಷೇನ ಇರುಳು ಹನ್ನೆರಡು ವರ್ಷೇನ
ಇಪ್ಪತನಾಲ್ಕು ವರ್ಷಪ್ಪ ಅಲ್ಲೇ ಇರುವುತಾಳೇನ
ಒಂದಾನ ಒಂದು ಕಾಲದಲ್ಲೇ ಒಂದಾನ ಒಂದು ದಿನದಲ್ಲೇ
ಒಂದಾನ ಒಂದು ದಿನಮಾನ ಸಿದ್ದಾರಾಮನಂದಾನ
ಬಾರೋ ಬಾರೋ ತಾಯವ್ವ ನನ್ನ ಮಾತ ಕೇಳವ್ವ
ತಾಯಿನ ಬಿಟ್ಟಿದಿ ಅಂದಾನೆ ತಂದಿನಿ ಬಿಟ್ಟಿದಿ ಅಂದಾನ
ಬಂಧು ಬಿಟ್ಟಿದಿ ಅಂದಾನೆ ಬಳಗ ಬಿಟ್ಟಿದಿ ಅಂದಾನ
ರಾತುರಿ ಹಗಲ ಮಾಡಿದ್ದೆ ಹಗಲ ರಾತುರಿ ಮಾಡಿದ್ದೆ
ಬಾರೋ ಬಾರೋ ಏಯವ್ವ ಸೇವಾ ಮಾಡಿದಿ ಅಂದಾನ
ಸೇವಾ ಮಾಡಿದಿ ಅಂದಾನೆ ಶಾಯವ ಮಾಡಿದಿ ಅಂದಾನ
ನೀರ ಹಾಕಿದಿ ಅಂದಾನ ಗಿಡಗೋಳು ಬೆಳಸೀದಿ ಅಂದಾನ
ಕೆರಿಯಾ ಒಳಗನಲ್ಲೇಳ ಸಿದ್ದರಾಮ ಹೇಳ್ಯಾನ
ಬಂಧು ಬಿಟ್ಟಿದಿ ಅಂದಾನೆ ಬಳಗ ಬಿಟ್ಟಿದಿ ಅಂದಾನ
ಎಷ್ಟು ದುಡದಾರಲ್ಲಪ್ಪ ನಿನ್ನಗ ಏನು ದೊರತಾವ
ನಿನ್ನಗ ಏನು ದೊರತಾವೇ ನಾನೇ ಹೇಳೇನು ಕೇಳವ್ವ
ಇಪ್ಪತ್ತು ವರ್ಷ ದಿನಮಾನ ಭಕ್ತಿ ಮಾಡಿದಿ ಅಂದಾನ
ಇಪ್ಪತ್ತು ವರ್ಷ ದಿನಮಾನ ಭಕ್ತಿ ಮಾಡಿದಿ ಅಂದಾನ
ಕೊಟ್ಟಟು ಉಂಡಿದಿ ಅಂದಾನೆ ದುಡದಟ್ಟು ಮಾಡಿದಿ ಅಂದಾನ
ನೀನು ದುಡದ ಕೂಲೆವ್ವ ನಾನೇ ಕುಡತಿನಿ ಅಂದಾನ
ಏನ ಬೇಡತಿ ಬೇಡವ್ವ ಬೇಡಿದ ಕುಡತೀನಿ ಅಂದಾನ
ನೀನು ಬೇಡಿದಲ್ಲವ್ವ ನಾನೇ ಕುಡತೀನಿ ಅಂದಾನ
ನೀನೆ ಬೇಡಿದಲ್ಲವ್ವ ನಾನೇ ಕುಡತೀನಿ ಅಂದಾನ
ಹೆಣ್ಣು ಮಗಳ ಯೌವನಗೊಂಬಿ ಏನಂದಾಡುತಾಳೇನ
ಏನಂದಾಡುತಾಳೇನೆ ಸಿದ್ದರಾಮ ಕೇಳ್ಯಾನ
ಬಾಯಿ ಮಾತಿಗಲ್ಲಪ್ಪ ನಾನೇ ಬೇಡುದಿಲ್ಲಯ್ಯ
ಭಾಷೆ ಕೊಟ್ಟರಲ್ಲಪ್ಪ ನಾನೇ ಬೇಡೇನಂದಾಳ
ನೀನೇ ಭಾಷಿ ಕೊಟ್ಟಾರೆ ನಾನೇ ಬೇಡೇನಂದಾಳ
ಸಿದ್ದರಾಮನಂದಾರೆ ತನ್ನ ಮನಸಿಗ ತಿಳಿದಾನ
ಜಾಗಿರ ಬೇಡ್ಯಾಳಂದಾನೆ ರೊಕ್ಕಾ ಬೇಡ್ಯಾಳಂದಾನ
ಹಕ್ಕ ಬೇಡ್ಯಾಳಂದಾನೆ ದಕ್ಕ ಬೇಡ್ಯಾಳಂದಾನ
ರೊಕ್ಕ ಕುಡತೀನಿ ಅಂದಾನೆ ರೂಪಾಯಿ ಕುಡತೀನಿ ಅಂದಾನ
ಬಾರೋ ಬಾರೋ ಏಯವ್ವ ಏನಬೇಡತಿ ಬೇಡವ್ವ

ತಳದ ಮಾನ್ಯದ ಹೊಲದಾಗೆ ಅರ್ಧ ಪಾಲ ಕೊಟ್ಟೇನ
ಆಕಳ ಜನ್ನುಗಿ ಕೊಟ್ಟೇನ ಹೋರಿ ಕಂಟಲಿ ಬಿಟ್ಟೇನ
ಗೌಡಕಿ ಪಾಲ ಕೊಟ್ಟೇನೆ ರಾಜಕಿ ನಿನಗ ಬಿಟ್ಟೇನ
ಗೌಡಕಿ ಒಲ್ಲೇನಂದಾಳ ರಾಜಕಿ ಒಲ್ಲೇನಂದಾಳ
ಎಮ್ಮಿ ಒಲ್ಲೇನಂದಾಳೆ ಆಕಳ ಒಲ್ಲೇನಂದಾಳ
ಬಾರೋ ಬಾರೋ ಏಯವ್ವ ಏನ ಬೇಡತಿ ಬೇಡವ್ವ
ನಾನು ಬೇಡಿದಲ್ಲಪ್ಪ ನೀನೇ ಕುಡುವಲಿ ಬೇಕಯ್ಯ
ಬಾರೊ ಬಾರೊ ಏಯಪ್ಪ ನೀನೇ ಬೇಕೇಳಂದಾಳ
ನೀನೆ ಬೇಕೇಳಂದಾಳೆ ಮದುವಿ ಆದೇನಂದಾಳ
ನೀನೇ ನನ್ನವನಾದಾಗ ಗೌಡಕಿ ನಮ್ಮದಾದಾವ
ಗೌಡಕಿ ನಮ್ಮದಿದ್ದಾವೆ ರಾಜಕಿ ನಮ್ಮದಿದ್ದಾವ
ನೀನೇ ನನ್ನವನಾದಾಗ ಎಲ್ಲಾ ಗೌಡಕಿ ನಂದೇನ
ಬಾರೋ ಬಾರೋ ಏಯವ್ವ ನಂದೊಂದು ಮಾತ ಕೇಳವ್ವ
ನನ್ನ ತೊಗೊಂಡಲ್ಲವ್ವ ನೀನು ಏನು ಮಾಡಿಗೆ
ನೀನು ಏನು ಆಡಿಗೆ ನಾನು ಏನು ಮಾಡಿಲ್ಲ
ನಾನು ಶಿವಭಕ್ತ ಅಂದಿದ್ದ ನೀನು ಬ್ಯಾರೆ ಅಂದಿದ್ದ
ನಂದ ಮತಗೋಳು ಏನವ್ವ ನಿನ್ನ ಮತಗೋಳೇನವ್ವ
ಕೊಟ್ಟಿನಾದಿಗಲ್ಲೇಳ ಎಂಥಾ ತಪ್ಪುನಾದಾವ
ನಾಲಿಗಿ ಕಡಕನಾದೀಗೆ ಯಾಸಿಗಡಕ ನಾದೀಗೆ
ನಿನ್ನ ಗುರುವಿನ ಮುಂದೇನ ನೀನೇ ಹೇಳಿದಿ ಅಂದಾಳ
ಬಾಯಿ ಮಾತ ಬ್ಯಾಡಂತ ಮೊದಲೇ ಹೇಳಿನಿ ಅಂದಾಳ
ದುಷ್ಟನಾದಿಗಿ ಅಂದಾಳ ಎಂಥಾವಾನೇಳು ಅಂದಾಳ
ಸಿದ್ದರಾಮನಂದಾರೆ ಒಳ್ಳೆದು ಒಳ್ಳೇದಂದಾರ
ವಚನ ಕೊಟ್ಟೇನಂದಾನ ಬೇಡಿದ ಕುಡತೀನಿ ಅಂದಾನ
ನನ್ನಗ ಲಗ್ಗನಾದಾರೆ ನೀನು ನನ್ನವನಾದಿಗೆ
ನಾನು ನಿನ್ನವಳಾದೇನ ನೀನು ನನ್ನವನಾದೀಗೆ
ನೀನು ಲಗ್ಗನಾದರೆ ನಾನು ನಿನ್ನವಳಾದೇನ
ನೀನು ನನ್ನವಳಾದೀಗೆ ನನ್ನ ಮನಸಿನ ಮ್ಯಾಲೇನ
ನನ್ನ ಮನಸ್ಸಿಗಲ್ಲೇಳ ನನ್ನಗ ಬಂದುದು ಮ್ಯಾಡೇನ
ಆದುದು ಮಾಡೇನಂದಾನೆ ಬಂದುದು ಮಾಡೇನಂದಾನ
ನಿನ್ನ ಮನಸಿಗ ತಿಳಿದಿದ್ದ ನೀನೆ ಮಾಡಲಿಬೇಕಯ್ಯ
ನಿನ್ನ ಮನಸಿಗ ತಿಳಿದಿದ್ದೆ ನಾನು ನಿನ್ನವಳಾದೇನ
ಒಳ್ಳೆದು ಒಳ್ಳೇದಂದಾನೆ ಸಿದ್ದರಾಮ ಕೇಳ್ಯಾನ
ಸಿದ್ದರಾಮ ಕೇಳ್ಯಾನ ಸಂಕ್ರಮಣ ದಿವಸೇನ
ಸಂಕ್ರಮಣ ದಿವಸೇನ ಮುಂಜಾಳೆ ಆರಗಂಟೇನ

ಮುಂಜಾಳಿ ಆರಗಂಟೀಗೆ ಚಾಜ ಮಾಡುತಾರೇನ
ಬೀಗರು ಬರುವುತಾರೇನ ಮದುವಿ ಮಾಡುತಾರೇನ
ಎಣ್ಣಿ ಹಚ್ಚುತಾರೇನ ಅರಶಿನ ಹಚ್ಚುತಾರೇನ
ನೀರ ಮಿನಿಯುತಾರೇನ ಸುರಗಿ ಸುತ್ತುತಾರೇನ
ಕಾಲುಂಗರ ಇಡುವುತಾರೇನ ಪಿಲ್ಯಾ ಇಡವುತಾರೇನ
ಮುತ್ತೈದಿ ಬಳಿಯಾ ಹಾಕ್ಯಾರೆ ಮುತ್ತು ತರುವುತಾರೇನ
ತಾಯಿ ಮಕ್ಕಾಳು ಮಿನದಾರ ಬಟ್ಟಿ ಮಾಡುತಾರೇನ
ಸ್ಯಾಸಿಕಟ್ಟಿ ಮ್ಯಾಲೇನ ಸಿದ್ದರಾಮ ಹೋದನ
ಸಾಂಬಾಯಿ ಅಲ್ಲೇಳ ಸಿದ್ದರಾಮನ ಜೋಡಿಗೆ
ಸಿದ್ದರಾಮನ ಜೋಡಿಗೆ ಎಡಕ ಕೂಡುತಾಳೇನ
ಮುಂಜಾನಿ ಏಳನ ಹೋಗ್ಯಾನ ಹದಿನೈದು ನಿಮಿಷದೊಳಗೇನ
ಏಳು ಹದಿನೈದಕಲ್ಲೇಲ ಕರಮಣಿ ಕಟ್ಟುತಾರೇನ
ಕರಮಣಿ ಕಟ್ಟುತಾರೇನ ಅಕ್ಕಿಕಾಳ ಒಗದಾರ
ಅಕ್ಕಿಕಾಳ ಒಗದಾರ ಸ್ಯಾಸಿ ಮುಗಸೂತಾರೇನ
ಹತ್ತು ಮಂದಿನಲ್ಲೇಳ ರೈತರು ಮದುಮಕ್ಕಳಾದರ
ಕಳಸ ಹಿಡಿಯುತಾರೇನ ಮದುಮಕ್ಕಳು ಆಗುತಾರೇನ
ಅಂಗಿ ಕಳಿಯುತಾರೇನ ಕಸಿಅಂಗಿ ಹಾಕುತಾರೇನ
ಅರಿಶಿಣ ಹಚ್ಚುತಾರೇನ ಭಾಸಿಂಗ ಕಟ್ಟುತಾರೇನ
ಕೈಗಿ ಕಂಕಣ ಕಟ್ಯಾರೆ ಮೈಗಿ ಅರಿಶಿಣ ಹಚ್ಯಾರ
ಏಳು ಹದಿನೈದಕಲ್ಲೇಳ ಕರಮಣಿ ಕಟ್ಟುತಾರೇನೆ
ಸಂಜಿತಾನನಲ್ಲಪ್ಪ ಮಡದಿ ಇರುವುತಾಳೇನ
ಸಿದ್ದರಾಮನ ಸಂಗಟ ಮಡದಿ ಮಾತನಾಡ್ಯಾಳ
ಮಡದಿ ಸಂಗಟಲ್ಲೇಳ ಸಿದ್ದಾರಾಮ ನಡದಾನ
ಆರು ಘಂಟನಾದವ ಏಳ ಘಂಟಾನಾದವ
ಎಂಟರ ಒಳಗನಲ್ಲೇಳ ಸಿದ್ದಾರಾಮನಂದಾನ
ಸಿದ್ದಾರಾಮನಲ್ಲೇಳ ಮದ್ದಿಲಿ ಕುಣಿಯಾ ಹೊಡದಾನ
ಮದ್ದಿಲಿ ಕುಣಿಯಾ ಹೊಡದಾನೆ ಮದ್ದ ಹಾಕುತಾನೇನ
ಗಂಡನ ಮಾತನಲ್ಲೇಳ ಮಡದಿ ಮೀರಲಿ ಬಾರದ
ಮಡದಿ ಮಾತನಲ್ಲೇಳ ಗಂಡ ಮೀರಲಿ ಬಾರದ
ಮದ್ದಿನ ಕುಣಿಯ ಒಳಗೇನ ಮಡದೀನ ಕುಂದ್ರುತಾಳೇನ
ಮೂರ ಕಂಡಗ ಮದ್ದೇನ ಮ್ಯಾಲ ಒಟ್ಟುತಾರೇನ
ಸಂಜಿ ಎಂಟನಾದರ ಮದ್ದು ಒಟ್ಟುತಾರೇನ
ಒಂಬತ್ತರೊಳಗನಲ್ಲೇಳ ಮದ್ದು ಕುಂದ್ರುತಾವೇನ
ಮದ್ದು ಕುಂತ್ರುತಾವೇನ ಮದ್ದು ಬಿಚ್ಚುತಾರೇನ
ಸಿದ್ದರಾಮನ ಮಡದೇನ ಮದ್ದಿನ ಕುಣಿಯ ಒಳಗೇನ

ಒಂಬತ್ತುವರಿಯಾನಾದಾಗ ಮದ್ದಿಗಬೆಂಕಿಯ ಕೊಟ್ಟಾರ
ಮದ್ದಿಗ ಕೊಳ್ಳಿಯ ಕೊಟ್ಟಾನೆ ಮದ್ದ ಸುಡುವುತಾವೇನ
ಮದ್ದ ಸುಡುವುತಾವೇನ ಮಡದಿ ಸುಡುವುತಾವೇನ
ಏಳು ಹದಿನೈದು ನಿಮಿಟಕ ಕರಮಣಿ ಕಟ್ಟುತಾರೇನ
ಸಂಜಿ ಒಂಬತ್ತರತಾನೇನ ಮಡದಿ ಸುಟ್ಟ ಹೋದಳ
ಐದು ನಂದಿಕೋಲೇನ ಯಾರ ಪಾಲಿಗ ಆವೇಳ ೭೭೦
ಮಲ್ಲಿಕಾರ್ಜುನ ಮಹಾದೇವಗ ಎರಡ ನಂದಿಕೋಲೇನ
ಸಿದ್ದರಾಮಗಲ್ಲೇಳ ಎರಡ ನಂದಿಕೋಲೇನ
ಒಂದು ನಂದಿ ಕೋಲೇನ ಹರಿಯ ಜನರ ಓಣ್ಯಾಗ
ಹರಿಯಾಜನರ ಓಣ್ಯಾಗ ನಂದಿಯಾಕೋಲ ಬಿಟ್ಟಾರ
ನಂದಿಯ ಕೋಲನಂದಾರ ಖೂನ ಉಳಿಯುತಾವೇನ
ಖೂನ ಉಳಿಯುತಾವೇನ ಚಾಜ ಬರುವುತಾವೇನ
ಸೊನ್ನಲಗಿರಿಯ ಒಳಗೇನ ಐದ ದಿನಮಾನಲ್ಲೇಳ
ಐದ ದಿನಮಾನಲ್ಲೇಳ ನಂದಿಯ ಕೋಲ ಮೆರದಾವ
ನಂದಿಯ ಕೋಲ ಮೆರದಾರ ಜಾತೂರಿ ಆಗುತಾವೇನ
ಸಿದ್ದಾರಾಮನ ಹಾಡೇನೆ ಇಲ್ಲಿಗ ಮುಗಿಯುತಾವೇನ ೭೮೦
ದೇವಿ ಧರ್ಮುರ ಹಾಡೇನ ಇಲ್ಲಿಗ ಒಂದು ಸಂದೇನ
ಇಲ್ಲಿಗ ಒಂದು ಸಂದೇನ ಹಾಡಿದರ ಪದ ಮುಂದೇನ
ಕಳಸವಿಟ್ಟಾರ ಕವಿತ ಕಟ್ಯಾರ ಹೊನ್ನ ಜಗ್ಗುನಿ ಗೌಡರೋ
ದ್ಯಾವರು ಬಂದಾರ ಬನ್ನೀರೆ ೭೮೪

ಕೃತಿ : ಜನಪದ ಹಾಲುಮತ ಮಹಾಕಾವ್ಯ

***

೨೧. ಹರಳಯ್ಯ

ಹರಳಯ್ಯ

ಅಣ್ಣನ ನೆನಿಮನವೆ ಅಣ್ಣಯ್ಯನ ನೆನಿಯೋ
ಸಣ್ಣಗೊರಳರನ ನೆನಿ ಮನವೆ । ಭೂಮಿಗೆ
ಎಪ್ಪು ಕೊಟ್ಟಯ್ಯನ ನೆನಿಮನವೆ ॥ ೧ ॥

ಕಲ್ಲು ಹುಟ್ಟೋದಕಿಂತ ಕಲ್ಯಾಣ ಹುಟ್ಯಾವ
ಈ ಭೂಮಿಗೆ ಕಣ್ಣ ಕೊಟ್ಟಯ್ಯನ । ನೆನಿ ಮನವೆ
ಹರಳಯ್ಯನ ಕಲ್ಲಿಗೆ ಎಷ್ಟು ಎರದಾನೆ ॥ ೨ ॥

ಭೂಮಿ ಹುಟ್ಟೋದಕಿನ್ನ ಭೂಪಾಲ ಹುಟ್ಯಾನ
ಭೂಮಿಗೆ ಎಪ್ಪು ಎರದಾನ । ಹರಳಯ್ಯ
ಮ್ಯಾಗುಳ್ಳ ಶಿವಗ ಏಳು ದಿನಕ ಹಿರಿಯನ ॥ ೩ ॥

ಸತ್ತದ್ದು ತಿಂಬೋನು ಕತ್ತಿಯ ಮಸಿಯೋನು
ಕಟ್ಟಿಯ ಕೆಳಗ ಇರುವಾನು । ಹರಳಯ್ಯ
ಏರಿಯ ಕೆಳಗ ಇರುವೋನು ॥ ೪ ॥

ಕೋಳಿ ಕೂಗದಕಿನ್ನು ನಾಯಿ ಕೂಗದಕಿನ್ನು
ಮುಂಚೆ ಎದ್ದನವ್ವ ಹರಳಯ್ಯ । ಊರು ಬಿಟ್ಟು
ಹೋಗ್ವಾಗ ಏನೇನೋ ಮರ್ತಾನ ॥ ೫ ॥

ಹಟ್ಟಿ ಬಿಟ್ಟು ಹೋಗ್ವಾಗ ಗುರುವಿನ ಮರ್ತಾನ
ಓದವೆರಡು ಹಲಗಿ ಧಪೆದಾರ । ಹರಳಯ್ಯ
ಕಟ್ಟವೆರಡು ಹಲಗಿ ಇಭೂತಿಗಟ್ಟಿ ॥ ೬ ॥

ಅಣ್ಣನ ಮಠದಾಗ ಆಳಮಟ ಮಲ್ಲೀಗಿ
ಶಿವ ಶಿವನೆಂಬೋ ಗಿಳಿಹಿಂಡು । ಕೊಯ್ದು ಹೂ
ಹರಳಯ್ಯನ ಕೆಂಜೆಡೆಗೆ ಹೊಸ ಹೂ ॥ ೭ ॥

ಹರಗಿದ ಹೊಲದಾಗ ಹರಗದ ಹೊಲದಾಗ
ಸುರ ಹೊನ್ನೆ ಬೆಳೆದ ಬೈಲಾಗ । ನಮ್ಮ ಗುರುಗೆ
ಛತ್ರಿಕಿ ಸಾಲಿಟ್ಟು ಬರ್ತಾವ ॥ ೮ ॥

ಆದ ಅಕ್ಕಿ ತರುವೆ ತೇದ ಗಂಧ ತರುವೆ
ಉಗುರು ರಾಜಣದ ಹೂ ತರುವೆ । ಕುಟ್ಟಿದಕ್ಕಿ
ಬಟ್ಟೀಲೆ ಗಂಧ ಹೂವ ತರುವೆ ॥ ೯ ॥

ಕಾವಿಯ ಉಡುವರು ಕಾವಿಯ ತೊಡುವರು
ಕಾವೇರಿ ಹೊಳೆಯಿಂದ ಬರುವಳು । ನಮ್ಮ ಗುರುವಿಗೆ
ಹಣ್ಣ ಕಳಿವ್ಯಾರು ಜನರಲ್ಲಿ ॥ ೧೦ ॥

ನಿಂಬಿಯ ಹಣ್ಣಿನ್ಹಂಗ ಕಂದ ನಿನ್ನ ತೋಳು
ಬಂದರು ಜಂಬಯ್ಯನ ಗುಡ್ಡದ ಹಿಂದೆ । ಕಂದಯ್ಯನ
ಕೊಂದು ಭೂಮಿಗೆ ಎಷ್ಟು ಎರದಾರ ॥ ೧೧ ॥

ಬಾಳೆ ಹಣ್ಣಿನ್ಹಂಗ ಬಾಲ ನಿನ್ನ ತೋಳು
ಬಂದರು ಜಂಬಯ್ಯನ ಗುಡ್ಡದ ಹಿಂದೆ । ಬಾಲಾನ
ಕೊಂದು ಭೂಮಿಗೆ ಎಷ್ಟು ಎರದಾರ ॥ ೧೨ ॥

– ಶ್ರೀಮತಿ ಲಲಿತಾ ವೀರುಪಾಕ್ಷ ಗೌಡ

***

ಹರಳಿನ ಹಾಂಗ ಹರಳಯ್ಯಾ

ಧರಿಮಗ ಬಸವಣ್ಣ ದರಬಾರಕ ಹೊಂಟಾರ
ದಾರ್‍ಯಾಗ ನಿಂತಾರ ಶರಣರು
ಬಸವಾಗ ನಮಿಸ್ಯಾರ ಭಕುತಲಿ ॥ ಪ ॥

ಶರಣ ಒಳಗ ಹರಳಯ್ಯನೆಂಬುವರು
ಹರಳಿನ ಹಾಂಗ ಹೊಳಿತಿದ್ದರು
ಎಲಿಯ ಮರೆಯ ಕಾಯಾಗಿದ್ದರು ॥ ೧ ॥

ಕುದುರೆಯ ಮ್ಯಾಲಕುಂತ ಬಸವಗ ಕಂಡಾರ
ಉದುರ್‍ಯಾದ ಬಾಯಾ ಮಾತೊಂದು
ಶರಣಾರ್ಥಿ ಬಸವಣ್ಣ ತಾಯೆಂದು ॥ ೨ ॥

ಗೋಣೆತ್ತಿ ಬಸವಯ್ಯ ಹರಳಯ್ಯಗ ನೋಡ್ಯಾರ
ಕಣ್ಣಾಗ ಕಣ್ಣಿಟ್ಟು ನುಡಿತಾರ
ಶರಣು ಶರಣಾರ್ಥಿ ನನತಂದಿಯೆಂದು ॥ ೩ ॥

ದಂಗಾಗಿ ನಿಂತಾರ ಆ ಮಾತ ತಾ ಕೇಳಿ
ಅಂಗೆಲ್ಲಾ ಬೆವತಾದ ಅವರದು
ಕಂಗಳ ತುಂಬ್ಯಾವ ಆ ಗಳಿಗಿ ॥ ೪ ॥

ಕಣ್ಣೀರ ಹರದಾವ ಹರಳಯ್ಯಗ ಆವಾಗ
ಮನಿಗರ ಬಿರುತಾರ ಹಂಗೇ ತಾ
ಕಟ್ಟಿಮ್ಯಾಲ ಕುಂತಾರ ಉಸ್ಸೆಂದು ॥ ೫ ॥

ಮಡದಿ ಕಲ್ಯಾಣಮ್ಮ ಕಾಯಕ ಬಿಟ್ಟಾಳ
ಎದ್ದುತಾ ಹೊರಗೆದ್ದು ಬರುತಾಳ
ಗಂಡಗ ಯಾಕೆಂದು ಕೇಳ್ಯಾಳ ॥ ೬ ॥

ಹಾದ್ಯಾಗ ಕಂಡಿದ್ದು ಅಲ್ಲಿತಾ ಕೇಳಿದ್ದು
ದುಃಖದಿ ನುಡಿತಾರ ಮಡದಿ ಮುಂದ
ಕಲ್ಯಾಣಮ್ಮ ಚಿಂತಿ ಮಾಡ್ಯಾಳ ॥ ೭ ॥

ಚಿಂತ್ಯಾಗ ಹೊಳದಾದ ಮುತ್ತಂತ ವಿಚಾರ
ಗಂಡಗ ನುಡಿತಾಳ ಗಳಿಗ್ಯಾಗ
ಹರಳಯ್ಯ ಹಿಗ್ಗಿಲಿ ನಗತಾನ ॥ ೮ ॥

ಗಂಡಂದು ಬಲತೊಡೆ ಮಡದಿರು ಎಡತೊಡೆ
ಮ್ಯಾಲಿಂದು ಚರಮ ತೆಗೆದಾರ
ಬಸವಾ ಎನುತಾ ಚಪ್ಪಲಿ ಹೊಲಿತಾರ ॥ ೯ ॥

ನದುರಾಗುವಂತ ಚಪ್ಪಲಿ ಹೊಲದಾರ
ಪತ್ರೋಳಿ ಎಲಿದಾಗ ಇಟ್ಟಾರ
ತಲಿಮ್ಯಾಲ ಹೊತ್ತಕೊಂಡು ಹೊಂಟಾರ ॥ ೧೦ ॥

ಬಸವಣ್ಣ ಕುಂತಾರ ಮಾಮನಿ ಒಳಗರ
ಸುತ್ತೆಲ್ಲ ಶರಣರು ನೆರದಾರ
ಹರಳಯ್ಯ ತಾ ನಡದು ಬಂದಾದ ॥ ೧೧ ॥

ಧ್ವನಿಕೇಳಿ ಬಸವಣ್ಣ ಹೊರಗೆದ್ದು ಬಂದಾರ
ಹರಳಯ್ಯನ ಕೈದಾಗಿನ ಚಪ್ಪಲಿ ನೋಡ್ಯಾರ
ಮಿಂಚಾಗಿ ಹೊಳೆದಾವ ಕಣ್ಣಿಗಿ ॥ ೧೨ ॥

ಕೈಯಾಗಿನ ಮೆಟ್ಟೆಡಕ್ಕ ತಲಿಬಾಗಿ ನಮಿಸ್ಯಾರ
ತಲಿಮ್ಯಾಲ ಇಟಕೊಂಡು ಕಣ್ಮುಚ್ಚ್ಯಾರ
ಮುಂದಿನ ಕಲ್ಯಾಣಕ ಹಾದಿ ಎನತಾರ ॥ ೧೩ ॥

ಬಸವನ ಈ ನುಡಿ ತಿಳಿಲಿಲ್ಲ ಯಾರಿಗಿ
ತಿಳಿದಾದ ಹಡಪದ ಅಪ್ಪಣ್ಣಗ
ಎದ್ದು ತಾ ಬಂದು ಕೈಯ ಮುಗಿತಾರ ॥ ೧೪ ॥

ಶರಣರೆಲ್ಲರು ಬಂದು ಕೈಹಚ್ಚಿ ನಮಿಸ್ಯಾರ
ರೇಶಿಮೆ ವಸ್ತ್ರದಾಗ ಸುತ್ತ್ಯಾರ
ಹರಳನ ತಲಿಮ್ಯಾಲ ಇಟ್ಟಾರ ॥ ೧೫ ॥

ಜ್ವಾಕಿಲಿ ಮನಿಗೊಯಲಾಕ ಹೇಳ್ಯಾರ ಅವರು
ತಲಿಮ್ಯಾಲ ಇಟಗೊಂಡು ಹೊಂಟಾರ
ಹಾದ್ಯಾಗ ಸಿಕ್ಕಾನ ದುಸ್ಮಾನ ಮಧುವರಸ ॥ ೧೬ ॥

ಕೈಯಾಗಿಂದು ಕಸಗೊಂಡು ಕಾಲಾಗ ಮೆಟ್ಟಾನ
ಬೆಂಕಿಯು ಬಿದ್ದಾಂಗ ಚೀರ್ಯಾನ
ಎತಗೊಂಡು ತಂದು ಮನಿಯಾಗ ಹಾಕ್ಯಾರ ॥ ೧೭ ॥

ದಿನಗಳು ಕಳದಾವ ತಿಂಗಳು ಹೋಗ್ಯಾವ
ಹಕ್ಕಿಯು ಬಿಟ್ಟಾಂಗ ಬಾಯಿಬಿಡತಾನ
ಸಾಯಬೇಕು ಎಂದು ಅನತಾನ ॥ ೧೮ ॥

ಒಂದಿನ ಬಂದಾವ ಅವನಿಗಿ ಒಳ್ಳೆದಿನ
ಮನಿಯಾಗಿನ ಹೆಣ್ಣು ಮಗಳು ಹರಳನ ಮನಿಗ್ಹೋಗಿ
ಕಾಯಕದ ನೀರ ತಂದಾಳ ॥ ೧೯ ॥

ಕಾಯಕದಾ ಆ ನೀರ ಮೈಮ್ಯಾಲ ಸುರಿದಾಳ
ಉರಿಯೆಲ್ಲ ನಿಂತು ತಣ್ಣಗಾಗಿ
ಮಧುವರಸ ನೀರಿನ ಕತಿ ಕೇಳ್ಯಾನ ॥ ೨೦ ॥

ಹರಳಯ್ಯನ ಮಹಿಮೆಯ ಆ ಗಳಿಗಿ ಅರತಾನ
ಓಡುತಾ ಹೋಗಿ ಪಾದಕ ಬಿದ್ದಾನ
ತಾ ಕ್ರೋಧವ ಬಿಟ್ಟು ಶರಣಾಗ್ಯಾನ ॥ ೨೧ ॥

– ಶ್ರೀಮತಿ ಗೌರವ್ವ ಕಾಡಾದಿ

***

ಹರಳಯ್ಯ

ಒತ್ತರ ಬಂದ ಸಭಾದಾಗ ಸ್ತೋತ್ರ ಮಾಡಿ ಹೇಳತೀನಿsss
ಚಿತ್ತವಿಟ್ಟ ಕೇಳಿರೆಣ್ಣಾ ಆದ ಮಜಕೂರಾ ।
ನಾ ತಿಳಸ್ತೀನಿ ಸರ್ವರಿಗೆ ಮಾಡಿ ವಿಚಾರ ।
ಮಹಾ ಯೋಗಿಗಳು ಮಾಡಿದಂಥ ಕಥಾಸಾರಾ ।
ಬಸವೇಶ್ವರನ ಆಳಿಕೆಯಲ್ಲಿ ಆದ ಕೀರ್ತಿ ಹೇಳತೀನಿss
ಕೇಳಿದವರ ಜಲ್ಮ ಆಗುವದು ಉದ್ಧಾರಾ ।
ಸಮಗಾರ ಹರಳಯ್ಯ ಮಾಡಿದ ಕೀರ್ತಿ ಕೇಳ್ರಿ ಎಂಥ ವಿಚಿತ್ರ
॥ ಜೀ ಜೀ ॥ ॥ ಪಲ್ಲ ॥

ಒಂದಾನೊಂದು ಕಾಲದಲ್ಲಿ ಹರಳಯ್ಯ ಎಂಬ ಶರಣ ತಾನುss
ಬಸವೇಶ್ವರನ ಭೆಟ್ಟಿಯಾಗಲಿಕ್ಕ ಹೋಗಿ ನಿಂತಾನ ।
ನೋಡಿ ಬಸವೇಶ್ವರರು ಮನದೊಳಗ ಖುಷಿಯಾಗ್ಯಾರ ।
ಹರಳಯ್ಯನವರು ಶರಣು ಶರಣಾರ್ತಿ ಎಂದು ಕೈ ಮುಗದಾರಾ ।
ಶರಣ ಶರಣಾರ್ತಿ ಮತ್ತ ಶರಣರಿಗೆ ಶರಣೆಂದು ಬಸವೇಶ್ವರರುss
ಹರಳಯ್ಯನವರಿಗೆ ಕೈ ಮುಗಿದು ನಿಂತಾರss ।
ನೋಡಿ ಹರಳಯ್ಯನವರು ಮನಸಿನೊಳಗ ಖಿನ್ನರಾದಾರಾ ॥ ಜೀ ಜೀ ॥

ಹೇ ಇಷ್ಟ ಕೇಳಿ ಹರಳಯ್ಯನವರು ಮಾರಿ ಸಣ್ಣದು ಮಾಡಿಕೊಂಡುss
ದುಶ್ಚಿಂತವಾಗಿ ಬಂದ ತಮ್ಮ ಮನಿಯಲ್ಲಿ ಕುಂತಾರಾ ।
ಆಗ ಆತನ ಮಡದಿ ಕೇಳತಾಳ ಮಾಡಿ ವಿಚಾರ ।
ಏನ್ರಿ ಸ್ವಾಮಿ ಮಾರಿ ಯಾಕ ಸಣ್ಣದಾಗೇದರಿss ।
ಏನ ಹೇಳಲಿ ಸತಿ ನಾನು ಪಾಪ ನಿವಾರಣ ಆದೀತೆಂದುsss
ಬಸವೇಶ್ವರನ ಹಂತೀಲಿ ಹೋಗಿ ಶರಣ ಮಾಡಿದರs ।
ಜಲ್ಮ ಉದ್ಧಾರಾದೀತೆಂದು ನಾನು ಹ್ವಾದೆ ಬರರರಾ ॥ ಜೀ ಜೀ ॥

ಇಳವು:
ಶರಣು ಶರಣೆಂದು ಶರಣರಿಗೆ ಶರಣ ಮಾಡಿದರಽ ।
ಕೈ ಮುಗದ ನಿಂತ ಬಸವೇಶ್ವರಽ ।
ಈ ದೋಷ ಹೋಗಲಿಕ್ಕ ಏನ ಮಾಡಲಿ ಹುನ್ನಾರಾ ।
ಇದೇ ಚಿಂತಿ ಹತ್ತಿತೋ ಭಯಂಕರಾ ॥ ಜೀ ಜೀ ॥

ಕೂಡಪಲ್ಲ :
ಹೇ ಇಷ್ಟ ಕೇಳಿ ತನ್ನ ಮಡದಿ ವಿಚಾರ ಮಾಡಿ ಹೇಳತಾಳಽಽ
ಇಷ್ಟೆ ಮಾತಿಗೆ ಚಿಂತಿ ಮಾಡಿ ಸಣ್ಣ ಆದಿಽರಾ ।
ಹೆಳ್ಯಾನ ಕರಿವುದಕ ।
ಮೈ ಚರಮ ತಗದು ಪಾದರಾಕ್ಷಿ ಮಾಡರಿ ಶರಣರ ।
ಹೋಗಿ ಬಸವೇಶ್ವರರಿಗೆ ಮೆಡ್ರಿ ಅಂತ ಕೊಡ್ರಿ ಅಂತಾಳರಿ ।
ಬಸವೇಶ್ವರನ ಆಳಿಕೆಯಲ್ಲಿ ಆದ ಕೀರ್ತಿ ಹೇಳತೀನಿಽಽ
ಕೇಳಿದವರ ಜಲ್ಮ ಆಗುವದು ಉದ್ಧಾರಾ ।
ಸಮಗಾರ ಹರಳಯ್ಯ ಮಾಡಿದ ಕೀರ್ತಿ ಕೇಳ್ರಿ ಎಂಥ ವಿಚಿತ್ರಾ
॥ ಜೀ ಜೀ ॥ ॥ ಚೌಕ ೧ ॥

ಹೇ ಸತಿ ಪತಿ ಕೂಡಿಕೊಂಡು ಪಾದರಾಕ್ಷಿ ಮಾಡಿಕೊಂಡುಽಽ
ಬಸವೇಶ್ವರನ ಹಂತಿಲೆ ಹೋಗಿ ಮೆಡ್ರಿ ಅಂತಾರಾ ।
ನೋಡಿ ಬಸವೇಶ್ವರ ಮನಸೀನೊಳಗ ಹೀಂಗ ತಿಳದಾರಾ ।
ಮೈ ಚರಮ ತಗದು ಪಾದರಾಕ್ಷಿ ಮಾಡಿದ್ದಾರೋ ಶರಣಽರಾ ।
ಇಂಥ ಕೆರವು ಮೆಡಬೇಕಾದ್ರ ಯಾವ ನರಕ ಭೋಗಿಸಲೆಂದುಽಽ
ಕೆರವುಗಳು ತಗೊಂಡು ತನ್ನ ತಲಿಮ್ಯಾಲ ಇಟಕೊಂಡಾರಾ
ಜಲ್ಮ ಉದ್ಧಾರಾದೀತೆಂದು ಥೈ ಥೈ ಅಂತ ಕುಣದಾರಾಽಽ ॥ ಜೀ ಜೀ ॥

ಹೇ ಇಷ್ಟ ನೋಡಿ ಹರಳಯ್ಯ ತಾನು ಮಾರಿ ಸಣ್ಣದು ಮಾಡಿಕೊಂಡುಽಽ
ಕೆರವುಗಳು ತಗೊಂಡು ತನ್ನ ಕಯ್ಯಾಗ ಹಿಡದಾನೂಽ ।
ಆಗ ಬಸವೇಶ್ವರ ಕುಣಿಯಽದು ಬಿಟ್ಟು ದೃಷ್ಟಾಂತ ಹೇಳ್ಯಾನು ।
ಇವು ಕೆರುವು ಮೆಡುವು ಅಲ್ಲ ಪೂಜಾ ಮಾಡೋವು ಶರಣೆಂದಾನು ।
ಇಷ್ಟ ಕೇಳಿ ಹರಳಯ್ಯನವರೂ ಮಾರಿ ಸಣ್ಣದು ಮಾಡಿಕೊಂಡುಽಽ
ಕೆರುಗಳು ತಗೊಂಡು ತನ್ನ ಮನೀಗಿ ನಡದಾನುಽಽ ।
ನಡುದಾರಿಯೊಳಗ ಮಧುವರಸ ಗಂಟ ಬಿದ್ದಾನೂಽಽ ॥ ಜೀ ಜೀ ॥

ಎಲೋ ಹರಳಯ್ಯ ಈ ಕೆರವು ನೀ ಏನ ಚಂದ ಮಾಡೀದೆಂದೂಽಽ
ಖರೀದಿ ಕೊಡುವೋ ತಗೋತೀನಿ ಅಂತ ಕೇಳ್ಯಾನೂಽಽ ।
ಆಗ ಹರಳಯ್ಯ ಅಂದ ಬ್ಯಾಡ ರಾಜ ಬಿಡುಽಽ ಸುಮ್ಮನೂಽಽ ।
ಇವು ನರ ಮನುಷ್ಯರು ಮೆಡುವು ಕೆರುವಲ್ಲ ಕೇಳಿನ್ನೂಽಽ ।

ಇಷ್ಟ ಕೇಳಿ ಮಧುವರಸ ಹರಳಯ್ಯನಿಗೆ ಕೋಪದಿಂದಽಽ
ಜಬರ ಮಾಡಿ ಜೋಲಿ ಹೊಡಿದು ನೆಲಕ ಕೆಡವ್ಯಾನೂಽಽ ।
ಆ ಕೆರವಿನೊಳಗ ಕಾಲ ಇಟ್ಟು ರಾಜ ನೋಡ್ಯಾನುಽಽ ॥ ಜೀ ಜೀ ॥

ಇಳವು :
ಮೈ ಝುಮ್ಮ ಅಂದಕೇಸಿ ಉರ್ಪ ಇಟ್ಟಿತೋ ತಾನಽಽ
ಅಗ್ನಿಯೊಳಗ ಬಿದ್ದಾಂಗ ಆ ಕ್ಷಣಾಽಽ ।
ನಡುದಾರಿಯೊಳಗ ಬಿದ್ದು ಹೊರಳಿ ಹೊರಳಿ ಅಳತಾನಽಽ
ನೋಡ್ರಿ ಮಧುವರಸರ ಹೈರಾಣಾಽಽ ।
ದಾರಿ ಹಿಡದು ಹೋಗು ಮಂದಿ ನೋಡತಾರಿ ಆತನಽಽ
ಹೀಂಗಾಗೂದ ಏನ ಕಾರಣಽಽ ॥ ಜೀ ಜೀ ॥

ಕೂಡಪಲ್ಲ :
ಹೇ ಮಧುವರಸನ ಸುದ್ದಿ ಕೇಳಿ ಮಡದಿ ಮಕ್ಕಳು ಅಂತಾರಿಽಽ
ಈಗಿದೇ ಚಲೋ ಇದ್ದ ಏನ ಚಮತ್ಕಾರಾಽ ।
ನೋಡಿ ಮಧುವರಸನ ಎತ್ತಿಕೊಂಡು ಮನಿಗೆ ವೈದಾರಽಽ ।
ಅವನ ತಾಪ ನೋಡಿ ಸರ್ವ ಮಂದಿ ದುಃಖ ಮಾಡ್ಯಾರಾ ।
ಬಸವೇಶ್ವರನ ಆಳಿಕೆಯಲ್ಲಿ ಆದ ಕೀರ್ತಿ ಹೇಳತೀನಿಽಽ
ಕೇಳಿದವರ ಜಲ್ಮ ಆಗುದು ಉದ್ಧಾರಾ ।
ಸಮಗಾರ ಹರಳಯ್ಯ ಮಾಡಿದ ಕೀರ್ತಿ ಕೇಳ್ರಿ ಎಂಥ ವಿಚಿತ್ರಾಽಽ
॥ ಜೀ ಜೀ ॥ ॥ ಚೌಕ ೨ ॥

ಹೇ ಮಧುವರಸ ತನ್ನ ತೊತ್ತದೇರಿಗೆ ಹೇಳತಾನಽಽ
ನಾನು ಮಾತ್ರ ಉಳೇದಿಲ್ಲಾ ಹೋಗತೀನಿ ಮಣ್ಣಿಗಿ ।
ತಲಾಗ ಒಂದೊಂದು ಕೊಡ ತಗೊಂಡ ಹೋಗರಿ ಭಾವಿ ನೀರಿಗಿ ।
ಮೈ ತಣ್ಣಗೇರೆ ಆದೀತೆಂದು ಬಿದ್ದಾನ ಆಸೀಗಿ ।
ಮೂರ ಮಂದಿ ತೊತ್ತದೇರು ಬ್ಯಾಸರಿಲ್ಲದೆ ನೀರ ತಂದುಽಽ
ಬರಕಿ ಬರಕಿ ಕುಂತಿದ್ದರೋ ಬಹಳ ಖಿನ್ನಾಗಿ ।
ಆಗ ಮಧುವರಸಗ ಉರುಪ ಇಡತರಿ ತೀರ ಹೆಚ್ಚಾಗಿಽ ॥ ಜೀ ಜೀ ॥

ಏ ಎಲಾ ಈ ರಾಜನ ಮ್ಯಾಲ ಮಣ್ಣ ಚಲ್ಲಲಿ ಎಂದೂಽಽ
ಉಸುರ ಹಾಕಿ ಹೊಂಟಿದ್ದಾರಿಽ ಪುನಃ ನೀರಿಗೀ ।
ಡೊಂಬರಾಟೊಂದು ನಡದೀತಪ್ಪ ಅದೇ ದಾರೀಗಿ ।
ಆ ಆಟದ ಕಡಿ ಲಕ್ಷ ಹೊಯ್ತರಿ ಸಣ್ಣ ತೊತ್ತೀಗಿ ।
ಚುಕ್ಕಾ ಆಟ ಮುಗ್ಯಾತಾನ ಬಾಲಿ ನೋಡಿಕೊಂತ ನಿಂತಿದ್ದಾಳುಽ
ಹೊತ್ತ ಹೋಗಿ ಬಂದೀತಪ್ಪ ಬಹಳ ಜೇರೀಗಿ ।
ಆಗ ಗಾಭರ್ಯಾಗಿ ನೋಡತಾಳೋ ತನ್ನ ಗೆಳತೇರಿಗೀ ॥ ಜೀ ಜೀ ॥

ಹೇ ಅತ್ತ ಇತ್ತ ನೋಡುದ್ರಾಗ ಮತ್ತಾ ಸ್ವಲ್ಪ ತಡವಾಯ್ತುss
ನೀರ ಮಾತ್ರ ಉಳುದುವು ಇನ್ನ ಬಹಳ ದೂರಿಗಿ ।
ನಾ ಯಾವಾಗ ಹೋಗಿ ತರಬೇಕೆಂದು ಹೊಂಟಾಳೋ ತಿರಗಿ ।
ನೀರ ಒಯ್ಯದಿದ್ದರೆ ಬೈತಾರೆಂದು ತಿಳಿದಾಳು ಮನಸೀಗಿ ।
ಚಿಂತಿ ಮಾಡಿಕೋತ ನಾರಿ ಸ್ವಲ್ಪ ಮುಂದಕ್ಕೋಗದರೊಳಗss
ಸಮಗಾರ ಹರಳಯ್ಯನ ಬಚ್ಚಲ ಬಿತ್ತರಿ ಆಕಿ ದೃಷ್ಟಿಗಿ ।
ಅವೇ ನೀರ ತುಂಬಿ ಒಯ್ಯದಿದಾಳರೀ ರಾಜನ ಸಲುವಾಗಿss ॥ ಜೀ ಜೀ ॥

ಇಳುವು :
ಪ್ರೇಮದಿಂದ ನೀರ ಒಯ್ದು ಬರುಕ್ಯಾಳೋ ಸರಿಯಾಗಿ ।
ಉರುಪ ಹೋಯ್ತರೀ ಅದೇ ಗಳಗೀಗೀ ॥ ಜೀ ಜೀ ॥

ಮೈ ತಣ್ಣಗಾಯಿತೆಂದು ಎದ್ದು ಕುಂತಾನ ಖುಸಿಯಾಗಿs ।
ರಾಜ ನಾ ಉಳದೇನಂದ ಇಂದೀಗಿsss ॥ ಜೀ ಜೀ ॥

ಪ್ರೇಮದಿಂದ ಕರದ ಕೇಳತಾನ ಸಣ್ಣ ತೊತ್ತೀಗಿ ।
ಕೈ ಮುಗದು ನಿಂತಾಳರೀ ಶಿರಬಾಗಿss ॥ ಜೀ ಜೀ ॥

ಕೂಡಪಲ್ಲ :
ಏನು ತಂಗಿ ನೀನು ಮಾತ್ರ ನೀರ ಎಲ್ಲಿಂದ ತಂದೀ ಎಂದುss
ಖರೇ ಖರೇ ವಿಚಾರ ಮಾಡಿ ಹೇಳಂತಾರಾ ।
ಆಗ ಬಾಲಿ ಅಂದಳು ನನಗ ಮಾತ್ರ ಬಂತ ಅವಸsರಾ ।
ಬಂದದ್ದ ಬರಲಿ ಇದ್ದದ್ದ ಹೇಳತೀನಿ ಆದ ಮಜಕೂರಾ ।
ಬಸವೇಶ್ವರನ ಆಳಿಕೆಯಲ್ಲಿ ಆದ ಕೀರ್ತಿ ಹೇಳತೀನಿss
ಕೇಳಿದವರ ಜಲ್ಮ ಆಗುದು ಉದ್ಧಾರಾ ॥
ಸಮಗಾರ ಹರಳಯ್ಯ ಮಾಡಿದ ಕೀರ್ತಿ ಕೇಳ್ರಿ ಎಂಥ ವಿಚಿತ್ರ
॥ ಜೀ ಜೀ ॥ ॥ ಚೌಕ ೩ ॥

ಏನ್ರಿ ರಾಜಾ ನಿಮ್ಮ ದಸಿಂದ ಗಡಬಡಿದಿಂದ ನೀರಿಗ್ಹೋಗಾಗss
ದಾರಿಯೊಳಗ ಡೊಂಬ್ರಣ್ಣ ಆಟ ಹೂಡಿದ್ದs ।
ಅದೇ ಆಟ ನೋಡಿಕೊಂತ ನಾನು ಸ್ವಲ್ಪ ನಿಂತಿದ್ದ ।
ಚುಕ್ತಾ ಆಟ ಮುಗಿದ ಮ್ಯಾಲ ಎಚ್ಚರಾಯ್ತರಿ ನೀರ ತರುವುದಾ ।
ದೂರಿನ ನೀರು ತರಬೇಕಾದ್ರ ಯಾಳೆ ಉಳದಿಲ್ಲಂತ ತಿಳದss
ಸಮಗಾರ ಹರಳಯ್ಯನ ಬಚ್ಚಲದೊಳಗ ಕೊಡ ತುಂಬಿದ್ದ
ಅವೇ ನೀರ ತುಂಬಿ ತಂದು ರಾಜ ನಿಮ್ಮ ಮ್ಯಾಲ ಬರುಕಿದ್ದ ॥ ಜೀ ಜೀ ॥

ಏನು ತಂಗಿ ನೀನು ಮಾತ್ರ ಸತ್ಯ ಮಾತು ಹೇಳಿದೆಂದೂಽ
ಸಮಗಾರ ಹರಳಯ್ಯನ ಮಾತ ಕೇಳಿ ಗಾಭರಾಗಿದ್ದಽ ।
ಆತನ ಕೆರವು ಮೆಟ್ಟಿದ್ದರ ದಸಿಂದ ನನಗ ಹೀಂಗ ಆಗಿತ್ತೆಂದು ।
ಲಗು ಓಡಿ ಹೋಗಿ ಹಿಡಿದಿದ್ದಾನ್ರಿ ಆತನ ಪಾದಾಽಽ ।
ತಪ್ಪು ತಪ್ಪು ಆಯ್ತು ಗುರುವೆ ಏನ ಬೇಡತಿ ಬೇಡೆಂದುಽಽ
ಹುಲ್ಲ ಕಡ್ಡಿ ಬಾಯೊಳಗ್ಹಿಡದು ಉದ್ದ ಬಿದ್ದಿದ್ದ
ಶರಣ ನಿರಾಳ ಮನಸಿನಿಂದ ಎದ್ದ ಕೈ ಹಿಡದಿದ್ದಽಽ ॥ ಜೀ ಜೀ ॥

ಏನ್ರಿ ಗುರುವೆಽ ಈ ದೋಷ ಹೋಗಬೇಕಾದ್ರಽ ನಾ ಏನ
ಮಾಡಬೇಕೆಂದೂಽಽ ಕೆರವುಗಳು ಕೊಡ್ರಿ ಪೂಜಾ ಮಾಡತೀನೆಂದಾ ।
ಆಗ ಹರಳಯ್ಯ ಅಂದಽ ಇವನೀಗಿ ಜ್ಞಾನ ಬಂದಿತು ಇಂದಽ ।
ಈ ಕೆರವು ಅವನ ಕಯ್ಯಾಗ ಕೊಟ್ಟ ತಿಳಿಸಿ ಹೇಳಿದಾಽ ।
ಗುರುವೆಂಬುದು ಅಳಿದಕೇಸಿ ಅರಿವಿಲಿಂದ ತಿಳಿದ ನೀನುಽಽಽ
ಏಕ ನಿಷ್ಠಿಯಿಂದ ಇವುಕ ಪೂಜೆ ಮಾಡೆಂದ ।
ಶರಣರ ಚರಮಕ ಪೂಜೆ ಮಾಡಿದರ ಮುಂದೆ ಮುಕುತಿ
ದೊರೆಯುವದಽಽ ॥ ಜೀ ಜೀ ॥

ಇಳುವು :
ಹರಳಯ್ಯನ ಮೈಮಾ ಬಸವೇಶ್ವರ ತಾನು ತಿಳದಿದ್ದಽಽ
ಬಸವಣ್ಣ ತಾನು ತಿಳಿದಿದ್ದಽಽ
ಅಂದಲ್ಲೆಽಽ ಕೈ ಮುಗದು ನಿಂದ್ರತಿಽದ್ದಾಽಽ ॥ ಜೀ ಜೀ ॥

ಕೆರುವುಗಳು ತಂದಕೇಸಿ ಜಗಲಿ ಮ್ಯಾಲ ಇಟ್ಟಿದ್ದಽ
ಮಧುವರಸ ಜಗಲಿ ಮ್ಯಾಲ ಇಟ್ಟಿದ್ದಽ
ಪೂಜಾ ಮಾಡಿ ಮುಕ್ತಿ ಬೇಡತಿಽದ್ದಾಽಽ ॥ ಜೀ ಜೀ ॥

ಸಣ್ಣ ತೊತ್ತಿನ ಪುಣ್ಯದಿಂದ ನಾನು ಬದಿಕೀನಿ ಅಂತಿದ್ದಽ
ಮಧುವರಸ ಅಂತಿದ್ದ
ಜರದ ಪಿತಾಂಬರ ಉಡಸಿಽದ್ದಾಽಽ ॥ ಜೀ ಜೀ ॥

ಕೂಡಪಲ್ಲ :
ಒತ್ತರ ಬಂದ ಸಭಾದೊಳಗ ಸ್ತೋತ್ರ ಮಾಡಿ ಹೇಳತೀನಿಽ
ಚಿತ್ತವಿಟ್ಟು ಕೇಳಿರೆಣ್ಣಾ ಆದ ಮಜಕೂರಾ ।
ಸುತ್ತ ದೇಶದೊಳಗ ಇಂಗಳಿಗೂರಾಗ್ಯಾದ ಒಳೆ ಪಂತಾಽರಿ ।
ಲಾಳೇಸನ ಕವಿಗಳು ಸ್ವಂತರಿ ।
ಬಸವೇಶ್ವರನ ಆಳಿಕೆಯಲ್ಲಿ ಆದ ಕೀರ್ತಿ ಹೇಳತೀನಿಽಽ

ಕೇಳಿದವರ ಜಲ್ಮ ಆಗುವದು ಉದ್ಧಾರs ।
ಸಮಗಾರ ಹರಳಯ್ಯ ಮಾಡಿದ ಕೀರ್ತಿ ಕೇಳರಿ ಎಂಥ ವಿಚಿತ್ರಾss
॥ ಜೀ ಜೀ ॥ ॥ ಚೌಕ ೪ ॥

– ಕೃತಿ : ಹರದೇಶಿ ನಾಗೇಶಿ

***

ಹರಳಯ್ಯ

ಸೂಚಕ ಪದ್ಯ :– ಕಿರಿಕುಲದ ಹರಳಯ್ಯ ವರಶರಣ ತಾನಾದ
ಪರಮತವ ಜಯಿಸಿ ಹರಸಿದನು । ಹರಳನಿಗೆ
ಹರ ಮೆಚ್ಚಿ ಮೆರಿಸಿ ಕರೆದೊಯ್ದ ॥ ೧ ॥

ಕಾರಜೋಳದ ಮುಂದೆ ಯಾರು ನೆಲಸಿದರಯ್ಯ
ಮಾರಹರ ಭಕ್ತ ಹರಳಯ್ಯ । ತೋಡಿರುವ
ನೀರೊರತಿ ಸಾಕ್ಷಿ ಯುಗಯುಗಕೆ ॥ ೨ ॥

ಉಪ್ಪರದಿನ್ನಿ ಸಂಗ ಅಪ್ಪ ಶರಣನು ಹರಳ
ಹಿಪ್ಪರಗಿ ಮಾಚ ಬಸವನಿಗೆ । ಕೂಡಿದರು
ಅಪ್ಪಣ್ಣ ಶರಣ ಮಂಟಪಕೆ ॥ ೩ ॥

ನಂದಿಪಟ ಹಾರಾಡಿ ಮಂದಿರಕೆ ಮೆರೆಯುವವು
ಸಂದು ಸಾಲುಗಳ ಮನೆ ಮಾರು । ಕಲ್ಯಾಣ
ಚಂದಾದ ಬೀಡು ಶರಣರಿಗೆ ॥ ೪ ॥

ಕುಲದಲ್ಲಿ ಹೊಲೆಯನವ ಹೊಲಬಿನಲಿ ಹೊಲೆಯಲ್ಲ
ಹೊಲೆಯ ನೆಲೆಬಲ್ಲ ಘನ ಶರಣ । ಹರಳಯ್ಯ
ನೆಲಸಿ ಕಲ್ಯಾಣ ಪುರದೊಳಗೆ ॥ ೫ ॥

ತನುವಿಟ್ಟು ಮನ ಧನವ ಮನೆಯ ಕಾಯಕ ಮಾಡಿ
ಅನುಭಾವಿಯಾದ ಹರಳಯ್ಯ । ಮಂಟಪಕೆ
ಮಣಿಮಾಲೆಯಾದ ಶಿವಮತಕೆ ॥ ೬ ॥

ಮಡದಿ ಕಲ್ಯಾಣಮ್ಮ ಹಡದವ್ವ ಜಂಗಮಕೆ
ಬಿಡದೆ ದಾಸೋಹ ಮಾಡಿದಳು । ಕಲ್ಯಾಣ
ಪಡೆದು ಘನ ಹೆಸರ ನಾಡೊಳಗೆ ॥ ೭ ॥

ಒಂದಿವಸ ಹರಳಯ್ಯ ತಂದೆ ಬಸವನ ನೆನೆಸಿ
ವಂದಿಸಲು ಹಾದಿ ಕಾಯುತ್ತ । ಕುಳಿತಿದ್ದ
ಚಂದ ಕಲ್ಯಾಣ ಬೀದಿಯೊಳು ॥ ೮ ॥

ಕಲ್ಯಾಣ ಕೇರಿಯೊಳು ಬಲ್ಲಿದನು ಬಸವೇಶ
ಸಲ್ಲಿಸುತ ಶರಣು ಶರಣರಿಗೆ । ಬರುವಾಗ
ಅಲ್ಲೆ ಶರಣೆಂದ ಹರಳಯ್ಯ ॥ ೯ ॥

ಶರಣು ಶರಣೆಲೆ ಹರಳ ಕರುಣಿರಲಿ ನನ್ನಲ್ಲಿ
ಮರೆಯಬೇಡೆಂದು ಸಾಗಿದನು । ಹರಳಯ್ಯ
ಮರಳಿ ಚಿಂತಿಸುತ ಮನೆಕಡೆಗೆ ॥ ೧೦ ॥

ಶರಣೆಂದು ನಾನಂದೆ ಶರಣು ಶರಣೆಂದಾತ
ಶರಣೊಂದು ಮೇಲೆ ಹೊರಿಸಿದನು । ಬಸವನಿಗೆ
ಶರಣ ನಾ ಹೇಗೆ ತೀರಿಸಲಿ ॥ ೧೧ ॥

ಚಿಂತೆ ಮಾಡುತ ಹರಳ ಕುಂತು ನಿಲ್ಲುತ ಬಂದ
ಸಂತಸವು ಇಲ್ಲ ಮನಕೆಷ್ಟು । ಕಲ್ಯಾಣಿ
ಎಂತು ತಡವೆಂದು ಹುಡುಕಿದಳು ॥ ೧೨ ॥

ಬರುತಿರುವ ಹರಳನಿಗೆ ಮರತೆಯಾ ಹರ ಪೂಜೆ
ನೆರೆದ ಜಂಗಮಕೆ ತಡವಾತು । ದಾಸೋಹ
ಕರೆಯುವದು ನಿಮ್ಮ ಬರುವನ್ನು ॥ ೧೩ ॥

ಮಡದಿಗಾಗರುಹಿದನು ತಡೆದ ಆ ಕಾರಣವ
ನಡೆ ಸಾಗುಮಾಡು ದಾಸೋಹ । ಪರಸಾದ
ಪಡಕೊಂಡು ಪೂಜೆ ನೀಗಿಸುವ ॥ ೧೪ ॥

ಮಡದಿ ಕಲ್ಯಾಣಮ್ಮ ತೊಡಕು ಬಿಡಿಸಿದಳಾಕಿ
ಗಡನೊಂದು ಜೋಡು ಕೆರುಮಾಡಿ । ಬಸವನಿಗೆ
ಒಡೆಯ ಮೆಚ್ಚೆಂದು ಅರ್ಪಿಸರಿ ॥ ೧೫ ॥

ಮರುದಿನವೆ ಹರಳಯ್ಯ ಕೊರೆದ ಬಲದೊಡಿ ಚಮ್ಮ
ಹರನೆಂದು ಮಡದಿಯೆಡದೊಡೆಯ । ತಾ ಕೊಯ್ದು
ಭರನೆ ಹದಮಾಡಿ ಒಣಗಿಸಿದ ॥ ೧೬ ॥

ಮಿಸುಣಿಯದೆ ಜರಹಚ್ಚಿ ಹೊಸ ಮುತ್ತು ಪೋಣಿಸಿದ
ಕುಸುರ್ಥಣದ ರನ್ನ ಮಾಣಿಕದ । ಜೋಡುಗಳು
ಮಸಗಿದವು ಚಂದ್ರ ರವಿಯಂತೆ ॥ ೧೭ ॥

ತುಂಬ ಕಣ್ಣಿಲಿ ನೋಡಿ ಇಂಬಾತು ಮನಸಂದು
ನಂಬದಲೆ ಹೋದ ಕೈಗೆಲಸ । ಕಲ್ಯಾಣಿ
ಅಂದು ಮುಂದಿನ್ನು ಕೆಡಗಾಲ ॥ ೧೮ ॥

ಮುಂದಿನ ಕೆಡಗಾಲ ಇಂದು ನಮಗ್ಯಾಕೆಂದು
ಚೆಂದ ವಸ್ತದಲಿ ಹುದುಗಿಸಿದ । ಜೋಡುಗಳ
ತಂದ ಬಸವೇಶನರಮನೆಗೆ ॥ ೧೯ ॥

ಕಿಕ್ಕಿರಿದು ಜನ ಬಂದು ಸಕ್ಕರಿಗೆ ಇರಿವೆಗಳು
ಮುಕ್ಕಿದವೊ ವಚನ ಅಮೃತಕೆ । ಎಂಬಂತೆ
ಉಕ್ಕಿ ಅರಮನೆಯು ಹೊರಸೂಸಿ ॥ ೨೦ ॥

ಹೋದ ಹರಳನು ತಡೆದ ಕಾದ ಬಾಗಿಲವಂದು
ದಾದಾಗಲಿಲ್ಲ ಜನದೊಳಗೆ । ಶಿವಶರಣ
ಪಾದರಕ್ಷೆಗಳ ಪೂಜಿಸಿದ ॥ ೨೧ ॥

ಶಿವನಾಣಿ ಬಸವನಿಗೆ ಶಿವಭಕ್ತನರಿಕ್ಯಾಗಿ
ತವಕದಲಿ ಬಂದ ಬಾಗಿಲಕೆ । ಹರಳಯ್ಯ
ಶಿವರೂಪವೆಂದು ನಮಿಸಿದನು ॥ ೨೨ ॥

ಕಾಣುತಲಿ ಹರಳನನು ಜಾಣನೊಪ್ಪಿದ ಬಸವ
ಪ್ರಾಣ ಬಂದಂತೆ ಬಿಗಿದಪ್ಪಿ । ಶರಣನಿಗೆ
ಮಾನದೊಳು ಮಾತನಾಡಿಸಿದ ॥ ೨೩ ॥

ಮುಟ್ಟದಿರು ಬಸವೇಶ ಕೆಟ್ಟ ಹೊಲೆಯನು ನಾನು
ಬಟ್ಟ ಬಯಲಾಗಿ ಹೋಗಲೀ । ನಿಮ್ಮಂದೆ
ಸುಟ್ಟು ಬೂದ್ಯಾಗಿ ಬೀಳುತಲಿ ॥ ೨೪ ॥

ಹೊಲೆಯಲಲ್ಲದೆ ಲೋಕ ತಲೆಯಲ್ಲಿ ಹುಟ್ಟುವದೆ
ಹೊಲೆಯ ಎಣಿಸಿದರೆ ಕುಲವುಂಟೆ । ಶರಣರಿಗೆ
ಹೊಲಬಳಿದು ಬೇರೆ ಕುಲವುಂಟೆ ॥ ೨೫ ॥

ನೀತಿ ಮಂಟಪದೊಳಗೆ ಭೀತಿ ಶರಣರಿಗುಂಟೆ
ಮಾತಿನಲಿ ಮೊದಲು ನೂರೊಂದು । ಸ್ಥಲಗಳಿಗೆ
ಕಾತಿ ನೀಯೆಂದ ಹರಳನಿಗೆ ॥ ೨೬ ॥

ತಂದೆ ಬಸವನೆ ಕೇಳು ತಂದಿರುವೆನೀ ಜೋಡ
ಹೊಂದುವವು ನಿಮ್ಮ ಅಡಿಗಳಿಗೆ । ಸಲ್ಲಿಸಿದ
ಎಂದು ಕೊಡಹೋದ ಬಸವನಿಗೆ ॥ ೨೭ ॥

ಶಿವಕಳೆಯ ಈ ಜೋಡು ಜವನ ದಾಡೆಗಳಯ್ಯ
ಭವದೊಳಗೆ ಮೆಡುವ ಜನವುಂಟೆ । ಹರಳಯ್ಯ
ಶಿವಗೊಪ್ಪಿಸೆನ್ನ ಕ್ಷಮಿಸೆಂದ ॥ ೨೮ ॥

ಹರಳ ಕೇಳೀ ನುಡಿಯ ಮರಳಿದನು ಮನೆಕಡೆಗೆ
ಶರಣೆಂದು ತಿರುಗಿ ಬಸವನಿಗೆ । ಹಾದಿಯಲಿ
ತರುಬಿ ಕೇಳಿದನು ಮಧುವರಸ ॥ ೨೯ ॥

ಏನು ಹರಳನೆ ಹೇಳು, ಏನು ಬಗಲೊಳು ಗಂಡು
ಏನು ಎಲ್ಲಿಂದ ಬರುವಾಯ್ತು । ಹೇಳೆನಗೆ
ಏನು ತೋರೆನಗೆ ಬಗೆ ಏಕೆ ॥ ೩೦ ॥

ಜುಲುಮ ಮಾಡಲು ಬೇಡ ಮಲುವು ಜೀವಕೆ ನಿನಗೆ
ಹೊಲಬು ಹೇಳುವೆನು ಬೇಡೆಂದ । ಮಧುವರಸ
ಹೊಲಿದ ಜೋಡೆಂದ ಬಸವನಿಗೆ ॥ ೩೧ ॥

ನೋಡುವದು ಮಿಗೆ ಹೆಚ್ಚಿ ಕಾಡುದಕೆ ಹರಳಯ್ಯ
ಬೇಡ ನೀನರಿಯೆ ಶರಣರಿಗೆ । ಹೊಲಿದಿರುವ
ಜೋಡು ಸಲ್ಲುವವೆ ಭವಿಗಳಿಗೆ ॥ ೩೨ ॥

ಬಡವ ಬಸವೇಶ್ವರನು ಕೊಡಲಾರ ಲೋಭದಲಿ
ಕೊಡುವೆ ನಾ ಬೆಲೆಯ ಬೇಡಿದುದ । ತೋರಿಸಲೆ
ತಡಮಾಡದೆನಗೆ ಜೋಡುಗಳ ॥ ೩೩ ॥

ನೋಡಿ ಸೋಜಿಗವಾದ ಜೋಡ ತೋರಿಸಲಾತ
ಮೂಡಿ ಕಳೆ ಮುಖಕ್ಕೆ ಮಧುವರಸ । ಒಂದ್ಹೆಜ್ಜೆ
ನೋಡಿ ಮೆಡಲಿಕ್ಕೆ ಕಾಲಿಟ್ಟ ॥ ೩೪ ॥

ಹರಳ ಮಾಡಿದ ಜೋಡು ನರಪಾಪಿ ಮಧುವರಸ
ಜರೆದು ಶರಣರಿಗೆ ತಾ ಮೆಡಲು । ಮೈತುಂಬ
ಉರಿತಾಪವೆದ್ದು ಕೂಗಾಡಿ ॥ ೩೫ ॥

ಸುಣ್ಣ ಕುದಿಗುಣಿಯೊಳಗೆ ಹಣ್ಣಾಗಿ ಬೆಂದಂತೆ
ಎಣ್ಣೆ ಬಲು ಕಾಸಿ ಕಣ್ಣೊಳಗೆ । ಸುರಿದಂತೆ
ಡೊಣ್ಣೆ ಮುಳ್ಳುಗಳು ನಟ್ಟಂತೆ ॥ ೩೬ ॥

ಉರಿಯುತಿದೆ ಮೈತುಂಬ ಪರಿಹರಿಪರಾರುಂಟೆ
ಹರಳ ಕೈ ಮುಗಿವೆ ಹೇಳೆನಗೆ । ಮಧುವರಸ
ಹರಭಕ್ತ ಬಸವ ಮಂತ್ರೆಂದ ॥ ೩೭ ॥

ತೆರಳಿದನು ಮನೆಕಡೆಗೆ ಹರಳ ಶಿವಶಿವನೆಂದು
ನೆರಳುತಲಿ ಬಿದ್ದ ಮಧುವರಸ । ಮನೆಯೊಳಗೆ
ಕರಗಿತಾ ಕರುಳು ತಾಯಿಯದು ॥ ೩೮ ॥

ಹರಳನಾಡಿದ ಮಾತ ಕರುಣಿ ತಾಯಿಯು ಕೇಳಿ
ಥರಥರನೆ ಅಂಜಿ ನಡೆತಂದು । ನಮಿಸಿದಳು
ಹರಭಕ್ತ ಬಸವ ದಯೆ ನೀಡು ॥ ೩೯ ॥

ಸೆರಗೊಡ್ಡಿ ಬೇಡುವೆನು ಕರುಣನಿಧಿ ಸಲುಹಯ್ಯ
ತರುಣ ಮಧುವರಸ ಸಾಯುವನು । ಬಸವೇಶ
ಹರಸೆಂದು ತಾಯಿ ಕೈ ಮುಗಿದು ॥ ೪೦ ॥

ನೀರ ಮಿಂದಲು ಹೇಳು ಆರು ತಿಂಗಳತನಕ
ಮೀರಿ ಹರನಾಮ ಭಜಿಸಿದರೆ । ಈ ಪಾಪ
ತೀರಿ ಕುಂದುವದು ಉರಿತಾಪ ॥ ೪೧ ॥

ಎಂದ ಬಸವನ ಮಾತ ಬಂದು ಜನನಿಯು ಹೇಳಿ
ಮುಂದೆ ಗುಣವಾಗಿ ಸುಖವುಂಟು । ಮಧುವರಸ
ಮಿಂದು ದಿನ ತರಿಸಿ ನೀನೀರ ॥ ೪೨ ॥

ಕರೆಸಿ ಹೇಳಿದರವರು ಹಿರಿಯ ದಾದಿಯನಂದು
ಪರಮ ಶಿವಭಕ್ತಳಾ ದಾದಿ । ಮಾದೇವಿ
ಹರನೆಂದು ನೆನಿಸಿ ನೀರೆರೆದು ॥ ೪೩ ॥

ಹೊರಳಿದವು ದಿನ ಮಾಸ ಬರಲು ಪೂರ್ಣದ ದಿನವು
ಹಿರೆದಾದಿ ಮರೆತು ಮನೆಗೆಲಸ । ನೋಡಿದಳು
ನೆರೆಯೋಣಿ ಡಂಬರಾಟಗಳ ॥ ೪೪ ॥

ಹೊತ್ತು ಮುಣಗಿತು ಶಿವನೆ ಕತ್ತಲಾಯಿತು ನೀರ
ಎತ್ತ ದೂರ್ಹೋಗಿ ನಾ ತರಲಿ । ಮಾದೇವಿ
ಹತ್ತಿರದ ಗುಂಡಿ ಬಚ್ಚಲಕೆ ॥ ೪೫ ॥

ಹರಳ ಬಳಸಿದ ನೀರು ಹರಿದು ಬಚ್ಚಲಗುಂಡಿ
ಮೆರೆಯುವದು ಇಂದು ಕಲ್ಯಾಣ । ಕೇರಿಯೊಳು
ಹರಳಯ್ನ ಗುಂಡಿ ಶಿವತೀರ್ಥ ॥ ೪೬ ॥

ಶರಣ ಹರಳನ ಗುಂಡಿ ಮರಣದಲಿ ಅಮೃತವು
ಅರಿತು ಮಾದೇವಿ ಶಿವನೆಂದು । ಮನದೊಳಗೆ
ಹೊರತೇನು ಲೋಕ ಶರಣರಿಗೆ ॥ ೪೭ ॥

ಸುತ್ತನೋಡುತ ತಿರುಗಿ ಮತ್ತೆ ಅಗ್ಗಣಿ ತುಂಬಿ
ಚಿತ್ತದಲಿ ನಡುಗಿ ಹೆಣ್ಣೆದೆಯು । ಮಾದೇವಿ
ಹೊತ್ತೊಯ್ದು ಹರವಿ ತುಂಬಿದಳು ॥ ೪೮ ॥

ಹರಳ ಬಳೆಸಿದ ನೀರ ನೆರೆನಿಂತ ಮಡವಿಂದ
ಮರೆತು ತಂದೆಂದು ಎರೆವಾಗ । ಮನದೊಳಗೆ
ಹರನ ಮಾದೇವಿ ಭಜಿಸಿದಳು ॥ ೪೯ ॥

ಕಳೆಬಂತು ಮೈತುಂಬ ಮಳೆಯಾದ ಬೆಳೆಯಂತೆ
ಅಳಿಯಲುರಿತಾಪ ಮಧುವರಸ । ಕರೆಕಳಿಸಿ
ಅಳುಕದಲೆ ಹೇಳು ಮಾದೇವಿ ॥ ೫೦ ॥

ಇಂದು ತಂದಿರು ನೀರು ಮಿಂದಲಳಿಯಿತು ತಾಪ
ತಂದ ಕೆರೆಭಾವಿ ಹೇಳೆನಗೆ । ಹೇಳಿದಳು
ತಂದೆ ಹರಳಯ್ಯ ಗುಂಡಿಯಲಿ ॥ ೫೧ ॥

ಏನು ಹೇಳುವಿ ಶರಣೆ ಗ್ನಾನ ತಪ್ಪಿತೆ ನಿನಗೆ
ಕಾಣುದಕೆ ಹರಳ ಹೊಲೆಯನವ । ಅವಮಿಂದ
ಘಾಣನೀರಿಂದೆ ಗುಣವಾಯ್ತೆ ॥ ೫೨ ॥

ಎಂಥ ಶರಣನು ಹರನೆ ಎಂಥ ಭಕ್ತನು ಹರಳ
ಎಂಥ ಶಿವಕುಲವು ಜಗದೊಳಗೆ । ಮಾದೇವಿ
ಅಂಥ ಶಿವಕುಲಕೆ ಸೇರುವೆನು ॥ ॥ ೫೩ ॥

ಶಿವಭಕ್ತ ಶಿವಪೂಜೆ ಭವತಾಪ ಕಳೆಯುವದು
ಸವೆಸಲೇಬೇಕು ಈ ದೇಹ । ಈ ಭವಿಗೆ
ಶಿವದೀಕ್ಷೆ ಈಯೋ ಹರಳಯ್ಯ ॥ ೫೪ ॥

ಏನ್ನುತಲಿ ಮಧುವರಸ ಎನ್ನುತಾ ರಾಗದಲಿ
ಭಿನ್ನಭೇದಳಿದು ನಡೆತಂದು ಹರಳಯ್ಯ
ನಿನ್ನ ಮಗವರಗೆ ಮಗಳೀವೆ ॥ ೫೫ ॥

ಅಂಗದಲಿ ಲಿಂಗವನು ಲಿಂಗಿಗಳೆ ಧರಿಸಿದರು
ಬಂದು ಮಧುವರಸ ಹೊನ್ನನಿಗೆ । ಮಗಳಿತ್ತು
ಹಂದರದ ನಡುವೆ ಬೀಗಾದ ॥ ೫೬ ॥

ಹಿರಿಕುಲದ ಮಧುವರಸ ಕಿರಿಕುಲಕೆ ಬೀಗಾದ
ಸರಿ ಏನು ಪಾಪ ಮಾಡಿದನು । ಕೊಂಡಿಗಳು
ಜರೆದು ಅರಸನಿಗೆ ದೂರಿದರು ॥ ೫೭ ॥

ಹರಳ ಮಧುವರಸನಿಗೆ ಮರುಳ ಮಾಡಿದನೆಂದು
ಗರಳ ಸಿಟ್ಟಿನಲಿ ಹಾರುವರು । ಬಿಜ್ಜಳನ
ಕೆರಳಿ ಚಾಡಿಯನು ಹೇಳಿದರು ॥ ೫೮ ॥

ಕಲಿಕಾಲ ಹೆಚ್ಚುತಲಿ ಬಲವಿಲ್ಲ ಶರಣರಿಗೆ
ಛಲವು ಬೇಡಿನ್ನು ಜಗದೊಳಗೆ । ಗುರುದೇವ
ಹೊಲಬು ಬಿಗುಹಾದಿ ಹೊಲಸಾಯ್ತು ॥ ೫೯ ॥

ಕೂಡಿಸಿದ ಮಂಟಪವ ಹಾಡಿಸಿದ ಶಿವಮತವ
ನಾಡಶರಣರಿಗೆ ತಿಳಿಸಿದನು । ಬಸವಯ್ಯ
ಹೂಡುವರು ಕದನವಾದಿಗಳು ॥ ೬೦ ॥

ಮಾಡದ್ದು ಮಾಡುವರು, ನೋಡದ್ದು ನೋಡುವೆವು
ಕಾಡಿಗಳು ಜನರು ಕೊಂಡಿಗಳು । ಬಿಜ್ಜಳನು
ಓಡಿ ಮಡಿಯುವನು ಕಿವಿಗೊಟ್ಟು ॥ ೬೧ ॥

ಚೆನ್ನಬಸವನೆ ಕಾಯೊ ಇನ್ನು ಮಂಟಪ ನೀನು
ಗುನ್ನೆ ಮಾಡುವರು ಶಿವಮತಕೆ । ಕೋಪಿಗಳು
ಮಣ್ಣುಗೂಡಿಸುವ ಮಾಚಯ್ಯ ॥ ೬೨ ॥

ಗುರುಪ್ರಭುವೆ ಕೇಳಯ್ಯ ಧರೆಯು ಹದಗೆಟ್ಟಿಹುದು
ಇರಬಾರದಿನ್ನು ಜಗದೊಳಗೆ । ಕಪ್ಪಡಿಗೆ
ಹರನೆಂದು ಪಯಣ ಬೆಳಸಿದನು ॥ ೬೩ ॥

ಬಸವ ಪಯಣದಿ ಕೇಳೊ ಮಸಣವೆನಿಸಿತು ಊರು
ಗಸಗಸನೆ ಹರಡಿ ಆ ಸುದ್ದಿ । ಅರಸನಿಗೆ
ವಿಷಯ ತಿಳಿಲಿಲ್ಲ ಎಳ್ಳಷ್ಟು ॥ ೬೪ ॥

ಬಸವ ಹೋಗಲು ಭೂಮಿ ಕಸವಾಗಿ ಸುಖವುಂಟೆ
ಮಸಣ ಮಸಣಾತು ಕಲ್ಯಾಣ । ಮಂತ್ರಿಗಳೆ
ಬಸವಧಿಕ ಮಂತ್ರಿ ಇನ್ನುಂಟೆ ॥ ೬೫ ॥

ಬಸವ ರಾಜ್ಯದ ಸಿರಿಯು ಬಸವ ಬಡವರ ನಿಧಿಯು
ಬಸವ ಮಳೆಬೆಳೆಯು ನಾಡೊಳಗೆ । ನಿಜದೀಪ
ಬಸವನೇ ಸಗ್ಗ ಸೋಪಾನ ॥ ೬೬ ॥

ಚಿಂತಿಸಿದ ಬಿಜ್ಜಳನು ಕುಂತಲ್ಲಿ ನಿಂತಲ್ಲಿ
ಬಂತು ಕೊನೆಯಿನ್ನು ರಾಜ್ಯಕ್ಕೆ । ಮುಂದೆನಗೆ
ಇಂಥ ಮಂತ್ರಿಗಳು ಸಿಗಬಹುದೆ ॥ ೬೭ ॥

ಕೇಳು ಬಿಜ್ಜಳರಾಯ ಹೇಳಿಹನು ಬಸವೇಶ
ಆಳಲೀ ಧರೆಯ ಚನಬಸವ । ಬಲವಂತ
ಮೇಳೈಸು ಮಂತ್ರಿಪದವವಗೆ ॥ ೬೮ ॥

ಎಂದು ಹೇಳಿತು ಜನವು ಅಂದು ಕರೆಸಿದ ರಾಯ
ಚೆಂದದಲಿ ಚೆನ್ನಬಸವನಿಗೆ । ಒಪ್ಪಿಸಿದ
ಬಂದು ತಾ ಮಂತ್ರಿ ಮುದ್ರಿಕೆಯ ॥ ೬೯ ॥

ಚೆನ್ನದಂಡಾಧಿಪನು ಹೊನ್ನಮಳೆಗರೆಸಿದನು
ಚೆನ್ನರಾಗದಲಿ ಆಳಿದನು ಲೋಕವನು
ಹುಣ್ಣಾತು ಕೊಂಗ ಕೂಮತಕೆ ॥ ೭೦ ॥

ಕೊಂಡಿಗಳು ಮುಂದಾಗಿ ಬಂಡಜಗಳವ ಹೂಡಿ
ಹೆಂಡ ಕುಡಿಸಿದರು ಚಾಡಿಯಲಿ । ಬಿಜ್ಜಳನು
ಹುಂಡ ತಿಳಿಯದಲೆ ಕಿವಿಗೊಟ್ಟ ॥ ೭೧ ॥

ಹರಳಯ್ಯ ಮಧುವರಸ ವರಬೀಗರಾದುದಕೆ
ದುರುನಡತೆಯುಂಟೆ ಬೇರಿನ್ನು । ಬಿಜ್ಜಳನೆ
ಕರೆತರಿಸಿ ದಂಡಿಸವರೆಂದು ॥ ॥ ೭೨ ॥

ಓಲಗದಿ ಬಿಜ್ಜಳನು ನಾಳೆ ಅನ್ನದೆ ಕರೆಸಿ
ಕೀಳಿಸರಿ ಕಣ್ಣ ನಿಂತಲ್ಲಿ । ಕೇಡಿಗಳು
ಬಾಳುವದು ತರವೆ ನಾಡೊಳಗೆ ॥ ೭೩ ॥

ಸಾರುತಲಿ ಡಂಗುರವ ಊರಲ್ಲಿ ಮೆರೆಯಿಸರಿ
ಜಾರೆಯರ ಮುಂದೆ ಒದೆಯಿಸರಿ । ಕೊನೆಗವರ
ಕೂರ ಕತ್ತಿಯಲೆ ಕೊಲ್ಲೆಂದ ॥ ೭೪ ॥

ಸಿಟ್ಟೇಕೆ ಬಿಜ್ಜಳನೆ ಇಷ್ಟು ಕೋಪವು ತರವೆ
ಕೆಟ್ಟ ಬಗೆಸಿದರೆ ಒಡೆಯನಿಗೆ । ತಿಳಿಸಿದನು
ಕಟ್ಟಳೆಯ ಚೆನ್ನ ದಂಡೇಶ ॥ ೭೫ ॥

ಹಾರುವರ ಕುಲ ಹೆಚ್ಚು ಬೇರೆ ಜನ ಕುಲಹೀನ
ಹಾರುವಗೆ ಉಂಟು ಹೊಲೆಯಿನ್ನು । ಜಗದೊಳಗೆ
ಯಾರು ಹಾರುವರ ಮೊದಲಿಗರು ॥ ೭೬ ॥

ಹೊಲಬರಿತ ಮನುಜನವ ಕುಲವಂತ ಜಗದೊಳಗೆ
ನೆಲೆಯುಂಟೆ ಗಂಗೆ ಬಿಜ್ಜಳನೆ । ಶಿವಮತಕೆ
ಕುಲವೆಣಿಸಲುಂಟೆ ನಡೆನುಡಿಗೆ ॥ ೭೭ ॥

ಅರಸೊತ್ತಿಗೆಯ ನಂಬಿ ಬಿರುಸು ಮಾತುಗಳೇಕೆ
ಚಿರವೆ ಹೂ ಬಿಸಿಲು ತಿಳಿಯರಸ। ಪರಿಕಿಸಲು
ಹರಭಕ್ತಿ ಅಮರ ಶರಣರಿಗೆ ॥ ೭೮ ॥

ಬೇಡ ಶರಣರ ನಿಂದೆ ಕೇಡು ಬರುವದು ಮುಂದೆ
ನೋಡಿಕೋ ನಾಡ ಬಿಜ್ಜಳನೆ । ಒಪ್ಪಿಸುತ
ಕಾಡಬೇಡಿನ್ನು ಶರಣರಿಗೆ ॥ ೭೯ ॥

ಕೇಳದಲೆ ಬಿಜ್ಜಳನು ಆಳುಗಳನಟ್ಟಿದನು
ಕೀಳ ಕೆಲಸೆಂದು ಬಲುಹೇಸಿ । ನೋಡುದಕೆ
ಹೋಳಾತು ಶರಣರೂಳಿಗವು ॥ ೮೦ ॥

ಚರರು ನಡೆದರು ಬೇಗ ಹರನ ಶರಣರ ಬಳಿಗೆ।
ಕರೆದಿರುವ ದೊರೆಯು ಮಧುವರಸ । ಹರಳಯ್ಯ
ಬರಬೇಕು ಬೇಗ ಅರಮನೆಗೆ ॥ ೮೧ ॥

ಉರದ ಲಿಂಗಕೆ ನಮಿಸಿ ಹರನ ಪೂಜೆಯ ಮುಗಿಸಿ
ಗುರುವೆ ಬಸವಯ್ಯ ಸಲುಹೆಂದು । ಮಧುವರಸ
ಹರಳಯ್ಯ ಬಂದರರಮನಿಗೆ ॥ ೮೨ ॥

ಭರದಿ ಯಾತಕೆ ನಮ್ಮ ಅರಸ ಕರೆಸಿದಿ ಹೇಳು
ನೆರವೇರಿಸುವೆವು ಆ ಕೆಲಸ । ಘುಡಘುಡಿಸಿ
ಅರಸ ಗರ್ಜಿಸಿಧ ಹುಲಿಯಂತೆ ॥ ೮೩ ॥

ಒಡೆಯ ಯಾತಕೆ ನಿನಗೆ ಕಡುಕೋಪ ನಮ್ಮೇಲೆ
ನುಡಿನಡೆಯ ಮಾಡಿದೊಲವಿಂದೆ । ಅರಸನಿಗೆ
ತಡಮಾಡದೆಂದು ಮಧುವರಸ ॥ ೮೪ ॥

ಎಲವೊ ಮಧುವರಸಯ್ಯ ಕುಲದಲ್ಲಿ ಹಾರುವನು
ಹೊಲೆಯನಿಗೆ ಹೆಣ್ಣ ಕೊಡಬೇಕೆ । ಕುಲಗೇಡಿ
ಕಲಿಸುವೆನು ಪಾಠ ನಿನಗಿದಕೆ ॥ ೮೫ ॥

ಹೊಲಸು ತಿಂಬವ ಹೊಲೆಯ ಹೊಲಬಿಲ್ಲದವ ಹೊಲೆಯ
ನೆಲೆಸಲ್ಲುಸಿನುಡಿಯು ಎದೆಯೊಳಗೆ । ಹೊಲೆಯರಸ
ಹೊಲೆಯರೆನ್ನುವರೆ ಶರಣರಿಗೆ ॥ ೮೬ ॥

ಖೂಳ ಬಿಜ್ಜಳರಾಯ ತಾಳಲಾರದೆ ಕೋಪ
ಕೀಳಿಸಿದ ಕಣ್ಣ ನಿಂತಲ್ಲೆ । ನಿಲ್ಲದಲೆ
ಗಾಳಕವರನ್ನು ಎಳಿಸೆಂದ ॥ ೮೭ ॥

ಎಳಿಸುತಲಿ ಬೀದಿಯಲಿ ಬಳಸಿಸುತಲಿಬ್ಬರನು
ಹಳಿದು ಶೂಲಕ್ಕೆ ಏರಿಸಲು । ಶಿವನೆಂದು
ನಲುಮೆಯಲಿ ಜೀವನೀಗಿದರು ॥ ೮೮ ॥

ಹೂವಿನಾ ಮಳೆಯಾಗಿ ಹೂವಿನಾ ತೇರೇರಿ
ಹೂವಾದರವರು ಶಿವಪದಕೆ । ಶಿವಶರಣ
ಪಾವನದ ಮಾಲೆ ಸೇರಿದರು ॥ ೮೯ ॥

ಕಿರಿಕುಲದ ಹರಳಯ್ಯ ವರಶರಣ ತಾನಾದ
ಪರಮತವ ಜಯಿಸಿ ಹರಿಸಿದನು । ಹರಳನಿಗೆ
ಹರಮೆಚ್ಚಿ ಮೆರಿಸಿ ಕರೆದೊಯ್ದ ॥ ೯೦ ॥

ಶರಣ ಮಡಿವಾಳಾದ ಕರಿಬಂಟ ಕಣದೊಳಗೆ
ಹರಳಾದ ಕಣಕೆ ಬಿಳಿ ಬಂಟ । ಅಲ್ಲಮನು
ಗುರು ಬುದ್ಧಿವಂತ ಲಿಂಗಾದ ॥ ೯೧ ॥

ಸುಗ್ಗಿ ಲಿಂಗವೆ ಬಾರೊ ಹೆಗ್ಗಡೆಯ ಪ್ರಭುದೇವ
ಸಗ್ಗ ಬಿಳಿ ಬಂಟ ಹರಳಯ್ಯ । ಒಕ್ಕಲಿಗ
ಉಗ್ಗಡಿಸಿ ಕಣಕೆ ಹಾಡುವನು ॥ ೯೨ ॥

ಹರನ ಶಿಖರದ ಮೇಲೆ ಸಿರಿಗಂಧ ಮರ ಹುಟ್ಟಿ
ಕಿರಿಟದೊಳ ಎರಡು ಗಿಣಿ ಕೂತು । ಹಾಡಿದವು
ಹರಳಯ್ಯನೆಂಬ ಹಳೆಗತೆಯ ॥ ೯೩ ॥

ಹಂತಿಯದು ಹಾಡೆಂದು ಪಂತ ಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲೆ । ಹರಳಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೯೪ ॥

ಶರಣು ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸರಿ ಶರಣ ಹರಳಯ್ಯ । ನಮಗಿನ್ನು
ಹರಸರಿ ಹುಲುಸು ಹುಲ್ಲುಲ್ಲಿಗೊ ॥ ೯೫ ॥

– ಕೃತಿ: ೧. ಕನ್ನಡ ಜಾನಪದ ಗೀತಗಳು
೨. ಹಂತಿ ಹಾಡುಗಳು

***

೨೨. ಹಾವಿನಾಳ ಕಲ್ಲಯ್ಯ

ಸರ್ಪಸಾಗರೆಂಬುದ ಊರ ಹಾವಿನಿಂದ ಹಾಳಾಯಿತೋ
ಕಲ್ಲಿನಾಥ ಹುಟ್ಟಿ ಹಾವಿಗಿ ಶಾಪ ಕೊಟ್ಟು ಮರತೋ ॥ ಪ ॥

ಕಲ್ಲಿನಾಥಗ ನೋಡಿದಾಗ ಹಾವ ತಾನೆ ಸತ್ತು ಬಿದ್ದಿತೋ
ಅವನ ತಾಯಿ ಸೋಮಬಾಯಿ ಬಂದು ಬೈದರ ವಿಪರೀತೋ
ನಿನಗ ನೋಡಿ ಹಾವ ತಾನೆ ಸತ್ತು ಬಿದ್ದಿತೋ
ಕಲ್ಲಿನಾಥ ಹುಟ್ಟಿ ಹಾವಿಗಿ ಶಾಪ ಕೊಟ್ಟು ಮರತೋ ॥ ೧ ॥

ಶರಣ ಕಲ್ಲಿನಾಥ ತಾಯಿಗಿ ತೋರ್‍ಯಾನ ದೃಷ್ಟಾಂತೋ
ಸತ್ತ ಹಾವಿಗಿ ಎಬ್ಬಿಸಿ ನಿಜರೂಪ ತೋರ್‍ಯಾನ ಭಗವಂತೋ
ಹಾವಿನಿಂದ ಹಾಳಾದ ಊರ ಹಾವಿನಾಳ ಅನಿಸೀತೋ
ಕಲ್ಲಿನಾಥ ಹುಟ್ಟಿ ಹಾವಿಗಿ ಶಾಪ ಕೊಟ್ಟು ಮರತೋ ॥ ೨ ॥

ಅಲ್ಲಿಂದ ಹಾವಿನಾಳ ಊರ ಕೀರುತಿ ಬೆಳದಿತೋ
ಆನಿ ಕಟ್ಟಿ, ಆನಿ ಮಾರಿ, ರಾಜಧಾನಿ ಊರ ಅನಸೀತೋ
ಏಳು ತೀರ್ಥ ಹನ್ನೊಂದು ಲಿಂಗ ಎರಡನೇ ಕಾಶೀ ಅನಸೀತೋ
ಕಲ್ಲಿನಾಥ ಹುಟ್ಟಿ ಹಾವಿಗಿ ಶಾಪ ಕೊಟ್ಟು ಮರತೋ ॥ ೩ ॥

ಎರಡನೇ ಕಾಶೀ ಕಲ್ಮೇಶ್ವರಾ ಕಾಶೀಲಿಂಗವ ಗುರತೋ
ಅವನ ಹಿಂದ ನಾಗೇಶಿ ನಿಂತವ ನಾಗರ್‍ಹಾವಿನ ಗುರತೋ
ವೇದ ಓದುವ ಬ್ರಾಹ್ಮಣರಿಗೆ ಶಾಪ ಕೊಟ್ಟರ ಅವತೋ
ಕಲ್ಲಿನಾಥ ಹುಟ್ಟಿ ಹಾವಿಗಿ ಶಾಪ ಕೊಟ್ಟು ಮರತೋ ॥ ೪ ॥

ಕಲ್ಲಿನಾಥ ಮಾಡಿದ ಪಾವಡ ಬಲ್ಲವರಿಗಾದ ಗುರತೋ
ನಾಯಿ ಬಾಯಿಲಿ ವೇದ ಓದಸ್ಯಾನ ನಾ ಅನ್ನುದು ಬಿಡಿರಂತೋ
ಬ್ರಾಹ್ಮಣರಿಗೆ ಶಾಪ ಕೊಟ್ಟನ ಒಂದೇ ಮನಿ ಉಳಿಯಲಂತೋ
ಕಲ್ಲಿನಾಥ ಹುಟ್ಟಿ ಹಾವಿಗಿ ಶಾಪಕೊಟ್ಟ ಮರತೋ ॥ ೫ ॥

ಹಾಳಾಗು ಕಾಲಕ ಒಂದು ಇದಿಮಾಯಿ ಹೊಕ್ಕಿತೋ
ಕೊರವಂಜಿ ಆಗಿ ಎಣ್ಣಿ ಕಟ್ಟಿಮ್ಯಾಲ ಕೂಸಿನ ಕೊಂದೀತೋ
ಸಿಂಧ್ಯಾ ಹೊಳ್ಳರಿ ರಾಜಗ ಊರ ಬಿಟ್ಟು ಓಡಸೀತೋ
ಕಲ್ಲಿನಾಥ ಹುಟ್ಟಿ ಹಾವಿಗಿ ಶಾಪ ಕೊಟ್ಟ ಮರತೋ ॥ ೬ ॥

ಮುನ್ನೂರದ ಅರವತ್ತು ಘಾಣ ಹೋಗಿ ಊರ ಹಾಳ ಬಿದ್ದೀತೋ
ಪಟ್ಟ, ಚರ, ವಿರಕ್ತ ಮಠಪತಿ, ಊರಾಗ ಇಲ್ದಂಗ ಆಯ್ತೋ
ಶರಣ ನಮ್ಮ ಕಲ್ಲಿನಾಥ ನೆನಪೀಗಿ ಬಂದಿತೋ
ಕಲ್ಲಿನಾಥ ಹುಟ್ಟಿ ಹಾವಿಗಿ ಶಾಪ ಕೊಟ್ಟ ಮರತೋ ॥ ೭ ॥

ನೆನಪಿಗಿ ಬಂದು ಕಲ್ಮೇಶ್ವರ ಹೇಳ್ಯಾನ ಭಕ್ತಿಲಿ ನಡಿರೆಂತೋ
ಪುರಾಣ ಹಚ್ಚಿ ಪುಣ್ಯ ಪಡೆಯಿರಿ ಕಾಯಿತಾನ ಭಗವಂತೋ
ಓದಿ ನೋಡಿರಿ ಹದಿನೆಂಟು ಪುರಾಣ ಸುಳ್ಳಲ್ಲ ಈ ಮಾತೋ
ಕಲ್ಲಿನಾಥ ಹುಟ್ಟಿ ಹಾಂವಿಗಿ ಶಾಪ ಕೊಟ್ಟ ಮರತೋ ॥ ೮ ॥

ಸುತ್ತ ದೇಶಕ ಹಾವಿನಾಳ ಊರ ಕೀರುತಿ ಸಾರಿತೋ
ಸಾಕ್ಷಾತ್ ಹಾನ ಕಲ್ಲಿನಾಥ ದೇವರ ಮರಿಬ್ಯಾಡಪ ಯಾವತೋ
ಚಂದ್ರಮ ಪೂಜಾರಿ ಸಾರಿ ಹೇಳಿದ ಶಾಸ್ತ್ರ ಸಿದ್ಧಾಂತೋ
ಕಲ್ಲಿನಾಥ ಹುಟ್ಟಿ ಹಾವಿಗಿ ಶಾಪಕೊಟ್ಟು ಮರತೋ ॥ ೯ ॥

– ಶ್ರೀ ಚಂದ್ರಾಮ ಭೀ. ಪೂಜಾರಿ

***

೨೩. ಹೂಗಾರ ಮಾದಯ್ಯ

ಸೂಚಕ ಪದ್ಯ :– ಕ್ರಿಯೆಭಕ್ತ ಶಿವಶರಣ ಕ್ರಿಯೆಯಲ್ಲಿ ಬಯಲಾದ
ಕ್ರಿಯೆಯಧಿಕವೆಂದು ಮಾದಯ್ಯ । ಸಾರಿದನು
ಕ್ರಿಯೆಗಂಜಿ ಶಿವನು ಹರಸಿದನು ॥ ೧ ॥

ನಿನ್ನ ಹಾಡವು ಸೋಂಕಿ ಹೊನ್ನವರಿ ಬೆಟ್ಟರಳಿ
ಹೊನ್ನುರಿಯು ಹೊತ್ತಿ ಜಗಬೆಳಗಿ । ಬೆಳತನಕ
ಸಣ್ಣಾಗಿ ಸುರಿಯೆ ಇಬ್ಬನ್ನಿ ॥ ೨ ॥

ಹಾಡುದಕೆ ಕಾಡೆದ್ದು ಮಾಡುವದು ಶಿವಪೂಜೆ
ಕೂಡಿ ಇಬ್ಬನ್ನಿ ಝರೆಯಾಗಿ । ಶಿವನಡಿಗೆ
ಮಾಡಲವು ಬೆಳಗೆ ಹೂಬಿಸಿಲ ॥ ೩ ॥

ಇಬ್ಬನ್ನಿ ಮುತ್ತುಗಳ ಮಬ್ಬು ಹಸುರಿನ ಸೀರಿ
ದಿಬ್ಬೆಂದು ಹಾಡಿ ಹೊಲ ಗುಡಿಸಿ । ಒಕ್ಕಲಿಗ
ಹಬ್ಬೆಂದು ಸುಗ್ಗಿ ಮಾಡುವನು ॥ ೪ ॥

ನನೆದಂಡೆ ಒಕ್ಕಲಿಗ ಹೆಣೆದು ಹಂತಿಗೆ ಕಟ್ಟಿ
ತೆನೆರಾಶಿ ಹಾಡು ಶಿವಶರಣ । ಮಾದಯ್ಯ
ಕಣಕೆತ್ತಿ ತರುವ ಬನ್ನಾರಿ ॥ ೫ ॥

ಕಲ್ಯಾಣ ಹಾಡುತಲಿ ಎಲ್ಲ ಶರಣರ ವಚನ
ಸೊಲ್ಲಡಗಿ ನಾಲ್ಕು ವೇದಗಳು । ಹೊಸಮತಕೆ
ಹುಲ್ಲಾಗಿ ಬಿದ್ದು ಕೈಮುಗಿದು ॥ ೬ ॥

ಹೊಸ ಮತಕೆ ಹುರಿಯಾಳು ಬಸವೇಶ ದಂಡೇಶ
ಒಸಗೆ ಹಬ್ಬುತಲಿ ಜನ ಕೇಳಿ । ಶಿವಮತಕೆ
ಹಸುಗೂಸು ಕೇಳಿ ಹಾಲ್ಗುಡಿದು ॥ ೭ ॥

ಕಲ್ಯಾಣ ಮನೆಯಾಯ್ತು ಎಲ್ಲ ಶಿವಶರಣರಿಗೆ
ನಲ್ಲೆ ಮಾದೇವಿ ಲಿಂಗಣ್ಣ । ಮಗನೊಡನೆ
ಉಲ್ಲಾಸದಿದ್ದ ಮಾದಯ್ಯ ॥ ೮ ॥

ಹೂ ಪತ್ರಿ ದವನಗಳು ಆಮು ಶಿವಪೂಜೆಗೆನೆ
ತಾಪ ಸಂಸಾರ ನೀಗುದಕೆ । ಮಾದಣ್ಣ
ಮಾಪರಿತನದರ ಕಾಯಕವ ॥ ೯ ॥

ಸಕಲೇಶ ಮಾದರಸು ಭಕುತ ಮಾದಯ್ಯನಿಗೆ
ನಿಕಟಗುರು ಲಿಂಗ ಜಂಗಮನು । ಕಾಯಕದ
ನಿಕಸ ಮಂಟಪಕೆ ಮೂಗುತಿಯು ॥ ೧೦ ॥

ಬಡಭಕ್ತ ಮಾದಯ್ಯ ಕಡುಶರಣ । ಕಾಯಕಕೆ
ದುಡಿದು ಶಿವಮತದ ದಾಸೋಹ । ನಡೆಸಿದ್ದ
ಪಡಗೆರೆಯ ಗದ್ದೆ ಬೆಳೆದಂತೆ ॥ ೧೧ ॥

ಹಮ್ಮು ಬಿಮ್ಮು ಗಳರಿಯ , ಗುಮ್ಮು ಕಮ್ಮುಗಳರಿಯ
ಒಮ್ಮನದಿ ನಡೆಸಿ ದಾಸೋಹ । ಕಲ್ಯಾಣ
ಸೊಮ್ಮ ಶಿವಪೂಜೆ ಕಳೆಯೇರಿ ॥ ೧೨ ॥

ಹೂಗಾರ ಮಾದಣ್ಣ ಬೇಗುದಯಹರಿಯುದಕೆ
ಹೋಗಿ ಹೂ ಪತ್ರಿ ಬನದೊಳಗೆ । ಎತ್ತರಲು
ಜೋಗಿ ಜಂಗಮರ ಶಿವಪೂಜೆ ॥ ೧೩ ॥

ಊರ ಶಿವಶರಣರಿಗೆ ಜೀರ ಮಾದನೆ ಮುದ್ದು
ಸೂರಿ ಹೂ ಪತ್ರಿ ದಿನ ನೋಡಿ । ಮಾಡಿದರು
ಜಾರೆಯರು ಮರೆತು ಶಿವಪೂಜೆ ॥ ೧೪ ॥

ಹಿಗ್ಗದಲೆ ಹಣಬರಲು ಕುಗ್ಗದಲೆ ಬರದಿರಲು
ಎಗ್ಗಿಲದೆ ಮಾಡಿ ಕಾಯಕವ । ಮಾದಯ್ಯ
ಬುಗ್ಗೆ ಪುಟಿದಂತೆ ದಾಸೋಹ ॥ ೧೫ ॥

ಅರಸ ಬಿಜ್ಜಳರಾಯ ನೆರೆಸಿರುವ ಓಲಗವು
ಶರಣ ಮಾದಯ್ಯ ಮಿಗಿಲೆಂದು । ಹೊಗಳುತಲಿ
ಅರಿತು ಸೊಡ್ಡಳದ ಬಾಚರಸ ॥ ೧೬ ॥

ಮರುದಿನವೆ ನಡೆತಂದು ಶರಣ ಮಾದನ ಮನೆಗೆ
ಹರುಷದಲಿ ಇತ್ತು ಮನ್ನಣೆಯ । ಕೈಮುಗಿದ
ವರುಷಾಶನಿತ್ತು ಕಾಯಕಕೆ ॥ ೧೭ ॥

ಕಾಡಿದರು ಹಾರುವರು ಅಡಿಕೊಂಡರು ಪರರು
ನೋಡು ಹಿಡಿಪತ್ರಿ ಕೊಡುವವಗೆ । ಕೊಡಹೊನ್ನ
ನೀಡೆ ಬೊಕ್ಕಸದ ಬಾಚರಸ ॥ ೧೮ ॥

ಗೇಲಿಯನೆ ಮಾಡಿದರು ಜೋಲಿ ತಿಳಿಯದೆ ಪರರು
ಪೋಲಿಗಳು ಶರಣರೆಂದೆನುತ । ಕೂಗಿದರು
ಆಲಿಸಲಿದ್ದ ಮಾದಯ್ಯ ॥ ೧೯ ॥

ತುಂಬಿದರು ಉಕ್ಕುವುದು ಇಂಬು ಬೇಡಲು ಕಡಲು
ತುಂಬಿದರು ಶರಣ ಉಕ್ಕುವನೆ । ಹುಂಬಾಗಿ
ತುಂಬಿರುವ ಕೊಡವು ಹೊಸಮತವು ॥ ೨೦ ॥

ವರುಷ ಮಾಸಗಳುರುಳಿ ಉರಿಸಿ ಕಾಯಕ ಬತ್ತಿ
ಮೆರೆಸುದಕೆ ಬಂತು ಚಳಿಗಾಲ । ಕಾಯಕವೆ
ಕಿರೆಯಾತು ಶರಣ ಮಾದನಿಗೆ ॥ ೨೧ ॥

ತಳಿರು ತೋರಣವೇನೋ ಎಳೆಚಿಗಿರ ಮರಬಳ್ಳಿ
ಹೊಳೆವ ಮಂಟಪವು ಕಾಡೇನೊ । ಗುಗ್ಗುಳದ
ಸುಳಿವ ಹೊಗೆ ಏನೊ ಚಳಿಗೊಳವು ॥ ೨೨ ॥

ಒಳ್ಳೆಬಿದ್ದಿಬ್ಬನ್ನಿ ಬೆಳ್ಳನ್ನು ಮುತ್ತುಗಳು
ಚೆಲ್ಲಿರಲು ಪತ್ರಿ ಪುಷ್ಪಗಳು । ಬನಲಿಂಗ
ಮುಳ್ಳಾಗಿ ಪೂಜೆ ಗೈಯುವನೊ ॥ ೨೩ ॥

ಹೊತ್ತು ಮೇಲೇರಿದರು ಬಿತ್ತದಲೆ ಸುಡುಬಿಸಿಲ
ಸುತ್ತ ಹೂ ಬಿಸಿಲೊ ದೀಪಾಗಿ । ಬೆಳಗುವದು
ಎತ್ತ ನೋಡಿದರು ತಂಬೆಳಕು ॥ ೨೪ ॥

ದಿನದಂತೆ ಮಾದಣ್ಣ ಬನದೊಳಗೆ ಹೂ ಪತ್ರಿ
ಮನತುಂಬಿ ಎತ್ತಿ ಕಲಸದೊಳು । ಮುಣುಗಿರಲು
ಬನವರಳಿ ಮೊಗ್ಗೆ ಹೂಸೂಸಿ ॥ ೨೫ ॥

ಬಸವ ಭಕ್ತನಿಗಾಗಿ ಎಸಳೆಂಟು ಒಡದಿರುವೆ
ಹಸನಾದ ಹೂವು ಮಲ್ಲಿಗೆಯು । ನಾನಿರುವೆ
ನೊಸಲಗಣ್ಣನಿಗೆ ಮೀಸಲವು ॥ ೨೬ ॥

ಬಾರೊ ಬಾ ಮಾದಯ್ಯ ಬೇರೊಂದು ಬಗೆಯದಲೆ
ಹಾರ ಗುಂಗಿಗಳು ಮುಟ್ಟಿಲ್ಲ । ಹೊನ್ನವರಿ
ಭೂರಿ ಕೊಯ್ದೆತ್ತು ಶರಣರಿಗೆ ॥ ೨೭ ॥

ಕರಕಿ ದವನದ ಕೊನರು ನೆರೆತು ಮೈಮರೆತಾಡಿ
ಕರೆಯುವವೊ ಬೀಸಿ ಚಳಿಗಾಳಿ । ಮಾದನಿಗೆ
ಸಿರಪೇಚು ನಾವು ಲಿಂಗನಿಗೆ ॥ ೨೮ ॥

ಬನದ ಹೂಪತ್ರಿಗಳ ಮನದಿ ಜೋಳಿಗೆ ತುಂಬಿ
ಬನದೊಳಗೆ ಮಾದ ಬರುತಿರಲು । ಶಿವಮೆಚ್ಚಿ
ಕೆಣಕುದಕೆ ಬಂದ ಜಂಗಮನ ॥ ೨೯ ॥

ಚಳಿಗೆ ಬನವೇ ನಡುಗಿ ಬಳಲುತಿದೆ ಮಾದಯ್ಯ
ಚಳಿಗಂಜಿ ಹೊಳಲ ಕಿಚ್ಚುಟ್ಟು । ಜನಕಾಸಿ
ಸುಳಿ ಹೊಗೆಯ ಮಂಜು ನೋಡಲ್ಲಿ ॥ ೩೦ ॥

ಶರಣರೆಲ್ಲರು ಕೂಡಿ ಕರುಣೆಯಿಲ್ಲದೆ ನಿನ್ನ
ತರಲು ಹೂಪತ್ರಿ ಕಳಿಸಿಹರು । ನಿನ್ನೋಡಿ
ಮರುಗುವೆನು ಎನ್ನ ಎದೆ ಕರಗಿ ॥ ೩೧ ॥

ನಡೆ ನಾವು ಹೋಗೋಣ ಜಡಮತಿಗಳನೆ ಬಿಟ್ಟು
ಮೃಡನ ಕೈಲಾಸ ಭುವನಕೆನೆ । ಮಾದಯ್ಯ
ಸುಡಲಿ ಬೇಡೆನಗೆ ಕೈಲಾಸ ॥ ೩೨ ॥

ಕಾಯಕವೆ ಕೈಲಾಸ ಮಾಯೆ ಕೊಲ್ಲುವ ಕೆಲಸ
ಆಯು ಬೆಳೆಸುದಕೆ ಸಾಹಸವು । ಜಗದೊಳಗೆ
ಹೇಯ ಸಂಸಾರ ನೀಗುದಕೆ ॥ ೩೩ ॥

ಹುಚ್ಚೆದ್ದು ತಿಳಿಯದಲೆ ಬೆಚ್ಚಿ ಜಂಗಮ ನಿಂತ
ಮೆಚ್ಚಿ ಶಿವನಾದ ಗಣಪದವ । ನಿನಗೀವೆ
ನೆಚ್ಚಿ ನಡೆ ಶರಣ ನನ್ನೊಡನೆ ॥ ೩೪ ॥

ಎಂಟು ಸಮಾಧಿಗಳಲ್ಲಿ ಬಂಟೊಂದು ಸಮಾಧಿಯು
ನೆಂಟನದು ನಿನ್ನ ಗಣಪದಕೆ । ಕಿರಿಯಯ್ಯ
ಕಂಟಕವ ಕಡಿವ ಕಾಯಕವು ॥ ೩೫ ॥

ಹೆಚ್ಚಿನದು ಕಾಯಕವು ಕೆಚ್ಚೆದೆಯ ಶರಣರಿಗೆ
ನೆಚ್ಚಿ ಮಸಣಯ್ಯ ರೇಮಯ್ಯ । ತಂದೆಗಳು
ಬಿಚ್ಚಿ ಕಾಯಕವ ತೋರಿದರು ॥ ೩೬ ॥

ಶಿವ ನೀನು ಹರಸಿದರೆ ಭವದೊಳಗೆ ಹೆಚ್ಚೆನದೆ
ಶಿವಪದಕೆ ಮಿಗಿಲು ಕಾಯಕವು । ಜಗದೊಳಗೆ
ಶಿವಮತಕೆ ಮಾಡೊ ದಾಸೋಹ ॥ ೩೭ ॥

ನಿನ್ನ ಸಗ್ಗಕೆ ಹೆಚ್ಚು ನನ್ನ ಕಾಯಕ ಶಿವನೆ
ನನ್ನಿಯಲಿ ಸೇವೆ ಶರಣರಿಗೆ । ಸಲ್ಲಿಸಲು
ಹೊನ್ನ ಬೆಳೆ ನಿಜವು ಜಗದೊಳಗೆ ॥ ೩೮ ॥

ಕೀಳು ಮೇಲೆಂಬುವದು ವಾಳಿ ಜನಕಲ್ಲದಲೆ
ಕೇಳು ಶರಣರಿಗೆ ಸಮರಸವು । ಕಾಯಕವು
ಆಳ್ವ ದಂಡಿಗೆಯು ತಳ್ಳುದಕೆ ॥ ೩೯ ॥

ಕೇಳಿ ಮಾದನ ವಾದ ತಾಳಿ ಶಿವ ತಾ ಮೌನ
ಹೇಳದಲೆ ನಾಚಿ ಬೈಲಾದ । ಜಗದೊಳಗೆ
ಕೋಲು ಮಿಂಚಾಗಿ ಮಳೆ ಸುರಿಸಿ ॥ ೪೦ ॥

ಹೂಗಾರ ಮಾದಣ್ಣ ತೂಗಿದನು ಕಾಯಕವ
ಸಾಗಿ ಶಿವ ಬಂದು ಗಣಪದವ । ಕೇಳೆನಲು
ಬಾಗಿ ಕೈಲಾಸ ಕೆಳಗಾಯ್ತು ॥ ೪೧ ॥

ಶರಣ ಮಾದನ ವಾದ ಪುರವೆದ್ದು ಕೇಳುತಲಿ
ನರಭವಿಗಳೆಲ್ಲ ಕೈಮುಗಿದು । ಮಾದಯ್ಯ
ಹೊರೆಹೊತ್ತ ನಿತ್ಯ ಕಾಯಕದ ॥ ೪೨ ॥

ಮಡದಿ ಮಕ್ಕಳ ಕೂಡ ಒಡಲೂಟ ದಾಸೋಹ
ನಡೆಸಿ ದಿನಗೆಲಸ ಕಾಯಕದ । ಮಾದಯ್ಯ
ಒಡನಾಡಿ ಶರಣ ಮಂಟಪಕೆ ॥ ೪೩ ॥

ಮಂಟಪವೆ ಸಾರುತಲಿ ಒಂಟಿಗನು । ಶರಣರೊಳು
ಬಂಟ ಮಾದಯ್ಯ ಕಾಯಕಕೆ ಕಲ್ಯಾಣ
ಘಂಟೆ ಹೊಸಮತವ ಸಾರುದಕೆ ॥ ೪೪ ॥

ಕಡೆಗಾಲ ಮಾದನಿಗೆ ಜಡವಾಗಿ ಬಂತೊಮ್ಮೆ
ನಡುರಾತ್ರಿ ಮಾರಿ ಸದ್ದಿರಲು । ಮಾದೇವಿ
ಕಡು ದುಃಖ ಮರೆತು ಶಿವನೆಂದು ॥ ೪೫ ॥

ಹದಿಬದೆಯು ಶಿವಶರಣಿ ಹದುಳಿ ಮಾದನ ಮಡದಿ
ಸದುಗುರುವೆ ಲಿಂಗಜಂಗಮವು । ಶಿವಮತದ
ನೆದರ ಹರಿಸಿದಳು ಚಿಂತಿಸದೆ ॥ ೪೬ ॥

ತೊಳೆದಳಾ ಕಳೆಬರವ ಒಲೆವ ಪಾದೋಧಕದಿ
ತಳೆದಳಾ ಭಸ್ಮ ಕಾಯದೊಳು । ಹುಸಿದೇಹ
ಎಳನಗೆಯ ಬೀರಿ ಬೆಳಗುತಲಿ ॥ ೪೭ ॥

ನೆರೆಮನೆಯ ನೆರೆಬೇಡ ಕಿರಿಯಸ್ತ ಶರಣನಿಗೆ
ಕಿರೆಯ ಸಮಾಧಿಯ ನಾನಗಿವೆ । ಗಂಡನಿಗೆ
ಹರುಷದಲಿ ಮಡದಿ ಮಾದೇವಿ ॥ ೪೮ ॥

ನಿತ್ಯ ಲಿಂಗಾರ್ಚನೆಗೆ ಸತ್ಯ ಶರಣನು ಕೂತ
ಎತ್ತರದ ತಳವ ಅಗಿಯುದಕೆ । ಸಮಾಧಿಯ
ಎತ್ತಿ ಗುದ್ದಲಿಯ ಹಾಕಿದಳು ॥ ೪೯ ॥

ಚಿಕ್ಕ ಮಗು ಲಿಂಗಣ್ಣ ನಕ್ಕುಂಡು ಮಲಗಿದವ
ಪಕ್ಕೆಂದು ಅವಚಿ ಕಣ್ದೆರೆದ । ಸಪ್ಪಳಕೆ
ಅಕ್ಕರದಿ ನೋಡಿ ಹಡೆದವಳ ॥ ೫೦ ॥

ಏನು ಮಾಡುವಿ ತಾಯಿ ನೀನು ನಡುರಾತ್ರಿಯೊಳು
ಕಾಣುತಲಿ ಕಂಬಕೊರಗಿರುವ । ಹಡೆದವನ
ಏನು ಹೀಗೇಕೆ ಕುಳಿತಿರುವ ॥ ೫೧ ॥

ಮರಣವೆಂಬುದನರಿಯ ಕರುಣಾಳು ಹಸುಗೂಸು
ಬರಿದೆ ನೆಲನೇಕೆ ನೀನಗಿವೆ । ಎಂದೆನಲು
ಶರಣೆ ಮಾದೇವಿ ಒಳನಗುತ ॥ ೫೨ ॥

ಗುಂಗಿ ಮುಟ್ಟದ ನೀರ ಲಿಂಗನಿಗೆ ಎರೆಯುದಕೆ
ಹಿಂಗಿಸೆಲೆ ಬತವ ಮಾದೇವಿ । ಎಂದೆನಲು
ಇಂಗದೊರೆತೆಯನೆ ತೋಡುವೆನು ॥ ೫೩ ॥

ನಮ್ಮಮ್ಮ ನುಡಿಯದಲೆ ಸುಮ್ಮಿರುವ ನನ್ನೊಡನೆ
ಗುಮ್ಮ ಮನಸಿನೊಳು ಕುಳಿತಿರುವ । ತಿಳಿಯದಲೆ
ದಮ್ಮಯ್ಯ ನಾನು ನಿಮ್ಮಗುವು ॥ ೫೪ ॥

ಹಡೆದವನು ಎಲೆ ತಾಯಿ ಕಡುಕೋಪಗೊಂಡಿಹನು
ತಡವೇಕೆ ನಿನ್ನ ಕರುಣಿಸಲು । ನಡುವಾಗಿ
ಹಿಡಿವೆ ನಾ ಬಿಡದೆ ಕೈಕಾಲ ॥ ೫೫ ॥

ನನ್ನೋಡಿ ನಿನ್ನೊಡನೆ ನನ್ನಿಯಲಿ ಮಾತಾಡಿ
ಮುನ್ನ ಮುನಿಸುಗಳ ಮರೆಯುವನು । ಮಗುಬೆರಳು
ಕಿನ್ನರಿಯ ಬಾಳ ನುಡಿಸುದಕೆ ॥ ೫೬ ॥

ತಂದೆ ತಪ್ಪನು ಮರೆತು ಇಂದು ತಾಯಿಯ ಕ್ಷಮಿಸು
ಎಂದು ಬೀಳುದಕೆ ಲಿಂಗಣ್ಣ । ಅಡಿಗಳಿಗೆ
ಬಂದು ಮಾದೇವಿ ಹಿಡಿದೆತ್ತಿ ॥ ೫೭ ॥

ಎಲೆ ಮಗುವೆ ನೀನರಿಯೆ ಮಲಗು ಸುಮ್ಮನೆ ಹೋಗು
ತೊಲಗದಾ ಸಿಟ್ಟು ಶರಣರದು । ನನ್ಮೇಲೆ
ಇಳಿಸಲೀ ಒರತೆ ತೋಡುವೆನು ॥ ೫೮ ॥

ಮೈದಡವಿ ಲಿಂಗನಿಗೆ ಹೌದೆನಿಸಿ ಮಮತೆಯಲಿ
ತೇದುಂಡ ಶರಣಿ ಮಾದೇವಿ । ಸಮಾಧಿಯ
ಹೋದಾಳ ತಳಕೆ ತೋಡುದಕೆ ॥ ೫೯ ॥

ಒರಗಿ ಹಾಸಿಗೆಯೊಳಗೆ ತರುಳ ಕಸವಿಸಿಯಾಗಿ
ಸರಿಕಾಣಲಿಲ್ಲ ತಾಯ್ಮಾತು । ಲಿಂಗನಿಗೆ
ಆರುಹಬೇಕೆಂದ ಕುಲಮತಕೆ ॥ ೬೦ ॥

ಏನೊಂದು ಬಗೆಯದಲೆ ತಾನೆದ್ದು ಕದತೆಗೆದ
ಗೇಣಿಸುತ ಮಠಕೆ ಓಡಿದನು । ಲಿಂಗಣ್ಣ
ಪೋಣಿಸಲು ನಡೆದ ಮನೆಮಾತ ॥ ೬೧ ॥

ಮಠದ ಬಾಗಿಲ ತಟ್ಟಿ ಕಟುತರದಿ ಕೂಗಿದನು
ವಟುವೆದ್ದು ನೋಡಿ ಕರೆದೊಯ್ಯೆ । ಲಿಂಗಣ್ಣ
ದಿಟ ಮಾತ ಹೇಳಿ ಕೈಮುಗಿದು ॥ ೬೨ ॥

ಸಕಲ ಮಠ ಕುಲಗುರುವೆ ಸಕಲೇಶ ಮಾದರಸು
ನಕಲಿ ಮಾತಲ್ಲ ಅಯ್ಯಯ್ಯೊ । ತಂದೆಯೇ
ಅಕಟ ನನ್ನಪ್ಪ ಮುನಿದಿರುವ ॥ ೬೩ ॥

ಬಿರ್ರೆಂದು ಬಿಕ್ಕೊಂಡು ಗುರ್ರೆಂದು ಅವ್ವನಿಗೆ
ಕಿರ್ರೆಂದು ನಾನು ಕೂಗಿದರು । ಸುಮ್ಮಿರುವ
ಜರ್ರೆಂದು ಜರೆದು ಮುಸುಕಿನೊಳು ॥ ೬೪ ॥

ಅಪ್ಪಿಕೊಳ್ಳುವನವನು ಗಪ್ಪನಿಹ ನೋಡಿದರು
ಬೆಪ್ಪಾಗಿ ಕೂತು ಓಗೊಡನು । ಕಣ್ಮುಚ್ಚಿ
ತಪ್ಪೆಂದರಾತ ಪಿಳುಕಿಸದೆ ॥ ೬೫ ॥

ಸುಮ್ಮನೇ ಸಿಟ್ಟಾಗಿ ಬಿಮ್ಮನೆ ಬಿಕ್ಕೊಂಡು
ನೆಮ್ಮದಿಯ ಭಕ್ತ ನಿಮಗಾತ । ಗುರುದೇವ
ನಿಮ್ಮನ್ನು ನೋಡಿ ಸುಮ್ಮಿರುವ ॥ ೬೬ ॥

ತಡೆಯದಲೆ ಗುರುದೇವ ಒಡನೆ ಬಾ ನಮ್ಮನೆಗೆ
ಕಡುಸಿಟ್ಟನಿಳಿಸು ತಿಳಿಹೇಳಿ । ಹಡೆದವಗೆ
ಅಡಿಗೆರಗಿ ಅಳುತ ಲಿಂಗಣ್ಣ ॥ ೬೭ ॥

ಉಕ್ಕಿ ಬರಲಾ ದುಃಖ ಬಿಕ್ಕಿ ಅಳುತಲಿ ಮೀರಿ
ನಕ್ಕು ಮಾದರಸು ಜಗಕೆಂದ । ಮಗುಮಾತು
ಚೊಕ್ಕಮುತ್ತಿನಾ ತಿಳಿಬೆಳಕು ॥ ೬೮ ॥

ಮಗು ಬಾಲ ಲಿಂಗಯ್ಯ ತೆಗೆ ಸಾಕು ಅಳುವೇಕೆ
ಸಿಗಬಹುದೆ ಎನಗೆ ನಿನ್ನಂಥ । ಸಿಸುಮಗನು
ಹಗುರಾಯ್ತು ಎದೆಯು ಗುರುಕುಲಕೆ ॥ ೬೯ ॥

ನಡೆ ಮೊದಲು ನಿಮ್ಮನೆಗೆ ನಡುರಾತ್ರಿ ನಮಗೇನು
ಸೊಡರು ನಿಮ್ಮನೆಗೆ ಗುರುಭಕ್ತಿ । ಶಿವಬೆಳಕು
ಹಡದಿ ಶಿವಪದವ ಮುಟ್ಟುದಕೆ ॥ ೭೦ ॥

ಮಾದರಸು ಮಗುವೊಡನೆ ಹೋದ ಭಕ್ತನ ಮನೆಗೆ
ಆದ ಸೋಜಿಗವ ಮನಗಂಡು । ನಿಂತಿರಲು
ಮಾದೇವಿ ಕಂಡು ಕಾಲ್ಗೆರಗಿ ॥ ೭೧ ॥

ಹೇಳಿದಳು ಶಿವಶರಣೆ ಕೇಳಿದಳು ಮಾದರಸು
ಸೀಳಿ ಗುರುಕರುಣೆ ಹೋಳಾಯ್ತು । ಗುರುಶಕ್ತಿ
ಮೇಳೈಸಿ ಬಂತು ಕಳೆದುಂಬಿ ॥ ೭೨ ॥

ಏಳೇಳು ಮಾದಯ್ಯ ಏಳು ಲಿಂಗಾರ್ಚನೆಗೆ
ಕೋಳಿ ಕೂಗುದಕೆ ಜಾವಿಲ್ಲ । ಕಾಯಕಕೆ
ಏಳು ಕಲ್ಯಾಣ ಶರಣರಿಗೆ ॥ ೭೩ ॥

ಹೋಗಿ ತರುವರು ಯಾರು ಮಾಗಿಯೊಳು ಹೂ ಪತ್ರಿ
ಚಾಗಿ ಮಾದಯ್ಯ ಹೋಗೇಳು । ಶಿವಪೂಜೆ
ಸಾಗುವದು ಹೇಗೆ ಶರಣರದು ॥ ೭೪ ॥

ನ್ಯಾಯವೇ ಮರೆಯುವದು ಕಾಯಕವ ಶರಣರಿಗೆ
ಹೀಯಾಳಿಸುವದು ಶಿವಲೋಕ । ನಿನ್ನೋಡಿ
ಹೇಯವಿಲ್ಲೇನು ಎದ್ದೇಳು ॥ ೭೫ ॥

ಮಡದಿ ಮಕ್ಕಳ ಕೂಡ ಸೆಡುವೇಕೆ ಬಾಳಿನೊಳು
ಬಿಡು ತರವೆ ಸಿಟ್ಟು ಶರಣರಿಗೆ । ಈ ಸೆಡವು
ಕುಡಿ ಬಿಡಲಿ ಮತ್ತೆ ಕಾಯಕಕೆ ॥ ೭೬ ॥

ಹರುಷದಲಿ ಮಗುವಪ್ಪಿ ಮರೆಸು ಮಡದಿಯ ದುಃಖ
ಮೆರೆಸು ಗುರುಭಕ್ತಿ ಜಗದೊಳಗೆ । ಮಾದಯ್ಯ
ಹೊರಲೇಳು ನಿತ್ಯ ಕಾಯಕವ ॥ ೭೭ ॥

ಏಳೇಳು ಕಾಯಕಕೆ ಕೇಳಿ ಮಾದನ ಜೀವ
ಗಾಳಿಯೊಳು ಬಂದು ಕಳೆತುಂಬಿ । ಹುಸಿದೇಹ
ತಾಳಿ ಹೊಸಬೆಳಕ ಕಣ್ತೆರೆದು ॥ ೭೮ ॥

ಸುಖನಿದ್ರೆಯಿಂದೆದ್ದು ಮುಖ ತಿರುವಿ ನೋಡಿದನು
ಅಖಿಳ ಗುರುಮೂರ್ತಿ ಸಕಲೇಶ । ಮಾದರಸ
ಸುಖಪಾದವೆಂದು ಬಂದೆದ್ದು ॥ ೭೯ ॥

ತಂದೆ ಮಕ್ಕಳು ಮಡದಿ ಬಂದು ಅಡಿಗಳಿಗೆರಗಿ
ಹೊಂದಿ ಕೈ ಮುಗಿಯೆ ಶಿವಲೋಕ । ಹೂಮಳೆಯ
ಅಂದದಲಿ ಸುರಿಸಿ ಕೊಂಡಾಡಿ ॥ ೮೦ ॥

ಮರೆತು ಜಗ ಮಲಗಿರಲು ಅರಿಯಲಾ ಸೋಜಿಗವ
ಇರುಳುಗಣ್ಣರಳಿ ನಗುತಿರಲು । ನರಲೋಕ
ಅರಳಿ ಹೂವಾಯ್ತು ಶಿವನಡಿಗೆ ॥ ೮೧ ॥

ಹದಿಬದೆಯು ತೋಡಿರುವ ಎದೆಯುದ್ದ ಶಿವಗುಣಿಯು
ಪೊದಳಿದಾ ಒರತೆ ಕಲ್ಯಾಣ । ಪುರದೊಳಗೆ
ಕದಳಿಬನವೆಂದು ಹೆಸರಾಯ್ತು ॥ ೮೨ ॥

ಚಿಕ್ಕ ಮಗುವಿಗೆ ಮೆಚ್ಚಿ ಮುಕ್ಕಣ್ಣ ನಲುಮೆಯಲಿ
ಇಕ್ಕರಕೆ ತಿರುಗಿ ಕಳಿಸಿದನು । ಚಿತ್ಕಳೆಯ
ಅಕ್ಕರದಿ ಕೂಡು ಮಾದನಿಗೆ ॥ ೮೩ ॥

ಗುರುದೇವ ಮಾದರಸ ಅರಿತಿದಕೆ ಹೊಸತೆಂದ
ಪರಮಾತ್ಮ ಮೆಚ್ಚಿ ಗುರುಮುಖದಿ । ಮಾದನಿಗೆ
ಹರಸಿ ಹರನೀಯೆ ಬೆರಗಾಗಿ ॥ ೮೪ ॥

ಹೊಗಳುತಲಿ ತೆರಳಿದನು ನಗೆ ಮುಖದಿ ತನ್ಮಠಕೆ
ಮಗುಲಿಂಗ ಮಾದ ಮಾದೇವಿ । ಗುರುಭಕ್ತಿ
ಮಿಗಿಲಾದ ಬೆಳಕು ಹೊಸಮತಕೆ ॥ ೮೫ ॥

ಶಿವಭಕ್ತಿ ಶಿವಭಜನೆ ಶಿವಕೂಟ ಶಿವಗೋಷ್ಠಿ
ಶಿವಸೇವೆ ಲಿಂಗ ಮಾದೇವಿ । ಮಾದಯ್ಯ
ಶಿವನೆಂದು ಮಾಡಿ ಶಿವಮತಕೆ ॥ ೮೬ ॥

ಆರು ಆಚಾರಗಳ ಮೂರು ಲಿಂಗಗಳೊಡನೆ
ಆರು ತಳದೊಳಗೆ ತಾವರಿತು । ಶಿವನುಡಿಯ
ಸಾರಿ ಲಿಂಗದೊಳು ಬಯಲಾಗಿ ॥ ೮೭ ॥

ಸುಗ್ಗಿ ದಾಸೋಹೆಂದು ಹಿಗ್ಗು ಬೆಳವಲ ನೋಡು
ಹುಗ್ಗಿ ಹೋಳಿಗೆಯು ನಿನ್ನಾಡು । ಸುಗ್ಯೂಟ
ನಗ್ಗೇಡು ಇದಕೆ ಮಲೆನಾಡು ॥ ೮೮ ॥

ಹಾರಿ ಬರುವದು ಹುಲುಸು ಏರಿಮಾದನ ಪತ್ರಿ
ಸೂರಿ ಹಾಡುವೆನು । ನಿನ್ಹಾಡ । ಬೆಳತನಕ
ಯಾರು ಕೈತಟ್ಟಿ ನಿಲ್ಲುವರು ॥ ೮೯ ॥

ಒಡೆದು ಹಾಡುವೆನೆಂದು ಎಡವಿಬೀಳುವರೆಷ್ಟೊ
ಜಡಮತಿಗಳೆಲ್ಲ ತಡಪಡಿಸಿ ನಿನ್ಹಾಡ
ನುಡಿಯುದಕೆ ಬಾಯ ಕಳಕೊಂಡು ॥ ೯೦ ॥

ರಾಚಯ್ಯ ನಿನಮಗನು ಊಚ ಸಾವಳಿಗೇಶ
ಕೋಚೆತ್ತಿ ಕಣಕೆ ಹಾಡಿದನು ಬೆಳತನಕ
ನಾಚಿ ಕತ್ತಲೆಯು ಬೆಳಗಾಯ್ತು ॥ ೯೧ ॥

ನನ್ನ ಕಾಯಕ ಕೇಳೊ ನನ್ನಿಯಲಿ ಹಾಡುವದು
ಕುನ್ನಿಕಾ ಜನಕೆ ಅಕ್ಕರವ । ಕಲಿತಿಲ್ಲ
ಸುನ್ನಿ ಬರೆಯುದಕೆ ಕೈಯಲ್ಲಿ ॥ ೯೨ ॥

ಸೊನ್ನಿಯಲಿ ಹಾಡುದಕೆ ನನ್ನವ್ವ ಕಲಿಸಿದಳು
ಬಿನ್ನಾಣವೆನಗೆ ಹಾಡುದಕೆ । ನನ್ನವ್ವ
ಸನ್ನುತದ ಶರಣಿ ಶಿವಪದಕೆ ॥ ೯೩ ॥

ಚಿಕ್ಕಮಾದನ ಹಾಡು ಉಕ್ಕಿಸಿತು ತೆನಿರಾಸಿ
ಒಕ್ಕುದಕೆ ಸೋತು ಒಕ್ಕಲಿಗ । ಜಂಗಮಕೆ
ತೆಕ್ಕೆತೆಕ್ಕೆಯಲಿ ಉಡಿತುಂಬಿ ॥ ೯೪ ॥

ಹಂತಿಯದು ಹಾಡೆಂದು ಪಂತಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲೆ ಮಾದಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೯೫ ॥

ಶರಣು ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸರಿ ಶರಣ ಮಾದಯ್ಯ । ನಮಗಿನ್ನು
ಹರಸರಿ ಹುಲುಸು ಹುಲ್ಲುಲ್ಲಿಗೂ ॥ ೯೬ ॥

ಕೃತಿ : ಕನ್ನಡ ಜಾನಪದ ಗೀತಗಳು

***

ಭಾಗ–೨
ಶಿವಶರಣೆಯರು

೧. ಅಕ್ಕಮಹಾದೇವಿ

ಶರಣೆಂದೆ ಮಲ್ಲಯ್ಯಗ

ಶರಣೆಂದೆ ಮಲ್ಲಯ್ಯಗ ಶರಣೆಂದೆ ಗುರುವಿಗೆ
ಶರಣೆಂದೆ ಮಲ್ಲಯ್ಯನ ಮಡದಿಗೆ । ಮಾದೇವಿ
ಶರಣೆಂದು ಕಲ್ಲ ಹಿಡಿದೇನು ॥ ॥ ೧ ॥

ವಯದಾಗ ಸಣ್ಣಕ್ಕಿ ಗುಣದಾಗ ದೊಡ್ಡಕ್ಕಿ
ಮಾಯಾ ಮೋಹವ ಬಿಟ್ಟಾಕಿ । ಮಾದೇವಿ
ಕಾಯದ ಗುಣವ ಸುಟ್ಟಾಕಿ ॥ ॥ ೨ ॥

ಉಡುತಡಿ ಕೂಸಾಗಿ ಕಲ್ಯಾಣದ ಮಗಳಾಗಿ
ಕದಳಿ ಊರಿನ ಸೊಸೆಯಾಗಿ । ಮಾದೇವಿ
ಎಲ್ಲರ ಬಾಯಾಗ ಅಕ್ಕಾಗಿ ॥ ॥ ೩ ॥

ಭಯವಿಲ್ಲ ಮನದಾಗ ನಯಗಳು ಲಿಂಗದಾಗ
ಓಂಯೆಂಬ ಶಬುದ ಮನದಾಗ । ಮಾದೇವಿ
ಅಂಗೆಲ್ಲ ನಿಂದು ಲಿಂಗದಾಗ ॥ ॥ ೪ ॥

ಗಟ್ಟಿಯಾ ನಿಲುವದು ದಿಟ್ಟ ತಾ ಹೆಜ್ಜೆಯು
ಉಟ್ಟಿದಾ ವಸ್ತ್ರ ಕಿತ್ತೊಗೆದು । ಮಾದೇವಿ
ಸುಟ್ಟಾಳ ಕಾಮ ಕ್ರೋಧವು ॥ ॥ ೫ ॥

ಹಸಿವಿಲ್ಲ ನೀರಿಲ್ಲ ಮಾತಿಲ್ಲ ಮೌನಿಲ್ಲ
ಉಸಿರೊಂದು ಅಕ್ಕನ ಧ್ಯಾಹದಾಗ । ಅದರಾಗ
ಹಾಸುತಾ ಹೊಕ್ಕಿ ಭಕುತಿಯು ॥ ॥ ೬ ॥

ಹುಚ್ಚಿ ಹಾಂಗ ಕಂಡಾಳ ಕಿಚ್ಚಿಲಿ ಹೊಂಟಾಳ
ಚುಚ್ಚಿ ತಾ ಆಡ್ಯಾರ ಕಂಡವರು । ಮಾದೇವಿ
ಮೆಚ್ಚಿತಾ ಹೊಂಟಾಳ ಶಿವನಿಗಿ ॥ ॥ ೭ ॥

ಸಣ್ಣಕ್ಕಿ ಮಾದೇವಿ ಶಿವಯೋಗದ ತಾಯಾಕಿ
ಉನ್ನತ ನಿಲುವ ತಾನೇರಿ । ಅದರಾಗ
ಸನ್ನೂತ ಶಿವಗ ಕಂಡಾಳ ॥ ॥ ೮ ॥

ಭಕ್ತಿಯ ಹಾದಿಯು ಮುಕ್ತಿಯ ತೋರ್‍ಯಾದ
ಶಕ್ತಿಯು ಅಕ್ಕಗ ಕೊಟ್ಟದ । ಅದರಾಗ
ಸತ್ಯುಳ್ಳ ಶರಣನ ಕಂಡಾಳ ॥ ॥ ೯ ॥

ಶಿವಯೋಗಿ ಮಾದೇವಿ ಶಿವಯೋಗ ಕಲಿಸ್ಯಾಳ
ಅವಯವ ಒಂದು ಮಾಡ್ಯಾಳ । ಲಿಂಗದಾಗ
ಶಿವನೇ ತಾನು ಆಗ್ಯಾಳ ॥ ॥ ೧೦ ॥

ಕದಳಿಯ ಬನದಾಗ ಚನ್ನನ ಜೊತೆಯಾಗ
ಕೂಡಿ ತಾ ಮಾಡಿ ಸಂಸಾರ । ಮಾದೇವಿ
ಸಾಧಿಸಿ ತೋರಿ ತನ ನಿಲುವ ॥ ॥ ೧೧ ॥

ಸಿರಿಗಿರಿ ಊರಾಗ ಕದಳಿಯ ಬನದಾಗ
ಪರಶಿವ ಬಂದ ಕರಿಲಾಕ । ಮಾದೇವಿ
ಮರತ್ಯವ ಗೆದ್ದು ನಡದಾಳ ॥ ॥ ೧೨ ॥

– ಶ್ರೀಮತಿ ಗೌರವ್ವ ಕಾಡಾದಿ
– ಶ್ರೀಮತಿ ಜ್ಯೋತಿ ಕಾಡಾದಿ

***

ಅಕ್ಕನ ಹಾಡು ಹಾಡ ಬನ್ನಿ

ಒಂದೇ ಮನವ ಮಾಡಿ ಅಕ್ಕತಂಗೆರೆಲ್ಲಾ ಕೂಡುತಲಿ
ಅಕ್ಕನ ಹಾಡು ಹಾಡ ಬನ್ನಿ ಬನ್ನಿರೆಲ್ಲರೂ ॥ ಪ ॥

ಉಡುತಡಿಯೊಳು ಜನಿಸಿಹಳವ್ವಾ
ಮೃಢಮಲ್ಲಿನಾಥನೊಳು ಕೂಡಿಹಳವ್ವಾ
ಸಾವ ಕೆಡುವ ಗಂಡನೊಯ್ದು ಕಿಚ್ಚಿನೊಳಗಿಕ್ಕೆಂದು
ಸಾರಿ ಸಾರಿ ಸಾರುತ್ತಾ ಹೊರಟಿಹಳು ॥ ೧ ॥

ಭೋಗ ದಾಸ್ಯವಳಿದ ವೈರಾಗ್ಯ ಮೂರ್ತಿಯೆ
ವೇಗವಾಗಿ ಸಾಗಿ ನಮ್ಮ ಕುಲದ ದಾರಿಯೇ
ತ್ಯಾಗ ಬುದ್ಧಿ ಬಲಿತ ಯೋಗಿ ಅಕ್ಕಮಹಾದೇವಿ
ನುಡಿದ ವಚನ ಹಾಡ ಬನ್ನಿ ಬನ್ನಿರೆಲ್ಲರು ॥ ೨ ॥

ಲಿಂಗವನ್ನೆ ಪರದೈವವೆಂದೂ
ಲಿಂಗಪೂಜೆ ಮಾಡಿದರೆ ಪುಣ್ಯ ಬರುವದೆಂದು
ಸ್ವಾತಂತ್ರ್ಯ ಜೀವನ ಬೇಕೆಂದು
ದಿಟವ ನುಡಿಯುತ್ತಲ್ಲಿ ಸೆಟೆ ಬಿಡುವುತಲಿ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಉಡುತಡಿ ಎಂಬುದು ಮಡಿಯಾಯ್ತು

ಅಕ್ಕ ನಿನ್ನ ಹಾಡು ಎತ್ತಿ ನಾ ಹಾಡಿದರ
ಗಕ್ಕಂತ ಪಾಪ ತಿರುಗ್ಯಾವ ಕೈಲಾಸ
ಪಕ್ಕಕ ಬಂದು ನೆಲಸ್ಯಾತು ॥ ೧ ॥

ಉಡುತಡಿ ಎಂಬುದು ಮಡಿಯಾಯ್ತು ನಿನ್ನಿಂದ
ಸಡಗರ ನೋಡಾಕ ಶಿವಬಂದ । ಮಾದೇವಿ
ಅಡಿಯಾದ ನಿನ್ನ ಭಕುತಿಗಿ ॥ ೨ ॥

ಮಾದೇವಿ ಕೂದಲು ಕರಿಮೋಡ ಇಳದ್ಹಾಂಗ
ಕರಿಸರ್ಪ ಹಾಯಿದು ನಡದ್ಹಾಂಗ । ಬೆನ್ನಹಿಂದ
ಕರಿಬೆಟ್ಟದ್ಹಾಂಗ ಕಂಡಾವ ॥ ೩ ॥

ಮನದಾಗ ಶಿವತುಂಬಿ ತನುದಾಗ ಶಿವತುಂಬಿ
ಮನ ತನು ಎರಡು ಮುಡುವಿಟ್ಟ । ಮಾದೇವಿ
ಚನ್ನನೇ ಗಂಡ ಎನುತಾಳ ॥ ೪ ॥

ಭಯವಿಲ್ಲ ಮನದಾಗ ನಯಗಳು ಲಿಂಗದಾಗ
ಓಂಯೆಂಬ ಶಬುದ ಮನದಾಗ । ಮಾದೇವಿ
ಅಂಗೆಲ್ಲ ನಿಂದು ಲಿಂಗದಾಗ ॥ ೫ ॥

ಕಲ್ಯಾಣಕ ಬಂದಾಳ ಕಲ್ಯಾಣದ ಮಗಳಾಗಿ
ಎಲ್ಲರಿಗಿ ಅಕ್ಕ ತಾನಾಗಿ । ಬಸವಣ್ಣಗ
ಹೊಟ್ಟಿಯ ಸುತೆಗಿಂತ ಹೆಚ್ಚಾಗಿ ॥ ೬ ॥

ಕದಳಿಗಿ ಬಂದಾಳ ಕದಳಿಯ ಸೊಸಿಯಾಗಿ
ಕದಳಿಯ ಒಡೆಯನ ಮಡದ್ಯಾಗಿ । ಮಾದೇವಿ
ಕದಳಿಯ ಬನದ ಒಡತಿಯಾಗಿ ॥ ೭ ॥

ಸಿರಿಗಿರಿ ಊರಾಗ ಕದಳಿಯ ಬನದಾಗ
ಪರಶಿವ ಬಂದ ಕರಿಲಾಕ । ಮಾದೇವಿ
ಮರತ್ಯವ ಗೆದ್ದು ನಡದಾಳ ॥ ೮ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜಿಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ವೈರಾಗ್ಯದ ರುದ್ರ ಕನ್ನಿಕೆ

ಧನ್ಯ ಕಲ್ಯಾಣದ ಶಿವಶರಣ ಸುತೆ
ಚನ್ನಮಲ್ಲಯ್ಯನ ನಂಬಿಗೆಯ ಸತೆ ॥ ಪ ॥

ಶತಕೋಟಿ ವರುಷದ ಹಿರಿಯರೆ
ಹುತ್ತೇರಿ ಬೆಳೆದಿಹ ಋಷಿಗಳೆ
ಮತಿಗೆಟ್ಟು ಮಾತಾಡುತ್ತಿರುವ
ನಡು ಮುರಿದ ನರಕಿಳಿದ ಪಶುಗಳೆ
ಸರಿಯೇ ವೈರಾಗ್ಯದ ರುದ್ರಕನ್ನಿಕೆಗೆ ॥ ೧ ॥

ಇಂದ್ರನೀಲದ ಗಿರಿಯನೇರುತ
ಶಿವನ ಸನ್ನಿಧಿ ಪಡಿದಿಯಾ
ಚಂದ್ರಕಾಂತನ ಶಿಲೆಯನಪ್ಪಿ
ಮಹಾಬೆಳಗಿನಲ್ಲಿ ಸುಳಿದಿಯಾ
ಕೊಂಬು ಬಾರಿಸುತ್ತಾ ಸಗ್ಗವೇರಿದಿಯಾ ॥ ೨ ॥

ಕದಳಿ ಎಂಬುದು ತನುವು ತಾಯಿಗೆ
ಕದಳಿ ಎಂಬುದು ಘೋರಾರಣ್ಯ
ಕದಳಿ ಎಂಬುದು ಗೆದ್ದು
ಭವಹರನರಿಸಿ ಪಡೆದಳು ಮೋಕ್ಷವು
ಕದಳಿ ಎಂಬುದನ್ನು ತಿಳಿದು ನೋಡಿಹಳು ॥ ೩ ॥

ಹುಟ್ಟುಕೊಟ್ಟ ಮನೆಗೆ ಹುಲ್ಲನ್ನು ತರದೆ
ಹೂವ ನೀ ತಂದೆಯಾ
ಮೆಟ್ಟಿದ ಧರಿಯಾ ಪಾವನಗೈಯುತ್ತ
ಕದಳಿಯನು ಹೊಕ್ಕೆಯಾ
ಮುಟ್ಟಿ ಶಿವಲಿಂಗವ ಭವಗೆಟ್ಟಿಯಾ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಅಕ್ಕಾ ಶರಣು ಶರಣಾರ್ಥಿ

ಉಡುತಡಿ ಮಹಾದೇವಿಯೇ
ನಿನಗೆ ಶರಣು ಶರಣಾರ್ಥಿ
ಅಕ್ಕಾ ಶರಣು ಶರಣಾರ್ಥಿ ॥ ಪ ॥

ಬಸವನ ಭಕ್ತಿಯ ಪರುಷದ ಮಣಿಯೇ
ಚನ್ನಬಸವನ ಜ್ಞಾನದ ಖಣಿಯೇ
ಪ್ರಭುವಿನ ವೈರಾಗ್ಯದ ಸಿರಿಯೇ
ಶರಣು ಶರಣಾರ್ಥಿ ಅಕ್ಕಾ ಶರಣು ಶರಣಾರ್ಥಿ ॥ ೧ ॥

ಹೆಂಗೂಸಿನಂಗವ ನೋಡಿ ಶರಣರೇ
ಪೊಂಗು ಜವ್ವನವ ನೋಡಿ ಪ್ರಮಥರೇ
ಲಿಂಗನಿಷ್ಠೆಯಲ್ಲಿ ತನ್ನ ಮರೆತಿಹಳು
ಶರಣು ಶರಣಾರ್ಥಿ ಅಕ್ಕ ಶರಣು ಶರಣಾರ್ಥಿ ॥ ೨ ॥

ಚಂದನ ಕಡಿದೊಡೆ ಕಂಪು ಬಿಡುವದೇ
ಬೆಂದ ಸುವರ್ಣ ಕಳಂಕ ಹಿಡಿಯುವುದೇ
ನೊಂದ ಕಬ್ಬು ಸವಿ ಗುಣ ಬಿಡುವುದೇ
ಶರಣು ಶರಾರ್ಥಿ ಅಕ್ಕ ಶರಣು ಶರಣಾರ್ಥಿ ॥ ೩ ॥

ಪರಬ್ರಹ್ಮದ ಚಿಚ್ಛಕ್ತಿಯು ನೀನೇ
ಹರಶರಣರ ಶಿವಶಕ್ತಿಯು ನೀನೇ
ಧರೆಯ ಜನರಿಗೆ ಮುಕ್ತಿಯದಾತೇ
ಶರಣು ಶರಣಾರ್ಥಿ ಅಕ್ಕ ಶರಣು ಶರಣಾರ್ಥಿ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಶರಣಿ ಬಾರಮ್ಮ ಮನಿಗೆ

ಶರಣಿ ಬಾರಮ್ಮ ಮನಿಗೆ
ಶರಣಿ ಬಾರಮ್ಮ ಮನಿಗೆ
ನಾನು ನಿನ್ನ ಕರಿಯಲು ಬಂದೆ
ಶರಣಿ ಬಾರಮ್ಮ ಮನಿಗೆ । ಶರಣಿ ಬಾರಮ್ಮ ...... ॥ ಪ ॥

ಜರದಂಚಿಯ ಸೀರೆಯನುಟ್ಟು
ಜರತಾರಿಯ ಕುಬ್ಬಸ ತೊಟ್ಟು
ಹಣಿಯ ಮ್ಯಾಲೆ ಕೂಕಮ ಬಟ್ಟು
ಹರುಷಲಿಂದೆ ಕರೆಯಲು ಬಂದಾ । ಶರಣಿ ಬಾರಮ್ಮ ..... ॥ ೧ ॥

ತಾಯಿ ತಂದಿಗಳನು ಬಿಟ್ಟು
ಪಾದತನಕ ಜಡಿಯವ ಬಿಟ್ಟು
ಕೊರಳಲಿ ರುದ್ರಾಕ್ಷಿ ಹಾಕಿ
ಹಣಿಯ ಮ್ಯಾಲೆ ಈಬತಿ ಧರಿಸಿ । ಶರಣಿ ಬಾರಮ್ಮ ..... ॥ ೨ ॥

ವೀರಶೈವ ಮತದಲಿ ಹುಟ್ಟಿ
ಕೌಸಿಕನ ಸುಟ್ಟೆ ಬಿಟ್ಟಿ
ಬಸವ ಕಲ್ಯಾಣ ಹುಡಕುತ ಹೊಂಟಿ
ಎಲ್ಲ ಶರಣರಿಗೆ ಆಗೀ ಬಿಟ್ಟಿ । ಶರಣಿ ಬಾರಮ್ಮ ..... ॥ ೩ ॥

ಕನ್ನಡದಲ್ಲಿ ವಚನವ ಕಟ್ಟಿ
ಅನುಭಾವದ ಒತ್ತೆ ಬಿಟ್ಟಿ
ಮಲ್ಲಿಕಾರ್ಜುನ ಹುಡಕುತೆ ಹೊಂಟೀ
ಕರು ಪಕ್ಷಿಗಿ ಕೇಳೇ ಬಿಟ್ಟಿ । ಶರಣಿ ಬಾರಮ್ಮ ..... ॥ ೪ ॥

ಗಂಗಿಯೋಳು ಸ್ನಾನವ ಮಾಡಿ
ಶಿವಲಿಂಗಕೆ ಮಂಗಲ ಪಾಡಿ
ಶರಣಿಯಕ್ಕ ಮಾದೇವಿಗೆ
ಎನ್ನ ಪ್ರಾಣ ಅರ್ಪಣ ಮಾಡಿ । ಶರಣಿ ಬಾರಮ್ಮ .... ॥ ೫ ॥

– ಶ್ರೀಮತಿ ಉತ್ತಮಬಾಯಿ
– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಶರಣು ಶರಣಾರ್ಥಿ

ಉಡುತಡಿಯ ಮಹಾದೇವಿಯೇ
ನಿನಗೆ ಶರಣು ಶರಣಾರ್ಥಿ
ಅಕ್ಕ ಶರಣು ಶರಣಾರ್ಥಿ ॥ ಪ ॥

ಬಸವನ ಭಕ್ತಿಯ ಪರುಷದ ಮಣಿಯೇ
ಚನ್ನಬಸವನ ಜ್ಞಾನದ ಖಣಿಯೇ
ಪ್ರಭುವಿನ ವೈರಾಗ್ಯದ ದೇವತೆಯೇ ಶರಣು । ಶರಣಾರ್ಥಿ ಅಕ್ಕ ॥ ೧ ॥

ಹೆಂಗುಸಿನಂಗವ ನೋಡಿ ಶರಣರೆ
ಮೊಂಗು ಜವ್ವನವ ನೋಡಿ ಪ್ರಥಮರೆ
ಲಿಂಗ ನಿಷ್ಠೆಯಲಿ ತನ್ನ ಮೆರದಿಹಳು ಶರಣು । ಶರಣಾರ್ಥಿ ಅಕ್ಕ ॥ ೨ ॥

ಚಂದನವ ಕಡಿದೊಡೆ ಕಂಪು ಬಿಡುವದೇ
ಬೆಂದ ಸುವರ್ಣ ಕಳಂಕ ಹಿಡಿಯುವದೇ
ನೊಂದ ಕಬ್ಬು ಸವಿ ಗುಣವ ಬಿಡುವದೇ । ಶರಣು ಶರಣಾರ್ಥಿ ಅಕ್ಕ ॥೩ ॥

ಪರಬ್ರಹ್ಮದ ಚಿಚ್ಛಕ್ತಿಯು ನೀನೇ
ಹರಶರಣರ ಶಿವಶಕ್ತಿಯು ನೀನೇ
ಧರೆಯ ಜನರಿಗೆ ಮುಕ್ತಿಯದಾತೇ । ಶರಣು ಶರಣಾರ್ಥಿ ಅಕ್ಕ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಬಾರಮ್ಮ ಬಾ ತಾಯಿ

ಬಾರಮ್ಮ ಬಾ ತಾಯಿ ಶಿವಶರಣೆ ಮಹಾದೇವಿ
ಬಾ ನಾರಿ ಕುಲಧರ್ಮ ಸರಿಮಣಿಯಾಗು ಹೇದೇವಿ
ಉಡತಡಿಯ ಊರಲ್ಲಿ ಪಾರ್ವತಿಯೇ ನೀನಾಗಿ
ಉದಯಿಸಿದ ಶಿವಧರ್ಮ ಸಿರಿತುಂಬಿ ಶುಭವಾಣಿ । ಬಾರಮ್ಮ ಬಾ ..॥ ೧ ॥

ಮಧುರ ಭಕ್ತಿಯ ಜ್ಯೋತಿ ಬೆಳೆಗಿಸಲು ಜಗದಲ್ಲಿ
ಹರವಾದ ಸುಜ್ಞಾನ ಮಾರ್ಗವನು ತೋರಿಸಿದೆ
ಕಾಯದ ಕತ್ತಲೆಯಾ ಕಳೆಯಲಿಕ್ಕೆ ಪ್ರಾಯದಲ್ಲಿ
ಮಾಯಾದ ಮದವನ್ನು ಮುರಿದೆ ಮಹಾ ತೇಜದಲ್ಲಿ । ಬಾರಮ್ಮ ಬಾ.. ॥೨॥

ತಾಯಿ ಕರುಣ್ಯೆದಲ್ಲಿ ಜೀವನ ಜಂಜಡವ
ದೇಹ ಸಾಧನೆಗಾಗಿ ಮಾಣಿಸಿದ ಮಹಾತಾಯಿ
ನೆಲದ ಮರೆಯಲ್ಲಿರುವ ನಿಧಾನದಂತೆ
ಶಿಲೆಯ ಮರೆಯಲ್ಲಿರುವ ಬಂಗಾರದಂತೆ । ಬಾರಮ್ಮ ಬಾ ..... ॥ ೩ ॥

ತಿಲದ ಮರೆಯಲ್ಲಿರುವ ತ್ಯೆಲದ ಪರಿಯಂತೆ
ನೆಲಸಿಹನು ಶಿವನೆಂದು ಜಗಕೆಲ್ಲ ತೋರಿಸಿದೆ
ಹೆಣ್ಣು ಮಾಯೆಯೆಂಬ ಪರಿಯನ್ನು ಹರಿದೊಗೆದು
ಹೆಣ್ಣು ತಾಯಿಯಾಗಿ ಜಗತೂಗುವದೆಂದು । ಬಾರಮ್ಮ ಬಾ .... ॥ ೪ ॥

ಹೆಣ್ಣಿನ ಘನತೆಯನು ಮೆರೆಸಿ ಲೋಕದಲ್ಲಿ
ಕುನ್ನಿ ಮಾನವರಿಗೆ ಪದದೇವಿ ನೀನಗೆ
ಹೀನ ಸಂಸಾರ ದೂರೀಕರಿಸಿ ನೀನು
ಮಾನೀತ ವೈರಾಗ್ಯ ಸಂಪತ್ತು ಗಳಿಸಿದೆ । ಬಾರಮ್ಮ ಬಾ ... ॥ ೫ ॥

ಜ್ಞಾನದೇವತೆಯಾಗಿ ವಚನ ಶಾಸ್ತ್ರವ ರಚಿಸಿ
ದೀನ ಜನದೊಳಗೆ ಮಾರ್ಗವನ್ನು ತೋರಿಸಿದೆ
ಶೋಕ ಸಂಸಾರದಲ್ಲಿ ಸಾಯ ಕೆಡುತಿರುವ ಈ
ಲೋಕದ ಗಂಡಸರನ್ನು ಒಲಿಯೊಳಗೆ ಹಾಕೆಂದು । ಬಾರಮ್ಮ ಬಾ.. ॥ ೬ ॥

ಸಾಕುಬೇಕೆಂಬ ಎರಡು ಭವಬೀಜವನ್ನು ಹರಿದು
ಲೋಕನಾಥನಾದ ಮಲ್ಲಿಕಾರ್ಜುನನಿಗೊಲಿದು
ಉಡತಡಿ ಊರಲ್ಲಿ ಪಾರ್ವತಿಯೆ ನೀನಾಗಿ
ಉದಯಸಿದೆ ಶಿವಧರ್ಮ ಸಿರಿತುಂಬಿ ಶುಭವಾಣಿ । ಬಾರಮ್ಮ ಬಾ.. ॥ ೭ ॥

– ಶ್ರೀಮತಿ ಸರೋಜನಿಬಾಯಿ ಪಾಟೀಲ ಸೊಂತ

***

ಜಯ ಜಯವಾಗಲಿ

ಜಯ ಜಯವಾಗಲಿ ಶ್ರೀ ಮಹಾದೇವಿಗೆ
ಪತಿ ಪಂಥತಲಿ ಜ್ಯೋತಿಯು ಬೆಳಗಲಿ ಜಯ ಜಯವಾಗಲಿ ॥ ಪ ॥

ಹರುಷ ಇತ್ತಿದಿ ತತ್ವವನು ಹರಡಿಸಿ
ಸೋಮ ಧರಣಿ ಕೃಪೆ ಇಂದುರಾಜಿಸಿ ॥ ೧ ॥

ಕನ್ನಡ ನಾಡಿನ ಶರಣೆ ಕುಮಾರಿಗೆ
ಮಾನ್ಯತೆ ದೊರೆಯಲಿ ಭಾರತ ಮಾತೆಗೆ ॥ ೨ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಆತ್ಮಜ್ಯೋತಿ ಅರಳಿ

ಆತ್ಮ ಜ್ಯೋತಿ ಅರಳಿ ನೀತಿ ತತ್ವನುಡಿದ ತಾಯಿಯೇ
ತತ್ವ ನುಡಿದ ತಾಯಿಯೇ ಆತ್ಮಜ್ಞಾನ ಪಡೆದ
ಅಕ್ಕಮಹಾದೇವಿಯೇ ಅಕ್ಕ ಮಹಾದೇವಿಯೇ ॥ ಪ ॥

ತ್ಯಾಗಯೋಗ ನಿನ್ನ ಮಾರ್ಗ ಎಂದು ಮುಂದೆಸಾಗಿದೆ
ಎಂದು ಮುಂದೆ ಸಾಗಿದೆ ಭೋಗ ಭಾಗ್ಯಗಳನು
ತೊರೆದು ಇಂದುಧರನ ನೊಲಿಸಿದೆ ಇಂದು ಧರನ ನೊಲಿಸಿದೆ ॥ ೧ ॥

ಕವನ ಹಾಡಿ ಶಿವನ ಕೂಡಿ ಭುವನವನ್ನು ಬೆಳಗಿದೆ
ಭುವನವನ್ನು ಬೆಳಗಿದೆ ಮೌನ ಜ್ಞಾನ ಪೂಜೆಯಿಂದ
ಲಿಂಗದಡಿಯ ಸೇರಿದೆ ಲಿಂಗದಡಿಯ ಸೇರಿದೆ ॥ ೨ ॥

ಕನ್ನಡಕೆ ಕಳೆಯು ತಂದ ನಿನ್ನ ಕಾವ್ಯ ಘರ್ಜನಾ
ನಿನ್ನ ಕಾವ್ಯ ಘರ್ಜನಾ ಧನ್ಯಶರಣೆ ನಿನ್ನ ದೇಹ
ಚನ್ನಮಲ್ಲಿಕಾರ್ಜುನ ಚನ್ನಮಲ್ಲಿಕಾರ್ಜುನ ॥ ೩ ॥

ಹೃದಯ ಲೆದುರ ನಶಿಸಿ ಅಮರ ದಿವ್ಯಜ್ಯೋತಿ ಬೆಳಗಿದೆ
ದಿವ್ಯ ಜ್ಯೋತಿ ಬೆಳಗಿದೆ ಹೃದಯ ವೀಣೇ ಮೀಟಿ ಮಧುರಾ
ವಾಣಿಯನ್ನು ಬೆಳಗಿದೆ ವಾಣಿಯನ್ನು ಬೆಳಗಿದೆ ॥ ೪ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಜಯವೆಂದು ಬೆಳಗುವೆ

ಜಯವೆಂದು ಬೆಳಗುವೆ ಮಲ್ಲಿಕಾರ್ಜುನಗೆ
ಹರವೆಂದು ಬೆಳಗುವೆ ಮಲ್ಲಿಕಾರ್ಜುನಗೆ
ಮಲ್ಲಿಕಾರ್ಜುನನೆ ಭಕ್ತ ಮಂದಿರನೆ ॥ ಪ ॥

ಶಿರಿಯಾಳ ಸುತನ ಮಾಂಸವ ಬೇಡಿದೆವನೆ
ಶರಣೆ ನಿಂಬೆಕ್ಕನ ಭಕ್ತಿಗೊಲಿದವನೆ
ಪರತರ ಮೋಕ್ಷವ ಕೊಟ್ಟು ಸಲಹುವವನೆ ॥ ೧ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಉಡತಡಿಯ ಮಹಾದೇವಿ

ಉಡತಡಿಯ ಮಹಾದೇವಿ ಕದಳಿಯ ಬನದೊಳು ಐಕ್ಯ
ಕದಳಿಯ ಬನದೊಳೈಕ್ಯ ॥ ಪ ॥

ಹನ್ನೆರಡನೆಯ ಶತಮಾನ ಮಹಾದೇವಿ ಜನ್ಮಜನನ
ಜನಾಂಗ ದಾನ ದಾನ ಶರಣಿಯ ವಚನಗಾನ ॥ ೧ ॥

ಕಲ್ಯಾಣ ಕ್ರಾಂತಿ ಶರಧಿ ಅಬಲೆಯರ ಮಾನನೆಲದಿ
ಸರಿಸಮಾನತೆಯ ತೂರಿ ಆದರ್ಶಳಾದ ಮಹಿಳೆ
ಆದರ್ಶಳಾದ ತಾಯೆ ॥ ೨ ॥

ನಿಮ್ನಾಮ ಕಾಮಧೇನು ನಿಮ್ನಾಟ ಪಂಚ ಹರುಷ
ನಿಮ್ನೋಡಿ ಧನ್ಯಳಾದೆ ನೀ ಎನ್ನ ಕಾಯೋ ತಾಯೆ
ನೀ ಎನ್ನಕಾಯೆ ತಾಯೆ ॥ ೩ ॥

ಅಂಗೋಪ ಭೋಗ ತ್ಯಜಿಸಿ ಕಳಸಿದ ಮೋಹ ಮುರಿದು
ಕಲ್ಯಾಣ ಪುರವ ತೊರೆದು ಶ್ರೀಶೈಲದೊಳೈಕ್ಯವಾದಿ
ಶ್ರೀಶೈಲ ದೋಳೈಕ್ಯ ವಾದಿ ॥ ೪ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಶರಣು ಮಾಡುವೆ

ಶರಣು ಮಾಡುವೆ ಜಗದ ಕಣ್ಮಣಿ ಹೆಣ್ಣು ಕುಲದ ಕೀರ್ತಿಯೆ
ಮನುಜ ಕುಲವ ಪಾವನ ಮಾಡಿದ ನೀನು ಘನ ಮಹಾತ್ಯಾಗಿಯೆ ॥ ಪ ॥

ಅಂತರಂಗದಿ ಶಿವನ ಸ್ಮರಿಸುತ ನಿತ್ಯ ಪೂಜೆಯಗೈದಿಹೆ
ಭಕ್ತಿರಸದಿ ಉಕ್ಕಿ ಬರುವ ವಚನ ಮಳೆಯ ಸುರಿಸಿದೆ ॥ ೧ ॥

ದೇವರ ಒಲುಮೆಯ ಹೂವು ಶುದ್ಧಮನದಿ ಅರ್ಪಿಸಿದೆ
ಶುದ್ಧ ಜೀವನ ದಾರಿಯಲ್ಲಿ ಬಂದ ಕಷ್ಟವ ನುಂಗಿದೆ ॥ ೨ ॥

ಭಕ್ತಿಯೆಂಬ ಜೇನ ಹೊಳೆಯಲಿ ನಿನ್ನ ತರ್ಕವ ಮಾಡಿದೆ
ವಾದದಲ್ಲಿ ಜಯವ ಹೊಂದಿ ಬಲ್ಲವರ ಸೋಲಿಸಿದೆ ॥ ೩ ॥

ಅಸ್ಥಿರವಾದ ದೇಹವಿದಕೆ ತ್ಯಾಗವನು ಮಾಡಿದೆ
ಲಿಂಗನಿಷ್ಠೆಯಲ್ಲಿ ನೀನು ಎಲ್ಲ ಜ್ಞಾನವ ಪಡೆದಿಹೆ ॥ ೪ ॥

ತ್ಯಾಗ ಜೀವನದಲ್ಲಿ ನಿನ್ನ ಹೆಸರು ಮೊದಲಿನ ಸ್ಥಾನವು
ಎಲ್ಲರಿಗೂ ಅಕ್ಕನಾಗಿ ವೈರಾಗ್ಯ ತಾಳಿದೆ ॥ ೫ ॥

ಮಲ್ಲಿಕಾರ್ಜುನ ಹಂಬಲದಲಿ ಧರ್ಮನೀತಿಯ ಅರುಹಿದೆ
ನಿನ್ನ ಮನವ ಅವನಿಗರ್ಪಿಸಿ ಶಿವನ ಪ್ರೀತಿಯ ಗಳಿಸಿದೆ ॥ ೬ ॥

ಮಲ್ಲಿಕಾರ್ಜುನ ಎನ್ನುತ ನೀ ಅವನ ಪಾದವ ನಂಬಿದೆ
ಧರ್ಮದಾ ಹಣತೆಯಲ್ಲಿ ಜ್ಞಾನದ ದೀಪ ಬೆಳಗಿದೆ ॥ ೭ ॥

ಧರ್ಮ ಜ್ಯೋತಿಯ ಬೆಳಗುತಿರಲು ಮುಕ್ತಿಪದವ ಹೊಂದಿದೆ
ನಿನ್ನ ಕೀರ್ತಿಯ ಪಟವು ಇಂದು ಚಿರವಾಗಿ ಉಳಿದಿದೆ ॥ ೮ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಾ ಮಹಾದೇವಿ

ಬಾ ಮಹಾದೇವಿ ಉಡುತಡಿ ತಾಯಿ
ಬೇಗನೆ ಬಂದೆನ್ನ ಬಳಗವ ಕಾಯಿ ಬಾ ಮಹಾತಾಯಿ ॥ ಪ ॥

ಮೋದದಿಂದಲಿ ಬಸವನ ಅನುಭವದಿ
ಸಾದಿಸಿದಿಯೆಲ್ಲ ಕದಳಿಯ ವನಜಲದಿ
ಬೋಧನವ ಮಾಡಿದಿ ಸಾಧನವ ಗಳಿಸಿದಿ
ವೇದಶಾಸ್ತ್ರಕ್ಕೆ ವಚನದಿಂದಲಿ ಮೆರಸಿದಿ ॥ ೧ ॥

ನೀನು ಲಿಂಗದ ಕಲೆನೆಲೆ ತಿಳಿಯುತಲಿ
ಹೀನ ಅಂಗದ ಭಂಗವ ತೊಳೆಯುತಲಿ
ಜ್ಞಾನ ಬಂಧುರಳೆ ಧ್ಯಾನ ತಲ್ಲೀನಳೆ
ಸಾನು ರಾಗದಿ ಶಿವನೊಳೆ ಬೆರೆದಾತಳೆ ॥ ೨ ॥

ಭಕ್ತಿಯಲ್ಲಿ ನಿನ್ನನ್ನು ನೆನೆಯುತಲಿ
ಆಹಾ ಎನ್ನುತಾ ಪರಿತಪಿಸುತಲಿರುವೆನು
ದೇಹಿ ಎನ್ನುವೆವು ತ್ರಾಹಿ ಬೇಡುವೆವು
ನೀಡಮ್ಮ ನೀ ಎಮಗೆ ಮಹಾಹರಕೆಯು ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ನಿಜರೂಪ ತೋರೆ

ಅಕ್ಕಮಹಾದೇವಿ ಬಾರೆ
ನಿನ್ನ ನಿಜರೂಪ ತೋರೆ ॥ ಪ ॥

ತಾಯಿ ಸುಮತಿ ತಂದಿ ನಿರ್ಮಲಶೆಟ್ಟಿ
ಉಡುತಡಿ ಗ್ರಾಮಕ್ಕ ಉದ್ಧಾರ ಮಾಡಿದಿ ॥ ೧ ॥

ಕೌಶಿಕ ಅರಸನ ಕೈಯಾಗ ಸಿಕ್ಕಿದಿ
ಅವನ ತಲಿಯೊಳಗಿನ ಕಾಮವ ಇಳಿಸಿದಿ ॥ ೨ ॥

ವಿಚಾರದ ಸ್ನಾನವ ನೀ ಮಾಡಿದಿ ಮನಸ್ಸಿನ ಬಟ್ಟಿ ನೀ ಉಟ್ಟಿದಿ
ಆಧ್ಯಾತ್ಮದ ಊಟ ನೀ ಉಂಡಿದಿ ॥ ೩ ॥

ಇಷ್ಟಲಿಂಗದ ಪೂಜೆ ನೀ ಮಾಡಿದಿ
ಮಲ್ಲಿಕಾರ್ಜುನನೊಳು ಮುಕ್ತಿ ನೀ ಪಡಿದಿದಿ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಕರುಣಾ ತೋರೆ ತಾಯೇ

ಕರುಣಾ ತೋರೆ ತಾಯೇ ಮರಿಬೇಡ ಮಾತಾಯೇ
ಸದಾ ಸುಖೀಯೆ ತಾಯೇ ಅಕ್ಕನ ಬಳಗ
ಸದಾ ಸುಖೀಯೆ ತಾಯೆ ॥ ೧ ॥

ಅಕ್ಕನ ಬಳಗಕ್ಕೆ ವರವು ನೀಡೆ ಮಾತೇ
ಬಡವರಿಗೆ ದಾತೇ ಅಕ್ಕ ಮಾತೆ ಬಡವರಿಗೆ ದಾತೇ ॥ ೨ ॥

ಈ ಭವ ತಿರುಗ್ಯಾಡೇ ಹತ್ತಲಿಲ್ಲವ ಜಾಡೆ
ಜಲ್ಮ ಹೋಯಿತು ಖೋಡೆ ದುಡಿದು ದುಡಿದು
ಜಲ್ಮ ಹೋಯಿತು ಖೋಡೆ ॥ ೩ ॥

ಮಾಯ ಮೋಹದಲ್ಲೆ ಜಗ ತುಂಬ್ಯಾದಿದರಲ್ಲೇ
ಎಲ್ಲಿ ನೋಡಿದಲ್ಲೆ ಕೂಗುತಾದ ಎಲ್ಲಿ ನೋಡಿದಲ್ಲೇ ॥ ೪ ॥

ಜನನ ಮರಣ ಖೂನಾ ಭಜಿಸುವೆ ಅನುದಿನ
ಅಕ್ಕಮಹಾದೇವಿನ ಭಜಿಸುವೆ ನಾನು ನಿತ್ಯ ಅನುದಿನ ॥ ೫ ॥

ರಾಮಲಿಂಗ ದೇವ ಮುಚಳಂಬಿಯ ಠಾವ
ವರವು ನೋಡೋ ದೇವ ಕವನದಲ್ಲಿ ಸುರಿಸೊ ಅಮೃತವ ॥ ೬ ॥

ಎಲ್ಹಾರೋ ಶಿವ ಎಲ್ಲಾರೋ
ಮಹಾದೇವಿ ಮನದಲ್ಲಾಡುಗ್ಯಾರೋ ॥ ೭ ॥

– ಶ್ರೀಮತಿ ಲಕ್ಷ್ಮೀಬಾಯಿ ಹಾಗೂ
– ಶ್ರೀಮತಿ ಸಂಗಮ್ಮ

***

ಮಹಾದೇವಿ ಅಕ್ಕಬಾರೆ

ಹುತ್ತಿನೋಳು ಸರ್ಪಕಂಡು ಮುತ್ತಿನಂಥ ಹೆಡಿಯ ತೆಗೆದು
ಹಾಲಿಟ್ಟು ಕೈಯ ಮುಗಿದು, ಮಹಾದೇವಿಯಕ್ಕ ಬಾರೆ
ಈ ಪರಮ ಸುಖವ ತೋರೆ ಮಹಾದೇವಿಯಕ್ಕ ಬಾರೆ ॥ ೧ ॥

ಹನ್ನೇರಡು ವರುಷದಾಕಿ ತಾಯಿ ತಂದಿ ಮರತಾಳಾಕಿ
ತಾಯಿ ತಂದಿ ಮರತಾಳಾಕಿ ಮಹಾದೇವಿಯಕ್ಕ ಬಾರೆ
ಇಹ ಪರದ ಸುಖವ ತೋರೆ ಮಹಾದೇವಿಯಕ್ಕ ಬಾರೆ ॥ ೨ ॥

ಕಾಡಕಬಲೀಕೆ ಹೋಗಿ ಹುಲಿ ಕರಡಿಗಂಜಲ್ದೇ ಬಂದ
ಹುಲಿ ಕರಡಿಗಂಜಲ್ದೇ ಬಂದ ಮಹಾದೇವಿಯಕ್ಕ ಬಾರೆ
ಈ ಪರಮ ಸುಖವ ತೋರೆ ಮಹಾದೇವಿಯಕ್ಕ ಬಾರೆ ॥ ೩ ॥

ಸಿರಿಶೈಲ ಗಿರಿಗಿ ಹೋಗಿ ಶಿವನಂಥ ಜೀವನ ಪಡೆದು
ಶಿವನಂಥ ಜೀವನ ಪಡೆದು ಮಹಾದೇವಿಯಕ್ಕ ಬಾರೆ
ಈ ಪರಮ ಸುಖವ ತೋರೆ ಮಹಾದೇವಿಯಕ್ಕ ಬಾರೆ ॥ ೪ ॥

ಕೊರಳಲ್ಲಿ ರುದ್ರಾಕ್ಷಿ ಮಾಳ ಕೈಯಲ್ಲಿ ಜೋಳಗಿ ಪಡೆದು
ಕೈಯಲ್ಲಿ ಜೋಳಗಿ ಪಡೆದು ಮಹಾದೇವಿಯಕ್ಕ ಬಾರೆ
ಈ ಪರಮ ಸುಖವ ತೋರೆ ಮಹಾದೇವಿಯಕ್ಕ ಬಾರೆ ॥ ೫ ॥

ಪಾತಾಳ ಗಂಗಿಗೆ ಹೋಗಿ ಪ್ರೀತಿಯಿಂದ ಗಂಗಮ್ಮನ ಕರೆದು
ಪ್ರೀತಿಯಿಂದ ಗಂಗಮ್ಮನ ಕರೆದು ಮಹಾದೇವಿಯಕ್ಕ ಬಾರೆ
ಈ ಪರಮ ಸುಖವ ತೋರೆ ಮಹಾದೇವಿಯಕ್ಕ ಬಾರೆ ॥ ೬ ॥

– ಶ್ರೀಮತಿ ಲಕ್ಷ್ಮೀಬಾಯಿ

***

ಶರಣರಂತರಂಗ ತಿಳಿದು ಮಾಡ್ರಿ ಸಂಗ

ಶರಣರಂತರಂಗ ತಿಳಿದು ಮಾಡ್ರಿ ಸಂಗ
ಮನ ಮಾಡ್ರಿ ಗಂಗ ಅಂತರಂಗ ಮನವು ಮಾಡ್ರಿ ಗಂಗ ॥ ೧ ॥

ಮನಸ್ಸಿಗಿಡಿರಿ ಮೊದಲ ಗುರು ಮಂತ್ರದ ಕೀಲ
ಕೊರಳಲ್ಲಿ ಜಪಮಾಲ ಬೇಕಾಗಿಲ್ಲ ಕೊರಳಲ್ಲಿ ಜಪಮಾಳ ॥ ೨ ॥

ಭವ ಬಂಧನ ಬಿಟ್ಟು ಗುರುಪಾದವ ಮುಟ್ಟು
ಅಂಜಿಕೋಯಿತು ಹೊಂಟು ಭವನದಲ್ಲಿ ಅಂಜಿಕೋಯಿತು ಹೊಂಟು ॥ ೩ ॥

ನೀನು ಮಾಡು ಖ್ಯಾಲ ಮನುಷ್ಯ ಜಲುಮು ಮ್ಯಾಲ
ಆರು ಮಾಡು ಖುಲ್ಲಾ ಮನುಷ್ಯನ ಜಲುಮ ಆರು ಮಾಡೋ ಖುಲ್ಲಾ ॥ ೪ ॥

ಗುರುಮಂತ್ರವ ಮೂಲ ಮುಕ್ತಿಗೆ ಇದು ಮೇಲ
ಅಕ್ಕನ ಬಳಗೆಲ್ಲಾ ಉಚ್ಚರಿಸುವುದು ಅಕ್ಕನ ಬಳಗೆಲ್ಲಾ
ಅಕ್ಕ ಮಹಾದೇವಿ ಮುತ್ತೈದೆ ಶಿವ ಧ್ಯಾನವಿತ್ತು ಭವನಿಗೆ ॥ ೫ ॥

– ಶ್ರೀಮತಿ ಲಕ್ಷ್ಮೀಬಾಯಿ

***

ಆದಿಶಕ್ತಿ ತಾಯೇ ಆದಿಜಗನ್ಮಾಯೇ

ಆದಿಶಕ್ತಿ ತಾಯೇ ಆದಿಜಗನ್ಮಾಯೇ
ಸರ್ವರಿಗೆ ತಾಯೇ ಜಗಕೆ ನೀನು ಸರ್ವರಿಗೆ ತಾಯೇ ॥ ೧ ॥

ಜಗದೋಳು ನಿನ್ನ ನಾಮ ಸರ್ವರಿಗೆ ಪ್ರೇಮ
ಅಖಂಡ ನಿನ್ನ ನಾಮ ಕೂಗುತ್ತಾದ । ಅಖಂಡ ನಿನ್ನ ನಾಮ ॥ ೨ ॥

ಪಾತಾಳ ಗಂಗಿಗೆ ಹೋಗಿ ಪ್ರೀತಿಯಿಂದ ಗಂಗಮ್ಮನ ಕರೆದು
ಪ್ರೀತಿಯಿಂದ ಗಂಗಮ್ಮನ ಕರೆದು ಮಹಾದೇವಿಯಕ್ಕ ಬಾರೆ
ಈ ಪರಮ ಸುಖವ ತೋರೆ ಮಹಾದೇವಿಯಕ್ಕ ಬಾರೆ ॥ ೬ ॥

– ಶ್ರೀಮತಿ ಲಕ್ಷ್ಮೀಬಾಯಿ

***

ಶರಣರಂತರಂಗ ತಿಳಿದು ಮಾಡ್ರಿ ಸಂಗ

ಶರಣರಂತರಂಗ ತಿಳಿದು ಮಾಡ್ರಿ ಸಂಗ
ಮನ ಮಾಡ್ರಿ ಗಂಗ ಅಂತರಂಗ ಮನವು ಮಾಡ್ರಿ ಗಂಗ ॥ ೧ ॥

ಮನಸ್ಸಿಗಿಡಿರಿ ಮೊದಲ ಗುರು ಮಂತ್ರದ ಕೀಲ
ಕೊರಳಲ್ಲಿ ಜಪಮಾಲ ಬೇಕಾಗಿಲ್ಲ ಕೊರಳಲ್ಲಿ ಜಪಮಾಳ ॥ ೨ ॥

ಭವ ಬಂಧನ ಬಿಟ್ಟು ಗುರುಪಾದವ ಮುಟ್ಟು
ಅಂಜಿಕೋಯಿತು ಹೊಂಟು ಭವನದಲ್ಲಿ ಅಂಜಿಕೋಯಿತು ಹೊಂಟು ॥ ೩ ॥

ನೀನು ಮಾಡು ಖ್ಯಾಲ ಮನುಷ್ಯ ಜಲುಮು ಮ್ಯಾಲ
ಆರು ಮಾಡು ಖಿಲ್ಲಾ ಮನುಷ್ಯನ ಜಲುಮ ಆರು ಮಾಡೋ ಖಿಲ್ಲಾ ॥ ೪ ॥

ಗುರುಮಂತ್ರವ ಮೂಲ ಮುಕ್ತಿಗೆ ಇದು ಮೇಲ
ಅಕ್ಕನ ಬಳಗೆಲ್ಲಾ ಉಚ್ಚರಿಸುವುದು ಅಕ್ಕನ ಬಳಗೆಲ್ಲಾ
ಅಕ್ಕ ಮಹಾದೇವಿ ಮುತ್ತೈದೆ ಶಿವ ಧ್ಯಾನವಿತ್ತು ಭವನಿಗೆ ॥ ೫ ॥

– ಶ್ರೀಮತಿ ಲಕ್ಷ್ಮೀಬಾಯಿ

***

ಆದಿಶಕ್ತಿ ತಾಯೇ ಆದಿಜಗನ್ಮಾಯೇ

ಆದಿಶಕ್ತಿ ತಾಯೇ ಆದಿಜಗನ್ಮಾಯೇ
ಸರ್ವರಿಗೆ ತಾಯೇ ಜಗಕೆ ನೀನು ಸರ್ವರಿಗೆ ತಾಯೇ ॥ ೧ ॥

ಜಗದೊಳು ನಿನ್ನ ನಾಮ ಸರ್ವರಿಗೆ ಪ್ರೇಮ
ಅಖಂಡ ನಿನ್ನ ನಾಮ ಕೂಗುತ್ತಾದ । ಅಖಂಡ ನಿನ್ನ ನಾಮ ॥ ೨ ॥

ನೀ ಕಾಯೋ ದೇವ

ನೀ ಕಾಯೋ ದೇವ ಇಂದು ಮಾಯಲಿಂದೆ ಬಂದು
ಧ್ಯಾನದಲ್ಲಿ ನಿಂದು ಸಾಗಿದಾಳೋ ಧ್ಯಾನದಲ್ಲಿ ನಿಂದು ॥ ಪ ॥

ಮಾದೇವಿ ಬಂದಳೆಂದು ಚಿನ್ನದೊಡವೆ ತಂದು
ವಸ್ತ್ರಹಾರ ತಂದು ಸ್ವಾಗತ ಎಂದು ವಸ್ತಹಾರ ತಂದು ॥ ೧ ॥

ಕರೆಸಿದೇನು ಕೆಲಸ ಹೇಳರಿ ಖಿಲ್ಲಾಸ
ಚಿನ್ನ ವಸ್ತ್ರ ಹೊಲಸ ಬೇಕಾಗಿಲ್ಲ ಚಿನ್ನ ವಸ್ತ್ರ ಹೊಲಸ ॥ ೨ ॥

ನೀ ಎನ್ನ ರಾಣಿ ನನ್ನ ರಾಜ ಸರ್ವ ನಿನ್ನ
ವರಿಸಬೇಕೋ ನನ್ನ ಮದುವಿಯಾಗಿ ವರಿಸಬೇಕೋ ನನ್ನ ॥ ೩ ॥

ವಿಭೂತಿ ರುದ್ರಾಕ್ಷಿ ಶಿವನ ಪಾದ ಸಾಕ್ಷಿ
ಧರಿಸಿ ಬಂದು ಮೋಕ್ಷ ಕಾಮ ತೋರ ಧರಿಸಿ ಬಂದು ಮೋಕ್ಷ ॥ ೪ ॥

ಚನ್ನಮಲ್ಲಿಕಾರ್ಜುನ ದೇವ ಅಕ್ಕಮಹಾದೇವಿ ಪತಿದೇವ ॥ ೫ ॥

–ಶ್ರೀಮತಿ ಲಕ್ಷ್ಮೀಬಾಯಿ

***

ಮುತ್ತಿನಂಥ ಹುತ್ತಿನೊಳಗ

ಮುತ್ತಿನಂತ ಹುತ್ತಿನೊಳಗ ಏಳ್ಹೆಡಿ ಶರ್ಪ ಕಂಡೆ
ಹಾಲ್ಹಾಕಿ ಕೈಯ ಮುಗದೇ ಅಕ್ಕ ಮಹಾದೇವಿ ಬಾರೇ ॥ ॥ ಪ ॥

ಹನ್ನೆರಡ ವರುಷದಕಿ ತಾಯಿ–ತಂದಿ ಮಾತ ಮೀರಿ
ದೇಶಾಂತರಾದಳಾಕಿ ಅಕ್ಕ ಮಹಾದೇವಿ ಬಾರೇ ॥ ॥ ೧ ॥

ಹಣಿಮ್ಯಾಲ ವಿಭೂತಿ ಧರಿಸಿ ಕೊರಳಲ್ಲಿ ರುದ್ರಾಕ್ಷಿಮಾಲಿ
ಶಿವಶರಣಿನಾದಳಾಕಿ ಅಕ್ಕ ಮಹಾದೇವಿ ಬಾರೇ ॥ ॥ ೨ ॥

ಹಣಿಮ್ಯಾಲ ಕುಂಕುಮ ಧರಸಿ ಕೈಯಲ್ಲಿ ತ್ರಿಶೂಲ್ಹಿಡಿದು
ಶಿವಶರಣಿನಾದಳಾಕಿ ಅಕ್ಕ ಮಹಾದೇವಿ ಬಾರೇ ॥ ॥ ೩ ॥

ಕಪ್ಪಡ ಗುಡ್ಡಕ ಹೋಗಿ ಕಾಡಾಕಳ ಗವಿಯ ಸೇರಿ
ಹುಲಿಕರಡಿಗಂಜಿ ಬಂದೇ ಅಕ್ಕಮಹಾದೇವಿ ಬಾರೇ ॥ ॥ ೪ ॥

ಪಾತಾಳ ನದಿಗೆ ಹೋಗಿ ಸೀತಾಳ ನೀರ ತಂದು
ಶಿವಪೂಜೆ ಮಾಡ್ಯಾಳಾಕಿ ಅಕ್ಕಮಹಾದೇವಿ ಬಾರೇ ॥ ॥ ೫ ॥

– ಶ್ರೀಮತಿ ಸಿದ್ದಮ್ಮ ಗುಂಡಪ್ಪ

***

ಮಣ್ಣಿನ ದೇಹಕ್ಕೇನ ಅನತಾಳ

ಮಣ್ಣಿನ ದೇಹಕ್ಕೇನ ಅನತಾಳ ಮಾದೇವಿ
ಸಿಂಗಾರ ಯಾತಾಕೇ । ॥ ೧ ॥

ಹತ್ತು ವರುಷದಾಕಿ ಚಿಕ್ಕುಳ್ಳ ಪ್ರಾಯದಾಕಿ
ಮುಂಜಾಳೆದ್ದು ಮಾದೇವಿ ಲಿಂಗ ಪೂಜೆ ಮಾಡತಾಳ ॥ ೨ ॥

ಬಾರನೇ ವರುಷದಾಕಿ ಬಾರುಳ್ಳ ಪ್ರಾಯದಾಕಿ
ನರಲೋಕ ಗಂಡಗೆ ಒಲ್ಲೆನುತಾಳ ಮಾದೇವಿ ॥ ೩ ॥

ಹತ್ತ ವರುಷದಾಕಿ ಚಿಕ್ಕುಳ್ಳ ಪ್ರಾಯದಾಕಿ
ಸಾಕ್ಷಂತ ಮಲ್ಲಯ್ಯಗೆ ಗಂಡನಂತಾಳ ಮಾದೇವಿ ॥ ೪ ॥

– ಶ್ರೀಮತಿ ನೀಲಮ್ಮ ಲಾಧಾ

***

ಒಂದೇ ಮನವ ಮಾಡಿ

ಒಂದೇ ಮನವ ಮಾಡಿ
ಅಕ್ಕ ತಂಗೇರೆಲ್ಲರು ಕೂಡಿ
ಅಕ್ಕನಾಡು ಹಾಡ ಬನ್ನಿ ಬನ್ನಿರೆಲ್ಲರೂ
ಅಕ್ಕನಾಡು ಹಾಡ ಬನ್ನಿ ಬನ್ನಿರೆಲ್ಲರೂ ॥ ೧ ॥

ಭೋಗ ಬಸವಳಿದ ವೈರಾಗ್ಯ ಮೂರ್ತಿಯ
ಹೇಗೆ ಹೋಗಿ ಸಾಗಿ ನಮ್ಮ ಕುಲವ ದಾರಿಯ
ತ್ಯಾಗ ಬುದ್ಧಿ ಬಲವಾಗಿ ಅಕ್ಕಮಹಾದೇವಿ ಒಲಿದ
ವಚನ ಹಾಡ ಬನ್ನಿ ಬನ್ನಿ ಬನ್ನಿ ಬನ್ನಿರೆಲ್ಲರೂ ॥ ೨ ॥

ಉಡತಡಿ ಜಲ್ಮ ತಾಳಿದಳಮ್ಮ
ಮರಡು ಮಲ್ಲಿಗನಾಥನೋಳು ಕೂಡಿದಳಮ್ಮ
ಸಾಯಕೆಡವ ಗಂಡನೋಯಿದು ಕಿಚ್ಚಿನೊಳಗಿಕ್ಕೆಂದು
ಸಾರಿ ಸಾರಿ ಸಾರಿ ಮೆರೆಯುತ್ತೆಲ್ಲರೂ ॥ ೩ ॥

– ಶ್ರೀಮತಿ ಭಾಗಮ್ಮ ರಾಸೂರೆ ಗೋರ್ಟಾ.

***

ಜೈ ಮಹಾದೇವಿ

ಜೈ ಮಹಾದೇವಿ ಜೈಗುರುದೇವಿ ಹೇ ಜಗದಕ್ಕಾ ನಮೋ ನಮೋ
ಶರಣ ಸತಿಯು ಲಿಂಗವೇ ಪತಿಯು ಎಂಬಾ ನುಡಿಯನು ಸಾರಿದೆಯಾ ॥ ಪ ॥

ಉಡುತಡಿ ಗ್ರಾಮದಿ ಜನಸಿದಿ ದೇವನ ಆಶೆಗೆ ಸಿಲುಕಿದಿ
ಗೆಳತಿಯರೊಡನೆ ಆಡುತ ನಲಿಯುತ ಹರುಷದಿ ಬಾಲ್ಯವ ಕಳದಿ
ಯೌವನ ಕಳೆಯುತ ಯೌವ್ವನ ಕಳೆಯುತ
ತುಂಬಿ ತುಳುಕಿದೆ ಜೈ ಮಹಾದೇವಿ ನಮೋನಮೋ ॥ ೧ ॥

ಸಡಗರದಿಂದಲಿ ಮರೆಯುವ ಅರಸ ಅಕ್ಕನ ರೂಪವ ಕಂಡ
ಹರುಷದಿ ತಿರುಗಿದನವ ಅರಮನೆಗೆ ಮೋಹದ ಜಾಲಕೆ ಬಿದ್ದಾ
ಕಳುಹಿದನರಸಾ ಕಳುಹಿದವನರಸಾ ಅಕ್ಕನ ಮನೆಗೆ
ಜೈ ಮಹಾದೇವಿ ನಮೋ ನಮೋ ॥ ೨ ॥

ಅಕ್ಕ ಬಂದಳು ಅರಮನೆಗೆ ಕಳಸಕ ನಿಂತಾ ಕೌತುಕದಿ
ದೇವಿಯ ಕರೆದನು ಕೌಶಿಕ ಬಳಿಗೆ ಅಕ್ಕ ನಿಂತಳು ಮೈದಾಳಿ
ಮಧಾಂದಕಾರಿ ಮಧಾಂದಕಾರಿ ಕೌಶಿಕ ಬೇದರಿವ ನಿರ್ಮಲ ಜ್ಯೋತಿಗೆ
ಜೈ ಮಹಾದೇವಿ ನಮೋ ನಮೋ ॥ ೩ ॥

ನಿರ್ಮಲ ಸುಮತಿಯ ತಾಯ್ತನ ತೊರೆದು
ಎನಗೇಕೆ ಭಯವೆಂದು ಕರಿಣಿಸು ಚನ್ನ
ಕರುಣಿಸು ಚನ್ನ ಚನ್ನಮಲ್ಲಿಕಾರ್ಜುನ ಇವನೆನ್ನಿನಿಯ
ಜೈ ಮಹಾದೇವಿ ನಮೋ ನಮೋ ॥ ೪ ॥

ಶರಣಂಗಳ ಅಲ್ಲಿಯೆ ತೊರೆದು ಶ್ರೀಶೈಲಕ್ಕೆ ಹೋದಿ
ತರುಗಳ ಪಶುಗಳ ಪಕ್ಷಿಗಳೊಡನೆ ಶ್ರೀ ಚನ್ನಯ್ಯನ ನೋಡಿ
ಕದಳಿಯ ಬನದಿ ಕದಳಿಯ ಬನದಿ ಐಕ್ಯಹೊಂದಿ ಮುಕ್ತಿಪಡೆದಾಳ
ಜೈ ಮಹಾದೇವಿ ನಮೋ ನಮೋ ॥ ೫ ॥

ಅಕ್ಕನ ದಿವ್ಯ ಜೀವನವನ್ನು ಮರೆಯುವದು ನಮಗೆ ತರವಲ್ಲ
ಜಗತ್ತನೆಲ್ಲಾ ಜಗತ್ತನೆಲ್ಲಾ ಮೆರೆಯುವ ಜ್ಯೋತಿ
ಜೀವನ ಹೃದಯದ ಹೂನಲು ಅಕ್ಕನ ಬಳಗಾ ಅಕ್ಕನ ಬಳಗಾ
ಎಮಗಿದು ಬೇಳಕಾ ಕಾಂತಿಯೇ ಕಾಂತಿಯೇ ನಮೋ ನಮೋ ॥ ೬ ॥

-ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ
- ಶ್ರೀಮತಿ ಕಲಾವತಿ ಚೆನ್ನಯ್ಯ ವಸ್ತ್ರದ

***

ಎಷ್ಟು ಕರಿಯಲೆ ನಿನಗ

ಎಷ್ಟು ಕರಿಯಲೇ ನಿನಗ । ಎಷ್ಟು ಒದರಲೇ ನಿನಗ ।
ಕರಣುಳ್ಳ ಕಾಶೀ । ಅಕ್ಕ ಮಹಾದೇವಿ ನೀನು ಬಾರೆ ॥
ಎಷ್ಟು ಕರಿಯಲೇ ನಿನಗ । ಎಷ್ಟು ಒದರಲೇ ನಿನಗ ।
ಕರುಣಳ್ಳ ಕಾಶೀ । ಅಕ್ಕ ಮಹಾದೇವಿ ನೀನು ಬಾರೆ ॥ ॥ ೧ ॥

ಅಕ್ಕ ಮಹಾದೇವಿ ಮೊದಲಿನ ಊರು । ಉಡುತಡಿ ಅಂಬ ಸಣ್ಣಳ್ಳೆವರು
ಅಕ್ಕ ಮಹಾದೇವಿ ಮೊದಲಿನ ಊರು / ಉಡುತಡಿ ಅಂಬ ಸಣ್ಣಳ್ಳೆವರು
ಕುಲದಲ್ಲಿ ಜ್ಞಾನ ಭಕ್ತರ । ಕುಲದಲ್ಲಿ ಜ್ಞಾನ ಭಕ್ತರ
ಹುಟ್ಟಿ ಬಂದ ತೊಟ್ಟೇದಿ । ಅವತಾರ ಅಕ್ಕಮಹಾದೇವಿ ನೀನು ಬಾರೈ ॥ ೨ ॥

ನಿನ್ನ ಹುರ್ಪು ಸೂರ್ಯನ ದರ್ಪು । ಎಳೆಯ ನಾಗರ ಹೊಳೆಯುವ ಶರ್ಪು
ನಿನ್ನ ಹುರ್ಪ ಸೂರ್ಯನ ದರ್ಪ । ಎಳೆಯ ನಾಗರ ಹೊಳೆಯುವ ಶರ್ಪ
ಹಣೆಗಣ್ಣ ಗೊಂಚಲ ಕಪ್ಪು । ಹಣೆಗಣ್ಣ ಗೊಂಚಲ ಕಪ್ಪು
ಎಳೆಯ ತುಟಿಯ ಹೊಳೆಯುವ ಶರ್ಪ ಅಕ್ಕಮಹಾದೇವಿ ನೀನು ಬಾರೈ ॥ ೩ ॥

ತಂದೆಯ ಹೆಸರು ನಿರ್ಮಲ ಶಟ್ಟಿ । ತಾಯಿ ಸುಮತಿ ಹೊಟ್ಟೀಲೆ ಹುಟ್ಟಿ
ತಂದೆಯ ಹೆಸರು ನಿರ್ಮಲ ಶೆಟ್ಟಿ । ತಾಯಿ ಸುಮತಿ ಹೊಟ್ಟೀಲೆ ಹುಟ್ಟಿ
ಲಿಂಗವಾಗಿ ನಿಜರೂಪ ತೊಟ್ಟಿ । ಲಿಂಗವಾಗಿ ನಿಜರೂಪ ತೊಟ್ಟಿ
ಮಡಿಯ ಬಿದ್ದು ಜಡಿಯ ನುಟ್ಟಿ । ಅಕ್ಕಮಹಾದೇವಿ ನೀನು ಬಾರೈ ॥ ೪ ॥

ಬಾಳಿಗೇರಿ ಬನ್ನು ಬಾವಿ । ನಂಬಿದವರಿಗಾದೆ ತಾಯಿ
ಬಾಳಿಗೇರಿ ಬನ್ನು ಬಾವಿ । ನಂಬಿದವರಿಗಾದೆ ತಾಯಿ
ನಾನು ಕಂದ ನೀನು ತಾಯಿ । ನಾನು ಕಂದ ನೀನು ತಾಯಿ ।
ಕಂದನೆಂದು ಕರೆಯುವ ತಾಯಿ । ಅಕ್ಕ ಮಹಾದೇವಿ ನೀನು ಬಾರೆ ॥ ೫ ॥

ಶ್ರೀ ಶೈಲ ಶರಣರ ಬೆಟ್ಟ । ಕದಳಿ ಬನಕ ಮಾಡಿದಿ ಮೆಟ್ಟ
ಶ್ರೀ ಶೈಲ ಶರಣರ ಬೆಟ್ಟ । ಕದಳಿ ಬನಕ ಮಾಡಿದಿ ಮೆಟ್ಟ
ನಿತ್ಯ ನೀನು ದಾಸೋಹವ ಇಟ್ಟಿ ನಿತ್ಯ ನೀನು ದಾಸೋಹವ ಇಟ್ಟಿ ।
ಅಕ್ಕ ಮಹಾದೇವಿ ನೀನು ಬಾರೆ । ಅಕ್ಕ ಮಹಾದೇವಿ ನೀನು ಬಾರೆ ॥ ೬ ॥

– ಶ್ರೀಮತಿ ಕಲಾವತಿ ಚನ್ನಯ್ಯ ವಸ್ತ್ರದ

***

ಗುರುವೆ ಹೆತ್ತಪ್ಪನಾದ

ಗುರುವೇ ಹೆತ್ತಪ್ಪನಾದ ಲಿಂಗ ಮದುವಳಿಗನಾದ
ನಾರಿ ಮಹಾದೇವಿ ನಾನೇ ಮದವಿ ಮಗಳಾದೆ ॥ ಪ ॥

ಹರಶರಣ ಶರಣೆಯರು ನಿಬ್ಬಣಿಗರಾಗುತ
ಕರೆತಂದರೆನ್ನ ಪತಿಯ ಮನೆಗೆ ಪ್ರಭುದೇವ ॥ ೧ ॥

ಪಚ್ಚೆಯ ನೆಲಕಟ್ಟು ಕನಕದ ತೋರಣ
ವಜ್ರದ ಕಂಬ ಮುತ್ತಿನ ಸರವು ಕಟ್ಟುತ
ಹವಳ ಹಂದರ ಹಾಕಿ ಮದುವೆ ಮಾಡಿದರೆನ್ನ
ಶ್ರೇಷ್ಟ ಚನ್ನಯ್ಯ ನೆನ್ನ ಪತಿಯು ॥ ೨ ॥

ಸಗ್ಗ ಸೆಕ್ಕುಗಳಲ್ಲಿ ಪತಿಯ ಪಾದಗಳಲ್ಲಿ ಹುಗಿದು
ಮುಕ್ತಿಯ ಪಡೆವ ನೋಡ ಪ್ರಭುದೇವಾ ॥ ೩ ॥

ಮುನ್ನ ಬರುತಿಹರು ಎಳೂ ಜನ್ಮಗಳಲ್ಲಿಯೂ
ಜಗದೊಡೆಯ ಎನ್ನ ಪತಿಯ ಕಳವಳ ಎನ್ನ ಎದೆಯೋಳು ॥ ೪ ॥

ಹಗಲು ಹನ್ನೆರಡು ತಾಸು ರಾತ್ರಿಗಳಲ್ಲಿಯೂ
ಶ್ರೇಷ್ಠ ಚನ್ನಯ್ಯನೆನ್ನ ಪತಿಯು ಪ್ರಭುದೇವಾ ॥ ೫ ॥

ನಿಷ್ಟೆವಂತೆಯು ನಾನು ಭಾಗ್ಯದದೇವತೆಯು
ಇನ್ನು ಕಿನ್ನುರಿದೇವಾ ಬಂಧು ಎನಗಾದೇ ॥ ೬ ॥

ಹುಟ್ಟು ಸಾವುಗಳಿಲ್ಲಾ ಕುಲಗೋತ್ರಗಳಿಲ್ಲಾ
ಕೆಟ್ಟ ಗುಣದವನಲ್ಲ ಎನ್ನ ಪತಿರಾಯ ॥ ೭ ॥

ನಿಷ್ಠವಂತರ ಮನೆಗೆ ಮೆಚ್ಚಿ ಬರುತಿಹರಣ್ಣಾ
ಶ್ರೇಷ್ಠ ಚನ್ನಯ್ಯನೊಲವು ನೋಡು ಪ್ರಭುದೇವಾ ॥ ೮ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ದಿವ್ಯ ರತ್ನ ಅಕ್ಕಮ್ಮ

ವರವೀರಶೈವ ವರವೀರಶೈವ
ಮತಕೆ ದಿವ್ಯ ರತ್ನ ಅಕ್ಕಮ್ಮ
ಕರುನಾಡಿನೊಳು ಹೆಸರು ಪಡೆದ ಮಹಾತಾಯಿ ಅಕ್ಕಮ್ಮಾ ॥ ಪ ॥

ಬಹುವಚನವೆಂಬ ಜ್ಞಾನ ನಮಗೆ ಬೀರಿದಕಮ್ಮ
ಜೀವನವ ಸುಖವನಳಿದು ಜಗಕ್ಕೆ ಬಂದಲಾದ ಅಕ್ಕಮ್ಮ ॥ ೧ ॥

ಶ್ರೀಶೈಲ ಗಿರಿಯ ಮಲ್ಲಿಕಾರ್ಜುನನ ಮನ ಒಲಿಸಿದಕ್ಕಮ್ಮ
ವೈರಾಗ್ಯ ಭಕ್ತಿ ಮೆಚ್ಚಿದಂಥ ಮಹಾವೀರ ಅಕ್ಕಮ್ಮ ॥ ೨ ॥

ಪಾರ್ಥಿಸುವೆನು ದೇವಿ ಜಗದೊಳು ನಮ್ಮನುಧರಿಸಕ್ಕಮ್ಮ
ಮತ್ತೊಮ್ಮೆ ಬೇಗ ಜನಿಸು ದಾರಿಕಾಯ್ವೇ ಅಕ್ಕಮ್ಮ ॥ ೩ ॥

ಇಂಪಾದ ಕದಳಿಯ ಪುಣ್ಯ ಸ್ಥಾನಮಾಡಿದಕ್ಕಮ್ಮ
ಪರಶಿವನ ಸೇವೆ ಮಾಡಿ ಮುಕ್ತಿ ಪಡೆದ ಅಕ್ಕಮ್ಮ ॥ ೪ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಕೌಶಿಕ ಕರೆಸಿಕೊಂಡ

ಕೌಶಿಕ ಕರೆಸಿಕೊಂಡ ಇವಳ ರೂಪ ಪಿಂಡ
ನಾನವಳ ಗಂಡ ಆಗಬೇಕೋ ನಾನವಳ ಗಂಡ ॥ ೧ ॥

ಬ್ಯಾರೆರಿಗೆ ಕರೆಸಿ ಹೇಳಿದ ಖಿಲ್ಲಾಸಿ
ಮಹಾದೇವಿಯಕ್ಕ ನನಗೆ ಸಿಗಬೇಕೋ ದೇವಿಯ ಅಕ್ಕ ನನಗೆ ॥ ೨ ॥

ಸಾರಿದಾರ ಸಕಲ ತಾಯಿ ತಂದಿಗೆಲ್ಲ
ಆಗಬೇಕೋ ಮೊದಲ ಅರಸರ ಮದುವೆ ಆಗಬೇಕೋ ಮೊದಲ ॥ ೩ ॥

ತಾಯಿ ತಂದಿಗೆ ದುಖ ಹಾಕ್ಯಾರ ಭವ ಲೆಕ್ಕ
ಕುಲಕೆ ಬಂತೇ ಧಕ್ಕಿ ಮಗಳೇ ನಮಗೆ ಕುಲಕೆ ಬಂತೇ ಧಕ್ಕಿ ॥ ೪ ॥

ಹರಕಿ ಕುಡರಿ ನನಗ ಹೋಗುವನಲ್ಲಿಗ
ದುಃಖ ಬ್ಯಾಡ್ರಿವೀಗ ಶಾಂತವಾಗಿ ಮನವು ಮಾಡ್ರಿ ನಂಗ
ಅಕ್ಕ ಮಹಾದೇವಿ ಪುರಾಣ ಶರಣರ ಬೀಡು ಕಲ್ಯಾಣ ॥ ೫ ॥

– ಶ್ರೀಮತಿ ಲಕ್ಷ್ಮೀಬಾಯಿ

***

ಸತ್ಯ ಶರಣೆ ಮಹಾದೇವಿಯಕ್ಕ

ಸತ್ಯ ಶರಣೆ ಮಹಾದೇವಿಯಕ್ಕ
ದೇಹ ಪವಿತ್ರ ಮಾಡ್ಯಾಳೋ ನಿಕ್ಕ
ಕೌಶಿಕನ ಮುರುದೀದಿ ಸೊಕ್ಕ ಶರಣರ ಪಾದಕ ॥ ೧ ॥

ಉಡತಡಿ ಗ್ರಾಮದಲ್ಲಿ ಉದ್ಧರಿಸಿ ಬಂದಾಳಲ್ಲಿ
ಭಕ್ತಿ ಭಾವ ಲೀಲೆಯಲ್ಲಿ ಬೆಳೆಗಿ ಬಾಳಿದಾಳಲ್ಲಿ ॥ ೨ ॥

ಭವದೊಳು ಹೆಣ್ಣಾಗಿ ಹುಟ್ಟಿ ವೈರಾಗ್ಯ ಮಂತರ ತೊಟ್ಟಿ
ಮಾಯ ಮೋಹ ಮೊದಲೇ ಸುಟ್ಟಿ ಕೈಯಲ್ಲಿರೋ
ರುದ್ರಾಕ್ಷಿಯ ತೊಟ್ಟಿ ॥ ೩ ॥

ಅನುಭಾವ ತತ್ವವ ತಿಳಿದು ಸೀರಿ ಕುಬುಸ ಎಲ್ಲಾ ಕಳೆದು
ಕಲ್ಲು ಮುಳ್ಳುಗಳು ತುಳಿದು ಕಲ್ಯಾಣಕ್ಕೆ ಬಂದಳು ಸುಳಿದು ॥ ೪ ॥

ಶರಣರ ಸಂಗವ ನೋಡಿ ಪ್ರಭುದೇವರ ದರುಶನ ಮಾಡಿ
ಮುಕ್ತಿ ಮಾರ್ಗದೊರವು ಬೇಡಿ ಕೇಶರಾಶಿ ಬಿಟ್ಟಳ ಜೋಡಿ ॥ ೫ ॥

ಏ ಅಕ್ಕ ತಂಗಿ ನಡಿರವ್ವ ನೀತಿ ಪ್ರಾಯ ಬಲು ಪಾಮರ ಜತಿ
ತವರ ಮನೀಗ ಅಪಕೀರ್ತಿ ತರುಬ್ಯಾಡ್ರಿ ಪತಿವ್ರತಿ ॥ ೬ ॥

ಮಹಾದೇವಿ ಅಕ್ಕನ ಮಹಿಮ ಕೇಳ್ರಿ ನೀವು ತಾಯಮ್ಮ
ಏ ಕದಳಿ ಬನವು ಸೇರ್ಯಾಳಮ್ಮ ಅಮರ ಕೀರ್ತಿ ಪಡದಾಳ ನಾಮ ॥ ೭ ॥

ಏ ಶ್ರೀಶೈಲಕ ಆಗಿದಿ ಐಕ ಹೊಂದಿ ಮಲ್ಲನ ಪಾದಕ
ದೇಶದೋಳು ನಿನ್ನ ಬೆಳಕ ಅಂದಿನಿಡಿದು ಇಂದಿನ ತನಕ ॥ ೮ ॥

ದೇಶದೋಳು ಗೌಡಗಾಯ ಊರ ಈಶ್ವರನ ದಯಾಪೂರ
ಪಾಂಚಾಕ್ಷರಿ ಕವಿ ತೈಯಾರ ದೈವಕಾರಿ ಅಮೃತಸಾರ ॥ ೯ ॥

– ಶ್ರೀ ಭೀಮಶಾ ದೇಶೆಟ್ಟಿ.

***

ಅಕ್ಕ ಬಾರೆ ಮಹಾದೇವಿಯಕ್ಕ

ಅಕ್ಕ ಬಾರೆ ಮಹಾದೇವಿಯಕ್ಕ
ಅಕ್ಕ ಬಾರೆ ಮಹಾದೇವಿಯಕ್ಕ
ಕಲ್ಯಾಣ ನಾಡಿನ ಹಿರಿಯಕ್ಕ ॥ ೧ ॥

ವೀರಶೈವದಲ್ಲಿ ಹುಟ್ಟಿದೆಕ್ಕ
ದುಷ್ಟ ಕೌಶಿಕನ ಸುಟ್ಟಿದೆಕ್ಕ ॥ ೨ ॥

ಉಡತಡಿಯಲ್ಲಿ ಹುಟ್ಟಿದೆಕ್ಕ
ಮಲ್ಲಿಕಾರ್ಜುನ ನೆನದೀದೆಕ್ಕ ॥ ೩ ॥

ಅನುಭವ ಮಂಟಪ ಹೆಸರಾದಕ್ಕ
ಶ್ರೀಶೈಲ ಯಾತ್ರೆ ಮಾಡಿದಕ್ಕ ॥ ೪ ॥

– ಶ್ರೀಮತಿ ಶಕುಂತಲಾ ಕಂಟೆಪ್ಪಾ ಗೋರ್ಟಾ

***

ದಿಗಂಬರಳಾಗಿ ಹೊಂಟಾಳ

ದಿಗಂಬರಾಗಿ ಹೊಂಟಾಳ ಮಾದೇವಿ ಕಲ್ಯಾಣೂರಿಗ
ಶಿವಶರಣಾರ ಭೇಟಿಗ ಸುದ್ದಿ ಹೊಯ್ತಿ ತಾಯಿ ತಂದೀಗ ॥ ಪ ॥

ಐದು ಮಂದಿ ಮುತ್ತೈದೇರು ಕೂಡಿ
ಮಾದೇವಿ ಪೂಜೆ ಮಾಡಣ ಬರ್ರಿ
ಮಾದೇವಿ ಪೂಜೆ ಮಾಡಣ ಬರ್ರಿ । ಕಲ್ಯಾಣೂರಿಗ
ಶಿವಶರಣರ ಭೇಟಿಗ ಸುದ್ದಿಹೊಯ್ತಿ ತಾಯಿ ತಂದೀಗ ॥ ೧ ॥

ಸೀರಿ ಬಂದವ ಮಗಳಿಗ
ಉಡಿಸಿ ನೋಡರಿ ಮಾದೇವಿಗ
ಉಡಸಿ ನೋಡಿರಿ ಮಾದೇವಿಗ । ಕಲ್ಯಾಣೂರಿಗ
ಶಿವಶರಣರ ಭೇಟಿಗ ಸುದ್ದಿಹೊಯ್ತ್ರಿ ತಾಯಿತಂದೀಗ ॥ ೨ ॥

ಕೂಕಮ್ಣುಚ್ಚರಿ ಮಗಳಿಗ
ಹಚ್ಚಿ ನೋಡರಿ ಮಾದೇವೀಗ । ಕಲ್ಯಾಣೂರಿಗ
ಶಿವಶರಣರ ಭೇಟಿಗ ಸುದ್ದಿ ಹೊಯ್ತ್ರಿ ತಾಯಿ ತಂದೀಗ ॥ ೩ ॥

ದಂಡಿ ಬಂದವ ಮಗಳಿಗ
ಹಚ್ಚಿ ನೋಡರಿ ಮಾದೇವಿಗ
ಕಟ್ಟಿ ನೋಡಿರಿ ಮಾದೇವಿಗ । ಕಲ್ಯಾಣೂರಿಗ
ಶಿವಶರಣರ ಭೇಟಿಗ ಸುದ್ದಿಹೊಯ್ತ್ರಿ ತಾಯಿ ತಂದೀಗ ॥ ೪ ॥

ಮಡಿಗೊಳ ಉಟ್ಟು ಜಡಿಗೊಳ ಬಿಟ್ಟು
ಮಡಿಗೊಳ ಉಟ್ಟು ಜಡಿಗೊಳ ಬಿಟ್ಟು । ಕಲ್ಯಾಣೂರಿಗ
ಶಿವಶರಣರ ಭೇಟಿಗ ಸುದ್ದಿಹೊಯ್ತ್ರಿ ತಾಯಿ ತಂದೀಗ ॥ ೫ ॥

– ಶ್ರೀಮತಿ ಶಾಂತಾಬಾಯಿ ಹೊಳಕುಂದಿ

***

ದಿಗಂಬರಾಗಿ ಹೊಂಟಳ ಮಹಾದೇವಿ

ದಿಗಂಬರಾಗಿ ಹೊಂಟಳ ಮಹಾದೇವಿ ಕಲ್ಯಾಣೂರಿಗ
ಸತ್ಯ ಶರಣರ ಭೇಟಿಗ । ಸುದ್ದಿ ಹೋಯಿತ್ರಿ ತಾಯಿ ತಂದಿಗ ॥ ಪ ॥

ಸೀರಿ ತಂದಾರೋ ಮಹಾದೇವಿಗ
ಉಟಕೋರಂತಾರೊ ಮಗಳಿಗ
ಇದ್ದ ಸೀರಿ ಖಾಯಂ ಇರಲಿ ಕಲ್ಯಾಣ ಊರಿಗ
ಸತ್ಯ ಶರಣರ ಭೇಟಿಗ ಸುದ್ದಿ ಹೋಯಿತ್ರಿ ತಾಯಿ ತಂದಿಗ ॥ ೧ ॥

ಮಹಾದೇವಿ ಬಂದಾಳೋ ಕಲ್ಯಾಣಕ
ಬಂದ ನಿಂತಳೋ ಮಂಟಪದೊಳಗ
ಸಾಷ್ಟಾಂಗ ಹಾಕುತಾಳೋ ಸರ್ವ ದೇವರಿಗ
ಸಾಷ್ಟಾಂಗ ಹಾಕುತಾಳೋ ಪ್ರಭು ದೇವರಿಗ

ಕಲ್ಯಾಣ ಊರಿಗ ಶಿವ ಶರಣರ ಭೇಟಿಗ
ಸುದ್ದಿ ಹೋಯಿತ್ರಿ ತಾಯಿ ತಂದಿಗ ॥ ೨ ॥

ಐದು ಮಂದಿ ಮುತ್ತೈದೇರಿದ್ದಾರಲ್ಲ
ಮಹಾದೇವಿ ಪೂಜ ಮಾಡ್ತಾರಲ್ಲ
ಮಹಾದೇವಿಗಾರುತಿ ಬೆಳಗ್ಯಾರಲ್ಲ
ಮಹಾದೇವಿಗೊರವ ಬೇಡ್ಯಾರಲ್ಲ
ಕಲ್ಯಾಣ ಊರಿಗ ಶಿವ ಶರಣರ ಭೇಟಿಗ
ಸುದ್ದಿ ಹೋಯಿತ್ರಿ ತಾಯಿ ತಂದಿಗ ॥ ೩ ॥

ಶ್ರೀಶೈಲ ಗುಡ್ಡಕ ಹೋಗ್ಯಾಳ ಮಾಹಾದೇವಿ
ತನ್ನ ದರುಶನ ಸಲುವಾಗಿ ತನ್ನ ದರುಶನ ಸಲುವಾಗಿ
ಪಾತಾಳ ಗಂಗ್ಯಾಗ ಐಕಾಗಿ ಮಹಾದೇವಿ
ಕಲ್ಯಾಣ ಊರಿಗ ಶಿವ ಶರಣರ ಭೇಟಿಗ
ಸುದ್ದಿ ಹೋಯಿತ್ರಿ ತಾಯಿ ತಂದಿಗ ॥ ೪ ॥

– ಶ್ರೀಮತ ನೀಲಮ್ಮ ಲಾಧಾ
– ಶ್ರೀಮತಿ ಮಹಾನಂದಿ ಪೂಜಾರಿ

***

ಅಕ್ಕಮಹಾದೇವಿ

ದಿಗಂಬರವಾಗಿದಿ ದೇವಿ ಸಮಿತ ಭಮಿತಾನಂದಾ
ಅಂಗಲಿಂಗ ಅನುಭವ ಕಂಡು ಗುಪ್ಪಪ್ರಭು ದುಂದ ॥ ೧ ॥

ತಾಯಿ ತಂದಿ ಕೇಳುವೆ ಮಗುವೆ ನಡದಿ ಎಲ್ಲಿ ತನಕ
ಕೈಯ ಇಸರಾತಿ ಮಾಡಿ ಬಸವಕಲ್ಯಾಣಕ ॥ ೨ ॥

ಹಿಡಿಲಾಕ ಸ್ವಾಯಿನಿಲ್ಲ ಭಕ್ತಿ ಮಾರ್ಗಕ
ಬಾಯಿಲಿ ನುಡಿದ್ಹಂಗ ನಡೀರಿ ಸುದ್ದಿ ಸಾಗಕ ॥ ೩ ॥

ಅಕ್ಕ ಮಹಾದೇವಿ ಬಂಧು ನಿಂತ್ರು ಪರಸಕಟ್ಟಿತನಕ
ಲೋಕ ಪಾವನ ತಾಯಿನ ತಿಳಿದು ಬಸವ ಹಿಗ್ಗಿ ಮನಕ ॥ ೪ ॥

ತೀರ್ಥವನ ತೋಂಡು ಹೋಗೋ ಶ್ರೀಶೈಲ್ಯ ಘಟ್ಟಕಾ
ಮುಟ್ಟಣ ಮಲ್ಲಯ್ಯಸ್ವಾಮಿ ಭೇಟಿ ಕೊಟ್ರೋ ಕ್ಷಣಕ ॥ ೫ ॥

ಸ್ವರ್ಗಲಿಂದೆ ಆಕಳ ಬರುವಾ ಹಾಲು ಕುಡಿಸಲುಕ
ದೇವದಂಡತಿ ಹುಲಿ ಕರಡಿ ಶರಪು ದರುಸಣಾಕ
ಒಳ ಹೊರಗ ಬಂದಾನೋ ಸಿದ್ಧ ಅಕ್ಕನ ಬಳಗಕ್ಕ ॥ ೬ ॥

– ಶ್ರೀಮತಿ ರುಕ್ಮೀಣಿಬಾಯಿ ಘೋಡವಾಡಿ ಚಿನಕೇರಾ
– ಶ್ರೀಮತಿ ಮಹಾನಂದ ಸಂಬಾಜಿ, ಚಿನಕೇರಾ

***

ಅಕ್ಕ ಮಹಾದೇವಿಯವರ ಹಾಡು

ಅಕ್ಕ ಮಹಾದೇವಿ ಆಕೃತಿದಿಂದಲಿ ಬಂದ ನಿಂತಿಹಳು
ಅಕ್ಕ ಮಹಾದೇವಿ ಆಕೃತಿದಿಂದಲಿ ಬಂದ ನಿಂತಿಹಳು
ಮೂಕನನರಸಿ ಪಾರ್ವತಿಯಂತೆ ಸಭೆಯಲಿ ಶೋಭಿಪಳು
ಮೂಕನನರಸಿ ಪಾರ್ವತಿಯಂತೆ ಸಭೆಯಲಿ ಶೋಭಿಪಳು ॥ ಪ ॥

ಅಲ್ಲಮನ ಎದುರಿಗೆ ಬಲವಾದ ವೈರಾಗ್ಯ ರೂಪಗೆ ತೋರಿದಳು
ಅಲ್ಲಮನಿದುರಿಗೆ ಬಲವಾದ ವೈರಾಗ್ಯ ರೂಪಗೆ ತೋರಿದಳು
ಬಲ್ಲಿದ ಬಸವಗೆ ಅರಳಿದ ಮಲ್ಲಿಗೆ ಹೂವಾಗಿ ಕಾಣುವಳು
ಬಲ್ಲಿದ ಬಸವಗೆ ಅರಳಿದ ಮಲ್ಲಿಗೆ ಹೂವಾಗಿ ಕಾಣುವಳು ॥ ೧ ॥

ಚನ್ನಬಸವಗ ಜ್ಞಾನನಿಧಿಯಾಗಿ ಝುಗಝುಗ ಹೊಳೆಯುವುಳು
ಚನ್ನಬಸವಗ ಜ್ಞಾನ ನಿಧಿಯಾಗಿ ಝುಗಝುಗ ಹೊಳೆಯುವಳು
ಕಿನ್ನುರಿ ಬ್ರಹ್ಮನ ರನ್ನದ ಮಣಿಯಂತೆ ಸದ್ಗುಣ ನೀಡುವಳು
ಕಿನ್ನುರಿ ಬ್ರಹ್ಮನ ರನ್ನದ ಮಣಿಯಂತೆ ಸದ್ಗುಣ ನೀಡುವಳು ॥ ೨ ॥

ಮಧುವರಸ ಮೊದಲಾದ ಕಕ್ಕಯ್ಯ ಶರಣರಿಗೆ ಸಂತಸ ಬೀರಿದಳು
ಮಧುವರಸ ಮೊದಲಾದ ಕಕ್ಕಯ್ಯ ಶರಣರಿಗೆ ಸಂತಸ ಬೀರಿದಳು
ಮದಿಮಗಳು ಬಂದು ಮಲ್ಲಿಕಾರ್ಜುನಗ ಲಗ್ನವಾಗಿ ತೋರಿದಳು
ಮದಿಮಗಳು ಬಂದು ಮಲ್ಲಿಕಾರ್ಜುನಗ ಲಗ್ನವಾಗಿ ತೋರಿದಳು ॥ ೩ ॥

ನೀಲಮ್ಮ ಗಂಗಮ್ಮ ಶರಣರ ಸತಿಯರಿಗೆ ಕರಮುಗಿದ್ಧೇಳುವಳು
ನೀಲಮ್ಮ ಗಂಗಮ್ಮ ಶರಣರ ಸತಿಯರಿಗೆ ಕರಮುಗಿದ್ಧೇಳುವಳು

ಎಲ್ಲ ಮೈಲರಿಗೆ ಮಲ್ಲಿಕಾರ್ಜುನ ತೋರಿಸಿಕೊಡು ಅಂದಳು
ಎಲ್ಲ ಮೈಲರಿಗೆ ಮಲ್ಲಿಕಾರ್ಜುನ ತೋರಿಸಿಕೊಡು ಅಂದಳು ॥ ೪ ॥

ಅಕ್ಕಮಹಾದೇವಿ ಆಕೃತಿದಿಂದಲಿ ಬಂದ ನಿಂತಹಳು
ಅಕ್ಕ ಮಹಾದೇವಿ ಆಕೃತಿದಿಂದಲಿ ಬಂದ ನಿಂತಿಹಳು
ಮೂಕನನರಸಿ ಪಾರ್ವತಿಯಂತೆ ಸಭೆಯಲಿ ಶೋಭಿಪಳು
ಮೂಕನನರಸಿ ಪಾರ್ವತಿಯಂತೆ ಸಭೆಯಲಿ ಶೋಭಿಪಳು ॥ ೫ ॥

– ಶ್ರೀಮತಿ ಕಲಾವತಿ ಚನ್ನಯ್ಯ ವಸ್ತ್ರದ

***

ಅಕ್ಕಮಹಾದೇವಿ ಹಾಡು

ನೋಡಿರೇನೋ ನಮ್ಮ ತಾಯಿಗೆ
ನಿಜಗುಣ ಯೋಗಿಗೆ ಕಂಡಿರೇನು ನಮ್ಮ ದೇವಿಗ ॥ ಪ ॥

ಉಡುತಡಿ ಎಂಬ ಊರಲ್ಲಿ ಹುಟ್ಯಾಳ
ಮಹಾದೇವಿ ಎಂಬ ನಾಮ ಧರಿಸಿದಳು
ಕಾಮುಕ ಕೌಶಿಕನ ಕಣ್ಣು ತೆರಸಿದಳು
ದಿಗಂಬರಾಗಿ ಕಲ್ಯಾಣಕ ಹೊಂಟಾಳ ॥ ೧ ॥

ಮಲ್ಲಿಕಾರ್ಜುನ ನನ್ನ ಗಂಡನೆಂದಾಳ
ಸಾಯುವ ಗಂಡನ ಒಲೆಗೆ ಹಾಕಂದಾಳ
ಅಣ್ಣ ಬಸವಣ್ಣಗ ಅಕ್ಕನಾಗ್ಯಾಳ
ಪ್ರಭುದೇವರಿಗೆ ತಾಯಿ ಆಗ್ಯಾಳ ॥ ೨ ॥

ಅಲ್ಲಮನಿಂದ ಅಪ್ಪಣೆ ಪಡೆದಾಳ
ಕಲ್ಯಾಣ ಬಿಟ್ಟು ಶ್ರೀಶೈಲಕ ಹೊಂಟಾಳ
ಕದಳಿಯ ಬನದ ಒಳಗ ನಡೆದಾಳ
ಮುಕ್ಕಣ್ಣ ಶಿವನ ಕರೆದು ಮುಕ್ತಿಪಡೆದಾಳ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ನಾಡಿನಲ್ಲಿ ಜನಿಸಿ

ನಾಡಿನಲ್ಲಿ ಜನಿಸಿ ಬಂದಾಳ ಅಕ್ಕಮಹಾದೇವಿ
ನಮ್ಮ ನಾಡಿನಲ್ಲಿ ॥ ಪ ॥

ತಾಯಿ ಸುಮಿತ್ರ ತಂದಿ ನಿರ್ಮಲ ಶೆಟ್ಟಿ
ಉಡುತಡಿ ಗ್ರಾಮದಲಿ ಜನಿಸಿದಳು
ಉಡುತಡಿ ಗ್ರಾಮದಲಿ ಜನಿಸಿದಳು ಮಹಾದೇವಿ
ಜಗದೊಳು ಮುಕ್ತಿ ಪಡೆದಿದಳು ॥ ೧ ॥

ಕೊರಳಲ್ಲಿ ಮೆರೆಯುವ ರುದ್ರಾಕ್ಷಿ ಪದರ
ಹಣೆಮ್ಯಾಲ ದರಿಸ್ಯಾಳ ವಿಭೂತಿ ಭಸ್ಮ
ಗಂಗಾನಳ್ಳಿನ ತುಂಗಾ ಪಾನ
ಪಾದಕರ ಪೂಜೆಯ ಮಾಡಿದಳು ॥ ೨ ॥

ನಮ್ಮ ನಾಡಿನಲ್ಲಿ ಅಕ್ಕರದಿಂದ ಜನಿಸಿ
ಬಂದಳು ಮಹಾದೇವಿ
ಅನುಭವ ಎಂಬ ಅಡುಗೆ ಮಾಡಿ
ಅಕ್ಕನ ಬಳಗಕ್ಕೆ ನೀಡಿದಳು ॥ ೩ ॥

ತನುಮನ ಅರ್ಪಣೆಗೆಯೆಂದು
ಗುರುವಿನ ಪಾದಕ್ಕೆರಗಿದಳು
ಮಲ್ಲಿನಾಥನ ಸ್ಮರಣೆ ಮಾಡಿ
ಆತನೊಳು ಬಂದು ಆದಳು ಮಹಾದೇವಿ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಧನ್ಯಕಲ್ಯಾಣದ ಶಿವಶರಣ ಸುತೆ

ಧನ್ಯ ಕಲ್ಯಾಣದ ಶಿವಶರಣ ಸುತೆ
ಚನ್ನಮಲ್ಲಯ್ಯನ ನಂಬಿಗೆಯ ಸತೆ ॥ ಪ ॥

ಶತಕೋಟಿ ವರುಷದ ಹಿರಿಯರೆ
ಹುತ್ತೇರಿ ಬೆಳೆದಿಹ ಋಷಿಗಳೆ
ಮತಿಗೆಟ್ಟು ಮಾತನಾಡುತಲಿಹರು
ನಡುಮುರಿದು ನರಕಳಿದ ಪಶುಗಳೇ
ಸರಿಯೇ ವೈರಾಗ್ಯದ ರುದ್ರಕನ್ನಿಕೆಗೆ । ಧನ್ಯಕಲ್ಯಾಣದ ॥ ೧ ॥

ಇಂದ್ರನೀಲದ ಗಿರಿಯನೇರುತ
ಶಿವನ ಸನ್ನಿಧಿ ಪಡೆದೆಯಾ
ಚಂದ್ರಕಾಂತನ ಶಿಲೆಯನಟ್ಟಿ
ಮಹಾಬೆಳಗಿನ ಸುಳಿದೆಯಾ
ಕೊಂಬು ಬಾರಿಸುತ ಸಗ್ಗವೇರಿದೆಯಾ । ಧನ್ಯಕಲ್ಯಾಣದ ॥ ೨ ॥

ಕದಳಿ ಎಂಬುದು ತನುವು
ತಾಯಿಗೆ ಕದಳಿ ಘೋರಾರಣ್ಯವು
ಕದಳಿ ಎಂಬುದು ಗೆದ್ದು ಭವಹರ
ನೆರಸಿ ಪಡೆದಳು ಮೋಕ್ಷವು
ಕದಳಿ ಎಂಬುದು ತಿಳಿದು ನೋಡಿದಳು । ಧನ್ಯಕಲ್ಯಾಣದ ॥ ೩ ॥

ಹುಟ್ಟು ಕೊಟ್ಟ ಮನೆಗೆ ಹುಲ್ಲನ್ನು ತರದೆ
ಹೂವನು ತಂದೆಯಾ ಮೆಟ್ಟಿದ ಧರೆಯು ಪಾವನ ಗೈಯುತ
ಕದಳಿಯನು ಪೊಕ್ಕೆಯಾ
ಮುಟ್ಟಿ ಶಿವಲಿಂಗವಾ ಭವಗೆಟ್ಟಿದೆಯಾ । ಧನ್ಯಕಲ್ಯಾಣದ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಶರಣೆ ದಿಗಂಬರೆ ಕಲ್ಯಾಣ ನಗರೆ

ಶರಣೆ ದಿಗಂಬರೆ ಕಲ್ಯಾಣ ನಗರೆ
ಮುಟ್ಟಿದಾಳು ಪೂರ ಕಲ್ಯಾಣ ನಗರ
ಮುಟ್ಟಿದಾಳು ಪೂರ ॥ ೧ ॥

ಅನುಭವ ಮಂಟಪ ಶಿವನ ಮಂತ್ರ ಜಪ
ಸಾಗುತ್ತಿತ್ತಲ್ಲಪ ಮಂತ್ರ ಜಪ ಸಾಗುತಿತ್ತಪ ॥ ೨ ॥

ಅಕ್ಕ ಪೋದಗಳಲ್ಲಿಗೆ ಮಂಟಪಗಳಾಗೆ
ತುಂಬಿ ಸಭೆದೊಳಗೆ ಅಕ್ಕ ಹೋಗಿ ತುಂಬಿ ಸಭೆಯೊಳಗೆ ॥ ೩ ॥

ಬಸವ ಚನ್ನಬಸವ ನೀಲಮ್ಮ ಸತ್ಯಮ್ಮ
ಮಾಚಯ್ಯ ಹರಳಯ್ಯ ಕೂಡಿದರಲ್ಲಿ
ಮಾಚಯ್ಯ ಹರಳಯ್ಯ ॥ ೪ ॥

ಅಕ್ಕನ ಭರ ನೋಡೆ ಶರಣರೆಲ್ಲರೂ ಕೂಡೇ
ಎದ್ದು ನಮನ ಮಾಡೇ ಪ್ರಭುದೇವರು ಎದ್ದು ನಮನ ಮಾಡೇ ॥ ೫ ॥

ಶರಣರ ಬೀಡು ಕಲ್ಯಾಣ ಅಕ್ಕಮಹಾದೇವಿ ಉದ್ಧರಣ ॥ ೬ ॥

– ಶ್ರೀಮತಿ ಲಕ್ಷ್ಮೀಬಾಯಿ

***

ಜೋಗುಳ

ಜೋ ಜೋ ಎನ್ನ ಜ್ಯೋತಿಯು ಕಂದಾ
ಜೋ ಜೋ ಎನ್ನ ಪ್ರೀತಿಯ ಕಂದಾ ॥ ಪ ॥

ತೇತ್ರಾಯುಗದಲ್ಲಿ ಜಾನಕಿಯಾದಿ
ದ್ವಾಪರ ಯುಗದಲ್ಲಿ ದ್ರೌಪದಿಯಾಗಿ
ಕಲಿಯುಗದಲ್ಲಿ ರೇಣುಕಿಯಾದಿ
ಅಕ್ಕಮಹಾದೇವಿಯಾಗಿ ಜನಿಸಿದಿ ಜೋ ಜೋ ॥ ೧ ॥

ಆದಿ ಶಕ್ತಿಯು ನೀನು ಪಾರ್ವತಿಯಾದಿ
ಕೈಲಾಸ ಶಂಕರನ ಮಡದಿ ನೀ ಆದಿ
ಚಾಮುಂಡಿ ರೂಪತಾಳಿ ಮಹಿಷನಕೊಂದಿ
ಈಗ ಅಕ್ಕಮಹಾದೇವಿ ರೂಪ ಹೊಂದಿದಿ ಜೋ ಜೋ ॥ ೨ ॥

ನಿರ್ಮಲನು ತಂದೆ ಸುಮತಿಯು ತಾಯಿ
ಅವರ ಗುಣಗಳಿಗೆ ಒಲಿದು ಉದರದೋಳು ಪುಟ್ಟಿ
ಅಕ್ಕಮಹಾದೇವಿಯೆಂಬ ಹೆಸರನು ಕೊಟ್ಟಿ
ಈ ಕೂಡಿರುವ ಜಗಕೆಲ್ಲಾ ಆನಂದ ಕೊಟ್ಟೇ ಜೋ ಜೋ ॥ ೩ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಕನ್ನಡ ನಾಡು ನಿನ್ನಯ ಬೀಡು

ಕನ್ನಡ ನಾಡು ನಿನ್ನಯ ಬೀಡು
ಕಾಮನ ಕಳಿದು ಕಟ್ಟಿದೆ ಸೂಡು
ಕಾಯದ ಸಂಗವಳಿದು ನಿನ್ನಯ ಪಾಡು
ಶರಣೆ ಶರಣಿ ಶರಣೆ ಶರಣಿ ॥ ೧ ॥

ಕೌಶಿಕನ ಕಂಗಳಿಗೆ ಜ್ಞಾನ ಜ್ಯೋತಿಯ ನೀಡಿ
ಕೇಶರಾಶಿಯ ಅಂಗಕ್ಕೆ ಮರೆ ಮಾಡಿ
ತನುಮನದಿಂದ ಮಲ್ಲಯ್ಯನ ನೋಡಿ
ಅನುದಿನ ಮಲ್ಲಯ್ಯನ ನಾಮಪಾಡಿ
ಶರಣೆ ಶರಣಿ ಶರಣೆ ಶರಣಿ ॥ ೨ ॥

ಅಲ್ಲಮ ಪ್ರಭುವಿನ ಅನುಭವ ಮಂಟಪ
ಅನುಭವಿಗಳಿಗದು ಜ್ಞಾನದ ದೀಪ
ನಿನ್ನಯ ನೋಡಿ ಶರಣಿಯರಿಗನುಕಂಪ
ಹಾಡಿ ಹರಿಸಿತು ಶರಣಿಯರ ಗುಂಪ
ಶರಣೆ ಶರಣಿ ಶರಣೆ ಶರಣಿ ॥ ೩ ॥

ಚಿಕ್ಕ ಜೀವ ನದಿ ಅಕ್ಕರೆಯ ಅಕ್ಕನೆನಸಿ
ಮಲ್ಲಯ್ಯನೊಡಗೂಡಿ ಮಾತೆ ಮಹಾದೇವಿ ಎನಿಸಿ
ವೀರಶೈವ ಧರ್ಮದ ದಾರಿಯ ತೋರಿಸಿ
ಹೆಣ್ಣು ಜೀವನಕೆ ಕಣ್ಣು ತರಿಸಿ
ಶರಣೆ ಶರಣಿ ಶರಣೆ ಶರಣಿ ॥ ೪ ॥

ದಿಗಂಬರವೇ ದಿವ್ಯಾಂಬರವಾಗಿದೆ
ಕೇಶರಾಶಿಯ ವೇಷ ಭೂಷಣವಾಗಿದೆ
ವಿಭೂತಿಯೇ ಆಭರಣವಾಗಿದೆ
ರುದ್ರಾಕ್ಷಿಯೇ ಆಭರಣವಾಗಿದೆ
ವಿಭೂತಿಯೇ ಅರಶಿಣವಾಗಿದೆ
ಶರಣೆ ಶರಣಿ ಶರಣೆ ಶರಣಿ ॥ ೫ ॥

ನಿನ್ನಯ ವಚನ ಎಮಗದು ತನ
ಕಂಡೇವು ನಾವು ಸ್ವರ್ಗ ಸೋಪಾನ
ಸಿರಗಾಪುರ ಶಶಿಧರನ ಶಿಸುವು ಶಶಿಕಾಂತನ
ಪಾಲಿಸಿ ಪೋಷಿಸುವನುದಿನ
ಶರಣೆ ಶರಣೆ ಶರಣೆ ಶರಣೆ ॥ ೬ ॥

ಕಾಮನ ಗೆಲಿದೆ ಸೋಮನ ಪಿಡಿದೆ
ಕಂಗಣ್ಣದವರನ್ನು ಕರುಣೆಯಿಂದೆ ಪಾಲಿಸಿದೆ
ಕರುಣಾಕರನ ಅನುದಿನ ಭಜಿಸಿದೆ
ಕದಳಿಯ ಬನದೊಳು ಕರ್ಪೂರವಾದೆ
ಶರಣೆ ಶರಣೆ ಶರಣೆ ಶರಣೆ ॥ ೭ ॥

– ಶ್ರೀಮತಿ ಸುಶೀಲಾಬಾಯಿ ರಾಜಶೇಖರ ಇಲ್ಲಾಳಕರ

***

ಕಾಮ ತೆಲಿಗೆ ಏರಿ ಹೋದ ಮ್ಯಾಲ

ಕಾಮ ತೆಲಿಗೆ ಏರಿ ಹೋದ ಮ್ಯಾಲ ಹಾರಿ
ಬೆಂಕಿ ಹತ್ತಿ ಉರಿ ಮೈತುಂಬೆಲ್ಲ ಬೆಂಕಿ ಹತ್ತಿ ಉರಿ ॥ ೧ ॥

ಚಟ ಚಟ ಚೀರುತ ಥೈ – ಥೈ ಎನ್ನುತ
ಕ್ಷಮಿಸೆ ಎನ್ನ ದೇವಿ ಪಾಪಿಯ ತಪ್ಪು ಕ್ಷಮಿಸೆ ಎನ್ನ ದೇವಿ ॥ ೨ ॥

ಕಾಮಕ್ರೋಧ ಮನುಜ ವ್ಯರ್ಥವಾದ ರಾಜ
ಹೀನ ತಿಳಿಯೋ ರೂಪ ವ್ಯರ್ಥವಾದ ಪರ ಹೆಣ್ಣಿನ ರೂಪ ॥ ೩ ॥

ಉಟ್ಟ ಸೀರಿ ಕಳೆದು ಮಾಯ ಮೋಹ ಅಳೆದು
ಕಲ್ಲು ಮುಳ್ಳು ತುಳಿದು ಹೊಂಟ್ಹೋಗ್ಯಾಳ ಅಡವಿ ದಾರಿ ಹಿಡಿದು ॥ ೪ ॥

ಶಿವನ ಅಂತಃಕರುಣ ತಿಳಿದಿಲ್ಲ ಯಾರು ಶರಣ
ಕೇಶರಾಶಿ ಭರಣ ಕಾಯದ ತುಂಬ ಕೇಶರಾಶಿ ಭರಣ ॥ ೫ ॥

ಭಕ್ತಿನೆಂಬುದು ಬೆಂಕಿಯ ಖಾರ ಅಕ್ಕಮಹಾದೇವಿ ತಿಳಿಪೂರ ॥ ೬ ॥

– ಶ್ರೀಮತಿ ಲಕ್ಷ್ಮೀಬಾಯಿ

***

ಉಡತಡಿ ಗ್ರಾಮದಲ್ಲಿ ವೀರಶೈವ ಮತಕ

ಉಡತಡಿ ಗ್ರಾಮದಲ್ಲಿ ವೀರಶೈವ ಮತಕ
ಉದ್ಧಾರ ಮಾಡಳೆವ್ವ ಮಹಾದೇವಿ ಅಕ್ಕ
ಖಳಿ ಉಳ್ಳ ಕಾಂತಿ ಲಿಂಗ ಇತ್ತೋ ಶರೀರಕ ॥ ೧ ॥

ಕಳವಂತಿ ಕುಂದಿಲ್ಲವ್ವ ಮಹಾದೇವಿ ಅಕ್ಕ
ಮಲ್ಲಿಕಾರ್ಜುನ ದೇವರ ಧ್ಯಾನ ನಿತ್ಯ ತನ್ನ ಮನಕ
ಪರಿಯೆಂದು ಪಾಲಿಸ್ಯಾಳವ್ವ ಮಾಡಿ ಮನ ಪಾಕ ॥ ೨ ॥

ನೇಮ ನಿಷ್ಟೆ ನಿತ್ಯ ಹೊತ್ತ ಚೈನಿಲ್ಲ ಜೀವಕ
ಎಂದ ಭೇಟಿ ಆದಿ ಮಲ್ಲಿನಾಥ ನನ್ನ ಮನಕ
ಹಗಲು ಇರಳು ನಿನ್ನ ಧ್ಯಾನ ಚೈನಿಲ್ಲ ಜೀವುಕ ॥ ೩ ॥

ರೂಪ ನೋಡಿ ಕೌಶಿಕನ ಮನಸಾಯ್ತೋ ಕೆಡುಕ
ಸಾರ್ವಭೌಮ ರಾಜನಿಗಿ ಅಂಜಿಕಿ ಯಾತಕ
ಮಾದೇವಿಯಂಥ ಸತಿ ಇದ್ದರ ಜನ್ಮ ಸಾರ್ಥಕ ॥ ೪ ॥

ಪ್ರಧಾನಿಗಿ ಖಳಸ್ಯಾನ ನಿಚ್ಚಾ ಮಾಡದಕ
ಒಪ್ಪಿಕೊಂಡ್ರ ಒಪ್ಪಿಸಿ ಬಾರೋ ಲಗ್ನಾದಕ
ಒಪ್ಪಲಂದ್ರ ತಾಯಿ ತಂದೀಗಿ ಹಿಡಿ ತಾ ಇದೇ ಕ್ಷಣಕ ॥ ೫ ॥

ಒಪ್ಪಲಿಲ್ಲ ಮಹಾದೇವಿ ಅಕ್ಕ ಲಗ್ನ ಆಗದಕ
ನಿನ್ನಂಥ ರಾಜರು ನನ್ನಲ್ಲಿ ಬೂದಿ ತುಂಬದಕ
ನನ್ನ ತಾಯಿ ತಂದೀಗಿ ಯಾಕ ಬಂಧನ ಮಾಡಬೇಕ ॥ ೬ ॥

ನಾನೇ ಸ್ವತ ಬರ್ತೀನಿ ನಡಿ ರಾಜನ ತನಕ
ಹೋಗಿದಾಳೋ ತಾಗಿ ಬಾಗಿ ರಾಜನ ತನಕ
ಹಡಿ ಹೊಲಸ ದೇಹ ಕೊಳಕ ಮರುಳಾಗಿದಿ ಯಾಕ
ಇದರಲ್ಲಿ ಏನಿಲ್ಲ ಹುರಳ ತಿಳಕೋ ನಿನ್ನ ಮನಕ ॥ ೭ ॥

ಪರಿ ಪರಿ ಪೋದ ಮಾಡ್ಯಾಳ ಕೌಶಿಕನ ಮನಕ
ವೀರಶೈವ ಪಾಲನ ಮಾಡೋ ರಾಣಿ ಆಗದಕ
ಹಾಗಾದರ ಆಗಲಿ ಲಗ್ನ ಒಪ್ಪೋ ನನ್ನ ಧರಮುಕ ॥ ೮ ॥

ಕೌಶಿಕ ತಿಳಿದ ಮನಕ ಛೀ ಅಂದ ಜನ್ಮಕ
ಪಾದ ಪಿಡಿದು ಮಹಾದೇವಿಕ್ಕಗ ಖಳಸ್ಯಾನ ಮನೀ ತನಕ
ಭಾರತ ಮಹಾದೇವಿ ಅಕ್ಕ ಕೀರ್ತಿ ಸಾರ್‍ಯಾಳ ಜಗಕ ॥ ೯ ॥

ಧರಿಯೊಳು ಮುಡಬಿ ಊರ ಕರ್ನಾಟಕ ದೇಶಕ
ಹಿರಿ ಮಠದ ವಾಸ್ಯಾವೀಸ್ಯಾ ಸಾರ್‍ಯಾರೋ ಈ ಜಗಕ
ಆನಂದಯ್ಯ ಗುರುವಿನ ಗುರುತಿಡು ಕಡಿತನಕ ॥ ೧೦ ॥

– ಶ್ರೀ ಅಣ್ಣರಾವ ಮುಡಬಿ

***

ಅಕ್ಕಮಹಾದೇವಿ ಜ್ಞಾನ ಭಕ್ತಿಭಾವ

ಅಕ್ಕಮಹಾದೇವಿ ಜ್ಞಾನ ಭಕ್ತಿಭಾವ ಘನ
ಸಭೆ ಆಗಿತ ಮಗ್ನಪ್ರೇಮಾ ಶ್ರೇಷ್ಠ ಅಕ್ಕಮಾದೇವಿ ॥ ೧ ॥

ಅಲ್ಲಮರುಪದೇಶ ಭವ್ಯ ಜ್ಞಾನ ಕೋಶ
ಮುಕ್ತಿಗೆ ಉಪದೇಶ ಪಡೆದಳಕ್ಕ ಅಲ್ಲಮರುಪದೇಶ ॥ ೨ ॥

ಮುಕ್ತಿಮಾರ್ಗ ಕೇಳೇ ಶ್ರೀಶೈಲದು ಕದಳಿ
ಸಾಗಿದಳು ಕದಳಿ ಶ್ರೀಶೈಲ ಗಿರಿಗೆ ಸಾಗಿದಳು ಕದಳಿ ॥ ೩ ॥

ಮಲ್ಲಿನಾಥ ದೇವ ತಿಳಿಯೋ ಎನ್ನ ಭಾವ
ಪಾವನ ಮಾಡುವ ಸಕಲಂಗೆಲ್ಲ ಪಾವನ ಮಾಡುವ ॥ ೪ ॥

ಕಷ್ಟ ಒಂದೇ ಸವನ ಗುಡ್ಡಗಾಡು ಘನ
ಕಲ್ಲುಮುಳ್ಳು ಖಿಸನ ಧ್ಯಾನ ಒಂದೇ ಮಲ್ಲಯ್ಯ ಎಲ್ಹ್ಯಾನ ॥ ೫ ॥

ಪರ್ವತಗಿರಿ ಮ್ಯಾಲ ನಂದಿಯ ಕೋಲು
ಶರಣರು ಹೊಂಟಾರಾ ಸಾಲಿಗಿ ಸಾಲು ॥ ೬ ॥

– ಶ್ರೀಮತಿ ಲಕ್ಷ್ಮೀಬಾಯಿ

***

ಕಲ್ಲು ಮುಳ್ಳುಗಳಿರಾ ಗುಡ್ಡ ಬೆಟ್ಟಗಳಿರಾ

ಕಲ್ಲು ಮುಳ್ಳುಗಳಿರಾ ಗುಡ್ಡ ಬೆಟ್ಟಗಳಿರಾ
ಓದುವ ಗಿಳಿಗಳಿರ ಹಕ್ಕಿ ಪಕ್ಕಿ ಓದುವ ಗಿಳಿಗಳಿರ ॥ ೧ ॥

ಮಲ್ಲಿಕಾರ್ಜುನಯ್ಯನ ತೋರಿ ಚನ್ನಯ್ಯನ
ಇರುವ ಠಾವ ಅವನ ಯಾವಲ್ಲಾದ ಇರುವ ಠಾವ ಅವನ ॥ ೨ ॥

ಅಕ್ಕ ಮಹಾದೇವಿ ಶ್ರೀಶೈಲದು ಠಾವೆ
ಸೇರಿದಳು ದೇವಿ ದರುಶನಕ್ಕಾಗಿ ಶ್ರೀಸೈಲದು ಠಾವೆ ॥ ೩ ॥

ಮಲ್ಲಿನಾಥ ದೇವ ತೋರೋ ನಿನ್ನ ಮುಖವ
ಪಾವನ ಮಾಡುವ ಸಕಲರಿಗೆಲ್ಲಾ ಪಾವನ ಮಾಡುವ ॥ ೪ ॥

ಮಹಾದೇವಿಯಕ್ಕ ಜೋಡೇ ಮಲ್ಲಿನಾಥ ಕೂಡಿ
ಅದರಲ್ಲಿ ಜೋಡಿ ಕೂಡಿಕೊಂಡಳ ದೇವರಲ್ಲಿ ಜೋಡಿ ॥ ೫ ॥

ಹೆಣ್ಣಿನ ಕುಲವು ಉದ್ಧರಣ ಅಕ್ಕ ಮಹಾದೇವಿ ಪರಿಪೂರ್ಣ ॥ ೬ ॥

– ಶ್ರೀಮತಿ ಲಕ್ಷ್ಮೀಬಾಯಿ

***

ಸಾವಿಲ್ಲದು ಗಂಡ ಕೇಡಿಲ್ಲದು ಗಂಡ

ಸಾವಿಲ್ಲದು ಗಂಡ ಕೇಡಿಲ್ಲದು ಗಂಡ
ಕೊನೆವಿಲ್ಲದು ಗಂಡ ಚೆಲುವ ಚನ್ನಮಲ್ಲಯ್ಯ ಎನ ಗಂಡ ॥ ೧ ॥

ರೂಹಿಯಿಲ್ಲದು ಗಂಡ ತೆರುವಿಲ್ಲದ ಗಂಡ
ನಿರ್ಭಯ ಎನ ಗಂಡ ನಿರಾಂಕಾರ ನಿರ್ಭಯ ಎನ ಗಂಡ ॥ ೨ ॥

ಚಲುವೆ ಎನ್ನ ಗಂಡ ಚಿರಂಜೀವಿ ಗಂಡ
ಮಲ್ಲಿನಾಥ ಗಂಡ ಚನ್ನಮಲ್ಲಿಕಾರ್ಜುನಯ್ಯ ಗಂಡ ॥ ೩ ॥

ಸಾವ ಕೆಡುವ ಗಂಡ ಮೋಹ ಮಾಯ ಗಂಡಗೊಯಿದು
ಒಲೆದೊಳಗಿಕ್ಕಿವ್ವ ಮಲ್ಲಯ್ಯನೇ ಚಲುವ ಗಂಡನವ್ವ ॥ ೪ ॥

ಪಾವನಾದೆನವ್ವ ತಿಳಿಕೋರಿ ತಂಗೆವ್ವ
ಭಕ್ತಿ ದೊಡ್ಡದವ್ವ ತಿಳಕೋರಿ ತಂಗೆವ್ವ ॥ ೫ ॥

ಭಕ್ತಿ ದೊಡ್ಡದವ್ವ ತಿಳಿದುಕೊಂಡರು ಮೋಕ್ಷ ಸಿಗುವುದವ್ವ
ಅಕ್ಕ ಮಹಾದೇವಿ ಜಯ ಜಗದೇವಿ ॥ ೬ ॥

ಜಯ ಜಗದೇವಿಗೆ ನಮೋ ನಮೋ ॥ ೭ ॥

– ಶ್ರೀಮತಿ ಲಕ್ಷ್ಮೀಬಾಯಿ

***

ಅಕ್ಕನ ಭಜಿಸುವದಕ್ಕೆ

ಅಕ್ಕನ ಭಜಿಸುವದಕ್ಕೆ ಬಂದೆವು ಶಿವಮಂಟಪಕೆ
ಭವವನ್ನು ದಾಟುವದಕೆ ಶಿವನೋಳು ಬರೆಯುವದಕೆ ॥ ಪ ॥

ಸಂಸಾರ ಸುಖವನು ಈಕೆ ತ್ಯಾಗ ಮಾಡಿದಳಾಕೆ
ಕಾಮನ ಜೈಸಿದಾಳಾಕೆ ದಿಗಂಬರಾದಳು ಈಕೆ ॥ ೧ ॥

ಅಲ್ಲಮನ ಗುರು ಎಂದಾಕೆ ಶರಣರ ಮನ ಬೆರೆದಾಕೆ
ಬಂದಾಳ ಕಲ್ಯಾಣ ಪುರಕೆ ಶಿವಾನುಭವ ಮಂಟಪಕೆ ॥ ೨ ॥

ಸರ್ವರ ಅಗಲಿದಳಾಕೆ ಧೈರ್ಯದಿ ನಡೆದಳು ವನಕೆ
ಹೊರಟಾಳು ಕದಳಿಯ ವನಕೆ ಮರೆಯಾದಿ ಲಿಂಗದೊಳೀಕೆ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಅಕ್ಕಮಹಾದೇವಿಯ ಹಾಡು

ಅಂಕಬಿಂಕದವನ । ಟೊಂಕಿನ ಮ್ಯಾಲ ಕೈಯಿಟ್ಟು
ಡೊಂಕ ನಿಂತಾನ ಇವನ್ಯಾರ । ಕೋಲೆಣ್ಣ ಕೋಲು ॥ ೧ ॥

ಅವ ನನ್ನ ಅಣ್ಣನ । ಅವ ನನ್ನ ತಮ್ಮನ ।
ಅವ ನನ್ನ ಊರ ಒಡಿಯನ । ಕೋ ॥ ೨ ॥

ಅವ ನನ್ನ ಊರ । ಒಡಿಯನ ನನ್ನ ಮಗಳ ।
ಅವನಿಗ ನಿನಗ ಕೊಡತೀನ । ಕೋ ॥ ೩ ॥

ನೀವು ಜಯನರು । ನಾವು ನಿಂಗೊಂತರು ।
ಕೊಟ್ಟರೊಲ್ಲೇನ ಜಯನರಿಗಿ । ಕೋ ॥ ೪ ॥

ಶಾಂವಿಗಿನಾಗತಾವ । ಸೈದಾನನಾಗತಾವ ।
ಇಂದ್ಯಾನ ಇವ ಮನಿಯಾಗ । ಕೋ ॥ ೫ ॥

ಇಂದ ಯಾನ ಇವರ । ಮನಿಯಾಗ ಹಡದವ್ನ
ಅವ್ವನೌವ್ವತ್ತ ದಿನಗಳ । ಕೋ ॥ ೬ ॥

ಹಪ್ಪಳನಾಗತಾವ । ಶೆಂಡಿಗಿನಾಗತಾವ ।
ಇಂದ್ಯಾನ ಇವರ ಮನಿಯಾಗ । ಕೋ ॥ ೭ ॥

ಇಂದ ಯಾನ ಇವರ । ಮಿನಿಯಾಗ ಹಡದವ್ನ
ಅಪ್ಪನಪ್ಪ ಸತ್ತ ದಿನಗೋಳ । ಕೋ ॥ ೮ ॥

* * * *

ನನ್ನೂರ ಹಾದೀಲಿ । ನಿಬ್ಬಣ ಬರತದ ।
ನೀ ಏರಿ ನೋಡ ನನ ಮಗಳ । ಕೋ ॥ ೯ ॥

ನಾ ಏರಿ ನೋಡಲಕ । ನನ್ನ ತವರಲ್ಲ ।
ನೀ ಏರಿ ನೋಡ ಹಡದವ್ವಾ । ಕೋ ॥ ೧೦ ॥

ಎಣ್ಣಿಯ ಕೊಡಗೋಳು । ಬಣ್ಣದಲಿ ಬರೂತಾವ ।
ಮಣ್ಣಾಗ ಬಿದ್ದು ಒಡಿಯಲಿ । ಕೋ ॥ ೧೧ ॥

ಮಣ್ಣಿನೊಳಗ ಬಿದ್ದು । ಒಡಿಯಲಿ ಈ ಊರ
ಹೆಣ್ಣ ಖೋಡೆಂದು ತಿರುಗಲೆ । ಕೋ ॥ ೧೨ ॥

ತುಪ್ಪದ ಕೊಡಗಳೂ । ಒಪ್ಪದಲಿ ಬರೂತಾವ ।
ತಿಪ್ಪ್ಯಾಗ ಬಿದ್ದು ಒಡಿಯಲಿ । ಕೋ ॥ ೧೩ ॥

ತಿಪ್ಪಿಯಾಗ ಬಿದ್ದು । ಒಡಿಯಲಿ ಈ ಊರ ।
ಮಿತ್ರಿ ಖೋಡೆಂದು ತಿರುಗಲೆ । ಕೋ ॥ ೧೪ ॥

ಥೆಜ್ಜಿಯ ಹೊಲದಾಗ । ಥೆಲ್ಲ್ಯಾಡೊ ನಿಬ್ಬಣ ।
ಫಿಲ್ಲ್ಯಾ ಇಡಬಾರ ನನ ಮಗಳ । ಕೋ ॥ ೧೫ ॥

ಆ ಫಿಲ್ಲ್ಯಾ ನಾ ಒಲ್ಲ । ಈ ಫಿಲ್ಲ್ಯಾ ನಾ ಒಲ್ಲ ।
ಕೊಟಟಿರೊಲ್ಲೆನ ಜಯನರಿಗಿ । ಕೋ ॥ ೧೬ ॥

ಹತ್ತೀಯ ಹೊಲದಾಗ । ಒತ್ತ್ಯಾಡೊ ನಿಬ್ಬಣ ।
ನತ್ತ ಇಡಬಾರ ನನ ಮಗಳ । ಕೋ ॥ ೧೭ ॥

ಆ ನತ್ತ ನಾ ಒಲ್ಲ । ಈ ನತ್ತ ನಾ ಒಲ್ಲ ।
ಕೊಟ್ಟರೊಲ್ಲೆನ ಜಯನರಿಗಿ । ಕೋ ॥ ೧೮ ॥

* * * *

ಊದಸ್ತ ಬಾರಸ್ತ । ಸೋಬಾನ ಹಾಡುತ ।
ಬಂದನ ಮದುಮಗ ಅಗಸಿಗಿ । ಕೋ ॥ ೧೯ ॥

ಅಗಸಿಯ ತೆರಿ ನನ್ನ । ಬಗಸುಳ್ಳ ತಳವಾರಾ ।
ಬೊಗಸಿ ತುಂಬಡಕಿ ಬಿಳಿ ಎಲಿಯ । ಕೋ ॥ ೨೦ ॥

ಊದಸ್ತ ಬಾರಸ್ತ । ಸೋಬಾನ ಹಾಡುವ ।
ಬಂದನ ಮದುಮಗ ಬಾಗಿಲಿಗಿ । ಕೋ ॥ ೨೧ ॥

ಬಾಗಿಲದಾಗಿನ ಕುದುರಿ । ಕಾಲಮ್ಯಾಲಾಗಲಿ ।
ಮದುಮಗ ಕಾಳಿಂಗ ಮಡಿಯಲಿ । ಕೋ ॥ ೨೨ ॥

* * * *

ನಮೌವ್ವಾ ಕಟ್ಟ್ಯಾಳ । ಎಳ್ಳ ಹಚ್ಚಿದ ರೊಟ್ಟಿ ।
ಕೂಡುಂಬುನು ಬಾರ ನನ ಮಗಳ । ಕೋ ॥ ೨೩ ॥

ನೀವು ಜೈಯನರು । ನಾವು ನಿಂಗೊಂತರು ।
ನಿಮ್ಮಲ್ಲಿ ನಾವು ಉಣಬರದ । ಕೋ ॥ ೨೪ ॥

ಪಟ್ಟೋಳಿ ಸಿರ್‍ದರಿದು । ಬುತ್ತಿಯ ಕಟ್ಟಿದ ।
ನೀರ ಕಂಡಲ್ಲಿ ಇಳಿದುಣ್ಣ । ಕೋ ॥ ೨೫ ॥

ಇವೂ ಬುತ್ತಿಗಳು । ನೀವು ಮುಟ್ಟಿರತೀರಿ ।
ನಾ ಉಣುದಿಲ್ಲ ಹಡದವ್ವ । ಕೋ ॥ ೨೬ ॥

ಹಿಟ್ಟ ಅಕ್ಕೀಯ ತಗೋ । ಬ್ಯಾಳಿ ಬೆಲ್ಲವ ತಗೋ ।
ಮಾಡಿಕೊಂಡುಣ್ಣ ನಿನ್ನಡಿಗಿ । ಕೋ ॥ ೨೭ ॥

ಹಿಟ್ಟಕ್ಕಿ ತಗೊಂಡಾಳ ಬ್ಯಾಳಿ ಬೆಲ್ಲ ತಗೊಂಡಾಳ ।
ಹ್ವಾದಾಳ ಸಂಗಯನ ಗುಡಿಯಾಗ । ಕೋ ॥ ೨೮ ॥

ಎಡಕಾದರ ಸುಳವಿಲ್ಲ । ಬಲಕಾದರ ಸುಳವಿಲ್ಲ ।
ಎಲ್ಲ್ಯಾದರಕಿಯ ಸುಳವಿಲ್ಲ । ಕೋ ॥ ೨೯ ॥

– ಕೃತಿ: ಮಲ್ಲಿಗೆ ದಂಡೆ

***

ಯಾರಿಗೇನ ಮಾಡಿದ ಶಿವ

ಯಾರಿಗೇನ ಮಾಡಿದ ಶಿವ ।
ಶಿವಲಿಂಗಕ ಮಜ್ಜನವ ಮಾಡಿದ । ॥ ಪ ॥

ಕೈಲಾಸಕ ಹೋದವರು ಶಿವ ಶಿವ
ಎಲ್ಲಿ ಹುಡುಕಿದರಿಲ್ಲ ನನ್ನ ಊರಾಗ
ಹಾಳಾ ಏ ಶಿವಶರಣೆ ॥ ೧ ॥

ಮಹಾಗಾಂವದಾಂಗ ಹಾಳ
ಶಿವಶರಣೆ ಮಹಾದೇವಿ
ಕಂಡು ಬಂದಾಳೆ ಕೈಲಾಸಕ ॥ ೨ ॥

ಎದ್ದೊಮ್ಮೆ ನೋಡಿದರ ಶಿವಶಿವ
ಮೊಗ್ಗು ಅರಳ್ಯಾವ
ರುದ್ರಾಕ್ಷಿ ಮಾಲಾ ತೆರದಾವ ॥ ೩ ॥

ರುದ್ರಾಕ್ಷಿ ಮಾಲ ತೆರದಾವ
ವಿರೂಪಾಕ್ಷಿ ಎದ್ದು ಬಂದಾರ ಜಳಕಕ ॥ ೪ ॥

ಮಾಗಾಯಿ ಊರು ಚಂದ ಶಿವಶಿವ
ಮಾವಿನ ಗಿಡ ಚಂದ
ಅಕ್ಕಮಹಾದೇವಿ ಗುಡಿ ಚಂದ ॥ ೫ ॥

ಅಕ್ಕಮಹಾದೇವಿ ಗುಡಿ ಚಂದ । ಗುಡಿ ಮುಂದ
ಭಜನ್ಯಾಗ ಮಹಾಲಿಂಗನ ಧನಿ ಚಂದ । ॥ ೬ ॥

ಲಿಂಗದ ಪೂಜಾ ಶಿವಶಿವ ನಿತ್ಯದಿ ಮಾಡುವರೇನೆ
ಗಂಡನ ಪೂಜೆ ಅನಗಾಲ ॥ ೭ ॥

ಗಂಡನ ಪೂಜೆ ಅನಗಾಲ ಮಾಡಿದರೆ
ಬಾಲಿ ಹೊಂದ್ಯಾಳ ಶಿವನ ಶ್ರೀಪಾದ ॥ ೮ ॥

ಹಾಸೀಗಿ ಹಾಸಿರಲಿ ಸಿವ ಶಿವ । ಕೂಸಲ್ಲಿ ಮಲಗಿರಲಿ ।
ಸಂಪೀಗಿ ಹೂವಿರಲಿ ಮನದಾಗ । ॥ ೯ ॥

ಸಂಪೀಗಿ ಹೂವಿರಲಿ ವನದಾಗ ಶಿವ ಶಿವ
ಹಡದಮ್ಮನ ಮಾತಿರಲಿ ನಿನ್ನ ಮನದಾಗ ॥ ೧೦ ॥

ಪಾದ ತೀರ್ಥವ ಸಲ್ಲ ಶಿವ ಶಿವ ।
ಪಾವನಾಯಿತೆ ಜನ್ಮ । ರೋಮನೆ ರೋಮೆಲ್ಲ ರವಿಚಿನ್ನ ॥ ೧೧ ॥

ರೋಮನೆ ರೋಮೆಲ್ಲ ರವಿ ಚಿನ್ನ ಶಿವ ಶಿವ ।
ವೀರಭದ್ರನ ಪಾದದಲಿ ಕಂಡೆ ಪದವೀಯ ॥ ೧೨ ॥

ಸತ್ಯಮ್ಮ ಶಿವಶರಣಿ ಶಿವ ಶಿವ । ವಜ್ರದ ವಾಲಿಯ ನಿಟ್ಟು ।
ಗದ್ದೀಗಿ ಗಲ್ಲೆ ಇಳದಾಳೆ ॥ ೧೩ ॥

ಗದ್ದೀಗಿ ಗೆಲ್ಲೆ ಇಳದಾಳೆ ಶಿವಶಿವ ।
ಶಿವರಾಯನ ವಿದ್ಯದ ಮಠಕೆ ನಡದಾಳೆ ॥ ೧೪ ॥

ಬಾಗಿಲ ತೋಳ್ಹಿಡಿದು ಶಿವ ಶಿವ ।
ಬಾಗಿ ನಿಂತವರ್ಯಾರ ।
ಬಹದ್ದೂರ ಅಣ್ಣನ ಮಡದಿ ಹಾಳೆ ॥ ೧೫ ॥

ಬಹದ್ದೂರ ಅಣ್ಣನ ಮಡದಿ ಶಿವ ಶಿವ ।
ಮಡದಿ ಕಮಲಾಬಾಯಿ ।
ಬಾಗಿ ನನ್ನ ಪಾದ ತೊಳದಾಳೆ ॥ ೧೬ ॥

– ಶ್ರೀಮತಿ ಚನ್ನಮ್ಮ ಖಪಾಟಿ ಮಹಾಗಾಂವ

***

ಮಂಗಳಾರುತಿ ಹಾಡು

ಈ ಶುಭಯೋಗ ಈ ಶುಭದೀನ
ಮಹಾದೇವಿ ಜನ್ಮ ಜನನ
ಬಾಲೆಯರೆಲ್ಲರು ಪ್ರೇಮದಿ ಕೂಗಿ
ಬೆಳಗಿರಿ ಆರುತಿಯ ॥ ೧ ॥

ನಿರ್ಮಲ ಸುಮತಿ ಪ್ರೇಮದ ಕುವರೀ
ವೈರಾಗ್ಯದ ನಿಧಿಯೇ
ಬಾಲೆಯರೆಲ್ಲರು ಪ್ರೇಮದಿ ಕೂಡಿ
ಬೆಳಗಿರಿ ಆದರುತಿಯಾ । ಶುಭಯೋಗ ..... ॥ ೨ ॥

ವಸಂತಕಾಲ ಪಕ್ಷಿಗಳ ಕಿಲಿ ಕಿಲಿ
ಹೂಗಳ ಸುರಿಮಳೆಯೇ
ಪರಮತೇಜ ಪಾರ್ವತಿರೂಪ
ಬೇಗನೆ ಅರಿತವಳೇ । ಈ ಶುಭಯೋಗ .... ॥ ೩ ॥

ಜ್ಞಾನಿಗಳಾದ ಬಸವಣ್ಣವರಲ್ಲಿ
ಪರಮ ಶಿಷ್ಯನೇ
ಅಂಗಲಿಂಗ ನೀನು ಸದಾ ತೇಜ
ವಿರಕ್ತ ಮೂರ್ತಿಯೇ । ಈ ಶುಭಯೋಗ ... ॥ ೪ ॥

– ಶ್ರೀಮತಿ ಸಿದ್ದಮ್ಮ ಖಪಾಟೆ

***

ಪುಸ್ತಕ ಹಿಡಿದುಕೊಂಡು

ಪುಸ್ತಕ ಹಿಡಿದುಕೊಂಡು ಪುರಾಣ ಓದಿಕೊಂಡು
ಗುರುವಿಗಿ ನಾವು ಬೆಳಗೋನು ಬಾರೇ ಆರುತಿ ತಾರೇ ಸಾರುಸಜನಿಗೇ
ಅಕ್ಕ ಮಹಾದೇವಿಗೆ ಬೇಗ ಬೆಳಗಿರೆಲ್ಲರು ॥ ೧ ॥

ಅಂದ ಚಂದದ ಹೂವ ಅಂಗೈದೊಳ ಹಿಡಿಕೊಂಡು
ಚಂದ್ರಗೆ ನಾವು ಬೇಳಗೋನು ಬಾರೇ ಆರುತಿ ತಾರೆ ಸಾರುಸಜನಿಗೇ
ಅಕ್ಕ ಮಹಾದೇವಿಗೆ ಬೇಗ ಬೆಳಗಿರೆಲ್ಲರು ॥ ೨ ॥

ಸೂರ್ಯಪಾನದ ಹೂವ ತಂದು ಸುದ್ದಾಗಿ ಹಿಡಿದುಕೊಂಡು
ಸೂರ್ಯಗೆ ನಾವು ಬೆಳಗಾನು ಬಾರೇ ಆರುತಿ ತಾರೇ ಸಾರುಸಜನಿಗೇ
ಅಕ್ಕ ಮಹಾದೇವಿಗೆ ಬೇಗಿ ಬೆಳಗಿರೆಲ್ಲರು ॥ ೩ ॥

ಅಕ್ಷದ ಆರುತಿ ಲಕ್ಷ್ಮಿ ಗುಣವಂತಿ
ಲಕ್ಷ್ಮೀಗಿ ನಾವು ಬೆಳಗಾನು ಬಾರೇ ಆರುತಿ ತಾರೇ ಸಾರುಸಜ್ಜನಿಗೇ
ಅಕ್ಕ ಮಹಾದೇವಿಗೆ ಬೇಗಿ ಬೆಳಗಿರೆಲ್ಲರು ॥ ೪ ॥

***

ಚಿಕ್ಕವಯದೋಳು ಅಕ್ಕಮಹಾದೇವಿ

ಚಿಕ್ಕ ವಯದೊಳು ಅಕ್ಕಮಹಾದೇವಿ ಮುಕ್ಕಣ್ಣನ ಭಜಿಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ಪ ॥

ಉಡತಡಿ ಊರಾಗ ಅಕ್ಕಮಹಾದೇವಿ ತಡತುಡ ಉದ್ಭವಿಸಿ
ಸುಮತಿ ತಾಯಿ ನಿರ್ಮಲ ಜನಕ ನೋಡಿ ಮನಕಾದರು ಖುಷಿ
ಜಂಗಮ ಕುಲ ಜಗಭರಿತ ಜ್ಯೋತಿ ಜಗವೆಲ್ಲ ಹಾಡ್ಹರಿಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೧ ॥

ಹಾಸವದನ ಹದಿನೈದು ವರುಷಕ ಹೊಂಟಾಳ ಸಾವಕಾಶಿ
ಪೂಜೆಕ ಬೇಕೆಂದು ಪುಷ್ಪ ಹುಡುಕುತ ಸಂಗಟೊಂದು ದಾಸಿ
ಕೌಶಿಕ ರಾಜನ ಮೆರವಣಿಗಿ ಹೊಂಟಿತು ಎದುರಿಗಿ ನೇಮಿಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೨ ॥

ಚಿಕ್ಕ ಪ್ರಾಯದ ಅಕ್ಕಮಹಾದೇವಿಗಿ ರಾಜ ನೋಡಿಕೇಸಿ
ಮೇಣಿದಾಗೆ ಅವ ಮೂರ್ಛಿತನಾದನು ರೂಪಕೆ ಮೋಹಿಸಿ
ಮನಿಗೆ ಬಂದು ತಾ ಎಳೆದು ತರಿಸಿ ಬಲಾತ್ಕರಿಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೩ ॥

ಮಹಾದೇವಿ ತನ್ನ ಮನಸಿಗಿ ತಿಳಿದಳು ಪಕ್ಕಾ ವಿಚಾರಿಸಿ
ಜೈನಮತದ ಕೌಶಿಕ ರಾಜಗ ಅಂತಾಳ ದಿಕ್ಕರಿಸಿ
ಶಿವಭಕ್ತರಾಗಿ ಶಿವಶಿವನೆಂದರ ತೋರುತಾದ ಕಾಶಿ ।
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೪ ॥

ಜೈನ ಮತದ ಕೌಶಿಕರಾಜ ಹೀಂಗಂತನ ಹೂಂಕರಿಸಿ
ಕಾಮನ ಭಕ್ತಿಗೆ ಶಿವಭಕ್ತೆಂದರೆ ಏಕಿರತದ ಆಸಿ
ಸಿಕ್ಕಿದ ಕೈಯಾಗ ದಕ್ಕಿ ಹೋಗೆಂದು ಹಿಡಿದನ ಹೌಹರಿಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೫ ॥

ಮಹಾದೇವಿ ಮಹಾತ್ಮೆ ಏನು ಹೇಳಲಿ ತಾನೆ ಅಗ್ನಿ ಪುಟಿಸಿ
ರಾಜನಂಗಕ ಉರಿಯ ಹತ್ತಿತು ಬೆಳ್ತಾನ ತಡಪಡಿಸಿ
ಅಕ್ಕಮಹಾದೇವಿಯದು ಪಾದ ಹಿಡಿಯುತಾನ ತಾಯಿಯೆಂದಕೇಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೬ ॥

ಪೀತಾಂಬ್ರಿ ಕಳೆದು ದಿಗಂಬರಾಗಿ ಮಲ್ಲಿನಾಥನ ನೆನಿಸಿ
ಕಲ್ಯಾಣಕ ಬಂದು ಪ್ರಭುದೇವರ ಪಾದಗಳಿಗೆ ನಮಿಸಿ
ಶ್ರೀಶೈಲಕೆ ಬಂದು ಮಲ್ಲಿಕಾರ್ಜುನನ ಎದುರಿಗೆ ಪ್ರತ್ಯಕ್ಷಿಸಿ
ತನ್ನೊಳು ತಾನು ಐಕ್ಯವಾದಳೊ ಲಿಂಗದಾಗ ಬೆರೆಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೭ ॥

– ಶ್ರೀಮತಿ ಮಹಾದೇವಿ ಹಿರೇಮಠ
– ಶ್ರೀಮತಿ ವಿಮಲಾದೇವಿ ಸಿದ್ಧೇಶ್ವರ
– ಶ್ರೀಮತಿ ಸರಸ್ವತಿ ಚಿಕ್ಕಮಠ
– ಶ್ರೀಮತಿ ಗೌರವ್ವ ಕಾಡಾದಿ
– ಶ್ರೀಮತಿ ನೀಲಮ್ಮ ಎಣೆಗೂರ

***

ಅಕ್ಕಮಹಾದೇವಿಯ ನಾಮ

ಅಕ್ಕ ಮಾದೇವಿಯ ನಾಮ
ನಿತ್ಯ ನೀವು ನುಡಿಯರೆಮ್ಮ
ಮುಕ್ತಿಯ ದೊರಿವದು ಸತ್ಯ ಸತಿ ಎಲ್ಲರಿಗಮ್ಮ
ಸಾಕ್ಷಾತ್ ಶಿವನೊಲಿದ ಶಿವಶರಣಿಯಮ್ಮ ॥ ಪ ॥

ನಿರ್ಮಲ ಸುಮತೀ ಉದರಲ್ಲಿ
ಬಂದಳು ಜಲ್ಮವು ತಾಳಲ್ಲಿ
ಮುಂದಾಗಿ ಬೆಳದಾಳಲ್ಲಿ
ಶಿವಲಿಂಗನ ಲೀಲೆಯಲ್ಲಿ
ಸಂತೋಷ ತುಂಬಿದೆ ತಾಯ್ ತಂದಿಯಲ್ಲಿ ॥ ೧ ॥

ವಚನಾಮೃತದೊಳು ಬೆರಸಿ
ಹಿರಿಯರ ಮನ ಮನ ತಣಿ ತಣಿಸಿ
ಭಕ್ತಿಯಿಂದಲೇ ಭಜಿಸಿ
ಚಿಕ್ಕಂದಿನಾಸೆ ಜೈಸಿ
ಆಕರತಿ ಆದಳೊ ಮುಕ್ಕಣ್ಣಗ ನೆನಸಿ ॥ ೨ ॥

ಕಂಸುಕ ರಾಜಾಯಿದ್ದಲ್ಲಿ
ಮೆರವಣಿಗೆ ಹೊಂಟಿತು ಪುರದಲ್ಲಿ
ಮಾದೇವಿ ನಿಂತಳ ಬಾಗಿಲಲ್ಲಿ
ಅರಸನ ಕಂಗಳಲ್ಲಿ ಅಕ್ಕನ ಬಿಂಬವ ತಗಲಿ
ಆಜ್ಞೆಯ ಮಾಡಿದೆ ಅರಮನೆಯಲ್ಲಿ ॥ ೩ ॥

ಸಲಗರ ಸಾಂಬಾನಾ ಕೀರ್ತಿ
ಅಕ್ಕನ ಬಳಗಕ್ಕೆ ಭ್ರಾಂತಿ
ಬೆಳಗುವೆ ಮಂಡಲದೊಳು ಜ್ಯೋತಿ
ಚಂದ್ರನ ಕವನದೊಳು ನೀತಿ
ಹಗಲಿರುಳು ಮಾಡುವೆ ಸ್ಮೃತಿ
ಸಿಗುವದು ಭಾಗ್ಯಸುಖ ಸಂಪತು ಶಾಂತಿ ॥ ೪ ॥

ಹುಟ್ಟುತಲೆ ಮನೆಮಾರವ ಜೈಸಿ
ಹೊರಟಳು ಮನದಾಗೆ ದಿಗಂಬರ ಬಯಸಿ
ಕಲ್ಯಾಣ ಪುರದೊಳು ನೆಲಸಿ
ಅಲ್ಲಂ ಪ್ರಭುವಿಗೆ ಮಗಳೆನಿಸಿ
ಅಣ್ಣ ಬಸವಣ್ಣರಿಗೆ ತಂಗಿಯ ಎನಸಿ ॥ ೫ ॥

ಅಕ್ಕಗ ದುಃಖ ಉಕ್ಕೇರಿ
ತಿಳಿಸಿ ಹೇಳಿದಳು ಪರಿಪರಿ
ಮಲ್ಲಿಕಾರ್ಜುನನೇ ಎನ ದಾರಿ
ಎರದೆನು ಅವನಿಗೆ ಧಾರಿ
ಬಿಡೊ ನೀ ಕರುಣೆ ತೋರಿ
ಹಿಡಿದೆಳಿದ ಕಾಮೇರಿ ಮೈಮ್ಯಾಲಿನ ಸೀರಿ ॥ ೬ ॥

– ಶ್ರೀಮತಿ ಮಲ್ಲಮ್ಮ ಬೆನಕಿಪಳ್ಳಿ

***

ಶಿವಶರಣೆ ಅಕ್ಕಮಹಾದೇವಿ

ಶರಣೆ ಬಾರೆ ಮನಿಗೆ ನೀನು । ಶರಣೆ ಬಾರಮ್ಮ
ನಾನು ನಿಮ್ಮನು ಕರಿಯಲು ಬಂದ ।
ಶರಣೆ ಬಾರಮ್ಮ ಮನಿಗೆ । ಶರಣೆ ಬಾರಮ್ಮ ॥ ॥ ೧ ॥

ಜರತಾರಿ ಸೀರೆಯನುಟ್ಟು । ಜರದಂಚಿನ ಕುಬಸ ತೊಟ್ಟು
ಹಣಿಮ್ಯಾಲೆ ಕುಂಕುಂಬಟ್ಟು । ಕುಶಲದಿಂದ ಕರಿಯಲಿ ಬಾದಾ ॥ ॥ ೨ ॥

ತಾಯಿ ತಂದಿಗಳನು ಬಿಟ್ಟು । ಪಾದ ತನಕ ಜಡಿಯವ ಬಿಟ್ಟು
ಕೊರಳಲ್ಲಿ ರುದ್ರಾಕ್ಷಿಕಟ್ಟಿ । ಹಣಿಮ್ಯಾಲೆ ವೀಭತಿ ಧರಿಸಿ ॥ ೩ ॥

ಕನ್ನಡದೊಳು ವಚನವ ಕಟ್ಟಿ । ಅನುಭವ ಗತಿ ಹಾಡಬಿಟ್ಟೆ
ಕಲ್ಯಾಣಕೆ ಹೊರಟು ಬಿಟ್ಟೆ । ಎಲ್ಲ ಶರಣರಿಗೆ ಆದೆಲ್ಲ ಭೇಟಿ ॥ ೪ ॥

ಗಂಗಿದೋಳು ಝುಳಕವಮಾಡಿ । ಶಿವಲಿಂಗಕ ಮಂಗಲ ಪಾಡಿ
ಚೆನ್ನಮಲ್ಲಿಕಾರ್ಜುನನೀಗೆ । ನಿನ್ನ ದೇಹ ಅರ್ಪಣ ಮಾಡಿ ॥ ೫ ॥
– ಶ್ರೀಮತಿ ಭಾಗೀರತಿ ವೈಜಿನಾಥ ಮಠಪತಿ

***

ಅಕ್ಕಮಹಾದೇವಿ ಓಡುತ್ತ ಬಂದ

ಓಂ ನಮಃ ಶಿವಾಯ ಎನ್ನಿರಿ ಆನಂದದಿಂದ
ದೇವ ಆನಂದದಿಂದ ಭಕ್ತರ ಸಲುವಾಗಿ
ಅಕ್ಕ ಮಹಾದೇವಿ ಓಡುತ್ತ ಬಂದ ॥ ಪ ॥

ಐದು ಅಕ್ಷರ ಓದಿ ತಾನು ಕರುಮ ಗಳೆದಿದಳೋ
ಅಕ್ಕ ಕರುಮ ಗಳೆದಿದಳೋ । ಕರುಮಗಳೆದು
ಭಾವ – ಭಕ್ತಿಲಿ ಶಿವನ ಒಲಿದಿದಳೋ
ಅಕ್ಕ ಶಿವನ ಒಲಿದಿದಳೋ ॥ ೧ ॥

ಕಲ್ಯಾಣಪುರದಲ್ಲಿ ಸಂಗಮನಾಥನ ಪೂಜೆ ಮಾಡಿದಳೋ
ಅಕ್ಕ ಪೂಜೆ ಮಾಡಿದಳೋ । ಪೂಜೆ ಮಾಡಿ
ಭಾವ – ಭಕ್ತಿಲಿ ಶಿವನ ಒಲಿದಿದಳೋ
ಅಕ್ಕ ಶಿವನ ಒಲಿದಿದಳೋ ॥ ೨ ॥

ಶ್ರೀಶೈಲಪುರದೊಳು ಮಲ್ಲಿಕಾರ್ಜುನ ಸೇವೆ ಮಾಡಿದಳೋ
ಅಕ್ಕ ಸೇವೆ ಮಾಡಿದಳೋ । ಸೇವೆ ಮಾಡಿ
ಕದಳಿಯ ಬನದೋಳು ಐಕ್ಯನಾಗಿದಳೋ
ಅಕ್ಕ ಐಕ್ಯನಾಗಿದಳೋ ॥ ೩ ॥

– ಶ್ರೀಮತಿ ಮಹಾದೇವಿ ರಾಜೇಂದ್ರ ಪಾಟೀಲ
ಹಾಗೂ ನಿರ್ಮಲಾ ಗುಂಡಪ್ಪಾ ಸೇಳಿಗೆರ್

***

ಶರಣೆಯರಲ್ಲಿ ಶರಣೆ

ಶರಣೀಯರಲ್ಲಿ ನಮ್ಮ ಶರಣೆಯಮ್ಮ
ಅಕ್ಕಮಾದೇವಮ್ಮಾ ।
ತ್ರಿಲೋಕದ ಗಂಡನನ್ನೆ ಕಂಡಳಮ್ಮ ॥ ಪ ॥

ದೇವರನ್ನೆ ಗಂಡನೆಂದು ತಿಳಿದಳಮ್ಮ
ಅಕ್ಕ ತಿಳಿದಳಮ್ಮ
ಚೆನ್ನಮಲ್ಲಿಕಾರ್ಜುನನೇ ಗಂಡನೆಂದು ತಿಳಿದಳಮ್ಮ ॥ ೧ ॥

ಮಹಾರಾಜ ಕೌಶಿಕನು ಬಂದನಮ್ಮ
ಮನೆಗೆ ಬಂದನಮ್ಮ
ಮಾದೇವಿಗಿ ಮದುವೆ ನಾನು ಆತೆನಮ್ಮ ॥ ೨ ॥

ತಂದೆ – ತಾಯಿ ಕಠೋರ ಶಿಕ್ಷೆ ಕೊಡಸ್ಯಾರಮ್ಮ
ಕೌಶಿಕಗ ಕೊಡಿಸ್ಯಾರಮ್ಮ
ಮಾದೇವಿಗಿ ಮದುವೆ ನಾನು ಆತೆನಮ್ಮಾ ॥ ೩ ॥

ತಂದೆ ತಾಯಿ ದೇವರೆಂದು ತಿಳಿದಳಮ್ಮ
ಅವನು ಒಪ್ಪೆನಮ್ಮ
ಮದುವೆಯ ಆಗಿ ಅಲ್ಲಿ ಹೋಯಿತಮ್ಮ ॥ ೪ ॥

ಕೌಶಿಕನ ಮನೆಗೆ ಅಕ್ಕ ಬಂದಳಮ್ಮ
ಅವಳು ಬಂದಳಮ್ಮ
ಶಿವನಾಮ ಸ್ಮರಣಿಯಲ್ಲಿ ಕುಳಿತಳಮ್ಮ ॥ ೫ ॥

ಕೌಶಿಕನು ಅಲ್ಲಿ ಏನು ಮಾಡೆನಮ್ಮ
ಅವನು ಮಾಡೆನಮ್ಮ
ಅಕ್ಕನ ವೃತಭಂಗ ಪಡಿಸ್ಯಾನಮ್ಮ
ಮೂರು ತಪ್ಪುಮಾಡಿ ಬಿಟ್ಟನಮ್ಮಾ ॥ ೬ ॥

ಮಾಯಾ ಮೋಹಗಳನು ಅಲ್ಲಿ ಅಳಿದಳಮ್ಮ
ಕಲ್ಲು ಮುಳ್ಳು ತುಳಿದಳಮ್ಮ
ಅವಳು ತುಳಿದಳಮ್ಮ
ಗುಡ್ಡ ಗವರ ತುಳಿದು ಬಂದಳಮ್ಮ ॥ ೭ ॥

ಭೋರ್ಯಾಡಿ ಭೋರ್ಯಾಡಿ ಬೇಡೆಳಮ್ಮ
ಅಕ್ಕ ಬೇಡ್ಯಾಳಮ್ಮಾ
ಚೆನ್ನಮಲ್ಲಿಕಾರ್ಜುನನೇ ಗಂಡನೆಂದು ಕೇಳ್ಯಾಳಮ್ಮ ॥ ೮ ॥

ಉಡತಡಿ ಬಿಟ್ಟು ಅವಳು ಬಂದಳಮ್ಮ
ಅಕ್ಕ ಕಾಡು ತುಳಿದಮ್ಮ
ಕಲ್ಯಾಣ ಪಟ್ಟಣನ್ನೇ ಸೇರ್ಯಾಳಮ್ಮ ॥ ೯ ॥

ಕಲ್ಯಾಣದಲ್ಲಿ ಪ್ರಭು ಪ್ರಶ್ನೆ ಇಟ್ಟರಮ್ಮ
ಅಕ್ಕ ಇಟ್ಟರಮ್ಮ

ಗಂಡ ಯಾರೆಂಬದು ಕೇಳ್ಯಾರಮ್ಮ
ನಿನ್ನ ಗಂಡ ಯಾರೆಂಬುವುದು ಕೇಳ್ಯಾರಮ್ಮ ॥ ೧೦ ॥

ಪ್ರಭುವಿನ ಪ್ರಶ್ನೆಗುತ್ತರಿಟ್ಟಳಮ್ಮ
ಅವಳು ಇಟ್ಟಳಮ್ಮ
ದೇವರೇ ಗಂಡನೆಂದು ಹೇಳ್ಯಾಳಮ್ಮ
ಚೆನ್ನಮಲ್ಲಿಕಾರ್ಜುನನೇ ಗಂಡನೆಂದು ಹೇಳ್ಯಾಳಮ್ಮ ॥ ೧೧ ॥

ಕಲ್ಯಾಣ ಪಟ್ಟಣನ್ನು ಬಿಟ್ಟು ಅಕ್ಕ ಬಂದಳಮ್ಮ
ಶ್ರೀಗಿರಿ ಧಾರಿ ಹಿಡಿದು ನಡೆದಳಮ್ಮ
ಅಕ್ಕ ಕದಳಿಯ ಬನಕೆ ಹೋಗಿ ಮುಟ್ಟ್ಯಾಳಮ್ಮ ॥ ೧೨ ॥

ಚೆನ್ನಮಲ್ಲಿಕಾರ್ಜುನನೇ ಗಂಡನೆಂದು ಹೇಳ್ಯಾಳಮ್ಮ
ಮಿತಿಇಲ್ಲದ ಸಂತೋಷ ಆಗ್ಯಾಳಮ್ಮ
ಅವಳು ಕೊನೆಯಿಲ್ಲದ ಸಂತೋಷ ಆಗ್ಯಾಳಮ್ಮ ॥ ೧೩ ॥

ವೀರಜಗದ್ಗುರು ಇಲ್ಲಿ ಬಂದಾರಮ್ಮಾ
ವೀರತಪೋ ನಿಧಿ ಇಲ್ಲಿ ಬಂದಾರಮ್ಮಾ
ನಾವೆಲ್ಲ ಶಿರಬಾಗಿ ನಮಿಸಬೇಕಮ್ಮ ॥ ೧೪ ॥

– ಶ್ರೀಮತಿ ಸರಸ್ವತಿ ಗದಗೆಪ್ಪ ಧಬಾಲೆ

***

ಸತ್ಯ ಶರಣೆ ಅಕ್ಕಮಹಾದೇವಿ

ಸತ್ಯೆ ಶರಣೆ ಮಾದೇವಿ ಅಕ್ಕ
ದೇಹ ಪವಿತ್ರ ಮಾಡ್ಯಾಳ ನಿಕ್ಕ
ಕೌಶಿಕಾನ ಮುರದಾಳ ಸೊಕ್ಕ
ಶರಣಾರ ಪಾದಕ ॥ ಪ ॥

ಉಡತಡಿ ಗ್ರಾಮದಲ್ಲಿ
ಉದ್ಭವಿಸಿ ಬಂದಾಳಾಕಿ
ಭಕ್ತಿಭಾವ ನೀತಿಯಲ್ಲಿ
ಬೆಳಕು ಭಾಳ ಇರುವುದಲ್ಲಿ
ಕೌಸಿಕಾನ ಮುರದಾಳ ಸೊಕ್ಕ
ಶರಣಾರ ಪಾದಕ ॥ ೧ ॥

ಭವದೊಳು ಹೆಣ್ಣಾಗಿ ಹುಟ್ಟಿ
ವೈರಾಗ್ಯ ಅವತಾರ ತೊಟ್ಟಿ
ಮಾಯ ಮೋಹ ಮೊದಲಿಗೆ ಸುಟ್ಟಿ
ಕೈಯಲ್ಲಿ ರುದ್ರಾಕ್ಷಿ ಕಟ್ಟಿ
ಕೌಸಿಕಾನ ಮುರದಾಳ ಸೊಕ್ಕ
ಶರಣಾರ ಪಾದಕ ॥ ೨ ॥

ಶರಣರ ಸಂಗವ ನೋಡಿ
ಪ್ರಭುದೇವರ ದರುಶನ ಮಾಡಿ
ಮುಕ್ತಿಮಾರ್ಗ ವರವು ಬೇಡಿ
ಕೇಶರಾಶಿ ಬಿಟ್ಟಾಳ ಜಾಡಿ
ಕೌಶಿಕಾನ ಮುರದಾಳ ಸೊಕ್ಕ
ಶರಣಾರ ಪಾದಕ ॥ ೩ ॥

ಮಹಾದೇವಿ ಅಕ್ಕನ ಮಹಿಮಾ
ಕೇಳಿರಿ ನೀವು ತಾಯಮ್ಮ
ಕದಳಿ ಬನಾ ಸೇರ್ಯಾಳಮ್ಮ
ಅಮರ ಕೀರ್ತಿ ಪಡದಾಳಾಕಿ
ಕೌಸಿಕನ ಮುರದಳ ಸೊಕ್ಕ
ಶರಣಾರ ಪಾದಕ ॥ ೪ ॥

ನಡಿರವ್ವಾ ಅಕ್ಕತಂಗಿ
ನೀತಿ ಪ್ರಾಯ ಪ್ರೇಮದ ಜ್ಯೋತಿ
ತವರು ಮನಿಗಿ ಅಪಕೀರ್ತಿ
ತರುಭ್ಯಾಡ ಪತಿವರುತಿ
ಕೌಸಿಕಾನ ಮುರದಾಳ ಸೊಕ್ಕ
ಶರಣಾರ ಪಾದಕ ॥ ೫ ॥

ಶ್ರೀಶೈಲಕಾಗಿದಿ ಐಕ
ಹೊಂದಿದಿ ಮಲ್ಲಯ್ಯನ ಪಾದಕ
ಆಂಧ್ರದಲಿ ನಿನ್ನ ಬೆಳಕ
ಅಂದ್ಹಿನ್ಹಿಡದು ಇಂದಿನ ತನಕ
ಕೌಸಿಕನ ಮುರದಾಳ ಸೊಕ್ಕ
ಶರಣಾರ ಪಾದಕ ॥ ೬ ॥

ಅನುಭವ ಆತ್ಮವ ತೊಳೆದು
ಸೀರಿ ಕುಬುಸ ಎಲ್ಲವು ಕಳೆದು
ಕಲ್ಲು ಮುಳ್ಳು ಎಲ್ಲವ ತುಳಿದು
ಕಲ್ಯಾಣಕ ಬಂದಳ ಸುಳಿದು
ಕೌಸಿಕನ ಮುರದಾಳ ಸೊಕ್ಕ
ಶರಣಾರ ಪಾದಕ ॥ ೭ ॥

– ಶ್ರೀಮತಿ ರೇಖಾ ರಾಮಶೆಟ್ಟಿ ಕಾಡಾದಿ ಹಾಗೂ
– ಶ್ರೀಮತಿ ಜಗದೇವಿ ರಾಜಣ್ಣ

***

ಮಹಾದೇವಿ ಅಕ್ಕಬಾರೆ

ಮಹಾದೇವಿಯಕ್ಕ ಬಾರೆ
ಇಹಪರದ ಸುಖವ ತೋರೆ
ಮಹಾದೇವಿಯಕ್ಕ ಬಾರೆ ॥ ಪ ॥

ಉಡುತಡಿಯ ಗ್ರಾಮದಲ್ಲಿ
ಶಿವಶರಣಿ ಸುಮತಿ ತಾಯಿ
ಶಿವಭಕ್ತ ನಿರ್ಮಲರಿಗೇ
ಮಗಳಾಗಿ ಹುಟ್ಟಿ ಬಂದೀ
ಮಹಾದೇವಿಯಕ್ಕ ಬಾರೆ ॥ ೧ ॥

ಹದನಾಲ್ಕು ವರ್ಷ ಕಳೆದು
ಮದುವೆಯ ಮಾಳ್ವೆನೆಂದೂ
ಶಿವ ಎನಗೆ ಗಂಡನೆಂದೂ
ಮುದದಿಂದ ತಂದೆ ಕೇಳಲು
ಮಹಾದೇವಿಯಕ್ಕ ಬಾರೆ ॥ ೨ ॥

ಕೌಶಿಕನ ಮೋಹ ಜರೆದು
ಕರೆದವನ ಗರ್ವ ಮುರೆದು
ಕೇಶಗಳ ವಸ್ತ್ರ ನಿಧರಿಸಿ
ಶಿವಕುಲಕೆ ಕೀರ್ತಿ ತಂದೀ
ಮಹಾದೇವಿ ಅಕ್ಕ ಬಾರೆ ॥ ೩ ॥

ಸಂಸಾರ ಸುಖವ ತ್ಯಜಿಸಿ
ವೈರಾಗ್ಯ ಶಾಲೆ ಎನಸಿ
ಕದಳೀ ಬನಕ್ಕೆ ಪೋಗಿ
ಅಘೋರ ತಪವ ಜರಸೀ
ಮಹಾದೇವಿ ಅಕ್ಕ ಬಾರೆ ॥ ೪ ॥

ಭವಿಗಳ ಮತವ ಜರೆದು
ದೇಹದ ಹಂಗ ತೊರೆದು
ಮೋಹದ ಸ್ರಾಪ ಹರಿದೂ
ಮೋಕ್ಷಕ್ಕೆ ದಾರಿ ಹಿಡಿದು
ಮಹಾದೇವಿ ಅಕ್ಕ ಬಾರೆ ॥ ೫ ॥

ವಚನಗಳ ಮಳೆಯ ಸುರಸಿ
ಶಿವಶರಣರೊಳಗೆ ಜಯಸಿ
ಶಿವಮತವನ್ನು ಉದ್ಧರಿಸೀ
ಶಿವಕುಲಕೆ ಕೀರ್ತಿ ತಂದೀ
ಮಹಾದೇವಿ ಅಕ್ಕ ಬಾರೇ ॥ ೬ ॥

ಶ್ರೀಶೈಲ ಗಿರಿಯನೇರಿ
ಕೆಂಜಡಿಯ ಶಿವನ ಸೇರಿ
ಶಾಶ್ವತ ಸುಖವ ಬೀರಿ
ನವ ಯುಗಕೆ ಶಾಂತಿ ತಂದೀ
ಮಹಾದೇವಿ ಅಕ್ಕ ಬಾರೆ ॥ ೭ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ
– ಶ್ರೀಮತಿ ಬಸ್ಸಮ್ಮ ಚೆನ್ನಯ್ಯ ಸ್ವಾಮಿ ಹಿರೇಮಠ
– ಶ್ರೀಮತಿ ಪಾರ್ವತಿ ಜೇಮಶೆಟ್ಟಿ ಹಾಗೂ ಶ್ರೀಮತಿ ಭೀಮಬಾಯಿ ಕುಲಕರ್ಣಿ

***

ಅಕ್ಕಮಹಾದೇವಿ

ಸೃಷ್ಟಿಯೊಳಗ ದೇವಿ ಶ್ರೇಷ್ಠ ಅನಸ್ಯಾಳ । ಕಲ್ಯಾಣ ತಾಲೂಕದಾಗ
ಚಿಕ್ಕ ವಯದಾಗ ಚೊಕ್ಕ ಕಾಣಲಾಕ । ಮಾನವ ರೂಪದಾಗ ॥ ಪ ॥

ಶಂಕರನ ಸತಿ ಹೆಸರು ಮಾದೇವಿ । ಇತ್ತು ಮೊದಲಿನ ಕಾಲದಾಗ ।
ಎರಡನೆಯ ಬಾರಿಗಿ ಪಾರ್ವತಿ । ಎಂಬ ಹೆಸರು ಬಂತು ನಿನಗ ।
ಸಾಕ್ಷಾತ ದೇವಿ ನೀನೇ ಎಂದು । ತಿಳಿದಾರ ಜನ ನಿನಗಾ ।
ಕಲ್ಪನಾ ಇಲ್ಲದಾಂಗ ಇರಬ್ಯಾಡ । ತಾಯಿ ಈ ಮಾನವರದಾಗ ॥ ೧ ॥

ಬಿಜ್ಜಳನ ರಾಜನ ದಾಳಿ ಬಿತ್ತು । ಬಸವಣ್ಣನ ಮ್ಯಾಗ ।
ತಾಳಿ ತಾಳಿ ಬಸವಣ್ಣ । ಹೋಗಿದ ಕೂಡಲ ಸಂಗಮಕ ।
ಕಲ್ಯಾಣ ನಾಡಿನಾಗ । ಹುಟ್ಟಿ ಬಂದೀದಿ ಶರಣರ ಸ್ಥಳದಾಗ ।
ಯಾನಗುಂದಿ ಮಾಣಿಕಮ್ಮನ । ತಂಗಿ ಅನಬೇಕವ ನಿನಗ ॥ ೨ ॥

ಲಾಲೂಚಿ ಕೋರರು ಬರತಾರ । ನಿನ್ನಲ್ಲಿ ನಾಚಿಕೆ ಇಲ್ಲದಾಂಗ ।
ನಾಲ್ಕು ಹಾದಿ ಕಾಯಿಕೊಂಡು । ಇದ್ದಿ ಖರೆ ನಿನ್ನ ಮನಸಿನಾಗ ।
ದುಡಿಯಲಾರದ ಜನ ದ್ರವ್ಯ । ಸಿಗಲಿಲ್ಲಂತ ಬರತಾರ ನಿನ್ನಗುಡಗಿ ।
ಅವರ ಮನಿಯಾಗ ಗಟ್ಟಿ ಅದಾ । ತೆಗೆ ಅಂತರವ್ವ ನಿನಗಾ ॥ ೩ ॥

ಮೈನತ ಮಾಡಿ ಉಂಡರ । ಬರಕತ ಕೊಡಬೇಕು ಜನರೀಗ ।
ಮಾಡಿ ಉಣ್ಣವಲ್ಲದ ಮಂದಿ । ಭಾಗ್ಯ ಬೇಡತಾರ ನಿನಗಾ ।
ಏಕ ನಿಷ್ಠಿ ಏಕನುಡಿ । ಮಹಾದೇವಿ ಆದಿ ನುಡಿದಾಗ ।
ವಿಚಾರ ಇಲ್ಲದ ವಿರಶೈವ । ರಚನೆ ಬರದಿದಾನ ಹಿಂಗಾ ॥ ೪ ॥

***

ಶಿವಭಜನಿ ನಾದ ಮಾಡುತಾ

ಹರೆಯ ಹೊತ್ತಲೆದ್ದು ಹರಭಕ್ತರಗಿ ಎಬ್ಬಿಸುತಾ
ಮಾದೇವಿ ಹೊಂಟಾಳ ಹರುಷದಿ
ಮಾದೇವಿ ಹೊಂಟಾಳ ಹರಭಕ್ತರಗಿ ಎಬ್ಬಿಸುತಾ
ಶಿವಭಜನೆ ನಾದ ಮಾಡುತಾ ॥ ಪ ॥

ನಸುಕಿನ ನಾಲ್ಕಕ ಖುಸಿಯಿಂದ ತಾ ಎದ್ದು
ಹಸಿ ವಿಭೂತಿ ಹಣೆಗಿಟ್ಟು
ಹಸಿ ವಿಭೂತಿ ಹಣಿಗಿಟ್ಟು ಮಾದೇವಿ
ಶರಣರಿಗಿ ಎಬ್ಬಿಸುತಾ ಹೊಂಟಾಳ ॥ ೧ ॥

ಕಿಡಿಗೇಡಿ ನಾಕ ಜನ ಕೂಡ್ಯಾರ ಒಂದಿನ
ಮಾದೇವಿಗಿ ಹಾದ್ಯಾಗ ತಡದಾರ
ಮಾದೇವಿಗಿ ಹಾದ್ಯಾಗ ತಡೆದು ತಾ ಕೇಳ್ಯಾರ
ನೀ ಮಾಡೋ ಕಾಯಕದ ಹೆಸರೇನು ॥ ೨ ॥

ನಾ ಮಾಡ ಕಾಯಕ ನಿಮಗ್ಯಾಕ ಹೇಳಲಿ
ಶಿವಶರಣರಿಗಿ ತಿಳದಾದ ನನ ಕಾಯಕ
ಶಿವಶರಣರಿಗಿ ತಿಳದಂತ ಗುಟ್ಟದು
ಕಿಡಿಗೇಡಿ ಜನರ್ಹ್ಯಾಂಗ ತಿಳದಾರು ॥ ೩ ॥

ಕಿಡಿಗೇಡಿ ಜನರೆಲ್ಲ ಸಿಟ್ಟಿಗಿ ಎದ್ದಾರ
ಮಾದೇವಿ ಮ್ಯಾಲ ಕೈಯೆತ್ತಿ
ಮಾದೇವಿ ಮ್ಯಾಲರ ಕೈಯತ್ತಲು ಆ ಕೈಯ
ನಿಂತಾವ ಹಂಗೆ ಸೆಟಗೊಂಡು ॥ ೪ ॥

ಬೆಳ್ಳನ ಬೆಳಕಾಗಿ ಸುದ್ದಿಯ ಹರಿಯಲು
ಓಡೋಡಿ ಬಂದಾರ ಜನರೆಲ್ಲ
ಓಡೋಡಿ ಬಂದಂತ ಜನರೆಲ್ಲ ನೋಡ್ಯಾರ
ಕಾಣದಾ ಅದ್ಭುತ ಕಂಡಾರ ॥ ೫ ॥

ಬಿಜ್ಜಳ ಬಂದಾನ ಮಂತ್ರಿಯು ಬಂದಾರ
ದೊಡ್ಡಮಂತ್ರಿ ಬಸವಣ್ಣ ಬಂದಾರ
ದೊಡ್ಡಮಂತ್ರಿ ಬಸವಣ್ಣ ಬಂದು ತಾ ನೋಡ್ಯಾರ
ಕ್ಷಣದಾಗ ತಿಳದಾರ ಇದರರ್ಥ ॥ ೬ ॥

ಬೈಯ್ದಂತ ಶರಣೆಗಿ ಬಾಗಿನೀವು ನಿಂತರ
ನಿಮ್ಮ ಕೈಯ ಕೆಳಗ ಇಳದಾವು
ನಿಮ್ಮ ಕೈಯ ಕೆಳಗ ಇಳದಾವು ಇಲ್ಲಂದರ
ಹಿಂಗೆ ನಿಂತಾವು ತಿಳಕೋರಿ ॥ ೭ ॥

ಮಾದೇವಿಗಿ ಕರಿತಾರ ಬಾಗಿತಾ ನಮಿಸ್ಕಾರ
ತಿಳಿಲಾರದೆ ನಡದಾದ ಹೀಂಗೆಂದು
ತಿಳಿಲಾರದೆ ನಡದಾದ ನಮತಾಯಿ ನಮಗರ
ಮಕ್ಕಳು ನೀನೆಂದು ತಿಳಿಯವ್ವ ॥ ೮ ॥

ಮಾದೇವಿ ಬಾಗುತ್ತಾ ಶಿವಶಿವಾಯೆನುತಾ
ಕೈಯಮ್ಯಾಲ ಕೈ ಇಟ್ವಾಳ
ಕೈಮ್ಯಾಲ ಕೈಯ ಇಡವಲು ಆಕ್ಷಣಕ
ಕೈಗಳು ಇಳದಾವ ಕೆಳಗರ ॥ ೯ ॥

ಮಾದೇವಿ ಭಕುತಿಗಿ ಜನರೆಲ್ಲ ಬೆರಗಾಗಿ
ನಿಂತಲೆ ಕೈಯ ಮುಗಿತಾರ
ನಿಂತಲೆ ಕೈ ಮುಗಿತಾರ ಬಸವಣ್ಣ
ಹಿಗ್ಗಿಲಿ ಹರಸ್ಯಾರ ಮಾದೇವಿಗಿ ॥ ೧೦ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಕದಳಿಯನ್ನು ಗೆದ್ದ ಮಹಾದೇವಿ

ಕಲ್ಯಾಣ ಎಂಬುದು ಸನಿ ಅದ
ಕದಳಿ ಎಂಬುದು ದೂರ ಅದ
ಕದಳಿಯ ಹಾದಿ ಕಲ್ಯಾಣದಾಗ ಅರತು
ಮುಂದಕ ನಡೆದಾಳ ಮಾದೇವಿ ॥ ೧ ॥

ಕದಳಿಯೆಂಬುದು ಭವಘೋರದ
ತಿಳಿಲಾಕ ಬಂದಾತು ಮುಪ್ಪರ
ತಿಳದಾಳ ಹಾದಿ ಬಲುಬೇಗ ಮಾದೇವಿ
ಸಾಧಿಸಿ ತೋರ್‍ಯಾಳ ಅದರಾಗ ॥ ೨ ॥

ಹಾವದ ಹುಲಿ ಅದ ಕರಡಿಯು ಒಳಗ ಕುಂತದ
ಹಾವಿನ ವಿಷವ ಇಳಸ್ಯಾಳ
ಹುಲಿಯ ಮೀಸೆಯ ತಿರುವ್ಯಾಳ
ಕರಡಿಯ ಕೂದಲು ಕಿತ್ತ್ಯಾಳ ॥ ೩ ॥

ಸುತ್ತೆಲ್ಲ ಕತ್ತಲು ಒಬ್ಬಳೆ ಕುಂತಾಳ
ಬೆಳಕಾಗ ಹರದಾದ ಒಳಗೆಲ್ಲ
ಬೆಳಕಿನ ಒಳಗ ಕಂಡಾಳ ಶಿವನಿಗಿ
ಕದಳಿಯು ಎಂಬುದು ಗೆದ್ದಾಳ ॥ ೪ ॥

– ಶ್ರೀಮತಿ ಕಾಡಾದಿ ಗೌರವ್ವ

***

ಆರುತಿ ಹಾಡು

ಎತ್ತಿರಿ ಆರುತಿ ಅಕ್ಕ ಮಹಾದೇವಿಗೆ
ವೈರಾಗ್ಯ ತಾಳಿದಳು ನಮ್ಮ ಹಿತಕೆ
ಅಕ್ಕ ತಂಗಿಯರೆಲ್ಲಾ ಕೇಳಿರಿ ನೀವು
ಅಕ್ಕ ಮಹಾ ದೇವಿಯ ವಚನಗಳು ॥ ಪ ॥

ದಿಕ್ಕಗಾಣದೆ ಬಳಲುತಿರಲು
ಅಕ್ಕ ತಂಗಿ ಯರೆಲ್ಲ ಕೂಡಿ
ತಕ್ಕ ಹಾದಿ ದೊರೆಯಲೆಂದೆ
ಚೊಕ್ಕಾಗಿ ಬರೆದಿಹಳು ॥ ಎತ್ತಿರಿ ಆರುತಿ ॥ ॥ ೧ ॥

ನಾರಿಯರೆಲ್ಲರೂ ಸೆರೆಮನೆ ಸೇರಿದರು
ವೀರ ವೈರಾಗ್ಯವ ತಾಳಿಹಳು
ವೀರ ಪುರುಷಳು ಆಗಿ ಅಕ್ಕ
ಅರಸನನ್ನು ಸೋಲಿಸಿದಳು
ಧೀರತನದಲ್ಲಿ ದುಷ್ಟ ಜನರನ್ನು ಮೆಟ್ಟಿ
ತಾ ಪಾರಾದಳು ॥ ಎತ್ತಿರಿ ಆರುತಿ ॥ ॥ ೨ ॥

ಪ್ರಭುದೇವ ಚೆನ್ನಬಸವಣ್ಣ ದೇವರು
ಅಕ್ಕನ ಬುದ್ಧಿಗೆ ದಂಗಾದರು ಜ್ಞಾನದ ಜ್ಯೋತಿ
ಬೆಳಗಲಿ ಆದಿಶಕ್ತಿ ಅವತಾರ ನೀನು
ನಿತ್ಯ ನಿನ್ನಯ ಸ್ಮರಣವನ್ನು ಮಾಡುವಂತ
ಜ್ಞಾನ ನೀ ಕೊಡು ॥ ಎತ್ತಿರಿ ಆರುತಿ ॥ ॥ ೩ ॥

ಶರಣರ ಹುಡುಕುತ ಅನುಭವ ಪಡೆಯುತ
ಅನುಭವ ಮಂಟಪ ತಾ ಕಂಡಳು
ಶರಣರೊಡನೆ ತಾ ವಾದ ಮಾಡಿ ಸ್ತ್ರೀ ಪುರುಷರ
ಸಮವು ಬೇಡಿ ಮೀರಿದಂತ ಜ್ಞಾನಿಯೆನಿಸಿ
ಶಿವಶರಣೆಯಾದಳು ॥ ಎತ್ತಿರಿ ಆರುತಿ ॥ ॥ ೪ ॥

ಸವಿದಾ ಸಕಲಗಳ ಬಿಟ್ಟು ಅಡವಿ ಅರಣ್ಯದೊಳು
ಹುಡುಕುತ ನಡೆದಳು ಶಂಕರನ
ಹುಲಿ ಕರಡಿ ಸಿಂಹಗಳ ಕೇಳುತ ನಡೆದಳು ಕಂಡಿರೇನಯ್ಯ
ನೀವು ಸಾಂಭಸಿವನ ಹಂಬಲಾಗಿ ಬೆಂಬಲ ಮೂರ್ತಿ
ಕದಳಿ ಬನವು ಕಂಡಳಾಕೆ ಶ್ರೀ ಚೆನ್ನಮಲ್ಲಿಕಾರ್ಜುನನ
ಪಾದಕ್ಕೆ ಹೊಂದಿಯಳು ॥ ಎತ್ತಿರಿ ಆರುತಿ ॥ ॥ ೫ ॥

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ ಹಾಗೂ
ಅನ್ನಪೂರ್ಣ ದೇವಣಿ, ಸರ್ವಮಂಗಳಾ ಜೋಗೂರ

***

ಅಕ್ಕಮಹಾದೇವಿ ಹಾಡು

ಮದುವೆಯ ಮಾಡಿದರು ಲಿಂಗಯ್ಯಗೊಂದು
ಮದುವೆಯ ಮಾಡಿದರು ॥ ಪ ॥

ಮದುವೆಯ ಮಾಡಿದರು ಭುವನ ಕೈಲಾಸದೊಳು
ಸಡಗರದಿಂದಲಿ ಅಮರಗಣಂಗಳು
ಮದುವೆಯ ಮಾಡಿದರು ॥ ೧ ॥

ಬಸವಯ್ಯ ಬಂಡಿಹೂಡಿ ನಾವು ನಿಬ್ಬಣದವರು
ಮದುಮಗ ಸಂಗಯ್ಯ ಶಿವಶರಣೆರು ಮುತ್ತೈದೆರು
ಮದುವೆಯ ಮಾಡಿದರು ॥ ೨ ॥

ಪಚ್ಚದ ಮಾಲಿನೊಳು ಪವಳದ ಮೇಲ್ಕಟ್ಟು
ರನ್ನ ತೋರಣಕಟ್ಟಿ ಮುತ್ತಿನ ಶ್ಯಾಶಿಯನಿಟ್ಟು
ಮದುವೆಯ ಮಾಡಿದರು ॥ ೩ ॥

ಕರಕೆ ಕಂಕಣ ಕಟ್ಟಿ ಶಿರಕೆ ಶ್ಯಾಶಿಯನಿಟ್ಟು
ದೃಢವುಳ್ಳ ಎನ್ನಯ್ಯ ಚೆನ್ನಮಲ್ಲಿಕಾರ್ಜುನಗ
ಮದುವೆಯ ಮಾಡಿದರು ॥ ೪ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಉಡುತಡಿ ಮಹಾದೇವಿ

ಉಡುತಡಿ ಮಹಾದೇವಿಯ ನಿನಗೆ ಶರಣು ಶರಣಾರ್ತಿ
ಅಕ್ಕಾ ಶರಣು ಶರಣಾರ್ತಿ ॥ ಪ ॥

ಹೆಂಗುಸಿನಂಗವ ನೋಡಿ ಶರಣರೆ
ಪಂಗುಜ ಹುವನವ ನೋಡಿ ಪ್ರಮಥರೇ
ಲಿಂಗದೃಷ್ಟಿಯಲಿ ತಾ ಮೆರದಿಹಳು
ಶರಣು ಶರಣಾರ್ತಿ ಅಕ್ಕಾ ಶರಣು ಶರಣಾರ್ತಿ ॥ ೧ ॥

ಬಸವನ ಭಕ್ತಿಯ ಪರುಷದ ಖಣಿಯೆ
ಚೆನ್ನ ಬಸವನ ಜ್ಞಾನದ ಮಣಿಯೆ
ಪ್ರಭುದೇವರ ವೈರಾಗ್ಯದ ದೇವತೆ
ಶರಣು ಶರಣಾರ್ತಿ । ಅಕ್ಕ ಶರಣು ಶರಣಾರ್ತಿ ॥ ೨ ॥

ತನುಮನ ಧನವನ್ನೆಲ್ಲವ ತೊರೆದು
ಒಣವಸಿ ಆದಿಗಳೆಲ್ಲವ ಜರೆದು
ಪೊಣದಿಂ ಶ್ರೀ ಗುರುನಾಥನ ಬೆರೆತು
ಶರಣು ಶರಣಾರ್ತಿ । ಅಕ್ಕ ಶರಣು ಶರಣಾರ್ತಿ ॥ ೩ ॥

– ಶ್ರೀಮತಿ ಚಂದ್ರಕಲಾ ಭೈರಿ

***

ಅಕ್ಕಮಹಾದೇವಿಗೆ ಮಂಗಲ

ತಾಯಿ ಸುಮತಿದೇವಿ ತಂದೆ ನಿರ್ಮಲಸೆಟ್ಟಿ
ಪುಣ್ಯಾತ್ಮರ್ಹೊಟ್ಟೆಲಿ ಹುಟ್ಟ್ಯಾಳವ್ವ
ಪುಣ್ಯಾತ್ಮರ್ಹೊಟ್ಟೆಲಿ ಹುಟ್ಟ್ಯಾಳ ಶುಭದಿನದಿ
ಮಹಾದೇವಿನಂತ ಕರೆದಾರ.

ಕೂಸಿನ ನೋಡಿದರ ಪಾರ್ವತಿಯ ಸಾತ್ವಿಕ ಕಳೆ
ಸರಸತಿಯ ಸಹಜ ಕೌಶಲ್ಯ
ಲಕ್ಷ್ಮಿಯ ಸೌಂದರ್ಯ ಸಂಪತ್ತು ಭುವಿಗವತರಿಸಿದೆ ನೋಡೆ
ದೇವಿಶಕ್ತಿಯ ಪ್ರತಿರೂಪ.

ಬಾಲಲೀಲೆಯಲಿ ಆಟವನಾಡುತ
ಪಾಠವ ಕಲಿತಳ ಮಾದೇವಿ

ಶರಣಧರ್ಮದ ಶಾಸವ ಕಲಿತಾಳ
ಜ್ಞಾನದ ನಿಧಿಯೆಂದು ಹೆಸರಾಗೆ.

ಶಿವನ ಪೂಜೆಗೆಂದು ಹೂಪತ್ರಿ ತರುವಾಗ
ರಾಜಾ ಕೌಶಿಕನ ಮನಸೆಳೆದ
ರಾಜಾ ಕೌಶಿಕನ ಮನಸೆಳೆದ ಮಾದೇವಿನ
ಕರೆತನ್ನಿರೆಂದು ಕಳಿಸ್ಯಾನ.

ಸೇವಕಿಯರು ಬಂದಾರ ಅರಸನಿಂಗಿತ ತಿಳಿಸ್ಯಾರ
ಮಹಾದೇವಿ ಮದುವೆಂತ ಹೇಳ್ಯಾರ
ಮಹಾದೇವಿ ಮದುವೆಂತ ಕೇಳಿದ ಶರಣರು
ಜೈನ ಭವಿಯೆಂದು ನಿರಾಕರಿಸೆ.

ಮಹಾದೇವಿ ಹೊರಬಂದು, ಅಪ್ಪ ಅವ್ವಗ್ಹೇಳ್ಯಾಳ
ಅಂತಃಪುರಕ ನಾ ಹೋಗುವೆನೆಂದ
ಅಂತಃಪುರಕ ಹೋಗಿ, ಅರಸಗ ಹೇಳ್ಯಾಳ,
ನನ್ನ ಮೂರು ಮಾತಿಗೆ ಒಪ್ಪಿದರೆ.

ಮಹಾದೇವಿ ಹೇಳ್ಯಾಳ ಶಿವದೀಕ್ಷೆ ಪಡೆಯಿರಿ
ಇಷ್ಟಲಿಂಗ ಧರಿಸಿರಿ ಭಸ್ಮ ರುದ್ರಾಕ್ಷಿ ಧರಿಸಿರಿ
ಭಸ್ಮ ರುದ್ರಾಕ್ಷಿ ಧರಿಸಿದರೆ ಮಾತ್ರವೆ
ನಮ್ಮ ನಿಮ್ಮ ಮದುವೆಂದು ಹೇಳ್ಯಾಳ.

ಆಡೀದ ಮಾತಿಗೆ ತಪ್ಪಿದ ಅರಸನು
ಮುಟ್ಟಲ್ಹೋದ ಮಹಾದೇವಿನ
ಮುಟ್ಟಲ್ಹೋದ ಅರಸನಿಗೆ ದೇಹದೊಳಗೆ
ಉರಿಬೆಂಕಿ ಹತ್ತಿ ಹೊರಳಾಡಿ.

ತಕ್ಷಣವೆ ಮಾದೇವಿ ಕೇಶಾಂಬರ ಧರಿಸಿ
ಅರಸನ ಸ್ಥಿತಿಗತಿ ನೋಡ್ಯಾಳ
ಅರಸನ ಸ್ಥಿತಿಗತಿ ನೋಡಿದ ಮಹಾದೇವಿ
ವಿಭೂತಿ ಸಿಂಪಡಿಸಿ ತಣಿಸ್ಯಾಳ.

ಕೂಡಲೆ ಅರಸಗೆ ಜ್ಞಾನೋದಯವಾಯ್ತು
ರಾಜ ಕೇಳ್ಯಾನ ಕ್ಷಮೆಯನ್ನ

ರಾಜನು ಕೇಳ್ಯಾನ ಕ್ಷಮೆಯನ್ನ ಮಹಾದೇವಿಗೆ
ತಪ್ಪಾಯ್ತು ತಾಯಿ ನಮೋ ಎಂದಾ.

ಶರಣ ದಂಪತಿಗಳಿಗೆ ಮಗಳಸಂಗತಿ ತಿಳಿದು
ದುಃಖದ ಕಡಲು ಒಡೆಯಿತು
ದುಃಖದ ಕಡಲು ಒಡೆಯಿತು ಶರಣರಿಗೆ
ಮಗಳ ಕೇಶಾಂಬರ ನೋಡಿ ಚಿಂತಾಯ್ತು.

ವೀರವಿರಾಗಿಣಿ ವೈರಾಗ್ಯಶಾಲಿನಿ
ತಂದೆ ತಾಯಿಗೆ ಹೇಳ್ಯಾಳ
ತಂದೆ ತಾಯಿಗೆ ಹೇಳ್ಯಾಳ ಮಹಾದೇವಿ
ಚೆನ್ನಮಲ್ಲನ ಕೂಡುವೆನೆಂದು.

ಉಡುತಡಿಯ ಗ್ರಾಮದ ಗುರುಹಿರಿಯರೆ ಕಿರಿಯರೆ
ವಾರಿಗೀ ಗೆಳೆತಿರೆ ಬಂಧುಬಳಗವೆ
ವಾರಿಗೀ ಗೆಳೆತಿರೆ ಬಂಧುಬಳಗವೆ
ಹರುಷದಿ ಹರಸಿ ಕಳವಿರೆ.

ಹರಹರ ಶಿವಶಿವ ಮಲ್ಲಿನಾಥಾ ಎಂದು
ನೆನೆಯುತ ಕಲ್ಯಾಣಪಥ ಹಿಡಿದಾಳ
ನೆನೆಯುತ ಕಲ್ಯಾಣಪಥವ ಹಿಡಿದಾಳ ಮಹಾದೇವಿ
ಮಲ್ಲಯ್ಯ ಮಲ್ಲಯ್ಯ ಎನ್ನುತ.

ಕಲ್ಯಾಣ ಪುರದಾಗ ಅಲ್ಲಮನ ಮನದಾಗ
ದಿವ್ಯಜ್ಯೋತಿಯ ಆಗಮನ
ದಿವ್ಯಜ್ಯೋತಿಯ ಆಗಮನವಿದೆಯಂದು
ಅಲ್ಲಮ ಬಸವರು ಜ್ಞಾನದಿಂದ ತಿಳಿದಾರ.

ಅನುಭವ ಮಂಟಪದಿ ಅಲ್ಲಮನ ಸನ್ನಿಧಿಲಿ
ಬಸವ ಚೆನ್ನಬಸವ ನೀಲಾಂಬಿಕೆಯರ
ಬಸವ ಚೆನ್ನಬಸವ ನೀಲಾಂಬಿಕೆ ಗಂಗಾಂಬಿಕೆ
ಮೊದಲಾದ ಶಿವಶರಣರ ಸಮೂಹವೆ.

ಅನುಭವ ಮಂಟಪದಿ ಶರಣರ ಗೋಷ್ಠಿಲಿ
ಶಿವನವತಾರಿ ಅಲ್ಲಮನ ಕಂಡಾಳ

ಶಿವನವತಾರಿ ಅಲ್ಲಮನ ಕಂಡಾಳ
ಮಹಾದೇವಿ ನಮೋ ನಮೋ ಎಂದು ತಲೆಬಾಗಿ.

ಬಸವಾದಿ ಪ್ರಮಥರು ವೈರಾಗ್ಯಮೂರ್ತಿಯ
ಕಂಡು ಬೆರಗಾಗಿ ನೋಡ್ಯಾರ
ಕಂಡು ಬೆರಗಾಗಿ ನೋಡಿ ಕೇಳಿ ಅಲ್ಲಮ
ಇತ್ತ್ಯಾಕೆ ಬಂದೆಂದು ಕೇಳ್ಯಾರ.

ಅಲ್ಲಮ ಕೇಳ್ಯಾನ ಯೌವನದ ಸತಿ ನೀನು
ನಿನ್ನ ಪತಿಯ ಕುರುಹು ಹೇಳೆಂದ
ನಿನ್ನ ಪತಿಯ ಕುರುಹು ಹೇಳಿದರೆ ಕೂಡೆಂದ
ಇಲ್ಲದಿದ್ದರೆ ನೀನು ತೊಲಗೆಂದಾ.

ಶಿವನೆ ನನ್ನ ಪತಿಯಾಗಲೆಂದು ಪ್ರಭುವೆ
ಅನಂತಕಾಲ ತಪಸಿದ್ದೆ ಚೆನ್ನಮಲ್ಲಿಕಾರ್ಜುನ ನನ್ನ ಗಂಡ
ಚೆನ್ನಮಲ್ಲಿಕಾರ್ಜುನನೆ ನನ್ನ ಗಂಡನೆಂದು
ದೃಢವಾಗಿ ಹೇಳ್ಯಾಳ ಮಹಾದೇವಿ.

ಅಕ್ಕ ನಿಜ ನಿಲವ ಶರಣರಿಗೆ ತಿಳಿಸಲು
ಕೂದಲ ಮರೆಯ ಕಲ್ಪಿಸಿದ್ಯಾಕೆ
ಕೂದಲ ಮರೆಯ ಕಲ್ಪಿಸಿದ್ಯಾಕೆಂದು
ಪ್ರಭುದೇವ ಕೇಳ್ಯಾನ ಮಹಾದೇವಿಗೆ.

ಅಕ್ಕ ನಸುನಗುತ ಹೇಳ್ಯಾಳ ಕಾಯ ಕರ್‍ರಗಾದರೇನ
ಮಾಯ ಮಿಂಚಿದರೇನ ಚೆನ್ನಮಲ್ಲಿಕಾರ್ಜುನಗೊಲಿದ ಕಾಯ
ಚೆನ್ನಮಲ್ಲಿಕಾರ್ಜುನಗೊಲಿದ ಕಾಯವಿದು
ಹೇಗಿದ್ದರೇನೆಂದು ಹೇಳ್ಯಾಳ.

ಅನುಭವ ಮಂಟಪದ ಶರಣ ಶರಣೆಯರು
ಅಕ್ಕನ ಜ್ಞಾನ ವೈರಾಗ್ಯವ
ಅಕ್ಕನ ಈ ಜ್ಞಾನ ವೈರಾಗ್ಯವ ಕಂಡು
ಸಾಕ್ಷಾತ್ ಪಾರ್ವತಿಯ ದರ್ಶನವು.

ಅಲ್ಲಮಪ್ರಭುದೇವ ಬಸವ ಚೆನ್ನಬಸವ
ಅಕ್ಕನಾಗಲಾಯಿ ಶರಣ ಶರಣೆಯರ

ಅಕ್ಕನಾಗಲಾಯಿ ಶರಣ ಶರಣೀರು ಕೂಡಿ
ಶ್ರೀಶೈಲ ಗಿರಿಗ್ಹೋಗಲು ಹರಸ್ಯಾರ.

ದಟ್ಟ ಕಾಡಿನೊಳು ಬೆಟ್ಟಗುಡ್ಡದ ಸಾಲು
ಕೋಗಿಲೆ ಗಿಳಿವಿಂಡು ನವಿಲ್ಗಳ
ಕೋಗಿಲೆ ಗಿಳಿವಿಂಡು ನವಿಲ್ಗಳ ಕೇಳುತ
ಮಲ್ಲಯ್ನ ಕಂಡರೆ ತೋರಿರೆ.

ಹಸಿವು ತೃಷೆಗಳಿಲ್ಲ ನಿದ್ದೆ ನೀರಡಿಕಿಲ್ಲ
ಮಲ್ಲಿಕಾರ್ಜುನ ಮಲ್ಲಿಕಾರ್ಜುನ
ಮಲ್ಲಿಕಾರ್ಜುನನ ನೆನೆಯುತ ಹೊರಟಾಳ
ಮಲ್ಲಯ್ಯನ ಕಾಣುವ ಹಸಿವೊಂದೆ.

ಶ್ರೀಶೈಲಗಿರಿನೇರಿ ಕದಳಿ ಬನವ ಸೇರಿ
ಮಲ್ಲಿಕಾರ್ಜುನನ ನೆನೆಯುತ
ಮಲ್ಲಿಕಾರ್ಜುನನ ನೆನೆಯುತ ಹೊರಟಾಳ
ಚೆನ್ನಮಲ್ಲಿಕಾರ್ಜುನನ ಸ್ಮರಣೆಯ.

ಎಡಗೈಲಿ ಇಷ್ಟಲಿಂಗ ಬಲಗೈಲಿ ರುದ್ರಾಕ್ಷಿ
ಚೆನ್ನಮಲ್ಲಿಕಾರ್ಜುನನ ಧ್ಯಾನದಲೆ
ಚೆನ್ನಮಲ್ಲಿಕಾರ್ಜುನನ ಧ್ಯಾನವ ಮಾಡುತಲಿ
ಚೆನ್ನಮಲ್ಲಿಕಾರ್ಜುನ ಬಂದು ಅಪ್ಪಿಕೊಂಡ.

ಮುತ್ತಿನಾರತಿ ಎತ್ತಿ ಬೆಳಗಿರೆ
ಮೃತ್ಯುಂಜಯ ಸತಿಯಳಿಗೆ
ಮೃತ್ಯುಂಜಯ ಸತಿಯಳಿಗೆ ವೀರ ವಿರಾಗಿಣಿಗೆ
ಮಹಾಶಿವಶರಣೆ ಅಕ್ಕಮಹಾದೇವಿಗೆ.

ಅಂತರಾತ್ಮದಿ ಶಿವನ ಸ್ಮರಿಸುತ
ನಿತ್ಯ ಶಿವಪೂಜೆಗೈದಿಹೆ
ನಿತ್ಯ ಶಿವಪೂಜೆಗೈದಿಹೆ ದೇವನೊಲುಮೆಯ
ಹೂ ನೀನು ಶುದ್ಧ ಮನದಿ ಅರ್ಪಿಸಿದೆ.

ಜೀವನ ಸಾಗರದಲ್ಲಿ ಬಂದ ಸಂಕಟಗಳೆದುರಿಸಿ
ಭಕ್ತಿಸುಧೆಯ ಹರಿಸಿ

ಭಕ್ತಿಸುಧೆಯ ಹರಸಿ ನೀನು
ವಚನಗಳ ಮಳೆಯ ಸುರಿಸಿದೆ.

ಬಸವ ಅಲ್ಲಮರ ಸನ್ನಿಧಿಯಲಿ
ನಿನ್ನ ತರ್ಕವಗ್ಯೆದಿಹೆ
ನಿನ್ನ ತರ್ಕವಗ್ಯೆದಿಹೆ ವಾದದಲ್ಲಿ ಜಯಿಸಿದೆ
ಹೆಸರ ಗಳಿಸಿದೆ ತಾಯಿಯೆ ನೀನು.

ಲಿಂಗನಿಷ್ಠೆಯಲಿ ನೀನು
ಸಕಲಜ್ಞಾನವ ಪಡೆದಿಹೆ
ಸಕಲಜ್ಞಾನವ ಪಡೆದಿಹೆ ತ್ಯಾಗಮೂರ್ತಿಯಾಗಿ
ನೀನು ವೈರಾಗ್ಯವ ತಾಳಿದೆ.

ಮಲ್ಲಿಕಾರ್ಜುನನ ಹಂಬಲದಿ
ಅವನ ಧ್ಯಾನದ ಬಲದಲಿ
ಅವನ ಧ್ಯಾನದ ಬಲದಲಿ ನಿನ್ನ ನೀನವಗರ್ಪಿಸಿ
ಶಿವನ ಪ್ರೀತಿಯ ಗಳಿಸಿದೆ.

ಜ್ಞಾನ ಜ್ಯೋತಿಯ ಬೆಳಗಿದೆ
ಮುಕ್ತಿಪಥವ ಹೊಂದಿದೆ
ಮುಕ್ತಿಪಥವ ಹೊಂದಿದೆ ನಿನ್ನ ಕೀರ್ತಿಯು
ಜಗಕೆ ಇಂದು ಅಜರಾಮರವಾಗಿ ಉಳಿದಿದೆ.

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

೨. ಮುಕ್ತಾಯಕ್ಕನವರ ಪದ

ಅಜಗಣ್ಣನ ತಂಗಿ ನಿಜಗುಣಿ ಮುಕ್ತಾಯಿ

ಅಜಗಣ್ಣನ ತಂಗಿ ನಿಜಗುಣಿ ಮುಕ್ತಾಯಿ
ಪ್ರಭುವಿನ ಮನವ ತಾ ಗೆದ್ದು
ಕಲ್ಯಾಣದ ಶರಣರ ಒಳಗಿದ್ದು ॥ ಪ ॥

ಅಕ್ಕಮಹಾದೇವಿ ಅಕ್ಕಾಗಿ ಮುಕ್ತಾಯಿ ತಂಗ್ಯಾಗಿ
ಬಸವಣ್ಣನೆಂಬ ಅಣ್ಣನ ಪಡೆದಾರ
ಮಂಟಪದೊಳಗ ಜ್ಞಾನಿ ಎನಸ್ಯಾರ ॥ ೧ ॥

ಗಂಡ್ಹನ ಖಬರಗೇಡಿ ಕಂಡಾಂಗ ನುಡಿತಾನ
ಎಡವಟ್ಟಾಗಿ ಸಂಸಾರ ಮುಕ್ತಾಯಿದು
ಉಂಡಳ ಹಂಗ ಹಿಗ್ಗಿಲಿ ಹಿಗ್ಗಿಲಿ ॥ ೨ ॥

ತವರಿನ ಮನಿತನ ತನ್ನ ಗೋಳ ಒಯ್ಯುದಿಲ್ಲ
ಅವರಿವರ ಮುಂದ ಬಾಯರ ಬಿಟ್ಟಿಲ್ಲ
ಶಿವನಿಗಿ ನೆನಸುತಾ ಗಂಡನ ಸೇವೆ ಮಾಡ್ಯಾಳ ॥ ೩ ॥

ಅಣ್ಣ ಅಜಗಣ್ಣ ಲಿಂಗದೊಳಗಾಗಲು
ಕಣ್ಣೆರಡು ಕಳದ್ಹಾಂಗ ಮುಕ್ತಾಯಿ ಅಳತಾಳ
ಬೆಣ್ಣ್ಯಾಗ ಕೂದಲ ತೆಗೆದ್ಹಾಂಗ ಅವಳ ದುಃಖ
ಅಳಸ್ಯಾರ ಪ್ರಭುದೇವ ॥ ೪ ॥

ಮನಿಮಾರ ಬಿಟ್ಯಾಳ ಇದ್ದಿದ್ದು ಕೊಟ್ಟಾಳ
ನೆನಿಸುತಾ ಬಸವಗ ಕಲ್ಯಾಣಕ ಹೊಂಟಾಳ
ಕೊನಿತನ ಉಳಿದಾಳ ಆ ಊರಾಗ ॥ ೫ ॥

ಕಲ್ಯಾಣ ಊರಾಗ ದುಡಿದು ತಾ ಉಂಡಾಳ
ಬಸವನ ಮನಿ ಹಸು ಕಾಯ್ತಾಳ ಭಕುತಿಲಿ
ಕಾಯಕ ಮಾಡಿ ಉಣುತಾಳ ಹಿಗ್ಗಿಲಿ ॥ ೬ ॥

ಅರತಾಳ ಮುಕ್ತಾಯಿ ಹಿಗ್ಗಿಲಿ ವಚನವ ಬರೆದು
ಶರಣೆಯರ ನಡುವೆ ಹೊಳೆದಾಳ ಚುಕ್ಕಿ ಹಾಂಗ
ಅಣ್ಣಾಗ ತಂಗಿ ಆಗ್ಯಾಳ ಸೋಜಿಗ ॥ ೭ ॥

– ಶ್ರೀಮತಿ ಕಾಡಾದಿ ಗೌರವ್ವ

***

ಮುಕ್ತಾಯಕ್ಕನ ಹಾಡು

ಹಂತಿಯ ತುಳದೆತ್ತು ಅಂಗಳಕ ಬಂದಾವ
ಸುಂಕ ಜಾಡಸಮ್ಮ ಸೆರಗೀಲೆ । ಮುಕ್ತಾಯಿ
ಕಂಚಿನಾರುತಿ ಬೆಳಗಮ್ಮ ॥ ೧ ॥

ಬಂಡಿಯ ಕಟಬೇಕು ಅಣ್ಣ ಮುಂದಿರಬೇಕು
ಅಣ್ಣ ಅಜಗಣ್ಣನ ದರಿಸೀಣ । ಮಾಡಿದರೆ
ಮುಕ್ತಿಯ ನಮುಗ ದೊರಿವದು ॥ ೨ ॥

ಅಡಕೆ ಹೂವಿನ ಶಲ್ಯ ಹೆಡಕಿಮ್ಯಾಲ್ ಹಾಕ್ಕೊಂಡು
ಚೆಡುಕಿನ ಮ್ಯಾಲ ಬರುತಾನ । ಅಜಗಣ್ಣ
ಹತ್ತೂರು ನ್ಯಾಯ ಹರುದಾನ ॥ ೩ ॥

ಅಡ್ಡಗುಡ್ಡದ ನಡುವ ಒಡ್ಡೀತು ಮಳಿಮಾಡ
ದೊಡ್ಡವರು ಮಗ ಬಸವಣ್ಣ । ಬರುವಾಗ
ಒಡ್ಡದು ಮಾಡ ಬಯಲಾಗಿ ॥ ೪ ॥

ಹೊತ್ತ ಮುಣಗಿದರೇನ ಕತ್ತಲಾದರೇನ
ತಾಯಿ ನಿನ್ನಯ ದರಿಷೀಣ । ಮುಕ್ತಾಯಿ
ಶರಣರಿಗಿ ದರಿಶೀಣ ಕೊಡುತಾಯಿ ॥ ೫ ॥

ಏಳುತ್ತ ನೆನುದೇನು ಏಳೆಂಟ ದೇವರ್ನ
ಬಾಳಿಯ ಬನದ ಒಡಿಯನ

ಬಾಳಿಯ ಬನದ ಒಡಿಯ ಅಜಗಣ್ಣ
ಏಳುತ್ತ ಮೊದಲ ನೆನುದೇನ ॥ ೬ ॥

ಅಣ್ಣ ಬರ್‍ತಾನೆಂದು ಹಾದೀಯ ನೋಡಿದೆ
ಐಯ್ಯಯ್ಯೋ ಅಣ್ಣ ಬರಲಿಲ್ಲ । ಅಜಗಣ್ಣ
ಹಾಲು ನಿನಗಾಗಿ ತೆಗದೀನಿ ॥ ೭ ॥

ಅಣ್ಣನ ಕರಿತಾಳ ಮಾತೊಂದು ಕೇಳುತಾಳ
ವಚನ ಕೊಡಣ್ಣ ನನಗೊಂದು । ಅಜಗಣ್ಣ
ಗಂಡನ ಮನೀಗಿ ಹೊಗತೀನಿ ॥ ೮ ॥

ತಂಗಿಯ ಕಳವ್ಯಾನ ತೆವರೇರಿ ನಿಂತಾನ
ಅಂಗೀಲಿ ನೀರ ಒರಸ್ಯಾನ । ಅಣ್ಣಯ್ಯ
ಇಂದಿಗಿ ತವರ ಎರವಂದ ॥ ೯ ॥

ಮುಂಜಾನೆ ಎದ್ದಾಳ ಮೊಸುರಾವ ಕಡದಾಳ
ಕಟ್ಟೀದ ತುರಬು ಸಡಿಲ್ಯಾದ । ಮುಕ್ತಾಯಿ
ಉಟ್ಟಾವ ನಿಲಗಿ ಸಡಿಲ್ಯಾವ । ॥ ೧೦ ॥

ಮುಟ್ಟಿದ ಮೊಸರು ಕಲ್ಲಾಗಿ । ಮುಕ್ತಾಯ
ಕಣ್ಣೀರು ಸುರಿದು ಅಳುತಾಳ । ಮುಕ್ತಾಯಿ
ಅಲ್ಲಮ ಪ್ರಭುದೇವ್ರ ಬಂದಾನ ॥ ೧೧ ॥

ಬಂದು ನಿಂತಾನ ಪ್ರಭುದೇವ ಅಲ್ಲಿಗಿ
ಕಣ್ಣೀರು ತೆಗಿವದು ಸರಿಯಲ್ಲ । ಮುಕ್ತಾಯಿ
ಶರಣರ ಕುಲಕ ಸರಿಯಲ್ಲ ॥ ೧೧ ॥

ಶರಣರ ಕುಲಕ ತರವಲ್ಲ ಪ್ರಭುದೇವ
ಅಣ್ಣ ಅಜಗಣ್ಣ ಬಯಲಾಗಿ । ಮುಕ್ತಾಯಿ
ಶರಣರ ಕುಲಕ ಬೆಳಕಾಗಿ ॥ ೧೨ ॥

– ಶ್ರೀ ಪ್ಯಾಟೆಪ್ಪ ನಾಯಕ

***

೩. ಗುಡ್ಡಾಪುರದ ದಾನಮ್ಮನ

ಆರುತಿ ಬೆಳಗುವೆನು ದಾನಮ್ಮ ತಾಯಿಗೆ
ಆರುತಿ ಬೆಳಗುವೆನು ॥ ಪ ॥

ಆರುತಿ ಬೆಳಗುವೆ ಪಾದಕೆ ಎರಗುವೆ
ಬಂದ ಕಂಟಕವೆಲ್ಲ ಬಯಲು ಮಾಡುವೆ ತಾಯಿಗೆ ॥ ೧ ॥

ಗಂಧ ಕಸ್ತೂರಿ ಧರಿಸಿ ಹಣೆಗೆ ಕುಂಕುಮ ಹಚ್ಚಿ
ಚಾಜ ಗುರುವಿಗೆ ಕೊಟ್ಟು ಪತ್ತಲ ಉಡುವಳಿಗಾರುತಿ ಬೆಳಗುವೆನ ॥ ೨ ॥

ಮೂರು ಹೊತ್ತಿನ ಪೂಜೆ ಮುಡಿವ ಮಲ್ಲಿಗೆ ದಂಡಿ
ಎಲಿತಾಟು ಒಳಗಿಟ್ಟು ಊದು ಕರ್ಪೂರ ಬೆಳಗಿ ॥ ೩ ॥

ಉಡಿಯಕ್ಕಿ ಸಾಮಾನು ಬಗಡಿರುವ ನೆಲ್ಲಕ್ಕಿ
ಎಲಿತಾಟು ಒಳಗಿಟ್ಟು ಊದು ಕರ್ಪೂರ ಬೆಳಗಿ ॥ ೪ ॥

ಶರಣೆ ದಾನಮ್ಮ ನಿಮಗೆ ಕರುಣದಿಂದ ಅರ್ಪಿಸುವೆ
ಬಂದ ಭಕ್ತರನೆಲ್ಲ ಚಂದಾಗಿ ಸಲಹುವಾಕೆಗೆ ಆರುತಿ ಬೆಳಗುವೆ ॥ ೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

೪. ಬೊಂತಾದೇವಿ ನೀನೆಂದು

ಕಾಶ್ಮೀರ ರಾಜಾನ ಮಗಳು ಅವಳೆಂತ ಸುಗುಣಿ
ನಾಮದಲ್ಲಿ ನಿಜದೇವಿ ಕಲ್ಯಾಣಕ ಬಂದಾಳ ದೇವಿ ॥ ಪ ॥

ಶಿವಶಿವಾಯೆನ್ನುತ ಶಿವನಿಗೆ ನೆನಸುತಾ
ಬೆಟ್ಟ ಗುಡ್ಡವೆಲ್ಲಾ ಸುತ್ತ್ಯಾಳ ನಾರಿ
ಹಾದ್ಯಾಗ ಕುಜನರು ಹೇಳ್ಯಾರ ದೇವಿಗಿ
ಬತ್ತಲೆಯಾದರ ಸಿಕ್ಕಾನು ಶಿವನೆಂದು ॥ ೧ ॥

ಖೂಶರು ಆಡಿದ ಮಾತ ನಿಜವೆಂದು ತಿಳದಾಳ
ಗಳಗ್ಯಾಗ ಬಟ್ಟೆಯು ಕಿತ್ತು ಬೀಸಾಡ್ಯಾಳ

ನಕ್ಕಾರು ಜನಯೆಂದು ನಾಚಿಕಿ ಪಟ್ಟಿಲ್ಲ
ಲೋಕದ ಮಾತು ತಲಿಯೊಳಗಿಲ್ಲ ॥ ೨ ॥

ಹೊಂಟಾಳ ಶಿವ ಶಿವಯೆನುತ ಶಿವನಿಗೆ ನೆನಿಸುತ
ಕಲ್ಯಾಣ ಉಳದಾದ ಎರಡ ಹರದಾರಿ
ಸಾಕ್ಷಾತ ಶಿವನಾಗ ಚಿಂತೆಯು ಮಾಡ್ಯಾನ
ಜಂಗಮರ ವೇಷ ಖುದ್ದಾಗಿ ತಾಳ್ಯಾನ ॥ ೩ ॥

ನಿಜದೇವಿ ಎದುರಿಗಿ ನಿಂತಾನ ಯಾರೆಂದು ಕೇಳ್ಯಾಳ
ಖೌದಿ ಮಾರುವ ಕಾಯಕದವನು ನಾನು
ಖೌದಿಯು ಬೇಕಿಲ್ಲ ಜಮಖಾನಿ ಬೇಕಿಲ್ಲ
ಪರಮಾತ್ಮ ನಮಗ ಸಿಕ್ಕಾನೆಲ್ಲಿ ॥ ೪ ॥

ಸಾಕ್ಷಾತ ಶಿವ ಅವಳ ಭಕ್ತಿಗಿ ಒಲಿತಾನ
ಖೌದಿ ಮೈಗೆ ಹಚ್ಚಿ ಮಗಳೆಂದು ಕರಿತಾನ
ನಿಜದೇವಿ ನೀನಮ್ಮಾ ನಿಜಭಕ್ತಳು
ಕಲ್ಯಾಣ ಬಸವನ ಮಹಾಮಗಳಮ್ಮ ॥ ೫ ॥

ಕಲ್ಯಾಣಕ ಬಂದಾಳ ಕತೆ ತಂದು ಹೇಳ್ಯಾಳ
ಬಸವಣ್ಣ ಮಗಳೆಂದು ಕರಿತಾರ
ನಿಜದೇವಿ ನೀನಲ್ಲ ಬೊಂತಾದೇವಿ ನೀನೆಂದು
ಹೆಸರಿಟ್ಟು ಕರಿತಾರ ಬಸವಣ್ಣ ॥ ೬ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

೫. ಹರಳಯ್ಯನ ಮಡದಿ ಶರಣೆ ಕಲ್ಯಾಣಮ್ಮ

ಕಲ್ಯಾಣದ ಶರಣೇರು ಬಹಳ ಪತಿವ್ರತೇರು
ಹೇಳುವೆ ಕೇಳಿರಿ ಚರಿತೆಯು
ಕೇಳಿದರೆ ಜನ್ಮ ಪಾವನವು ॥ ಪ ॥

ಹರಳಯ್ಯನ ಮಡದಿಯು ಹರಶರಣೆ ಕಲ್ಯಾಣಮ್ಮ
ಕುಲದಲ್ಲಿ ಆಕೆಯು ಹೊಲೆಯಳು
ಗುಣದಲ್ಲಿ ಬಹಳ ದೊಡ್ಡವಳು
ಎಲೆ ಮರೆ ಕಾಯ್ಹಾಂಗ ಇರುತ್ತಿದ್ದಳೊ ॥ ೧ ॥

ಸರಳ ಸದ್ಗುಣೆಯು ಶಾಂತ ಚಿತ್ತಳು
ಸದುವಿನಯದ ಗಣಿಯವಳು
ಲಿಂಗದಾ ಪೂಜೆಯು ಮನಮುಟ್ಟಿ ಮಾಡುತಾ
ಲಿಂಗದ ನೆಲೆಯ ತಿಳದಾಳೊ ॥ ೨ ॥

ಹರಳನು ಕಂಡಾನ ಹಾದ್ಯಾಗ ಬಸವಗ
ಶರಣು ಎನ್ನುತಾ ಕೈಮುಗಿದ
ಕುದುರೆಯು ತಾ ಬಿಟ್ಟು ಕೆಳಗಿಳಿದು ಬಸವಣ್ಣ
ಎರಡಸಲ ಶರಣು ಶರಣೆಂದಾರೊ ॥ ೩ ॥

ಬಸವನ ಮಾತಿಗಿ ಬೆರಗಾಗಿ ಹರಳಯ್ಯ
ಚಿಂತಿಯು ಮಾಡುತಾ ಹೊಂಟಾನ
ಧೂಪ್ಪೆಂದು ಕುಂತಾನ ಕಟ್ಟಿಮ್ಯಾಲ
ಸಪ್ಪಗಾಗ್ಯಾದ ಮಾರಿಯು ಆವಾಗೊ ॥ ೪ ॥

ಕಾಯಕ ಮಾಡುತ ಕುಂತ ಶರಣೆಯು
ಎದ್ದು ಬಂದಾಳ ಗಂಡನ ಸನಿಯಾಕ
ಯಾಕೆಂದು ಕೇಳ್ಯಾಳ ಮುಂದ ಬಂದು
ಗಾಬರಿ ಆಗ್ಯಾಳ ಮನದಾಗ ತಾನೊಂದು ॥ ೫ ॥

ನಡದಂತದೆಲ್ಲವ ಹೇಳ್ಯಾರ ಹರಳಯ್ಯ
ಮಾಡಿಲ್ಲ ಚಿಂತೆಯು ಮನದಾಗ ಸತಿಯಳು
ನುಡಿತಾಳ ಹಿಗ್ಗಿಲಿ ಗಂಡನ ಮಾತಿಗಿ
ಧೈರ್ಯವಾ ತುಂಬ್ಯಾಳ ಅವರೊಳಗ ॥ ೬ ॥

ನಿಮ್ಮದು ಬಲಗಾಲ ನಮ್ಮದು ಎಡಗಾಲ
ತೊಡೆಯ ಚರ್ಮವ ತೆಗೆಯಿರಿ ಬಲುಬೇಗ
ಬಸವನ ಪಾದಕ ಜೋಡೆರೆಡು ಹೊಲೆಯಿರಿ
ಹೊಲೆದು ಜನುಮ ಪಾವನ ಮಾಡಿರಿ ॥ ೭ ॥

ಮರುದಿನ ಸ್ವಾಮಾರ ಮನಿಮಾರ ಸಾರಿಸಿ
ಲಿಂಗದಾಪೂಜೆ ಮನಮುಟ್ಟಿ ಮಾಡಿತಾ
ಕೈಮುಗಿದು ಕಾಯಕ ಮಾಡಲು ನಿಂತಾರ
ಬಸವಯೆನ್ನುತಾ ಚರಮ ತೆಗೆದಾರ ॥ ೮ ॥

ಚರಮವ ತೆಗದ್ದಾಂಗ ಅವರ ಹಿಗ್ಗ ಹೆಚ್ಚ್ಯಾದ
ಜೋಡೆರೆಡು ಹೋಲಿತಾರ ಕುಸುರವ ತೆಗಿತಾರ
ಅರವಿಯ ಮುಚ್ಚಿಕೊಂಡು ಮಾಮನಿಗಿ ಹೊಂಟಾರ
ಬಸವಣ್ಣ ಬಂದಾರ ಶರಣರ ಕಂಡಾರ ॥ ೯ ॥

ಬಿಚ್ಚಾತಾ ನೋಡ್ಯಾರ ಹಿಗ್ಗಿಲಿ ಬಸವಣ್ಣ
ಅವರೆದಿ ಆಗ ಝುಲ್ಲೆಂದು
ಯಾಕಹಿಂಗ ಎಂದು ಕೈಹಿಡಿದು ಕೇಳಿದರ
ನುಡಿತಾರ ನಡೆದ ಕತೆಯಲ್ಲ ॥ ೧೦ ॥

ಕೈಯಾಗಿನ ಚಮ್ಮಾವುಗೆ ತಲಿಮ್ಯಾಲ ಇಟ್ಟಾರ
ಶಿವಶಿವಯೆನ್ನುತಾ ಕುಣಿಕುಣಿದಾಡ್ಯಾರ
ಕಣ್ಣಿಗಿ ಒತ್ತಿಕೊಂಡು ಮನಮುಟ್ಟಿನಮಿಸ್ಯಾರ
ಬಹಳ ಸೋಜಿಗ ಪಟ್ಟಾರ ॥ ೧೧ ॥

ಕಲ್ಯಾಣಮ್ಮನ ಎದುರಿಗಿ ಕೈಜೋಡಿಸಿ ಬಸವಣ್ಣ
ನಿಮ್ಮಂತವರು ನನಗ ಏಳೇಳು ಜನ್ಮಕ
ಬಂಧುಬಳಗ ನೀವು ಸಂಗಮನಾಥಾ ನೀವು
ಹಿಗ್ಗಿಲಿ ನುಡಿತಾರ ಅವರು ॥ ೧೨ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಭಾಗ –೩
ಶರಣರ ಸ್ಮರಣೆ

ಶರಣರ ಸ್ಮರಣೆ : ಹಾಡುಗಳು

ಹಾಡು ನನ್ನ ಮನವೇ

ಹಾಡು ನನ್ನ ಮನವೇ । ಓಂ ಗುರುಬಸವ
ಹೇಳು ನನ್ನ ಮನವೇ । ಓಂ ಗುರುಬಸವ
ಓಂ ಗುರು ಬಸವ । ಶ್ರೀ ಗುರುಬಸವ ॥ ಪ ॥

ಕಲ್ಯಾಣದಿ ಕೇಳಿಸಿತು । ಓಂ ಗುರುಬಸವ
ಉಡುತಡಿಯಲ್ಲಿ ಉಲಿಯಿತು । ಓಂ ಗುರುಬಸವ
ಓರಿಸ್ಸಾದಿ ಹಾಡಿತು । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೧ ॥

ಮಹಾದೇವಿ ಅಕ್ಕ । ಓಂ ಗುರುಬಸವ
ಚೆನ್ನಬಸವೇಶ । ಓಂ ಗುರುಬಸವ
ಸಿದ್ಧರಾಮೇಶಾ । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೨ ॥

ಅಲ್ಲಮ ಪ್ರಭುದೇವ । ಓಂ ಗುರುಬಸವ
ಮಡಿವಾಳ ಮಾಚಿದೇವ । ಓಂ ಗುರುಬಸವ
ಉರಿಲಿಂಗ ದೇವ । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೩ ॥

ಮಾದಾರ ಚೆನ್ನಯ್ಯ । ಓಂ ಗುರುಬಸವ
ಡೋಹರ ಕಕ್ಕಯ್ಯ । ಓಂ ಗುರುಬಸವ
ಶಿವಶರಣ ಹರಳಯ್ಯ । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೪ ॥

ಮೇದಾರ ಕೇತಯ್ಯಾ । ಓಂ ಗುರುಬಸವ
ಡೋಹಾರ ಕಕ್ಕಯ್ಯ । ಓಂ ಗುರುಬಸವ
ಶಿವಶರಣ ಹರಳಯ್ಯ । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೫ ॥

ನುಲಿಯ ಚಂದಯ್ಯ । ಓಂ ಗುರುಬಸವ
ಜೇಡರ ದಾಸಿಮಯ್ಯ । ಓಂ ಗುರುಬಸವ
ಗಜೇಶ ಮಸಣಯ್ಯ । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೬ ॥

ಘಟ್ಟಿವಾಳಯ್ಯ । ಓಂ ಗುರುಬಸವ
ದಯಾಮಯಿ ದಸರಯ್ಯ । ಓಂ ಗುರುಬಸವ
ಮೋಳಿಗಿ ಮಾರಯ್ಯ । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೭ ॥

ಸೌರಾಷ್ಟ್ರ ಆದಯ್ಯ । ಓಂ ಗುರುಬಸವ
ಆಯ್ದಕ್ಕಿ ಮಾರಯ್ಯ । ಓಂ ಗುರುಬಸವ
ಅನುಭಾವಿ ಅಮುಗಯ್ಯ । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೮ ॥

ಸಕಲೇಶ ಮಾದರಸ । ಓಂ ಗುರುಬಸವ
ಸೊಡ್ಡಳ ಬಾಚರಸ । ಓಂ ಗುರುಬಸವ
ಹುತಾತ್ಮ ಮಧುವರಸ । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೯ ॥

ನಿಜ ಜ್ಞಾನಿ ಅಜಗಣ್ಣ । ಓಂ ಗುರುಬಸವ
ಹೂಗಾರ ಮಾದಣ್ಣ । ಓಂ ಗುರುಬಸವ
ವೈದ್ಯ ಸಂಗಣ್ಣ । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೧೦ ॥

ಹಡಪದ ಅಪ್ಪಣ್ಣ । ಓಂ ಗುರುಬಸವ
ಕಿನ್ನರಿ ಬೊಮ್ಮಯ್ಯ । ಓಂ ಗುರುಬಸವ
ಒಕ್ಕಲಿಗ ಮುದ್ದಣ್ಣ । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೧೧ ॥

ಮಹಾತಾಯಿ ನೀಲಮ್ಮ । ಓಂ ಗುರುಬಸವ
ಅಕ್ಕ ನಾಗಮ್ಮ । ಓಂ ಗುರುಬಸವ
ಅನುಭಾವಿ ಲಿಂಗಮ್ಮ । ಓಂ ಗುರುಬಸವ
ಹಾಡು ನನ್ನ ಮನವೇ । ಓಂ ಗುರುಬಸವ ॥ ೧೨ ॥

ಮೋಳಿಗಿ ಮಹಾದೇವಿ । ಓಂ ಗುರು ಬಸವ
ವೀರಾಗಿ ಬೊಂತಾದೇವಿ । ಓಂ ಗುರು ಬಸವ
ಸುಜ್ಞಾನಿ ಮುಕ್ತಾಯಿ । ಓಂ ಗುರು ಬಸವ
ಹಾಡು ನನ್ನ ಮನವೇ । ಓಂ ಗುರು ಬಸವ ॥ ೧೩ ॥

ಆಯ್ದಕ್ಕಿ ಲಕ್ಕಮ್ಮ । ಓಂ ಗುರು ಬಸವ
ಅರಿವಿನ ಅಕ್ಕಮ್ಮ । ಓಂ ಗುರು ಬಸವ
ಸದಾಚಾರಿ ಸತ್ಯಕ್ಕ । ಓಂ ಗುರು ಬಸವ
ಹಾಡು ನನ್ನ ಮನವೇ । ಓಂ ಗುರು ಬಸವ ॥ ೧೪ ॥

ಭವ ಭಯ ತಾರಕ । ಓಂ ಗುರು ಬಸವ
ಶರಣ ಜನ ರಕ್ಷಕ । ಓಂ ಗುರು ಬಸವ
ವಿಘ್ನ ನಿವಾರಕ । ಓಂ ಗುರು ಬಸವ
ಹಾಡು ನನ್ನ ಮನವೇ । ಓಂ ಗುರು ಬಸವ ॥ ೧೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ನಾವು ಶ್ರೀ ಶಿವಶರಣೆಯರು

ಗಂಗಾಂಬಿಕೆಯವರೂ ಶಿವಮಹಾದೇವಿಯವರೂ
ಅಕ್ಕನಾಗಮ್ಮ ಇವರ್ಹಾಂಗ ನಾವು ಶ್ರೀ ಶಿವಶರಣೆಯರು ॥ ೧ ॥

ಬಸವನ ತತ್ತ್ವಗಳ ದಶದಿಕ್ಕುಗಳಲಿ ಪಸರಿಸಿ
ಮತವಾ ಬೆಳೆಸುವೆವು ನಾವು ಶ್ರೀ ಶಿವಶರಣೆಯರು ॥ ೨ ॥

ಅಷ್ಟಾವರಣಗಳ ಸೃಷ್ಟಿಗೆ ತಿಳಿಸುವೆವು
ಶಿಷ್ಟ ಸದ್ಗುಣಗಳು ಸಾರುವರು ನಾವು ಶ್ರೀ ಶಿವಶರಣೆಯರು ॥ ೩ ॥

ಚಾತುರ್ ವರ್ಣಗಳ ಕರುಳನ್ನು ತೆಗೆಯುವರು ನಾವು
ಸತ್ಯ ಅಹಿಂಸಾ ಶಾಂತಿ ಪೇಳುವರು ನಾವು ಶ್ರೀ ಶಿವಶರಣೀಯರು ॥ ೪ ॥

ಸತ್ಯದಾ ಲಿಂಗವಾ ಕಟ್ಟುವೆವು ನಾವು
ಮಿಥ್ಯದ ಮಾತಿಗಿ ಕಡು ವೈರಿ ನಾವು ಶ್ರೀ ಶಿವಶರಣೀಯರು ॥ ೫ ॥

ನಿಂದೆಗೈಯುವವರ ಅಂಧಕ ಕಳೆಯುವೆವು ನಾವು
ಜ್ಞಾನದ ದೀಕ್ಷೆಯ ಕೊಟ್ಟು ಪೊರೆವೆವು ನಾವು ಶ್ರೀ ಶಿವಶರಣೆಯರು ॥ ೬ ॥

ಕೀಳು ಜಾತಿಯನ್ನು ಅಳಿವೆವು ನಾವು
ಹಾಳು ಕರ್ಮವ ಕಡಿದು ಹಾಕುವೆವು ನಾವು ಶ್ರೀ ಶಿವಶರಣೆಯರು ॥ ೭ ॥

ಬಡವ ಬಲ್ಲಿದನೆಂಬ ಭೇದ ಕಿತ್ತೊಗೆಯುವೆವು
ದುಡಿದುಣ್ಣ ತತ್ತ್ವ ತಿಳಿಸುವೆವು ನಾವು ಶ್ರೀ ಶಿವಶರಣೆಯರು ॥ ೮ ॥

ಹೆಣ್ಣು–ಗಂಡೆಂಬ ಭೇದ ಒಪ್ಪುವದಿಲ್ಲ ನಾವು
ಇಬ್ಬರ ಆತ್ಮ ಒಂದೇ ಅನ್ನುವೆವು ನಾವು ಶ್ರೀ ಶಿವಶರಣೆಯರು ॥ ೯ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ನಾವು ಶಿವಶರಣೆಯರು

ಗಂಗಾಂಬಿಕೆ ಅವರ ಶಿವಮಹಾದೇವಿಯವರ
ಅಕ್ಕನಾಗಮ್ಮ ಇವರ‍್ಯಾರ ನಾವು ಶಿವಶರಣಿಯರ
ಅಕ್ಕನಾಗಮ್ಮ ಇವರ‍್ಯಾರ ನಾವು ಶಿವಶರಣಿಯರ ॥ ॥ ೧ ॥

ಪುಂಡ ಜಂಗಮರನ್ನು ಸೈನ್ಯವ ಕೂಡಿಸುವರ
ಪುಂಡಗಳನ್ನೆಲ್ಲ ಕೆಡುವುವರ ನಾವು ಶಿವಶರಣಿಯರ
ಪುಂಡಗಳನ್ನೆಲ್ಲ ಕೆಡವುವರ ನಾವು ಶಿವಶರಣಿಯರ ॥ ॥ ೨ ॥

ಮಾನವಗೇಡಿಯನ್ನು ಮಾನವಗೇಡಿಯನ್ನು ಮಾಡಲಿ ಬಂದಿವರ
ಜ್ಞಾನ ದೀಕ್ಷೆಯ ಕೊಟ್ಟು ಪಡೆಯುವರ ನಾವು ಶಿವಶರಣಿಯರ
ಜ್ಞಾನ ದೀಕ್ಷೆಯ ಕೊಟ್ಟು ಪಡೆಯುವರ ನಾವು ಶಿವಶರಯರ ॥ ॥ ೩ ॥

ಚಾತುರ್ಯವರ್ಣಗಳ ಕೊರಳನ್ನು ಕೊರೆಯುವವರ
ಸತ್ಯ ಅಹಿಂಸಾ ಪಾಡವರ ನಾವು ಶಿವಶರಣಿಯರ
ಸತ್ಯ ಅಹಿಂಸಾ ಪಾಡವರ ನಾವು ಶಿವಶರಣಿಯರ ॥॥ ೪ ॥

ಬಸವನ ತತ್ವಗಳು ಬಸವನ ತತ್ವಗಳು
ದೇಸ ದಿಕ್ಕುಗಳಲ್ಲಿ ಪಸರಿಸಿ ಮಾಯಾ ಬೆಳೆಸುವರ ನಾವು ಶಿವಶರಣೆಯರ
ದೇಸ ದಿಕ್ಕುಗಳಲ್ಲಿ ಪಸರಸಿ ಮಾಯಾ ಬೆಳೆಸುವರ ನಾವು ಶಿವಶರಣೆಯರ ॥೫॥

ಗಂಗಾಂಬಿಕಿ ಅವರ ಶಿವ ಮಹಾದೇವಿಯವರ ।
ಅಕ್ಕನಾಗಮ್ಮ ಇವರ‍್ಯಾರ ನಾವು ಶಿವಶರಣೆಯರ
ಅಕ್ಕನಾಗಮ್ಮ ಇವರ‍್ಯಾರ ನಾವು ಶಿವಶರಣೆಯರ ॥ ೬ ॥

– ಶ್ರೀಮತಿ ಕಲಾವತಿ ಚನ್ನಯ್ಯ ವಸ್ತ್ರದ

***

ಬಸವನೆ ಮಾಮರ

ಬಸವನೆ ಮಾಮರ ಶರಣರೆ ಸಿರಿಬಳ್ಳಿ
ವಚನಾಮೃತ ಪಾಲ ಅನುಭಾವದಲ್ಲಿ
ಎಲ್ಲಿ ನೋಡಿದರಲ್ಲಿ ಹರಡಿತೋ ಆ ಬಳ್ಳಿ
ಒಂದಾಗಿ ಬಸವನ ಕಲ್ಯಾಣದಲ್ಲಿ ॥ ॥ ೧ ॥

ಕಾಶ್ಮೀರದ ಅರಸು ಮೋಳಿಗಿ ಮಾರಯ್ಯ
ಶಿವಭಕ್ತ ಅಂಬಿಗರ ಚವಡಯ್ಯ
ಕಿನ್ನೂರಿ ಬೊಮ್ಮಯ್ಯ ಕಂಡರೋ ನಿಜನಿಲಯ
ಬಸವಣ್ಣನವರ ಮನೆ ಶಿವ ನಿಲಯ ॥ ॥ ೨ ॥

ಉಡುತಡಿ ಮಹಾದೇವಿ ಶರಣರ ಮಗಳಾಗಿ
ಬಂದಳೋ ಅನುಭವ ಮಂಟಪಕೆ
ಅಲ್ಲಮ ಪ್ರಭುದೇವ ಎಲ್ಲ ಬಲ್ಲಿದ ಯೋಗಿ
ನಿಂತರೊ ಸಿದ್ಧರಾಗಿ ಶಿವಪಥಕೆ ॥ ॥ ೩ ॥

ಅಳಿಯ ಚನ್ನಬಸವಯ್ಯ ಷಟಸ್ಥಲಕ್ಕೆ ರೂವಾರಿ
ಕರ್ಮಯೋಗಿ ಸೊನ್ನಲಿಗೆ ಸಿದ್ಧರಾಮ
ಜ್ಞಾನದ ದಾಸೋಹ ಕರ್ಮದ ಶಿವಯೋಗ
ಸದ್ಗತಿಯೇ ತೋರಿದರು ಶರಣರಿಗೆ ॥ ॥ ೪ ॥

– ಶ್ರೀಮತಿ ಕಲಾವತಿ ವಸ್ತ್ರದ

***

ಚನ್ನಬಸವಣ್ಣನವತಾರವಾಗುವದು

ಚನ್ನಬಸವಣ್ಣನವತಾರವಾಗುವದು
ಅಣ್ಣ ಬಸವಣ್ಣನ ಬಳಗವು ಕೂಡುವದು ॥ ಪ ॥

ದಿಕ್ಕುದೆಸೆಗಳಲ್ಲಿಯು ಬಸವಧ್ವಜ ಹಾರುವದು
ಅಕ್ಕಮಹಾದೇವಿಯವರು ದಯಾವಾಗುವರು ॥ ೧ ॥

ಎಲ್ಲಭಂಡಾರವಂ ಕೇಳಿ ತೆಗೆಯುವರು
ಬಾಲಬಾಲಕಿಯರು ಸ್ಥೈರ್ಯಗೊಳ್ಳುವರು ॥ ೨ ॥

ಕೀಳು ಕುಲಗಳ ಜಗಳವ ಕಳೆಯುವರು
ಶೀಲ ಸಮತೆಯ ಭಾವಸ್ಥಿರಗೊಳಿಸುವರು ॥ ೩ ॥

ವರ್ಣವಾದಿಗಳ ತಂಡನಳಿಯುವರು
ಪೂರ್ಣಸ್ವಾತಂತ್ರ್ಯ ಪಾಠವ ಕಲಿಸುವರು ॥ ೪ ॥

ತರುಣ ಸೈನಿಕರೆಲ್ಲರೂ ಕೂಡುವರು
ಶರಣ ಸಾಮ್ರಾಜ್ಯ ಚಿರಕಾರ ನೆಲೆಸುವರು ॥ ೫ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಸತ್ಯ ಶಿವಶರಣರ ಧ್ಯಾನ

ಸತ್ಯ ಶಿವಶರಣರ ಧ್ಯಾನ ನಿತ್ಯ ನಮ್ಮ ಮನಿಯಾಗ ॥ ಪ ॥

ಹಾಲುಂಡ ತವರಿಗೆ ಏನೆಂದು ಹಾಡಲೆ
ಹಾಲುಂಡ ಬೆಳ್ಳಿ ಹರಿಯಲೇ ಸತ್ಯಶಿವಶರಣ ॥ ೧ ॥

ಹಾಲುಂಡ ಬೆಳ್ಳಿ ಹರಿಯಲಿ ತವರವರ
ನೀರುಂಡ ನಿಂಬಿ ಚಿಗಿಯಲಿ ಸತ್ಯಶಿವಶರಣ ॥ ೨ ॥

ಒಂದ ಇದ್ದ ಬಳ್ಳಿ ಹಂದರ ಹರಿಯಲೇ
ಚಂದರ ನಿನ್ನ ಬೆಳ್ಳಿ ಚಿಗಿಯಲಿ ಸತ್ಯಶಿವಶರಣ ॥ ೩ ॥

ಚಂದರ ನಿನ್ನ ಬಳ್ಳಿ ಚಿಗಿಯಲಿ ಬಸವಣ್ಣ
ನಿತ್ಯ ನಿಂದುರಲಾಕ ನಮಗ ನೆರಳಾಗಲಿ ಸತ್ಯ ಶಿವಶರಣ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಎಲ್ಲ ಶರಣರ ನೆನದು

ಎಲ್ಲ ಶರಣರ ನೆನೆದು ಇಲ್ಲಿ ನಾನತನಾಗಿ
ಎಲ್ಲರನು ಒಂದೊಂದು ಬೇಡಿಕೊಂಡೆ ॥ ಪ ॥

ಭಕ್ತಿಯಿಲ್ಲದ ಧರ್ಮ ವ್ಯರ್ಥವಾಗುವದೆಂದು
ಭಕ್ತಿತ್ರಯವ ಕಲಿಸಿ ಮುಕ್ತನೆನಿಸಿ ಮುಕ್ತಿಪದವಿಗೆ ಸಂದ
ಕರ್ತೃ ಬಸವೇಶನ ಭಕ್ತಿ ಬಿಕ್ಷೆಯ ನೀಡಿ ಸಲಹೆನ್ನನು ॥ ೧ ॥

ಶಿವನೊಳಗೆ ಪ್ರಾಣವನು ತವಬೆರಸಿ ಹೊರಗಳಿದು
ಶಿವಬೆಳಗಿನೊಳು ಪರಮತ ಪವನ್ಯೆದಿ ಶಿವನು ತಾನಾಗಿರ್ದ
ಶಿವ ಶಿದ್ದರಾಮಯ್ಯ ಶಿವಯೋಗ ಬಿಕ್ಷೆಯನು ನೀಡು ಎನಗೆ ॥ ೨ ॥

ಊರ್ವಿ ಪತಿಯಿಂ ಬಿಟ್ಟು ನಿರ್ವಾಣಯುತೆಯಾಗಿ
ಸರ್ವ ಕರ್ಣೇಂದ್ರಿಯ ಗುಣಗಳ ನಿರ್ವಾಣಯುತೆಯಾಗಿ
ಸರ್ವ ಕರ್ಣಿಂದ್ರಿಯ ಗುಣಗಳಿದು ಪರ್ವತೇಶನ ಬೆರೆದ
ಸರ್ವಸುಖಿ ಮಹಾದೇವಿ ನಿರ್ವಾಣ ಬಿಕ್ಷೆಯನು ನೀಡು ಎನಗೆ ॥ ೩ ॥

ಇಂಬರಿದು ಶಿವನೊಳಗೆ ಸಂಭ್ರಮದ ನುಡಿಗಲಿತು
ಕುಂಬಿನಿಯ ಜನರೊಳಗೆ ನುಡಿಗಳಿರು ಗಂಭೀರನಾಗಿ
ಸ್ವಯಂಭುವ ಅಜಗಣ್ಣ ಗಂಭೀರ ಬಿಕ್ಷೆಯನು ನೀಡು ಎನಗೆ ॥ ೪ ॥

ನಿಮ್ಮ ಶರಣರು ಬಹಳ ಧರ್ಮಿಗಳು ನಿರ್ಮಳರು
ಒಮ್ಮೆಯು ಬಿಕ್ಷೆವನ್ನು ಇಲ್ಲೆನ್ನರು ನಮ್ಮ ಸಂರಕ್ಷಿಸುವ
ಧರ್ಮ ಬಿಕ್ಷೆವನುಂಡು ನಮ್ಮುವೆನು ಶಿವಷಡಕ್ಷರಿ ಲಿಂಗವೇ ॥ ೫ ॥

– ಶ್ರೀಮತಿ ಸರ್ವಮಂಗಳ ಜೋಗೂರ ಹಾಗೂ
ಪಾರ್ವತಿ ಜೆಮಶೆಟ್ಟಿ

***

ಶಿವನ ಭಜನಿ ಮಾಡೊ

ಶಿವನ ಭಜನಿ ಮಾಡೊ । ಶಿವಶರಣರ ಕೊಂಡಾಡೋ
ಬೋಧ ಮಾಡಿ ಕೇಳೊ । ಅಪ್ಪನ ಸ್ಮರಣೆ ಮರಿಬ್ಯಾಡೋ । ಶಿವ ಶಿವ ॥ ಪ ॥

ನಮ್ಮಪ್ಪ ಬಸವಣ್ಣ । ನಮ್ಮವ್ವ ನೀಲಮ್ಮ
ಬೋಧ ಮಾಡಿ ಕೇಳೋ । ಅಪ್ಪನ ಸ್ಮರಣಿ ಮರಿಬ್ಯಾಡೋ । ಶಿವ ಶಿವ ॥ ೧ ॥

ಮಾಯ ಮೋಹದಿಂದ । ದೇಹ ತಾಳಿ ಬಂದೆ
ಕಾಯೋ ಎನ್ನ ತಂದೆ । ಮಾಯದ ಜನ್ಮ ಬ್ಯಾಡೊ ಮುಂದೆ । ಶಿವ ಶಿವ ॥ ೨ ॥

ಹಲವು ಬಾರೆ ನಿಮ್ಮ ಶರಣರ ಸ್ಮರಣೆಯೊ
ಮರಿಯಲಾರೆ ನಾನು ಇಂಥ ಕರುಣ ಸಾಗರನಾ । ಶಿವ ಶಿವ ॥ ೩ ॥

ಭವನಾ ತ್ರಿಭವನೀಶಾ । ರೇವಣಸಿದ್ದೇಶ
ಸಿದ್ಧರಾಮಾ ನಿಮ್ಮ ಧ್ಯಾಸಾ । ಸಿದ್ಧರಾಮಾ ನಿಮ್ಮ ಧ್ಯಾಸ । ಶಿವ ಶಿವ ॥ ೪ ॥

– ಶ್ರೀಮತಿ ಪಾರ್ವತಿ ಜೇಮಶೆಟ್ಟಿ
ಹಾಗೂ ಅನ್ನಪೂರ್ಣ ದೇವಣಿ, ಸರ್ವಮಂಗಳ ಜೋಗೂರ

***

ಏಳಯ್ಯ ಬೆಳಗಾಯಿತು

ಓಂ ಏಳು ಏಳಯ್ಯ ಬೆಳಗಾಯಿತು
ನಿಮ್ಮ ತಾಯಿ ತಂದೆಗಳು ಬಂದಿಹರು
ಬಾಳಾಕ್ಷ ಶಿಶುಮಾಂತ ಲಿಂಗ ದೊರೆಯೇ ॥ ೧ ॥

ಬಸವ ಮಡಿವಾಳ ಚೆನ್ನ ಸಿದ್ಧರಾಮೇಶ್ವರರು
ಕುಶಲ ಪ್ರಭು ಮುಖ್ಯ ಅಜಗಣ್ಣ ತಂದೆಗಳು
ಅಸಮ ಪರತರ ಗೌರಿ ಮಹಾದೇವಿ ಮುಕ್ತಾಯಿ ॥ ೨ ॥

ವ್ಯಸನ ನಿಜ ನೀಲಮ್ಮ ಮುಖ್ಯ ತಾಯಿಗಳು
ಶಿವಯೋಗ ಮುದ್ರೆ ನಿದ್ರಾನಂದ ಸುಖದೊಳಗೆ
ಅವಿರತಂ ಮಲಗಿರುವ ಗುರುಪುತ್ರನೇ ॥ ೩ ॥

ತವೆರುದ್ರ ಪ್ರಮಥಗಣ ದೇವಗಣ ಭಕ್ತಗಣ
ಕವಿದು ಬಂದಿಹರು ಮಹಾಗಣರು ಸಹಿತ
ಭೃಂಗಿನಾರದ ಮುಖ್ಯ ಸಂಗ ಶರಣರು ಬಂದು
ಮಂಗಲ ಮೃದಂಗ ಮಹಾತಾಳ ಮೇಳದಲಿ
ಝೇಂಕರಿಪ ಸಂಗೀತ ನಾದವನು ಮಾಡುವರು
ಲಿಂಗ ಶಿಶುಮಾಂತ ನಿನ್ನ ಪಾಡಿ ಹರಸುತಲೀ ॥ ೪ ॥

– ಶ್ರೀ ಸೂಗಪ್ಪ ಸೌಕಾರ

***

ಏಳು ಏಳಯ್ಯ

ಏಳು ಗಿರಿಜಾರಮಣ ಏಳು ಉರಗಾಭರಣ
ಏಳು ಗಂಗಾಧರನೆ ಏಳು ಮನ್ಮಥ ಸಂಹರನೆ
ಏಳ್ನೂರೆಪ್ಪತ್ತಮರಗಣಂಗಳು ನಮ್ಮೋಲಗಕೆ ಬಂದರೇಳು ॥ ೧ ॥

ಬಸವಣ್ಣ ಚೆನ್ನಬಸವಣ್ಣ ಮಡಿವಾಳಯ್ಯ
ಕುಶಲಮತಿ ಕಿನ್ನೂರಿ ಬ್ರಹ್ಮಯ್ಯ
ಕಲಿಕ್ಯಾತ ವಸುಧಿಯೋಳ್ ಕೆಂಭಾವಿ ಭೋಗಣ್ಣ
ಸತ್ಯಣ್ಣ ಮಂಚಣ್ಣ ರೇವಣ್ಣನು
ಮುಸುಡಿಯ ಚವುಡಯ್ಯ ಮುದೆನೂರ ದಾಸ್ಮಯ್ಯ
ಹಸಿಯ ಮಸ್ತಕದ ಮಾಚಯ್ಯಗಳು ನಿಮ್ಮಡಿಗೆ ಶಶಿಧರನೆ ಬಂದರೇಳು ॥೨॥

ಸೊನ್ನಲಗಿ ಸಿದ್ಧರಾಮಯ್ಯ ಮುದ್ದುಗೊಂಡನು
ಶರಣ ನಿಮ್ಮ ನೆಚ್ಚಿದ ಭಕ್ತ ಮೋಳಿಗೆ ಮಾರಯ್ಯ
ಸನ್ನುತ ಹಡಪದ ಅಪ್ಪಣ್ಣ ಸುರಗಿಯ ಚವಡಯ್ಯ
ಕನ್ನದ ಬೊಮ್ಮಯ್ಯ ಚೆನ್ನಯ್ಯ ಚಾರಮಾಂಕನು
ನಂಬೆಣ್ಣ ಕಲಿಕಾಮ ಭಿನ್ನವಿಲ್ಲದ ಭಕ್ತಿ ನುಲಿಯ ಚಂದಯ್ಯಗಳು
ಹೊನ್ನಯ್ಯ ಕರಿಕಾಲ ಚೋಳ ಬಂದರು ಬೇಗ ಪನ್ನಂಗಧರನೆ ಏಳು ॥೩॥

ಶಂಕರ ದಾಸ್ಮಯ್ಯ ನಿಜಲಿಂಗ ಚಿಕ್ಕಯ್ಯ
ಸುಂಕದ ಬಂಕಯ್ಯ ಏಲೇಶ್ವರದ ಕೇತಯ್ಯ
ಪಂಕಜ ಮುಖಿಯು ಮಾದೇವಿ ಮುಕ್ತಕ್ಕ
ಸತ್ಯಕ್ಕ ಜೋಳಕ್ಕನು ಕೊಂಕಗುರುಳಿನ ನಂಬೆಕ್ಕ
ಬೊಂತಲಾದೇವಿ ಶೃಂಕಿಲೆ ಪರವೆ ನಾಚಿಯರು ಗೊಗ್ಗವ್ವೆ
ಶಿವಲಿಂಗ ಮೊದಲಾದ ಶರಣ ಶರಣೆಯರು ಬಂದರೇಳು ಶಂಕರನೇ ॥೪॥

ದುರುಳ ದಕ್ಷಕನ ಕೊಂದ ವೀರೇಶನು ಬಂದ
ವರಶಿಶುಮಾರನ ಸೀಳಿದ ನಂದೀಶ್ವರನು ಬಂದ
ದುರುಳತಾರಕನ ಸಂಹರಿಸಿದ ಷಣ್ಮುಖನು ಬಂದ
ಗರುಡ ಗಂಧರ್ವ ವಿದ್ಯಾಧರರು ನಾರದರು
ಸರಸ್ವತಿ ಭೃಂಗೀಶ ಊರ್ವಶಿ ಹರಿಬ್ರಹ್ಮ
ಸುರಪತಿ ಮೊದಲಾದ ದಿಕ್ಪಾಲಕರು ಮುನಿಗಳು
ಸುರರೆಲ್ಲ ಬಂದರೇಳು ॥ ೫ ॥

ಏಳು ಭಕ್ತರ ಹೃದಯ ಪಂಕಜ ದಿವಾಕರನೆ ಏಳು
ಏಳು ಶರಣಾನಂದ ಅಂಬುಧಿಯ ಸುಧಾಕರನೆ ಏಳು
ಏಳು ಭವರೋಗ ವೈದ್ಯನೆ, ಅಭಯ ಹಸ್ತನೆ ಶಿವನೆ ಬೆಳಗಾಯಿತೇಳು
ಕಾಲನಕೊಂದು ಶೂಲಪಾಣಿಯೇ ಏಳು
ಏಳು ಮುಪ್ಪುರವನುಟ್ಟ ಭಾಳಾಕ್ಷವುಳ್ಳವನೆ ಏಳು
ಅಸುರ ಶಿರದ ರುಂಡಮಾಲೆ ಧರಿಸಿದಾತನೆ
ಗುರು ಸಿದ್ಧರಾಮನೆ ಏಳು ಏಳು ಏಳಯ್ಯ ನಿಮ್ಮ
ತಾಯ್ತಂದೆಗಳು ಬಂದಿಹರು ಬಾಳಾಕ್ಷ ಶಿಸು ಮಹಾಲಿಂಗ
ದೊರೆಯೆ ಏಳು ॥ ೬ ॥

ಬಸವ ಚೆನ್ನಬಸವ ಸಿದ್ಧರಾಮೇಶ್ವರನು ಕುಶಲ
ಪ್ರಭು ಮುಖ್ಯ ಅಜಗಣ್ಣ ತಂದೆಗಳು
ಅಸಮ ಪರತರ ಗೌರಿ ಮಹಾದೇವಿ ಮುಕ್ತಾಯಿ
ವ್ಯಸನವಳಿದು ನೀಲಮ್ಮ ತಾಯಿಗಳು ಬಂದರೇಳು
ಶಿವಯೋಗ ಮುದ್ರೆ ನಿಜಾನಂದ ಸುಖದೊಳಗೆ
ಅವಿರತ ಮಲಗಿರುವ ಗುರುಪುತ್ರನೆ ಏಳು
ತವೆರುದ್ರ ಪ್ರಮಥಗಣ ಭಕ್ತಗಣ ಮಹಾಗಣರು ಸಹಿತ ಬಂದರೇಳು ॥ ೭ ॥

ಏಳು ಭೃಂಗಿ ನಾರದ ಮುಖ್ಯ ಸಂಗನ ಶರಣರು
ಬಂದು ಮಂಗಲ ಮೃದಂಗ ಮುಂತಾದ ಮ್ಯಾಳದಲಿ
ಝೇಂಕರಿಪ ಸಂಗೀತನಾದವನು ಮಾಡುವರು
ಲಿಂಗಶಿಸು ಮಹಾಂತನೆಂದು ಹಾಡಿ ಹರಿಸುತಲಿ
ಏಳು ಏಳಯ್ಯ ಮಂಗಲಂ ಮಹಾ ಶ್ರೀಗುರುವೆ ನಮಃ ॥ ೮ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಶರಣರ ಸುಳಿಗಾಳಿ

ಶರಣರ ಸುಳಿಗಾಳಿ ನೆರಳ ನಮ್ಮನಿಮ್ಯಾಲ ॥ ಪ ॥

ಏಳುತ್ತಾ ಶಿವಶಿವ ಕೂಡುತ್ತ ಶಿವಶಿವ ।
ಮತ್ತೊಂದು ಧ್ಯಾನ ನಮಗಿಲ್ಲ ಗುರುವೇ । ಶರಣರ ಸುಳಿಗಾಳಿ
ಮತ್ತೊಂದು ಧ್ಯಾನ ನಮಗಿಲ್ಲ ಬಸವಣ್ಣ
ನಿಮ್ಮ ಪಾದದಲ್ಲಿ ನಮ್ಮಧ್ಯಾನ ಗುರುವೇ । ಶರಣರ ಸುಳಿಗಾಳಿ ॥ ೧ ॥

ಶರಣ ಬಸವಣ್ಣನ ಸ್ಮರಣ್ಯಾಗ ನಾನಿದ್ದ
ಸರಹೊತ್ತಿಗಿ ಅರುವಾಗಿ ಗುರುವೇ । ಶರಣರ ಸುಳಿಗಾಳಿ
ಸರಹೊತ್ತಿಗಿ ಅರುವಾಗಿ ಬಸವಣ್ಣನ ಸ್ಮರಣ್ಯಾಗ
ನಮಗ ಬೆಳಗಾಗಿ ಗುರುವೇ । ಶರಣರ ಸುಳಿಗಾಳಿ ॥ ೨ ॥

ಕಲ್ಯಾಣದ ಬಸವಗ ಕಾಲಿಗಿ ನೀರ ಕೂಡ
ಕುಂಡ್ರಲ್ಹಾಕರಿ ಮಣಿ ಚೌಕಿ ಗುರುವೇ । ಶರಣರ ಸುಳಿಗಾಳಿ
ಕುಂಡ್ರಲ್ಹಾಕರಿ ಮಣಿ ಚೌಕಿ ಬಸವಣಗ
ಶರಣಿ ನಿಮ್ಮನಿಗಿ ಶಿವಬಂದ ಗುರುವೇ । ಶರಣರ ಸುಳಿಗಾಳಿ ॥ ೩ ॥

ಕಲ್ಯಾಣದ ಕೌತುಕ ಬಲ್ಲೇನೇ ಹಡದಮ್ಮ
ಗಲ್ಲಿಗಲ್ಲೆಲ್ಲ ಶರಣ್ಹಾರೆ ಗುರುವೇ । ಶರಣರ ಸುಳಿಗಾಳಿ
ಗಲ್ಲಿನೇ ಗಲ್ಲೆಲ್ಲಿ ಶರಣ್ಹಾರೆ ಕಲ್ಯಾಣದ
ಬಲ್ಲ ಮಹಾತ್ಮರ ಬಲ್ಹಾರೆ ಗುರುವೇ । ಶರಣರ ಸುಳಿಗಾಳಿ ॥ ೪ ॥

ನಮ್ಮ ಹಂಬಲ ನಿಮಗಾಗಿ ನಿಮ್ಮ ಹಂಬಲ ನಮಗಾಗಿ
ಕಣ್ಣಿಗಿ ನಿದ್ದಿ ಬರುವಲದು ಗುರುವೇ । ಶರಣರ ಸುಳಿಗಾಳಿ
ಕಣ್ಣಿಗಿ ನಿದ್ದಿ ಬರವಲದು ಬಸವಣ್ಣ
ಕಣ್ಣ ಮುಂದ್ಹಾರೇ ಅಲ್ಲಮರು ಗುರುವೇ । ಶರಣರ ಸುಳಿಗಾಳಿ ॥ ೫ ॥

ವಜ್ಜರದ ಬಂಗಾರಕ ವರಿಹಚ್ಚಿ ನೋಡ್ಯಾರ
ಮುದ್ದಿ ಬಂಗಾರದ ಶರಣರೇ ಗುರುವೇ । ಶರಣರ ಸುಳಿಗಾಳಿ
ಮುದ್ದಿನೇ ಬಂಗಾರದ ಶರಣರ ತೂಕವ
ವಜ್ಜರದಕಿನ್ನ ವಜನಾಗಿ ಗುರುವೇ । ಶರಣರ ಸುಳಿಗಾಳಿ ॥ ೬ ॥

ತಿಪರಾಂತ ಕೆರಿಮ್ಯಾಲ ವಿಪರೀತ ಕಂಡೆವು
ಲಿಪಿಯ ಓದ್ಯಾರೆ ಬಸವಣ್ಣ ಗುರುವೇ । ಶರಣರ ಸುಳಿಗಾಳಿ
ಲಿಪಿಯ ಓದ್ಯಾರೆ ಬಸವಣ್ಣ ಕಲ್ಯಾಣದ
ಅರ್ಥ ಹೇಳ್ಯಾರೆ ಬಿಜ್ಜಳಗ ಗುರುವೇ । ಶರಣರ ಸುಳಿಗಾಳಿ ॥ ೭ ॥

ಹಡೆದವ್ವ ಹಾರುತಿ ಒಳಗೇನ ಮಾಡುತಿ
ನೋಡು ಬಾ ನಮ್ಮ ಶರಣರ ಬಳಗ । ಶರಣರ ಸುಳಿಗಾಳಿ
ನೋಡು ಬಾ ನಮ್ಮ ಶರಣರ ಬಳಗವ
ಶ್ರಾವಣ ಮಾಸದ ವಚನ ಸಂಕಿರಣ । ಶರಣರ ಸುಳಿಗಾಳಿ ॥ ೮ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಶರಣರ ಸುಳಿಗಾಳಿ ನೆರಳು ನಮ್ಮನಿಮ್ಯಾಗ

ಶರಣರ ಸುಳಗಾಳಿ
ನೆರಳು ನಮ್ಮನಿಮ್ಯಾಗ ॥ ಪ ॥

ಶರಣರು ಬಂದಾರ
ಸಾಲ್ಹಚ್ಚಿ ನಿಂತಾರ
ಧಿಡವುಳ್ಳರ ಮನಿ ಹುಡಕ್ಯಾರ । ಹುಡಕ್ಯಾರೇ
ಶರಣರ ಸುಳಗಾಳಿ ..... ॥ ೧ ॥

ಧೀಡವುಳ್ಳವರ ಮನಿ
ಹುಡುಕ್ಯಾರೆ ಶರಣರೆ
ಧಿಡವಿಟ್ಟು ಕರಿರಿ ಶರಣರಿಗೆ । ಶರಣರಿಗೆ
ಶರಣರ ಸುಳಗಾಳಿ ... ॥ ೨ ॥

ಸ್ವಾಮೇರು ಬಂದಾರೆ
ಮಾನುಷ್ಯರು ಶರಣರೆ
ಮನಿಶರಣರ ಗುರುಗೋಳು । ಗುರುಗೋಳು
ಶರಣರ ಸುಳಗಾಳಿ .... ॥ ೩ ॥

ಕಲ್ಯಾಣ ಶರಣರ
ಗುರುಗೋಳು ಬಂದಾರೆ
ಮಾನುಷ ಮನುಷಾಗ ಕರಿತಾರಿ । ಕರಿತಾರಿ
ಶರಣರ ಸುಳಗಾಳಿ ..... ‖ ೪ ‖

ಹಸಿಯ ಹರದವ ಕಾಶಿ
ಬಿಸಿಯ ಬಿನ್ನವ ಮಾಡಿ
ಶರಣರ ಕರಿರಿ ಕರೀರೋ । ಕರಿರೋ
ಶರಣರ ಸುಳಗಾಳಿ ... ‖ ೫ ‖

ಶರಣರ ಕೈಯಲೀನೆ
ಕಳುವಾರಂಬದು ಕೇಳಿ
ಋಷಿನಾಗೆರ ತನ್ನ ಮನದಾಗೆ । ಮನದಾಗೆ
ಶರಣರ ಸುಳಗಾಳಿ ..... ‖ ೬ ‖

ಚಂದುಳ್ಳ ಮೋಳಕೇರಿ
ಮಂದ್ಯಾಕ ನೆರುದಾರೆ
ಚೆಂದರು ಭೇಟಿ ಕುಲಭಾಜಾ ಕುಲಭಾಜಾ
ಶರಣರ ಸುಳಗಾಳಿ.... ‖ ೭ ‖

ಚೆಂದರ ಸುತ್ತಿಗೆ
ಕೋಲ ಹಾಕಿದ ಬೆಳಗಿಲಿ
ತಂದಿ ಶರಣರು ಮೆರದಾರೊ । ಮೆರದಾರೊ
ಶರಣರ ಸುಳಗಾಳಿ .... ‖ ೮ ‖

– ಶ್ರೀಮತಿ ರುಕ್ಮಿಣಿಬಾಯಿ ಸುತಾರ

***

ಶರಣು ಮಾಡುವೆ

ಮಾಡುವೆ ಶರಣು ಮಾಡುವೆ
ನಮ್ಮ ಕೂಡಲಸಂಗನ ಶರಣರ ಪಾದಕ್ಕೆ
ಮಾಡುವೆ ಶರಣು ಮಾಡುವೆ ‖ ಪ ‖

ಮೇದಾರ ಕೇತಯ್ಯ ಮೆರೆಮಿಂಡದೇವಯ್ಯ
ಅಯ್ದಕ್ಕಿ ಮಾರಯ್ಯ ಅಜಗಣ್ಣಗೆ ಮಾಡುವೆ
ಮೈದುನ ರಾಮಯ್ಯ ಮಲಹರ ಮಡಿವಾಳ
ಮರುಳ ಶಂಕರ ಸಿದ್ಧರಾಮಗೆ ಮಾಡುವೆ ॥ ೧ ॥

ನಿಂಬೆಕ್ಕ ನಾಗಯ್ಯ ಬೆಂಬಿಡದ ಚಾಮರ
ಕಂಬಳಿ ಮರುಳ ಕಕ್ಕಯ್ಯನಿಗೆ । ಮಾಡುವೆ ಶರಣು
ಉಂಬ ಪ್ರಸಾದದಲಿ ಉದ್ಭವಿಸಿದಾತಗೆ ।
ಅಂಬಿಗರ ಚೌಡಯ್ಯ ಘನಘಟ್ಟಿವಾಳಗೆ । ಮಾಡುವೆ ಶರಣ ॥ ೨ ॥

ಮಲ್ಲಿಬೊಮ್ಮಯ್ಯನಿಗೆ ಮಧುವರಸ ಬಾಚರಸ
ಬಿಲ್ವ ಬಿಂಕದ ಮಾರಯ್ಯನಿಗೆ । ಮಾಡುವೆ ಶರಣು
ಬಲ್ಲಾಳ ಗೊಲ್ಲಾಳ ಕನ್ನಪ್ಪ ಕಲಿಕಾಮ ।
ನುಲಿಯ ಚಂದಯ್ಯ ಮೋಳಗಿ ಮಾರಯ್ಯಗೆ ಮಾಡುವೆ ಶರಣು ॥ ೩ ॥

ಸತ್ಯಕ್ಕ ಪಿಟ್ಟವ್ವೆ ನೀಲಲೋಚನಗೆ
ಮುಕ್ತಾಯಿ ಚಂಗಳೆ ಗೊಗ್ಗವ್ವೆಗೆ ಮಾಡುವೆ ಶರಣು
ಸತ್ತ ಗಂಡನ ಪಡೆದ ಹೆತ್ತಮಗನ ಕೊಂದ
ಬತ್ತಲೆ ಕದಳಿಯೊಳು ಪೊಕ್ಕ ಮಹಾದೇವಿಗೆ । ಮಾಡುವೆ ಶರಣು ॥ ೪ ॥

ಏಳ್ನೂರೆಪ್ಪತ್ತು ಅಮರಗಣಂಗಳು
ಅರವತ್ಮೂರು ಪುರಾತನರಿಗೆ । ಮಾಡುವೆ ಶರಣು
ಪರಿಪರಿ ಶ್ರೀಗಂಧ ಪುಷ್ಪ ದೀಪಧೂಪ
ಪರಿಪರಿಯಿಂದಲಿ ಶ್ರೀ ಪ್ರಭುವಿನ ಪಾದಕ್ಕೆ । ಮಾಡುವೆ ಶರಣು ॥ ೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ
– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ, ಶ್ರೀಮತಿ ಸಂಗಮ್ಮ

***

ಬಸವ ಬಂದಿದರೇನೆ

ಬಸವ ಬಂದಿದುರೇನ್ಯೆ ಬಸವ ಪುರಾಣ ಹಚ್ಚಿದುರೇನೆ
ಬಸವನ ಸುತ್ತ ಶರಣರೆ ಕಲ್ಯಾಣದ
ಬಸವ ಬಂದಿದುರೆಯ್ ॥ ಪ ॥

ಕಲ್ಲಿಗಿ ಮುಕ್ಹಾಕಿ ಎಲ್ಲ ದೇವರ ನೆನುದ
ಮಲ್ಲಯ್ಯನ ನೆನುದಯ್ ಮನದಾಗ
ಶರಣರ ಬಸವ ಬಂದಿದುರೆಯ್ ॥ ೧ ॥

ಅಕ್ಕ ಮಹಾದೇವಿಗಿ ಅಕ್ಕಿಯ ಊಡಿಯಕ್ಕಿ
ಮೆತ್ತ್ನೆ ಜಾಳಿಗಿ ನೆನದಂಡಿ ಮಹಾಗಾಂವ
ಹಳ್ಳದ ಮುಂದಿರುವ ಹರದಿಗಿ
ಕಲ್ಯಾಣದ ಬಸವ ಬಂದಿದುರ್‍ಯೆ ॥ ೨ ॥

ಬಸವಣ್ಣ ನಿಮ್ಮಂತ ಭಕುತಿಉಳ್ಳವರಿಲ್ಲ
ನೀಲಮ್ಮನಂತ ಶರಣಿಲ್ಲ ಕಲ್ಯಾಣದ ಬಸವ ಬಂದಿದುರ್‍ಯೆ
ನೀಲಮ್ಮನಂಥ ಶರಣಿಲ್ಲ ಕಲ್ಯಾಣದ ನಾಗಮ್ಮನಂತ
ಗರತಿಲ್ಲ ಕಲ್ಯಾಣದ ಬಸವ ಬಂದಿದುರ್‍ಯೆ ॥ ೩ ॥

ಹಾಸಗಲ್ಲಿನ ಮೇಲ ಹಾಯ್ದು ಹೋದವರ್‍ಯಾರೆ
ಪಾದ ಮೂಡ್ಯಾವ ಪರಿ ಪರಿ ಕಲ್ಯಾಣದ ಬಸವ ಬಂದಿದುರ್‍ಯೆ
ಪಾದಾನೆ ಮೂಡ್ಯಾವ ಪರಿ ಪರಿ ಬಸವಣ್ಣ
ಹಾಯ್ದು ಹೋಗ್ಯಾರೆ ಜಳಕಕ್ಕೆ ಕಲ್ಯಾಣದ ಬಸವ ಬಂದಿದುರ್‍ಯೆ ॥ ೪ ॥

– ಶ್ರೀಮತಿ ಮಹೇಶ್ವರಿ ಪಾಟೀಲ

***

ಸತ್ಯಶರಣನ ಭಜನಿ

ಸತ್ಯ ಶರಣರ ಭಜನಿ ಮಾಡನು ಬನ್ನಿರವ್ವಾ ನಾವು
ಮಾಡನು ಬನ್ನಿರವ್ವಾ ಗುರುವಿನ ಲೀಲೆಯೊಳು
ಹೊತ್ತಗಳೆಯೋನವ್ವಾ ಓಂ ಶಿವಾಯನವ್ವಾ ॥ ಪ ॥

ಆರುಮೂರು ಕೂಡಿ ಒರಳಿಗಿ ಹಾಕಿನವ್ವಾ
ಒರಳಿಗಿ ಹಾಕಿನವ್ವಾ ಆರು ಮೂರುಕೂಡಿ
ಒರಳೇ ನುಂಗಿತವ್ವಾ ಓಂ ಶಿವಾಯನವ್ವಾ ॥ ೧ ॥

ಬಂಗಾಲ ದೇಶದಿಂದ ಒಬ್ಬ ಸಾಧು ಬಂದನವ್ವಾ
ಅಲ್ಲಿ ಒಬ್ಬ ಸಾಧು ಬಂದನವ್ವಾ ಹಾಗೂ ಹೀಗೂ ಕೂಡಿ
ಭೋದ ಮಾಡ್ಯಾನವ್ವಾ ಓಂ ಶಿವಾಯನವ್ವಾ ॥ ೨ ॥

ಹಿಂದಿನ ಶರಣರು ಹಿಂದೆ ಸಾಗ್ಯಾರವ್ವಾ
ಅವರು ಮುಂದಿನ ಶರಣರು ಮುಂದೆ
ಸಾಗ್ಯಾರವ್ವಾ ಓಂ ಶಿವಾಯನವ್ವಾ ॥ ೩ ॥

ಕಲ್ಯಾಣ ಕಲಬುರ್ಗಿ ಬಸವರಾಜರವ್ವಾ
ಅವರು ಬಸವರಾಜರವ್ವಾ ಬಸವ ಪರಮಾತ್ಮನಲಿ
ಕೂಡಿ ಕೊಂಡಾರವ್ವಾ ಓಂ ಶಿವಾಯನವ್ವಾ ॥ ೪ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ದೇವತಾ ಸ್ತುತಿ

ಪರಮ ಪ್ರಭುವೆ ನಿಮ್ಮ ಸ್ಮರಣೆಯೊಳೆನ್ನಮನ
ಸ್ಥಿರವಾಗಿ ನಿಂತು ಧ್ಯಾನಿಸುತಿರಲಿ
ಕರಿಗೆ ಕೇಸರಿ ವೈರಿ ಎಂತೆನ್ನ ದುರಿತನಕ್ಕೆ
ಹರ ನಿಮ್ಮ ನಾಮವು ಹಗೆಯಾಗಲಿ ॥ ಪ ॥

ದಿನಕರನು ದಯಕ್ಕೆ ಮಿನುಗು ಚುಕ್ಕೆಗಳೆಲ್ಲ
ಕ್ಷಣದಲಿ ಮಾಯವಾಗುವ ತೆರದಿ
ಘನಮಹಿಮ ನಿಮ್ಮ ತೇಜದೊಳೆನ್ನ ದೋಷವು
ಎನಿತಿಲ್ಲದಂತೆ ಹೋಗಲಿ ಭರದೀ ॥ ೧ ॥

ಅಸುರತನದಲಿ ಘೋರ ಸಂಸಾರ ಸಾಗರದಿ
ದೆಸೆದಿಕ್ಕುಗಾಣದೆ ಮುಳುಗುತಿಹನು
ಶಶಿಮೌಳಿ ನೀವೆನ್ನ ಶಿಸು ಎಂದು ಕರವಿಡಿದು
ಎಸೆದು ಸಂತವಿಸುತ್ತ ಸಲಹೆನ್ನನು ॥ ೨ ॥

ಬಾನಲ್ಲಿ ಮೋಡ ಮುಸುಕಿ ಮಳೆಯನು ಸುರಿಸಿ
ಮಾಣದೆ ಜಗವ ರಕ್ಷಿಪುದು ತಾನು
ಜ್ಞಾನನಿಧಿಯ ಅಂತಃಕರಣ ವಾರಿಧಿಯಿಂದ
ದೀನ ತಬ್ಬಲಿ ಎನ್ನ ಪೊರೆಯೋ ನೀನು ॥ ೩ ॥

ಬಂದು ಪರಿಮಳ ಕಳಿಸಿ ತುಂಬಿಯು ತರುಲತೆಯ ಹೊಂದಿ
ಕಂಪನು ಸವಿಯುವಂದದಲಿ

ತಂದೆ ಶ್ರೀ ಗುರುಸಿದ್ಧ ನಿಮ್ಮ ಚರಣದೊಳೆನ್ನ
ಕುಂದದೆನ್ನಯ ಮನಮೀಸಲಿರಲಿ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಶ್ರೀಗುರುಪಾದ ಸ್ತೋತ್ರ

ಎನ್ನ ರಕ್ಷಿಸು ಬಂದು ಚನ್ನ ಶ್ರೀಗುರುಪಾದ
ಮುನ್ನೊಂದು ಜನ್ಮದೊಳು ಪಡೆದ ಪಾದ ॥ ಪ ॥

ಹರಿನೇತ್ರ ಕಮಲವನ್ನುಧರಿಸಿ ಚಲಿಸಿದ ಪಾದ
ಸರಸಿಜೋದ್ಭವಗೆ ವರವಿತ್ತ ಪಾದ
ಸುರಮನುನಿಗಳು ಬಿಡದೆ ಪೂಜಿಸಿದ ಶ್ರೀಪಾದ
ಪರಮ ಪರತರ ಪಾದ ಭರಿತ ಪಾದ ॥ ೧ ॥

ಮಂದಾರ ಗಿರಿಯಲ್ಲಿ ಮೂರ್ತಮಾಡಿದ ಪಾದ
ಅಂದಕಾ ಸಾಧನೆದೆಯ ತುಳಿದ ಪಾದ
ನಂದಿ ನೇರುವ ಪಾದ ಇದು ಶೋಭಿತಪಾದ
ಸಿಂಧು ಬಲ್ಲಾಳನ ವಂದನೆಯ ಪಾದ ॥ ೨ ॥

ದುರುಳ ರಾವಣನ ಶಿರವನು ಧರಣಿಗೊತ್ತಿದ ಪಾದ
ಎನ್ನ ಕರವನು ಸೂರೆಗೊಂಡ ಪಾದ
ಸಿರಿಯಾಳನಣುಗನ ಕೊರಳಕೊಯ್ಸಿದ ಪಾದ
ಕುಂಬಾರನ ಮುಂದೆ ಕುಣಿದ ಪಾದ ॥ ೩ ॥

ಬಸವಾದಿ ಪ್ರಮಥರು ಹರುಷ ತಾಳಿದ ಪಾದ
ವಸುಧೆಯೊಳು ಈ ಪಾದ ಅರಸು ಪಾದ
ದಸುರಯ್ಯ ದಾಸಿಮಯ್ಯ ಪಿಡಿದ ಮೋಹದ ಪಾದ
ದಶದಿಕ್ಕಿನೊಳಗೆ ಸಮವಲ್ಲದ ಪಾದ ॥ ೪ ॥

ನನ್ನಯ್ಯ ನಾಗಯ್ಯ ಸ್ಮರಣೆಯೊಳಗಿರುವ ಪಾದ
ಹೊನ್ನು ತಂದೆಗಳು ನಂಬಿದಂಥ ಪಾದ
ಚನ್ನಯ್ಯ ಕನ್ನನಿಗೆ ಮುಕ್ತಿ ದೂರಿದ ಪಾದ
ಇನ್ನುಳಿದ ಗಣರಿಗೆಲ್ಲ ಐಕ್ಯಪಾದ ॥ ೫ ॥

ನೀಲಲೋಚನೆ ಗಂಗಮ್ಮ ನುಲೆಸಿದ ಪಾದ
ಬಾಲ ಅಮ್ಮವ್ವಗ ಮಗನಾದ ಪಾದ
ಮೇಲಾದ ಶರಣರ ಮನಕೆ ಮೆಚ್ಚುವ ಪಾದ
ನಾಲ್ಕುಪದವಿಯ ಮೀರದಂಥ ಪಾದ ॥ ೬ ॥

ಇಷ್ಟಲಿಂಗದ ಪಾದ ಶ್ರೇಷ್ಟಸದ್ಗುರು ಪಾದ
ಮುಟ್ಟಿ ಎರಗುವದು ಜಂಗಮನ ಪಾದ
ಅಷ್ಟವರ್ಣದ ಪಾದ ಷಟಸ್ಥಲ ಶಿವಪಾದ
ನಿಷ್ಟವಂತರ ಪಂಚ ಪರುಷ ಪಾದ ॥ ೭ ॥

ಪನ್ನೀರು ಗಂಧಾಕ್ಷತೆ ಪರಿಮಳದ ಶ್ರೀಪಾದ
ಪರಿ ಪರಿ ಪುಷ್ಪ ಸಂಭ್ರಮದ ಪಾದ
ಧೂಪ ಅರ್ಪಿತ ಪಾದ ದೀಪ ಬೆಳೆಸುವ ಪಾದ
ಉಪಕರಣ ಸ್ತೋತ್ರಕ್ಕೆ ಒಪ್ಪಿತ್ತು ಪಾದ ॥ ೮ ॥

ನಾದ ಬಿಂದು ಕಳಾತಿತ ಮಹತ್ವದ ಪಾದ
ಬೇರೆ ಭೇದವು ಚಕ್ರ ಅಡರದ ಪಾದ
ಶೋಭಿಸಿದ ಲಿಂಗಾಂಗ ತೃಪ್ತಿ ಅರುಹಿದಪಾದ
ಸದಮಲ ಜ್ಞಾನದೋಳು ಸುಳಿದ ಪಾದ ॥ ೯ ॥

ಕರುಣ ಪ್ರಸಾದವನು ರುಚಿಯಗೊಂಬುದ ಪಾದ
ವರ ವಸ್ತ್ರಾಭರಣ ಪರಿಪೂರ್ಣ ಪಾದ
ನಿರುತದಿ ವೀಳ್ಯವ ಸವಿದು ತೃಪ್ತಿಸಿದ ಪಾದ
ಹರುಷಾಬ್ಧಿಯೊಳೀ ಮನ ಮುಳಗಿಸಿದ ಪಾದ ॥ ೧೦ ॥

ಈ ಪಾದದರ್ಥವನ್ನು ಬರೆದೋದಿ ಕೇಳಿದವಗೆ
ಬೇಡಿದಿಷ್ಟಾರ್ಥವು ದೊರೆಕೊಂಬುದು
ಪಾದ ಬೆರತುರ ಪತಿಯಂದು ನಂಬಿದರ್ಗೆ
ಮಹಾದೇವ ತನ್ನೊಳಗೆ ಐಕ್ಯರ್ಥವು ಎನ್ನ ರಕ್ಷಿಸು ॥ ೧೧ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಕಲ್ಯಾಣದಯ್ಯ ಬಂದ

ಕಲ್ಯಾಣದಯ್ಯ ಬಂದ ಕಾಲಿಗಿ ನೀರ ಕೊಡ
ನೀಲಗದ್ದಿಗಿ ಹೊರಗಿಡ । ಭಜನಿ ಮಾಡುತಾ
ನೀಲನೇ ಗದ್ದಗಿ ಹೊರಗಿಡ ಹಡದವ್ವ
ಶರಣೆ ನಿನ್ನ ಮನಿಗಿ ಶಿವ ಬಂದ । ಭಜನಿ ಮಾಡುತಾ ॥ ೧ ॥

ಗಂಗಾಳ ಮಾಟದ ಗಡಿನನ್ನ ಹುಲಸೂರ
ಗಡಿದಾಗಾಡ್ಯಾವ ಗಿಳಿಹಿಂಡ । ಭಜನಿ ಮಾಡುತಾ
ಗಡಿದಾಗಾಡ್ಯಾವ ಗಿಳಿಹಿಂಡ ಗುರುಬಸಪ್ಪನ
ಮಠದಾಗಾಡ್ಯಾರ ರೈತರು । ಭಜನಿ ಮಾಡುತಾ ॥ ೨ ॥

ಶಾವಿಗಿ ಊಟ ಚಂದ ಶಾವಂತಿಗಿ ಹೂ ಚಂದ
ದರಬಾರ ಚಂದ ಹುಲಸೂರ । ಭಜನಿ ಮಾಡುತಾ
ದರಬಾರ ಚಂದ ಹುಲಸೂರು ಶಿವಾನಂದ
ಮಠದಾಗ ನಡಿವ ಭಕುತಿ ಬಲು ಚಂದ । ಭಜನಿ ಮಾಡುತಾ॥ ೩ ॥

ಎದ್ದ ಗಳಗಿ ನೆನದಿನಿ ಗದ್ದಿಗಿರಾಯ ನಿಮಗ
ಇದ್ದ ಊರಾಗಿರುವ ಒಡಿಯಾಗ । ಭಜನಿ ಮಾಡುತಾ
ಇದ್ದ ಊರಾಗಿರುವ ಬಸವಣ್ಣ ನಾ ನಿಮ್ಮ
ಎದ್ದೊಂದು ಗಳಿಗಿ ನೆನದಿನಿ । ಭಜನಿ ಮಾಡುತಾ ॥ ೪ ॥

ಸತ್ಯುಳ್ಳ ಗುರುಬಸಪ್ಪಗ ಸಕ್ಕರಿ ಹಂಚಿದ
ಮತ್ತೇ ಹುಲಸೂರ ಮಠದಾಗ । ಭಜನಿ ಮಾಡುತಾ
ಮತ್ತ ಹುಲಸೂರ ಮಠದಾಗ ಭಕುತಿಲಿ
ಬಾದಾಮಿ ಹಂಚಿ ಬಗಿಲಿಂದೆ । ಭಜನಿ ಮಾಡುತಾ ॥ ೫ ॥

ಸಂಗಯ್ಯಗ ಹೋಗಲಾಕ ಸಂಗಡ ಮಗಬೇಕ
ಕಳಸ ಹಿಡಿಲಾಕ ಸೊಸಿಬೇಕ । ಭಜನಿ ಮಾಡಾತಾ
ಕಳಸ ಹಿಡಿಲಾಕ ಸೊಸಿಬೇಕ ಜ್ಯೋತೆಮ್ಮಾ
ಜಳಕ ಮಾಡಲಾಕ ಮಗಬೇಕ । ಭಜನಿ ಮಾಡುತ ॥ ೬ ॥

– ಶ್ರೀಮತಿ ಕಾಡಾದಿ ಗೌರವ್ವ

***

ಹುಟ್ಟಿ ಬಂದೊಮ್ಮೆ ಕಲ್ಯಾಣಕ ನಡೀರಿ

ಹುಟ್ಟಿ ಬಂದೊಮ್ಮೆ ಕಲ್ಯಾಣಕ ನಡೀರಿ
ಅಣ್ಣ ಬಸವಣ್ಣನನ ದರುಶನ ಪಡೀರಿ ॥ ೧ ॥

ನಮ್ಮ ಕಲ್ಯಾಣ ಬಸವಣ್ಣನವರು
ಕಾಲ ಲೀಲೆ ಯೋಗಿಗಳು ॥ ೨ ॥

ನಮ್ಮ ಕಲ್ಯಾಣಪುರದಲ್ಲಿ
ಅಲ್ಲಮ ಪ್ರಭು ಇರುವರಲ್ಲಿ ॥ ೩ ॥

ನಮ್ಮ ಅನುಭಾವ ಮಂಟಪದಲ್ಲಿ
ಅಕ್ಕ ಮಹಾದೇವಿ ಇರುವಳಲ್ಲಿ ॥ ೪ ॥

ನಮ್ಮ ಕಲ್ಯಾಣ ಕೈಲಾಸದಲ್ಲಿ
ಎಲ್ಲ ಶರಣಾರಿರುವರಲ್ಲಿ ॥ ೫ ॥

– ಶ್ರೀಮತಿ ಶಕುಂತಲಾ ಕಂಟೆಪ್ಪಾ

***

ಉಳುವಿಗೆ ಹೋಗುವ ಸಡಗರ

ಉಳುವಿಗೆ ಹೋಗುವ ಸಡಗರ ಏನು ಹೇಳಲಿ
ಕರಿಯ ಹೊಳಿಯಾಗ ಜಳಕವ ॥ ಪ ॥

ಕರಿಯ ಹೊಳಿಯಾಗ ಜಳಕವ ತಾವು ಮಾಡಿಕೊಂಡು
ಶಿವಪುರದಾಗ ಇಳದಾರ
ಶಿವಪುರದಾಗ ಇಳದಾರ ನೀಲವ್ವ ನಿನ್ನ
ಬಸವನಂದ ದಾರಿ ನಡದಾರ ॥ ೧ ॥

ಕುದರಿಯ ಕುಣಸೂತ ಆನಿಯ ನಡಸೂತ
ಅರಗಿಳಿಗೆ ಮಾತ ಕಲಸೂತ
ಅರಗಿಳಿಗೆ ಮಾತ ಕಲಸೂತ ನನ ಕಂದವ್ವ
ಧೊರಿಗಳು ಹೊಂಟಾರ ಜಳಕಕ್ಕ ॥ ೨ ॥

ಅಡಕಿಯ ಅಡವೂರು ಸುಣ್ಣದ ಸುಡವೂರು
ಕರಿದು ಹೆಡಗಿಯ ತುಂಬುವರ
ಕರಿದು ಹಡಗಿಯ ತುಂಬುವರ ಕರಿಗಡಬು
ತವರುಮನಿಯ ನನ ಸಡಗರ ಬಿಟ್ಟ ಬರಲಾರೆ ॥ ೩ ॥

ಅರಶಿಣದ ತೆನಿಹಂಗ ಅರಸಿ ನನ ಕಂದವ್ವ
ಅಗಶ್ಯಾಗ ಮೇಣೆ ಇಳದಾಳ
ಅಗಶ್ಯಾಗ ಮೇಣೆ ಇಳದಾಳ ನನ ಕಂದ
ಅರಸ ನಿಮ್ಮಕ್ಕ ಹೌದೇನ ॥ ೪ ॥

ಕನ್ನೆಯ ಮಡಿಮಾಸಿ ತಣ್ಣೀರ ಮುಳಗ್ಯಾಳ
ಚನ್ನಕುಂಡಲದ ಹೊಳಿಯಾಗ
ಚನ್ನಕುಂಡಲದ ಹೊಳಿಯಾಗ ನನ ಕಂದವ್ವ
ಕನ್ನೆ ಹಾರುವರ ಮಗಳೇನ ॥ ೫ ॥

– ಕೃತಿ: ಜನಪದ ಪರಿಮಳ

***

ಸತ್ಯವುಳ್ಳ ಶರಣರ ಭಜನೆ ನಿತ್ಯ ಮಾಡಿದೆನವ್ವ

ಸತ್ಯವುಳ್ಳ ಶರಣರ ಭಜನೆ ನಿತ್ಯ ಮಾಡಿದೆನವ್ವಾ
ನಾ ನಿತ್ತೆ ಮಾಡಿದೆನವ್ವಾ
ಶರಣರ ಸೇವೆಯೊಳಗೆ ಮರೆತೆಹೋದೆನವ್ವಾ
ಓಂ ನಮಃಶಿವಾಯ ಓಂ ನಮಃಶಿವಾಯ ॥ ೧ ॥

ರಾಯ ರಾಯರೊಳಗೊಂದ್ ನ್ಯಾಯ ಬಿದ್ದೀತವ್ವಾ
ಒಂದ್ ಜಗಳ ಬಿದ್ದೀತವಾ
ನ್ಯಾಯಾ ನ್ಯಾಯಾದ ಗುರುವು ಮಾಯವಾದನವ್ವಾ
ಓಂ ನಮಃಶಿವಾಯ ಓಂ ನಮಃಶಿವಾಯ ॥ ೨ ॥

ಒಂದೇ ಗೋಧಿಯ ತಂದು ಹಿಟ್ಟು ಮಾಡಿದೆನವ್ವಾ
ಮೂರ್ ಕಡಬು ಮಾಡಿದೆನವ್ವಾ
ಶರಣಾರಿಗೆಲ್ಲ ಬಡಿಸಿ ಮೂರೆ ಉಳಿದಾವವ್ವಾ
ಓಂ ನಮಃಶಿವಾಯ ಓಂ ನಮಃಶಿವಾಯ ॥ ೩ ॥

ಗುರುವನ್ನು ಕೂಡುವುದು ಎಂಥ ಪುಣ್ಯವವ್ವಾ
ಇದು ಎಂಥಾ ಸುಕೃತವವ್ವಾ
ಗುರುವೀನ ಚರಣಕ್ಕೆರಗುವುದೆಂಥ ಸಾಧನವವ್ವಾ
ಓಂ ನಮಃಶಿವಾಯ ಓಂ ನಮಃಶಿವಾಯ ॥ ೪ ॥

ಸತ್ಯವುಳ್ಳ ಶರಣರ ಭಜನೆ ಮಾಡಿದೆನವ್ವಾ
ನಾ ನಿತ್ತೆ ಮಾಡಿದೆನವ್ವಾ
ಶರಣರ ಸೇವೆಯೊಳಗೆ ನಾಮರತೆ ಹೋದೆನವ್ವಾ
ಓಂ ನಮಃಶಿವಾಯ ಓಂ ನಮಃಶಿವಾಯ ॥ ೫ ॥

–ಕೃತಿ: ಮುತ್ತುಮುತ್ತಿನ ತ್ವಾಟ

***

ಸ್ವಾಮಿ ಎದ್ದು ಬರುತಾರೆ

ಎನ್ನ ಹೃದಯ ಕದ್ದು ನೀವೆ
ಗುಬ್ಬಿ ಚೆನ್ನಬಸವಲಿಂಗ ತಾವೇ
ನಿನ್ನ ನಂಬಿದ ಸದ್ಭಕ್ತರಿಗಿಷ್ಟಾರ್ಥವ
ಚೆನ್ನಾಗಿ ಪಾಲಿಸು ಸಾಕ್ಷಾತ್ರ್ಪಭುವೆ । ಎನ್ನ ಹೃದಯ ..... ॥ ೧ ॥

ನಲ್ಲೆ ಕೈಲಾಸದಿಂದಿಳಿವೆ
ನಲ್ಲೆ ಕೈಲಾಸದೊಳ ಬೆರದೆ
ನಲ್ಲೆ ಬೊಮ್ಮಣ್ಣ ಜಗದೇವರ ಕೈ ಪಿಡಿದ
ಬಲ್ಲೀದ ಬಿಜ್ಜಳ ರಾಯರ ಕೈ ಓಡಿವೆ । ಎನ್ನ ಹೃದಯ ..... ॥ ೨ ॥

ರುದ್ರಾಕ್ಷಿ ಮಂಟಪ ಸೇರಿ
ಸ್ವಾಮಿ ಎದ್ದು ಬರತಾರೆ ಸವಾರಿ
ಇತ್ತೆಡ ಬಲ ಚಂದ್ರ ಸೂಡ ಮಾಣಿಕ್ಯಾಲ
ಮುದ್ದು ಬೆಳಕಿನೊಳಿರುವ ವೀರಾತ್ಮರಿಗೆ । ಎನ್ನ ಹೃದಯ ..... ॥ ೩ ॥

ಉಳುವೆಯ ಮನೆಯೊಳು ಪೊಕ್ಕ
ಅಕ್ಕ ಬಳಗವನೆಲ್ಲ ಮಿಕ್ಕೆ
ಅಳವಡಿಸಿದೆ ಗುಬ್ಬಿ ಕಳುಹಿದೆ ಶಾಂತಾನ
ಕಳಸೀದೆ ಶಾಂತಾನ ನೆಲೆಸಿದ ಸ್ಥಳದೊಳು । ಎನ್ನ ಹೃದಯ ..... ॥ ೪ ॥

ಸೂರ್ಯ ಚಂದ್ರರ ಬೀದಿ ಮುಂದೆ
ಬಹು ಚೆಂದವಾಗಿ ತೋಪಿನ್ಹಿಂದೆ
ಹಿಂದೆ ಹೂವಿನ ತೋಟ ಮುಂದೆ ಕುಂದಣ ತೋಟ
ಚಂದವಾಗಿರ್ಪರು ಸುಂದರ ಯೋಗಿಯು । ಎನ್ನ ಹೃದಯ ..... ॥ ೫ ॥

ಒಂಭತ್ತು ನೆಲೆಯ ತೇರಿನೊಳು
ಸುತ್ತು ಸಂಭ್ರಮ ಅಖಿಲಾಮ್ಯಗಗಳು
ತುಂಬಿದ ಸಭೆ ತಾಳ ಮೇಳ ಒಡ್ಯಾಣಗಳು
ರೆಂಬೆ ಪುಷ್ಪಗಳಿಂದ ರಥದೊಳಗಿರುವಂಥ । ಎನ್ನ ಹೃದಯ ...... ॥ ೬ ॥

ಲಕ್ಷ ದೀಪದ ಬೆಳಕಿನೊಳಗೆ
ಬಹು ಪಕ್ಷ ಭಕ್ತರ ಸಂತೋಷದೊಳು
ಪ್ರತ್ಯಕ್ಷವಾದ ಚೆನ್ನಪ್ಪ ಬಸವಯೋಗಿ
ಚೆನ್ನಾಗಿ ಪಾಲಿಸು ಸಾಕ್ಷಾತ್ಪ್ರಭುವೆ । ಎನ್ನ ಹೃದಯ ...... ॥ ೭ ॥

ಮುಕ್ತಾಂಗನೇರೆಲ್ಲ ಕೂಡಿ
ಮುತ್ತೀನಾರುತಿಗಳ ಮಾಡಿ
ಭಕ್ತಿಯಿಂದ ಬೇಡಿಕೊಂಡು
ಹಾಡಿಕೊಂಡಾಡುವೆ ಪಾಡಿ । ಎನ್ನ ಹೃದಯ ...... ॥ ೮ ॥

– ಕೃತಿ: ಮುತ್ತುಮುತ್ತಿನ ತ್ವಾಟ

***

ತೂಗಿರೆ ಚೆನ್ನಯ್ಯನ

ನನ್ನಯ್ಯನ ತೂಗೀರೆ ಚೆನ್ನಯ್ಯನ ತೂಗೀರೆ
ಚೆನ್ನುವಾದ ಚೆನ್ನಮಲ್ಲಿಕಾರ್ಜುನನ
ಚೆನ್ನಿಗಿತ್ತೆರೆದ್ದು ತೂಗೀರೆ ॥ ೧ ॥

ಹರನೆಂದು ತೂಗೀರೆ ಶಿವನೆಂದು ತೂಗೀರೆ
ಹರಿಹರದ್ಯೆಯನು ತೂಗಿರೆ ಹರಿದು ಹೋಗುವ ತಾನು
ಹರದೆರಂದ್ಯೆವರು ತೂಗೀರೆ ॥ ೨ ॥

ಹುಟ್ಟಬಾರದ ಶಿಶವು ಹುಟ್ಟಿತು ಈ ಕಲಿಯೊಳಗೆ
ಸೃಷ್ಟಿ ಶ್ಯಾವಂತೆರು ತೂಗಿರೆ ಕಟ್ಟವಾಣಿಗಂಡು ಕಲಕನಿನಾದವೆ
ತೊಟ್ಟಿಲದ ಗೈದಾನ ತೂಗಿರೆ ॥ ೩ ॥

ಹರಳ್ಳಿ ಮಗಗಿ ಬೆರಳಿಗೊನ್ನುಂಗುರ
ಬೆರಳ ಸೀಪಿ ಸೀಪಿ ಅಳುತಾನೆ ಇರುಳೆದ್ದು
ಅಳುತಾನೆ ನೆನೆಯ ಬೈತಲೇರು ತೂಗಿರೆ ॥ ೪ ॥

ಬಾಗೂತ ಬಳುಕೂತ ಬಲಗಾಲು ಮುಂದಿಡುತ
ತೂಗೂತ ಜಂಜುರಿ ಪಾಡುತ ಅಣ್ಣ ಚೆನ್ನಬಸವಣ್ಣನ
ಮನೆಯೊಳಗೆ ಹೆಣ್ಣು ಸಂತಾನ ಬೇಡಿ ಪುಣ್ಯ
ವುಳ್ಳವರೆದ್ದು ತೂಗೀರೆ ॥ ೫ ॥

ಬಸವಣ್ಣ ಹುಟ್ಟಿ ಬಸವ ಮತಕೆ ಬಂದು
ಬೈರುಪೇರು ತೂಗೀರೆ ಬಸವಣ್ಣ ಕೊಟ್ಟ ಭಾಷೆಗೆ
ತಪ್ಪುವನಲ್ಲ ದಶಮುಖದವರೆದ್ದು ತೂಗೀರೆ ॥ ೬ ॥

ಕಂದಾನ ತೊಟ್ಟಿಲಿಗೆ ಗೊಂಡೇದ ಹಾಸಿಗೆ
ಗಂಗಾಧರನೆಂದು ತೂಗಿರೆ ಗಂಗಾಧರಯ್ಯ
ಇಳದಿಗೆ ವಸ್ತ್ರವ ಬೇಡಿ ಶಂಭುಶಂಕರನೆಂದು ತೂಗಿರೆ ॥ ೭ ॥

– ಕೃತಿ: ಮುತ್ತುಮುತ್ತಿನ ತ್ವಾಟ

***

ಸತ್ಯ ಶರಣರ ಭಜನಿ

ಸತ್ಯಶರಣರ ಭಜನಿ ನಿತ್ಯ ಮಾಡಿದಿನೆವ್ವ ನಾ
ನಿತ್ಯ ಮಾಡಿದೆನಿ । ಸತ್ಯ ಶರಣರಿಗೆ ಗುರು ಸಾಧ್ಯವಾದನವ್ವ
ಓಂ ಶಿವ ಯವ್ವ ॥ ೧ ॥

ಮ್ಯಾಗಲ ದೇಶದಿಂದ ಒಬ್ಬ ಸಾಧು ಬಂದಾನವ್ವ
ಒಬ್ಬ ಯೋಗಿ ಬಂದಾನವ್ವ
ಸಾಧುವಿನ ವೇಷದಾಗ ದೇವರು ಬಂದಾನವ್ವ
ಓಂ ಶಿವ ಯವ್ವ ॥ ೨ ॥

ಆರು ಮೂರು ಒಬ್ಬಿ ಒರಳಿಗ್ಹಾಕಿದೆನವ್ವಾ ನಾ
ಒರಳಿಗೆ ಹಾಕಿದೆನವ್ವ
ಆರು ಮೂರು ಒಬ್ಬಿ ಒರಳ ನುಂಗಿತವ್ವ
ಓಂ ಶಿವ ಯವ್ವ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಸ್ವಾಮಾರ ಬಂತವ್ವ

ಸ್ವಾಮರ ಬಂತವ್ವ
ತಂಗೀಶರಣರಿಗಿ ಕರಿಯವ್ವ ।
ಶರಣರಿಗಿ ಕರಿಯವ್ವ
ತಂಗೀ ಗುರುವಿನ ನೋಡವ್ವ । ॥ ಪ ॥

ಮುಂಜಾನಿ ಏಳವ್ವ
ತಂಗೀ ಗುರುವಿನ ನೆನಿಯವ್ವ
ಪೂಜಾ ಮಾಡವ್ವ
ತಂಗೀ ವರವ ಬೇಡವ್ವ । ॥ ೧ ॥

ಅಡಗಿ ಮಾಡವ್ವ
ತಂಗೀ ಶರಣರಿಗಿ ಕರಿಯವ್ವಾ
ಬಸವಗ ಕರಿಯವ್ವಾ
ತಂಗೀ ದಾಸೋಗ ನಡಿಸವ್ವಾ । ॥ ೨ ॥

ಕಲ್ಯಾಣ ಬಂತವ್ವ
ತಂಗೀ ಕೈಲಾಸ ನೋಡವ್ವಾ
ಗುರು ಬಸವಗ ನೋಡವ್ವಾ
ತಂಗೀ ವಚನ ತಿಳಿಯವ್ವಾ ॥ ೩ ॥

ಅನುಭಾವ ಮಂಟಪಕ
ತಂಗೀ ಹೋಗರಿ ನಡಿಯವ್ವಾ
ಶರಣರ ನೋಡವ್ವಾ
ತಂಗೀ ಸಾಹಿತ್ಯ ತಿಳಿಯವ್ವಾ । ॥ ೪ ॥

ಕೂಡಲ ಸಂಗಮಕ
ತಂಗೀ ಹೋಗರಿ ನಡಿಯವ್ವಾ
ಗಂಗೆಗ ನಡಿಯವ್ವಾ
ತಂಗೀ ಸ್ನಾನ ಮಾಡವ್ವ । ॥ ೫ ॥

ಸಂಗಮನಾಥಗ
ತಂಗೀ ಕೈಯ ಮುಗಿಯವ್ವ
ಕೈಯ ಮುಗಿಯವ್ವ
ತಂಗೀ ಮುಕ್ತಿ ಪಡಿಯವ್ವಾ । ॥ ೬ ॥

– ಶ್ರೀಮತಿ ಶಾಂತಾಬಾಯಿ ಹೊಳಕುಂದಿ

***

ಶರಣು ಮಾಡುವೆ

ನಮ್ಮ ಕೂಡಲ ಸಂಗನ ಶರಣರ ಪಾದಕ್ಕೆ
ಮಾಡುವೆ ಶರಣು ಮಾಡುವೆ ॥ ೧ ॥

ಮೇದಾರ ಕೇತಯ್ಯ ಮೆರಿಮಿಂಡ ದೇವಯ್ಯ
ಐದಕ್ಕಿ ಮಾರಯ್ಯ ಅಜಗಣ್ಣಗ
ಮೈದುನ ರಾಮಯ್ಯ ಮನೋಹರ ಮಡಿವಾಳ
ಸಾಧಿಸಿ ಮರುಳ ಶಂಕರ ಸಿದ್ಧರಾಮಾಗೆ
ಮಾಡುವೆ ಶರಣು ಮಾಡುವೆ ॥ ೨ ॥

ನಿಂಬೆಣ್ಣ ನಾದಯ್ಯ ಡಂಬ್ಬಿಡದು ಶಾರಮ
ಕಂಬಳಿ ಮರುಳಾದೆ ಕಕ್ಕಯ್ಯಗ
ಉಂಬ ಪ್ರಸಾದವು ಉದ್ಭವಿಸಿದಾತಗೆ
ಅಂಬಿಗರ ಚೌಡಯ್ಯ ಗರನಾಟದೊಳನಾಡಿ
ಮಾಡುವೆ ಶರಣು ಮಾಡುವೆ ॥ ೩ ॥

ಕರೆದು ಎಳ್ನೂರ್ದಾ ಎಪ್ಪತ್ತು ಅಮರ ಗಣಂಗಳು
ಅರವತ್ತು ಮೂರ್ಮಂದಿ ಪೂರ್ರೈತರು
ಪರಿಪರಿ ಪುಷ್ಪ ಶ್ರೀ ಗಂಧದಿ ಉಪದೀಪ
ಪರಿಪೂರ್ಣ ದಿನದಲ್ಲಿ ಪರಮಾತ್ಮನೊಡಗೂಡಿ
ಮಾಡುವೆ ಶರಣು ಮಾಡುವೆ ॥ ೪ ॥

– ಶ್ರೀ ರುಬೇನಪ್ಪ ಕಟ್ಟಿಮನಿ

***

ಶಿವ ಶಿವನ ಸ್ಮರಣಿ ಮಾಡೋ

ಶಿವ ಶಿವನ ಸ್ಮರಣಿ ಮಾಡೋ । ಶಿವ ಶರಣರ ಕೊಂಡಾಡೋ ।
ಭವದ ಬಾಧಿ ಭವ ಬೇಡೋ । ಗುರುವಿನ ಸ್ಮರಣೀಯ ಮರಿಬ್ಯಾಡೋ॥ಪ॥

ಹಡಪದ ಹಂಪಯ್ಯ । ಕಿನ್ನುರಿ ಬ್ರಹ್ಮಯ್ಯ ।
ಅಂಬಿಗೇರ ಚೌಡಯ್ಯ । ಸುಂದರ ನಿಂಬೆಣ್ಣನಾಳಾಗೇ ॥
ಶಿವ ಶಿವನ ಸ್ಮರಣಿ ಮಾಡೋ..... ॥೧॥

ಕುಂಬಾರ ಗುಂಡಯ್ಯ । ಕೆಂಭಾವಿ ಭೋಗಯ್ಯ ।
ಚಿಕ್ಕ ಚನ್ನ ಬಸವಯ್ಯ । ಬೇಡರ ಖನ್ನಪ್ಪನಾಳಾಗೇ ॥
ಶಿವ ಶಿವನ ಸ್ಮರಣಿ ಮರಿಬ್ಯಾಡೋ .... ॥ ೨ ॥

ಮೋಳಿಗಿ ಮಾರಾಯ । ಮಡಿವಾಳ ಮಾಚಯ್ಯ ।
ಆಯ್ದಕ್ಕಿ ಮಾರಾಯ್ಯ । ಅಕ್ಕನಾಗಮ್ಮನಾಳಾಗೇ ॥
ಶಿವ ಶಿವನ ಸ್ಮರಣಿ ಮಾಡೋ ..... ॥ ೩ ॥

ಮಂಗಲ ಮೂರುತಿ । ಜಂಗಮ ಪ್ರಭುದೇವಾ
ಜಂಗಮ ಪ್ರಭುದೇವಾ । ಸಾಧು ಶರಣರಿಗಾಳಾಗೇ ॥
ಶಿವ ಶಿವನ ಸ್ಮರಣಿ ಮಾಡೋ ..... ॥ ೪ ॥

ಇನ್ನುಳಿದ ಶರಣರ । ಪಾದರಕ್ಷಿಯ ಪಿಡಿದು ।
ಭಕ್ತಿಯ ಭಾವದುಲೆ । ಮತ್ತು ಮೇಲಾಗಿ ಹರುಷದಲೆ ॥
ಶಿವ ಶಿವನ ಸ್ಮರಣಿ ಮಾಡೋ ...... ॥ ೫ ॥

– ಶ್ರೀಮತಿ ಅನ್ನಪೂರ್ಣ ಬ.ಮಠಪತಿ

***

ಬೇಕು ಬೇಕವ್ವ ಬೇಕು

ಬೇಕು ಬೇಕವ್ವ ಬೇಕು । ಹಿಂದೂಸ್ತಾನಕ್ಕೆಂಥ ಮಕ್ಕಳಿರಬೇಕು ।
ಎಂಥ ಮಕ್ಕಳು ಬೇಕು । ದೇಶಕ್ಕಾಗಿ ದುಡಿಯಬೇಕು ।
ಸಾಮಾಜ ಸೇವೆಯ ಮಾಡುತಲಿರಬೇಕು ॥ ಪ ॥

ಶಿವಶರಣರು ಬೇಕು । ಮೋಳಿಗಿ ಮಾರಯ್ಯನಾಗಿರಬೇಕು
ಮಡಿವಾಳ ಮಾಚಯ್ಯ । ಕಿನ್ನುರಿ ಬೊಮ್ಮಯ್ಯ ।
ಮೇದಾರ ಕೇತಯ್ಯನಂಥ ಮಕ್ಕಳಿರಬೇಕು ।
ಬೇಕು ಬೇಕವ್ವ ಬೇಕು ..... ॥ ೧ ॥

ಶಿವಶರಣೆಯರು ಬೇಕು । ಸೊಲ್ಲಪುರ ರುದ್ರಮ್ಮನವರಂಗಿರಬೇಕು ।
ಸಜ್ಜಲಗುಡ್ಡ ಶರಣಮ್ಮ । ಯಾನಗುಂದಿ ಮಾಣಿಕಮ್ಮ ।
ಗಿರಿಜಾಮಾತೆಯವರಂಥ ಮಕ್ಕಳಿರಬೇಕು ।
ಬೇಕು ಬೇಕವ್ವ ಬೇಕು ..... ॥ ೨ ॥

ಶಿವಶರಣರು ಬೇಕು । ಬಾಗೋಡಿ ಬಸವಣ್ಣನಂಗಿರಬೇಕು ।
ಮಡಿವಾಳ ಮಾಚಯ್ಯ । ಕಿನ್ನೂರಿ ಬೊಮ್ಮಯ್ಯ
ಮೇದಾರ ಕೇತಯ್ಯನಂಥ ಮಕ್ಕಳಿರಬೇಕು
ಬೇಕು ಬೇಕವ್ವ ಬೇಕು ...... ॥ ೩ ॥

ಶಿವಶರಣರು ಬೇಕು । ಆಯ್ದಕ್ಕಿ ಮಾರಯ್ಯನವರಂಗಿರಬೇಕು ।
ಹಡಪದ ಹಂಪಯ್ಯ । ನುಲಿಗೀಯ ಚಂದಯ್ಯ ।
ಬೇಡರ ಕನ್ನಯ್ಯನಂಥ ಮಕ್ಕಳಿರಬೇಕು ।
ಬೇಕು ಬೇಕವ್ವ ಬೇಕು ..... ॥ ೪ ॥

ಶಿವಶರಣರು ಬೇಕು । ಉಳವಿಯ ಚನ್ನಬಸವಣ್ಣನವರಂಗಿರಬೇಕು ।
ಅಥಣಿಯ ಮರುಗೇಶ । ಹಾನಗಲ್ಲ ಕುಮಾರೇಶ ।
ವಿಜಯ ಮಹಾಂತನಂಥ ಮಕ್ಕಳಿರಬೇಕು ।
ಬೇಕು ಬೇಕವ್ವ ಬೇಕು ..... ॥ ೫ ॥

– ಶ್ರೀಮತಿ ಶಾಮಲಾಬಾಯಿ ಕಲ್ಲಪ್ಪ

***

ಮಾಡುವೆನು ಶರಣ

ಮೂಲ ತಿಳಿದು ಮುಕ್ತಿಯ ಪಡೆದ । ಭಕ್ತಿಯ ಬಸವಣ್ಣ ।
ಸಂಗನ ಬಸವ ಶರಣರಿಗೆ ಮಾಡುವೆನು ಶರಣ ॥ ಪ ॥

ರಜಿತಾದ್ರ ರಾಚಯ್ಯಗ ಮಾಡುವೆನು ಶರಣ । ಕಿನ್ನುರಿ ಬಮ್ಮಯ್ಯಗ ।
ಮಾದಾರ ಚನ್ನಯ್ಯಗ ಮಾಡುವೆನು ಶರಣ ॥ ೨ ॥

ಮಡಿವಾಳ ಮಾಚಯ್ಯಗ ಮಡಿ ಮಹಾ ಮಲ್ಲಯ್ಯಗ
ಅಜಗಣ್ಣನವರಿಗೆ ಮಾಡುವೆನು ಶರಣ ॥ ೩ ॥

ಮೆರೆಮಿಂಡಯ್ಯಗ । ಆಯ್ದಕ್ಕಿ ಮಾರಯ್ಯಗ ।
ಮಧುವರಸಗ । ಸಮಗಾರ ಹರಳಯ್ಯಗ ಮಾಡುವೆನು ಶರಣ ॥ ೪ ॥

ಬಿಲ್ಲಿನ ಬಿಂಕದ । ರಾಮಯ್ಯನವರಿಗೆ ಮಾಡುವೆನು ಶರಣ ।
ನಿಂಬೆಣ್ಣ ನಾಗಣ್ಣ । ಬಿಬ್ಬಿ ಬಾಚಯ್ಯಗ ಮಾಡುವೆನು ಶರಣ ॥ ೫ ॥

ಗೊಲ್ಲಾಳ ಬಲ್ಲಾಳ ಕಲಿಕಾಲ ಕನ್ನಪ್ಪಗ ಮಾಡುವೆನು ಶರಣ ।
ಮಿಕ್ಕ ಪ್ರಸಾದ ಸಾರಿದ । ಕಕ್ಕಯ್ಯನವರಿಗೆ ಮಾಡುವೆನು ಶರಣ ॥ ೬ ॥

ನುಲಿ ಚಂದಯ್ಯಗ । ಮೋಳಿಗೆ ಮಾರಯ್ಯಗ ।
ಮುದ್ದು ಸಂಗಯ್ಯಗ ಮಾಡುವೆನು ಶರಣ ॥ ೭ ॥

ಧರೆಯೋಳು ಮರೆಯುವ ವರಪುರ ಬಮ್ಮನ ಜೋಗಿ
ಶರಣಂತಃಕರುಣ ಕಂದ ಭೀಮಣ್ಣ ಕೈ ಮುಗಿದು
ಮಾಡಿದ ಸರ್ವರಿಗೆ ಶರಣು ಶರಣು ॥ ೮ ॥

– ಶ್ರೀ ಭೀಮಣ್ಣ ರಾಮಣ್ಣ ಮಾದಾರ

***

ಬಸವಣ್ಣನ ಹಾಡು

ಅಲ್ಲ್ಯಾರ ಇಲ್ಲ್ಯಾರ ಸಬ್ಬ ಎರಿಯಾಗ ಹಾರ ।
ಕೂಗಿದರ ದನಿಯ ನೋಡ ಕೊಡುತಾರಯ್ ।
ಕೂಗಿದರ ಈ ದನಿಯ ಕೊಡತಾರೊ ಬಸವಣ್ಣಪ್ಪ ।
ಕೂಗಳತಿಯ ಮ್ಯಾಲ ನೋಡ ನೆನದಾರಯ್ ॥ ೧ ॥

– ಶ್ರೀಮತಿ ಅನುಸೂಬಾಯಿ

***

ಕೂಡಲ ಸಂಗನ ಶರಣರು

ನಮ್ಮ ಕೂಡಲ ಸಂಗನ ಶರಣರ ಚರಣಕೆ
ಮಾಡುವೆ ಶರಣು । ಶರಣರಿಗೇ ಮಾಡುವೆ ಶರಣು ॥ ಪ ॥

ಹಡಪದ ಹಂಪಣ್ಣ । ಕೊಂಡಿಯ ಮಿಂಚಣ್ಣ ।
ಮೋಳಿಗಿ ಮಾರಯ್ಯ । ಸಮಗಾರ ಹರಳಯ್ಯಗ ।
ಮಾಡುವೆ ಶರಣು । ಶರಣರಿಗೇ ಮಾಡುವೆ ಶರಣು ॥ ೧ ॥

ನುಲಿಯ ಚಂದಯ್ಯ । ಮಡಿವಾಳ ಮಾಚಯ್ಯ ।
ಮಧುವರಸ ಮಾರಯ್ಯ । ಕುಂಬಾರ ಗುಂಡಯ್ಯಗ ।
ಮಾಡುವೆ ಶರಣು । ಶರಣರಿಗೇ ಮಾಡುವೆ ಶರಣು ॥ ॥ ೨ ॥

ಸೂಚನೆ :– ಅರವತ್ತ್ಮೂರು ಶಿವಶರಣರ ಕುರಿತು ಹಾಗೂ ಸಂಗಮನಾಥನ ಕುರಿತು ಹೇಳುವ ಸ್ತುತಿ ಹಾಡು ಇದು.

– ಶ್ರೀಮತಿ ತುಳಸಮ್ಮ .ಬ. ಹೂಗಾರ

***

ನಡಿರೋ ನಡಿರೋ ಶರಣರ ಭೇಟಿಗಿ

ನಡಿರೋ ನಡಿರೋ ಶರಣರ ಭೇಟಿಗಿ । ಕಲ್ಯಾಣಕ ನಡಿರೋ ॥ ಪ ॥

ಮೋಳಿಗಿ ಮಾರಾಯ । ಇದ್ದಾನ ಬಾಳ ಗಟ್ಟಿರೋ ।
ಸತಿಪತಿ ಇದ್ದರೋ । ಏಕ ನಿಷ್ಠಿರೋ ॥
ಕಟ್ಟಿಗಿ ಮಾರಿ । ತುಂಬಿಸಿಗೊಂಡ್ರೊ ಹೊಟ್ಟ್ಯೊ।
ಹನ್ನೆರಡು ವರುಸೀಗಿ । ಆಗ್ಯಾರ ಬಸವನ ಭೆಟ್ಟಿರೋ ॥ ॥ ೧ ॥

ಏನು ಹೇಳಲಿ । ಶರಣರ ಲೀಲರೋ ।
ಬಸವ ಅಂದವ್ರ । ಬಂದ ಕಂಟಕ ಬೈಲರೋ ॥
ಗುರುಪುತ್ರ । ಆದವಗ ಧೂಲರೋ ।
ರೇವಣ ಸಿದ್ಧಗ ಹೇಳ್ಯಾನ । ಇದರ ಲೀಲರೋ ॥ ೨ ॥

ನಿಮ್ಮ ಮನಸೀನ । ಮೈಲಿಗಿ ತೊಳಿರೋ ।
ಜ್ಞಾನದ ಮಡಿ । ನೀವು ಉಡರ್ಯೋ ॥
ಗುರುವಿಗಿ । ಶಿರಬಾಗಿ ನಡಿರೋ ।
ಕಂದ ಶ್ರೀಶೈಲ । ಹೇಳಿದ್ದು ನಡಿರೋ ॥ ೩ ॥

–ಕೆ.ಎಸ್.ಇವಣಗಿ

***

ಶರಣರು ಬರುತಾರ

ಶರಣರು ಬರುತಾರ ತಂಗಿ ಎಚ್ಚರಿರಬೇಕೇ
ಶರಣರು ಬರುತಾರ ತಂಗಿ ಎಚ್ಚರಿರಬೇಕೇ ॥ ಪ ॥

ಅಣ್ಣ ಬರುತಾರ ಅಣ್ಣ ಬಸವಣ್ಣ ಬರುತಾರ
ಅಣ್ಣ ಬರುತಾರ ಚನ್ನಬಸವಣ್ಣ ಬರುತಾರ
ಅಕ್ಕ ಬರುತಾಳ ಅಕ್ಕಮಹಾದೇವಿ ಬರುತಾಳ
ಅಕ್ಕ ಬರುತಾಳ ಅಕ್ಕನಾಗಮ್ಮ ಬರುತಾಳ ॥ ೧ ॥

– ಶ್ರೀಮತಿ ಲಲಿತಾ ಬಾಬು ಲಾಧಾ

***

ಬದುಕಿದೇನು ಬಸವ ತಂದೆ ನಿಮ್ಮಿಂದ

ಬದುಕಿದೇನು ಬಸವ ತಂದೆ ನಿಮ್ಮಿಂದ ನಿಮ್ಮ
ವಚನ ಸಾಹಿತ್ಯದಿಂದ
ಸಾಧನೆಯ ತಂದೆ ನೀವೇ ನಮ್ಮ ತಾಯಿ ನೀವೇ
ನಮ್ಮ ಬಂಧು ಬಳಗ ಗುರು ॥ ೧ ॥

ಮಡಿವಾಳ ಶ್ರೀ ಮಾಚಿ ತಂದೆ
ಹರಳಯ್ಯ ಮಧುವರಸ ತಂದೆ
ಕಕ್ಕಯ್ಯ ಚಂದಯ್ಯರ ಪಿತನು ನೀವೆಂದೆ
ಜಾತಿಮತಗಳೋ ನಾಕಗೈದ ತಂದೆ ॥ ೨ ॥

ದಯವೇ ಧರ್ಮದ ಮೂಲ ಅರುಹಿನ ತಂದೆ
ವಿಶಾಲ ಬಯಲಲ್ಲಿಯೂ ಹಾರಿ ಗುರುವೇ
ಸರ್ವರ ಹೃದಯದ ಆತ್ಮದ ತಾಯಿ
ಅನುಭವ ಮಂಟಪ ಬಂಧು ಬಳಗವೇ ॥ ೩ ॥

ಅಲ್ಲಮ ಪ್ರಭುದೇವ ಶ್ರೀ ಸಿದ್ಧರಾಮ
ಅಕ್ಕ ಮಹದೇವಿ ಅಣ್ಣ ಬಸವಣ್ಣ
ಕಾಯಕ ಕೈಲಾಸ ಸರ್ವರ ಕಲ್ಯಾಣ
ಆತ್ಮವಾಗಿ ಕೂಡಲಸಂಗಮ ॥ ೪ ॥

–ಶ್ರೀಮತಿ ಜಗದೇವಿ ರಾಮಶೆಟ್ಟಿ

***

ಬಸವಣ್ಣ ಬರುವಾಗ

ನಿಂಗಾ ಎನಗೊಲಿಯೋ ನಿಜ ನಿಂಗ ಎನಗೊಲಿಯೋ
ಬಂಗಾರದ ಬಸವ ಎನಗೊಲಿಯೋ
ಕೊಡೆಕಲ್ಲ ಕೆಂಗಣ್ಣಿನ ಗೂಳಿ ಎನಗೊಲಿಯೋ । ಸೋಬಾನವೆ ॥ ೧ ॥

ಬಸವಣ್ಣ ಬರುವಾಗ ಬೆಸ್ತಾವ ಕೈಲಾಸ
ಅರವತ್ತು ಮಂದಿ ಪುರೋಹಿತರು
ಅರವತ್ತು ಮಂದಿ ಪುರೋಹಿತರು
ಕರಕೊಂಡು ಬಸವ ಭೂಲೋಕಕ್ಕಿಳಿದಾನೊ । ಸೋಬಾನವೆ ॥ ೨ ॥

ಬವ ಭೂಲೋಕಕ್ಕಿಳಿದ ಸಮಯದಲಿ
ಹೂವಿನ ಮಳಿಯ ಸುರಿದಾವೊ
ಹಪ್ಪಳ ಸೆಂಡಿಗಿ ಉಪ್ಪಿನಕಾಯಿ ಮೊದಲಾಗಿ
ತುಪ್ಪದಾಗೆಲ್ಲ ಬದ್ನಿಕಾಯಿ
ತುಪ್ಪದಾಗೆಲ್ಲ ಬದ್ನಿಕಾಯಿ ಮಾಡಿದರು
ಅಪ್ಪ ಬಸವಣ್ಣನ ಪ್ರಸಾದಕ । ಸೋಬಾನವೆ ॥ ೩ ॥

ಎಣ್ಣಿ ಹೋಳಿಗಿ ಮಾಡಿ ಸಣ್ಣ ಬರುಳಿಯ ತುಂಬಿ
ಎಣ್ಯಾಗ ಎಲ್ಲ ಕರದಾವೆ
ಎಣ್ಯಾಗ ಎಲ್ಲಾ ಕರದಾವೆ ಮಾಡಿದಡಗಿ
ಅಣ್ಣ ಬಸವಣ್ಣನ ಪ್ರಸಾದಕ ಸೋಬಾನವೆ ॥ ೪ ॥

ಆಗೆ ಆಕಳ ಕರೆದು ಮಾಯದಲಿ ಹಾಲ್ಡಿಂಡಿ
ಹಸ್ತ ಜಂಗಮರೀಗಿ ಉಣಿಸಿದ
ಬಸವಣ್ಣ ಹೆಚ್ಚಿನ ಕೀರ್ತಿ ಪಡದಾನ । ಸೊಬಾನವೆ ॥ ೫ ॥

ತುಪ್ಪಾದ ಕೊಡಾಕ ಮುತ್ತಿನ ದಂಡಿಕಟ್ಟಿ
ಅಕ್ಕ ನಾಗಮ್ಮ ಐದಾಗಿ ನಡೆದಾಳ
ಮುಕ್ಕಣ್ಣನ ಶಿವನ ಮದುವಿಗಿ ಸೋಬಾನವೆ ॥ ೬ ॥

ಅಪ್ಪನ ಗುಡಿಮುಂದ ಹೊಸ ಹೊನ್ನಿನ ಗಿಡಹುಟ್ಟಿ
ಬಿಸಲಾ ಬಡಿದಾರೆ ತನುಗಾಳಿ
ಬಿಸಲಾ ಬಡಿದಾರೆ ತನುಗಾಳಿ ಬಸವಣ್ಣನ
ಜಾಜಂಗಳೆಲ್ಲ ನೆರಳಾಗಿ ಸೋಬಾನವೆ ॥ ೭ ॥

ಅಣ್ಣನ ಗುಡಿಮುಂದ ಸಣ್ಣ ಹಣ್ಣಿನ ಗಿಡಹುಟ್ಟಿ
ಬಿಸಲಾ ಬಡಿದಾರ ತಂಗಾಳಿ
ಬಸವಣ್ಣನ ಸಣ್ಣಂಗಳೆಲ್ಲಾ ನೆರಳಾಗಿ । ಸೋಬಾನವೆ ॥ ೮ ॥

– ಶ್ರೀಮತಿ ಮಲ್ಲಮ್ಮ ಹೆರೂರ, ಆಲೂರ

***

ಗುಮ್ಮನ ತೊಟ್ಲೀಗಿ

ಗುಮ್ಮನ ತೊಟ್ಲೀಗಿ । ಗೊಂಡೇದ ಹಾಸಿಗಿ ।
ಶಂಭುಲಿಂಗನಂದು ತೂಗೀರೆ ।
ಶಂಭುಲಿಂಗನಂದು । ಗಂಗಾಧರನಂದು । ತೂಗೀರೆ ॥ ಪ ॥

ಮಲ್ಲಿಗಿ ಹೂವ ಆವುತ ಬರುವಾಗ
ಕಾಗಣ್ಣರೇಶನ ತೂಗೀರೆ । ಬಾಗೋಡಿ
ಬಸವಲಿಂಗನಂದು ತೂಗೀರೆ ॥ ೧ ॥

ಶಾವಂತಿಗಿ ಹೂವ ಆವುತ ಬರುವಾಗ
ಚದುರಂಗರೇಶನ ತೂಗೀರೆ । ಗೋಲಗೇರಿ ।
ಗೊಲ್ಲಾಳಲಿಂಗನಂದು ತೂಗೀರೇ ॥ ೨ ॥

ಅತ್ತಿತ್ತ ಹ್ವಾದರ ಅತ್ತೀತ ಈ ಕೂಸ
ಮುತ್ತೀನ ತೊಟ್ಟಿಲ ಜಂಜೂರಿ ॥ ಒಳಗಿರುವ ॥
ಶಂಭುಲಿಂಗನಂದು ತೂಗೀರೇ ॥ ೩ ॥

ಆ ಎಲಿ ಈ ಎಲಿ ದೇವದುರ್ಗದ ಎಲಿ
ಆಲದ ಎಲಿ ಮೇಲೆ ಮಲಗುವರು । ಬಾಲಯ್ಯನ ।
ಬಾಲ ಕೃಷ್ಣನಂದು ತೂಗೀರೆ ॥ ೪ ॥

– ಶ್ರೀಮತಿ ಅನ್ನಪೂರ್ಣ ಬಸಯ್ಯ ಮಠಪತಿ

***

ಬಂಗಾರದ ತೊಟ್ಟಿಲಕ ಬೆಳ್ಳಿಯ ಎಳಿ ಹಗ್ಗ

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿ ಹಗ್ಗ
ಅದರಾಗ ನಲದಾಡೋ । ವಡಗೇರಿ ನಿಂಗಯ್ಯ । ಜೋ ಜೋ ॥ ೧ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿಹಗ್ಗ ।
ಅದರಾಗ ನಲದಾಡೊ । ಕೊಡೆಕಲ್ಲ ಬಸವಣ್ಣ । ಜೋ ಜೋ ॥ ೨ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿಹಗ್ಗ ।
ಅದರಾಗ । ನಲದಾಡೋ । ಕೆಂಭಾವಿ ಭೋಗೇಶ್ವರ । ಜೋ ಜೋ ॥ ೩ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿ ಹಗ್ಗ
ಅದರಾಗ ನಲದಾಡೋ । ತಿಂಥಣಿ ಮೋನಯ್ಯ । ಜೋ ಜೋ ॥ ೪ ॥

ಬಂಗಾರದ ತೊಟ್ಟಿಲಕ ಬೆಳ್ಳಿಯ ಎಳಿಹಗ್ಗ
ಅದರಾಗ ನಲದಾಡೋ । ಬಾಗೇವಾಡಿ ಬಸವಣ್ಣ । ಜೋ ಜೋ ॥ ೫ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿಹಗ್ಗ ।
ಅದರಾಗ ನಲದಾಡೋ । ಶ್ರೀಶೈಲ ಮಲ್ಲಿಕಾರ್ಜುನ ಜೋ ಜೋ ॥ ೬ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿಹಗ್ಗ
ಅದರಾಗ ನಲದಾಡ । ಅಕ್ಕಮಹಾದೇವಿ ಜೋ ಜೋ ॥ ೭ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿಹಗ್ಗ ।
ಅದರಾಗ ನಲದಾಡೋ । ಕಲಕೇರಿ ಮಡಿವಾಳ ಜೋ ಜೋ ॥ ೮ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿಹಗ್ಗ ।
ಅದರಾಗ ನಲದಾಡ । ಸೊಲ್ಲಪುರ ಸಿದ್ರಾಮೇಶ್ವರ । ಜೋ ಜೋ ॥ ೯ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿ ಹಗ್ಗ
ಅದರಾಗ ನಲದಾಡ । ಕೂಡಲ ಸಂಗಮ (ದೇವ) ಜೋ ಜೋ ॥ ೧೦॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿಹಗ್ಗ ।
ಅದರಾಗ ನಲದಾಡೋ । ಉಳವಿಯ ಚನ್ನಬಸವ । ಜೋ ಜೋ ॥೧೧ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿಹಗ್ಗ
ಅದರಾಗ ನಲದಾಡೊ । ಗುಡಗಂಟಿ ಅಮರೇಶ್ವರ । ಜೋ ಜೋ ॥೧೨ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿ ಹಗ್ಗ
ಅದರಾಗ ನಲದಾಡೋ । ಮೋಳಿಗಿ ಮಾರಯ್ಯ । ಜೋ ಜೋ ॥ ೧೩ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿಹಗ್ಗ ।
ಅದರಾಗ ನಲದಾಡೋ ಅಯ್ದಕ್ಕಿ ಲಕ್ಕಮ್ಮ । ಜೋ ಜೋ ॥ ೧೪ ॥

ಬಂಗಾರದ ತೊಟ್ಟಿಲಕ । ಬೆಳ್ಳಿಯ ಎಳಿ ಹಗ್ಗ ।
ಅದರಾಗ ನಲದಾಡೋ । ಕುಂಬರ ಗುಂಡಯ್ಯ । ಜೋ ಜೋ ॥ ೧೫ ॥

– ಶ್ರೀಮತಿ ಸಿದ್ದಮ್ಮ ಗುಂಡಪ್ಪ ಮತ್ತು ಸಂಗಡಿಗರು

***

ಕುಟ್ಟುವ ಹಾಡು

ಕುಟ್ಟುತ್ತ ನೆನೆದೇನ ಬೀಸುತ್ತ ಸ್ಮರಿಸೇನ
ಕಲ್ಯಾಣ ಶರಣರ ನೆನೆದೇನ ನಾರಿ ಹಾಕವ್ವ ಹ್ಯಾರಿ ॥ ೧ ॥

ಅಣ್ಣ ಬಸವಣ್ಣ ಹಡಪದ ಅಪ್ಪಣ್ಣ
ಚಿಕ್ಕ ಚನ್ನಬಸವ ನಾರಿ ಹಾಕವ್ವ ಹ್ಯಾರಿ ॥ ೨ ॥

ಕಲ್ಯಾಣ ಊರಲ್ಲಿ ಭಕ್ತಿಯ ಸೆಲೆಹುಟ್ಟಿ
ಕಲ್ಯಾಣ ನಾಡೇ ಕೈಲಾಸ ನಾರಿ ಹಾಕವ್ವ ಹ್ಯಾರಿ ॥ ೩ ॥

ಹರಭಕ್ತಿ ಹರಳಯ್ಯ ಮಡಿವಾಳ ಮಾಚಯ್ಯ
ಮೋಳಿಗೆ ಮಾರಯ್ಯ ನುಲಿಯ ಚಂದಯ್ಯ ನಾರಿ ಹಾಕವ್ವ ಹ್ಯಾರಿ ॥ ೪ ॥

ಭತ್ತವ ಕುಟ್ಟುತ ಶರಣರ ನೆನೆದರೆ
ಬ್ಯಾಸರಕಿ ರೋಗರುಜಿ ನಮಗಿಲ್ಲೇ ನಾರಿ ಹಾಕವ್ವ ಹ್ಯಾರಿ ॥ ೫ ॥

ಅಂಬಿಗರ ಚೌಡಯ್ಯ ಮೇದರ ಕೇತಯ್ಯ
ದೇವರ ದಾಸಿಮಯ್ಯ ಅಲ್ಲಮಪ್ರಭು ನಾರಿ ಹಾಕವ್ವ ಹ್ಯಾರಿ ॥ ೬ ॥

ಅನುಭವ ಮಂಟಪದಲ್ಲಿ ವಚನಗಳ ಸುರಿಮಳೆ
ಸಮತೆ ಸಾರುವ ದಾರಿದೀಪ ತೋರಿದಾರೆ ನಾರಿ ಹಾಕವ್ವ ಹ್ಯಾರಿ ॥ ೭ ॥

ಡೋಹರ ಕಕ್ಕಯ್ಯ ಮಾದರ ಚನ್ನಯ್ಯ
ತುರುಗಾಯಿ ರಾಮಣ್ಣ ಮಧುವರಸ ಬಸಪ್ಪ ನಾರಿ ಹಾಕವ್ವ ಹ್ಯಾರಿ ॥ ೮ ॥

ಕಾಣದ ಕೈಲಾಸ ಬೇಡುವದ್ಯಾಕೆ ತಂಗಿ
ಕಾಣುವ ಕೈಲಾಸ ಕಲ್ಯಾಣ ನಾರಿ ಹಾಕವ್ವ ಹ್ಯಾರಿ ॥ ೯ ॥

ನಿಜಭಕ್ತಿ ನೀಲಮ್ಮ ಗುರುಭಕ್ತಿ ಗಂಗಮ್ಮ
ಆಸೆ ಇಲ್ಲದ ಆಯ್ದಕ್ಕಿ ಲಕ್ಕಮ್ಮ ನಾರಿ ಹಾಕವ್ವ ಹ್ಯಾರಿ ॥ ೧೦ ॥

ಕರ್ಮವು ಹೆಚ್ಚಾಗಿ ಧರ್ಮವು ಅಳಿದೋಗಿ
ಸತ್ಯವಂತರಿಗೆ ನೆಲೆ ಇಲ್ಲ ನಾರಿ ಹಾಕವ್ವ ಹ್ಯಾರಿ ॥ ೧೧ ॥

ನಿಂಬೆಕ್ಕ ಮುಕ್ತಾಯಕ್ಕ ಅಕ್ಕನಾಗಮ್ಮ
ಉಡತಡಿಯ ಅಕ್ಕ ಮಹಾದೇವಿ ನಾರಿ ಹಾಕವ್ವ ಹ್ಯಾರಿ ॥ ೧೨ ॥

ಸತ್ಯವಂತರಿಗೆ ನೆಲೆ ಇಲ್ಲ ಬಸವಣ್ಣ
ಮತ್ತೆ ಹುಟ್ಟಿ ಬರಲಿ ಮರುತ್ಯಾದ ಮ್ಯಾಲ ಹಾಕವ್ವ ಹ್ಯಾರಿ ॥ ೧೩ ॥

***

ಕಾವಿ ಪಾವಡದವರೇ

ಕಾವಿ ಪಾವಡದವರೇ ಕಾವಿ ವಸ್ತ್ರದವರೇ
ಕಾಳವಮ್ಮನ ಮನಿಯ ಶರಣರೆ ಜೋ ಜೋ
ಕಾಳವಮ್ಮನ ಮನಿಯ ಶರಣರೆ ಶಿವಭಕ್ತರು
ನೀವು ಬಾಗಿಣಕ ಬರಬೇಕರಿ ಜೋ ಜೋ ॥ ೧ ॥

ನೀಲಿ ಪಾವಡದವರೇ ನೀಲಿ ವಸ್ತ್ರದವರೇ
ನೀಲಮ್ಮನ ಮನಿಯ ಶರಣರೇ ಜೋ ಜೋ
ನೀಲವಮ್ಮನ ಮನಿಯ ಶರಣರೆ ಶಿವಭಕ್ತರು
ನೀವು ಬಾಗಿಣಕ ಬರಬೇಕರಿ ಜೋ ಜೋ ॥ ೨ ॥

ಹಳದಿ ಪಾವಡದವರೇ ಹಳದಿ ವಸ್ತ್ರದವರೇ
ಹರಳಯ್ಯನ ಮನಿಯ ಶರಣರೇ ಜೋ ಜೋ
ಹರಳಯ್ಯನ ಮನಿಯ ಶರಣರೆ ಶಿವ ಭಕ್ತರು
ನೀವು ಬಾಗಿಣಕ ಬರಬೇಕರಿ ಜೋ ಜೋ ॥ ೩ ॥

ಖಾಕಿ ಪಾವಡದವರೇ ಖಾಕಿ ವಸ್ತ್ರದವರೇ
ಕಕ್ಕಯ್ಯನ ಮನಿಯ ಶರಣರೇ ಜೋ ಜೋ
ಕಕ್ಕಯ್ಯನ ಮನಿಯ ಶರಣರೇ ಶಿವಭಕ್ತರು
ನೀವು ಬಾಗಿಣಕ ಬರಬೇಕರಿ ಜೋ ಜೋ ॥ ೪ ॥

ಬಿಳಿಯ ಪಾವಡದವರೇ ಬಿಳಿಯ ವಸ್ತ್ರದವರೇ
ಬಸವಣ್ಣನ ಮನಿಯ ಶರಣರೇ ಜೋ ಜೋ
ಬಸವಣ್ಣನ ಮನಿಯ ಶರಣರೆ ಶಿವಭಕ್ತರು
ನೀವು ಬಾಗಿಣಕ ಬರಬೇಕರಿ ಜೋ ಜೋ ॥ ೫ ॥

– ಶ್ರೀಮತಿ ಭಾಗಮ್ಮ /ರಾಜೇಶ್ವರಿ ಗೋರ್ಟಾ

***

ಕರ್ಪೂರ ಪದ

ಆರುತಿ ಬೆಳಗುವೆನೋ
ನಾವಂದಾರುತಿ ಬೆಳಗುವೆನೋ
ಮಂಗಲದಾರುತಿ ಬೆಳಗುವೆನೋ
ಶ್ರೀ ಗುರು ಬಸವಣ್ಣ ಪ್ರಮಥರಿಗೊಂದಾರುತಿ ಬೆಳಗುವೆನೋ ‖ ಪ ‖

ಅಲ್ಲಮ ಗದ್ದುಗಿಗೇ
ಮಾಲಾಮರಿದೇವರ ಗುಡಿಗೇ
ಜಯ ಜಯ ಮುಕ್ಕಣ್ಣನ ಸಭೆಗೆ
ಶೀಲ ಸದಾಶಿವ ಕಾಲಜ್ಞಾನ ಕವಿಗಳಿಗೆ ‖ ೧ ‖

ಅಕ್ಕನ ಗವಿಗಳಿಗೆ
ಅಕ್ಕಮಹಾದೇವಿ ನುಡಿಗಳಿಗೆ
ಜಯ ಜಯ ನುಲಿಯ ಚಂದಯ್ಯಗೆ
ಕಕ್ಕಯ್ಯಗೆ ಹರಳಯ್ಯಗೇ ಮಡಿವಾಳ ಮಾಚರಸರ ಕೆರೆಗೆ ‖ ೨ ‖

ಕಲ್ಯಾಣ ಕೈಲಾಸ ಮ್ಯಾಲ
ಪರುಷದ ಕಟ್ಟಿಯ ಮ್ಯಾಲಾ
ಅಲ್ಲಿ ಶಿವಭಕ್ತಿರಿಗುಲ್ಲಾಸ
ಬಲ್ಲದ ಶರಣರ ವಂದಿಸಿ ಬೆಳಗುವೆ ವಿರುಪಾಕ್ಷ ನೀ ದಾಸ ‖ ೩ ‖

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ,
–ಶ್ರೀಮತಿ ಶಾಂತಾಬಾಯಿ ಲಾಧಾ, ನೀಲಮ್ಮ ಲಾಧಾ

***

ಕರ್ಪೂರದಾರತಿ

ಕರ್ಪೂರ ದೀಪ ಪ್ರಕಾಶ ಅರ್ಪಿಸುವ ಬಸವೇಶ
ಕರ್ಪೂರ ದೀಪ ಪ್ರಕಾಶ ‖ ಪ ‖

ನಶ್ವರ ಕಾಯ ವಿಶ್ವದ ಮಾಯಾ ಶಾಶ್ವತ ಸೌಖ್ಯ
ವಿಶ್ವಸದಯ ಜಪವು ಬಸವ ನಾಮಘೋಷ ‖ ೧ ‖

ಕರುಣಾನಿಧಿಗೆ ಹರರೂಪನಿಗೆ ಗುರುರೂಪನಿಗೆ
ತಾರೇ ಸುವಗೆ ಕೃಪೆ ಬೇಡುವೆ ಚನ್ನ ಕವಿಯ ದಾಸಾ ॥ ೨ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಮಂಗಲ

ಜಯಲಿಂಗ ಜಯಲಿಂಗ ಜಯಮಂಗಲ ಚಿಲ್ಲಿಂಗ
ಜಯ ಪರತರ ಶಿವಲಿಂಗ ॥ ಪ ॥

ಕರದಿ ಪಾವನ ಲಿಂಗ ವರಬಿಂದು ಘನಲಿಂಗ
ಸುರಚರ ಶಿವ ರುಚಿಲಿಂಗ ಜಯಲಿಂಗ ॥ ೧ ॥

ಭುವನ ಮಯಪತಿ ಲಿಂಗಪಾದಕ ಮದ್ಗುರುಲಿಂಗ
ಭಾವಕ ನಮೋ ಮಹಾಲಿಂಗ ಜಯಲಿಂಗ ॥ ೨ ॥

ಶಿವಯೋಗಿಗೀಷ್ಟದ ಲಿಂಗ ಶಿವಹೃದಯ ಪ್ರಭುಲಿಂಗ
ಶಿವಯೋಗಾಲಯದ ಲಿಂಗ ಜಯಲಿಂಗ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಕಲ್ಯಾಣ ಜಯವಾಗಲಿ

ಕಲ್ಯಾಣ ಜಗವಾಗಲೀ ಪ್ರಭುವೆ ಮಂಗಲ ಮಯವಾಗಲಿ ॥ ಪ ॥

ಸುಜಲೀತ ಸುಪಲೀತ ಸುಜ್ಞಾನ ಸುವೃಷ್ಟಿ
ಚಾತುರ್ಯ ಹೆಚ್ಚಾಗಲಿ ಪ್ರಭುವೆ ಮಂಗಲ ॥ ೧ ॥

ನಿರ್ಗುಣ ನಿಜಗುಣ ರಜಗುಣ ತಮೋಗುಣ
ಸತ್ವಗುಣ ಜಗದಾಗಲೀ ಪ್ರಭುವೇ ॥ ೨ ॥

ಆಕಾರ ಉಕಾರ ವಕಾರ ಯಕಾರ
ಓಂಕಾರ ಜಗದಾಗಲಿ ಪ್ರಭುವೇ ॥ ೩ ॥

ನೀಲಮ್ಮ ನಿಂಬೆಮ್ಮ ಅಕ್ಕಮ ಲಕ್ಕಮ್ಮ
ಶರಣೆಯರು ನಾವಾಗಲಿ ಪ್ರಭುವೆ ॥ ೪ ॥

ಚನ್ನಣ್ಣ ಬಸವಣ್ಣ ಅಪ್ಪಣ್ಣ ಅಜಗಣ್ಣ
ಅಲ್ಲಮರು ಅವತರಿಸಲಿ ಪ್ರಭುವೇ ॥ ೫ ॥

ಶ್ರೀಮತಿ ಕಾಡಾದಿ ಗೌರವ್ವ
– ಶ್ರೀಮತಿ ಸರ್ವಮಂಗಳಾ ಜೋಗೂರ ಹಾಗೂ
ಪಾರ್ವತಿ ಜೆಮಶೆಟ್ಟಿ, ಅನ್ನಪೂರ್ಣ ದೇವಣಿ

***

ಶ್ರೀಶೈಲ ಮಲ್ಲಿಕಾರ್ಜುನನ ಮಂಗಳಾರುತಿ

ಜಯವೆಂದು ಬೆಳಗುವೆ ಮಲ್ಲಿಕಾರ್ಜುನನೇ
ಮಲ್ಲಿಕಾರ್ಜುನನೆ ಭಕ್ತಮಂದಿರನೆ
ಜಯವೆಂದು ಬೆಳಗುವೆ ಮಲ್ಲಿಕಾರ್ಜುನನೇ ॥ ಪ ॥

ಸಾಗರದೊಳಗಿನ ವಿಷವ ಕುಡಿದವನೆ
ಭೋಗಿ ಕಂಕಣನಾಗಿ ಜಗದಿ ಮೆರೆದವನೆ
ಶ್ರೀಗಿರಿಯೊಳು ನಿತ್ಯ ವಾಸಗೈದವನೆ
ಜಯವೆಂದು ಬೆಳಗುವೆ ಮಲ್ಲಿಕಾರ್ಜುನನೇ ॥ ೧ ॥

ಸಿರಿಯಾಳ ಸುತನ ಮಾಂಸವ ಬೇಡಿದವನೆ
ಶರಣೆ ನಿಂಬೆಕ್ಕನ ಭಕ್ತಿಗೊಲಿದವನೆ
ಪರತರ ಮೋಕ್ಷವ ಕೊಟ್ಟು ಸಲಹುವನೆ
ಜಯವೆಂದು ಬೆಳಗುವೆ ಮಲ್ಲಿಕಾರ್ಜುನನೇ ॥ ೨ ॥

ಕುರಿಯ ಹಿಕ್ಕೆಯೊಳು ಲಿಂಗ ಕಂಡವನೆ
ತರುಳ ಗೊಲ್ಲಾಳನ ಭಕ್ತಿಗೊಲಿದವನೆ
ಸರಿ ನಿನಗಾರು ಶ್ರೀಗಿರಿಯ ವಲ್ಲಭನೆ
ಜಯವೆಂದು ಬೆಳಗುವೆ ಮಲ್ಲಿಕಾರ್ಜುನನೇ ॥ ೩ ॥

ಒಡವಿ ನಾ ಬಲ್ಲನೆ ನಿನ್ನ ಮಹಿಮೆಯನೆ
ಕೊಡು ಪಾದಭಕ್ತಿ ಒಂದೆ ಬೇಡುವೆ ನಾನು
ನುಡಿಸೆನ್ನ ಬಾಯಿಂದ ನಿನ್ನ ನಾಮವನೆ
ಜಯವೆಂದು ಬೆಳಗುವೆ ಮಲ್ಲಿಕಾರ್ಜುನನೇ ॥ ೪ ॥

ಹರಿನೇತ್ರ ಕಮಲಪುಷ್ಪ ಪೂಜೆಗೆ ಮೆಚ್ಚಿದವನೆ
ಸುರದೇನು ಸಮರಸ ಸದ್ಭಕ್ತಿ ಪೊರೆದವನೆ
ದುರಿತ ದಾವಾನಲ ನೀನೆ ಶಂಕರನೆ
ಜಯವೆಂದು ಬೆಳಗುವೆ ಮಲ್ಲಿಕಾರ್ಜುನನೇ ॥ ೫ ॥

ವರವೇದ ಶಾಸ್ತ್ರಕೆ ನಿಲುಕದಂಥವನೆ
ಹರಿಜನರಿಗೆ ರೂಪ ತೋರಿದಂಥವನೆ
ಅರಿಯೆನಾ ನಿನ್ನ ಘನತೆಯ ಶಿವನೆ
ಜಯವೆಂದು ಬೆಳಗುವೆ ಮಲ್ಲಿಕಾರ್ಜುನನೇ ॥ ೬ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ
– ಶ್ರೀಮತಿ ಪಾರ್ವತಿ ಜೆಮಶೆಟ್ಟಿ, ಹಾಗೂ
ಅನ್ನಪೂರ್ಣ ದೇವಣಿ, ಸರ್ವಮಂಗಳಾ ಜೋಗೂರ

***

ಆರುತಿ ಪದ

ಮಲ್ಲಯ್ಯಗಾರುತಿ ಬೆಳಗುವೆ ಕರ್ಪೂರ ಜ್ಯೋತಿ
ಮಲ್ಲಯ್ಯಗಾರುತಿ ॥ ಪ ॥

ಪಂಚದಾರಿ ಪಲ್ಲದಾರಿ ಹತ್ತದು ಬಾಳಬಿರಿ
ಬೇರಿನೊಳಗ ಕೈಯನೂರಿ ಮೆಲ್ಲಕ ಇಳಿಯುವ
ಮಲ್ಲಯ್ಯಗಾರುತಿ ॥ ೧ ॥

ಮಲ್ಲಮ್ಮನೆಂಬುವಾಕಿ ಮಲ್ಲಯ್ಯನ ಸೇವಾದಾಕಿ
ಪಾತಾಳ ಗಂಗಿಯ ನೀರ ತಂದು ಜಳಕ ಮಾಡಿಸುವಾಕಿ
ಮಲ್ಲಯ್ಯಗಾರುತಿ ॥ ೨ ॥

ಜಾಜಿ ಮಲ್ಲಿಗಿ ಹೂವ ಮಾಲೆಯ ಮಾಡುವೆ
ಬಿಳಿಯ ಕಂಬಳಿ ಮ್ಯಾಲ ಧರಿಸುವೆ ನಾ ನಿಮಗ
ಮಲ್ಲಯ್ಯಗಾರುತಿ ॥ ೩ ॥

ಕದಳಿಯ ಬನದೊಳಗ ಮಲ್ಲಯ್ಯನ ರೂಪದೊಳು
ಮಹಾದೇವಿ ಅಕ್ಕನ ದಿವ್ಯ ಜ್ಯೋತಿ ಬೆಳಗಿತು
ಮಲ್ಲಯ್ಯಗಾರುತಿ ॥ ೪ ॥

ಶಿಖರೇಶ್ವರ ಗುಡ್ಡವನೇರಿ ನಾ ಕಂಡೆನು ದೇವರ ವಾಣಿ
ಬ್ಯಾಡ ಇನ್ನಾರ ಮಾರಿ ನಾ ಬೇಡುವೆ ಮುಕ್ತಿಯ ದಾರಿ
ಮಲ್ಲಯ್ಯಗಾರುತಿ ॥ ೫ ॥
ಸಾಕ್ಷಿಗಣಪನ್ನ ನೋಡಿ ಮೋಕ್ಷ ಶಿಖರವನೇರಿ
ಕರ್ಪೂರ ಗುಗ್ಗಳ ಬೆಳಗುವೆ ನಾ ನಿಮಗ
ಮಲ್ಲಯ್ಯಗಾರುತಿ ॥ ೬ ॥

– ಶ್ರೀಮತಿ ಶಶಿಕಲಾ ಶರಣಪ್ಪ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ದೇವ್ಗನ್ನೇರು ಆರುತಿಯೆತ್ತಿರೆ

ಜಯಮಂಗಳಂ ನಿತ್ಯ ಸ್ರುಭ ಮಂಗಳಂ ॥ ಪ ॥

ವುತ್ತುದಾ ಮ್ಯಾಗಳ ಮುತ್ತ ಕಡೆದಾತನಿಗೆ
ವುಟ್ಟು ಬಂಜೇರಿಗೆಲ್ಲ ಮಕ್ಕಳ ಕೊಡುವ
ಕಿಚ್ಚಗಣ್ಣಯ್ಯಗೆ ಕಿಂಜಡೆಯಾತನಿಗೆ
ಸತ್ಯವಕೆ ಒಲುದ ರೇವಣಸಿದ್ಧಗೆ
ಜಯ ಮಂಗಳಂ ನಿತ್ಯ ಸ್ರುಭ ಮಂಗಳಂ ॥ ೧ ॥

ಗುಪ್ಪಟ್ಟಿ ಗುಲಗಂಜಿ ಗುರುಳು ಬಣ್ಣದ ವಲ್ಲಿ
ಮಲ್ಲಿಗೆ ಕುಸುಲಾದ ಮುಡಿದ ಡೆಯನಾಕಿರುವ
ನಮ್ಮ ರೇವಣನಾಥಗಾರುತಿ ಎತ್ತೀರೆ
ಜಯ ಮಂಗಳಂ ನಿತ್ಯ ಸ್ರುಭ ಮಂಗಳಂ ॥ ೨ ॥

ಶ್ರೀ ಪಾರ್ವತೀಶನಿಗೆ ಶ್ರೀರಂಭೆ ಗುಣಮತಿಗೆ
ಶ್ರೀ ಪರಮ ಪುರಶೋತ್ತಮನಾನಂದಗೆ
ನರಲೋಕರಿಗೆಲ್ಲ ಸಂರಕ್ಷಣೆಯ ಮಾಡುತಿರುಲು
ಭೂಪ ಸದ್ಗುರು ಲಿಂಗ ಪುರ ಹರನಿಗೆ
ಜಯಮಂಗಳಂ ನಿತ್ಯ ಸ್ರುಭ ಮಂಗಳಂ ॥ ೩ ॥

ಕರಿಯ ಕಂತೆಯನೊದ್ದು ಕೈಯಲ್ಲಿ ಕರ್ಪವ ಹಿಡಿದು
ಕೊರಳಲ್ಲಿ ರುದ್ರಾಕ್ಷಿಸರವನ್ನು ಧರಿಸಿ (ರುವ)
ಸರ್ವಾನಂದ ಮೂರುತಿ ರೇವಣಸಿದ್ಧಗೆ
ಜಯಮಂಗಳಂ ನಿತ್ಯ ಸ್ರುಭಮಂಗಳಂ ॥ ೪ ॥

ಆವಿಗೆ ಪಾದುಗಳ ಅಳವಡಿಸಿ ಮೆಟ್ಟಿರುವ
ನಾಗಭೂಷಣನೆಂಬ ಆವಿಗೇ ಧರಿಸಿ
ಬ್ಯಾಗಲ ಮತನರಿಗೂ ತ್ರಬಸಿದ್ಧದೇನೀಗೂ
ಯೋಗಿ ಮೂರುತಿ ಕರಿಯ ಸಿದ್ಧೇಶಗೆ
ಜಯಮಂಗಳಂ ನಿತ್ಯ ಸ್ರುಭ ಮಂಗಳಂ ॥ ೫ ॥

ಗಂಗೆಯನು ಪೊತ್ತುರುಸಿ ಶಿವಲಿಂಗ ರೂಪಾಗಿ
ಯಿಂಗದೇ ಭಕ್ತರನ ಪರಿಪಾಲಿಸೀ
ಕಲ್ಯಾಣಪುರದಲ್ಲಿ ಕಡಿಗೆ ತಾನಿಟ್ಟವರು
ಒಳ್ಳೇದ ಮಾಡಿ ಒಳವೀಕೆ ತೆಗೆದು ಗಾಣವ ಹೊಡೆದು
ಅಲ್ಲಿ ಬಿಜ್ಜಳನ ಪಧವ ಧರಿಸಿದವನಿಗೆ
ಜಯಮಂಗಳಂ ನಿತ್ಯ ಸ್ರುಭ ಮಂಗಳಂ ॥ ೬ ॥

ಸಾಲಿ ಅಚ್ಚಡವೊದ್ದು ಸಾದಾದ ಬಟ್ಟಿಟ್ಟು
ಸ್ವಾಮಾರುದಿನ ರಥವೇರಿದಯ್ಯಗೆ
ನೀಲು ದೇವ್ಗನ್ನೇರು ಆರುತಿ ಎತ್ತೀರೆ
ಜಯಂಮಂಗಳಂ ನಿತ್ಯ ಸ್ರುಭ ಮಂಗಳಂ ॥ ೭ ॥

– ಕೃತಿ : ಮುತ್ತು ಮುತ್ತಿನ ತ್ವಾಟ

***

ಪಲ್ಲಿ ನುಡಿದಾವು

ಕಲ್ಯಾಣದರಸ ಬಿಜ್ಜಳರಾಯರರಮನೆಯ
ಪಲ್ಲಿ ನುಡಿದಾವು ರಾಯರಿದುರೆ ॥ ಪ ॥

ಪಲ್ಲಿ ನುಡಿದಾ ಫಲವು ಬಲ್ಲನೇ ಬಸವಣ್ಣ
ನಿಲ್ಲದಲಿ ಪೇಳು ಪೇಳೆನೆಗೆ ॥ ೧ ॥

ಕಷ್ಟಕ್ಕೆ ಈ ಪಲ್ಲಿ ದ್ರುಷ್ಟವನು ನುಡಿದಾರೆ
ಘಟ್ಟನಿಯು ಪೇಳೆನಗೆ ಪೇಳಿದರೆ ಸಿಟ್ಟದು

ನಿಮ್ಮ ಮನದೊಳಗೆ ಅಯ್ಯ ಸಿಟ್ಟಿನೊಳಗೆ
ನಿಮ್ಮಿಬ್ಬರಿದುರೆ ಸೃಷ್ಟಿಸೆ ಮೂರುಳ್ಳ ಸಂಗಮೇಶ್ವರ
ಶಿವನ ಕರುಣ ತಪ್ಪಿದ ಮೇಲೆ ಕೆಟ್ಟಿತೀ ಕಲ್ಯಾಣ ಓ ಎಂಬುತ್ತೈತಿ ॥ ೨ ॥

ಅಂಜಾಡದವರಾಗಿ ಬಿಜ್ಜಳಾಂಕ ಮನೆಯಲ್ಲಿ ಪಂಜಿನವರಾಗಿ
ಗೀತಗಳು ಅಯ್ಯಾ ನಂಜುಂಡವೆರಡು ಕವಚಗಳು
ಪಂಜುರಾದ ಕೈಯ ಹೊರತು ಮುನಿದಾರೆಂದು
ನಂಜುಂಡಾಗೆ ಕರವ ಮುಗಿದಾರೊ ಎಂಬುತ್ತೈತಿ ॥ ೩ ॥

ಕಲ್ಯಾಣ ಪಟ್ಟಣದಾಗೆ ತ್ರಿಪುರವಂತರ ಮುಂದೆ
ಕಲ್ಲುಕೋಳಿ ಕೂಗುತ್ತೈತೆ ಅಯ್ಯಾ ನಿಲ್ಲದಲಿತರು
ಬೆದರುತ್ತೈತೆ ಅಯ್ಯ ಬಲ್ಲಿದರೆ ಬಲ ಮುರಿಯುತ್ತೈತೆ
ಎಲ್ಲೆಲ್ಲಿ ನೋಡಿದರೆ ಶಿವಶರಣರಿಲ್ಲೆಂದು
ಸೊಲ್ಲು ಹಿಡಿಯಲು ಯಾರಿಲ್ಲ ಓ ಎಂಬುತ್ತೈತಿ ॥ ೪ ॥

ಏಳುನೂರೆಪ್ಪತ್ತು ಅಮರ ಗಣಾಂಗಳು
ಗೂಳೆವ ನಡೆಯೆನ್ನುತ್ತೈತೆ ಅಯ್ಯಾ
ಕಾಳಗೂವೆ ನಿಮಗೆನ್ನುತ್ತೈತೆ ಪೇಳೂರಿಗಳವಲ್ಲ
ಮೂರು ಕೋಡಿನಲ್ಲಿ ಕೇಡು ಬಂದರೆ ಗಾಳಿ
ಚಿರದೊಡಿ ಬಂತೊ ಎಂಬುತ್ತೈತಿ ॥ ೫ ॥

ಕಂಡೀರೆ ನಮ್ಮ ಕೈಲಾಸದೊಡ್ಡೋಲಗವ
ಗಂಡು ಗದರು ತಾರೆ ಅಯ್ಯ ಲಂಡಕೊಂಬತ್ತೂರಿಗೆ
ಬಗೆಯು ಭೂ ಮಂಡಲದೊಳಗೆ ಅವರಿಬ್ಬರನ್ನು
ಜನ್ಮಿಸಿ ಗುಂಡ ಬ್ರಹ್ಮಯ್ಯನ ಬಲಗೊಂಡರೋ ಎಂಬುತ್ತೈತಿ ॥ ೬ ॥

ತಲೆಯಿಲ್ಲದಾರುಂಡ ಆಕಾಶದಲ್ಲಿ ಆಡಲು
ಗಟ ಬೀಳುತ್ತೈತಿ ಪುರದೊಳಗೆ ಅಯ್ಯ
ಫಲ ಕೊಟ್ಟೀರಿ ನಮ್ಮ ಮನದೊಳಗೆ ಅಯ್ಯ
ಕುಲಗೆಟ್ಟರಿ ನಿಮ್ಮ ಪುರದೊಳಗೆ
ಹರಳಯ್ಯ ಮದುವಯ್ಯ ಅವರಿಬ್ಬರ
ಎಳಹು ಕಟ್ಟಿ ಎಳಸೀದಾರೊ ಎಂಬುತ್ತೈತಿ ॥ ೭ ॥

ಪಟ್ಟದರಸು ಬಸವಣ್ಣ ಪೆಂಗಾಳಿ ನೀಲವ್ವ
ಇಷ್ಟಕ್ಕೆ ಅಧಿಕಾರವಾಗಿಹರು ಇವರು
ಹುಟ್ಟುತಲಿ ಶಿವನ ಕೂಡುವರು ಅವರಿಗೆ

ಪಟ್ಟಣದ ಭಾಗ್ಯ ತೊಲಗುವುದು ಸೃಷ್ಟಿಸಿ
ಮೂರುಳ್ಳ ಸಂಗಮೇಶ್ವರ ಶಿವನ ಕರುಣ
ತಪ್ಪೀದ ಮೇಲೆ ಕೆಟ್ಟು ಶ್ರೀಕಲ್ಯಾಣ ಓ ಎಂಬುತೈತಿ ॥ ೮ ॥

– ಕೃತಿ : ಮುತ್ತು ಮುತ್ತಿನ ತ್ವಾಟ

***

ಭಜನಿ ಮಾಡುತಾ

ದೇವರ ಕಂಡೇವು ದಿಂಡರ ಕಂಡೇವು
ದೇವರ ದೇವ ಬಸವಗ ಕಂಡೇವು ಭಜನಿ ಮಾಡುತಾ ॥ ೧ ॥

ದೇವರ ದೇವ ಮಾದೇವ ಬಸವಣ್ಣಗ
ಭಕುತಿಲಿ ಕೈಯ ಮುಗದೇವ ಭಜನಿ ಮಾಡುತ ॥ ೨ ॥

ಹಾಲಿನಾ ನೊರೆ ಚಂದ ಹಾಲಿನಾ ಕೆನೆ ಚಂದ
ಮಜ್ಜಿಗಿಯೊಳಗಿನ ಬೆಣ್ಣೆ ಬಲುಚಂದ ಭಜನಿ ಮಾಡುತಾ ॥ ೩ ॥

ಮಜ್ಜಿಗಿಯೊಳಗಿನ ಬೆಣ್ಣೆಯು ಬಲುಚಂದ ತಂಗೆಮ್ಮ
ಬಸವನ ಹೆಸರು ಮಗನಿಗಂದ ಭಜನಿ ಮಾಡುತಾ ॥ ೪ ॥

ಕಲ್ಯಾಣಕ ಹೋಗಲಾಕ ಕಾಲಚಂದ ಇರಬೇಕ
ಕೊಳ್ಳಾಗಿರಬೇಕ ಲಿಂಗ ಭಜನೆ ಮಾಡುತಾ ॥ ೫ ॥

ಕೊರಳಾಗ ಇರಬೇಕ ಶಿವರೂಪ ಲಿಂಗವು
ಹಣಿಮ್ಯಾಲ ಬೇಕ ವಿಭೂತಿ ಭಜನಿ ಮಾಡುತ ॥ ೬ ॥

ಹಣಿಮ್ಯಾಲ ಇರಬೇಕ ಮೂರುಬಳ್ಳ ವಿಭೂತಿ
ನಾಲಿಗಿ ಮ್ಯಾಲಿರಬೇಕ ಬಸವನ ಹೆಸರ ಭಜನಿ ಮಾಡುತಾ ॥ ೭ ॥

ಕಲ್ಯಾಣದ ಮಣ್ಣಾಗ ಶರಣರ ಹೆಜ್ಜೆಯು
ಹ್ಯಾಂಗಿಡಲಿ ತಂಗಿ ನನಕಾಲ ಭಜನಿ ಮಾಡುತಾ ॥ ೮ ॥

ಹ್ಯಾಂಗಿಡಲಿ ಪಾಪದ ನನಕಾಲ ಅದರಾಗ
ಉರುಳಾಡಿ ಪಾಪ ಕಳದಿನಿ ಭಜನಿ ಮಾಡುತಾ ॥ ೯ ॥

ಉರುಳಾಡಿ ಪಾಪ ಕಳಕೊಂಡೆ ಬಸವಣ್ಣ
ಅರುಪಡೆದು ನಿನ್ನ ಮಗಳಾದೆ ಭಜನಿ ಮಾಡುತ್ತಾ ॥ ೧೦ ॥

– ಶ್ರೀಮತಿ ಶಶಿಕಲಾ ಶರಣಪ್ಪ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

೨. ತ್ರಿಪದಿಗಳು

ಶಿವಶರಣರು

ಓಲಗದಿ ಬಿಜ್ಜಳನು ನಾಳೆ ಎನ್ನದೆ ಕರಸಿ
ಕೀಳಸರಿ ಕಣ್ಣ ನಿಂತಲ್ಲೆ ॥ ಕೇಡಿಗಳು
ಬಾಳುವದು ತರವೆ ಜಗದೊಳಗೆ ॥ ೧ ॥

ಸಾರುತಲಿ ಢಂಗುರವಾ ಊರಲ್ಲಿ ಮೆರೆಯಿಸಿರಿ
ಜಾರೆಯರ ಮುಂದೆವದೆಯಿಸಲಿ ॥ ಕೊನೆಗವರ
ಕ್ರೂರ ಕತ್ತಿಯಲೆ ಕೊಲ್ಲೆಂದ ॥ ೨ ॥

ಕಟ್ಟೇಳೆ ಬಿಜ್ಜಳನೆ ಇಟ್ಟು ಕೋಪವು ತರವೆ
ಕೆಟ್ಟ ಬಗಿಸಿದರೆ ವಡಿಯನಿಗೆ ॥ ತಿಳಸಿದನು
ಕಟ್ಟಳೆಯ ಚನ್ನ ದಂಡೇಶ ॥ ೩ ॥

ಹಾರುವರ ಕುಲ ಹೆಚ್ಚು ಬೇರೆ ಜನ ಕುಲಹೀನ
ಹಾರುವಗೆ ಉಂಟು ಹೊಲೆ ಇನ್ನು ॥ ಜಗದೊಳಗೆ
ಯಾರು ಹಾರುವರು ಮೊದಲಿಗೆ ॥ ೪ ॥

ಹೊಲಬರಿತ ಮನುಜನವ ಕುಲವಂತ ಜಗದೊಳಗೆ
ನೆಲೆಯುಂಟೆ ಗಂಗೆಗೆ ಬಿಜ್ಜಳನೆ ॥ ಶಿವಮತಕೆ
ಕುಲವೆಣಿಸಲುಂಟೆ ನಡೆನುಡಿಗೆ ॥ ೫ ॥

ಅರಸೊತ್ತಿಗೆಯ ನಂಬಿ ಬಿರುಸು ಮಾತುಗಳ್ಯಾಕೆ
ಸ್ಥಿರವೆ ಹೂಬಿಸಿಲು ತಿಳಿ ಅರಸ ॥ ಪರೀಕ್ಷಿಸಲು
ಹರಭಕ್ತಿ ಅಮರ ಶರಣರಿಗೆ ॥ ೬ ॥

ಬೇಡ ಶರಣರ ನಿಂದೆ ಕೇಡು ಬರುವದು ಮುಂದೆ
ನೋಡಿಕೋ ನಾಡ ಬಿಜ್ಜಳನೆ ॥ ಒಪ್ಪಿಸುತ
ಕಾಡ ಬೇಡಿನ್ನು ಶರಣರಿಗೆ ॥ ೭ ॥

ಕೇಳದಲೆ ಬಿಜ್ಜಳನು ಆಳುಗಳನಟ್ಟಿದನು
ಕೀಳ ಕೆಲಸೆಂದ ಬಲು ಹೇಸಿ ॥ ನೋಡುದಕ
ಹೊಲಾತ ಶರಣರೂಳಿಗವು ॥ ೮ ॥

ಚರರು ನಡೆದರು ಬೇಗ ಹರನ ಶರಣರ ಬಳಿಗೇ
ಕರೆದಿರುವ ದೊರೆಯು ಮಧುವರಸ ॥ ಹರಳಯ್ಯ
ಬರಬೇಕು ಬೇಗ ಅರಮನೆಗೆ ॥ ೯ ॥

ಉದರ ಲಿಂಗಕೆ ನಮಿಸಿ ಹರನ ಪೂಜೆಯ ಮುಗಿಸಿ
ಗುರುವೆ ಬಸವಯ್ಯಾ ಸಲುವೆಂದ ॥ ಮಧುವರಸ
ಹರಳಯ್ಯಾ ಬಂದರೀ ಅರಮನಿಗೆ ॥ ೧೦ ॥

ಭರದಿಯಾತಕೆ ನಮ್ಮ ಅರಸ ಕರಸಿದಿ ಹೇಳು
ನೆರವೇರಿಸುವೆವು ಆ ಕೆಲಸ ॥ ಘುಡ ಘುಡಿಸಿ
ಅರಸ ಘರ್ಜಿಸಿದ ಹುಲಿಯಂತೆ ॥ ೧೧ ॥

ವಡಿಯ ಯಾತಕೆ ನಿಮಗೆ ಕಡು ಕೋಪ ನಮ್ಮ ಮೇಲೆ
ನಡೆ ನುಡಿಯ ಮಾಡಿನೊಲವಿಂದ ॥ ಅರಸನಿಗೆ
ತಡ ಮಾಡದೆಂದ ಮಧುವರಸ ॥ ೧೨ ॥

ಎಲವೊ ಮಧುವರಸಯ್ಯಾ ಕುಲದಲ್ಲಿ ಹಾರವನು
ಹೊಲೆಯನಿಗೆ ಹೆಣ್ಣು ಕೊಡಬೇಕೆ ॥ ಕುಲಗೇಡಿ
ಕಲಿಸುವೆನು ಪಾಠ ನಿನಗಿದಕೆ ॥ ೧೩ ॥

ಹೊಲಸ ತಿಂಬುವ ಹೊಲೆಯ ಹೊಲಬಿಲ್ಲದವ ಹೊಲೆಯ
ನೆಲೆಸಲ್ಲುಸಿ ನುಡಿಯು ಎದೆಯೊಳಗೆ ॥ ಹೊಲೆಯರಸ
ಹೊಲೆಯರೆನ್ನುವರೆ ಶರಣರಿಗೆ ॥ ೧೪ ॥

ಖೂಳ ಬಿಜ್ಜಳರಾಜ ತಾಳಲಾರದೆ ಕೋಪ
ಕೀಳಿಸಿದಕಣ್ಣ ನಿಂತಲ್ಲೇ ॥ ನಿಲ್ಲದಲೆ
ಗಾಳಕವರನ್ನು ಎಳೆಸಂದಾ ॥ ೧೫ ॥

ಎಳೆಸುತಲಿ ಇಬ್ಬರನು ಬಳಲಿಸುತ ಬೀದಿಯಲಿ
ಹಳಿದು ಶೂಲಕ್ಕೆ ಏರಿಸಲು ॥ ಶಿವನಿಂದೆ
ನಲವೆಯಲಿ ಜೀವನೀಗಿದರು ॥ ೧೬ ॥

ಹೂವಿನಾ ಮಳೆಯಾಗಿ ಹೂವಿನಾತೇರೆರಿ
ಹೂವಾದವರು ಶಿವಪದಕ್ಕೆ ॥ ಶಿವಶರಣ
ಪಾವನಾದ ಮ್ಯಾಲೆ ಸೇರಿದರು ॥ ೧೭ ॥

ಕಿರಿ ಕುಲದ ಹರಳಯ್ಯಾ ವರಶರಣ ತಾನದಾ
ಪರಮತವ ಜೈಸಿ ಹರಸಿದನು ॥ ಹರಳನಿಗೆ
ಹರಮೆಚ್ಚಿ ಮೆರಸಿ ಕರೆದೊಯ್ದು ॥ ೧೮ ॥

ಹರನೆ ವರಸಂಗ ಗುರು ಎನಗೆ ಪರಸಂಗ
ಕರುಣನಿಧಿ ಹರನೆ ಸಂಗಮನೆ ॥ ಎಂದೆನುತ
ಕರಮುಗಿದ ಬಸವ ಬಯಲಾದ ॥ ೧೯ ॥

ಎಲ್ಲ ಬಲ್ಲಿದನಯ್ಯಾ ಬಲ್ಲಿದ ಬಸವಯ್ಯಾ
ಚೆಲ್ಲಿದನು ತಂದ ಶಿವಬೆಳಕ ॥ ನಾಡೋಳಗೆ
ಸೊಲ್ಲೆತ್ತಿ ಜನವು ಹಾಡುವದು ॥ ೨೦ ॥

ಅರಿಯುದಕೆ ಕುರುಹೆಂದು ಕರಲಿಂಗ ನೀ ಕೊಟ್ಟೆ
ಶರಣೆಂದು ನುಡಿಯ ಛಲಮಾಡಿ ॥ ಶಿವಮತಕೆ
ಗುರುಬಸವಲಿಂಗ ನಿಜಮಂತ್ರ ॥ ೨೧ ॥

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ಬೀಜ
ಬಸವ ಕಾಯಕದ ಗುರುಬೀಜ ॥ ಶಿವಮತಕೆ
ಬಸವ ಓಂಕಾರ ಶಿವನಾಮೊ ॥ ೨೨ ॥

ಸುಗ್ಗಿಯಲಿ ಒಕ್ಕಲಿಗಾ ಉಗ್ಗಡಿಸಿ ಹಾಡುವನು
ಕಗ್ಗಾಯಿ ತುಂಬಿ ಹಣ್ಣಾಗಿ ॥ ಕಣ ತುಂಬಿ
ಹಿಗ್ಗುವದು ಲೋಕ ರಸಕುಡಿದು ॥ ೨೩ ॥

ಮಾದರ ಹರಳಯ್ಯಾ ಹೋದ ದಿನ ಶಿವನಡಿಗೆ
ಬೀದಿ ಬೀದಿಗಳು ಕಿಡಿಕಾರಿ ॥ ಕಲ್ಯಾಣ
ಗಾದಿ ಹೌಹಾರಿ ತಳಮಳಸಿ ॥ ೨೪ ॥

ಅಂದು ಸಂಜೆಗೆ ಶಿವನೆ ಹೊಂದಿ ಮಂಟಪ ಕೂಡಿ
ಬಂದ ಬವಣೆಯನು ಕಳೆಯುದಕೆ ॥ ದಂಡೇಶ
ಸಂದಣಿಗೆ ಉಳವಿ ಸೇರೆಂದ ॥ ೨೫ ॥

ವಚನ ಮಂಟಪದೊಳಗೆ ವಚನಗಳ ಮಳೆ ಸುರಿದು
ಸುಚಿ ಹೊಂದಿ ಜಗವು ಅನುಭಾವ ॥ ಬಿತ್ತಿದರು
ಉಚಿತ ಹೊಸ ಮತದ ಬೆಳೆ ಬಂತು ॥ ೨೬ ॥

ಬಿಚ್ಚು ಗತ್ತಿಯ ಮಾಚ ಕೆಚ್ಚೆದೆಯ ಬಂಟನಾ
ರೊಚ್ಚಬಮ್ಮಯ್ಯಾ ಜಗದೇವ ॥ ನಿಮ್ಮಾಣೆ
ನುಚ್ಚು ಬಿಜ್ಜಳನ ಕಡಿಯುವೆನು ॥ ೨೭ ॥

ಊಳಿಗವು ಹೊರಡುದಕೆ ನಾಳಿನಾ ಉದಯದೊಳು
ಕಾಳಗವು ಎಸಗೆ ಹೊಸಮತಕೆ ॥ ಮಾಚಯ್ಯಾ
ಹೇಳಿ ಸಜ್ಜಾದ ಕಾಳಗಕೆ ॥ ೨೮ ॥

ಕಾಲರುದ್ರನು ಮಾಚ ಬಾಳ ಲೋಕದ ಭಕ್ತ
ಮೊಲ್ಲ ಬೊಮ್ಮಯ್ಯ ಜಗದೇವ ॥ ಮನೆಹೊಕ್ಕು
ಸೀಳಿತಲೆ ಹೊಡೆದು ಬಿಜ್ಜಳನ ॥ ೨೯ ॥

ಬಿಜ್ಜಳನ ವಧೆಯಾತು ಹೆಜ್ಜೆ ಮೀರಿತು ನಾಡು
ಕಜ್ಜಹದಗೆಟ್ಟು ಶಿವಶರಣರ ॥ ಹೂಳಿಗವು
ಸಜ್ಜಗೇರ್‍ಯಾಗಿ ಊರುಬಿಟ್ಟು ॥ ೩೦ ॥

ಅಳಿಯ ಬಿಜ್ಜಳರಾಯ ಕೊಲೆಯ ಕೇಳುತಲೆದ್ದ
ತಳಮಳಿಸಿ ಒಳಗ ಕೂಡಿಸಿದಾ ॥ ದಂಡೆತ್ತಿ
ಉಳಿವೆ ಬಲಿ ಅವರ ತಡೆಗಟ್ಟಿ ॥ ೩೧ ॥

ಕಾದರೊಳ್ಳೆಯ ಮುಂದ ಕಾದಿದರು ಜಂಗಮರು
ಕಾದಿ ಹಿಮ್ಮೆಟಿ ಜನರನ್ನು ॥ ಮುರಗೊಡ
ಹಾದಿಯೊಳು ಮಡಿದ ಮಾಚಯ್ಯಾ ॥ ೩೨ ॥

ತುಂಡು ಜಂಗಮ ದಂಡು ನಾಯಕ ಮಾಚ
ಕಂಡ ಕಂಡಲ್ಲಿ ವೈರಿಗಳಾ । ಚೆಲ್ಲಿದರು
ಚಂಡಿಕಳಕೊಂಡ ಮರಿ ಅರಸಾ ॥ ೩೩ ॥

ಬೆನ್ನಹತ್ತಿದ ವೈರಿ ತಣ್ಣಗಾಯಿತು ಚದರಿ
ಮಣ್ಣುಗೂಡಿಸಿದ ಮಾಚಯ್ಯ । ಕೈಯತ್ತಿ
ಬೆನ್ನ ಉಳಿಸಿದನು ಲಿಂಗಿಗಳು ॥ ೩೪ ॥

ಹರಭಜನೆ ಗುರು ಸೇವೆ ಉರುತರದಿ ಮಾಡುತಲಿ
ಶರಣ ಗಣ ಕೂಡಿ ಉಳವೆಯೊಳು । ಮರುದಿನವೆ
ಮೆರಸಿದರು ತತ್ವ ಮಂಟಪ ॥ ೩೫ ॥

ಚನ್ನ ಬಸವೇಶ್ವರರು ಉನ್ನತಾನುಭವಿಗಳು
ಚೆನ್ನಮಯ ವಾತೊ ಆ ಉಳವೆ ॥ ಲಿಂಗಿಗಳ
ಕನ್ನೆ ಭಕ್ತಿಯ ಗೂಡಾತು ॥ ೩೬ ॥

ದೂರ ದೂರವೇ ಹೋಗಿ ಸೇರಿದರು ಹಳ್ಳಿಗಳು
ಯಾರ ಯಾರೆಂಬ ಗುರುತಳಿದು ॥ ಮರೆಯಾಗಿ
ಆರಿ ಕೆಂಡಡಗಿ ಬೂದಿಯೊಳು ॥ ೩೭ ॥

ಮಂಟಪದ ಹೆಜ್ಜೇನ ಗಂಟೇರು ಕೆಡಸಿದರೆ
ಕುಂಟಿತವೆ ಜೇನು ನೊಣಗಳಿಗೆ ॥ ಹುಟ್ಟಿಡಲು
ಬಂಟ ಶರಣರಿಗೆ ಕಂಟಕವೆ ॥ ೩೮ ॥

ಶಿವಶರಣ ದುಂಬಿಗಳು ಭವದೊಳಗೆ ಹಾರ್ಹಾರಿ
ಶಿವಮತದ ಹುಟ್ಟು ಕಟ್ಟಿದವು ॥ ವಚನಗಳು
ಸವೆಯದುಳದಿರುವ ಹೊಸ ಜೇನು ॥ ೩೯ ॥

ಮಲ್ಲಿಗೆ ಇದ್ದಾಗ ಮುಳ್ಳೇಕ ಮುಡಿಯುತ್ತಿ
ಕಲ್ಯಾಣದಲ್ಲಿ ಬಸವಯ್ಯಾ ॥ ಇದ್ದಾಗ
ಕಲ್ಲಿಗೇಕೆ ಕಯ್ಯ ಮುಗಿಯುವೆ ॥ ೪೦ ॥

ಈಶ್ವರನ ನೆನೆದಾರ ವಿಷವೆಲ್ಲಾ ಅಮರೂತ
ಬಿಸಿಲೆಂಬ ದಾರಿ ನೆರಳಾಗಿ ॥ ಎಲೆ ಮನವೆ
ಬಸವಯ್ಯಾ ನೆನಸು ಕ್ಯಲಾಸ ॥ ೪೧ ॥

ಹಂತಿಗಣ್ಣಿಯು ಚೆನ್ನ ಚಿಂತೆಯಿಲ್ಲದ ರಾಶಿ
ಬಂತು ಮಹಮನೆಗೆ ಬಸವಣ್ಣ ॥ ನುಣ್ಣಸಿದನ
ನಿಂತು ಶಿವಮತದ ಅಂಬಲಿಯ ॥ ೪೨ ॥

ಬೆಳ್ಳೆಗಾವಿಯೆಂಬುದು ಶರಣರ ಊರು
ಕಳ್ಳು ಮಿಣಿಯಹೆಣೆದು ಆಯದೊಳು ॥ ಚೆನ್ನಯ್ಯ
ಒಳ್ಳೆದಾಸೋಹ ನಡೆಸಿದ್ದ ॥ ೪೩ ॥

ಬೆಳ್ಳಿಗಾವಿಗೆ ಬಂತು ಹಲ್ಲೆ ಹೊರಗಿನ ದಂಡು
ಕೊಳ್ಳಿ ಮದ್ದುಗುಂಡು ನಾಡೊಳಗೆ ॥ ಪಲ್ಲವರ
ತಳ್ಳಿ ಚಾಲುಕ್ಯರಾಳುತಲಿ ॥ ೪೪ ॥

ಅರಸು ಅರಸರ ಜಗಳ ಬಿರಸಾಯ್ತು ದೇಶದೊಳು
ಎರವಾಯ್ತು ಊರು ಶರಣರಿಗೆ ॥ ಚೆನ್ನಯ್ಯ
ನೆರೆಗಡಿಗೆ ಹೋದ ಕಾಯಕಕೆ ॥ ೪೫ ॥

ಛಪ್ಪನ್ನ ದೇಶದೊಳು ಒಪ್ಪಿ ಮೆರೆಯಿತು ಕಂಚಿ
ಸಿಪ್ಪೆ ಸಂಪತ್ತು ಜಗದೊಳಗ ॥ ಚೋಳರಸ
ಅಪ್ಪಿ ಜನರನ್ನು ಆಳುತಲಿ ॥ ೪೬ ॥

ಉಂಬಲ್ಲಿ ಉಡುವಲ್ಲಿ ಕೊಂಬಲಿ ಕೊಡುವಲ್ಲಿ
ಶಂಭು ಹರನೆಂದು ಶಿವಗುಣಿಸಿ ॥ ಮಾಡುವೆನು
ತುಂಬ ಶಿವಶರಣ ಚೆನ್ನಯ್ಯ ॥ ೪೭ ॥

ಕಂಡದ್ದು ಕೇಳಿದ್ದು ರುಂಡಧಾರಿಗೆ ಉಣಿಸಿ
ಉಂಡು ಭೋಗಿಸುವ ಚೆನ್ನಯ್ಯ ॥ ಕಾಡೊಳಗೆ
ಮಂಡಲವ ನೋಡಿ ಕೈಮುಗಿದು ॥ ೪೮ ॥

ಗುಂಗಿ ಮುಟ್ಟದ ಹೂವ ಲಿಂಗನಿಗೆ ತಿರಿತಂದು
ತಂಗಳದ ಮಡಿಯ ತಿಳಿನೀರ ॥ ಚೆನ್ನಯ್ಯ
ಟೆಂಗು ಹಣ್ಣುಗಳ ಎರೆದುಣಿಸಿ. ॥ ೪೯ ॥

ಮಡದಿ ಗಂಗಾದೇವಿ ಒಡೆಯ ಚೆನ್ನನ ಕಂಡು
ಒಡಲೂಟ ಉಂಡು ಆನಂದ ॥ ನೀಡುವಳು
ಒಡಲಡಿಗಿ ಪತಿಗೆ ಎಡೆಗೆಂದು ॥ ೫೦ ॥

ಅಂಬಲಿಯೊ, ಅಮೃತವೋ, ಸಂಭುಹರನೆಂಜಲವೊ
ಹಂಬಲಿಸಿ ಹರನು ಉಣ್ಣುವದೊ ॥ ಶರಣನಿಗೆ
ನಂಬಿ ಶಿವಕೊಟ್ಟ ಶಿವಪದವೊ. ॥ ೫೧ ॥

ಒಡೆಯ ಕತ್ತಿಯ ಚೋಳ ಹಿರಿದು ಕತ್ತಿಗೆ ಇಡಲು
ಕೊರಳ ಶಿವಲಿಂಗ ಕೈಹಿಡಿದು ॥ ಎಲೆಚೋಳ
ತರವಲ್ಲ ಹತ್ಯ ಭಕ್ತನಿಗೆ ॥ ೫೨ ॥

ಅಂಬಲಿಯ ನೀಡುತಲಿ ಎಂಬಲವ ಹಾಕುತಲಿ
ಕಂಬಿಗಳ ಹೊತ್ತು ಮೆರೆಸುತಲಿ ॥ ಹೊಸದಿನಕೆ
ಶಂಭುಹರನೆಂದು ಬೆಳವಲವು ॥ ೫೩ ॥

ಶರಣರ ನೆನೆದಾರ ಸರಗೀಯ ಇಟ್ಟಾಂಗ
ಅರಳ ಮಲ್ಲೀಗಿ ಮುಡಿದ್ಹಂಗ ॥ ಕಲ್ಯಾಣ
ಶರಣರ ನೆನೆಯೋ ನನ್ನ ಮನವೆ. । । ೫೪ ॥

ಕಿರಿಕುಲದ ಹರಳಯ್ಯ ವರಶರಣ ತಾನಾದ
ಪರಮತವ ಜಯಿಸಿ ಹರಸಿದನು ॥ ಹರಳಯ್ಯನಿಗೆ
ಹರಮೆಚ್ಚಿ ಮೆರಿಸಿ ಕರೆದೊಯ್ದು ॥ ೫೫ ॥

ಕಾರಜೋಳದ ಮುಂದೆ ಯಾರು ನೆಲಸಿದರಯ್ಯ
ಮಾರರಹರ ಭಕ್ತ ಹರಳಯ್ಯ ॥ ತೋಡಿರುವ
ನೀರೋರತಿ ಸಾಕ್ಷಿ ಯುಗ ಯುಗಕೆ ॥ ೫೬ ॥

ಹರಳಯ್ಯ ಮಾಡಿದ ಜೋಡು ನರಪಾಪಿ ಮಧುವಾಸ
ಜರೆದು ಶರಣರಿಗೆ ತಾ ಮೆಡಲು ॥ ಮೈತುಂಬ
ಉರಿತಾವೆದ್ದು ಕೂಗಾಡಿ ॥ ೫೭ ॥

ಸುಣ್ಣ ಕುದಿಗುಣಿಯೊಳಗೆ ಹಣ್ಣಾಗಿ ಬೆಂದಂತೆ
ಎಣ್ಣೆ ಬಲು ಕಾಶಿ ಕಣ್ಣೊಳಗೆ ॥ ಸುರಿದಂತೆ
ಡೊಣ್ಣೆ ಮುಳ್ಳುಗಳು ನಟ್ಟಂತೆ. ॥ ೫೮ ॥

ಶರಣ ಹರಳನ ನುಡಿ ಮರಣದಲಿ ಅಮೃತವು
ಅರಿತು ಮಾದೇವಿಶಿವನೆಂದು ॥ ಮನದೊಳಗೆ
ಹೊರತೇನು ಲೋಕ ಶರಣರಿಗೆ ॥ ೫೯ ॥

ಕಲಿಕಾಲ ಹೆಚ್ಚುತಲಿ ಒಲವಿಲ್ಲ ಶರಣರಿಗೆ
ಫಲವು ಬೇಡಿನ್ನು ಜಗದೊಳಗೆ ॥ ಗುರುದೇವ
ಹೊಲಬು ಬಿಗುಹಾದಿ ಹೊಲಸಾಯ್ತು ॥ ೬೦ ॥

ಮಾಡದ್ದು ಮಾಡುವರು ನೋಡದ್ದು ನೋಡುವೆವು
ಕಾಡಿಗಳು ಜನರು ಕೊಂಡಿಗಳು ॥ ಬಿಜ್ಜಳನು
ಓಡಿ ಮಡಿಯುವನು ಕಿವಿಗೊಟ್ಟು. ॥ ೬೧ ॥

ಬಸವ ಹೋಗಲು ಭೂಮಿ ಕಸವಾಗಿ ಸುಖವುಂಟೆ
ಮಸಣ ಮಸಣಾತು ಕಲ್ಯಾಣ ॥ ಮಂತ್ರಿಗಳೇ
ಬಸವಧಿಕ ಮಂತ್ರಿ ಇನ್ನುಂಟೆ ॥ ೬೨ ॥

ಚಿಂತಿಸಿದ ಬಿಜ್ಜಳನು ಕುಂತಲ್ಲಿ ನಿಂತಲ್ಲಿ
ಬಂತು ಕೊನೆಯಿನ್ನು ರಾಜ್ಯಕ್ಕೆ । ಮುಂದೆನಗೆ
ಇಂಥ ಮಂತ್ರಿಗಳು ಸಿಗಬಹುದೆ. ॥ ೬೩ ॥

ಕೊಂಡಿಗಳು ಮುಂದಾಗಿ ಬಂಡ ಜಗಳವ ಹೂಡಿ
ಹೆಂಡ ಕಡಿಸಿದು ಚೌಡಿಯಲ್ಲಿ ॥ ಬಿಜ್ಜಳನು
ಹುಂಡ ತಿಳಿಯದಲೆ ಕಿವಿಗೊಟ್ಟು ॥ ೬೪ ॥

ಬೇಡ ಶರಣರ ನಿಂದೆ ಕೇಡು ಬರುವದು ಮುಂದೆ
ನೋಡಿಕೋ ನಾಡ ಬಿಜ್ಜಳನೆ ॥ ಒಪ್ಪಿಸುತ
ಕಾಡ ಬೇಡಿನಲ್ಲಿ ಶರಣರಿಗೆ ॥ ೬೫ ॥

ಹಂತಿಯದು ಹಾಡೆಂದು ಪಂತ ಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲೆ ॥ ಹರಳಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೬೬ ॥

ಮಡಿವಾಳ ಮಾಚಯ್ಯ ದುಡವುಳ್ಳ ಶಿವಭಕ್ತಿ
ಮಡದಿಯನು ಕೊಂದು ರಗುತದಲಿ ॥ ತಾತೊಳೆದ
ಒಡೆಯನೊಸ್ತಿರವ ಭಕುತಿಯಲಿ ॥ ೬೭ ॥

ಹಿಪ್ಪರಗಿ ಮೆರೆಯುತಲಿ ಉಪ್ಪರಗಿ ಆಗೆಂದು
ತುಪ್ಪ ಹೊಳೆಯಾಗಿ ಹರಿಯುತಲಿ ॥ ಊರೊಳಗೆ
ಅಪ್ಪ ಮಾಚಣ್ಣ ಜನಿಸಿದನು. ॥ ೬೮ ॥

ಹಿಪ್ಪರಗಿ ಶರಣನಿಗೆ ತಪ್ಪದಲೆ ಬಾಗುವೆವು
ಮುಪ್ಪಾಗದಿರಲಿ ನಮ್ಹಾಡ ॥ ಮಾಚಯ್ಯ
ಅಪ್ಪಿ ಹಾದಿಯನು ತೋರಿಸಲಿ ॥ ೬೯ ॥

ಮಡಿವಾಳ ಮಾಚಣ್ಣ ಕಡುಭಕ್ತ ತಾನಾಗಿ
ಹಡೆದವರ ಕೆಲಸ ಕೈಕೊಂಡ ॥ ಊರೊಳಗೆ
ಬಡವರಿಗೆ ಭಾಗ್ಯನಿಧಿಯಾದ ॥ ೭೦ ॥

ಈರಾಡಿ ವೇದಗಳು ಹಾರಾಡಿ ವಾದಗಳು
ಜೋರಾಗಿ ನಡೆದು ನಿಲ್ಲುತಲಿ ॥ ಸಾಗರದ
ಏರಿಕಡೆದಂತೆ ರಕ್ಕಸರು. ॥ ೭೧ ॥

ಮುತ್ತೈದಿ ನಿನ ಮರಣ ಎತ್ತ ಹೋದರು ಪೂಜೆ
ಕಸ್ತೂರಿನಾತವಿದ್ದಂತೆ ॥ ಜಗದೊಳಗೆ
ಉತ್ತಮರ ಮನಕೆ ಕಾಯಕವು ॥ ೭೨ ॥

ಮಂತ್ರಿ ಬಸವನೆ ಕೇಳು ತಂತ್ರಿಗಳ ಮಂತ್ರಗಳು
ಜಂತ್ರದಲಿ ತಲೆಯ ಕೊಟ್ಟಂತೆ ॥ ಬೇಡಿನ್ನು
ತಂತ್ರದೊಳೆತನವು ಅರಸನಿಗೆ ॥ ೭೩ ॥

ಹೊನ್ನೀಯ ಹುಳದಂಗ ಮುನ್ನೂರು ದೀವಟಗಿ
ಹೊನ್ನ ಹಿಪ್ಪರಗಿ ಬೈಯಲಾಗ ॥ ಮಾಚಯ್ಯ
ಬನ್ನೀಯ ಮುಡಿದು ಬರತಾನೊ ॥ ೭೪ ॥

ಕಿನ್ನರಿಯ ಬೊಮ್ಮಯ್ಯ ಸನ್ನುತದ ತಂದ್ಯಾಥ
ಚೆನ್ನಬಸವಾದಿ ಗಣಗಳಿಗೆ ॥ ಕಲ್ಯಾಣ
ಹೊನ್ನಗಳಸಾದ ಶಿವ ಗುಡಿಗೆ ॥ ೭೫ ॥

ಹಣವಂತ ಬೊಮ್ಮಯ್ಯ ಗುಣವಂತ ಶರಣಯ್ಯ
ರಣವಂತ ವೀರ ಶಿವಮತಕೆ ॥ ನಾಡೊಳಗೆ
ತನುವಂತನಾದ ಪಶುಗಳಿಗೆ ॥ ೭೬ ॥

ಸೂಳಗೇರಿಯ ನೋಟ ಹೇಳಲಾರದ ಮಾಟ
ಗಳದೊಳು ಮೀನ ಸಿಕ್ಕಂತೆ ॥ ವಿಟಪುರುಷ
ಸೂಳೆಯರ ಬಲೆಗೆ ಸಿಗಿಬಿದ್ದು ॥ ೭೭ ॥

ಜೋಡು ಕೈಗಳ ಮುಗಿದು ಹಾಡಿದರು ಜನರೆಲ್ಲ
ನಾಡೊಳಗೆ ಹಿರಿಮೆ ಶರಣರದು ॥ ಪಶುಪಕ್ಷಿ
ಕಾಡೊಳಗೆ ಹಾಡಿ ನಲಿದಾಡಿ ॥ ೭೮ ॥

ಶರಣ ಶಿವಕಾಯಕವ ಒರೆಗೆ ಹಚ್ಚುವರಾರು
ಹರಸಹಿತ ಸೋತು ಬದುಕಿಸಿದ ॥ ಮೇದಾರ
ವರಕೇತನಿಗೆ ನಿನಗೆ ಸರಿ ಯಾರು ॥ ೭೯ ॥

ನಿನ್ನ ಭಜನೆಯ ಹಾಡು ಹೊನ್ನ ಮಳೆ ಸುರಿದಂತೆ
ಹಣ್ಣಾದ ಎದೆಯ ಒಕ್ಕಲಿಗ ॥ ಮಣ್ಣೊಳಗೆ
ಚಿನ್ನ ಬೆಳಕೊಂಡ ಬಿಳಿಜೋಳ ॥ ೮೦ ॥

ಗುರುವಿಲ್ಲದೇ ಕಲಿತ ಹರಭಕ್ತ ನೀನೊಬ್ಬ
ನರಲೋಕದೊಳಗೆ ಯಾರುಂಟು ॥ ಕೇತಯ್ಯ
ಚಿರವಂತ ಊಟ ನಿನ್ಹಾಡು ॥ ೮೧ ॥

ಜನಕೆ ನಿನ್ನ ಹಾಡು ಕೆನೆಹಾಲು ಇದ್ದಂತೆ
ತೆನೆಹಾಲು ನಿನಗೆ ಒಕ್ಕಲಿಗ ॥ ಇಂಪಾಗಿ
ಮನಸೋತು ಮಲಗೆ ಶಿವಲೋಕ ॥ ೮೨ ॥

ಜಗದೊಳಗೆ ಕಾಯಕವ ನಗು ನಗುತ ಮಾಡುವನು
ಮಗುವಾಗಿ ಸತತ ಒಕ್ಕಲಿಗ ॥ ಹೊಲಗೆಲಸ
ಹಗಲಿರುಳು ಕೇಳೋದಾಸೋಹ ॥ ೮೩ ॥

ಕಳ್ಳರಿಗೆ ಹೊಳುವಿಲ್ಲ ಸುಳ್ಳರಿಗೆ ತಳವಿಲ್ಲ
ಗೊಳ್ಳು ಮಾತಿಗದು ಸದರಲ್ಲ ॥ ಇಳಿಹಾಳ
ಹಳ್ಳಿಯೊಳು ಹುಟ್ಟಿ ಬೊಮ್ಮಯ್ಯ ॥ ೮೪ ॥

ದಿನ ಹೋಗಿ ಬೆಳಸಾಗಿ ದಿನಬಂತು ಬರಗಾಲ
ಕೊನೆಗಾಲ ಲೋಕ ಮುಳುಗುದ ॥ ಶಿವಮತಕೆ
ಅನುಗಾಲ ಬೆಳಕು ಹಬ್ಬುದಕೆ ॥ ೮೫ ॥

ಕುನ್ನಿ ಮನುಜರು ಹುಟ್ಟಿ ಮುನ್ನ ತಂದೆಯ ಮರೆತು
ಗುನ್ನೆ ಮಾಡಿದರು ಶಿವಮತಕ್ಕೆ ॥ ಶಿವನೋಡಿ
ನೀತಿ ಸುಣ್ಣ ಕುದ್ದಂತೆ ಕಿಡಿಕಾರಿ ॥ ೮೬ ॥

ಪರಮತವು ಮಾಡಿರುವ ಮರುಗನ್ನು ಕಮರಿಸಲು
ಹರನ ಸಿಟ್ಟಾತೊ ಬರಗಾಲ ॥ ನರಲೋಕ
ಹುರಪಳಿಸಿ ಬಿದ್ದು ಸುಳ್ಳಡಗಿ ॥ ೮೭ ॥

ನಿನ್ನ ಹಾಡವು ಸೋಂಕಿ ಹೊನ್ನವರಿ ಬೆಟ್ಟರಳಿ
ಹೊನ್ನುರಿಯು ಹೊತ್ತಿ ಜಗ ಬೆಳಗಿ ॥ ಬೆಳತನಕ
ಸಣ್ಣಾನಿ ಸುರಿಯೆ ಇಬ್ಬನ್ನಿ ॥ ೮೮ ॥

ಸುಗ್ಗಿಯಾ ಕಣ ಕೇಳೊ ಸಗ್ಗವದು ರೈತನಿಗೆ
ಹಿಗ್ಗಿ ಹಾಡುದಕೆ ಬೆಳವಲವೂ ॥ ಚೌಡಯ್ಯ
ಬುಗ್ಗೆ ಕುಣಿಯುದಕ್ಕೆ ಶಿವರೂಪ ॥ ೮೯ ॥

ಭರತ ಎದ್ಯೆಯ ಕಲಿತು ನುರಿತು ಬಲು ನಿಪುಣಾದ
ಹರನೆಂದು ಹಾಡಿ ಮೈಮರೆತು ॥ ಚೌಡಯ್ಯ
ಅರಿತು ಕುಣಿಯುವನು ಶಿವಲೀಲೆ ॥ ೯೦ ॥

ಅಮುಗಯ್ಯ ನಿನ್ಹಾಡು ನಮಗಾಯ್ತು ಶಿವಮಂತ್ರ
ಯಮಗಾಯ್ತು ಕುತ್ತು ಶಿವಜೀವ ॥ ಎತ್ತುದಕೆ
ಅಮರಾಯ್ತು ಜನಕೆ ಹೊಸಮತವು ॥ ೯೧ ॥

ಪರಹೆಣ್ಣು ಕಣ್ಣೊಳಗೆ ಪರಹೊನ್ನು ಮನದೊಳಗೆ
ಪರಮಣ್ಣು ಕೈಗೆ ಮುಟ್ಟಿದರೆ ॥ ಸೀಲೆಂದು
ಶರಣು ಅಮುಗಯ್ಯ ಸಾರಿದನು ॥ ೯೨ ॥

ಹುಟ್ಟಲಿಂಗವು ಬೇರೆ ಕೊಟ್ಟ ಲಿಂಗವು ಬೇರೆ
ಇಷ್ಟಲಿಂಗವು ಬೇರುಂಟೆ ॥ ಮೈತುಂಬ
ನಟ್ಟಹವು ಲಿಂಗ ತನಗೆಂದು ॥ ೯೩ ॥

ವರದಾನಿ ಹೆಂಡತಿ ತರವಲ್ಲ ಈ ಊರು
ಮರುದಿನವೆ ನಡೆದು ಕಲ್ಯಾಣ ॥ ಸೇರೋಣ
ತರವಲ್ಲ ಭವಿಯ ಗಾಳೆಂದು ॥ ೯೪ ॥

ಅಳು ಅರಸನ ಕೇಳು ಬೀಳುವದು ನಿಮ್ಮತವು
ತಾಳಿದೊರೆತನವು ಶಿವಶರಣರ ॥ ಅಳುವರು
ಗೋಳು ನಿಮ್ಮತಕೆ ನೀ ಎದ್ದು ॥ ೯೫ ॥

ಕುಲಗೆಡಿಸಿ ಬಸವೇಶ ಕಲಕು ಮಾಡಿದ ನಾಡು
ಚಿಲಕ ಮುರಿದಂತೆ ಬಾಗಿಲಕೆ ॥ ಅರಮನೆಯ
ಮಲಕು ಮುರಿದಂತೆ ಅರಸಿದ್ದು ॥ ೯೬ ॥

ಮದುವೆ ಮಾಡುವ ಮುಂದೆ ಮುದದಿ ಐರಣಿ ಹೊತ್ತು
ಚದುರೆಯರು ತಂದು ಹಾಡುವರು ॥ ಗುಂಡಯ್ಯ
ಸದರು ಶಿವಪದವ ಹೊಂದುವಿಕೆ ॥ ೯೭ ॥

ನೆನಸಿ ಹಾಡುವೆ ಶರಣ ಎನಿತು ನಿನ್ನೀ ಮಹಿಮೆ
ಕುಣಿಕೆ ಬಾಳುವೆಯ ಬಿಚ್ಚುದಕೆ ॥ ವರಗೈಯಲು
ಮನಕೆ ಶಿವ ಬೆಳಕ ತೋರುದಕೆ ॥ ೯೮ ॥

ಶರಣರ ನೆನೆದರ ಸರಗಿಯ ಇಟ್ಟಂಗ
ಅರಳ ಮಲ್ಲಿಗಿ ಮುಡದಂಗ ॥ ಕಲ್ಯಾಣ
ಶರಣರ ನೆನೆಯೋ ನನ ಮನವೆ ॥ ೯೯ ॥

– ಕೃತಿ: ಹಂತಿಯ ಪದಗಳು

***

ಸಂಗನ ಬಸವ

ಸಂಗಯ್ಯನಿರವುದು ಸಾಲ ಟೆಂಗಿನ ಮರನಾ
ಸಂಗಯ್ಯನ ತಮ್ಮ ಗಿರಿಮಲ್ಲ ॥ ನಿರುವುದು
ಸಾಲ ಉತ್ತತ್ತಿ ವನದಾಗೊ ॥ ೧ ॥

ಸಂಗಮಕ ಹೋಗಲಾಕ ಸಂಗಟ ಮಗಬೇಕು
ತೆಂಬಗ್ಗಿಡಿಯಾಕ ಸೊಸಿಬೇಕು ॥ ನಮ್ಮನಕ
ನಂಬಿಗಿ ಬೇಕ ಶಿವನಲ್ಲಿ ॥ ೨ ॥

ಮಲ್ಲಿಗ್ಹೂವಿನ ದಂಡಿ ಅಲ್ಲಿಟ್ಟೆ ಇಲ್ಲಿಟ್ಟೆ
ಕಟ್ಟಿಮ್ಯಾಲಿಟ್ಟೆ ಕೈಬಿಟ್ಟೆ ॥ ಸಂಗಮನಾಥ
ಪಲಕ್ಯಾಗಿಟ್ಟೆ ಶರಣೆಂದೆ ॥ ೩ ॥

ದೇವರಿಗೆ ಮಾಡಿದರ ದಾವತಿ ನಮಗಿಲ್ಲಾ
ದಾರಿನಡೆದರ ದಣುವಿಲ್ಲಾ ॥ ಸಂಗಮನಾಥ
ಹಾವು ಕಚ್ಚಿದರ ವಿಷವಿಲ್ಲಾ ॥ ೪ ॥

ಸಂಗಯ್ಯನ ಗುಡಿ ಮುಂದ ಲಿಂಗಮುದ್ದರಿ ಕಲ್ಲು
ಗಂಗವ್ವ ಮುಂದ ಹರದಾಳ ॥ ನಾ ಹೋಗಿ
ಹೊಂದಿಸಿ ಕೈ ಮುಗದೇನ ॥ ೫ ॥

ಸಂಗಮದ ದಾರ್‍ಯಾಗ ಸಾಲ ಟೆಂಗಿನ ಮರವ
ಟೊಂಗಿ ಟೊಂಗೆಲ್ಲಾ ಎಳಿಗಾಯೋ ॥ ನಂಬಸವಾ
ಬಿಲ್ಲಿಲೊಗೆದಾರೊ ಬಿಳಿಗಾಯೋ ॥ ೬ ॥

ಕರಿಯ ಕಪ್ಪಡದ ಸಂಗ ಕರ್ದಿಲಿ ಬಲು ಚೆಲುವ
ಇಟ್ಟಿ ಬಂಗಾರ ಪುಟವೇರಿ ॥ ಸಂಗಣ್ಣ
ಕೃಷ್ಣ ನದಿಯೊಳಗೆ ನೆನದಾನೋ ॥ ೭ ॥

ಸಂಗಪ್ಪನಂತವರು ಭಕ್ತರು ಯಾರಿಲ್ಲ
ನೀಲಮ್ಮನಂತಹ ಶರಣೆಲ್ಲಾ ॥ ಹೇಮರಡ್ಡಿ
ಮಲ್ಲಯ್ಯನಂತ ಸೊಸೆ ಇಲ್ಲ ॥ ೮ ॥

ಆಚೆಗಿ ಇಚೆಗಿ ಬಂಡಿ ನಡುವ ಸೇಧಿ ಭಾವಿ
ಅದರ ನೀರ ಸುಭ್ರಾವ ॥ ಕೂಡಲ ಸಂಗ
ಸಹದೇವರ ಬಂದ ನೆನದಾರೋ ॥ ೯ ॥

ಕೂಡಲ ಸಂಗಯ್ಯ ಹೊಳೆಯಾಗ ಹ್ಯಾಂಗಿದ್ದಿ
ಹಳ್ಳೊತ್ತಿ ಸಣ್ಣ ಮಳೆಲೊತ್ತಿ ॥ ಗಂಗೀಯ
ನೀರೊತ್ತಿ ಲಿಂಗ ನೆನೆದಾನ ॥ ೧೦ ॥

ಬೆಳ್ಳನ ಬೆಳಕ ಹರಿದು ಬಿಳಿ ಕುದುರಿಗೆ ತಡಿಹಾಕಿ
ಎಲ್ಲಿಗೆ ಸಂಗಣ್ಣ ನಿನ ವಸ್ತಿ ॥ ತಂಗಡಿಗೆ
ತಂಗಿ ನೀಲಮ್ಮನ ಅರಮನಿಗೆ ॥ ೧೧ ॥

– ಕೃತಿ: ಹಂತಿಯ ಹಾಡುಗಳು

***

ಶಿವ ಶಿವ ದಾರಿ ಬಿಡೋ

ಶಿವ ಶಿವ ದಾರಿಬಿಡೋ
ಪಾರ್ವತಿದೇವಿ ಮಡಿ ನೀರಿಗಿ ನಾ ಹೋಗುವೆ ॥ ಪ ॥

ಗಂಗಮ್ಮ ದಾರಿಬಿಡ
ಲಿಂಗದವಸ್ತ್ರ ತಂದೀನ ಕಲ್ಲಕೊಂಡ । ಶಿವ ಶಿವ ದಾರಿಬೊಡ್ಹೋ ॥ ಅ.ಪ ॥

ಕಾಶಿ ಪರ್ವತಮ್ಯಾಲ ಸೋಸಿ ತುಂಬಿದ ಕೊಡಾ ।
ಏಯವ್ವಾ ಎತ್ತಬರ್‍ರೆ । ಶಿವ ಶಿವದಾರಿ ಬಿಡೊ
ಏಯವ್ವಾ ಎತ್ತ ಬರ್‍ರೆ ನೀವು ನಮ್ಮ
ಕೊಡನರ ಎತ್ತ ಬರ್‍ರೆ ॥ ಶಿವ ಶಿವ ..... ॥ ೧ ॥

ಕಲ್ಲಾಗ ಹುಟ್ಟಿತ ಕರಿಯ ಮಲ್ಲಿಗಿ ಗಿಡ
ಭಲ್ಲಕಿಗಿ ಬೇರ ಬಡದಾವ । ಶಿವ ಶಿವ ದಾರಿ ಬಿಡೋ ।
ಭಲಕಿಗಿ ಬೇರ ಬಡದಾವ ತಿಪುರಾಂತ
ಕೆರಿಮ್ಯಾಲ ಮಗ್ಗಿ ಜಡದಾವ । ಶಿವ ಶಿವ ದಾರಿ ಬಿಡೋ ॥ ೨ ॥

ಕೆರಿಮ್ಯಾಲ ಮಗ್ಗಿ ಜಡದಾವ ಕಲ್ಯಾಣದ
ಶರಣರ ಲಿಂಗಕ ಹೂವ ಬರತಾವ । ಶಿವ ಶಿವ ದಾರಿ ಬಿಡೊ ॥ ೩ ॥

ಕಾಶಿಕಾಶಿಯಂದರ ಕಾಶಿಯಲ್ಲಿ ದೊರೆತಾಳ
ತಾಸೊತ್ತಿನ್ನಾದಿ ಮೈಲಾರ । ಶಿವ ಶಿವ ದಾರಿ ಬಿಡೊ
ತಾಸ್ಹೊತ್ತಿನ್ಹಾದಿ ಮೈಲಾರ ಅಗಸಿ ಮುಂದ
ಕಾಶಿಭಾಗೀರತಿ ಹರದಾಳ । ಶಿವ ಶಿವ ದಾರಿ ಬಿಡೋ ॥ ೪ ॥

ಶರಣರು ಬಂದಾರ ಸಾಲ್ಹತ್ತಿ ನಿಂತಾರ
ನಿಜುವುಳ್ಳ ಮನಿಯ ಹುಡುಕ್ಯಾರ । ಶಿವ ಶಿವ ದಾರಿ ಬಿಡೋ
ನಿಜ ಉಳ್ಳ ಮನಿಯ ಹುಡುಕ್ಯಾರ ಬಸವನ
ಭಾವುಳ್ಳ ಭಕ್ತ ಏ ಹಿಡಿ ಪಾದ । ಶಿವ ಶಿವ ದಾರಿಬಿಡೋ ॥ ೫ ॥

ಹರ ಹರ ನೆಂದಿದರ ಹರದಾತ ಕತ್ತಲ
ಶಿವಶಿವಾಯೆಂದರ ಏ ಬೆಳಗಾಗಿ । ಶಿವ ಶಿವ ದಾರಿಬಿಡೋ
ಶಿವ ಶಿವಾಯೆಂದಿದರ ಶಿವನಮ್ಮ ಮನಿದಾಗ
ಶಿವದಾರ ನಮ್ಮ ಏ ಕೊರಳಾಗ । ಶಿವ ಶಿವ ದಾರಿಬಿಡೋ ॥ ೬ ॥

– ಶ್ರೀಮತಿ ಕಾಡಾದಿ ಗೌರವ್ವ ಹಾಗೂ
ಡಾ। ನೀಲಾಂಬಿಕಾ ಶೇರಿಕಾರ, ಪ್ರೊ। ಜ್ಯೋತಿ ಕಾಡಾದಿ

***

ಶರಣರ ನೆನದರ

ಲಿಂಗಕ ನೀರಂತ ಹೋದೆ ನೀರ ದಡ್ಡಿಗಿ ನಿಂತೆ
ಅಂಗೈಯದೊಳಗಿರುವ ಲಿಂಗದಾ । ಸೇವೆಯಾ । ಲಿಂಗಕ ನೀರಂತ..॥ ಪ ॥

ಊರಸುತ್ತ ಲಿಂಗ ಕೇರಿಸುತ್ತ ಲಿಂಗ
ಬಾಜಾರ ಸುತ್ತ ಏ ಬಸವಣ್ಣ । ಲಿಂಗಕ ನೀರಂತ ಹೋದೆ
ಬಾಜಾರ ಸುತ್ತ ಏ ಬಸವಣ್ಣ ಸೋಲ್ಲಾಪುರದ
ಸಿದ್ಧಾರಾಮನ ಸುತ್ತ ಏ ಶ್ರೀಗಂಗಿ ॥ ಲಿಂಗಕ ನೀರಂತ... ॥ ೧ ॥

ವ್ಯಾಳೇಯ ಬಂದರ ಯಾರಿಗಿ ನೆನೆಯಲಿ
ಕಲ್ಯಾಣ ನಗರದ ಏ ಶರಣರೆ । ಲಿಂಗಕ ನೀರಂತ...
ಕಲ್ಯಾಣ ನಗರದ ಶರಣರ ನೆನದರ
ಬಂದ ಸಂಕಷ್ಟ ಏ ಬಯಲಾಗಿ । ಲಿಂಗಕ ನೀರಂತ ... ॥ ೨ ॥

ಅಕ್ಕನಾ ಕಲ್ಯಾಣ ಹೊಕ್ಕಿ ನಾವು ನೋಡಿದೇವು
ಗಲ್ಲಿಗಲ್ಲಿಯೆಲ್ಲಾ ಶರಣರು । ಲಿಂಗಕ ನೀರಂತ
ಗಲ್ಲಿಗಲ್ಲಿಯಲ್ಲಾ ಶರಣರು ತಿಳಿನೀರ
ತೀರ್ಥ ಮಾಡಿ ಏ ಸಲುಸಿದ । ಲಿಂಗ.... ॥ ೩ ॥

ಬಸವ ಒಳ್ಳೆವನಂತ ಹೆಸರಿಟ್ಟಾಳ ಅವರವ್ವ
ಬಸಳೆಲಿದಾಗ ಏ ಬಿಳಿಮುತ್ತ । ಲಿಂಗ....
ಬಸಳೇಲಿದಾಗ ಬಿಳಿಮುತ್ತನಿದ್ದರ
ಬಸವನ ದೃಷ್ಟಿ ಏ ತೆಗದಾಳ । ಲಿಂಗ .... ॥ ೪ ॥

ನನಹಂಬಲ ನಿನಗಾಗಿ ನಿನ ಹಂಬಲ ನನಗಾಗಿ
ಕಣ್ಣಿಗಿ ನಿದ್ದಿ ಏ ಬರವಲದು । ಲಿಂಗ ....
ಕಣ್ಣಿಗಿ ನಿದ್ದಿ ಬರವಲದು ಬಸವಣ್ಣ
ಕಣ್ಣಿಗಿ ಮುಂದಿದ್ದ ಏ ಬೆಳಗಾನ । ಲಿಂಗ ... ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ಮಲ್ಲಿಗಿ ಮಲ್ಲಿಗಿ

ಮಲ್ಲಿಗಿ ಮಲ್ಲಿಗಿ ಬನದಾಗಿರುವ ಖ್ಯಾದಿಗಿ
ಗದ್ದಿಗಿ ಮ್ಯಾಲಿನ ತೆನಿಯೆ ಶಿವನಿಗಿ ನೆನಿಯೆ ॥ ಪ ॥

ಕಲ್ಯಾಣ ಹುಟ್ಟಿದ್ದಾಗ ಎಲ್ಲಿದ್ದಿ ಬಸವಣ್ಣ
ಹಳ್ಳಿ ಮಂತಾಳ ತಿಪುರಾಂತ । ಮಲ್ಲಿಗೆ ....
ಹಳ್ಳಿನೇ ಮಂತಾಳ ತಿಪುರಾಂತ ಕೆರಿಮ್ಯಾಲ
ಚನ್ನ ಮೂಡಿದಾರೆ ಬಸವಣ್ಣ । ಮಲ್ಲಿಗೆ .... ॥ ೧ ॥

ಚನ್ನನ್ನೇ ಮೂಡ್ಯಾರೆ ಬಸವನ ಬೆನ್ಹತ್ತಿ
ಶರಣರು ಬಂದಾರ ಸಾಲ್ಹತ್ತಿ । ಮಲ್ಲಿಗೆ

ಮಾದಾರ ಚನ್ನಯ್ಯ ಕಂಚಿನಾಡಿಂದ ಬಂದ
ಅಂಬಲಿ ಮಹಿಮೆ ತಾತೋರಿ । ಮಲ್ಲಿಗೆ ॥ ೨ ॥

ಸಮಗಾರ ಹರಳಯ್ಯಗ ಸಮನಾರು ಜಗದಾಗ
ಸಮಮಾಡಿ ಮೆಟ್ಟ ಹೊಲದಾನ । ಮಲ್ಲಿಗೆ
ಅಂಬಿಗರ ಚೌಡಯ್ಯ ದೋಣಿಯ ನಡೆಸುತಾ
ಇಂಬಹಾಡಿ ದಡವ ಮುಟ್ಯಾನ । ಮಲ್ಲಿಗೆ ॥ ೩ ॥

ನುಲಿಯ ಚಂದಯ್ಯ ಮಾದಾರ ಧೂಳಯ್ಯ
ದೊಗ್ಗಯ್ಯ ಬಾಚಯ್ಯ ಉಳದಾರ । ಮಲ್ಲಿಗೆ
ಮಡಿವಾಳ ಮಾಚಯ್ಯ ಮಡಿಮಾಡಿ ವಸ್ತ್ರವ
ಎಡಿ ಆಗಿ ಶಿವನಾ ಪಾದಕೆ । ಮಲ್ಲಿಗೆ ॥ ೪ ॥

ಸೊಲ್ಲಾಪುರ ಸಿದ್ದಣ್ಣ ಎಲ್ಲಕ್ಕ ದೊಡ್ಡಂವ
ಸೊಲ್ಲೆತ್ತಿ ಪದವ ಬರಿತಾನ । ಮಲ್ಲಿಗೆ
ಮೋಳಿಗಿ ಮಾರಯ್ಯ ಕಾಶ್ಮೀರದ ರಾಜನು
ಕಡಿದ ಕಟ್ಟಿಗಿ ಚಿಗಿದು ಮರವಾಯ್ತು । ಮಲ್ಲಿಗೆ ॥ ೫ ॥

ಘಟ್ಟಿವಾಳಯ್ಯನೆಂಬ ಶರಣನೆಂತ ಗಟ್ಟಿ
ಬಸವನ ತತ್ತ್ವ ಹಿಡಿದಾನ ಗಟ್ಟಿ । ಮಲ್ಲಿಗೆ
ಕಂಬಳಿ ನಾಗಿದೇವ ಸಾಂಭನ ರೂಪದಂವ
ಕಂಬಳಿ ಮಾಡ್ಯಾನ ದ್ಯಾಹವ । ಮಲ್ಲಿಗೆ ॥ ೬ ॥

ಗಜೇಶ ಮಸಣಯ್ಯ ಗಜನಾಗಿ ನಿಂತಾನ
ಹೊಳೆ ದಾರಿ ಬಿಟ್ಟಾದ ಅವನಿಗಿ । ಮಲ್ಲಿಗೆ
ಬಹುರೂಪಿ ಚೌಡಯ್ಯ ಬಹುವೇಷ ಹಾಕ್ಯಾನ
ಒಂದ ಮನ ಮಾಡ್ಯಾನ ಲಿಂಗಕ । ಮಲ್ಲಿಗೆ ॥ ೭ ॥

ಮೇದಾರ ಕೇತಯ್ಯ ಮಲ್ಲಿಗಿ ಗುಣವಂತ
ಮಲ್ಲಿಗಿ ಆಗ್ಯಾನ ಶರಣರಿಗಿ । ಮಲ್ಲಿಗಿ
ಹಡಪದ ಅಪ್ಪಣ್ಣ ಮಾತಿಲ್ಲದ ಮೌನಿಯ
ಹಡದಪ್ಪ ಆಗ್ಯಾರ ಬಸವಣ್ಣಗ । ಮಲ್ಲಿಗಿ ॥ ೮ ॥

ನಿಜಲಿಂಗ ಚಿಕ್ಕಯ್ಯ ಕೆಸರಮ್ಯಾಲಿನ ಕಮಲ
ಶರಣರ ಬಳಗಕ ಬೆಳದಿಂಗಳ । ಮಲ್ಲಿಗೆ

ಮಹಾದೇವಿ ಎಂಬಾಕಿ ವಯದಾಗ ಸಣ್ಣಕ್ಕಿ
ಶರಣರ ಬಳಗಕ ಅಕ್ಕಾಗಿ । ಮಲ್ಲಿಗಿ ॥ ೯ ॥

ಸತ್ಯಕ್ಕ ಯೆಂಬಾಕಿ ಸುದ್ದುಳ್ಳ ಗುಣದಾಕಿ
ಸತ್ಯದ ಹಾದಿ ತೋರಿದಾಕಿ । ಮಲ್ಲಿಗಿ
ಮೋಳಿಗಿ ಮಹಾದೇವಿ ರಾಜನ ಮಡದಿಯು
ಊಳಿಗದಹಾಂಗ ದುಡಿದಳ । ಮಲ್ಲಿಗಿ ॥ ೧೦ ॥

ಲಿಂಗಮ್ಮ ಎಂಬಾಕಿ ಲಿಂಗಗುಣ ಪಡದಾಕಿ
ಲಿಂಗದ್ಹಾಂಗ ಹೊಳದಾಳ ಕಲ್ಯಾಣದಾಗ । ಮಲ್ಲಿಗೆ
ನೀಲಮ್ಮ ಎಂಬಾಕಿ ನಿಜಭಕ್ತಿ ಮಾಡಿದಾಕಿ
ನಿಜಲಿಂಗಿ ಆಗ್ಯಾಳ ಎಲ್ಲರಿಗಿ । ಮಲ್ಲಿಗೆ ॥ ೧೧ ॥

ಗಂಗಾಂಬಿಕೆ ತಾಯಿ ಗುಂಗೆಲ್ಲಾ ಶಿವನಲ್ಲಿ
ಗಂಗ್ಯಾಗಿ ಹರದಾಳ ಕಲ್ಯಾಣಕೆ । ಮಲ್ಲಿಗೆ
ಅಕ್ಕನಾಗಮ್ಮಳು ಅಕ್ಕನಂತೆ ಉಳಿದು
ಚೊಕ್ಕಾಗಿ ಧರುಮ ಹಿಡದಾಳ । ಮಲ್ಲಿಗೆ ॥ ೧೨ ॥

ಮುಕ್ತಾಯಿ ಎಂಬಾಕಿ ಮುಕ್ತಿಯ ತೋರಿದಾಕಿ
ಪ್ರಭುವಿನಿಂದ ಮುಕ್ತಿ ಪಡೆದಾಕಿ । ಮಲ್ಲಿಗೆ
ಆಯ್ದಕ್ಕಿ ಲಕ್ಕಮ್ಮ ಅಕ್ಕಿಯ ಆಯ್ದಾಳ
ಲಕ್ಷಿಟ್ಟು ಕಾಯಕ ಮಾಡ್ಯಾಳ । ಮಲ್ಲಿಗೆ ॥ ೧೩ ॥

ಮರುಳ ಶಂಕರದೇವ ಶಂಕರನಂತಾಗಿ
ಮರುಳಾಗಿ ಕಂಡಾರ ಜಗದಾಗ । ಮಲ್ಲಿಗೆ
ಬಿಲ್ಲೇಶ ಬೊಮ್ಮಯ್ಯ ತೆಲುಗಿನ ಜೊಮ್ಮಯ್ಯ
ಕನ್ನಡ ಬ್ರಹ್ಮಯ್ಯ ಬ್ರಹ್ಮರಾಗಿ । ಮಲ್ಲಿಗೆ ॥ ೧೪ ॥

ಅವಸರ ರೇಕಣ್ಣ ಅಜಗಣ್ಣ ಅಗ್ಗಣ
ಅಮುಗಿದೇವಯ್ಯ ಅರಿವನು ಪಡದಾರ । ಮಲ್ಲಿಗೆ
ಊರಿಲಿಂಗದೇವರು ಉರಿಲಿಂಗ ಪೆದ್ದಿಯು
ಉಳಿಯುವೆ ಚಿಕ್ಕಣ್ಣ ಉಳದಾರ । ಮಲ್ಲಿಗೆ ॥ ೧೫ ॥

ಅಪ್ಪಣ್ಣ ಅಪ್ಪಯ್ಯ ಆಯ್ದಕ್ಕಿ ಮಾಚಯ್ಯ
ಒಕ್ಕಲಿಗ ಮುದ್ದಣ್ಣ ಉಳದಾರ । ಮಲ್ಲಿಗೆ

ಜೇಡರ ದಾಸಯ್ಯ ಶಂಕರ ದಾಸಯ್ಯ
ಶಿವದಾಸಣ್ಣ ಉಳದಾರ । ಮಲ್ಲಿಗೆ ॥ ೧೬ ॥

ಅಪ್ಪ ರೇವಣಸಿದ್ಧ ಅಪ್ಪ ಪಂಡಿತರಾಧ್ಯ
ಮುಗ್ಧಸಂಗಯ್ಯ ಅಲ್ಲಿಹರ । ಮಲ್ಲಿಗೆ
ಪಡಿಹಾರಿ ಉತ್ತಣ್ಣ ಪಡಿಹಾರಿ ಬಾಚಣ್ಣ
ಚಿಕ್ಕ ಮಾದಣ್ಣ ಚೊಕ್ಕಾಗಿ । ಮಲ್ಲಿಗೆ ॥ ೧೭ ॥

ಭಂಡಾರಿ ಶಾಂತಯ್ಯ ಬೊಕ್ಕಸ ಚಿಕ್ಕಯ್ಯ
ನಿಜಗುಣ ದೇವರು ನಿಜವೈದು । ಮಲ್ಲಿಗೆ
ತವಲೆಯ ಬ್ರಹ್ಮಯ್ಯ ಜಕ್ಕೆಯ ಬೊಮ್ಮಯ್ಯ
ಕಂಗಳ ಬಸವಯ್ಯ ಕಂಗಳಾಗಿ । ಮಲ್ಲಿಗೆ ॥ ೧೮ ॥

ಸಣ್ಣಂವ ಚನ್ನಬಸವ ಚಿನ್ಮಯರೂಪಾಗಿ
ಕಣ್ಣಾಗಿ ಉಳದಾನ ಬಸವಗ । ಮಲ್ಲಿಗೆ
ಮಲ್ಲಿಗಿ ಮಲ್ಲಿಗಿ ಬನದಾಗಿರುವ ಖ್ಯಾದಿಗಿ
ಗದ್ದಿಗಿ ಮ್ಯಾಲಿನ ತೆನಿಯೆ ಶಿವನಿಗಿ ನೆನೆಯೆ । ಮಲ್ಲಿಗೆ ॥ ೧೯ ॥

– ಶ್ರೀಮತಿ ಕಾಡಾದಿ ಗೌರವ್ವ ಹಾಗೂ
ಡಾ। ನೀಲಾಂಬಿಕಾ ಶೇರಿಕಾರ, ಪ್ರೊ। ಜ್ಯೋತಿ ಕಾಡಾದಿ

***

ಆಕಳ ಈಯಾಗ

ಆಕಳ ಈಯಾಗ ಪಾತಾಳ ನಡಗ್ಯಾವ
ಗೋಕುಳದ ಗುಡ್ಡ ಮರಿಯಾದೋ । ತಮ್ಮಾ
ತಮ್ಮಾ ನಿನಗ ಹಾದಿ ಕಾರಣ ಮಾಡಿದೆ ॥ ೧ ॥

ಗೋಕುಳದ ಎನಗುಡ್ಡ ಮರಿಯಾದೆ ಗೋಪೆವ್ವ
ಹಡದಾಳ ಚನ್ನಬಸವಣ್ಣ
ತಮ್ಮಾ ನಿನಗ ಹಾದಿ ಕಾರಣ ಮಾಡಿದೆ ॥ ೨ ॥

ಹಾದಿಕಾರಣ ಘಾಡಿದೆ ಹಾಲಮಜ್ಜನ ಮಾಡಿದೆ
ನನ್ನೈದು ಬೆರಳ ಸರಿಮಾಡಿ । ತಮ್ಮಯ್ಯ
ತುಪ್ಪ ಸಕ್ಕರಿ ನೀಡಿದೆ ॥ ೩ ॥

ಶಿವಶಿವಾಯೆಂದಿನಿ ಸಿಂಬಿಯ ಸುತ್ತೀನಿ
ನೆಂಬಿಗುಳ್ಳ ನೀರ ತರಲೇನು । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೪ ॥

ನೆಂಬಿಗುಳ್ಳ ನೀರ ತರಲೇನು ಮಲ್ಲಿಕಾರ್ಜುನ
ತಂದಿ ಸಾಂಬನ ಶಿವಪೂಜೆಗೆ । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೫ ॥

ಅರಿವುಂಟು ಮರುದಿನ ಗುರುವಿಗಿ ನೆನದೀನ
ಬರುವ ಭಾಗ್ಯಕ ತಡವಿಲ್ಲ । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೬ ॥

ಬರುವಂತ ಭಾಗ್ಯಕ್ಕ ತಡವಿಲ್ಲ ಹುಲಸೂರು
ಗುರುಸ್ವಾಮಿಗಿ ಮೊದಲ ನೆನದಿನಿ । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೭ ॥

ಕಲ್ಯಾಣ ಹುಟ್ಟಿದಾಗ ಎಲ್ಲಿದ್ದಿ ಬಸವಣ್ಣ
ಹಳ್ಳೀ ಮಂತಾಳ ತಿಪುರಾಂತ । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೮ ॥

ಹಳ್ಳಿನೇ ಮಂತಾಳ ತಿಪುರಾಂತ ಕೆರಿಮ್ಯಾಲ
ಚನ್ನ ಮೂಡಿದಾರೆ ಬಸವಣ್ಣ । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೯ ॥

ಮೋಳಿಗೆ ಮಾರಯ್ಯನ ಭಾವೆಷ್ಟು ದೊಡ್ಡದು
ಮೋಳಿಗೆ ಚಿಗಿದು ಮರವಾಯ್ತು । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೧೦ ॥

ಮೋಳಿಗೆ ಚಿಗಿದು ಮರವಾಯ್ತು ಮೊಳಕೇರಿ
ಶರಣರು ಕೂಡಾಕ ನೆರಳಾಯ್ತು । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೧೧ ॥

ಹಚ್ಚನ ಹುಲ್ಲನೋಡಿ ಹೊಕ್ಕಾರ ನನದೊಡ್ಡಿ
ಹೊಸಮಾರಿ ಎತ್ತ ಇವರ್‍ಯಾರ ತಮ್ಮಯ್ಯ
ಹಾದಿ ಕಾರಣ ಮಾಡಿಸೆ ॥ ೧೨ ॥

ಉದ್ದಾನ ಉಳಿಲಿಂಗ ಗದ್ದುಗಿ ಮಾರಲಿಂಗ
ಕಾರಂಜಿಲಿಂಗ ಕರಿಲಿಂಗ । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೧೩ ॥

ಕಾರಂಜಿ ಲಿಂಗ ಕರಿಲಿಂಗ ಶಿವಯೋಗಿ
ಶಾಂತ ನಮಲಿಂಗ ಮಹಾಲಿಂಗ । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೧೪ ॥

ಮಳಿಬಂತೆ ಮಳಿಬಂತ ಮಳಿಹಿಂದ ಜಡಿ ಬಂತ
ಆಕಳ ಹಿಂದ ಕರುಬಂತ । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೧೫ ॥

ಆಕಳ ಹಿಂದ ಕರುಬಂತ ನನ ತಮ್ಮ
ಮಾರಾಯರ ಹಿಂದ ಮಗಬಂದ । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೧೬ ॥

ಮಗನಿಗೆ ಎತಗೊಂಡು ಮಠಕ ಹೋದಕಿಯಾರ
ನಿಲಿಗಿ ಮ್ಯಾಲ ಲಿಂಗ ಬಸವಣ್ಣ । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೧೭ ॥

ನಿಲಿಗಿ ಮ್ಯಾಲ ಲಿಂಗ ಬಸವಣ್ಣ ನನ ತಂಗಿ
ಸೆರಗಿನ ಮ್ಯಾಲ ಶರಣರು । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೧೮ ॥

ಗುರುನನ್ನ ಶಿವಾನಂದ ಬರೆಗಾಲಲಿ ಬರುವಾಗ
ಸದರದ ಮ್ಯಾಲ ಶಿವಹನ । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೧೯ ॥

ಸದರದ ಮ್ಯಾಲಹಾರ ಶಿವಾನಂದ ಹುಲಸೂರು
ಕುದರಿಯ ಸಿಂಗರಿಸಿ ಎದುರಾಗಿ । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೨೦ ॥

ಬಸವಣ್ಣ ನಿಮ ಪಾದ ಹಸನಾಗಿ ತೊಳದಿನಿ
ಎಸುಳ ಪತ್ತರಿ ಧರಿಸಿದ ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೨೧ ॥

ಗುರುವಿನ ಸಂಗ ಹಾದೀಯ ನಡದಿದೆ
ಅರಣ್ಯದಾಗ ಹಸುವಾಗಿ । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೨೨ ॥

ಅರಣ್ಯದಾಗ ಹಸುವಾದ ಬಸವಕುಮಾರ
ಪಾದೋದಕ ಮಾಡಿ ಸಲುಹಿದ । ತಮ್ಮಯ್ಯ
ಹಾದಿ ಕಾರಣ ಮಾಡಿದೆ ॥ ೨೩ ॥

ಲಿಂಗಪೂಜೆಯ ಮಾಡಿ ಅಂಗಳಕ ಬಂದಾರ
ಬಂಗಾರದ ಕೆಂಚ ಹೊಳದಾವ । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೨೪ ॥

ಬಂಗಾರದ ಕೆಂಚ ಹೊಳದಾವ ಹಡದವ್ವ
ಎಂತಹ ಸಿರಿಗಂಗಿ ಹಡದಾಳ । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೨೫ ॥

ಅಂಗೈಯದೊಳಗಿನ ಲಿಂಗೈಯ ಚಲುವ್ಹಾರ
ಶರಣರದಾಗ ಬಸವಣ ಚಲುವ್ಹರ । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೨೬ ॥

ಶರಣರ ಒಳಗ ಬಸವಣ್ಣ ಚಲುವೆಂದು
ನೀಲಮ್ಮ ಹೇಳಿ ನಗುತಾಳ । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೨೭ ॥

ಅತ್ತಿಯ ಸೀರಿಗಿ ಮುತ್ತ ಹಾಕಿ ನೆಯದೀನಿ
ಅತ್ತಿ ಹಿರಿಯಳು ನನಮನಿಗಿ । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೨೮ ॥

ಅತ್ತಿ ಹಿರಿಯಳು ನನಮನಿಗಿ ನನ್ನ ಅತ್ತಿ
ಪುತ್ರಗ ಹರಕಿ ಕೊಡಬಾರ । ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೨೯ ॥

ಅಂಗೈ ಲಿಂಗಕ್ಕೆ ಮಂಗಲ ಬೆಳಗಿ ಬೇಡಿನಿ
ಭಂಗ ನೀ ತರಬ್ಯಾಡ ಜನುಮಕ ತಮ್ಮಯ್ಯ
ಹಾದಿಕಾರಣ ಮಾಡಿದೆ ॥ ೩೦ ॥

– ಶ್ರೀಮತಿ ಕಾಡಾದಿ ಗೌರವ್ವ
– ಶ್ರೀಮತಿ ನೀಲಮ್ಮ ನೆಲೋಗಿ

***

ಶರಣರ ಸ್ಮರಣೆ

ಹೊತ್ತಾರೆ ನಾನೆದ್ದು ಯಾರ್‍ಯಾರ ನೆನೆಯಲೆ
ಮುಕುತಿ ಪಡೆಯುವರ ನೆನೆಯುವೆ
ಮುಕುತಿ ಪಡೆಯುವರ ನೆನೆಯುವೆ ಗುರುದೇವಾ
ಸಚ್ಚಿದಾನಂದನ ನೆನೆಯುವೆ ॥ ಪ ॥

ಕರುಣೆಯ ನಿಧಿಯಾಗಿ ಮಮತೆಯ ಸುಧೆಯಾಗಿ
ಕರವ ಹರಿವ ಗುರುವಾಗಿ । ಧರೆಗಿಳಿದ
ವರಗುರು ಬಸವನ ನೆನೆಯುವೆ ॥ ೧ ॥

ಮೃಣಯದ ಕಾಯವ ಚಿನುಮಯ ಮಾಡುವ
ಚೆನ್ನಾರ ಚೆಲುವ ಘನಲಿಂಗ । ದೇವನ
ಮನಮುಟ್ಟಿ ನೆನೆದು ತಣಿಯುವೆ ॥ ೨ ॥

ತನು ಮನ ಧನಗಳು ಶಿವನಿಗೆ ಅರ್ಪಿಸಿ
ಚಿನುಮಯಳಾದ ಮಹಾದೇವಿಯಕ್ಕನ । ನೆನೆದು
ಜೀವನವ ಸವಿಗೊಳಿಸುವೆ ॥ ೩ ॥

ಯೋಗದ ತವರಾಗಿ ಜ್ಞಾನದ ಕುರುಹಾಗಿ
ಭೋಗ ಜೀವನವ ತೃಣವೆನಿಸಿ ಘನವಾದ । ಯೋಗಿ
ಅಲ್ಲಮನಾ ನೆನೆಯುವೆ ॥ ೪ ॥

ಜ್ಞಾನದ ಸಿರಿಯಾಗಿ ಅಜ್ಞಾನದರಿಯಾಗಿ
ಕಾಮ ಕ್ರೋಧವನಳಿದ ಘನಮಹಿಮ । ಗುರುವಾದ
ಚೆನ್ನಬಸವನ ನೆನಯುವೆ ॥ ೫ ॥

ಶುದ್ಧಾತ್ಮ ತಾನಾಗಿ ಕ್ಷುದ್ರ ಮಾಯೆಯ ತೊಡೆದು
ಬದ್ಧ ಜೀವನದ ಭವ ಗೆಲಿದು । ಶಿವನಾದ
ಸಿದ್ಧರಾಮಣ್ಣನ ನೆನೆಯುವೆ ॥ ೬ ॥

ಮಾಚಿದೇವಯ್ಯಗಳ ಹಡಪದ ಅಪ್ಪಣ್ಣಗಳ
ಮೋಚಿ ಕಾಯಕದ ಹರಳಯ್ಯ । ಮಾರಯ್ಯ
ಬಾಚಯ್ಯನವರ ನೆನೆಯುವೆ ॥ ೭ ॥

ಶರಣ ಪರಿವಾರ / ೫೬೯

ತಾಯಿ ನೀಲಮ್ಮಗಳ ಅಕ್ಕ ಮುಕ್ತಾಯಳ
ಭಾಮೆ ಗಂಗಾಂಬಿಕೆ ಸತ್ಯಕ್ಕ । ಲಿಂಗಮ್ಮ
ನಿತ್ಯ ಶರಣೆಯರ ನೆನೆಯುವೆ ॥ ೮ ॥

ಮಮಕಾರದ ಕಮಲಕ್ಕೆ ಪರಶಿವನ ಕುರುಹಿತ್ತು
ಚಿನ್ಮಯಗೊಳಿಸಿದ ಶ್ರೀ ಗುರು ಬಸವಾನಂದ
ಪರಮ ಗುರುವ ನೆನೆಯುವೆ ॥ ೯ ॥

ಘನವರಿತು ಅನುವಾಗಿ ಜೀವನವು ಶಿವನಾಗಿ
ಶರಣ ಸತಿಯಾಗಿ ಕರುಣಾದ ಎಲ್ಲರ ವರ
ಸಚ್ಚಿದಾನಂದನ ನೆನೆಯುವೆ ॥ ೧೦ ॥

– ಶ್ರೀಮತಿ ಪಾರ್ವತಿ ಜೇಮಶೆಟ್ಟಿ
ಹಾಗೂ ಅನ್ನಪೂರ್ಣ ದೇವಣ, ಸರ್ವಮಂಗಳಾ ಜೋಗೂರ

***

ಜೋಗುಳ ಹಾಡು

ಕೇರಿ ಕೇರಿಗೊಂಟ ಸಾರಿ ಕಾಮುಟಗೇರೆ
ಸಾರಿ ನಗಾರಿ ಶಂಕರುರಾಜಾ ಜೋ ಜೋ
ಸಾರಿನೇ ನಗಾರಿ ಶಂಕರ ರಾಜರಗೂಡಿ
ಶರಣರ ಬಾಗಿಣಕ ಬರಬೇಕು ಜೋ ಜೋ ॥ ೧ ॥

ಕಕ್ಕಯ್ಯ ಹರಳಯ್ಯ ಗೆಜ್ಜಿಯ ಮಸಳಯ್ಯ
ಮೋಳಿಗಿ ಮಾರಯ್ಯ ಸಿಂಧು ಬಾಲಣ್ಣ ಜೋ ಜೋ
ಮೋಳಿಗಿ ಮಾರಯ್ಯ ಸಿಂದು ಬಾಲಣ್ಣ ಕೂಡಿ
ಶರಣರ ಬಾಗಿಣಕ ಬರಬೇಕೆ ಜೋ ಜೋ ॥ ೨ ॥

ಕಾಲಾಗ ಕರಿದವರೆ ತೋಳ ತಾಯಿತದವರೆ
ಲಾಕಿಟ ಚವರಿ ತುರಬೀಗೆ ಜೋ ಜೋ
ಲಾಕಿಟ ಚವರಿ ತುರಬೀಗೆ ಹಾಕಿಕೊಂಡು
ಶರಣರ ಬಾಗಿಣಕ ಬರಬೇಕೆ ಜೋ ಜೋ ॥ ೩ ॥

ಕಪ್ಪ ಕಾಡಿಗಿದವಳೆ ಒಪ್ಪದಲಿ ಬಾಣತಿ
ಬಾಲಾನ ಹೆಸರ ಏನಿಡಬೇಕೆ ಜೋ ಜೋ

ಬಾಲುವನ ಹೆಸರ ಏನ ಇಡಬೇಕಯ್ಯ
ಕರಿರಿ ಬಸವಣಪ್ಪ ಬೆಸಗಳಿಗಿ ಜೋ ಜೋ ॥ ೪ ॥

– ಶ್ರೀಮತಿ ಜಗದೇವಿ ತೋಳೆ

***

ಲಕ್ಷಕ್ಕೊಬ್ಬ ಭಕ್ತರು

ಅನ್ಯಾಯ ಹೆಚ್ಚಾಗಿ ಅತ್ಯಾಚಾರ ಹೆಚ್ಚಾಗಿ
ಕಲಿಯುಗದ ಕೊನೆಯಲ್ಲಿ
ಚನ್ನಬಸವರು ಹುಟ್ಟಿ ಬರುವರಾ ॥ ಪ ॥

ಸಾವಿರಾ ಮೈಲಿಗೊಂದು ದೀಪವು ಉರದಾತು
ಲಕ್ಷಕ್ಕೊಬ್ಬ ಭಕ್ತರು ಅಲ್ಲಿ ಇಲ್ಲಿ ಉಳದಾರು
ಕೋಟಿಗೊಬ್ಬ ಶರಣರು ಮಿಂಚಿನ್ಹಾಂಗ ಮಿಂಚ್ಯಾರು
ಚನ್ನಬಸವನಾ ಶಿಷ್ಯ ಅವರೆಲ್ಲರಾಗ್ಯಾರು ॥ ೧ ॥

ತಿಳದವರು ತಿಳದಾರು ತಿಳಿಯದವರು ಅಳದಾರು
ಗೋಳಿನ ಬದುಕದು ಹಿಂಗ್ಯಾತು ಅವರಿಂದ
ಅಳಿಬೇಕು ಭ್ರಾಂತಿ ಜೀವ ಪಡಿಬೇಕು ಶರಣಜೀವ
ಚನ್ನಬಸವರಾ ಸ್ಮರಣೆ ದಿನ ದಿನ ಮನದೊಳು ॥ ೨ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಆರತಿ ಬೆಳಗುವೆನು ನಾ

ಆರುತಿ ಬೆಳಗುವೆನು ನಾ ವರದ ಆರುತಿ ಬೆಳಗುವೆನು
ಮಂಗಲದಾರುತಿ ಬೆಳಗುವೆನು ಶ್ರೀ ಗುರು ಬಸವಣ್ಣ
ಪ್ರಮಥರಿಗೊಂದು ಆರುತಿ ಬೆಳಗುವೆನು ॥ ಪ ॥

ಅಲ್ಲಮ ಗದ್ದುಗಿಗೆ ಮಾಲಾ ಮರಿದೇವರ ಗುಡಿಗೆ
ಜಯ ಜಯ ಮುಕ್ಕಣ್ಣನ ಸಭೆಗೆ ಶೀಲಾ ಸದಾ
ಶಿವಯೋಗ ಕಾಲಜ್ಞಾನ ಕವಿಗಳಿಗೆ ॥ ೧ ॥

ಅಕ್ಕನ ಗವಿಗಳಿಗೆ ಅಕ್ಕಮಹಾದೇವಿಯ ನುಡಿಗಳಿಗೆ
ಜಯ ಜಯ ನುಲಿಯ ಚಂದಯ್ಯಗೆ ಕಕ್ಕಯ್ಯ
ಹರಳಯ್ಯಗೆ ಮಡಿವಾಳ ಮಾಚರಸರ ಕರೆಗೆ ॥ ೨ ॥

ಕಲ್ಯಾಣ ಕೈಲಾಸ ಮ್ಯಾಲ ಪರುಷದ ರಟ್ಟೆಯವಾಸ
ಅಲ್ಲಿ ಶಿವ ಭಕ್ತರಿಗುಲ್ಲಾಸ ಬಲ್ಲಿದ ಶರಣರ ವಂದಿಸಿ
ಬೆಳಗುವೆ ವಿರುಪಾಕ್ಷನ ದಾಸ ಆರುತಿ ಬೆಳಗುವೆ ॥ ೩ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಕಿಲಕಿಲ ನಾದ ಬರುತಿತ್ತ

ನಸುಕಿನ ನಾಕಕ ಕಲ್ಯಾಣ ಊರಾಗ
ಕಿಲ ಕಿಲ ನಾದ ಬರುತಿತ್ತ । ಶರಣೇರ
ಕಾಯಕ ನಡದಾದ ಭಕುತಿಲೊ ॥ ೧ ॥

ಸತ್ಯಕ್ಕ ಎಂಬಾಕಿ ಸದ್ಗುಣದ ತಾಯಾಕಿ
ಸತ್ಯುಳ ಶಿವಗ ನೆನಸುತ । ಶರಣರ
ಮನೆಯಂಗಳ ಕಸವ ಹೊಡದಾಳ ॥ ೨ ॥

ಅಕ್ಕಮ್ಮ ನೀಲಮ್ಮ ಅಕ್ಕರೆಯ ನಾಗಮ್ಮ
ಮಿಕ್ಕಿದ ಶರಣೇರ ನೆನಸುತ । ಸೋಮವ್ವ
ಭತ್ತ ಕುಟ್ಟ್ಯಾಳ ದಾಸೋಹಕ ॥ ೩ ॥

ಕಾಶ್ಮೀರದ ರಾಜಾನ ತಂಗಿಯು ಬೊಂತಾದೇವಿ
ಭಕುತಿಲಿ ಖೌದಿ ಹೊಲದಾಳ । ಆ ಖೌದಿ
ಶರಣರ ಮನಿಗಿ ಮಾರ್‍ಯಾಳೊ ॥ ೩ ॥

ಸಣ್ಣಕ್ಕಿ ಮಾದೇವಿ ಕಲ್ಯಾಣದ ಶರಣೆಯರಿಗೆ
ಅಕ್ಷರ ಕಲಿಸಿ ಕೊಟ್ಟಾಳ । ಶರಣರು
ಹಿಗ್ಗಿಲಿ ಅ ಆ ಕಲಿತಾರ ॥ ೪ ॥

ಅಜಗಣ್ಣನ ತಂಗಿಯು ಸಣ್ಣಕ್ಕಿ ಮುಕ್ತಾಯಿ
ಶರಣರ ಮನಿ ಆಕಳ । ಕಾಯ್ದಾಳ
ಆಕಳ ಕೊಟಗಿ ತೊಳದಾಳೊ ॥ ೫ ॥

ಮೋಳಿಗಿ ಮಾದೇವಿ ಗಂಡನ ಜೊತೆಗ್ಹೋಗಿ
ಕಟ್ಟಿಗಿ ಕಡಿದು ತರುತ್ತಾಳ । ಮಾಮನಿ
ದಾಸೋಹಕ ಒಯ್ದು ಸಲುಸ್ಯಾಳೆ ॥ ೬ ॥

ನೀಲಮ್ಮ ಗಂಗಮ್ಮ ಮಹಾಶರಣಿ ನಾಗಮ್ಮ
ಒಲಿಹಾಕಿ ಹಂಚ ಇಟ್ಟಾರ । ಬಸವಣ್ಣನ
ದಂಡಿಗಿ ರೊಟ್ಟಿ ಬಡದಾರ ॥ ೭ ॥

ಅಪ್ಪಣ್ಣನ ಮಡದಿಯು ಅನುಭಾವಿ ಲಿಂಗಮ್ಮ
ಅನುಭವದ ಕಾಯಕ ಮಾಡ್ಯಾಳ । ಶರಣೇರು
ಅನುಭವ ಹಿಗ್ಗಿಲಿ ಪಡದಾರೊ ॥ ೮ ॥

ಶಿವಮಾಯಿ ಶರಣಿಯು ಅವಳೆಂತ ಜ್ಞಾನಿಯು
ಅನುಭವದ ಕಾಯಕ ಮಾಡ್ಯಾಳ । ಊರೂರು
ತಿರುತಿರಗಿ ಜ್ಞಾನ ಕೊಟ್ಟಾಳ ॥ ೯ ॥

ಮಾರನ ಮಡದಿಯು ಮಾಸತಿ ಲಕ್ಕಮ್ಮ
ಮಾಮನಿದಾಗ ಅಕ್ಕಿ ಆಯ್ದಾಳ । ಸಾವಿರಾ
ಶರಣರ ದಾಸೋಹ ಮಾಡ್ಯಾಳ ॥ ೧೦ ॥

ಹರಳನ ಮಡದಿಯು ಹರ ಶರಣೆ ಕಲ್ಯಾಣಮ್ಮ
ಶರಣರಿಗಿ ಆವುಗಿ ಹೊಲದಾಳ । ಅದರಿಂದ
ಶರಣರ ದಾಸೋಹ ಮಾಡ್ಯಾಳ ॥ ೧೧ ॥

ಶಿವಶರಣಿ ಗೌರಮ್ಮ ಶಿಸ್ತಿನ ತಾಯಮ್ಮ
ಶಿಸ್ತಿನ ಕಾಯಕ ನಡಸ್ಯಾಳ । ಎಲ್ಲರಿಗಿ
ಬದುಕುವ ರೀತಿ ತಿಳಸ್ಯಾಳ ॥ ೧೨ ॥

ವೀರಾದೇವಿ ಶರಣಿಯು ಅನುಭಾವಿ ತಾಯಾಗಿ
ವಚನವ ಉಗ್ಗಡಿಸಿ ಹೇಳ್ಯಾಳ । ಎಲ್ಲರಿಗಿ
ಶರಣರ ವಚನ ತಿಳಸ್ಯಾಳ ॥ ೧೩ ॥

ಶರಣರ ವಚನವ ಚಿತ್ತಿಟ್ಟು ಹಾಡುತಾ
ಮರತಾಳ ಮರತ್ಯ ಸಿದ್ದಮ್ಮ ಆ ವಚನ
ಕೇಳವರ ಮನಕ ಆನಂದ ॥ ೧೪ ॥

ಶರಣೆಯು ವಿಮಲವ್ವ ಅಕಿಭಾಳ ಜಾಣವ್ವ
ದೀಕ್ಷೆಯು ಕೊಟ್ಟಾಳ ಭಕುತರಿಗಿ । ಅವರಿಗಿ
ಸತ್ಯದ ಹಾದಿ ತೋರ್‍ಯಾಳ ॥ ೧೫ ॥

ರಾಟಿಯು ತಾ ಹಿಡಿದು ನೂಲರಾ ತಾ ತೆಗೆದು
ನೂಲಿನಾ ಕಾಯಕ ನಡಸ್ಯಾಳ । ರೆಮ್ಮವ್ವ
ರಾಟ್ಯಾಗ ಶಿವಮೇಟಿ ಕಂಡಾಳ ॥ ೧೬ ॥

ಕೇತಯ್ಯನ ಮಡದಿಯು ಪತಿವೃತಿ ಸಾತವ್ವ
ಬಿದಿರಿನ ಬುಟ್ಟಿ ಹೆಣದಾಳ । ಗಂಡನ
ಕೈಯಾದಗ ಕೊಟ್ಟು ಖಳುವ್ಯಾಳ ॥ ೧೭ ॥

ಪೆದ್ದಣ್ಣನ ಮಡದಿಯು ಗಟ್ಟಿಯಾ ಕಾಳವ್ವೆ
ಕಟ್ಟಿಗಿ ಕಡಿಯುವ ಕಾಯಕ । ಮಾಡುತ್ತಾ
ಇಟ್ಟಾಳ ಹೆಜ್ಜಿ ಗಟ್ಟ್ಯಾಗಿ ॥ ೧೮ ॥

ಮಾಚಯ್ಯನ ಮಡದಿಯು ಮಾಸತಿ ಕೇತಲೆ
ಶರಣೇರ ವಸ್ತ್ರ ಒಗದಾಳ । ಭಕುತಿಲಿ
ಮಡಿ ಮಾಡಿ ತಂದು ಕೊಟ್ಟಾಳ ॥ ೧೯ ॥

ತೆಂಗಿನ ಮಾದೇವಿ ಬಾಗುತ ಭಕುತಿಲಿ
ಶರಣರ ಎಬ್ಬಿಸಿ ನಸುಕಾಗ । ಅವರಿಗಿ
ಶಿವಭಜನಿ ಮಾಡಕ ಹಚ್ಚ್ಯಾಳ ॥ ೨೦ ॥

ಹುಗ್ಗಿಯ ದುಗ್ಗಳೆ ಹುಗ್ಗಿ ಅಕ್ಕಿ ಕುಟ್ಟ್ಯಾಳ
ಹಿಗ್ಗಿಲಿ ಕಾಯಕ ಮಾಡ್ಯಾಳ । ದುಗ್ಗಳೆ
ಬಗ್ಗಿ ತಾ ನೀಡಿ ಪಂಕ್ತಿಗಿ ॥ ೨೧ ॥

ನೇಮದ ಸಂಗವೆ ನೇಮದಿಂದಲಿ ಕೂಡಿ
ವಿಭೂತಿ ಸಿದ್ಧ ಮಾಡ್ಯಾಳ । ಶರಣರ
ನೊಸಲಿಗಿ ವಿಭೂತಿ ಕೊಟ್ಟಾಳ ॥ ೨೨ ॥

ಹಾಲರಾ ತಾ ಹಿಂಡಿ ಬೆಣ್ಣೆಯ ತಾ ಹೊಸೆದು
ತುಪ್ಪವ ಕಾಸ್ಯಾಳ ಅರತಿಲಿ । ನಾಗಲಾಯಿ
ತುಪ್ಪವ ಮಾರಿ ಶರಣರಿಗಿ ॥ ೨೩ ॥

ಹೂವನ್ನು ತಾ ಕೊಯಿದು ಹಿಗ್ಗಿಲಿ ಸರಮಾಡಿ
ಸರಮಾಡಿ ಸಂತ್ಯಾಗ ತಾ ಮಾರಿ । ಆ ಶರಣೆ
ಹೂವಿನಲ್ಲಮದೇವಿ ನಾಮ ಪಡದಾಳ ॥ ೨೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಜ್ಞಾನದ ಎಣ್ಣೆ ಹಚ್ಚಬೇಕ

ಅನುಭವ ಮಂಟಪದ ಅಕ್ಕತಂಗೇರು ನೀವು
ಹಿಗ್ಗಿಲಿ ಸುರಗಿಗಿ ಬರಬೇಕ
ಹಿಗ್ಗೀಲಿ ಸುರಗಿಗಿ ಬರಬೇಕ ಶರಣೆಯರೆ
ಬಾಲೀಗಿ ಎಣ್ಣೆ ಹಚ್ಚಬೇಕ ನೀವು ಹಚ್ಚಬೇಕ ॥ ೧ ॥

ಅಕ್ಕನಾಗಮ್ಮ ನೀವು ಬಾಲಿಗಿ ತಾಯಾಗಿ
ಬೋಧವ ಮಾಡಿ ಹಚ್ಚಬೇಕ
ಬೋಧವ ಮಾಡುತಾ ಹಚ್ಚಬೇಕ ನಾಗಮ್ಮ
ಬಾಲಿಗಿ ಹರಕಿ ಕೊಡಬೇಕ ನೀವು ಕೊಡಬೇಕ ॥ ೨ ॥

ನೀಲಮ್ಮ ಗಂಗಮ್ಮ ಹಿರಿಯಕ್ಕ ನೀವಾಗಿ
ಲಿಂಗದ ಮಾತ ಹೇಳಬೇಕ
ಲಿಂಗದ ಮಾತ ಹೇಳುತ ಶರಣೆಯರೆ
ತಂಗಿಗಿ ಹರಕಿ ಕೊಡಬೇಕ ನೀವು ಕೊಡಬೇಕ ॥ ೩ ॥

ಸತ್ಯಕ್ಕ ಮುಕ್ತಕ್ಕ ಲಿಂಗಮ್ಮ ಮಾದೇವಿ
ಜ್ಞಾನದ ಮಾತ ಹೇಳಬೇಕ
ಜ್ಞಾನದ ಮಾತ ಹೇಳುತ ಜ್ಞಾನಿಗಳೆ
ಜ್ಞಾನದ ಎಣ್ಣೆ ಹಚ್ಚಬೇಕ ನೀವು ಹಚ್ಚಬೇಕ ॥ ೪ ॥

ಹಾದಿಗಿ ಹಂದರಹಾಕಿ ಬೀದಿಗಿ ಛಳಿಕೊಟ್ಟು
ಹೊನ್ನ ಕಳಸದ ಸುರಗಿ ಸುತ್ತಿ
ಹೊನ್ನ ಕಳಸದ ಸುರಗಿಯ ಸುತ್ತುತ್ತಾ
ಬಾಲೀಗಿ ಎಣ್ಣೆ ಹಚ್ಚರಿ ನೀವು ಹಚ್ಚರಿ ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಲಿಂಗದ ಬಾಜರದವರೇ

ಕಲ್ಯಾಣ ಊರವರೇ
ನೀವು ಲಿಂಗದ ಬಾಜರದವರೇ
ಕಲ್ಯಾಣ ಬಸವಗ ಕರಸರಿ
ನೀವು ಬಾಲಾಗ ಎಣ್ಣೆ ಧರಸರಿ ॥ ೧ ॥

ಕಲಬುರ್ಗಿ ಊರವರೇ
ನೀವು ವಿಭೂತಿ ಬಾಜರದವರೇ
ಕಲಬುರ್ಗಿ ಶರಣಗ ಕರಸರಿ
ನೀವು ಬಾಲಾಗ ಎಣ್ಣೆ ಧರಸರಿ ॥ ೨ ॥

ತಂಗಡಗಿ ಊರವರೇ
ನೀವು ವಸ್ತ್ರದ ಬಾಜರದವರೇ
ತಂಗಡಗಿ ನೀಲಮ್ಮಗ ಕರಸರಿ
ನೀವು ಬಾಲಾಗ ಎಣ್ಣೆ ಧರಸರಿ ॥ ೩ ॥

ಹುಬ್ಬಳ್ಳಿ ಊರವರೇ
ನೀವು ಹೂವಿನ ಬಾಜರದವರೇ
ಹುಬ್ಬಳ್ಳಿ ಸಿದ್ಧಾರೂಢಗ ಕರಸರಿ
ನೀವು ಬಾಲಾಗ ಎಣ್ಣೆ ಧರಸರಿ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ನಿಜಶರಣನ ತ್ರಿವಿಧಿ

ಗುರುವಿನ ನೆನೆದರ ಹರಿಯಿತು ಪಾಪವು
ಅರಿವು ಆಚರಿಸಿ ತಿರಿದುಂಡ ಜಗದೊಳು
ಸಿರಿವಂತನಾದೆ ನಿಜಶರಣ ॥ ೧ ॥

ಗುರುವಿನ ಕಾಣುತ ಎರಗಿದೆ ಪಾದಕೆ
ಹರುಷದಿ ಹಸ್ತ ಮಸ್ತಕದ ಮ್ಯಾಲಿಟ್ಟು
ಸ್ಥಿರವಾಗಿರೆಂದು ನಿಜಶರಣ ॥ ೨ ॥

ಶಾಸ್ತ್ರವನೋದಿದರ ಬ್ಯಾಸರ ಪರಿಹಾರ
ಈಶನ ನೆನದರೆ ಓಂದೇಳು ಜನ್ಮವ
ಪಾಶ ಪರಿಹಾರ ನಿಜಶರಣ ॥ ೩ ॥

ಗುರುದೀಕ್ಷೆ ಹೊಂದಿ ಪರಮ ಪ್ರಸಾದವುಂಡು
ಕುರು ಹಿಡಿದು ಪೂಜಿ ಮಾಡಿದರೆ ಮನಸಂತೋಷ
ಗುರುವೆ ಗತಿಯೆನಗೆ ನಿಜಶರಣ ॥ ೪ ॥

ಗುರುವೆಂದು ಭಾವಿಸಿ ನರನೆಂದು ಜರಿದರೆ
ಹರ ಕೃಪೆಯು ತಪ್ಪಿ ಭವಭವದೊಳು ಪುಟ್ಟಿ
ತಿರುಗುವುದು ತಪ್ಪುವುದೆ ನಿಜಶರಣ ॥ ೫ ॥

ಶ್ರೀಗುರು ತಾರಕ ಬ್ರಹ್ಮನರಿದಾತನೆ ಭಕ್ತ
ಗುರುವಿನಾ ಗುರು ಪರಮ ಗುರುವಿನಾ ಪಾದ
ಯುಗ್ಮದೊಳು ನಿತ್ಯ ನಿಜಶರಣ ॥ ೬ ॥

ತಿರುಗುವ ತಾಪತ್ರ ಪರಿಹರಿಸೊ ಮಹಾಗುರುವೆ
ಗುರುವಿನಾ ಗುರುವು ಪರಮಗುರುವಿನ ಪಾದವ
ನೆನೆದರೆ ಮೋಕ್ಷ ನಿಜಶರಣ ॥ ೭ ॥

ಅರಿವಿನ ಆಲಯಕೆ ದ್ವಾರವೆ ಗುರುವು
ಶ್ರೀಗುರು ತಾರಕ ಬ್ರಹ್ಮ ಇದನರಿದಾತ
ನಿಜಭಕ್ತನಾತನೆ ನಿಜಶರಣ ॥ ೮ ॥

ಭೂಮಿಯನು ಒಕ್ಕಲಿಗ ನೆಚ್ಚಿ ನಂಬಿದ ಹಾಗೆ
ಆ ಮಹಾದೇವನ ಪ್ರೇಮದಿ ನೆನೆದರೆ
ಕಾಮದೇನುವಕ್ಕು ನಿಜಶರಣ ॥ ೯ ॥

ಗುರುವಾಕ್ಯವಿದ್ದಲ್ಲಿ ಗುರುವಿಲ್ಲ ಭವಿಶಬ್ದ
ಬರಿದೆ ಶಿವಪೂಜೆ ಮಾಡಿದರೆ ಫಲವೇನು
ಕರೆಯ ಒಡೆದಂತೆ ನಿಜಶರಣ ॥ ೧೦ ॥

ಗುರುದ್ವಾರವೆಂಬೂದು ಅರಿವಿನ ಆಲಯ
ಬ್ಯರಿಲ್ಲವಣ್ಣ ಬಸವಾದಿ ಪ್ರಮಥರು
ಸೂರ್ಯಗೊಂಡಾರು ನಿಜಶರಣ ॥ ೧೧ ॥

ಪರಮವಿರಕ್ತರ ಚರಣವ ಪಿಡಕೊಂಡು
ಬರಹವ ಕಲಿತು ಅನುಭಾವ ಮಾಡುವರ
ನೆನದು ಸುಖಿಯಾದೆ ನಿಜಶರಣ ॥ ೧೨ ॥

ನೂರೊಂದು ವಿರಕ್ತರ ಪಾರಿಕ ನಾನಯ್ಯ
ಪಾರಿಯ ತಿರುಗಿ ಪವಳ ಮಂಟಪದೊಳು
ದ್ವಾರವಕಾಯ್ದೆನು ನಿಜಶರಣ ॥ ೧೩ ॥

ಮೂಜಗ ಗೆಲ್ದಾತನ ಮೇಲೆ ಗಜಿಬೀಜಿಯಾಯ್ತು
ನಜರು ನಟ್ಟಿತು ಶರಣರ ಸಭೆಯೊಳು
ಮಜ ಭಾಪು ತಾನೆ ನಿಜಶರಣ ॥ ೧೪ ॥

ಗುರಿಯೊತ್ತಿದ ಮೇಲೆ ಬಿರಿಯಿತು ಬಂದೂಕು
ಹರಿಯಿತು ಮಸ್ತದಿ ಕರಿಗೊಂಡಿತು ಮಿಗೆ
ವರಿಯಿತು ಕಾಣೆಯಾ ನಿಜಶರಣ ॥ ೧೫ ॥

ನೂರೊಂದು ವಿರಕ್ತರ ಸೇವಕ ನಾನಯ್ಯ
ಪರಮ ವಿರಕ್ತರ ಚರಣವ ಪಿಡಕೊಂಡು
ಪಾರಾದೆ ಭವವ ನಿಜಶರಣ ॥ ೧೬ ॥

ಇಷ್ಟಲಿಂಗದ ಪ್ರೇಮಿ ಸೃಷ್ಟಿಗಿಳಿದು ಬಂದು
ಸಿಟ್ಟಳಿದು ಷಟ್‌ಸ್ಥಲವನುದ್ಧರಿಸಿದ
ಕಟ್ಟಿಗಿ ಹರಳಯ್ಯ ನಿಜಶರಣ ॥ ೧೭ ॥

ಹರಲೋಕದಿಂದಿಳಿದು ನರಲೋಕಕ್ಕೆ ಬಂದು
ಪರವಾದಿಗಳನು ಸಂಹರಿಸಿದ ಮುರಿಗೆಯ
ಕರಿಯ ಶಾಂತೇಶಾ ನಿಜಶರಣ ॥ ೧೮ ॥

ಶಾಂತೇಶನೆಂಬಾತ ಎಂಥಾತ ಜಗದೊಳಗೆ
ಪಂಥ ಪಕ್ಷವಿಲ್ಲದೆ ಪರವಾದಿಗಳನು
ಭಗ್ನಮಾಡಿದ ನಿಜಶರಣ ॥ ೧೯ ॥

ನಿಜಶರಣನೆಂಬಾತ ಅಜಗಣ್ಣಯ್ಯನು ತಾನು
ಅಜಹರಿಗಳಿಗೆ ಅಳವಲ್ಲದ ಮಾತು
ಮುಜರಿಗಿಟ್ಟಂತೆ ನಿಜಶರಣ ॥ ೨೦ ॥

ಮಹಾದೇವಿಯಕ್ಕಗಳು ಶಾಸ್ತ್ರವನು ಓದಿ
ಬೋಧೆಯನು ಕೇಳಿ ಬಯಲಾಗಿ ಕದಳಿಗೆ
ಹೋದದ್ದು ಅರಿಯೊ ನಿಜಶರಣ ॥ ೨೧ ॥

ತಲ್ಲೀನವಾದಾತ ಮಲ್ಲೆಯ ಬೊಮ್ಮಣ್ಣ
ಕುಲ್ಲ ಬಿಜ್ಜಳನ ಕಡೆ ಮೆಟ್ಟಿ ಉಳುವಿಗೆ
ನಿಲ್ಲದೆ ಹೋದಾನೊ ನಿಜಶರಣ ॥ ೨೨ ॥

ಚೋರ ಚಿಕ್ಕಯ್ಯನು ಪರುಷ ಕದಿಯ ಬಂದು
ಮಾರಾರಿ ಬಸವನ ದಯಾದೃಷ್ಟಿ ಬೀಳಲು
ಭಾರಿ ಗುಣ ಬಂತೊ ನಿಜಶರಣ ॥ ೨೩ ॥

ಸಾಗಿ ಹೋದಾತನು ಯೋಗಿ ತೋಟದಯ್ಯ
ಭೋಗೇಶ ದೇವರನು ಹಗಲಿರಳು ನೆನೆದು
ಭಾರ್ಗನಾ ಬೆರೆದ ನಿಜಶರಣ ॥ ೨೪ ॥

ಬ್ಯಾಡರ ಕಣ್ಣಪ್ಪ ಕಾಡಬ್ಯಾಟಿಯ ತಂದು
ಮಾಡಿದನು ಪೂಜೆ ಕೆರವಗಾಲಿಲಿ ಒದಿದು
ನಡೆದ ಕಾಳಹಸ್ತಿಗೆ ನಿಜಶರಣ ॥ ೨೫ ॥

ಮಡಿವಾಳ ಮಾಚಯ್ಯ ಉಡುವ ಕಪ್ಪಡ ತೊಳೆದು
ಕುರುಡು ಕುಂಟರು ತಾವು ಕರಿಬಂದು ಕೈಕಾಲು
ಪಡೆದು ಹೋದಾರೋ ನಿಜಶರಣ ॥ ೨೬ ॥

ಮೋಳಗಿ ಮಾರಯ್ಯ ಆಳೂರಾಜ್ಯವ ಬಿಟ್ಟು
ಕಲ್ಯಾಣಕೆ ಬಂದು ಮೋಳಗಿ ಕಾಯಕಾ ಮಾಡಿ
ಭಾಳಾಕ್ಷನ ಬೆರೆದಾ ನಿಜಶರಣ ॥ ೨೭ ॥

ಕೂಗಿನ ಮಾರಯ್ಯ ತಂದಿ ಆಗುಂಟು ಈಗಿಲ್ಲ
ಯಾವಾಗಲುಂಟು ಶಿವಯೋಗ ಗಣಂಗಳ
ಬೆರೆತಾರು ಎಚ್ಚರದಿ ನಿಜಶರಣ ॥ ೨೮ ॥

ನುಲಿಯ ಚಂದಯ್ಯನು ಲಿಂಗ ತೊಲಗಲಿ ಬಿಟ್ಟು
ಖುಲ್ಲ ನಿಲ್ಲೆಂದು ಕೂಗಿದರೆ ಕರಕೊಂಡು ಆತನಿಗೆ
ನುಲಿಯ ಕಾಯಕವಿತ್ತ ನಿಜಶರಣ ॥ ೨೯ ॥

ಮುಗ್ಧ ಸಂಗಯ್ಯನೀಗಿಲ್ಲ ಜಲಮಲ ಬಿಡುತಾ
ಭಾರ್ಗನ ಪೂಜೆ ತುಂಬಿ ಪುಷ್ಪವ ಕೊಂಡು
ಹುಚ್ಚಾಗಿ ಧರಿಸಿದನೊ ನಿಜಶರಣ ॥ ೩೦ ॥

ಅರಿತ ಮಹಾತ್ಮರ ಮರೆತು ನಾನಿರಲಾರೆ
ವ್ಯರ್ಥ ಜನ್ಮವನು ಕಳಿಲಾರೆ ನೆನಹಿನೊಳು
ಭರಿತನಾಗಿರ್ದೆ ನಿಜಶರಣ ॥ ೩೧ ॥

ಕಲ್ಯಾಣ ಪ್ರಮಥರು ಎಲ್ಲಾ ಶರಣರು
ಕುಲ್ಲ ಬಿಜ್ಜಳನ ಕೆಡೆಮೆಟ್ಟಿ ಉಳವಿಗೆ
ನಿಲ್ಲದೆ ಹೋದಾರೊ ನಿಜಶರಣ ॥ ೩೨ ॥

ಬಸವಾದಿ ಶರಣರು ದಾಸೋಹ ಮಾಡಿ
ಹಾಸ್ಯಾಪವಾದಕ್ಕೆ ಹೊರಗಾಗಿ ಲಿಂಗದೊಳು
ವಾಸವಾದಾರೊ ನಿಜಶರಣ ॥ ೩೩ ॥

ನಿರಾಶಿಕನಾದಾತಾ ಧೀರ ಘಟಿವಾಳಯ್ಯ
ಭಾರಿ ಗುಂಡು ಲಿಂಗಮಾಡಿ ಕೊರಳಲಿ ಧರಿಸಿ
ಅರಿವು ಪಡೆದಾನೊ ನಿಜಶರಣ ॥ ೩೪ ॥

ಹಿಂದೆ ಸುಖಿಯಾದಾತ ಸಿಂಧು ಬಲ್ಲಾಳರಾಯ
ಸಂದೇಹವಳಿದು ಸತಿಯಿತ್ತ ಶಿವನಿಗೆ
ಅಂದಳಿಯಿತು ಜನ್ಮ ನಿಜಶರಣ ॥ ೩೫ ॥

ಶಿವಲೋಕದಿಂದಿಳಿದು ಭವಲೋಕಕೆ ಬಂದು
ಶಿವಲೀಲೆಯನಾಡಿ ಅವಿರಳ ಲಿಂಗದೊಳು
ವಾಸವಾಗಿ ಹೋದಾರೊ ನಿಜಶರಣ ॥ ೩೬ ॥

ಚೆನ್ನಬಸವನ ಜಪವು ಭಿನ್ನಿಲ್ಲದಿದ್ದರೆ
ಚೆನ್ನಿಗನೆಂಬ ಚದುರ ವಿರಕ್ತರ
ಚೆನ್ನ ನಾನಯ್ಯ ನಿಜಶರಣ ॥ ೩೭ ॥

ಚಿಕ್ಕ ಚೆನ್ನಣ್ಣನ ಮಿಕ್ಕ ಪ್ರಸಾದವ
ನಿರಹಂಕಾರದಿ ಉಂಡು ಎಲ್ಲೆಡೆ ಮರ್ತ್ಯದಿ
ಮುಕ್ತ ನಾನಾದೆ ನಿಜಶರಣ ॥ ೩೮ ॥

ಇಲ್ಲಿಗೆ ಬಾರದೆ ಎಲ್ಲಿಗೆ ಹೋದಾರೊ
ಕಲ್ಯಾಣ ಬಿಟ್ಟು ಉಳವಿಯ ಮನೆಯಲಿ
ಅಲ್ಲೆ ಇದ್ದಾರೊ ನಿಜಶರಣ ॥ ೩೯ ॥

ಲಿಂಗದ ನೆಲೆ ತಿಳಿದು ಜಂಗಮದ ನಿಜವರಿತು
ಸಂಗನ ಶರಣರ ಸರಿಗೂಡಿದವರೆಲ್ಲ
ಲಿಂಗವೇ ಆದಾರೊ ನಿಜಶರಣ ॥ ೪೦ ॥

ಬಸವನ ಪ್ರಸಾದ ವಸುಧೆಯೆಲ್ಲ ತುಂಬ್ಯಾದ
ಆಶವುಳ್ಳನಕ ಅಳವಡದು ಅವರಿಗೆ
ಮೀಸಲಿರಬೇಕು ನಿಜಶರಣ ॥ ೪೧ ॥

ಭಕ್ತಿಗೆ ಬಸವಣ್ಣ ವಿರಕ್ತಿಗೆ ಪ್ರಭುದೇವ
ಮುಕ್ತಿಗೆ ಚೆನ್ನಬಸವಣ್ಣನ ಪ್ರಸಾದ
ಒಕ್ಕುದನುಂಡೆ ನಿಜಶರಣ ॥ ೪೨ ॥

ಬಾಳ್ವೆಯ ಮಾಡಿದ ಹೊಳೆ ಹಂಪಯ್ಯ
ಆಳಿನಾಳಿಗಿ ಕೀಳು ಕಿಂಕರನಾಗಿ
ಹೇಳಿದ ಹೆಸರ ನಿಜಶರಣ ॥ ೪೩ ॥

ಮಿಸಲು ತನುವಾದಾತ ಜೇಡರ ದಾಸಿಮಯ್ಯ
ದಾಸ್ಯರ ದಾಸ್ಯವನು ಅತಿಗಳೆದು ಲಿಂಗದೊಳು
ವಾಸವಾದಾನೊ ನಿಜಶರಣ ॥ ೪೪ ॥

ನಿತ್ಯ ಪವಾಡವು ಎತ್ತಣಿಂದಾದವು
ಸಂತಾನ ಪೂಜೆಫಲದಿಂದ ಪಡೆದಾರೊ
ಮುಂಚಿನ ಭಕ್ತರು ನಿಜಶರಣ ॥ ೪೫ ॥

ವಾಸವಾಗಿರ್ದವಗೆ ದಾಸನಾಗಿರ್ದೆನು
ದಾಸೋಹದೊಳಗೆ ಶೇಷವನುಂಡುಂಡು
ಮೀಸಲ ತನುವಾದೆ ನಿಜಶರಣ ॥ ೪೬ ॥

ಮಿಸಲ ತನುವಾದರೆ ಪಾಶವು ಹರಿವುದು
ದಾಸಿಮಯ್ಯನ ದೇವಾಂಗ ಧರಿಸಿಕೊಂಡು
ಲೇಸನಾಗಿರ್ದೆ ನಿಜಶರಣ ॥ ೪೭ ॥

ಜಾಗ್ರವ ಮನದಲ್ಲಿ ನಾಗಲಾಂಬಿಕೆ ತಾಯಿ
ಯೋಗವ ಮಾಡಿ ಪರ ಎಚ್ಚರಿಲ್ಲದೆ
ಸಾಗಿದಳು ಮೋಕ್ಷಕೆ ನಿಜಶರಣ ॥ ೪೮ ॥

ಸಂಗನಾ ಬಸವನ ಡಿಂಗರಿಗ ನಾನಯ್ಯ
ಮಂಗಳ ಮತಿಯಿಂದ ಪೇಳಿದೆ ಶರಣರ
ಸಂಗ್ರಹಿಸಿ ಕೇಳಿ ನಿಜಶರಣ ॥ ೪೯ ॥

ಹೋದ ಮಹಾತ್ಮರ ಹಾದಿಯ ಉಡು ಉಡುಗಿ
ಬೂದಿಯ ಬಳಿದು ಕಸ ಬಳಿದು ಕಡೆಗಿಕ್ಕಿ
ಹೋದದ್ದು ಸತ್ಯ ನಿಜಶರಣ ॥ ೫೦ ॥

ಲಿಂಗಾನುಭಾವಿಗಳು ಹಿಂಗದೆ ಸ್ತುತಿಮಾಡಿ
ಜಂಗಮದ ಭಜಿಸಿದವರ ಶೇಷಗಳನುಂಡು
ಸಂಗ ಸುಖಿಯಾದೆ ನಿಜಶರಣ ॥ ೫೧ ॥

ಆರು ಚಕ್ರದೊಳು ಮೂರು ಮಂಟಪದೊಳು
ನವದ್ವಾರವಾಟ ಒಳಹೊರಗ ಆ ಲಿಂಗ
ಬೋರಿಡುತಾನೆ ನಿಜಶರಣ ॥ ೫೨ ॥

ಇಷ್ಟಲಿಂಗದ ಪ್ರೇಮಿ ಮುಟ್ಟಿ ಹೇಳಲು ಭೀತಿ
ಶ್ರೇಷ್ಠರು ಹಿಂದುಳಿದು ಬಡವರು ಮುಂದಾಗಿ
ಹೊಂಟಾರು ಮೋಕ್ಷಕೆ ನಿಜಶರಣ ॥ ೫೩ ॥

ಅತ್ತಿತ್ತ ತಿರುಗ್ಯಾಡಿ ಹೊತ್ತು ಕಳಿಯಲಿ ಬ್ಯಾಡ
ಚಿತ್ತ ಲಿಂಗದಲಿ ನಿಟ್ಟಿಸಿದ ಮಹಿಮಂಗೆ
ಮತ್ಯಾಕೊ ಮೋಕ್ಷ ನಿಜಶರಣ ॥ ೫೪ ॥

ಹಾಂಗಾಡಿ ಹಿಂಗಾಡಿ ಹೋಗಾಡದಿರು ಹೊತ್ತು
ನಾಗಭೂಷಣನ ನೆರೆನಂಬಿ ಜನ್ಮವನು
ನೀಗೊ ಲಿಂಗದಲಿ ನಿಜಶರಣ ॥ ೫೫ ॥

ಅಖಂಡನಾದ ಮ್ಯಾಲ ಮುಕ್ಕಣ್ಣ ಬ್ಯಾರಿಲ್ಲ
ಏಕದೇವನ ಈ ಭಾಷೆ ಒಂದಾಗಿ
ಮುಕ್ತಿ ಪಡೆಯಿರೊ ನಿಜಶರಣ ॥ ೫೬ ॥

ಅರಿವು ಅಗ್ನಿಗೆ ಪ್ರಳಯ ಗುರುಹಿರಿಯರಿಗೆ
ಕರಸ್ಥಲದ ಮಹಾಲಿಂಗದೊಳಗೆ ಕೂಡಿ
ಬೆರೆವುದೇ ಪ್ರಳಯ ನಿಜಶರಣ ॥ ೫೭ ॥

ಬೇವು ತಿಂದರೆ ಬಾಯಿ ಸ್ವಾದದೋರುವುದೆ
ದೇವ ಭಕ್ತಂಗೆ ಮುಕ್ತಿ ಕೊಡದಿರ್ದೊಡೆ
ಸಾವು ಸಂಕಟವು ನಿಜಶರಣ ॥ ೫೮ ॥

ಆರು ಅಕ್ಷರದ ಕಳಿಯಾ ತೋರಿತೊ
ಕರದೊಳಗೆ ಮೇರೆಯ ಹಿಡಿದು ಮಂತ್ರವ ಪಠಿಸಿದರೆ
ಬ್ಯಾರಿಲ್ಲ ಮೋಕ್ಷ ನಿಜಶರಣ ॥ ೫೯ ॥

ಹಿರಿಯನ ಹಿಂದಾಗಿ ಕಿರಿಯನ ಮುಂದಾಗಿ
ಅರಿವು ಲಿಂಗದಲಿ ಆಚರಿಸದಾತಂಗೆ
ಮರಹಿಲ್ಲ ಮೋಕ್ಷ ನಿಜಶರಣ ॥ ೬೦ ॥

ಮೋಕ್ಷ ಬೇಕಾದರೆ ಕಾಂಕ್ಷೆಯಳಿಯಲಿಬೇಕು
ಏಕೋದೇವನ ಪಾದವ ನಂಬಿದರೆ
ಆ ಕ್ಷಣಕೆ ಮೋಕ್ಷ ನಿಜಶರಣ ॥ ೬೧ ॥

ಅಂಬಿನ ಗುರಿಹಾಗೆ ನಂಬಿರೊ ಲಿಂಗವ
ಶಂಭುಶಂಕರನ ಗದ್ದಿಗೆ ಮೇಲೆ
ಇಂಬುಗೊಂಡಿರೊ ನಿಜಶರಣ ॥ ೬೨ ॥

ದೇಹದ ಗುಣಗಳನೆಲ್ಲ ಕಾಯಿ ಪತ್ರಿಮಾಡಿ
ಓಂ ಎಂಬೊ ಗಿಣಿಲೋಳಡಿ ಮಾಡಿ ಲಿಂಗಕ್ಕೆ
ನೈವೇದ್ಯ ಹಿಡಿಯೊ ನಿಜಶರಣ ॥ ೬೩ ॥

ಪರದೇಶಿಯಾದ ಮ್ಯಾಲ ಇರಿಸಲೊಂದರೊಳು
ಚರಲಿಂಗವಾಗಿ ಚರಿಸಿದರೆ ತಮಂಧ
ಹರಿದು ಹೋಗುವುದೊ ನಿಜಶರಣ ॥ ೬೪ ॥

ದೇಸಿಕ ವಿರಕ್ತರೊಂದಾಸೆ ಹಿಡಿದರೆ ಕೇಡು
ಕಾಸಿನ ವಿಷಯ ಕೈ ಸೇರಲು ಲಿಂಗದ ಲೇಸು ತೊಲಗಿದ್ದಾಗ
ಏಸು ಪರಿ ಮಾಡುವ ನಿಜಶರಣ ॥ ೬೫ ॥

ಅಂಗದ ಗುಣಗಳನೆಲ್ಲ ಹೊಂಗ್ಯಾದಗಿ ಗರಿಮಾಡಿ
ಲಿಂಗಕ್ಕೇರಿಸಿ ನಿಷ್ಠೆಯ ಆರತಿ ಹಿಡಿದು
ಮಂಗಳಾರತಿಯೆತ್ತೊ ನಿಜಶರಣ ॥ ೬೬ ॥

ಅಂಗದ ಗುಣದೊಳು ಸಿಲ್ಕಿ ಭಂಗಪಡುತಿರಬ್ಯಾಡ
ಅಂಗಯ್ಯ ಲಿಂಗದ ಅನುವರಿತು ಪೂಜಿಸು
ಗಂಗಾಧರ ತಾನೆ ನಿಜಶರಣ ॥ ೬೭ ॥

ಹೊಳ್ಳಿತಂದಾ ಪುಣ್ಯವೆಲ್ಲಾ ಬಳ್ಳಿದೊತ್ತಿ ಹೋದಂತೆ
ಒಳಹೊಕ್ಕು ಲಿಂಗವನು ಒಲಿಸಿಕೊಂಡಾತಂಗೆ
ತೊಳಿವುದು ಪಾಪ ನಿಜಶರಣ ॥ ೬೮ ॥

ಮಳೆ ಬಂದು ರೊಜ್ಜೆಲ್ಲ ಹೊಳಿಕೂಡಿ ಹೋದಂತೆ
ಕಳೆಯ ಲಿಂಗದಲಿ ಕಲಕಿ ಹರಿದರೆ ಮನ
ತಿಳಿದು ನಿಲ್ಲುವುದು ನಿಜಶರಣ ॥ ೬೯ ॥

ತಿಳಿದು ನಿಂತಲ್ಲದೆ ಕಡಿ ಕಾಣಬಾರದು
ಬೆಳಗು ತೋರದು ಗುರುಲಿಂಗ ಜಂಗಮದ
ನಿಲವು ನಿಲುಕದು ನಿಜಶರಣ ॥ ೭೦ ॥

ಗಗನದೊಳಗೊಂದು ಭುಗಿಲು ವಾದ್ಯದ ಶಬ್ದ
ಮಿಗಿಲು ಸುನಾದ ಮಹಾಲಿಂಗದ ವಾಲಗವ
ಹಗಲಿರುಳು ಕೇಳೊ ನಿಜಶರಣ ॥ ೭೧ ॥

ಮಹಾಲಿಂಗದ ವಾಲಗವ್ವ ಆವಾಜ ಕೇಳಿದರ
ದೇವನೊಲವ ಸುಯಿಧಾನ ಸಂಭ್ರಮವ
ಭಾವದಲ್ಲಿಡೊ ನಿಜಶರಣ ॥ ೭೨ ॥

ಕರಡಿ ಕೌಂಸಾಳ ಘಂಟಿ ಭೇರಿಯ ಚಿನ್ಕಾಳಿ
ಭೇರಿಯ ಶಂಖ ಬಗೆ ಬಗೆಯ ವಾದ್ಯವು
ಭೋರಿಡುತಾನ ನಿಜಶರಣ ॥ ೭೩ ॥

ಭೋರಿಡುವ ಶಬ್ದವನು ಯಾರ್‍ಯಾರು ಕೇಳಿದರು
ಮಾರಾರಿ ಶರಣರು ಮಹಾಲಿಂಗದ ವಾಲಗವ
ಹಾರೈಸಿ ಕೇಳಿದರು ನಿಜಶರಣ ॥ ೭೪ ॥

ಲಿಂಗದ ನೆಲೆ ತಿಳಿದು ಜಂಗಮದ ಕಳೆ ಅರಿತು
ಸಂಗನ ಶರಣರು ಸಿರಿಗೂಡಿದವರೆಲ್ಲ
ಲಿಂಗವಾದರೊ ನಿಜಶರಣ ॥ ೭೫ ॥

ಜಪತಪಗಳ ಮಾಡಿ ತಾಪತ್ರಯಗೊಳಬೇಡ
ಇಷ್ಟಲಿಂಗದಲಿ ದೃಷ್ಟಿನಿಲಿಸಿದ ಮಹಿಮಂಗೆ
ಆಪತ್ತು ಇಲ್ಲ ನಿಜಶರಣ ॥ ೭೬ ॥

ಪತ್ರಿ ಪುಷ್ಪದ ಪೂಜೆ ವ್ಯರ್ಥ ಮಾಡುವ
ಮತ್ತೊಂದು ಪೂಜೆ ಕುರುಹುವಿಡಿದು ತಿಳಿಯದೆ
ಹೊತ್ತು ಸೇರಿದರು ನಿಜಶರಣ ॥ ೭೭ ॥

ಬರಿಗಾಲಲಿ ತಿರುಗುವನರೆ ನೋಟ ಬೇಟದಲಿ
ಬೆರೆದಂತೆ ಲಿಂಗದೊಳು ದೃಷ್ಟಿಯ ನೆಟ್ಟಿ
ಹೆರೆಹಿಂಗಲಿಲ್ಲ ನಿಜಶರಣ ॥ ೭೮ ॥

ಅಂಗವಳಿದ ಮೇಲೆ ಲಿಂಗವು ನಿಜವಣ್ಣ
ಕಂಗಳದುಂಬಿ ಕರದುಂಬಿ ನಲಿದಾಡಿದ
ವಂಗೆ ಅವನಿತ್ಯ ನಿಜಶರಣ ॥ ೭೯ ॥

ಮಂಗಳ ಮೂರ್ತಿಯ ಕಂಗಳ ಕಳೆಯಲಿ
ಸಂಗನ ಕೂಡಿ ಸಮರಸದಿಂದಲಿ
ಲಿಂಗದ ಬೆಳಗು ನಿಜಶರಣ ॥ ೮೦ ॥

ಇಷ್ಟಲಿಂಗದೊಳು ದೃಷ್ಟಿನೆಟ್ಟು ಬೆಳಗು
ನಟ್ಟು ನಲಿದಾಡಿ ನಚ್ಚುತ್ತ ಮನದಲಿ
ಇಟ್ಟಾಡು ಬೆಳಗು ನಿಜಶರಣ ॥ ೮೧ ॥

ಅಂಗಲಿಂಗವೆರಡು ಸಂಗವಾದುದು ಬೆಳಗು
ಜಂಗಮದ ಸುಳಿವು ಸೂತ್ರವ ಹಿಡಿದರೆ
ಲಿಂಗದ ಬೆಳಗು ನಿಜಶರಣ ॥ ೮೨ ॥

ವರ್ತನ ಓದಲಿಬಹುದು ಅರ್ಥ ಹೇಳಲಿಬಹುದು
ನಿತ್ಯದಲಿ ನಡೆದು ನಿಲಬಹುದು ಲಿಂಗದ
ಅರ್ಥವಪೂರ್ವ ನಿಜಶರಣ ॥ ೮೩ ॥

ಲಿಂಗದ ಸುಳುಹಿನೊಳು ಜಂಗಮ ಮುಳುಗೂದ ಕಂಡೆ
ಅಂಗ ಪರಿಚಾರ ಆಲ್ಪರಿವುದು ಕಂಡೆ
ಸಂಗಯ್ಯನಾಗೊ ನಿಜಶರಣ ॥ ೮೪ ॥

ಯೋಗಿಯಾದಾತನು ಹೇಗೆ ತಾ ಇರಬೇಕು
ಆಗಮನವ ತಿಳಿದು ಅರಿವು ಲಿಂಗಯೋಗ
ಆಗುಮಾಡುವುದು ನಿಜಶರಣ ॥ ೮೫ ॥

ಹೈನವಿಲ್ಲದ ದನವು ಐದಾರು ಕಟ್ಟೇನು
ಬಹಿರಂಗ ಅಂತರಂಗ ಒಂದಾಗುವ ಭಕ್ತಿಯು
ಕೈಯ ಮುರಿದಂತೆ ನಿಜಶರಣ ॥ ೮೬ ॥

ಅಂತರಂಗದ ಕೀಲ ಸಂತಿಷ್ಟು ನೋಡಿದರೆ
ಚಿತ್ತವನರಿದು ಚಿನ್ಮಯ ಲಿಂಗದೊಳು
ಸಂತೋಷವಾದ ನಿಜಶರಣ ॥ ೮೭ ॥

ವಸ್ತುವೆಂಬುದು ಬಯಲು ಹಸುರಲ್ಲ ಕೆಂಪಲ್ಲ
ಸಂಸಾರ ಸಿದ್ಧನಿಗೆ ಒಲ್ಲ ಒಳಹೊರಗೆ
ಪಸರಿಸುವುದು ನಿಜಶರಣ ॥ ೮೮ ॥

ಒಳಹೊರಗೆಂಬುವುದು ತಿಳಿಯದ ಮಾತು
ಒಳಗೆ ಓಂಕಾರ ಹೊರಗೆ ಝೇಂಕಾರ
ಒಳಹೊರಗೆ ತೆರಹಿಲ್ಲ ನಿಜಶರಣ ॥ ೮೯ ॥

ಒಳಹೊರಗೆಂಬುದು ತಿಳಿಯದವರ ಮಾತು
ಒಳಹೊರಗೆರಡು ತಿಳಿದು ಲಿಂಗದೊಳು
ಬೆರೆದು ಹೋದಾರೋ ನಿಜಶರಣ ॥ ೯೦ ॥

ಒಳಹೊರಗೆ ಒಂದಾಗಿ ಬೆಳಗಿನೊಳಗೆ ಕೂಡಿ
ಹೊಳೆವ ಜ್ಯೋತಿಯನು ಒಳಹೊಕ್ಕು ನೋಡಿದರೆ
ತಿಳಿವುದು ಬೆಳಗ ನಿಜಶರಣ ॥ ೯೧ ॥

ಪಾದೋದಕ ಪ್ರಸಾದ ಭೇದವರಿಯದೆ ಕೊಂಡರೆ
ರಾಡಿಯ ಮಳಿ ಬಿದ್ದು ಹನಿಹಳ್ಳವನು
ಕೂಡಿದಂಗಾಯ್ತು ನಿಜಶರಣ ॥ ೯೨ ॥

ನಂಬಿಗಿಲ್ಲ ಲಿಂಗದಲಿ ನಂಬಿಗಿಲ್ಲ ಜಂಗಮದಲಿ
ನಂಬಿಗಿಲ್ಲದೆ ತೀರ್ಥ ಪ್ರಸಾದವ ಕೊಂಡರೆ
ಅಂಬಿಲ ಕುಂಡದಂತೆ ನಿಜಶರಣ ॥ ೯೩ ॥

ಪ್ರಸಾದವನುಂಬುವಗೆ ಬಿಸರನುಡಿ ಬಲುಸಿಟ್ಟು
ವಾಸ ಪಂಥಗಳು ಕಿರಾತ ನಡೆ – ನುಡಿ
ಸೂಸ್ಯಾಡಬ್ಯಾಡ ನಿಜಶರಣ ॥ ೯೪ ॥

ಅಂಬಲಿ ಕೊಂಡಾರೆ ತುಂಬಲರಿಯದು ಹೊಟ್ಟೆ
ಅಂಬಲಿ ತೊಳೆದ್ಹಾಕೆ ಅಡುಗೆ ಮಾಡಿದರೆ
ಶಂಭುಗರ್ಪಿತ ನಿಜಶರಣ ॥ ೯೫ ॥

ಕೋಣ ಕುರಿ ತಿಂಬವಗ ಆಣೆ ಆಜ್ಞೆಗಳಿಲ್ಲ
ಕಾಣದೆ ಗುರು ಲಿಂಗ ಜಂಗಮ ಬಿಟ್ಟಾಡುವಂಗೆ
ಪ್ರಾಣಲಿಂಗಿಲ್ಲ ನಿಜಶರಣ ॥ ೯೬ ॥

ಪ್ರಾಣಲಿಂಗವಿಲ್ಲದೆ ಕಾಣದು ಹೃದಯವ
ಮಾಣದೆ ಮರ್ತ್ಯಲೋಕದ ಭೋಗ
ಉಣಬಾರದು ಜಾಣ ನಿಜಶರಣ ॥ ೯೭ ॥

ಅರಿವೆ ತಾ ಅಭಿಮಾನ ಮರೆಮಾಡಿ ಮುಚ್ಚುವುದು
ಹರವಾಕ್ಯ ತೆರೆಯ ತರುವರಿಗೆ ಬೋಧಿಸುವ
ಆರೈದಂತೆ ನಿಜಶರಣ ॥ ೯೮ ॥

ಆಚ್ಯಾರಿಲ್ಲದ ಗುರುವು ಆಚ್ಯಾರಿಲ್ಲದ ಶಿಷ್ಯ
ಆಚ್ಯಾರಿಲ್ಲದ ಆರಾದರಾಗಲಿ ಅವರು
ನೀಚನಿಂದಕರೊ ನಿಜಶರಣ ॥ ೯೯ ॥

ಆಚಾರಿಲ್ಲದ ಪಾಪಿ ಕೇಚರ ಕಂಡೆನಂದರೆ
ಶಿವಾಚಾರಿಲ್ಲದ ಅಷ್ಟಾವರ್ಣದ
ಪೂಜೆಯಿಲ್ಲೆಂದ ನಿಜಶರಣ ॥ ೧೦೦ ॥

ಆಚರಣೆ ಸಂಬಂಧ ಗೋಚರದ ಗುಮ್ಮಟ
ನೀಚರು ಯೇರಿ ಕೇಚರ ಕಂಡೆನಂದರೆ
ಭೂಚರ ಬಿಡುವುದೆ ನಿಜಶರಣ ॥ ೧೦೧ ॥

ಭೂಚರ ಬಿಡುವುದಕೆ ಆಚರಣೆ ನಡೆಸಲಿಬೇಕು
ಕೋತಿ ಗುಣಗಳು ಕುಸಿ ಬಡಿದುಕೊಂಡರೆ
ಭೂಚರ ಬಿಡುವದು ನಿಜಶರಣ ॥ ೧೦೨ ॥

ಭಾವವಿಲ್ಲದ ಭಕ್ತಿ ಸಾವನಕ ಮಾಡಿದರೆ
ಹಾವು ಹಿಡಿ ಹೋಗಿ ಗಾರುಡಿಗ ದಣಕೊಂಡು
ಧಾವತಿಪಟ್ಟಂತೆ ನಿಜಶರಣ ॥ ೧೦೩ ॥

ಧಾವತಿಪಟ್ಟರೆ ಹಾವು ಸಾಧ್ಯವಕ್ಕು
ಭಾವನೆಲೆಗೊಂಡು ಭಕ್ತಿಯ ಮಾಡಿದರೆ
ಸಾವು ತಪ್ಪುವುದು ನಿಜಶರಣ ॥ ೧೦೪ ॥

ಭಯವಿಲ್ಲದ ಭಕ್ತಿಗೆ ಅವಕಾಶ ಮಾಡೆನು
ಹ್ರಾಂ ಹ್ರಿಂ ಹ್ರೂಂ ಗಾರುಡಿಗ ಸೆಗಣಿ ಕೊಂಡು
ದೆವ್ವತಾ ಬಿಟ್ಟಂತೆ ನಿಜಶರಣ ॥ ೧೦೫ ॥

ಶಿವಯೋಗವೆಂಬೂದು ಪಾವನದ ಮಾರ್ಗವದು
ಅವಧಾನ ಹಿಡಿದು ಆಚರಿಸಿದಾತಂಗೆ
ಭವನಾಸ್ತಿ ಬಸವಾ ನಿಜಶರಣ ॥ ೧೦೬ ॥

ಜ್ಞಾನವುಳ್ಳ ಜಂಗಮಕೆ ಏನು ಬೇಡಲು ಕೊಟ್ಟು
ತಾನವರ ಪಾದ ಎರಡಿಲ್ಲದೆ ನಂಬಿದರೆ
ಏನೆಂಬೆ ಸುಖವಾ ನಿಜಶರಣ ॥ ೧೦೭ ॥

ಭಕ್ತಿಗೆ ಬಲವಂತಿಲ್ಲ ಮುಕ್ತಿಯು ಬರುವದಲ್ಲ
ಮುಕ್ತಿಗೆ ಪುರುಷರಿಗೆ ಎಣೆಯಿಲ್ಲ ಜಗದೊಳಗೆ
ಮುಕ್ತಿ ಒಬ್ಬರದಲ್ಲ ನಿಜಶರಣ ॥ ೧೦೮ ॥

ಶಕ್ತಿ ಬೇಕಾದ್ರೆ ಮುಕ್ತಿಯೆಲ್ಲವ ಬೇಕು
ಭಕ್ತರ ಕಂಡು ಭಯ-ಭಕ್ತಿ ನಡೆ-ನುಡಿ
ಸುಯಿಧಾನಿ ಮುಕ್ತಿ ನಿಜಶರಣ ॥ ೧೦೯ ॥

ಸತ್ತಿಗಿ ಹಿಡಿದವ ಹೊತ್ತಾದರೆ ಕೆಡೆವ
ತತ್ವವ ತಿಳಿದ ಶಿವಯೋಗಿ ಅವರವರ
ಚಿತ್ತದಂತೊಲಿವಾ ನಿಜಶರಣ ॥ ೧೧೦ ॥

ಕಾಯವೆ ಕೈಲಾಸ ಬಾಯಿ ಬಾಗಿಲವಯ್ಯ
ಜ್ಞಾನರವಿ ಶಶಿಯ ಒಳಗಿರುವ ಆತ್ಮನು
ಪ್ರಭುರಾಯ ತಾನೆ ನಿಜಶರಣ ॥ ೧೧೧ ॥

ಒಕ್ಕದು ಉಂಡುಂಡು ಅಕ್ಕರತಿಯೊಳಗಿರ್ದೆ
ಸೊಕ್ಕಿ ಸೊರಗದಿರ್ದೆ ದೇಹದ ಗುಣಗಳಿಗೆ
ಸಿಲ್ಕದೆಯಿರ್ದೆ ನಿಜಶರಣ ॥ ೧೧೨ ॥

ಶರಣನ ನಡೆ – ನುಡಿ ಪೂರ್ಣಚಂದ್ರಮನಂತೆ
ಮರೆದೆನೆಂದವಗೆ ಮಧ್ಯಾಹ್ನದ ಸೂರ್ಯನ
ಹಾರುವ ಕಿಡಿಯಂತೆ ನಿಜಶರಣ ॥ ೧೧೩ ॥

ಶರಣನ ನುಡಿ ಶ್ರೀಗಂಧದ ಪರಿಮಳ
ಹರುಷದಿಂದಲಿ ಭಕ್ತನ ನೋಡಿದರ
ಹರಿವುದು ಪಾಪ ನಿಜಶರಣ ॥ ೧೧೪ ॥

ಶರಣನ ಸಂತೋಷ ಇರುವುದು ಹೇಗಯ್ಯ
ಹರುಷದ ಹೊನಲು ಉಕ್ಕೇರಿ ಹೊರಚೆಲ್ಲಿ
ತೆರೆಯ ಹೊಡೆದಂತೆ ನಿಜಶರಣ ॥ ೧೧೫ ॥

ಶರಣನ ಮಾರ್ಗವ ಯಾರ್‍ಯಾರು ಬಲ್ಲರು
ನಾರಿ ನೀಲಮ್ಮ ಲಿಂಗದ ನೆನಹಿನೊಳು
ಪೂರೈಸಿದಳು ನಿಜಶರಣ ॥ ೧೧೬ ॥

ವಜ್ರ ಕೊರಿಯಲಿಬಹುದು ಹೆಜ್ಜೆ ಹಿಡಿಯಲಿಬಹುದು
ಸಜ್ಜಾಗಿ ವಪ್ಪುವಿಡಿಬಹುದು ಶಿವಶರಣರ
ಅಜ್ಜು ತಿಳಿಯದು ನಿಜಶರಣ ॥ ೧೧೭ ॥

ಲಿಂಗವ ನೆನೆದರೆ ಭಂಗವಿಲ್ಲಾತಂಗೆ
ಸಂಗನ ಶರಣರ ಪಾದಪದ್ಮಂಗಳಲಿ
ಭೃಂಗವಾಗಿರ್ದೆ ನಿಜಶರಣ ॥ ೧೧೮ ॥

ಭೃಂಗ ಹೂವಿನ ಗಂಧ ಹ್ಯಾಂಗೆ ಧರಿಸಿಕೊಂಬುದು
ಹಾಂಗೆ ಭಕ್ತನ ಭಕ್ತಿಯು ಜಂಗಮವು
ಸಂಗೈಸಿಕೊಂಡಾ ನಿಜಶರಣ ॥ ೧೧೯ ॥

ಸತ್ಯ ಶರಣನ ಚಿತ್ತ ಒತ್ತಿ ನೋಯಿಸಬ್ಯಾಡ
ಹತ್ತೆಂಟು ವರ್ಷ ಮಾಡಿದ ಶಿವಪೂಜೆ
ವ್ಯರ್ಥವಾಗುವುದೋ ನಿಜಶರಣ ॥ ೧೨೦ ॥

ಅಕ್ಷರದ ಅರಿವನು ಯಾರ್‍ಯಾರು ಬಲ್ಲರು
ಮೀರಿದ ಮನೆಯೊಳು ಸಿರಿಮರಳಿ ತಾನು
ಬಾರದೆ ಹೋದ ನಿಜಶರಣ ॥ ೧೨೧ ॥

ಯೋಗಿಯಾ ನಡೆ ಹಾಂಗೆ ತಾ ಬಾಗಿಯಿರಬೇಕು
ಆಸೆ ಮತವಳಿದು ಆರು ಲಿಂಗದೊಳು
ಭೋಗ ಮಾಡುವನೆ ನಿಜಶರಣ ॥ ೧೨೨ ॥

ಆಲಸ್ಯ ಶರಣರಿಗೆ ಕಾಲಕರ್ಮದ ಗಾಳಿ
ಸಲ್ಲದೆ ಶರಣಗೆಂದೆನೆಂಬ ಛಲವು
ಬಾಳುವುದಕ್ಕೆ ಕೇಡು ನಿಜಶರಣ ॥ ೧೨೩ ॥

ಸುಖವಾದ ಶರಣಂಗೆ ದುಃಖ ದಣಿವಿಲ್ಲ
ಕಕ್ಕುಲತೆಯಿಲ್ಲ ಕಾಮನ ಕಳವಳ
ಬೇಕೆಂಬುದಿಲ್ಲ ನಿಜಶರಣ ॥ ೧೨೪ ॥

ಚಿತ್ತದಿಂದೊಳಿದರೆ ಸತ್ಯ – ಮಿಥ್ಯೆಗಳಿಲ್ಲ
ಕತ್ತಲೆಯಿಲ್ಲ ಬೆಳಕಿಲ್ಲ ಶರಣ ತಾ
ನಿತ್ಯನಾದಾನೊ ನಿಜಶರಣ ॥ ೧೨೫ ॥

ವಸ್ತು ಕಂಡ ತಾನು ಮುಸ್ತೆದೆ ಮನದಲಿ
ಕುಸ್ತಿಯಾ ಕೆಮ್ಮು ಕಾಮನ ಸುಟ್ಟು
ಮುಸ್ತೆದೆ ಲಿಂಗ ನಿಜಶರಣ ॥ ೧೨೬ ॥

ಉಸ್ತಾದ ಮನುಷ್ಯನು ಕುಸ್ತಿಕಾಳಗ ರೂಪಗಳ
ವಸ್ತುವಾ ಕಂಡು ಶಿವಯೋಗಿ ಲಿಂಗದೊಳು
ಮುಸ್ತ್ಯೆದಿ ಮೋಕ್ಷ ನಿಜಶರಣ ॥ ೧೨೭ ॥

ಅಂಗದ ಸುಖದೊಳಗೆ ಲಿಂಗದ ಸುಖ ನಿಲ್ಲದು
ಲಿಂಗದಾ ಸುಖದೊಳಗೆ ಅಂಗಸುಖ ನಿಲ್ಲದು
ಸಂಗಯ್ಯನ ಸುಖದೊಳಗಿರ್ದ ನಿಜಶರಣ ॥ ೧೨೮ ॥

ಭವದೊಳಗೆ ಆಡುವರು ಶಿವನಾನೆಂಬುದ ಪಾಪ
ಶಿವಲಿಂಗ ಶೇಷ ಸವಿದುಂಡ ಶರಣರಿಗೆ
ಭವನಾಸ್ತಿ ಬಸವಾ ನಿಜಶರಣ ॥ ೧೨೯ ॥

ಬಡವರೆಂಬುವರೆಲ್ಲ ಮೃಢನ ಸಂತಾನರು
ಬಡ – ಸಿರಿತನವ ಮಾಡಿ ಕೆಡುವರಲ್ಲ
ನಡೆದರಾಮಪುರಕೆ ನಿಜಶರಣ ॥ ೧೩೦ ॥

ಬಡವರೆಂಬುವರೆಲ್ಲ ಮೃಢನ ಹೊಂದಿದವರು
ಬಡವಗೆ ಅನ್ನ ದೊರಕದಿದ್ದರೆ ಶಿವನ
ಬಿಡದೆ ನೆನೆವರು ನಿಜಶರಣ ॥ ೧೩೧ ॥

ಬಡವರ ಕಂಡರೆ ಕಡುನೋಯಿಸಿ ನುಡಿಬ್ಯಾಡ
ಬಡವ ತನ್ನೊಳಗೆ ನೊಂದರೆ ನಿನಗೊಂದು
ಪಿಡಗ ಬರುವದು ನಿಜಶರಣ ॥ ೧೩೨ ॥

ಪಿಡಗ ಎಂಬೂದು ತನ್ನ ನುಡಿಯಲ್ಲಿ ಇರುವದು
ಕಡೆಯಲ್ಲಿ ಇಲ್ಲ ಕೆಡಸು ಕಾಲಕ್ಕೆ ತನ್ನ
ಕೆಡಿಸದೆ ಬಿಡದು ನಿಜಶರಣ ॥ ೧೩೩ ॥

ಭಾಗ್ಯವು ಪ್ರಾಯವು ಹೋಗದೆಂದೆನಬ್ಯಾಡ
ನಾಗಭೂಷಣನ ಪಾದವ ಪಿಡಕೊಂಡು
ಸಾಗೋ ಲಿಂಗದಲಿ ನಿಜಶರಣ ॥ ೧೩೪ ॥

ಭಾಗ್ಯವುಳ್ಳವನೆಂದು ಲೋಗರ ಜರಿಯಬ್ಯಾಡ
ಭಾಗ್ಯವು ಹೋಗಿ ಬಡತನ ಬಂದರೆ ಆಗ
ಲೋಗರು ನಗುವರೊ ನಿಜಶರಣ ॥ ೧೩೫ ॥

ಕುಲ ಛಲಕೆ ಹಾರ್ಯಾಡಿ ನೆಲಗತ್ತಲನಾಗಲಿ ಬ್ಯಾಡ
ಕುಲಗೇಡಿ ಮಾದಾರ ಚೆನ್ನನಂಬಲಿಯನು
ಒಲಿದುಂಡ ಶಿವನು ನಿಜಶರಣ ॥ ೧೩೬ ॥

ಕುಲಜರು ಎಂಬುವರು ಮಲಹರನ ಮಕ್ಕಳು
ಶೀಲವ ಸಾಧಿಸಿ ಮಹಾಘನ ಲಿಂಗದೊಳು
ನಲಿದಾಡುತಿರ್ದರು ನಿಜಶರಣ ॥ ೧೩೭ ॥

ಅರಿಯದವರ ಕೂಡ ಬೆರೆದು ಮಾತಾಡಲು ಬ್ಯಾಡ
ಮರಿ ಮೋಸದಲಿ ಕೊಲಬ್ಯಾಡ ಒಬ್ಬರನು
ಜರಿದಾಡುಬ್ಯಾಡ ನಿಜಶರಣ ॥ ೧೩೮ ॥

ಕುಲಪದವಿ ಹೆಚ್ಚಲ್ಲ ಕುಲಗೋತ್ರ ಹೆಚ್ಚಲ್ಲ
ಹಲವು ಮಾತುಗಳನು ಕಲಿಕಲಿತು ಆಡುವರು
ನೆಲಗತವಾದಾರೊ ನಿಜಶರಣ ॥ ೧೩೯ ॥

ಹಿಂದಿನ ಗಣಂಗಳು ಮನಬಂದಂತೆ ಹೇಳಿದರು
ಅಂದಿನಾ ಮಾತು ಸ್ವಾದಾಗಿ ಹೇಳಿದರೆ
ನಿಂದೆ ಮಾಡಬ್ಯಾಡ ನಿಜಶರಣ ॥ ೧೪೦ ॥

ನಿಂದೆಯ ಮಾಡಿದರೆ ಕುಂದೇನು ನಮಗಿಲ್ಲಾ
ಅಂದವರು ಕೊಟ್ಟಾರು ಅನ್ನದವರು ನಮ್ಮ
ಬಂಧುಗಳೆಂಬೆ ನಿಜಶರಣ ॥ ೧೪೧ ॥

ಎಲ್ಲ ಪ್ರಾಣಿಗಳಲ್ಲಿ ಅಲ್ಲಯ್ಯನಿರುತಾನೆ
ಕೊಲ್ಲದಿರಣ್ಣ ಕೊಲ್ಲಿದರ ಅದು ನಿನಗೆ
ನಿಲ್ಲದು ಧರ್ಮ ನಿಜಶರಣ ॥ ೧೪೨ ॥

ಭಕ್ತರ ಬೋನವನುಂಡು ಚಕ್ಕಂದಾಡಲಿಬ್ಯಾಡ
ಭಕ್ತನು ದೇವರು ಇಬ್ಬರೂ ಒಂದಾಗಿ
ಮುಕ್ತಿಯ ಪಡೆದಾರೊ ನಿಜಶರಣ ॥ ೧೪೩ ॥

ದಾರಿ ತಪ್ಪಿದ ಮನುಜ ಸೇರ್‍ಯಾನು ಸಂಜೆ ಮನೆಗೆ
ಕಾರುಣ್ಯನಿಧಿಯ ಕರುಣ ತಪ್ಪಿದ ಬಳಿಕ
ಸೇರಿದ ಭವಕೆ ನಿಜಶರಣ ॥ ೧೪೪ ॥

ಅಂಗಲಿಂಗವೆರಡು ಸಂಗಾಗದಿರ್ದೊಡೆ
ಕಂಗಳನಕಯ್ಯ ಅಂಧಕ ಪಿಡಕೊಂಡು
ಡೊಂಗರ ಬಿದ್ದಂತೆ ನಿಜಶರಣ ॥ ೧೪೫ ॥

ಬಲ್ಲೆನೆಂದು ಬಿಗಿದು ಬಿಲ್ಲನಾಂಗಿರಬ್ಯಾಡ
ಕುಲ್ಲರ ಕೂಡ್ಯಾಡಿ ಕೆಡಬ್ಯಾಡ ಹೊತ್ತಿಲ್ಲ
ವಲ್ಲಭನ ಒಲಿಸೊ ನಿಜಶರಣ ॥ ೧೪೬ ॥

ವಲ್ಲಭನ ಒಲಿಸಿದರೆ ನಿಲ್ಲುವುದು ಜನ್ಮವು
ಸೊಲ್ಲಿನೊಳು ಶಿವನ ನೆನೆದರೆ ಕೈಲಾಸ
ಇಲ್ಲೆ ಇರುವುದು ನಿಜಶರಣ ॥ ೧೪೭ ॥

ಸತ್ತುಹೋದರೆ ನಿನಗೆ ಎತ್ತಣ ಮೋಕ್ಷವು
ಸತ್ತು ಹೋಗದಲೆ ಇದ್ದಾಗ ಮೋಕ್ಷದ
ಗೊತ್ತು ತಿಳಕೊಳ್ಳೊ ನಿಜಶರಣ ॥ ೧೪೮ ॥

ಗೊತ್ತು ತಿಳಿದಮ್ಯಾಲ ಸತ್ತರೆ ಚಿಂತಿಲ್ಲ
ಸಂತಿಗೆ ಹೋಗಿ ಕಬ್ಬು ಮೆಲಿದು ರಸವುಂಡು
ಹಿಪ್ಪಿ ಬಿಟ್ಟಂತೆ ನಿಜಶರಣ ॥ ೧೪೯ ॥

ಕಂಡವರ ಕಂಡು ನೀ ಉಂಡು ಒಣಗಲಿ ಬ್ಯಾಡ
ದಂಡನಾಥನ ಮಂದಿರದೊಳು ಪೊಕ್ಕು ತಾ ಅ
ಖಂಡನಾಗಿರ್ದ ನಿಜಶರಣ ॥ ೧೫೦ ॥

ಆದ್ಯರ ಮರಿಬ್ಯಾಡ ಸಾಧುರ ಜರಿಬ್ಯಾಡ
ಬೋಧಿಸಿದ ಗುರುವಿನ ಬಿಡಬ್ಯಾಡ ಕೆಟ್ಟವರ
ಹಾದಿ ಹಿಡಿಬ್ಯಾಡ ನಿಜಶರಣ ॥ ೧೫೧ ॥

ಕೆಟ್ಟವರ ಹೊಟ್ಯಾಗ ಜೆಟ್ಟಿಂಗನಿರುತಾನೆ
ಸಿಟ್ಟು ಬಂದಾಗ ಅಭಿಮಾನ ಕೊಂಬುವನು
ಬಿಟ್ಟು ಹೋಗುವನು ನಿಜಶರಣ ॥ ೧೫೨ ॥

ಎಣ್ಣಿನಾತಕೆ ನಾಯಿ ಮಣ್ಣು ತಾ ತಿಂಬಂತೆ
ಹೆಣ್ಣಿನಾ ಸಂಗ ನೆಚ್ಚಿದಾತಂಗೆ ಇನ್ನೆಲ್ಲಿ ಆಚಾರ
ಮಣ್ಣು ಕಾಣೊ ನಿಜಶರಣ ॥ ೧೫೩ ॥

ಪರನಾರಿಯರ ಸಂಗ ಉರಿಯ ಕೆಂಡದ ಹಾಗೆ
ಉರಿಯ ಕಾಸಿದರೆ ಸುಖವಾಗಿ ಆಮೇಲೆ
ಉರಿಯ ಹೊಕ್ಕಂತೆ ನಿಜಶರಣ ॥ ೧೫೪ ॥

ಬಿಡುಗಡೆಯುಳ್ಳಾತಂಗೆ ಅಡವಿ – ಅರಣ್ಯ ಒಂದೆ
ಸಡಗರ ಸಂಪತ್ತು ಒಂದೆ ಸಂಸಾರದಾ
ಒಡಲೊಳಗಿರಲೊಂದೆ ನಿಜಶರಣ ॥ ೧೫೫ ॥

ಆಸರ ಹಿಡಿದ ಮ್ಯಾಲ ದಾಸೋಹ ಮಾಡಲಿ ಬೇಕು
ಬಿಸರ ನುಡಿಗಳನು ಬಿಡಬೇಕು ಬಂದವರ
ಆಸರ ಹಿಡಿಬೇಕು ನಿಜಶರಣ ॥ ೧೫೬ ॥

ಖುಲ್ಲ ಗುಣವು ಹೇಸಿಗೆ ಸಲ್ಲದು ಮನುಜಗೆ
ಬೆಲ್ಲ ಬೇವನು ಬೆರೆಸಿ ಮೆದ್ದಾತಂಗೆ
ಅಲ್ಲೇನು ರುಚಿಯೊ ನಿಜಶರಣ ॥ ೧೫೭ ॥

ಕಲ್ಲಿನಲಿ ಮಿದುವಿಲ್ಲ ಬಿಲ್ಲಿನಲಿ ಸುರವಿಲ್ಲ
ಹೊಲ್ಲ ಗೋವಿನಲಿ ಹವಿಯಿಲ್ಲ ಯೋಗಿಗೆ
ಖುಲ್ಲ ಗುಣವಿಲ್ಲ ನಿಜಶರಣ ॥ ೧೫೮ ॥

ಅಂದ ಚೆಂದವಮಾಡಿ ಮುಂದುವರಿಯಬೇಡಣ್ಣ
ಮಂದ್ಯಾಗ ನೀ ನಡೆವಲ್ಲಿ ನಡೆದರೆ
ಮುಂದೆ ಹೋಗುವನು ನಿಜಶರಣ ॥ ೧೫೯ ॥

ಗದ್ದಿಯ ಹೊಲದಾಗ ಹದ್ದು ಹಾರುವುದು ಕಂಡೆ
ಹದ್ದು ಬಡಿ ಬಡಿದು ಹಾವು ಹೊಟ್ಟಡಿಯಾಗಿ
ಬಿದ್ದುದು ಕಂಡೆ ನಿಜಶರಣ ॥ ೧೬೦ ॥

ನಚ್ಚು ಮಚ್ಚಿನ ಭಕ್ತಿ ಇಚ್ಚೈ ವಿರಕ್ತನು
ಹುಚ್ಚರು ಇಬ್ಬರೊಂದಾಗಿದ್ದ ಮರ್ತ್ಯವಾತಂಗೆ
ಬಿಡಲಿಲ್ಲ ನಿಜಶರಣ ॥ ೧೬೧ ॥

ಹಿಂದೆ ಮಾಡಿದ ಪುಣ್ಯ ಮುಂದೆ ಬರುವುದಣ್ಣ
ಮಂದಿಯ ಹಾಗೆ ಬಡವಳ್ಳಿ ನಡೆದರೆ
ಮುಂದೆ ಭವಬಕ್ಕು ನಿಜಶರಣ ॥ ೧೬೨ ॥

ಹಿಂದಿನ ಜನ್ಮದಲಿ ನೊಂದಿರಿ ಬೆಂದಿರಿಯಣ್ಣ
ಮಂದಿಯ ಹಾಗೆ ನಡೆವಲ್ಲಿ ನಡೆದರೆ
ಹಿಂದಕೆ ಪ್ರಾಣ ನಿಜಶರಣ ॥ ೧೬೩ ॥

ಮೋಕ್ಷ ಕೊಡದಿದ್ದರೆ ಯಾಕೆ ಇದ್ದಿರಿ ನೀವು
ಲೋಕದ ಭಕ್ತಿ ಕೈಕೊಂಡು ಉಂಡುಂಡು
ತೇಕ್ಯಾಡುಬ್ಯಾಡ ನಿಜಶರಣ ॥ ೧೬೪ ॥

ಭಕ್ತನ ಮನೆಗೆ ದೇವ ಭಿಕ್ಷಕೆ ಬಂದರೆ
ಅಹಂಕಾರದಿಂದೆದ್ದು ಹರ್ಷದಲಿ ಶರಣೆಂದು
ಉಣಲಿಕ್ಕಬ್ಯಾಡ ನಿಜಶರಣ ॥ ೧೬೫ ॥

ಪತ್ರಿಪುಷ್ಪದ ಪೂಜೆ ವ್ಯರ್ಥಮಾಡಲಿ ಬ್ಯಾಡ
ಮತ್ತೊಂದು ಪೂಜೆ ಕುರುಹುವಿಡಿದು ತಿಳಿಯದೆ
ಹೊತ್ತು ಸೇರಿದರೊ ನಿಜಶರಣ ॥ ೧೬೬ ॥

ಕೈಲಾಸ ಎಂದೆಂದು ಬಯಸಿ ದಣಿಯಲುಬ್ಯಾಡ
ಕೈ ಬಾಯಿ ಕಚ್ಚಿ ಕಟ್ಟಿದ ಮಹಾತ್ಮಗೆ ಸ್ವಯಲಿಂಗ
ತಾನೆ ನಿಜಶರಣ ॥ ೧೬೭ ॥

ಕಾಯವೆ ಕೈಲಾಸ ಬಾಯಿ ಬಾಗಿಲವಯ್ಯ
ಜ್ಞಾನ ರವಿ ಶಶಿಯ ಒಳಗಿರುವ ಆತ್ಮನು
ಪ್ರಭುರಾಯ ತಾನೆ ನಿಜಶರಣ ॥ ೧೬೮ ॥

ಶಂಕರನೊ ಕಿಂಕರನೊ ಕಿಂಕರನೊ ಶಂಕರನೊ
ಭಯಂಕರದಿಂದೆ ಬಾಳ್ವೆಯ ಮಾಡುವರ
ಲೆಂಕ ನಾನಯ್ಯ ನಿಜಶರಣ ॥ ೧೬೯ ॥

ಕಿಂಕರತನ ಬಂದಲ್ಲಿ ಶಂಕರನಲ್ಲಿ ಕೂಡುವನು
ಅಹಂಕಾರಿಗಳಿಗೆ ಅಳವಡದೊ ಆ ವಸ್ತು
ಕಿಂಕರಗೆ ಸಾಧ್ಯ ನಿಜಶರಣ ॥ ೧೭೦ ॥

ಒಕ್ಕದನುಂಡುಂಡು ಆಶಾರತಿಯೊಳಗಿರ್ದೆ
ಸೊಕ್ಕಿ ಸೊರಗಿ ದೇಹದಾ ಗುಣಗಳಿಗೆ
ಸಿಕ್ಕದೆಯಿರ್ದೆ ನಿಜಶರಣ ॥ ೧೭೧ ॥

ಸಾಲೆಂಬ ಶೂಲದ ಮೇಲೇರಿ ನಿಂತರೆ
ಕೇಳು ಮಾನವನೆ ಚಚ್ಚದೆ ಮೆಚ್ಚದೆ
ಶೀಲವಂತನಾದೆ ನಿಜಶರಣ ॥ ೧೭೨ ॥

ನಂಬಿಗೆಯೆಂಬುದು ಶಂಬುವಿನರಮನೆಯೆ
ಹೊಂಬ ಹೊಸಕರು ಯಾರಾದರಾಗಲಿ
ಉಂಬುವರ ಫಲಪದವ ನಿಜಶರಣ ॥ ೧೭೩ ॥

ವಸ್ತು ತಿಳಿಯಬೇಕೆಂದು ಅಸನವ್ಯಸನವಳಿದು
ಬೇಸಿಗೆ ಬಿಸಿಲು ಮಳೆಗಾಲವು ಛಳಿಗಾಲ
ಮೋಸ ಹೋದಾರೊ ನಿಜಶರಣ ॥ ೧೭೪ ॥

ದಿನಗಳೆದು ಹೋದವರು ಅನಂತ ಕೋಟಿಗಳುಂಟು
ತನು ಮನ ಲಿಂಗದಲಿ ಒಂದಾಗಿಸದ ಯಶಕೆ
ಏನು ಬೆಲೆಯೊ ನಿಜಶರಣ ॥ ೧೭೫ ॥

ದಿನಗಳಿದು ಹೋದರೆ ಸನುಮತವಿಲ್ಲ ಶರಣರಿಗೆ
ತನು ಮನ ಲಿಂಗ ಒಂದಾಗುವ ಯಶವು ದಿನ
ದಿನಕೆ ಕೇಡು ನಿಜಶರಣ ॥ ೧೭೬ ॥

ಯೋಗವೆಂಬುದು ಶಿವನ ಆಗಮದಲಿ ತಿಳಿದು
ಮೂಗನ ಹಾಗೆ ಮನದಲಿ ಮತಿಯಿಟ್ಟು
ಜಾಗ್ರವ ಮಾಡೊ ನಿಜಶರಣ ॥ ೧೭೭ ॥

ಶಿವಯೋಗವಿಲ್ಲದೆ ಭವಯೋಗ ಯಾತಕ್ಕೆ
ಶಿವಜ್ಞಾನವಿಲ್ಲದ ಭವಭಾರಿಗಳಿಗೆ
ಶಿವಸಮಾಧಿಯೇಕೆ ನಿಜಶರಣ ॥ ೧೭೮ ॥

ಬೆಳಗು ಕಂಡೆನೆಂದು ಮಳೆಗಾಲ ಚಳಿಗಾಲ
ಹೊಳೆಯ ಒತ್ತಿನಲಿ ತಪಮಾಡಿ ಋಷಿಗಳು
ಬೆಳಗುಕೊಂಡರು ನಿಜಶರಣ ॥ ೧೭೯ ॥

ಬೇಡಿದ ಪದವಿಯ ಕೊಡುವ ಶಿವನೆಂಬುವರು
ಮಾಡಿದ ಕೃತ್ಯ ಹೆಚ್ಚು ಭವದೊಳಗೆ
ಆಡುಹೋಗೆಂದ ನಿಜಶರಣ ॥ ೧೮೦ ॥

ಭವದೊಳಗೆ ಆಡುವರು ಭವಪ್ರಾಣಿಗಳಲ್ಲದೆ
ಶಿವಲಿಂಗವಾ ಧರಿಸಿ ಭವಕೆ ಈಡಾಡಿದರೆ
ಶಿವ ತಾನೆ ಬಲ್ಲ ನಿಜಶರಣ ॥ ೧೮೧ ॥

ಮಳಿ ಬಂದರೆ ಬೀಜೆಲ್ಲ ಬೆಳೆಯದೆ ನಿಲ್ಲುವುದೆ
ಇಳಿಯೋಳಿಂತಪ್ಪ ಬಡಜೀವಿಗಳೆಲ್ಲ ಭವದೊಳಗೆ
ತೆಳಲುವರೂ ನಿಜಶರಣ ॥ ೧೮೨ ॥

ಕಳ್ಳ ಸುಳ್ಳರ ಕೂಡ ಹಿಲ್ಲಗಾರರ ಕೂಡ
ಹೊಲ್ಲದವರ ಕೂಡ ಹೋರಾಟ ಹುಡುಗಾಟ
ಕಲಿಯಬ್ಯಾಡೆಂದ ನಿಜಶರಣ ॥ ೧೮೩ ॥

ಕಲಕ ನೀರಗೊಜ್ಜಿ ಹೊಲ ಕಲಕಾಯಿತಣ್ಣ
ಅಲ್ಲದವರಿಗಂಜಿ ಬಿಲ್ಲು ಬಡವಾದೆನು
ತೊಳಗಿದೆನು ಲಿಂಗದಲಿ ನಿಜಶರಣ ॥ ೧೮೪ ॥

ಚಾಡಮೂಢರ ಕೂಡ ಹೇಡಿ ಹೆಬಗರ ಕೂಡ
ನಾಡ ಮಾತನೆ ಕಲಿತಾಡುವರ ಕೂಡ ಮಾತ
ನಾಡಬ್ಯಾಡೊ ನಿಜಶರಣ ॥ ೧೮೫ ॥

ಕೊಳ್ಳಿ ಕುಮ್ಮರ ಕೂಡ ಸುಳ್ಳು ಬ್ಯಾಡರಕೂಡ
ಹೊಳ್ಯಾಡಿ ಒಡಲ ಹೊರೆವ ಹುಚ್ಚರ ಕೂಡ
ಗೆಳಿತಾನ ಬ್ಯಾಡೊ ನಿಜಶರಣ ॥ ೧೮೬ ॥

ಊರು ಕೇರಿಯ ಬಿಟ್ಟು ಮೂರು ಮಲಗಳ ಜರಿದು
ಅರಣ್ಯದೊಳಗ ಇದ್ದೇನು ಮನಸಿನ
ತಾರಕ ಕೆಡದನಕ ನಿಜಶರಣ ॥ ೧೮೭ ॥

ಹಿಂದಿನವರ ಶಾಸ್ತ್ರವು ಮುಂದೆ ಹೇಳುವರೆಲ್ಲ
ಸಂದೇಹವಳಿದು ಬಂದುದು ಕೈಕೊಂಡರೆ
ತಂದೆ ಪ್ರಭು ತಾನೆ ನಿಜಶರಣ ॥ ೧೮೮ ॥

ಆಧಾರ ವಚನಾರ್ಥ ಓದಿ ಹೇಳುವರೆಲ್ಲ
ಉಪಾಧಿಯ ಬಿಟ್ಟು ಭಿಕ್ಷವುಂಡುಟಾದರೆ
ಮಹಾದೇವ ತಾನೆ ನಿಜಶರಣ ॥ ೧೮೯ ॥

ವೇದಶಾಸ್ತ್ರ ತರ್ಕಸ್ವಾದ ಸಂಗೀತ ರಾಗ
ಓದೋದಿ ಬಳಲಿ ದಣಿಯಲೇಕೆ ಮಾತಿನ
ಗಾದಿ ಬಿಡದನಕ ನಿಜಶರಣ ॥ ೧೯೦ ॥

ಹದು – ಚದುರಳಿದವರ ಕದನ ಕಾಳಗಿಲ್ಲದವರ
ಬದಲು ಗೋಜಿಲ್ಲದೆ ಬಾಳುವೆ ಮಾಡುವರ
ಸದನ ಕಾಯ್ದಿರುವೆ ನಿಜಶರಣ ॥ ೧೯೧ ॥

ಸರ್ವಜ್ಞನೆಂಬಾತಾ ಸರ್ವರೊಳಗಿರುತಾನೆ
ಅರಿಯದವರಿಗೆ ಆ ಗುಣಿತ ತಿಳಿಯದೊ
ಅರಿಯೊ ಲಿಂಗವನು ನಿಜಶರಣ ॥ ೧೯೨ ॥

ಮನಹೀನ ಶಿಷ್ಯಂಗೆ ಘನದೀಕ್ಷೆ ಮಾಡೆನು
ಅನುವಿಲ್ಲದ ಹೊಲನ ಬಿತ್ತಿ ಬೆಳೆಯ ಬೆಳೆಯಲು ಹೋಗಿ
ಒಣಗಿ ಹೋದಂತೆ ನಿಜಶರಣ ॥ ೧೯೩ ॥

ಲೋಲ ಜಂಗಮ ಲಿಂಗವ ಬಾಲಬಸವಿಗೆಯಿತ್ತು
ವ್ಯಾಳಕ್ಕೆ ಯಡಿಯ ಹಳುಹಲು ಸುಳಿಸುಳಿದು
ವೋಲ್ಯಾಡುತಿಹರು ನಿಜಶರಣ ॥ ೧೯೪ ॥

ಸತ್ಯಸಾಗರದೊಳು ಎಚ್ಚತ್ತು ಈಶಾಡುವರು
ತಥ್ಯ – ಮಿಥ್ಯೆಗಳ ತೊಳೆದು ತಾವಗಲಿದ ಗೊತ್ತು
ಸೇರಿದರು ನಿಜಶರಣ ॥ ೧೯೫ ॥

ಪರೋಪಕಾರೆಂಬ ಧರ್ಮಸಾಗರದೊಳು
ದಾರಿಯ ತಪ್ಪಿ ಈಶಾಡುತಿದ್ದವರು ಕರ್ಮವ
ತೊಳೆದಾರು ನಿಜಶರಣ ॥ ೧೯೬ ॥

ಮಕ್ಕಳ ಮ್ಯಾಲಿನ ಮೋಹ ವಿರಕ್ತದ ಮ್ಯಾಲಿದ್ದರ
ವಕ್ಕಲು ಸಹಿತಾಗಿ ಪಥವಿಡಿದು ಹೋದಾರು
ಮುಕ್ತಿಯಪುರಕೆ ನಿಜಶರಣ ॥ ೧೯೭ ॥

ತನ್ನ ಸುಖ ದುಃಖದಂತೆ ಅನ್ಯರ ನೋಡಿದರೆ
ಹನ್ನೆರಡು ಸಾವಿರ ಜಪತಪವು ಯಾತಕೆ
ಪೊನ್ನಂಗಧರ ತಾನೆ ನಿಜಶರಣ ॥ ೧೯೮ ॥

ದಾನ ಧರ್ಮಗಳನು ಮಾಡಿದ ಫಲವೇನು
ದಾನವ ಕೊಟ್ಟು ದುರ್ವಾಕ್ಯ ನುಡಿದರೆ
ಹಾನಿಯಾಗುವುದೊ ನಿಜಶರಣ ॥ ೧೯೯ ॥

ತುಪ್ಪದ ಕಂಪಿಗೆ ಇರುವೆ ತಪ್ಪದೆ ಬಿದ್ದಂತೆ
ಮುಪ್ಪುರಯ್ಯನ ಮನವಿಟ್ಟು ಪೂಜಿಸು
ತಪ್ಪದು ಕೈವಲ್ಯ ನಿಜಶರಣ ॥ ೨೦೦ ॥

ಕೈಲಾಸವೆಂಬುದು ಕೈಯೊಳಗೆ ಇರುತಾದ
ಬಾಯಿಯಲಿ ಹಾಡಿ ನಯನದಲಿ ನೋಡಿದರ
ಸುಯಿಧಾನಿಗೆ ಕೈಲಾಸವಕ್ಕು ನಿಜಶರಣ ॥ ೨೦೧ ॥

ಇಲ್ಲದ ಸಾಧನೆ ಜಗದೊಳಗೆಲ್ಲರು ಮಾಡುವರು
ವಲ್ಲಭನ ಒಲಿಸಿಕೊಳ್ಳುವ ಸಾಧಕ ನೂರರಲಿ
ಇಲ್ಲ ಒಬ್ಬ ನಿಜಶರಣ ॥ ೨೦೨ ॥

ಶಿವಲೋಕದಿಂದಿಳಿದು ನರಲೋಕಕೆ ಬಂದು
ಕಾಮಲೀಲೆಯನಾಡಿ ಸವಿದುಂಡು ಲೋಕದೊಳು
ನವೆದು ಹೋಗುವರು ನಿಜಶರಣ ॥ ೨೦೩ ॥

ಆದವರ ಮರಿಬ್ಯಾಡ ಸಾಧೂರ ಜರಿಬ್ಯಾಡ
ಬೋಧಿಸಿದ ಗುರುವಿನ ಮರಿಬ್ಯಾಡ ನೀಚರ
ಹಾದಿಗಿ ಹೋಗಬ್ಯಾಡ ನಿಜಶರಣ ॥ ೨೦೪ ॥

ಭವದೊಳಗೆ ಆಡುವರು ಶಿವನ ನಂಬದ ಪಾಪಿಗಳು
ಶಿವಲಿಂಗ ಶೇಷ ಸವಿದುಂಡಿದ್ದರಿಗೆ ಭವನಾಸ್ತಿಯೊ
ಶಿವಬಸವಾ ನಿಜಶರಣ ॥ ೨೦೫ ॥

ಬಕ್ಕಪ್ಪನ ತ್ರಿವಿಧಿಯ ಅಕ್ಕರದಿ ಓದಿದರೆ
ಬೇಕಷ್ಟು ಸುಜ್ಞಾನ ಬರುವದು ಶಿವನಾಣೆ
ಜಕ್ಕನೆ ಜರಿಬ್ಯಾಡ ನಿಜಶರಣ ॥ ೨೦೬ ॥

ಜಕ್ಕನೆ ಜರಿದರೆ ಮುಕ್ಕಣ್ಣನ ಬೈದಂತೆ
ಯಾಕೆ ಓದುವಿರಿ ಒಲ್ಲದಿದ್ದರೆ ನೀವು
ಸಾಕು ಮಾಡಿರೊ ನಿಜಶರಣ ॥ ೨೦೭ ॥

ಛಂದಸ್ಸು ನಿಘಂಟು ಒಂದೂ ನಾನರಿಯೇನು
ಚಂದ್ರಸೇಖರನು ಕರದಲ್ಲಿ ನಿಂತು ಪೇಳಿದಂತೆ
ನುಡಿದೆನು ನಿಜಶರಣ ॥ ೨೦೮ ॥

ಆದಿಪ್ರಾಸ – ನುಡಿ ಶಬ್ದ ಗೊಡವಿಯೆಮಗಿಲ್ಲವೊ
ಮೃಢರೂಪ ಬಸವ ನುಡಿಸಿದ ವೋಲ್ವೇಳಿದೆ
ಮೃಢ ಶರಣರಿಗೆ ನಿಜಶರಣ ॥ ೨೦೯ ॥

ರಾಮಪುರದ ಬಕ್ಕಪ್ಪನ ತ್ರಿವಿಧಿಯ ಬಿಡದೆ
ಪ್ರೇಮದಿಂದೋದಿದವರಿಗೆ ಕಡೆಯಲ್ಲಿ ಕೈಲಾಸ
ಸೋಮಧರನೊಲುಮೆ ನಿಜಶರಣ ॥ ೨೧೦ ॥

***

ವಚನ

ಎಲ್ಲ ಗಣಂಗಳು ಮೇಲಾಗಿ
ರಾಮಪುರದ ಬಕ್ಕ ಕಿರಿದಾಗಿ
ನಿಜಶರಣರ ತ್ರಿವಿಧಿಯ
ನಿರೂಪಿಸಿದನು
ಲಿಂಗೈಕ್ಯರು ಲಿಂಗಾನುಭಾವಿಗಳು
ಪರಶಿವನೊಳು ಬೆರೆದ ಹುತಾತ್ಮರು
ನಿಮ್ಮ ಕಿಂಕರ ಕಿಂಕರನೆಂದು
ಒಲುಮೆಯ ಚಿತ್ತದೊಳು
ಲಾಲಿಸಿ ಪಾಲಿಸಿ ಬೇಧಿಸಿ ವೇಧಿಸಿ
ಸಾಧಿಸಿ ಸುಖವಾಗಿ
ನಿಮ್ಮ ಧರ್ಮ ಕೊರತೆ ಎನಗಿಲ್ಲ
ಬಕ್ಕಯ್ಯ ಬಸವ ಪ್ರಭುವೆ
ನಿತ್ಯ ನಿರಂಜನ

ಕವಿ – ಶ್ರೀ ರಾಮಪುರದ ಬಕ್ಕಪ್ಪ
– ಕೃತಿ: ರಾಮಪುರ ಬಕ್ಕಪ್ಪಯ್ಯನ ಸ್ವರವಚನ – ತ್ರಿವಿಧಿ

***

ಅನುಬಂಧ-೧

ವಕ್ತಾರರ ಸೂಚಿ

೧. ಅಂಬಾಜಿ
ವಿಳಾಸ : ಬ್ರಹ್ಮಪುರ, ಕಲಬುರ್ಗಿ
ಸಂಗ್ರಹ : ೧೯೭೫

೨. ಅಣ್ಣಾರಾವ ಮುಡಬಿ
ವ. ೬೨, ಜಾ. ಕುರುಬ, ಶಿ. ೭ನೇ, ಉ. ಹಾಡುಗಾರರು
ವಿಳಾಸ : ಮುಡಬಿ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೬-೪-೨೦೧೧

೩. ಅಣ್ಣೆಪ್ಪಾ ಪಿರತಪ್ಪಾ ಬೇಲೂರೆ
ವ. ೭೨, ಜಾ. ಲಿಂಗಾಯತ, ಶಿ. ೬ನೇ, ಉ. ಕೃಷಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೩-೪-೨೦೧೧

೪. ಅನ್ನಪೂರ್ಣ ಪಂಚಪ್ಪ ದೇವಣಿ
ವ. ೬೪, ಜಾ. ಲಿಂಗಾಯತ, ಶಿ. ೩ನೇ, ಉ. ಗೃಹಣಿ
ವಿಳಾಸ : ಮಾಶಾಳ, ತಾ. ಅಫಜಲಪೂರ, ಜಿ. ಗುಲಬರ್ಗಾ
ಸಂಗ್ರಹ : ಡಾ। ಜಯಶ್ರೀ ದಂಡೆ, ೨೦೧೦

೫. ಅನ್ನಪೂರ್ಣ ಬಸಯ್ಯ ಮಠಪತಿ
ಜಾ. ಲಿಂಗಾಯತ, ಉ. ಮನೆಗೆಲಸ
ವಿಳಾಸ : ಜಾಲವಾಡ, ತಾ. ಸಿಂದಗಿ, ಜಿ. ವಿಜಾಪುರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೦೧೧

೭ ಇಂದ್ರಾಬಾಯಿ ಬಾಬುಗೌಡ ಬಿರಾದಾರ
ವ. ೪೨, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ದೇವರ ಹಿಪ್ಪರಗಿ, ೧೫–೪–೨೦೧೧

೭ ಇಠಾಬಾಯಿ ಭೀಮಣ್ಣ ಹುಚ್ಚೇನೂರ
ವ. ೪೫, ಜಾ. ಮಾದಿಗ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಧುಮ್ಮನಸೂರ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೦–೨–೨೦೧೧

೮. ಇವಣಗಿ ಕೆ. ಎಸ್.
ವಿಳಾಸ : ಸುರಗಿಹಳ್ಳಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೫–೫–೨೦೧೧

೯. ಈರಮ್ಮ ಅಕ್ಕಸಾಲಿಗ
ಜಾ. ಅಕ್ಕಸಾಲಿಗ, ಉ. ಮನೆಗೆಲಸ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬–೪–೨೦೧೧

೧೦. ಈರಮ್ಮ ಧೂಳೆ
ವ. ೪೦, ಜಾ. ಲಿಂಗಾಯತ, ಶಿ. ೫ನೇ, ಉ. ಕೂಲಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೫–೪–೨೦೧೧

೧೧. ಈರಯ್ಯ ಸ್ವಾಮಿ ಹಿರೇಮಠ
ವ. ೪೫, ಜಾ. ಸ್ವಾಮಿ (ಲಿಂಗಾಯತ), ಶಿ. ೧೦ನೇ, ಉ. ಪುರವಂತಿಕೆ
ವಿಳಾಸ : ಗೂಗಲ್, ತಾ. ದೇವದುರ್ಗ, ಜಿ. ರಾಯಚೂರ,
ಸಂಗ್ರಹ : ಡಾ। ವೀರಯ್ಯ ಮಠಪತಿ, ೯–೯–೨೦೧೧

೧೨. ಉತ್ತಮಬಾಯಿ ಮಠಪತಿ
ವ. ೪೦, ಜಾ. ಲಿಂಗಾಯತ, ಶಿ. ೩ನೇ, ಉ. ಮನೆಗೆಲಸ
ವಿಳಾಸ : ಮೋಳಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ವೀರಯ್ಯ ಮಠಪತಿ, ೨೦೧೧

೧೩. ಕರುಣಾ ವೈಜನಾಥ ವಿಶ್ವಕರ್ಮ
ವ. ೪೧, ಜಾ. ವಿಶ್ವಕರ್ಮ, ಶಿ. ૩ನೇ, ಉ. ಒಕ್ಕಲುತನ
ವಿಳಾಸ : ಘಾಟಬೋರಾಳ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೫-೧-೨೦೦೧

೧೪. ಕಲ್ಲಪ್ಪ ಮಂಜಿ
ವ. ೨೫, ಜಾ. ಉಪ್ಪಾರ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮುಗಳಿಹಾಳ, ತಾ. ಸವದತ್ತಿ, ಜಿ. ಬೆಳಗಾಂವ
ಸಂಗ್ರಹ : ಶಿವರಾಮನಗೌಡ ಗೋವಿಂದಗೌಡ ಪಾಟೀಲ, ೧೯೭೬

೧೫. ಕಲ್ಲಪ್ಪ ಸಿ. ಬಾಗೆವಾಡಿ
ಸಂಗ್ರಹ : ಸಾಗೇಬಗೌಡ, ೨೦೦೧

೧೬. ಕಲಾವತಿ
ವ. ೧೫, ಜಾ. ಲಿಂಗಾಯತ, ಶಿ. ಪಿ.ಯು.ಸಿ, ಉ. ಮನೆಗೆಲಸ
ವಿಳಾಸ : ಶಹಾಬಾಜಾರ, ಗುಲಬರ್ಗಾ
ಸಂಗ್ರಹ : ಡಾ. ಬಿ. ಎಸ್. ಪೋಲಿಸ ಪಾಟೀಲ, ೧೯೭೬

೧೭. ಕಲಾವತಿ ಚನ್ನಯ್ಯ ವಸ್ತ್ರದ
ವಿಳಾಸ : ಇಬ್ರಾಹಿಂಪೂರ, ತಾ। ಜಿ। ವಿಜಾಪೂರ
ಸಂಗ್ರಹ : ಸಾಹೇಬಗೌಡ, ಸಿಂದಗಿ, ೧೦-೪-೨೦೦೧

೧೮. ಕಾಶಿನಾಥ ನರಸಿಂಗ, ಮೇತ್ರಿ
ವ. —, ಜಾ. ಕುರುಬ, ಶಿ. ೨ನೇ, ಉ. ಕೂಲಿ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭-೪-೧೧

೧೯. ಕಾಶಿಬಾಯಿ ಗೌಡತಿ ನಿಜಪ್ಪ ದೇಸಾಯಿ
ವ. ೪೦, ಶಿ. ಇಲ್ಲ,
ವಿಳಾಸ : ದೇವರ ಹಿಪ್ಪರಗಿ, ತಾ. ಸಿಂದಗಿ, ಜಿ. ಬಿಜಾಪುರ
ಸಂಗ್ರಹ : ಸಾಹೇಬಗೌಡ, ೧೫-೪-೨೦೦೧

೨೦. ಕೃಷ್ಣಪ್ಪ ಧರ್ಗೆ
ವ. ೬೫, ಜಾ. ಮಾದಿಗ, ಶಿ. ಅನಕ್ಷರಸ್ಥ, ಉ. ಹಾಡುವುದು
ವಿಳಾಸ : ಧುಮ್ಮನಸೂರ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೦–೨–೨೦೧೧
(ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ವಿಜೇತ)

೨೧. ಗಂಗಮ್ಮ ಎಲಗುಂಡಿ
ವ. ೭೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಎಲಗುಂಡಿ, ತಾ. ಚಿಂಚೋಳಿ, ಜಿ. ಗುಲಬರ್ಗಾ
ಸಂಗ್ರಹ : ಆನಂದ ಸಿದ್ದಾಮಣಿ, ೧೬–೪–೨೦೧೧

೨೨. ಗಂಗಮ್ಮ ಚಂದ್ರಪ್ಪಾ ಚೋಳಾ
ವ. ೭೫, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ.ಕೂಲಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ.ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೪–೪–೨೦೧೧

೨೩. ಗಂಗಮ್ಮಾ ಬಾಬುರಾವ ಬೋರಂಪಳ್ಳಿ
ವ. ೪೦, ಜಾ. ಕಬ್ಬಲಿಗ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಬೋರಂಪಳ್ಳಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೭–೪–೨೦೧೧

೨೪. ಗಂಗಮ್ಮ ಮೇತ್ರಿ
ವ. ೪೫, ಜಾ. ಹರಿಜನ, ಶಿ. ಇಲ್ಲ, ಉ. ಕೂಲಿ
ವಿಳಾಸ : ಮೊಸರಕಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ॥ ವೀರಯ್ಯ ಮಠಪತಿ, ೨೮–೪–೨೦೧೧

೨೫. ಗಂಗಾಬಾಯಿ ಕಾಶಪ್ಪ ಕುದರಿ
ವಿಳಾಸ : ದೇವರ ಹಿಪ್ಪರಗಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೯–೪–೨೦೦೧

೨೬. ಗಿರಿಮಲ್ಲ ಹದಿಮೂರ
ವಿಳಾಸ : ಬಾಗೇವಾಡಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ, ೨೦೧೧

೨೭. ಗುಂಡಮ್ಮಾ ಪಂಚಾಳ
ವ. ೪೦, ಜಾ. ಬಡಿಗೇರ, ಶಿ. ಅನಕ್ಷರಸ್ಥ, ಉ. ಮನೆಗೆಲಸ
ವಿಳಾಸ : ಬೇವಿನ ಚಿಂಚೋಳಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೬-೨೦೧೧

೨೮. ಗುರುಮ್ಮಾ ಆಚನೂರ
ವಿಳಾಸ : ಇಂಗಳೇಶ್ವರ, ತಾ. ಬಸವನ ಬಾಗೇವಾಡಿ, ಜಿ. ಬಿಜಾಪೂರ
ಸಂಗ್ರಹ : ಶ್ರೀಮತಿ ಪಿ.ಎಸ್. ಚೌಕೀಮಠ, ೨೦೦೮

೨೯. ಗೌಡಮ್ಮ ಕಂಟೆಪ್ಪ ಪತಂಗೆ
ವ.___, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭-೪-೨೦೧೧

೩೦. ಗೌರವ್ವ ಕಾಡಾದಿ (ಲಿಂ.)
ವ. ೮೯, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಗೋದುತಾಯಿ ನಗರ, ಕಲಬುರ್ಗಿ,

೩೧. ಗೌರಮ್ಮ ಬಿರಾದಾರ
ವ. ೫೫, ಜಾ. ಲಿಂಗಾಯತ, ಶಿ. ೪ನೇ, ಉ. ಒಕ್ಕಲುತನ
ವಿಳಾಸ : ಬೋರಂಪಳ್ಳಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೭-೪-೨೦೧೧

೩೨. ಘಾಳಪ್ಪಾ ಸಿದ್ದಪ್ಪ
ವ. ೪೨, ಜಾ. ಕುರುಬ, ಶಿ. ೯ನೇ, ಉ. ಕೂಲಿ
ವಿಳಾಸ : ಗೋರ್ಟಾ (ಬಿ) ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೦-೪-೨೦೧೧

೩೩. ಚಂದ್ರಕಲಾ ಭೈರಿ
ವ. ೪೦, ಜಾ. ಲಿಂಗಾಯತ, ಶಿ. ೫ನೇ, ಉ. ಗೃಹಿಣಿ
ವಿಳಾಸ : ತೊಗಲೂರು, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಜಿ. ಮಠಪತಿ, ೨೪-೧-೨೦೧೧

೩೪. ಚಂದ್ರಮ್ಮಾ ನೇಳಗೆ
ವ. ೬೦, ಜಾ. ವೀರಶೈವ ಲಿಂಗಾಯತ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ಧಾಮಣಿ, ೪-೪-೨೦೧೧

೩೫. ಚಂದ್ರಾಮ ಭೀ. ಪೂಜಾರಿ
ವಿಳಾಸ : ಹಾವಿನಹಾಳ, ತಾ. ಸುರಪುರ, ಜಿ. ಕಲಬುರ್ಗಿ
ಸಂಗ್ರಹ : ಸಾಹೇಬಗೌಡ, ೨೬.೫.೨೦೧೧

೩೬. ಚೆನ್ನಮ್ಮ ಖಪಾಟೆ
ವ. ೧೪, ಜಾ. ಲಿಂಗಾಯತ, ಶಿ. ೯ನೇ, ಉ. ವಿದ್ಯಾರ್ಥಿನಿ
ವಿಳಾಸ : ಮಹಾಗಾಂವ, ತಾ. ಗುಲಬರ್ಗಾ, ಜಿ. ಗುಲಬರ್ಗಾ
ಸಂಗ್ರಹ : ಚನ್ನಪ್ಪ ಖಪಾಟೆ, ೧೮-೧೧-೧೯೭೫

೩೭. ಜಕ್ಕಣ್ಣ ಮೀಸೆ
ವಿಳಾಸ : ಇಂಗಳೇಶ್ವರ, ತಾ. ಬ. ಬಾಗೇವಾಡಿ, ಜಿ. ವಿಜಾಪೂರ.
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೫.೫.೨೦೧೧

೩೮. ಜಗದೇವಿ ತೋಳೆ
ವ. ೩೮, ಜಾ. ಲಿಂಗಾಯತ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಹಳ್ಳಿಖೇಡ (ಕೆ), ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ವೀರಯ್ಯ ಮಠಪತಿ, ೨೦೧೧

೩೯. ಜಗದೇವಿ ರಾಮಶೆಟ್ಟಿ ಜಡಗೆ
ವ. ೪೫, ಜಾ. ಲಿಂಗಾಯತ, ಶಿ. ೭ನೇ, ಉ. ಒಕ್ಕಲುತನ
ವಿಳಾಸ : ಮುಚಳಂಬ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ಧಾಮಣಿ, ೬-೪-೨೦೧೧

೪೦. ಜಯಶ್ರೀ ಪತಂಗೆ
ಜಾ. ಲಿಂಗಾಯತ, ಉ. ಮನೆಗೆಲಸ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ಧಾಮಣಿ, ೬-೪-೨೦೧೧

೪೧. ಜ್ಯೋತಿ ಕಾಡಾದಿ
ವ. ೩೭, ಜಾ. ಲಿಂಗಾಯತ, ಶಿ. ಎಲ್.ಎಲ್. ಎಮ್, ಉ.ಉಪನ್ಯಾಸಕಿ
ವಿಳಾಸ : ಗೋದುತಾಯಿ ನಗರ, ಕಲಬುಗಿ,
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೪೨. ತಂಗೆಮ್ಮ ಶರಣಪ್ಪ ವಾಡಿ
ವ. ೪೨, ಜಾ. ಮಾದಿಗ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಧುಮ್ಮನಸೂರ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೨-೨-೨೦೧೧

೪೩. ತುಳಸಮ್ಮ ಬಸವರಾಜ ಹೂಗಾರ
ವಿಳಾಸ : ಹಿಪ್ಪರಗಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೯-೪-೨೦೧೧

೪೪. ತೇಜಮ್ಮ ಗುಂಡಪ್ಪ ಕೋಟಗಾ
ವ. ೪೫, ಜಾ. ಲಿಂಗಾಯತ, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಚಿಟಗುಪ್ಪ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೧೪-೧-೨೦೧೧

೪೫. ದೇವಕಮ್ಮ
ವ. ೩೫, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಬ್ರಹ್ಮಪೂರ ಕಲಬುರ್ಗಿ
ಸಂಗ್ರಹ : ಲಕ್ಷ್ಮೀಬಾಯಿ ಬಿರಾದಾರ, ೧೯೭೭

೪೬. ದ್ರೌಪತಿ ಗಟಾಟೆ
ವ. ೪೦, ಜಾ. ಲಿಂಗಾಯತ, ಶಿ. ೩ನೇ, ಉ. ಗೃಹಣಿ
ವಿಳಾಸ : ಬ್ರಹ್ಮಪೂರ ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೪೭. ನಂದಿಸೂಗಯ್ಯ
ವ. ೯೦, ಜಾ. ಲಿಂಗಾಯತ, ಶಿ. ೭ನೇ, ಉ. ಅರ್ಚಕ
ವಿಳಾಸ : ದೇವಸೂಗೂರು, ತಾ. ರಾಯಚೂರ, ಜಿ. ರಾಯಚೂರು
ಸಂಗ್ರಹ : ಡಾ. ವೀರಯ್ಯ ಜಿ. ಮಠಪತಿ, ೨೨-೪-೨೦೧೧

೪೮. ನಾಗಮ್ಮ ಬಾಬುರಾವ
ವ. ೪೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಬೋರಂಪಳ್ಳಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೭-೪-೨೦೧೧

೪೯. ನಾಗಮ್ಮ ಮಠಪತಿ
ವ. ೫೦. ಜಾ. ಸ್ವಾಮಿ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಬೇವಿನ ಚಿಂಚೋಳಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೬-೨೦೧೧

೫೦. ನಾಗಮ್ಮ ಹದರಿ
ವ. ೫೫. ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಕಡಣಿ, ತಾ. ಜಿ. ಕಲಬುರ್ಗಿ
ಸಂಗ್ರಹ : ಸಾಹುದ್ರಿ ಜಿ. ಎಮ್, ೫-೧೧-೧೯೭೫

೫೧. ನಿಂಗಪ್ಪ ಕಟಿಕಾರ
ವ. ೭೦, ಜಾ. ಕುರುಬ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೊಸರಕಲ್, ತಾ. ದೇವದುರ್ಗ, ಜಿ. ರಾಯಚೂರ,
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೮-೪-೨೦೧೧

೫೨. ನಿಂಗಣ್ಣ ಮಹಾಂತಪ್ಪ ಕುಂಬಾರ
ವಿಳಾಸ : ಮಲ್ಲಾ (ಬಿ), ತಾ. ಜೇವರ್ಗಿ, ಜಿ. ಕಲಬುರ್ಗಿ
ಸಂಗ್ರಹ : ೨೮-೫-೨೦೧೧

೫೩. ನಿರ್ಮಲಾ ಗುಂಡಪ್ಪಾ ಸೇಳಿಗೇರ್
ವ. ೪೬, ಜಾ. ಲಿಂಗಾಯತ, ಶಿ. ೭ನೇ, ಉ. ಮನೆಗೆಲಸ
ವಿಳಾಸ : ಧನಾಶ್ರೀ, ತಾ. ಜಹಿರಾಬಾದ, ಜಿ. ಮೇಡಕ.
ಸಂಗ್ರಹ : ಮಹೇಶ್ವರಿ ಪಾಟೀಲ

೫೪. ನೀಲಮ್ಮ ಎಣೆಗೂರ
ವ. ೪೮, ಜಾ. ಲಿಂಗಾಯತ, ಶಿ. ೩ನೇ, ಉ. ಗೃಹಿಣಿ
ವಿಳಾಸ : ಮಹಾಗಾಂವ, ತಾ. ಗುಲಬರ್ಗಾ, ಜಿ. ಗುಲಬರ್ಗಾ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೧

೫೫. ನೀಲಮ್ಮ ನರಸಕ್ಕಿ ನೆಲೋಗಿ
ವ. ೫೫, ಜಾ. ಲಿಂಗಾಯತ, ಶಿ. ೯ನೇ, ಉ. ಗೃಹಿಣಿ – ಒಕ್ಕಲುತನ
ವಿಳಾಸ : ಘಟ್ಟಿಕಾರ ಅವರ ಮನೆ, ಬೇಂದ್ರೆ ನಗರ ಜೇವರ್ಗಿ ಕಾಲನಿ,
ಕಲಬುರ್ಗಿ,
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೫೬. ನೀಲಮ್ಮ ಲಾಧಾ
ವ. ೩೯, ಜಾ. ಲಿಂಗಾಯತ, ಶಿ. ೧೦ನೇ, ಉ. ಒಕ್ಕಲುತನ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭–೪–೨೦೧೧

೫೭. ನೀಲಾಂಬಿಕ ಶೇರಿಕಾರ
ವ. ೪೪, ಜಾ. ಲಿಂಗಾಯತ, ಶಿ. ಎಂ.ಎ, ಪಿ.ಎಚ್.ಡಿ, ಉ.ಅಧ್ಯಾಪಕಿ
ವಿಳಾಸ : ಗೋದುತಾಯಿ ನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೫೮. ಪತ್ರವ್ವ ಮೋರಿಗೇರಿ
ವಿಳಾಸ : ಗಜಾಪೂರ, ತಾ. ಜಿ. ಬೆಳಗಾಂವ,
ಸಂಗ್ರಹ : ೧೯೭೫

೫೯. ಪರಮ್ಮ ಸಿದ್ಧಪ್ಪ ಕುಣಕಿ (ಇಟ್ಟಗಿ)
ವ. ೪೦, ಜಾ. ಹರಿಜನ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಗೂಗಲ್, ತಾ. ದೇವದುರ್ಗ, ಜಿ. ರಾಯಚೂರ,
ಸಂಗ್ರಹ : ಡಾ. ವೀರಯ್ಯ ಮಠಪತಿ, ೯–೯–೨೦೧೧

೬೦. ಪಾರಮ್ಮ ಕಾಶಿನಾಥ ಪಾರೀಟ
ವ. ೫೫, ಜಾ. ಅಗಸರು, ಶಿ. ಇಲ್ಲ, ಉ. ಬಟ್ಟೆತೊಳೆಯುವುದು
ವಿಳಾಸ : ಮರಕಲ್, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೯–೨–೨೦೧೧

೬೧. ಪಾರ್ವತಿ ಮಹಾದೇವಪ್ಪ ಜೆಮಶೆಟ್ಟಿ
ವ. ೫೭, ಜಾ. ಲಿಂಗಾಯತ, ಶಿ. ೭ನೇ, ಉ. ಗೃಹಿಣಿ
ವಿಳಾಸ : ವೆಂಕಟೇಶ ನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೬೨. ಪಾರ್ವತಿ ಸಿದ್ದಪ್ಪ ಗುರ್ಜಲ್
ವ. ೫೦, ಜಾ. ಹರಿಜನ, ಶಿ. ಇಲ್ಲ, ಉ. ಒಕ್ಕಲತನ
ವಿಳಾಸ : ದೇವಸೂಗೂರ, ತಾ. ರಾಯಚೂರ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೩-೬-೨೦೧೧

೬೩. ಪಿಂಜಾರ ಪಿ.ಎಚ್.
ವ. ೪೦, ಜಾ. ಮುಸ್ಲೀಮ. ಶಿ. ಇಲ್ಲ, ಉ. ಒಕ್ಕಲತನ
ವಿಳಾಸ : ಹುಬ್ಬಳ್ಳಿ, ತಾ. ಹುಬ್ಬಳ್ಳಿ, ಜಿ. ಧಾರವಾಡ
ಸಂಗ್ರಹ : ವಿ. ಆರ್. ಹಡಪದ, ೧೯೭೬

೬೪. ಪ್ರಭು ಮೈಲಾರ
ವ. ೫೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಒಕ್ಕಲತನ
ವಿಳಾಸ : ಮೋಳಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೦೧೧

೬೫. ಪ್ರೇಮಲಾ ಬಸವರಾಜ ಕಣಜೆ
ವ. ೪೫, ಜಾ. ಲಿಂಗಾಯತ, ಶಿ. ೧೦ನೇ, ಉ. ಮನೆಗೆಲಸ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೬೬. ಪ್ರೇಮಲಾ ಕುಲಕರ್ಣಿ
ವ. ___, ಜಾ. ಬ್ರಹ್ಮಣ, ಶಿ. ____, ಉ. ಮನೆಗೆಲಸ,
ವಿಳಾಸ : ಲಾಧಾ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೬೭. ಪ್ಯಾಟಪ್ಪ ನಾಯಕ
ವ. ೪೫. ಜಾ. ಬೇಡರು(ನಾಯಕ), ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೊಸರಕಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೧-೫೨೦೧೧, ೧೦-೯-೧೧

೬೮. ಬಂದಿಗಿಸಾಬ ದೊಡ್ಡಮನಿ
ವ. ೫೫, ಜಾ. ಮುಸ್ಲೀಮ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಬೀಬೀ ಇಂಗಳಗಿ, ತಾ. ಇಂಡಿ, ಜಿ. ಬಿಜಾಪೂರ
ಸಂಗ್ರಹ : ಶಂಕರಗೌಡ ಬಿರಾದಾರ, ೧೯೭೬

೬೯. ಬಸಮ್ಮ ಎಲಗುಂಡಿ
ವ. ೫೦, ಜಾ. ಲಿಂಗಾಯತ, ಶಿ. ೫ನೇ. ಉ. ಮನೆಗೆಲಸ
ವಿಳಾಸ : ಎಲಗುಂಡಿ, ತಾ. ಚಿಂಚೋಳಿ, ಜಿ. ಗುಲಬರ್ಗಾ
ಸಂಗ್ರಹ : ಆನಂದ ಸಿದ್ದಾಮಣಿ, ೧೬-೪-೨೦೧೧

೭೦. ಬಸಮ್ಮ ಚನ್ನಯ್ಯಸ್ವಾಮಿ ಹಿರೇಮಠ
ವ. ೬೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಕೂಲಿ
ವಿಳಾಸ : ಮೊಸಕಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಜಿ. ಮಠಪತಿ, ೧೮-೪-೨೦೧೧

೭೧. ಬಾಬು ಅಗಸೂರ ವರವಟ್ಟಿ
ವ. ೫೫, ಜಾ. ಅಗಸೂರ, ಶಿ. ೪ನೇ, ಉ. ಬಟ್ಟೆತೊಳೆಯುವುದು
ವಿಳಾಸ : ಚಿನಕೇರಾ. ತಾ. ಹುಮನಾಬಾದ. ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೮-೩-೨೦೧೧

೭೨. ಬೀರಲಿಂಗ ಪೂಜಾರಿ ಹಿರೇಮೇಟಿ
ವ. ೨೫, ಜಾ. ಕುರುಬ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೊಸರಕಲ್. ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೧-೫-೨೦೧೧

೭೩. ಭಾಗಮ್ಮ ಝುರೆಪ್ಪಾ ರಾಜನೂರೆ
ವ. ೨೯, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಗೋರ್ಟಾ (ಬಿ). ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೭೪. ಭಾಗೀರತಿ ಕಾಡಾದಿ
ವ. ೭೦, ಜಾ. ಲಿಂಗಾಯತ, ಶಿ. ೪ನೇ, ಉ. ಗೃಹಿಣಿ
ವಿಳಾಸ : ಹುಲಸೂರ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೪-೧-೨೦೧೧

೭೫. ಭಾಗೀರತಿ ಸ್ವಾಮಿ
ವ. ೬೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಮೋಳಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೦೧೧

೭೬. ಭಾಗೀರತಿ ವೈಜಾನಾಥ ಮಠಪತಿ
ವ. ೫೦, ಜಾ. ಲಿಂಗಾಯತ, ಶಿ. ೩ನೇ, ಉ. ಒಕ್ಕಲುತನ
ವಿಳಾಸ : ತೊಗಲೂರ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಡಾ॥ ವೀರಯ್ಯ ಜಿ. ಮಠಪತಿ, ೨೪-೧-೨೦೧೧

೭೭. ಭೀಮಣ್ಣ ರಾಮಣ್ಣ ಮಾದಾರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೧೪-೭-೨೦೧೧

೭೮. ಭೀಮಣ್ಣ ಸಿದ್ದಪ್ಪ ಶಿಖಣ್ಣವರ
ವಿಳಾಸ : ಇಂಗಳೇಶ್ವರ, ತಾ. ಬ.ಬಾಗೇವಾಡಿ, ಜಿ. ಬಿಜಾಪೂರ
ಸಂಗ್ರಹ : ಸಾಹೇಬಗೌಡ, ೬-೬-೨೦೧೧

೭೯. ಭೀಮಬಾಯಿ ಕುಲಕರ್ಣಿ ಸೊಂತ
ವಿಳಾಸ : ಸೊಂತ, ತಾ. ಜಿ. ಕಲಬುರ್ಗಿ, ३೧-೧೦-೧೯೭೫

೮೦. ಭೀಮಮ್ಮ ಸಿದ್ಧಲಿಂಗಪ್ಪ ಅಂಬಿಗರು
ವ. ೪೦, ಜಾ. ಅಂಬಿಗರು, ಶಿ. ಇಲ್ಲ, ಉ. ಗೃಹಣಿ
ವಿಳಾಸ : ಗೂಗಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ॥ ವೀರಯ್ಯ ಮಠಪತಿ, ೯-೯-೨೦೧೧

೮೧. ಭೌರಮ್ಮ ಅಮ್ಮಣ್ಣ ಪೂಜಾರಿ
ವಿಳಾಸ : ವಡಗೇರಿ ತಾ. ಜೇವರ್ಗಿ, ಜಿ. ಕಲಬುರ್ಗಿ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೦-೫-೨೦೧೧

೮೨. ಭೌರಮ್ಮ ಮಲ್ಲಯ್ಯ ಸಾತಿಹಾಳಮಠ
ಜಾ. ಲಿಂಗಾಯತ, ಉ. ಮನೆಗೆಲಸ
ವಿಳಾಸ : ದೇವರ ಹಿಪ್ಪರಗಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ, ೯-೪-೨೦೧೧

೮೩. ಮಲ್ಲಪ್ಪ ಬಸಮಾಪ್ಪ ಹುಲಿಮನಿ
ವಿಳಾಸ : ಬಸಾಪೂರ, ತಾ. ಜಿ. ಬೆಳಗಾಂವ, ೧೯೭೫

೮೪. ಮಲ್ಲಮ್ಮ ಬೆನಕಿಪಳ್ಳಿ
ವ. ೪೫, ಜಾ. ಲಿಂಗಾಯತ, ಶಿ. ೪ನೇ, ಉ. ಗೃಹಿಣಿ
ವಿಳಾಸ : ರಾಂಪೂರ, ತಾ. ಹುಮನಾಬಾದ. ಜಿ. ಬೀದರ
ಸಂಗ್ರಹ : ಡಾ॥ ವೀರಯ್ಯ ಜಿ. ಮಠಪತಿ, ೧೪-೧-೨೦೧೧

೮೫. ಮಲ್ಲಯ್ಯ ಚಿಕ್ಕಮಠ
ವ. ೩೫, ಜಾ. ಲಿಂಗಾಯತ, ಶಿ. ೧೦ನೇ, ಉ. ಪೂಜಾರಿಕೆ
ವಿಳಾಸ : ಹಳ್ಳಿಖೇಡ (ಕೆ), ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ॥ ವೀರಯ್ಯ ಮಠಪತಿ, ೨೦೧೧

೮೬. ಮಡಿವಾಳಪ್ಪ ಪೂಜಾರಿ ಬಡಿಗೇರ
ವಿಳಾಸ : ವಡಗೇರಿ, ತಾ. ಜೇವರ್ಗಿ, ಜಿ. ಕಲಬುರ್ಗಿ
ಸಂಗ್ರಹ : ಸಾಹೇಬಗೌಡ, ೩-೫-೨೦೧೧

೮೭. ಮಲಕಮ್ಮ ಶಿ. ಬೊಮ್ಮನಳ್ಳಿ
ಸಂಗ್ರಹ : ಸಾಹೇಬಗೌಡ, ೨೦೧೧

೮೮. ಮಲ್ಲಯ್ಯ ಅತ್ತಾಲಟ್ಟಿ
ವಿಳಾಸ : ಇಂಗಳೇಶ್ವರ, ತಾ. ಬ.ಬಾಗೇವಾಡಿ, ಜಿ. ವಿಜಾಪೂರ
ಸಂಗ್ರಹ : ಪಿ.ಎಸ್. ಚೌಕಿಮಠ, ೨೦೦೮

೮೯. ಮಲ್ಲಿಕಾರ್ಜುನ ಹಡಪದ
ಜಾ. ಲಿಂಗಾಯತ, ಶಿ. ಬಿ.ಎ,
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೯೦. ಮಹ್ಮದಸಾಬ ಸಾವಳಗಿ (ಕವಿ)
ವಿಳಾಸ : ಸಾವಳಗಿ. ತಾ. ಜಿ. ಕಲಬುರ್ಗಿ

೯೧. ಮಹಾದೇವಪ್ಪ ಉಪ್ಪಾರ
ವ. ೪೮, ಜಿ. ಉಪ್ಪಾರ, ಶಿ. ೪ನೇ, ಉ. ಉಪ್ಪಾರಕಿ
ವಿಳಾಸ : ತೇರದಾಳ, ತಾ. ಜಮಖಂಡಿ, ಜಿ. ಬಿಜಾಪೂರ
ಸಂಗ್ರಹ : ರಮೇಶ ಅವರಾದಿ, ೧೯೭೭

೯೨. ಮಹಾದೇವಪ್ಪ ಬಿರಾದಾರ
ವ. ೪೫, ಜಾ. ಲಿಂಗಾಯತ, ಶಿ. ೬ನೇ, ಉ. ಕೂಲಿ
ವಿಳಾಸ : ಬೋರಂಪಳ್ಳಿ,
ಸಂಗ್ರಹ : ಆನಂದ ಸಿದ್ದಾಮಣಿ, ೧೭-೪-೨೦೧೧

೯೩. ಮಹಾದೇವಿ ಕವಡಿಮಠ
ವ. ೩೦, ಜಾ. ಲಿಂಗಾಯತ, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಮೋಳಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ॥ ವೀರಯ್ಯ ಮಠಪತಿ, ೨೦೧೧

೯೪. ಮಹಾದೇವಿ ಕುಂಬಾರ
ವ. ೬೫, ಜಾ. ಲಿಂಗಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ವೆಂಕಟೇಶನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೯೫. ಮಹಾದೇವಿ ಬೋರುಟಿ
ವ. ೪೮, ಜಾ. ಲಿಂಗಾಯತ, ಶಿ. ೧೦ನೇ, ಉ. ಗೃಹಿಣಿ
ವಿಳಾಸ : ಕೈಲಾಸ ನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೯೬. ಮಹಾದೇವಿ ರಾಜೇಂದ್ರ ಪಾಟೀಲ
ವ. ೪೬, ಜಾ. ಲಿಂಗಾಯತ, ಶಿ. ೭ನೆ, ಉ. ಮನೆಗೆಲಸ
ವಿಳಾಸ : ಧನಾಶ್ರೀ, ತಾ. ಜಹಿರಾಬಾದ, ಜಿ. ಮೇಡಕ
ಸಂಗ್ರಹ : ಮಹೇಶ್ವರಿ ಪಾಟೀಲ

೯೭. ಮಹಾದೇವಿ ಹಿರೇಮಠ
ವ. ೪೦, ಜಾ. ಲಿಂಗಾಯತ, ಶಿ. ೫ನೇ, ಉ. ಮನೆಗೆಲಸ
ವಿಳಾಸ : ಹಳ್ಳಿಖೇಡ (ಕೆ), ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ವೀರಯ್ಯ ಮಠಪತಿ, ೨೦೧೧

೯೮. ಮಹಾನಂದಾ ವೀರಪ್ಪ ಸಂಬಾಜಿ
ವ. ೩೫, ಜಾ. ಕುರುಬ, ಶಿ. ೬ನೇ, ಉ. ಕೂಲಿ(ಸ್ವಯಂಕೃಷಿ)
ವಿಳಾಸ : ಚಿನಕೇರಾ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೮-೩-೨೦೧೧

೯೯. ಮಹಾನಂದಿ ಪೂಜಾರಿ
ವ. ೪೦, ಜಾ. ಹೂಗಾರ, ಶಿ. ೧೦ನೇ, ಉ. ಅರ್ಚಕ
ವಿಳಾಸ : ಗೂಗಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ॥ ವೀರಯ್ಯ ಜಿ. ಮಠಪತಿ, ೯-೬-೨೦೧೧

೧೦೦. ಮಹಾರುದ್ರಪ್ಪ ಭೀಮಣ್ಣ ಮರಕಲ್
ವ. ೫೩, ಜಾ. ಅಗಸೂರ, ಶಿ. ೬ನೇ, ಉ. ಒಕ್ಕಲುತನ
ವಿಳಾಸ : ಮರಕಲ್, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ಧಾಮಣಿ, ೮-೪-೨೦೧೧

೧೦೧. ಮೀರಾಸಾಹೇಬ (ಕವಿ, ಪಂಚಾಕ್ಷರಿ)
ವಿಳಾಸ : ಮಹಾಗಾಂವ, ತಾ. ಜಿ. ಕಲಬುರ್ಗಿ
ಸಂಗ್ರಹ : ೧೯೭೫

೧೦೨. ಮೀರಾಸಾಹೇಬ ಮುಲ್ಲಾ
ವ. ೫೫, ಜಾ. ಮುಸ್ಲೀಮ್, ಶಿ.–, ಉ. ಒಕ್ಕಲುತನಕ
ವಿಳಾಸ : ಪರಮಾನಂದವಾಡಿ, ತಾ. ರಾಯಬಾಗ, ಜಿ. ಬೆಳಗಾಂವ
ಸಂಗ್ರಹ : ಮೀರಸಾಹೇಬ ಮುಲ್ಲಾ, ೧೯೭೬

೧೦೩. ಯಮುನಕ್ಕ ಶಿ. ಕಡಗೋಲ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೦೧೧

೧೦೪. ರಾಜೇಶ್ವರಿ
ವ. ೨೮, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ಧಾಮಣಿ, ೮-೪-೨೦೧೧

೧೦೫. ರಾಮಶೆಟ್ಟಿ ಖಾನಾಪುರೆ
ವ. ೫೭, ಜಾ. ಲಿಂಗಾಯತ, ಶಿ. ೧೦ನೇ, ಉ. ಒಕ್ಕಲುತನ
ವಿಳಾಸ : ರಾಂಪೂರ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೧೪-೧-೨೦೧೧

೧೦೬. ರಾಯಪ್ಪ ಬಸಪ್ಪ ದೊರಿ
ವಿಳಾಸ : ಮುಲ್ಲಾ (ಬಿ), ತಾ. ಜೇವರ್ಗಿ, ಜಿ. ಕಲಬುರ್ಗಿ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೮-೫-೨೦೧೧

೧೦೭. ರುಕ್ಮಿಣಿಬಾಯಿ ಘೊಡವಾಡಿ
ವ. ೫೨, ಜಾ. ಕುರುಬ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಚೀನಕೇರಾ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೯–೨–೨೦೧೧

೧೦೮. ರುಬೇನಪ್ಪ ಕಟ್ಟಿಮನಿ
ವ. ೫೦, ಜಾ. ಹರಿಜನ, ಜಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೊಸರಕಲ್, ತಾ. ದೇವದುರ್ಗ, ಜಿ. ರಾಯಚೂರು
ಸಂಗ್ರಹ : ಡಾ. ವೀರಯ್ಯ ಮಠಪತಿ, ೧–೫–೨೦೧೧

೧೦೯. ರೇಖಾ ರಾಮಶೆಟ್ಟಿ ಕಾಡಾದಿ
ವ. ೩೫, ಜಾ. ಲಿಂಗಾಯತ, ಶಿ. ೧೦ನೇ, ಉ. ಗೃಹಿಣಿ
ವಿಳಾಸ : ಹುಲಸೂರು, ತಾ. ಬಸವಕಲ್ಯಾಣ, ಜಿ. ಬೀದರ,
ಸಂಗ್ರಹ : ಡಾ॥ ವೀರಯ್ಯ ಜಿ. ಮಠಪತಿ, ೨೪–೧–೨೦೧೧

೧೧೦. ಲಕ್ಷ್ಮಣ ಭೀಮರಾಯ
ವ. ೭೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಬೇವಿನ ಚಿಂಚೋಳಿ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬–೬–೨೦೧೧

೧೧೧. ಲಕ್ಷ್ಮೀ ವೈಜಪ್ಪ, ಸಿಂದೋಲಕರ
ವ. ೪೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಮುರಕಲ್, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೮೯–೨–೨೦೧೧

೧೧೨. ಲಕ್ಷ್ಮೀಬಾಯಿ ಕವಡೆ
ವ. ೬೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಮೋಳಕೇರಾ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೦೧೧

೧೧೩. ಲಕ್ಷ್ಮೀಬಾಯಿ ಶಂಕರಪ್ಪಾ ಲಾಧಾ
ವ. ___, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉದ್ಯೋಗ, ಒಕ್ಕಲುತನ
ವಿಳಾಸ : ಲಾಧಾ, ತಾ. ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭–೪–೨೦೧೧

೧೧೪. ಲಲಿತಾ ಬಾಬುರಾವ ಬಿರಾದಾರ
ವ. ___, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೪-೪-೨೦೧೧

೧೧೫. ಲಲಿತಾಬಾಯಿ ಕಾಶೆಪ್ಪಾ ಹೂಗಾರ
ವ. ೪೮, ಜಾ. ಹೂಗಾರ, ಶಿ. ೭ನೇ, ಉ. ಮನೆಗೆಲಸ
ವಿಳಾಸ : ವರವಟ್ಟಿ (ಕೆ), ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೯-೩-೨೦೧೧

೧೧೬. ಲಲಿತಾಬಾಯಿ ಮಾಗಾಂವೆ ಲಾಧಾ
ವ. ___, ಜಾ. ___, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೧೧೭. ಲಿಂಗಮ್ಮ ಗಾಂಜಿಗುಡಿ
ವ. ೬೫, ಜಾ. ಹರಿಜನ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಗಬ್ಬೂರು, ತಾ. ದೇವದುರ್ಗ, ಜಿ. ರಾಯಚೂರು
ಸಂಗ್ರಹ : ಡಾ. ವೀರಯ್ಯ ಮಠಪತಿ, ೧೦-೬-೨೦೧೧

೧೧೮. ವಿಜಯಕುಮಾರ ಪರಶಣೆ
ವ. ೬೦, ಜಾ. ಲಿಂಗಾಯತ, ಶಿ. ___, ಉ. ಕಲಾ ಶಿಕ್ಷಕರು
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೫-೪-೨೦೧೧

೧೧೯. ವಿಮಲಾಬಾಯಿ ಕಾಶಪ್ಪ ಹೂಗಾರ
ವಿಳಾಸ : ವರವಟ್ಟಿ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ

೧೨೦. ವಿದ್ಯಾವತಿ ಮಲ್ಲಿಕಾರ್ಜುನ
ವ. ___, ಜಾ. ಲಿಂಗಾಯತ, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಮುಚಳಂಬ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೧೨೧. ವಿದ್ಯಾವತಿ ಲಾಧಾ
ವ. ೩೭, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭-೪-೨೦೧೧

೧೨೨. ವಿಮಲಾಬಾಯಿ ಸಿದ್ದೇಶ್ವರ
ವ. ೪೫, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಹಳ್ಳಿಖೇಡ (ಕೆ), ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ

೧೨೩. ವೀರಯ್ಯ ಮಠಪತಿ
ವ. ೩೫, ಜಾ. ಲಿಂಗಾಯತ, ಶಿ. ___, ಉ. ಒಕ್ಕಲುತನ
ವಿಳಾಸ : ಮುಧೋಳ, ತಾ. ಯಲಬುರ್ಗಾ, ಜಿ. ರಾಯಚೂರ
ಸಂಗ್ರಹ : ಶರಣಪ್ಪ ಕ. ಸಜ್ಜನ, ೧೯೭೬

೧೨೪. ವೈಜನಾಥ ಎಸ್. ಹಲಬರ್ಗಿ
ವ. ೩೮, ಜಾ. ಲಿಂಗಾಯತ, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಸಿರ್ಸಿ (ಎ), ತಾ. ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೨-೧-೨೦೧೧

೧೨೫. ಶಕುಂತಲಾ ಕಂಟೆಪ್ಪ
ವ. ___, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭-೪-೨೦೧೧

೧೨೬. ಶರಣಪ್ಪ ಗುರುಲಿಂಗಪ್ಪ ಮೂಲಗೆ(ಕವಿ)
ವಿಳಾಸ : ಕರಹರಿ, ತಾ. ಆನಂದ, ಜಿ. ಗುಲಬರ್ಗಾ.

೧೨೭. ಶರಣಪ್ಪ ಭೀಮಪ್ಪ ಕಡಗೋಲ
ವಿಳಾಸ : ಇಂಗಳೇಶ್ವರ, ತಾ. ಬ.ಬಾಗೇವಾಡಿ, ಜಿ. ವಿಜಾಪೂರ
ಸಂಗ್ರಹ : ೧೫-೫-೨೦೧೧

೧೨೮. ಶಶಿಕಲಾ ಮಾಲೀಪಾಟೀಲ
ವ. ೨೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ರಾಜನಾಳ, ತಾ. ಜಿ. ಕಲಬುರ್ಗಿ
ಸಂಗ್ರಹ : ಮಾಲಿಪಾಟೀಲ ಸಿ. ಎಸ್., ೧೯೭೫

೧೨೯. ಶಶಿಕಲಾ ಶರಣಪ್ಪ ಗಿರಿ
ವ. ೬೪, ಜಾ. ಲಿಂಗಾಯತ, ಶಿ. ೧೦ನೇ, ಉ. ಗೃಹಿಣಿ
ವಿಳಾಸ : ವೆಂಕಟೇಶನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೧೨೯. ಶಶಿಕಲಾ ಎಸ್. ವಸ್ತ್ರದ
ವಿಳಾಸ : ಕಲಬುರ್ಗಿ
ಸಂಗ್ರಹ : ಅಶೋಕ ಬಿರಾದಾರ, ೧೯೭೫

೧೩೧. ಶಾಂತಾಬಾಯಿ ರಾಚಪಗೋಳ
ವ. ೨೫, ಜಾ. ಲಿಂಗಾಯತ, ಶಿ. ೫ನೇ, ಉ. ಮನೆಗೆಲಸ
ವಿಳಾಸ : ಶಹಬಾಜಾರ, ಕಲಬುರ್ಗಿ
ಸಂಗ್ರಹ : ಬಿ. ಎಸ್. ಪೋಲಿಸ ಪಾಟೀಲ, ೧೯೭೭

೧೩೨. ಶಾಂತಾಬಾಯಿ ಹೊಳಕುಂದಿ
ವ. ೩೪, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಮೋಳಕೇರಾ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ

೧೩೩. ಶಾಂತಮ್ಮಾ ಗಿರಿಮಲ್ಲಪ್ಪ ಪೂಜಾರಿ (ಕುಂಬಾರ)
ವಿಳಾಸ : ವಡಗೇರಿ, ತಾ. ಜೇವರ್ಗಿ, ಜಿ. ಗುಲಬರ್ಗಾ
ಸಂಗ್ರಹ : ಸಾಹೇಬಗೌಡ ಸಿಂದಗಿ, ೧೯.೫-೨೦೧೧

೧೩೪. ಶಾಂತಮ್ಮ ಹಿರೇಮಠ
ವ. ೫೮, ಜಾ. ಸ್ವಾಮಿ, ಶಿ. ೫ನೇ, ಉ. ಕೂಲಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೪-೪-೨೦೧೧

೧೩೫. ಶಾಂತಾಬಾಯಿ ಕಾಮಶೆಟ್ಟಿ
ವ. ೭೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಮುಚಳಂಬ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೧೩೬. ಶಾಂತಾಬಾಯಿ ಲಾಧಾ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೪-೪-೨೦೧೧

೧೩೭. ಶಾಮಲಾಬಾಯಿ ಕಲ್ಲಪ್ಪ ಅಗಸರ
ವಿಳಾಸ : ಜಾಲವಾಡಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೦೧೧

೧೩೮. ಶಾರಾದಾಬಾಯಿ ಶಿವಲಾಲಸಿಂಗ
ವ. ೫೬, ಜಾ. ರಜಪೂರ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ವರವಟ್ಟಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೯-೨-೨೦೧೧

೧೩೯. ಶಿವರಾಜ ಕಂದಗೂಳೆ
ವ. ೫೫, ಜಾ. ಕಬ್ಬಲಿಗ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೩-೪-೨೦೧೧

೧೪೦. ಶಿವರುದ್ರಪ್ಪ ಶರಣಪ್ಪ ಬಿರಾದಾರ(ಕವಿ)
ವ. ೪೫, ಜಾ. ಲಿಂಗಾಯತ, ಶಿ. ೮ನೇ, ಉ. ಒಕ್ಕಲುತನ
ವಿಳಾಸ : ಕಮಲಾನಗರ, ತಾ. ಆಳಂದ, ಜಿ. ಕಲಬುರ್ಗಿ
ಸಂಗ್ರಹ : ಶಿವರುದ್ರಪ್ಪ ಶರಣಪ್ಪ ಬಿರಾದಾರ, ೧೯೭೬

೧೪೧. ಶಿವಶರಣಪ್ಪ ಚಂದ್ರಮಪ್ಪ ನೆಲ್ಲೂರ
ವ. ೩೫, ಜಾ. ಲಿಂಗಾಯತ, ಶಿ. ೫ನೇ, ಉ. ___,
ವಿಳಾಸ : ನೆಲ್ಲೂರ, ತಾ. ಆಳಂದ, ಜಿ. ಗುಲಬರ್ಗಾ
ಸಂಗ್ರಹ : ಸಿದ್ದಲಿಂಗ ಗಂಗಾಧರ ಮಾಸ್ತರ, ೧೯೭೭

೧೪೨. ಶೀಲಾ ವಿ. ಕೋಣೀನ
ವ. ೪೦, ಜಾ. ಲಿಂಗಾಯತ, ಶಿ. ಬಿ.ಎ, ಉ. ಗೃಹಿಣಿ
ವಿಳಾಸ : ವೆಂಕಟೇಶ ನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೧೪೩. ಸಂಗಮ್ಮ ರಾಚಯ್ಯ
ವ. ೭೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಮನೆಗೆಲಸ
ವಿಳಾಸ : ಎಲಗುಂಡಿ, ತಾ. ಚಿಂಚೋಳಿ, ಜಿ. ಗುಲಬರ್ಗಾ
ಸಂಗ್ರಹ : ಆನಂದ ಸಿದ್ದಾಮಣಿ, ೧೬-೪-೨೦೧೧

೧೪೪. ಸಂಗಮ್ಮ ಶರಣಪ್ಪ ಲಾಧಾ
ವ. ___, ಜಾ. ಲಿಂಗಾಯತ, ಶಿ. ___, ಉ. ಒಕ್ಕಲುತನ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೪-೪-೨೦೧೧

೧೪೫. ಸಂಗಮ್ಮ ಸೌದಗಿ
ವ. ೬೫, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಮೋಳಕೇರಾ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ

೧೪೬. ಸಣ್ಣಮಲ್ಲಮ್ಮ ಲಂಕಣಿ
ವ. ೬೫, ಜಾ. ಹರಿಜನ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೊಸರಕಲ್ಲ, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೧೦-೯-೨೦೧೧

೧೪೭. ಸತ್ಯಪ್ಪ ಧರೆಪ್ಪ ಮನಗೋಳಿ
ವಿಳಾಸ : ಜಾಲವಾದಿ, ತಾ. ಸಿಂದಗಿ, ಜಿ. ಬಿಜಾಪೂರ
ಸಂಗ್ರಹ : ಸಾಹೇಬಗೌಡ, ೪-೫-೨೦೧೧

೧೪೮. ಸರಸಮ್ಮಾ ಇಂಡೆ
ವ. ೮೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಎಲಗುಂಡಿ, ತಾ. ಚಿಂಚೋಳಿ, ಜಿ. ಗುಲಬರ್ಗಾ.
ಸಂಗ್ರಹ : ೧೬-೪-೨೦೧೧

೧೪೯. ಸರಸ್ವತಿ ಅಕ್ಕಸಾಲಿಗ
ವ. ___ ಜಾ. ಅಕ್ಕಸಾಲಿಗ, ಶಿ. ___, ಉ. ಮನೆಗೆಲಸ,
ವಿಳಾಸ : ಗೋರ್ಟಾ(ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೧೫೦. ಸರಸ್ವತಿ ಗದಗೆಪ್ಪಾ ಧಬಾಲೆ
ವ. ೪೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಹುಲಸೂರು, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಡಾ॥ ವೀರಯ್ಯ. ಜಿ. ಮಠಪತಿ, ೨೪-೧-೨೦೦೧

೧೫೧. ಸರಸ್ವತಿ ಬಾಬು ಅಗಸುರ
ವ. ೫೩, ಜಾ. ಅಗಸೂರ, ಶಿ. ಅನಕ್ಷರಸ್ಥ, ಉ. ಕುಲಕಸುಬು
ವಿಳಾಸ : ಚೀನಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೨೫-೨-೨೦೧೧

೧೫೨. ಸರೋಜನಿಬಾಯಿ ಪಾಟೀಲ
ವಿಳಾಸ : ಸೊಂತ, ತಾ. ಜಿ. ಕಲಬುರ್ಗಿ
ಸಂಗ್ರಹ : ವೀರಂತಪ್ಪ ನಿಂಗನಾಯ್ಕ, ೩೧-೧೦-೧೯೭೫

೧೫೩. ಸರೂಬಾಯಿ ಧರ್ಮರಾಜಾ ಶಾಬಾದಿ
ವ. ೪೨, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಕುಸನೂರು, ತಾ. ಜಿ. ಕಲಬುರ್ಗಿ
ಸಂಗ್ರಹ : ವೀರಣ್ಣ ದಂಡೆ, ೨೪-೧-೨೦೦೧

೧೫೪. ಸರ್ವಮಂಗಳಾ ಸಿದ್ರಾಮಪ್ಪ ಜೋಗೂರ
ವ. ೬೦, ಜಾ. ಲಿಂಗಾಯತ, ಶಿ. ೧೦ನೇ, ಉ. ಗೃಹಿಣಿ
ವಿಳಾಸ : ಘಾಟಗೆ ಲೇಔಟ ಎಂ.ಎಸ್.ಕೆ. ಮಿಲ್‌ಚಾಳ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೧೫೫. ಸಾತಯ್ಯ ಸ್ವಾಮಿ
ವ. ೬೦, ಜಾ. ಲಿಂಗಾಯತ, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಬಾಳಿಗೇರಿ, ತಾ. ಅಥಣಿ, ಜಿ. ಬೆಳಗಾಂವ
ಸಂಗ್ರಹ : ಸಾತಯ್ಯ ಸ್ವಾಮಿ, ೧೯೭೬

೧೫೬. ಸಿದ್ದಮ್ಮ ಖಪಾಟೆ
ವ. ೪೫, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಮಹಾಗಾಂವ, ತಾ. ಜಿ. ಕಲಬುರ್ಗಿ
ಸಂಗ್ರಹ : ಎಸ್. ಎಂ. ಬಿರಾದಾರ, ೨-೮-೧೯೭೬

೧೫೭. ಸಿದ್ದಮ್ಮ ಗುಂಡಪ್ಪ ಶೀಪೂರ
ವಿಳಾಸ : ವಡಗೇರಿ ತಾ. ಜೇವರ್ಗಿ, ಜಿ. ಕಲಬುರ್ಗಿ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೯-೫-೨೦೧೧

೧೫೮. ಸಿದ್ರಾಮಪ್ಪ ಮಾಲಿಪಾಟೀಲ
ವ. ೫೫, ಜಾ. ಲಿಂಗಯತ, ಶಿ. ೧೨ನೇ, ಉ. ಒಕ್ಕಲುತನ
ವಿಳಾಸ : ದೇವಸೂಗೂರು, ತಾ. ಜಿ. ರಾಯಚೂರು
ಸಂಗ್ರಹ : ಡಾ॥ ವೀರಯ್ಯ ಜಿ. ಮಠಪತಿ, ೨೨-೪-೨೦೧೧

೧೫೯. ಸುಜಾತ ಬೋಳಗಂಡಿ
ವ. ೪೦, ಜಾ. ಹರಿಜನ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಗಬ್ಬೂರ, ತಾ. ದೇವದುರ್ಗ, ಜಿ. ರಾಯಚೂರ,
ಸಂಗ್ರಹ : ಡಾ. ವೀರಯ್ಯ ಜಿ. ಮಠಪತಿ, ೧-೬-೨೦೧೧

೧೬೦. ಸುಭದ್ರಾ ಗಟಾಟೆ
ವ. ೫೫, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಬ್ರಹ್ಮಪುರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೧೬೧. ಸುಮಂಗಲಾ ಮಲ್ಲಿಕಾರ್ಜುನ ದೇವೂರ
ವಿಳಾಸ : ಜಾಲವಾದಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೦೧೧

೧೬೨. ಸುಮಿತ್ರಾದೇವಿ ಅಂಗಡಿ
ವ. ೭೫, ಜಾತಿ. ಲಿಂಗಾಯತ, ಶಿ. ೧೦ನೇ, ಉ. ಶಿಕ್ಷಕಿ
ವಿಳಾಸ : ಇಲಕಲ್ಲ, ತಾ. ಹುನಗುಂದ, ಜಿ. ಬಾಗಲಕೋಟ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೧

೧೬೩. ಸುಶೀಲಾಬಾಯಿ ರಾಜಶೇಖರ ಇಲ್ಲಾಳಕರ್
ವ. ೬೨, ಜಾ. ಜಂಗಮ, ಶಿ. ೬ನೇ, ಉ. ಕಸೂತಿ
ವಿಳಾಸ : ಎಲಗುಂಡಿ, ತಾ. ಚಿಂಚೋಳಿ, ಜಿ. ಗುಲಬರ್ಗಾ
ಸಂಗ್ರಹ : ೧೬-೪-೨೦೧೧

೧೬೪. ಸುವರ್ಣಾಬಾಯಿ ಖೇಳಗಿ
ವ. ೬೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೋಳಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೦೧೧

೧೬೫. ಸೂಗಪ್ಪ ಸೌಕಾರ
ವ. ೨೦, ಜಾ. ಲಿಂಗಾಯತ, ಶಿ. ೧೦ನೇ, ಉ. ಒಕ್ಕಲುತನ
ವಿಳಾಸ : ಮೊಸರಕಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೮-೪-೨೦೧೧

೧೬೬. ಸೂಗಮ್ಮ ವೈಜನಾಥ ಮೇತ್ರಿ
ವ. ೪೦, ಜಾ. ಕುರುಬುರು, ಶಿ. ೫ನೇ, ಉ. ಮನೆಗೆಲಸ
ವಿಳಾಸ : ಮರಕಲ್ಲ, ತಾ.ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೪-೫-೨೦೧೧

೧೬೭. ಹುಲಗಮ್ಮ ಪ್ರಭುರಾಯ ಹರಿಜನ
ವ. ೪೦, ಜಾ. ಹರಿಜನ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಗೂಗಲ್, ತ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೯-೯-೨೦೧೧

***

ಅನುಬಂಧ–೨

ಆಧಾರ ಗ್ರಂಥಗಳು

೧. ಅವ್ವ ಕಾಡಾದಿ ಹಾಡಿದ ಹಾಡು
ಸಂ: ಡಾ॥ ನೀಲಾಂಬಿಕಾ ಪೋಲಿಸ ಪಾಟೀಲ
– ಶ್ರೀಮತಿ ಸರಸ್ವತಿ ಮಲ್ಲಿಕಾರ್ಜುನ ಕಾಡಾದಿ
ಗೋದುತಾಯಿ ನಗರ, ಗುರುಲಬರ್ಗಾ. ೨೦೦೭.

೨. ಐದು ಜನಪದ ಕಥನ ಗೀತೆಗಳು
ಸಂ: ಕ್ಯಾತನಹಳ್ಳಿ ರಾಮಣ್ಣ
– ಜಾನಪದ ಬಳಗ, ಮಾನಸಗಂಗೋತ್ರಿ
ಮೈಸೂರು–೫೭೦೦೦೬. ೧೯೭೦.

೩. ಕನ್ನಡ ಗೀಗೀ ಪದಗಳು (ಹುಲಕುಂದ ಶಿವಲಿಂಗಸ್ವಾಮಿ ರಚಿತ)
ಸಂ: ಧುಂಡಿರಾಜ ಲಿಮಮೆ
–ಸೀತಾರಾಮ ಪ್ರಕಾಶನ, ರಾಮದುರ್ಗ. ೧೯೮೫.

೪. ಕನ್ನಡ ಜಾನಪದ ಗೀತಗಳು
– ಡಾ॥ ಬಿ.ಎಸ್.ಗದ್ದಗಿಮಠ
– ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೬೯.

೫. ಕನ್ನಡ ವೃತ್ತಿಗಾಯಕ ಕಾವ್ಯಗಳು
ಸಂ: ಡಾ॥ ಜೀ.ಶಂ.ಪರಮಶಿವಯ್ಯ
– ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೨.

೬. ಕೊಳ್ಳೂರ ಹುಸನಾ ಸಾಹೇಬ
ಡಾ॥ ಜಿ.ಬಿ.ವಿಸಾಜಿ
– ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೮.

೭. ಕೋಲುಪದಗಳು (ಜೀವನ ಜೋಕಾಲಿ, ಭಾಗ–೮)
ಸಂ: ಡಾ॥ ಎಂ.ಎಸ್.ಸುಂಕಾಪುರ
– ಕನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೬.

೮. ಕ್ವಾನಳ್ಳಿ ಹೊನ್ನಪ್ಪ ಮಹಾರಾಜ
ಸಂ: ಡಾ॥ ಟಿ.ಎಂ. ಭಾಸ್ಕರ್
– ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೮.

೯. ಗಿರಿ ಕೋಗಿಲೆ (ಶ್ರೀಮತಿ ಶಶಿಕಲಾ ಶರಣಪ್ಪ ಗಿರಿ ಹಾಡಿದ ಜನಪದ ಹಾಡುಗಳ ಸಂಗ್ರಹ)
ಸಂ: ಡಾ॥ ನೀಲಾಂಬಿಕಾ ಎ.ಪೋಲಿಸ ಪಾಟೀಲ
– ಡಾ॥ ಶರಣಪ್ಪ ಬಿ.ಗಿರಿ, ಟೆಂಪಲ್ ಪಾರ್ಕ್,
ವೆಂಕಟೇಶ ನಗರ, ಗುಲಬರ್ಗಾ. ೨೦೦೮.

೧೦. ಗೆಜ್ಜೆ ನುಡದಾವ ಗಿಲಿಗಿಲಿ
ಸಂ: ಎ. ಕೆ. ರಾಮೇಶ್ವರ, ಎಚ್. ಕೆ. ಶೇಖರ
– ಜೇವರಗಿ ತಾಲೂಕ ಮಟ್ಟದ ಜಾನಪದ ಕಲಾಮೇಳ
ಸ್ವಾಗತ ಸಮಿತಿ, ಜೇವರ್ಗಿ, ಜಿ. ಗುಲಬರ್ಗಾ. ೧೯೮೯.

೧೧. ಜನಪದ ಹಾಲುಮತ ಮಹಾಕಾವ್ಯ
ಸಂ: ಡಾ॥ ವೀರಣ್ಣ ದಂಡೆ
– ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೦

೧೨. ಜನಪದ ಪರಿಮಳ
ಸಂ: ಡಾ॥ ಬಿ.ಎಸ್. ಕುಲಕರ್ಣಿ
– ಕನ್ನಡ ಸಂಶೋಧನಾ ಸಂಸ್ಥೆ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೦.

೧೩. ಜಾನಪದ ರಸಗಂಗೆ
ಸಂ: ಸ. ಚ. ಮಹಾದೇವ ನಾಯಕ್
– ಕಾವ್ಯಾಲಯ ಪ್ರಕಾಶಕರು, ಮೈಸೂರು. ೧೯೬೨.

೧೪. ದಲಿತ ಕವಿ ಜಂಬಗಿ ಶರಣರ ಹಾಡುಗಳು
ಸಂ: ಡಾ॥ ಮಲ್ಲಿಕಾರ್ಜುನ ಶಿ. ಲಠ್ಠೆ
– ರವೀಂದ್ರ ಪ್ರಕಾಶನ, ವಿಶ್ವೇಶ್ವರಯ್ಯ ನಗರ, ಗುಲಬರ್ಗಾ. ೨೦೦೮.

೧೫. ದ್ಯಾಗಾಯಿ ಗುಂಡಪ್ಪ
ಸಂ: ಅಪ್ಪಾಸಾಬ ಬಿರಾದಾರ
– ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೮.

೧೬. ದುಂದುಮೆ ಪದ (ಜೀವನ ಜೋಕಾಲಿ, ಭಾಗ – ೫)
ಸಂ: ಡಾ॥ ಎಂ.ಎಸ್.ಸುಂಕಾಪುರ
– ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೫.

೧೭. ದೇವರ ಬಂದಾವ ಬನ್ನೀರೆ
ಸಂ. ಡಾ। ಶಿವಾನಂದ ಗುಬ್ಬಣ್ಣನವರ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೯

೧೮. ದೇಸಿ ದೃಷ್ಟಿ
ಡಾ॥ ವೀರಣ್ಣ ದಂಡೆ
– ಕವಿಮಾರ್ಗ ಪ್ರಕಾಶನ, ಗುಲಬರ್ಗಾ. ೨೦೦೧.

೧೯. ನಡುನೀರ ತಂಪು
ಸಂ: ಪ್ರೊ॥ ಕಾಳೇಗೌಡ ನಾಗವಾರ, ಕ್ಯಾತನಹಳ್ಳಿ ರಾಮಣ್ಣ
– ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು. ೨೦೧೦.

೨೦. ನಮ್ಮ ಕನ್ನಡ ಪ್ರೇಮದ ಜ್ಯೋತಿ
ಸಂ: ರೇಣುಕಾ ಕೋಡಗುಂಟಿ
– ಬಂಡಾರ ಪ್ರಕಾಶನ, ಮಸ್ಕಿ, ಜಿ. ರಾಯಚೂರ. ೨೦೦೮.

೨೧. ಪದವವೆ ನಮ್ಮ ಎದೆಯಲ್ಲಿ
ಸಂ: ಎಚ್.ಎಲ್. ನಾಗೇಗೌಡ
– ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೭೬.

೨೨. ಫ್ಲೀಟರು ಸಂಗ್ರಹಿಸಿದ ಲಾವಣಿಗಳು
ಸಂ: ಕ್ಯಾತನಹಳ್ಳಿ ರಾಮಣ್ಣ
– ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೯೧.

೨೩. ಬಂಡೆಪ್ಪಕವಿಯ ಭಜನೆಯ ಹಾಡುಗಳು
ಸಂ: ಡಾ॥ ಎಂ.ಎಸ್. ಲಠ್ಠೆ
– ಶ್ರೀ ವೀರಭದ್ರೇಶ್ವರ ಪ್ರಕಾಶನ, ಸಿಂಗಾಪುರ. ೧೯೭೮.

೨೪. ಬಣ್ಣವಾಡು
ಸಂ: ದೇವಂಗಿ ಟಿ. ಚಂದ್ರಶೇಖರ
– ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೧.

೨೫. ಬಸವಣ್ಣ ನಿನ್ನ ಹೆಸರು ದೆಸೆದೆಸೆಗೆ ಶಿವಮಂತ್ರ
ಸಂ: ಡಾ॥ ಶಿವಾನಂದ ಗುಬ್ಬಣ್ಣನವರ
– ಬಸವ ಸಮಿತಿ, ಬೆಂಗಳೂರು. ೧೯೮೮.

೨೬. ಬೀದರ ಜಿಲ್ಲೆಯ ಬುಲಾಯಿ ಹಾಡುಗಳು
ಸಂ: ಹೆಬ್ಬಾಳೆ ಜಗನ್ನಾಥ
– ಶ್ರೀಮತಿ ನೀಲಗಂಗಾ ಹೆಬ್ಬಾಳೆ ನಾವದಗೇರಿ, ಬೀದರ. ೧೯೯೬.

೨೭. ಬುಲಾಯಿ ಹಾಡುಗಳು
ಸಂ: ಡಾ॥ ಡಿ. ಬಿ. ನಾಯಕ
– ಬಂಜಾರ ಪ್ರಕಾಶನ, ಗುಲಬರ್ಗಾ. ೨೦೦೧.

೨೮. ಮಂಟೇಸ್ವಾಮಿ
ಸಂ: ಡಾ। ಹಿ. ಚಿ. ಬೋರಲಿಂಗಯ್ಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೭

೨೯. ಮಲ್ಲಿಗೆ ದಂಡೆ
ಸಂ: ದಿ. ಕಾಪಸೆ ರೇವಪ್ಪನವರು
– ರಾಮಚಂದ್ರ ವಿನೀತ, ರೈಟರ್ ಓಣಿ, ಧಾರವಾಡ.
೧೯೪೮ (ಎರಟನೇ ಮುದ್ರಣ).

೩೦. ಮಹಾಗಾಂವ ಮೀರಾಸಾಬ
ಸಂ: ಟಿ. ಎಂ. ಭಾಸ್ಕರ್
– ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೮.

೩೧. ಮಾತಾಡು ಲಿಂಗವೇ
ಸಂ: ಚಂದ್ರಶೇಖರ ಕಂಬಾರ
– ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೭೩.

೩೨. ಮುತ್ತು ಮುತ್ತಿನ ತ್ವಾಟ
ಸಂ: ಚಂದ್ರಶೇಖರ ಕಂಬಾರ, ಜಯಪ್ರಕಾಶ ಬರಗೂರು.
– ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೧.

೩೩. ರಾಮಪುರ ಬಕ್ಕಪ್ಪಯ್ಯನ ಸ್ವರವಚನ–ತ್ರಿವಿಧಿ
ಸಂ: ಡಾ॥ ವ್ಹಿ. ಜಿ. ಪೂಜಾರ
– ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. ೧೯೯೬.

೩೪. ರುದ್ರಾಕ್ಷಿ
ಶಂಕರಗೌಡ ಬಿರಾದಾರ, ಗುಂಡಕನಾಳ
–ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠ, ಮುಂಡರಗಿ, ೧೯೯೨

೩೫. ಲದ್ದೆಯ ಸೋಮಣ್ಣ
ಡಾ। ಎಚ್. ಚಂದ್ರಶೇಖರ
– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ೨೦೦೧

೩೬. ಶರಣ ಗೊಲ್ಲಾಳ
ಡಾ। ಶಕುಂತಲಾ ದುರಗಿ
–ಅಖಿಲ ಭಾರತ ಶರಣಸಾಹಿತ್ಯ ಪರಿಷತ್ತು, ಮೈಸೂರು, ೨೦೦೯

೩೭. ಶರಣ ಸ್ಮೃತಿ
ಸಂ: ಎಂ. ಎಸ್. ವಾಲಿ
– ಭುವನೇಶ್ವರ ಪ್ರಕಾಶನ, ವಿಜಾಪುರ. ೧೯೮೮.

೩೮. ಸಂಪಿಗೆ ಅರಳೀವೆ
ಸಂ. ಸ.ಚ.ಮಹದೇವನಾಯಕ್
–ಕಾವ್ಯಾಲಯ, ಪ್ರಕಾಶಕರು, ಮೈಸೂರು, ೧೯೬೨

೩೯. ಸುರಗಿ ಸುವ್ವಾಲೆ
ಸಂ: ಸುಜಾತ ಅಕ್ಕಿ
– ರಚನಾ ಪ್ರಕಾಶಕ, ರಾಮನಗರ, ಹಗರಿಬೊಮ್ಮನ ಹಳ್ಳಿ. ೧೯೯೮.

೪೦. ಹಂತಿ ಹಾಡುಗಳು
ಸಂ: ಡಾ॥ ದೇವೇಂದ್ರ ಕುಮಾರ ಹಕಾರಿ
– ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೬.

೪೧. ಹಂತಿಯ ಪದಗಳು
ಸಂ. ಡಾ। ಸಿದ್ದಣ್ಣ ಎಫ್. ಜಕಬಾಳ, ಡಾ। ವಾಯ್. ಕೆ. ಗುಂಡಕರ್ಜಗಿ,
– ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೦

೪೨. ಹರದೇಶಿ ನಾಗೇಶಿ
ಸಂ: ಡಾ॥ ಬಿ. ಬಿ. ಹೆಂಡಿ,
ಡಾ॥ ಎಂ. ಜಿ. ಬಿರಾದಾರ, ಡಾ॥ ಎಂ. ಎಸ್. ಲಠ್ಠೆ.
– ಕನ್ನಡ ಅಧ್ಯಯನ ವಿಭಾಗ,
ಗುಲಬರ್ಗಾ ವಿಶ್ವವಿದ್ಯಾಲಯ. ಗುಲಬರ್ಗಾ, ೧೯೮೩

***

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು.

"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ) ಎಂಬ ಸಂಶೋಧನ ಯೋಜನೆಯನ್ನು ಕೈಕೊಂಡವರು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳಾದ ಡಾ। ವೀರಣ್ಣ ದಂಡೆ ಹಾಗೂ ಡಾ। ಜಯಶ್ರೀ ದಂಡೆ ಅವರು. ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಜೊತೆಗೆ ಕನ್ನಡದಲ್ಲಿ ಇಂದಿನವರೆಗೆ ಬಿಡಿಬಿಡಿಯಾಗಿ ಅಲ್ಲಲ್ಲಿ ಪ್ರಕಟವಾದ ಶರಣರಿಗೆ ಸಂಬಂಧಿಸಿದ ಜನಪದ ಹಾಡುಗಳನ್ನೂ ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಲಿಖಿತ ಮತ್ತು ಮೌಖಿಕ ಸಾಹಿತ್ಯ ಪರಂಪರೆಗಳೆರಡನ್ನೂ ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಲು ಅನುಕೂಲವಾಗುತ್ತದೆ.

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರೂ ಸಂಪಾದಕರೂ ಆದ ಡಾ। ವೀರಣ್ಣ ದಂಡೆ ಹಾಗೂ ಡಾ। ಜಯಶ್ರೀ ದಂಡೆ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.೫೮೫೧೦೬